ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ

(ರಾಮನಗರ ಜಿಲ್ಲೆ ಕನಕಪುರ ತಾಲೂಕನ್ನು ಅನುಲಕ್ಷಿಸಿ)

ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ವೆಂಕಟೇಶ ಎನ್.ಆರ್.

ಮಾರ್ಗದರ್ಶಕರು
ಡಾ. ಸಿದ್ಧಗಂಗಮ್ಮ
ಸಹ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೭

ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ

(ರಾಮನಗರ ಜಿಲ್ಲೆ ಕನಕಪುರ ತಾಲೂಕನ್ನು ಅನುಲಕ್ಷಿಸಿ)

ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ವೆಂಕಟೇಶ ಎನ್.ಆರ್.

ಮಾರ್ಗದರ್ಶಕರು
ಡಾ. ಸಿದ್ಧಗಂಗಮ್ಮ
ಸಹ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಎನ್.ಆರ್. ವೆಂಕಟೇಶ ಅವರು ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ (ರಾಮನಗರ ಜಿಲ್ಲೆ ಕನಕಪುರ ತಾಲೂಕನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 1/2/2017

ಸ್ಥಳ : ವಿದ್ಯಾರಣ್ಯ

(ಡಾ. ಸಿದ್ಧಗಂಗಮ್ಮ)

ಮಾರ್ಗದರ್ಶಕರು

ಪ್ರಮಾಣ ಪತ್ರ

ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ (ರಾಮನಗರ ಜಿಲ್ಲೆ ಕನಕಪುರ ತಾಲೂಕನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಅಭಿವೃದ್ಧಿ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ **ಡಾ. ಸಿದ್ಧಗಂಗಮ್ಮ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧ ವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವೆಂಕಟೇಶ ಎನ್.ಆರ್

ದಿನಾಂಕ : 1/2/2017
ಸ್ಥಳ : ವಿದ್ಯಾರಣ್ಯ

(ವೆಂಕಟೇಶ ಎನ್.ಆರ್.)
ಸಂಶೋಧಕರು

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಪೀಠಿಕೆ

ಸಮಸ್ಯೀಕರಣ

ಅಧ್ಯಯನದ ಉದ್ದೇಶಗಳು

ಅಧ್ಯಯನದ ವಿಧಾನಗಳು

ಅಧ್ಯಯನದ ಮಿತಿ

ಅಧ್ಯಯನದ ಅಧ್ಯಾಯಗಳು

ಅಧ್ಯಾಯ ಒಂದು

ಪ್ರಸ್ತಾವನೆ

ದೇಶದ ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಶಿಕ್ಷಣವು ಒಂದು ಪ್ರಮುಖ ಅಂಶವಾಗಿದೆ. ದೇಶದ ಜನಸಂಖ್ಯೆಯ ಅರ್ಧದಷ್ಟು ಜನರು ಮಹಿಳೆಯರಿದ್ದಾರೆ. ಯಾವ ದೇಶದಲ್ಲಿ ಮಹಿಳೆಯರು ಶಿಕ್ಷಿತರಾಗಿರುತ್ತಾರೋ ಆ ದೇಶ ಅಭಿವೃದ್ಧಿ ಹೊಂದಿರುತ್ತದೆ. ಮಹಿಳಾ ಜನಸಂಖ್ಯೆಯಲ್ಲಿ ಶೇಕಡ ೭೦ರಷ್ಟು ಗ್ರಾಮೀಣ ಮಹಿಳೆಯರಿದ್ದು, ಅಭಿವೃದ್ಧಿಯಲ್ಲಿ ಅವರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ಬಹುಸಂಖ್ಯಾತ ಗ್ರಾಮೀಣ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಶಿಕ್ಷಣವೇ ಅಭಿವೃದ್ಧಿ ಎಂಬ ಮಾತು ಇತ್ತೀಚಿನ ದಿನಗಳಲ್ಲಿ ಮಾನವ ಅಭಿವೃದ್ಧಿಯ ಪರಿಕಲ್ಪನೆಯ ಮೂಲಕ ಹೆಚ್ಚಾಗಿ ಕೇಳಿಬರುತ್ತಿದೆ. ಶಿಕ್ಷಣ ಮತ್ತು ಅಭಿವೃದ್ಧಿಯು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಶಿಕ್ಷಣವು ಪ್ರತಿ ಹಂತದಲ್ಲಿಯೂ ಮಹಿಳೆಯರು, ದಲಿತರು, ಹಿಂದುಳಿದವರು, ಅವಕಾಶವಂಚಿತ ಜನರನ್ನು ಸಬಲೀಕರಣಗೊಳಿಸಬಲ್ಲದು. ಬೇರೆ ಬೇರೆ ವರ್ಷಗಳಲ್ಲಿ ಪ್ರಕಟವಾಗಿರುವ ಮಾನವ ಅಭಿವೃದ್ಧಿ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಯಾವ ಪ್ರದೇಶದಲ್ಲಿ ಶೈಕ್ಷಣಿಕವಾಗಿ ಅಭಿವೃದ್ಧಿ ಸಾಧಿಸಿದೆಯೋ ಆ ದೇಶ ಅಭಿವೃದ್ಧಿ ಹೊಂದಿರುವುದನ್ನು ಕಾಣಬಹುದು. ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಮಕ್ಕಳು ಶಿಕ್ಷಣದಲ್ಲಿ ಭಾಗವಹಿಸುವಿಕೆ ಕಡಿಮೆ ಪ್ರಮಾಣದಲ್ಲಿದೆ. ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವ ಪ್ರಮಾಣ ಅತ್ಯಂತ ಹೆಚ್ಚಾಗಿರುವುದು ಕಂಡುಬರುತ್ತದೆ. ಯಾವ ಪ್ರದೇಶದಲ್ಲಿ ಅಗತ್ಯವಾದ ಕನಿಷ್ಠ ಮೂಲಭೂತ ಸೌಲಭ್ಯಗಳು ಮಾನವ ಜೀವನಕ್ಕೆ ದೊರಕುತ್ತಿಲ್ಲವೋ, ಆ ಪ್ರದೇಶಗಳಲ್ಲಿ ಬಡ ಕುಟುಂಬಗಳ ಹೆಣ್ಣುಮಕ್ಕಳು ಅದರಲ್ಲಿಯೂ ಅವಕಾಶವಂಚಿತ ಸಮುದಾಯದ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ಶಿಕ್ಷಣ ಪಡೆಯುವಲ್ಲಿ ಅತ್ಯಂತ ಹಿಂದುಳಿದಿದ್ದಾರೆ.

ಒಂದು ರಾಷ್ಟ್ರವು ಸುಖೀರಾಜ್ಯವಾಗಬೇಕಾದರೆ ಪ್ರತಿಯೊಬ್ಬ ನಾಗರಿಕರ ಹೊಣೆಗಾರಿಕೆ ಹಕ್ಕು ಮತ್ತು ಕರ್ತವ್ಯಗಳನ್ನು ಅರಿತಿರಬೇಕು, ಜೊತೆಗೆ ಸಾಮಾಜಿಕ ಪ್ರಜ್ಞೆಯನ್ನು ಹೊಂದಿರಬೇಕು.

ಸಮಾಜದ ಸ್ಥಿತಿಗತಿಗಳು, ಬದಲಾಗುತ್ತಿರುವ ರೀತಿ ನೀತಿಗಳು, ಸಾಗಬೇಕಾಗಿರುವ ಮಾರ್ಗ, ತಲುಪಬೇಕಾಗಿರುವ ಗುರಿ ಮೊದಲಾದವುಗಳ ಬಗ್ಗೆ ಅರಿವಿರಬೇಕು. ಇದು ಸಾಕ್ಷರತೆಯಿಂದ, ಶಿಕ್ಷಣ ಪಡೆಯುವುದರಿಂದ ಸಾಧ್ಯವಾಗುತ್ತದೆ.

ಶಿಕ್ಷಣವು ಮಾನವನನ್ನು ಸಂಘಜೀವಿಯಾಗಿ ರೂಪಿಸುತ್ತದೆ. ಅವರನ್ನು ಪ್ರಾಣಿಗಳಗಿಂತ ಭಿನ್ನ ಮತ್ತು ಶ್ರೇಷ್ಠ ಎನಿಸಿಕೊಳ್ಳಲು ಅರ್ಹರನ್ನಾಗಿ ಮಾಡುವುದೇ ಶಿಕ್ಷಣ.

ಪ್ರಾಥಮಿಕ ಶಾಲೆಗಳು ಶಿಕ್ಷಣದ ತಳಪಾಯವಾಗಿದೆ. ಇಷ್ಟೆಲ್ಲಾ ಮಹತ್ವವನ್ನು ಅರಿತ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ಎಲ್ಲ ಮಕ್ಕಳಿಗೂ ಕಡ್ಡಾಯಗೊಳಿಸಿ ಶಿಕ್ಷಣವು ಮನುಷ್ಯನ ಸರ್ವತೋಮುಖ ವ್ಯಕ್ತಿತ್ವ ಬೆಳವಣಿಗೆಗೆ ಕಾರಣವಾಗಿದೆ. ಶಿಕ್ಷಣ ಜನರಿಗೆ ಉದ್ಯೋಗ್ಯವಕಾಶ ದೊರಕಿಸಿಕೊಡುತ್ತದೆ. ಉನ್ನತ ಸ್ಥಾನ ತಂದುಕೊಡುತ್ತದೆ. ಮನುಷ್ಯನಾಗಲು ಶಿಕ್ಷಣ ಬೇಕು. ಲಭ್ಯವಿರುವ ಅವಕಾಶಗಳು ದಕ್ಕಿಸಿಕೊಳ್ಳುವಲ್ಲಿ ಶಿಕ್ಷಣ ನೆರವಾಗುತ್ತದೆ. ಶಿಕ್ಷಣವು ಸಾಮಾಜಿಕ ಸಂಗತಿಗಳ ಕುರಿತು ಚರ್ಚಿಸುವ ಸಾಮರ್ಥ್ಯ ಒದಗಿಸುತ್ತದೆ. ಶಿಕ್ಷಣ ಮಹಿಳಾ ಸಬಲೀಕರಣಕ್ಕೆ ಸೋಪಾನವಾಗಿದೆ.

ಶಿಕ್ಷಣದ ಮಹತ್ವ ಇಷ್ಟೆಲ್ಲಾ ಇದ್ದರೂ ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಸಾಕ್ಷರತೆ ಶಿಕ್ಷಣಗಳಿಗೆ ಅವಕಾಶ ಒದಗಿಸಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಮಾನವ ಬಂಡವಾಳವೆಂಬ ಪರಿಭಾವನೆಯನ್ನು ಅಭಿವೃದ್ಧಿ ಚರ್ಚೆಯಲ್ಲಿ ಬಳಸಲಾಗುತ್ತಿದೆ. ಕುಶಲತೆ ಜ್ಞಾನ, ಆರೋಗ್ಯ, ಜಾಣ್ಮೆ ಮುಂತಾದವುಗಳ ಒಟ್ಟು ಮೊತ್ತವೇ ಮಾನವ ಬಂಡವಾಳ. ಬೌದ್ಧಿಕ ಬಂಡವಾಳಕ್ಕೆ ಸಮಾನವಾಗಿ ಮಾನವ ಬಂಡವಾಳ ಬಳಸಲಾಗುತ್ತಿದೆ. ಇಂದು ಶಿಕ್ಷಣ ಜನರ ಧಾರಣ ಸಾಮರ್ಥ್ಯ ನಿರ್ಧರಿಸುವ ಸಂಗತಿಯಾಗಿದೆ. ಜನಸಾಮಾನ್ಯರ ಸಾಮರ್ಥ್ಯ ವರ್ಧನೆಯೇ ಅಭಿವೃದ್ಧಿ ಎಂದು ನಿರ್ವಚಿಸಲಾಗುತ್ತಿದೆ. ಜನರ ಧಾರಣ ಸಾಮರ್ಥ್ಯ ಪೋಷಿಸುವ ಮುಖ್ಯ ಸಂಗತಿಯೆಂದರೆ ಶಿಕ್ಷಣ ಎಂದು ಪರಿಗಣಿಸಲಾಗಿದೆ. ಅಮರ್ತ್ಯಸೇನ್ ಮತ್ತು ಡೀನ್ ಡ್ರೀಚ್ ಅವರು ಅಭಿವೃದ್ಧಿಯನ್ನು ಮಹಿಳೆಯರು ಒಳಗೊಳ್ಳುವ ಪ್ರಕ್ರಿಯೆಯಾಗಿ ನೋಡುವ ಕ್ರಮಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ. ಆದರೆ ಗ್ರಾಮೀಣ ಮಹಿಳೆಯರು ಅಭಿವೃದ್ಧಿಯ ಒಳಗೊಳ್ಳುವ ಪ್ರಕ್ರಿಯೆಯಿಂದ ಹೊರಗುಳ್ಳಿಯುತ್ತಾರೆ. ಅದರಲ್ಲೂ ಗ್ರಾಮೀಣ ಮಹಿಳೆಯರು ಅಭಿವೃದ್ಧಿ ಒಳಗೊಳ್ಳುವಿಕೆಯ ಪ್ರಕ್ರಿಯೆಯಿಂದ ಹೊರಗುಳಿಯುತ್ತಾಲೇ ಬಂದಿದ್ದಾರೆ.

ರಾಜ್ಯದ ಶಿಕ್ಷಣ ಪದ್ಧತಿಯನ್ನು ಹಲವು ಹಂತಗಳಲ್ಲಿ ವಿಭಾಗಿಸಲಾಗಿದೆ. ಪ್ರಾಥಮಿಕ ಪೂರ್ವ, ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಿಕ್ಷಣ, ಪದವಿಪೂರ್ವ, ಪದವಿ ಮತ್ತು ಸ್ನಾತಕೋತ್ತರ ಎಂಬುದಾಗಿ ವರ್ಗೀಕರಿಸಲಾಗಿದೆ. ಕರ್ನಾಟಕದಲ್ಲಿ ೧ರಿಂದ ೫ನೇ ತರಗತಿ ವರೆಗಿನ ಶಿಕ್ಷಣವನ್ನು ಕಿರಿಯ ಪ್ರಾಥಮಿಕ ಹಾಗೂ ೧ರಿಂದ ೭ನೇ ತರಗತಿಯವರೆಗೆ ಹಿರಿಯ ಪ್ರಾಥಮಿಕ ಹಾಗೂ ೮ ಇರಿಂದ ೧೦ನೇ ತರಗತಿ ಪ್ರೌಢಶಿಕ್ಷಣವೆಂದು ಗುರುತಿಸಲಾಗಿದೆ. ರಾಜ್ಯದಲ್ಲಿ ೨೬೧೧೮ ಪ್ರಾಥಮಿಕ, ૩೪೭೬೫ ಹಿರಿಯ ಪ್ರಾಥಮಿಕ ಹಾಗೂ ೧೧೫೧೪೦ ಪ್ರೌಢ ಶಾಲೆಗಳಿವೆ.

ಶೇ. ೮೨.೯೧ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು ಹಾಗೂ ಶೇ. ೬೪.೫೧ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳನ್ನು ಹಾಗೂ ಶೇ. ೩೦.೭೭ರಷ್ಟು ಪ್ರೌಢಶಾಲೆಗಳು ರಾಜ್ಯದ ಶಿಕ್ಷಣ ಇಲಾಖೆ ನಡೆಸುತ್ತಿದೆ.

ಸರ್ಕಾರಿ ಶಾಲೆಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದು ನಗರ ಪ್ರದೇಶಗಳಲ್ಲಿ ಖಾಸಗಿ ಶಿಕ್ಷಣ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಗ್ರಾಮೀಣ ಪ್ರದೇಶದ ಶೇ. ೭೨.೭೦ರಷ್ಟು ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರೆ. ಭಾರತ ಸಂವಿಧಾನ ಪರಿಚ್ಛೇದ ೨೧ಎ ಪ್ರಕಾರ ಮಕ್ಕಳ ಉಚಿತ ಮತ್ತು ಕಡ್ಡಾಯ ಕಾಯ್ದೆಯ ಹಕ್ಕು ೨೦೦೯ರ ಅನ್ವಯ ೨೦೧೦ರ ಎಲ್ಲಾ ಮಕ್ಕಳಿಗೂ ಕಾರ್ಯಗತಗೊಳಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗಗಳ ಹೆಣ್ಣುಮಕ್ಕಳು ಶಿಕ್ಷಣ ಮುಂದುವರಿಸಲು ಶೈಕ್ಷಣಿಕವಾಗಿ ಹಿಂದುಳಿದ ೬೯ ಬ್ಲಾಕ್‌ಗಳಲ್ಲಿ ಬಾಲಕಿಯರು ೬ರಿಂದ ೮ನೇ ತರಗತಿ ಶಿಕ್ಷಣ ಮುಂದುವರೆಸಲು ೭೧ ವಸತಿ ಶಾಲೆಗಳನ್ನು ಪ್ರಾರಂಭಿಸಿವೆ.

ಗ್ರಾಮೀಣ ಪ್ರದೇಶದ ವಿವಿಧ ವರ್ಗಗಳ ಬಡತನದ ಕುಟುಂಬಗಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಎಲ್ಲಾ ವರ್ಗಗಳ ವಸತಿ ಶಾಲೆಗಳನ್ನು ಒಂದು ಸಂಸ್ಥೆಯ ಕಾರ್ಯ ವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಆದೇಶ ಸಂಖ್ಯೆ ಸ.ಕ.ಇ. ೫೩೨ ಪ.ಕ.ವಿ. ೯೬ ದಿನಾಂಕ ೧೦-೧೦-೧೯೯೯ರಲ್ಲಿ ಕರ್ನಾಟಕ ಸರ್ಕಾರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಪ್ರಾರಂಭಿಸಲು ಆದೇಶಿಸಿತು. ಈ ಸಂಘವು ೨.೨.೨೦೦೦ರಂದು ಕಾರ್ಯಚರಣೆಯನ್ನು ಪ್ರಾರಂಭಿಸಿತು.

ವಸತಿ ಶಾಲೆಗಳ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾಮಟ್ಟದ ವಸತಿ ಶಾಲೆ ನಿರ್ವಹಣಾ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಪ್ರತಿಯೊಂದು ವಸತಿ ಶಾಲೆಗಳ ಮೇಲ್ವಿಚಾರಣೆ ಪ್ರವೇಶ ಪರೀಕ್ಷೆ, ಶಿಕ್ಷಣ ಅಭಿವೃದ್ಧಿ, ಮೂಲಭೂತ ಸೌಲಭ್ಯ ಒದಗಿಸುವುದು ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಉಸ್ತುವಾರಿ ನಿರ್ವಹಿಸುತ್ತದೆ.

ಗ್ರಾಮೀಣ ಪ್ರದೇಶ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಹಾಗೂ ಸಾಮಾನ್ಯ ವರ್ಗದವರ ಶಿಕ್ಷಣಕ್ಕಾಗಿ ೨೦೧೧-೧೨ರಲ್ಲಿ ೩೯೫ ವಸತಿ ಶಾಲೆಗಳು ನಾಲ್ಕು ಏಕಲವ್ಯ ಮಾದರಿಯ ಶಾಲೆಗಳು, ೧೧೪ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ಶಾಲೆಗಳು, ೨೯ ಮೊರಾರ್ಜಿ ದೇಸಾಯಿ ಪದವಿಪೂರ್ವ ಕಾಲೇಜುಗಳನ್ನು ತೆರೆಯಲಾಯಿತು.

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯ ೨೦೦೯ರ ಪ್ರಕಾರ ೬ರಿಂದ ೧೪ವರ್ಷದ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಸಾರ್ವತ್ರಿಕ ಶಿಕ್ಷಣವನ್ನು ಒದಗಿಸುವುದು ಕಡ್ಡಾಯವಾಗಿದೆ. ೨೦೧೪ ಡಿಸೆಂಬರ್ ತಿಂಗಳಲ್ಲಿ ನಡೆಸಿದ ಪರಿಷ್ಕೃತ ಗಣತಿಯ ಪ್ರಕಾರ ೭ರಿಂದ ೧೪ ವರ್ಷದ ೧೨೮೭೮ ಮಕ್ಕಳು ಶಾಲೆಯಿಂದ ಹೊರಗುಳಿದಿವೆ. ಶಾಲೆ ಬಿಟ್ಟ ಮಕ್ಕಳ ಸಂಖ್ಯೆಗಿಂತಲೂ ಶಾಲೆಗೆ ದಾಖಲಾಗದ ಮಕ್ಕಳು ಹೆಚ್ಚಾಗಿದ್ದಾರೆ.

ಅನಕ್ಷರಸ್ಥರಿಗೆ ಶಿಕ್ಷಣ ನೀಡುವ ನಿಟ್ಟಿನಲ್ಲಿ ೨೦೧೧-೧೨ನೇ ಶೈಕ್ಷಣಿಕ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಿಂದ ಸಾಕ್ಷರ ಭಾರತ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಶೇ. ೫೦ಕ್ಕೂ ಕಡಿಮೆ ಮಹಿಳಾ ಶಿಕ್ಷಣ ಹೊಂದಿರುವ ೨೦ ರಾಜ್ಯಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು. ಗ್ರಾಮೀಣ ಪ್ರದೇಶದ ೫೦ ವರ್ಷ ಮೇಲ್ಪಟ್ಟ ವಯೋಮಿತಿಯ ಅದರಲ್ಲೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಸಾಮಾನ್ಯ ವರ್ಗದ ಮಹಿಳೆಯರಿಗೆ ಆದ್ಯತೆ ನೀಡಲಾಯಿತು.

ಅನಕ್ಷರಸ್ಥರಿಗೆ ಶಿಕ್ಷಣ ನೀಡುವ ಉದ್ದೇಶದಿಂದ ೧೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಲೋಕ ಶಿಕ್ಷಣ ನಿರ್ದೇಶನಾಲಯವನ್ನು ಪ್ರಾರಂಭಿಸಲಾಯಿತು. ೨೦೧೦-೧೧ರಲ್ಲಿ ಪ್ರಾರಂಭಿಸಲಾದ ಕಾರ್ಯಕ್ರಮದಲ್ಲಿ ಶೇ. ೫೦ಕ್ಕಿಂತ ಕಡಿಮೆ ಪ್ರಮಾಣದ ಸಾಕ್ಷರತೆ ಇರುವ ರಾಜ್ಯದ ೨೦ ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶದ ೧೫ವರ್ಷ ಮೇಲ್ಪಟ್ಟ ವಯೋಮಾನದ ಅನಕ್ಷರಸ್ಥರು ಅದರಲ್ಲೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಸಾಮಾನ್ಯ ವರ್ಗದ ಮಹಿಳೆಯರಿಗೆ ಆದ್ಯತೆ ನೀಡಲಾಯಿತು.

ಸಾಕ್ಷರತ ಮಿಷನ್ ಪ್ರಾಧಿಕಾರ ೨೦ ಜಿಲ್ಲೆಯಲ್ಲಿ ಶಿಕ್ಷಣ ಸಮಿತಿ ೧೧೭ ತಾಲೂಕು, ಜಿಲ್ಲಾ ಶಿಕ್ಷಣ ಸಮಿತಿ ಹಾಗೂ ೩೭೮೮ ಗ್ರಾಮಪಂಚಾಯಿತಿ ಲೋಕಶಿಕ್ಷಣ ಸಮಿತಿಗಳನ್ನು ರಚಿಸಲಾಯಿತು. ರಾಷ್ಟ್ರೀಯ ಸಾಕ್ಷರತ ಮಿಷನ್ ಪ್ರಾಧಿಕಾರವು ೫೧ ಲಕ್ಷ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಿದೆ.

ಭಾರತದಲ್ಲಿ ನಗರ ಮತ್ತು ಗ್ರಾಮೀಣ ಶಿಕ್ಷಣ ಅಂತರ ದಶಕದಿಂದ ದಶಕಕ್ಕೆ ಮುಂದುವರಿಯುತ್ತಲೇ ಸಾಗಿದೆ. ೧೯೫೧ರಲ್ಲಿ ಭಾರತದ ಶಿಕ್ಷಣ ಪ್ರಮಾಣ ಶೇ. ೧೯ರಷ್ಟು ನಗರ ಪ್ರದೇಶದ ಶಿಕ್ಷಣ ಪ್ರಮಾಣ ಶೇ. ೩೫ರಷ್ಟಿದ್ದಾರೆ. ಗ್ರಾಮೀಣ ಪ್ರದೇಶದ ಶಿಕ್ಷಣ ಪ್ರಮಾಣ ಶೇ. ೧೪ರಷ್ಟು ಮಾತ್ರ ಇತ್ತು. ೧೯೬೧ರಲ್ಲಿ ದೇಶದ ಶಿಕ್ಷಣ ಪ್ರಮಾಣ ಶೇ. ೧೯ರಿಂದ ೨೫ಕ್ಕೆ ಏರಿಕೆಯಾಗಿದೆ. ನಗರ ಹಾಗೂ ಗ್ರಾಮೀಣ ಶಿಕ್ಷಣದ ಅಂತರ ಹಾಗೆಯೇ ಮುಂದುವರಿದರೆ, ನಗರದ ಜನರ ಶೇ. ೪೪ರಷ್ಟು ಶಿಕ್ಷಿತರಾದರೆ, ಗ್ರಾಮೀಣ ಪ್ರದೇಶದ ಶೇ. ೨೦ರಷ್ಟು ಮಾತ್ರ ಶಿಕ್ಷಿತರಿದ್ದರು. ಹೀಗೆ ಮುಂದುವರೆದು ೧೯೭೧ ಮತ್ತು ೧೯೮೧ರಲ್ಲಿಯು ನಗರ-ಗ್ರಾಮೀಣ ಶಿಕ್ಷಣದ ಅಂತರ ಕ್ರಮೇಣ ಶೇ. ೫೧, ಶೇ. ೨೫ರಷ್ಟು ಹಾಗೂ ಶೇ. ೫೭ ಮತ್ತು ಶೇ. ೩೧ರಷ್ಟು ಅಂತರದಲ್ಲಿ ಮುಂದೆ

ಸಾಗಿದೆ. ಇನ್ನೂ ೧೯೯೧ ಹಾಗೂ ೨೦೦೧ರಲ್ಲಿ ಇದೇ ಸ್ಥಿತಿ ಶೇ. ೭೪ ಮತ್ತು ಶೇ. ೪೮ ಹಾಗೂ ಶೇ. ೮೦.೫೫ ಮತ್ತು ಶೇ. ೫೯.೩೪ರಷ್ಟು ಮುಂದುವರಿದಿದೆ. ಒಟ್ಟಾರೆಯಾಗಿ ನಗರ ಮತ್ತು ಗ್ರಾಮೀಣ ಶಿಕ್ಷಣ ಪ್ರಮಾಣದಲ್ಲಿ ಏರಿಕೆಯಾಗುತ್ತಲೇ ಅಸಮಾನತೆಯು ಮುಂದುವರಿಯುತ್ತಿರುವುದನ್ನು ಕಾಣಬಹುದಾಗಿದೆ.

ಕರ್ನಾಟಕದ ಚಿತ್ರಣವು ಇದರಿಂದ ಹೊರತಾಗಿಲ್ಲ. ೨೦೧೧ರ ಜನಗಣತಿಯ ಪ್ರಕಾರ ರಾಜ್ಯದ ಶಿಕ್ಷಣ ಪ್ರಮಾಣ ಶೇ. ೭೫.೬೦ರಷ್ಟಿದ್ದು ನಗರ ಪ್ರದೇಶದ ಶಿಕ್ಷಣ ಪ್ರಮಾಣ ಶೇ. ೮೬.೨೧ರಷ್ಟಿದ್ದಾರೆ. ಗ್ರಾಮೀಣ ಶಿಕ್ಷಣ ಪ್ರಮಾಣ ಶೇ. ೬೮.೮೬ರಷ್ಟಿದೆ. ರಾಜ್ಯದಲ್ಲಿಯೂ ಗ್ರಾಮೀಣ ನಗರ ಪ್ರದೇಶದ ಶಿಕ್ಷಣದ ಅಂತರ ಶೇ. ೧೮ರಷ್ಟು ಇದೆ.

೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಶಿಕ್ಷಣದ ಪ್ರಮಾಣ ಶೇ. ೭೫.೬೦ರಷ್ಟಿದೆ. ಈ ಶಿಕ್ಷಣ ಪ್ರಮಾಣ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಏಕರೂಪವಾಗಿಲ್ಲ. ನಗರ ಪ್ರದೇಶದಲ್ಲಿ ಶೇ. ೮೬.೨೧ರಷ್ಟು ಜನರು ಶಿಕ್ಷಣ ಪಡೆದಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಶೇ. ೬೮.೮೬ರಷ್ಟು ಜನರು ಮಾತ್ರ ಶಿಕ್ಷಣ ಪಡೆದಿದ್ದಾರೆ. ಒಂದೇ ರಾಜ್ಯದಲ್ಲಿ ನೆಲೆಸಿದ್ದರೂ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಶೇ. ೧೮ರಷ್ಟು ಶಿಕ್ಷಣದ ಅಂತರ ಕಾಣಬಹುದಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ೭೦ ವರ್ಷಗಳು ಕಳೆದರೂ ಗ್ರಾಮೀಣ ಪ್ರದೇಶದ ಜನರು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇನ್ನೂ ಮಹಿಳೆಯರ ಅದರಲ್ಲೂ ಗ್ರಾಮೀಣ ಮಹಿಳೆಯ ಶಿಕ್ಷಣದ ಪ್ರಮಾಣ ಶೋಚನಿಯವಾಗಿದ್ದು ರಾಜ್ಯದ ಮಹಿಳಾ ಶಿಕ್ಷಣ ಪ್ರಮಾಣ ಶೇ. ೬೮.೧೩ರಷ್ಟಿದೆ. ನಗರ ಪ್ರದೇಶದಲ್ಲಿ ಶೇ. ೮೧.೭೧ರಷ್ಟು ಮಹಿಳೆಯರು ಶಿಕ್ಷಿತರಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇ. ೫೯.೬೦ರಷ್ಟು ಮಹಿಳೆಯರು ಶಿಕ್ಷಿತರಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ಅಂತರಗಳಿರುವಂತೆ ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರ ನಡುವೆ ಶೇ. ೨೨ರಷ್ಟು ಶಿಕ್ಷಣದ ಅಂತರವಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಶಿಕ್ಷಣದಿಂದ ನಗರ ಪ್ರದೇಶಗಳ ಮಹಿಳೆಯರಿಗಿಂತ ಹಿಂದುಳಿದಿದ್ದಾರೆ.

ಗ್ರಾಮೀಣ ಪ್ರದೇಶದ ಮಹಿಳಾ ಶಿಕ್ಷಣ ಪ್ರಮಾಣ ಕಡಿಮೆಯಿದ್ದು ಶೇ. ೫೯.೬೦ರಷ್ಟು, ನಗರ ಪ್ರದೇಶದ ಪುರುಷರ ಶಿಕ್ಷಣ ಪ್ರಮಾಣ ಶೇ. ೯೦.೫೪ ಮತ್ತು ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೮೧.೭೧ರಷ್ಟು ಹಾಗೂ ಗ್ರಾಮೀಣ ಪುರುಷ ಶಿಕ್ಷಣ ಪ್ರಮಾಣ ಶೇ. ೭೭.೯೨ ಮತ್ತು ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೫೯.೬೦ಕ್ಕಿಂತ ಕಡಿಮೆ ಶಿಕ್ಷಣ ಹೊಂದಿದ್ದಾರೆ.

ಶಿಕ್ಷಣ ಮತ್ತು ಉದ್ಯೋಗಕ್ಕೆ ನೇರ ಸಂಬಂಧವಿದ್ದು ಶಿಕ್ಷಿತ ಪುರುಷರು ಮತ್ತು ಮಹಿಳೆಯರು ಉದ್ಯೋಗ ಅವಕಾಶಗಳನ್ನು ಪಡೆಯುತ್ತಾ ಆರ್ಥಿಕವಾಗಿ ಸಬಲೀಕರಣಗೊಳ್ಳುತ್ತಿದ್ದಾರೆ. ಗ್ರಾಮೀಣ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣದಿಂದ ವಂಚಿತರಾಗುತ್ತಿದ್ದರು ಆರ್ಥಿಕವಾಗಿ ನಿಶಕ್ತಿಕರಣ ಗೊಳ್ಳುತ್ತಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳೆಯರಿಗೆ ಅದರಲ್ಲಿಯೂ ಗ್ರಾಮೀಣ ಮಹಿಳೆಯರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಯೋಜನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ ಬರಲಾಗುತ್ತಿದೆ. ಅದರಲ್ಲೂ ಗ್ರಾಮೀಣ ಮಹಿಳೆಯರ ಶಿಕ್ಷಣ ದಕ್ಕಿಸಿಕೊಳ್ಳಲಾಗುತ್ತಿಲ್ಲ.

೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಶಿಕ್ಷಣ ಪ್ರಮಾಣ ಶೇ.೭೫ರಷ್ಟಿದೆ. ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೬೮ರಷ್ಟು ಪುರುಷ ಶಿಕ್ಷಣ ಪ್ರಮಾಣ ಶೇ. ೮೨ರಷ್ಟಿದೆ. ಪುರುಷ ಶಿಕ್ಷಣ ಪ್ರಮಾಣಕ್ಕೆ ಹೋಲಿಸಿದರೆ ಮಹಿಳಾ ಶಿಕ್ಷಣ ಪ್ರಮಾಣ ಕಡಿಮೆ ಇದೆ. ನಗರ ಪ್ರದೇಶದ ಮಹಿಳಾ ಶಿಕ್ಷಣ ಪ್ರಮಾಣಕ್ಕೆ ಹೊಲಿಸಿದರೆ ಗ್ರಾಮೀಣ ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೫೯ರಷ್ಟು. ನಗರ ಪ್ರದೇಶಗಳ ಶಿಕ್ಷಣ ಹೆಚ್ಚು ಒತ್ತು ನೀಡುತ್ತಿದ್ದು, ಗ್ರಾಮೀಣ ಮಹಿಳೆಯರು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಶಿಕ್ಷಣ ಮತ್ತು ಅಭಿವೃದ್ಧಿಯು ಪ್ರತಿ ಹಂತದಲ್ಲಿಯೂ ಹೇಗೆ ವ್ಯಕ್ತಿಗಳನ್ನು ವಿಶೇಷವಾಗಿ ಮಹಿಳೆಯರು, ದಲಿತರು, ಹಿಂದುಳಿದವರು, ಅವಕಾಶವಂಚಿತರು ಹಾಗೂ ಸಮಾಜದ ತಳಮಟ್ಟದ ಜನರನ್ನು ಸಬಲೀಕರಣಗೊಳಿಸಬಹುದು ಎಂಬುದು ಸಾಬೀತಾಗುತ್ತದೆ. ಭಾರತವು ಹಳ್ಳಿಗಳ ನಾಡಗಿದ್ದು, ಸುಮಾರು ಏಳು ಲಕ್ಷಕ್ಕೂ ಅಧಿಕ ಗ್ರಾಮಗಳು ಕಂಡುಬಂದು ೫೯೪ ಜಿಲ್ಲೆಗಳು ಒಳಗೊಂಡ ಶೇ. ೬೦ಕ್ಕಿಂತಲೂ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ್ದು, ಕೃಷಿಯನ್ನೇ ತಮ್ಮ ಮೂಲ ಜೀವನಧಾರ ಕಸುಬಾಗಿ ರೂಪಿಸಿಕೊಂಡಿದ್ದಾರೆ. ರಾಷ್ಟ್ರದ ಒಟ್ಟು ವಿಸ್ತೀರ್ಣ ೩೨,೮೭,೨೬೩ ಚ.ಕಿ.ಮೀ. ವಿಸ್ತೀರ್ಣಹೊಂದಿದ್ದು, ಅದರಲ್ಲಿ ೪೨,೩೩೧೧ ಚ.ಕಿ.ಮೀ. ಅರಣ್ಯ ಪ್ರದೇಶ ಒಳಗೊಂಡಿದ್ದು, ಕೃಷಿ ಭೂಮಿ ೧೫೯.೬ ಮೀಲಿಯನ್ ಹೆಕ್ಟರ್ ಹೊಂದಿದೆ. ೨೦೧೧ರ ಜನಗಣತಿಯ ಪ್ರಕಾರ ೧೨೧ ಕೋಟಿಗೂ ಅಧಿಕ ಜನಸಂಖ್ಯೆಯಿದ್ದು, ದೇಶದ ಒಟ್ಟಾರೆ ಸಾಕ್ಷರತೆ ಪ್ರಮಾಣ ಒಟ್ಟು ೭೪.೪೦ರಷ್ಟಿದ್ದು, ಅದರಲ್ಲಿ ಪುರುಷರ ಸಾಕ್ಷರತೆಯ ಪ್ರಮಾಣ ೮೨.೧೪ರಷ್ಟು ಹಾಗೂ ಮಹಿಳೆಯರ ಸಾಕ್ಷರತೆಯ ಪ್ರಮಾಣ ೬೫.೪೬ರಷ್ಟು ಕಂಡುಬರುತ್ತದೆ. ಜನಸಾಂದ್ರೆತೆಯ ಪ್ರಮಾಣ ಪ್ರತಿ ಚದುರ ಕಿಲೋಮೀಟರ್‌ಗೆ ೩೮೨ ಜನಸಂದ್ರಾತೆ ಇದ್ದು, ಪ್ರತಿ ಸಾವಿರ ಪುರುಷರಿಗೆ ೯೬೮ ಮಹಿಳೆಯರಿದ್ದಾರೆ. ದೇಶದ ನಗರ ಪ್ರದೇಶದಲ್ಲಿ ೮೬ರಷ್ಟು ಜನರು ಸಾಕ್ಷರರಾಗಿದ್ದಾರೆ. ಗ್ರಾಮೀಣ ಭಾಗದಲ್ಲಿ ಶೇ. ೭೧ರಷ್ಟು ಸಾಕ್ಷರರು ಕಂಡುಬರುತ್ತಾರೆ.

ಶಿಕ್ಷಣ ಪದದ ಅರ್ಥ ಮತ್ತು ಉತ್ಪತ್ತಿ

ಸಂಸ್ಕೃತದ "ಶಿಕ್ಷ" ಪದದಿಂದ ಶಿಕ್ಷಣ ಪದವು ರೂಪಗೊಂಡಿದೆ. ಶಿಕ್ಷ ಎಂದರೆ ಕಲಿಯುವಿಕೆ. ಆಂಗ್ಲಭಾಷೆಯಲ್ಲಿ "ಎಜುಕೇಶನ್" ಎಂಬ ಪದವು ಶಿಕ್ಷಣ ಪದದೊಂದಿಗೆ ಸಮಾನಾರ್ಥದಲ್ಲಿ ಬಳಕೆಯಾಗಿದೆ. ಲ್ಯಾಟಿನ್ ಭಾಷೆಯಲ್ಲಿ "ಎಜುಕೀರ್, ಎಜುಸೀರ್, ಎಜುಕೇಟಿಮ್ ಪದಗಳಿಂದ ಉತ್ಪತ್ತಿಯಾಗಿದೆ ಎಂದು ಭಾಷಾತಜ್ಞರು ತಿಳಿಸುತ್ತಾರೆ.

ವ್ಯಾಖ್ಯಾನಗಳು

ಶಿಕ್ಷಣ ಪದಕ್ಕೆ ಅನೇಕರು ಅನೇಕ ರೀತಿಯಲ್ಲಿ ವ್ಯಾಖ್ಯಾನಗಳನ್ನು ನೀಡಿದ್ದಾರೆ,

* ಮಾನವನನ್ನು ನಿಸ್ವಾರ್ಥಿ ಮತ್ತು ಸ್ವಾವಲಂಬಿಯನ್ನಾಗಿ ಮಾಡುವುದು ಶಿಕ್ಷಣ ಎಂದು ಋಗ್ವೇದವು ತಿಳಿಸುತ್ತದೆ.

* ತಾಯ್ನಾಡಿಗಾಗಿ ಪ್ರೀತಿ ಮತ್ತು ದೇಶಕ್ಕಾಗಿ ತರಬೇತಿಗೊಳಿಸುವುದೇ ಶಿಕ್ಷಣ ಎಂದು ಕೌಟಿಲ್ಯ ತಿಳಿಸಿದ್ದಾನೆ.

* ಆತ್ಮಸಾಕ್ಷಾತ್ಕಾರಕ್ಕೆ ಯಾವುದು ನೆರವಾಗುವುದೋ ಅದು ವಿದ್ಯೆ, ಉಳಿದವೆಲ್ಲವು ಅವಿದ್ಯೆ ಎಂದು ಶಂಕರಾಚಾರ್ಯರು ಹೇಳಿದ್ದಾರೆ.

* ವಿದ್ಯಾಭ್ಯಾಸವೆಂದರೆ ಮನುಷ್ಯರಲ್ಲಿ ಈಗಾಗಲೆ ಇರುವ ಪರಿಪೂರ್ಣತೆಯನ್ನು ಆವಿರ್ಭಾವ ಗೊಳಿಸುವುದು ಎಂದಿದ್ದಾರೆ ಸ್ವಾಮಿ ವಿವೇಕಾನಂದರು.

* ಪ್ಯಾಟ್ರಿಕ್ ಪ್ರಕಾರ ವಿಮರ್ಶಾತ್ಮಕವಾಗಿ ಪರೀಕ್ಷಿಸಲ್ಪಟ್ಟ ಆಯ್ಕೆಗೆ ಯೋಗ್ಯವೆಂದು ಕಂಡು ಹಿಡಿಯಲ್ಪಡುವ ಬಯಕೆಯ ಮೌಲ್ಯವೇ ಶಿಕ್ಷಣ ಕಲೆ. ಗ್ಯಾರೆಟ್ ಪ್ರಕಾರ ವ್ಯಕ್ತಿಗೆ ಅಪೇಕ್ಷಣೀಯವಾದುದ್ದೇ ಶಿಕ್ಷಣದ ಮೌಲ್ಯ.

ವೇದಗಳ ಕಾಲದಿಂದಲೂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಹುಸಂಖ್ಯಾತ ಸಂಪ್ರದಾಯಸ್ಥರು, ಸಂಪ್ರದಾಯ ನಿಷ್ಠೆಯ ಪದ್ಧತಿಗಳು ಕಾರಣವಾಗಿದ್ದವು. ಹಾಗಾಗಿ ಮಹಿಳೆಯರು ವಿದ್ಯಾವಂತರಾದರೆ ನೀತಿಭ್ರಷ್ಟ ರಾಗುತ್ತಾರೆಂಬ ಕಾರಣದಿಂದ ಜನರು ಸ್ತ್ರೀಯರ ಶಿಕ್ಷಣಕ್ಕೆ ಆಸಕ್ತಿ ನೀಡಿರಲಿಲ್ಲ.

ಸಾಂಪ್ರದಾಯಿಕ ಕಟ್ಟುಪಾಡುಗಳು, ಅದಕ್ಕೆ ಸಂಬಂಧಿಸಿದ ಸಮಸ್ಯೆಗಳು, ಗುರುಕುಲದ ವಿದ್ಯಾಭ್ಯಾಸ, ಪೋಷಕರ ಅಜ್ಞಾನ, ಬಡತನ, ಶಾಲೆಗಳ ಕೊರತೆ, ಮಹಿಳಾ ಶಿಕ್ಷಕರ ಕೋರಿಕೆ, ಅಂದಿನ ಸರ್ಕಾರಗಳ ಹಲವು ಧೋರಣೆಗಳು, ಸೂಕ್ತವಲ್ಲದ ಪಠ್ಯಕ್ರಮಗಳು, ಪುರುಷಪ್ರಧಾನ ಕುಟುಂಬಗಳ ಸ್ತರವ್ಯವಸ್ಥೆ, ಇನ್ನಿತರ ಸಮಾಜದ ನಿಷ್ಠುರ ಪದ್ಧತಿಯು ವೇದಗಳ ಕಾಲದಿಂದ ಆಚರಣೆಯಲ್ಲಿ ಕಂಡುಬಂದಿದ್ದರಿಂದಾಗಿ ಮಹಿಳಾ ಶಿಕ್ಷಣಕ್ಕೆ ಪಾಧಾನ್ಯತೆ ಕಡಿಮೆಯಾಗಿತ್ತು.

ಭಾರತ ಇಂದಿಗೂ ಸಹ ಗ್ರಾಮಗಳ ದೇಶವಾಗಿದೆ. ಭಾರತವು ಸುಮಾರು ೭ ಲಕ್ಷಕ್ಕೂ ಅಧಿಕ ಗ್ರಾಮಗಳಿಂದ ಕೂಡಿದೆ. ಶೇ. ೬೦ರಷ್ಟು ಜನರು ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಪುರಾತನ ಕಾಲದಿಂದಲೂ ವ್ಯವಸಾಯ, ಕರಕುಶಲಕಲೆ ಮೂಲ ಕಸುಬನ್ನಾಗಿರಿಸಿ ಜೀವನ ಸಾಗಿಸುತ್ತಾ ಬಂದಿದ್ದಾರೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಹಲವು ಆಯೋಗಗಳು ಶಿಕ್ಷಣ ಬೆಳವಣಿಗೆಗಾಗಿ ಜನ್ಮ ತಾಳಿದವು. ಅವು ನಂತರದಲ್ಲಿ ಬಹುಮುಖ್ಯವಾದವು ಅಂಥವುಗಳು ಈ ಕೆಳಕಂಡತಿವೆ.

ಸ್ವಾತಂತ್ರ್ಯ ಪೂರ್ವದ ಆಯೋಗಗಳು

ಚಾರ್ಲ್ಸ್ ವುಡ್ ವರದಿ ೧೮೫೪, ಹಂಟರ್ ಆಯೋಗ ೧೮೮೨, ರ್‍ಯಾಲೆ ಆಯೋಗ ೧೯೦೨, ಸ್ಯಾಡ್ಲರ್ ಆಯೋಗ ೧೯೧೭, ಹರ್ವಾಗ ಸಮಿತಿ ೧೯೨೯, ವುಡ್ ಮತ್ತು ಅಬಾಟರ್ ವರದಿ ೧೯೩೬-೩೭, ಸಾರ್ಜಂಟ್ ವರದಿ ೧೯೪೪.

ಸ್ವಾತಂತ್ರ್ಯ ನಂತರದ ಪ್ರಮುಖ ಆಯೋಗಗಳು

ರಾಧಾಕೃಷ್ಣನ್ ಆಯೋಗ ೧೯೪೮-೪೯, ಮೊದಲಿಯಾರ್ ಆಯೋಗ ೧೯೫೨-೫೩, ಭಾರತೀಯ ಶಿಕ್ಷಣ ಆಯೋಗ(ಕೊಠಾರಿ ಶಿಕ್ಷಣ ಅಯೋಗ) ೧೯೬೪-೬೬, ೧೯೬೮ರ ರಾಷ್ಟ್ರೀಯ ಶಿಕ್ಷಣ ನೀತಿ, ೧೯೭೧-೭೪ ಸ್ತ್ರೀಯರ ಸ್ಥಾನಮಾನ ಕುರಿತಾದ ಮಂಡಳಿ, ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿ, ೧೯೮೮ ಎನ್.ಸಿ.ಇ.ಆರ್.ಟಿ. ವೃತ್ತಿನೀತಿ, ಪ್ರೊ. ರಾಮಮೂರ್ತಿ ಸಮಿತಿ ೧೯೯೦, ೧೯೯೨ರ ಜನಾರ್ದನರೆಡ್ಡಿ ಸಮಿತಿ, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ ೨೦೦೯, ನಂಜುಂಡಪ್ಪ ಪ್ರಾದೇಶಿಕ ಅಸಮತೋಲನ ನಿವಾರಣ ವರದಿ, ಸರ್ವಶಿಕ್ಷಣ ಅಭಿಯಾನ.

ಈ ಮೇಲ್ಕಂಡ ಆಯೋಗಗಳು ಮತ್ತು ರಾಜ್ಯ ಮತ್ತು ಕೇಂದ್ರದಿಂದ ಹಲವು ರೀತಿಯ ಶೈಕ್ಷಣಿಕ ಕಾರ್ಯಕ್ರಮಗಳು ಒಳಗೊಂಡಿವೆ. ಡಾ. ನಂಜುಂಡಪ್ಪನವರು ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ವರದಿಯನ್ನು ಪರಿಗಣಿಸಿ ಮಾನವ ಅಭಿವೃದ್ಧಿ ಇಲಾಖೆಯು ಬಿಡುಗಡೆ ಮಾಡಿರುವ ವರದಿಯಲ್ಲಿ ಮುಖ್ಯವಾಗಿ ಉತ್ತರ ಕರ್ನಾಟಕದ ಭಾಗದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಆರೋಗ್ಯ ಮತ್ತು ಮೂಲಸೌಕರ್ಯ ಈ ಭಾಗದಲ್ಲಿ ತೀರ ಹಿಂದುಳಿದಿರುವುದರಿಂದಾಗಿ ತಿಳಿಸಿದ್ದಾರೆ. ಹಿಂದುಳಿದ ೩೯ ತಾಲ್ಲೂಕುಗಳಲ್ಲಿ ಕನಕಪುರ ತಾಲೂಕು ಒಂದಾಗಿದ್ದು ೨೦೧೧ರ ಆಯವ್ಯಯದಲ್ಲಿ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಕರಿಗೆ ವಸತಿ ಸೌಲಭ್ಯ ಮತ್ತು ವಸತಿ ಶಾಲೆಗಳು ಮತ್ತು ಮಾದರಿ ಶಾಲೆಗಳನ್ನು ತೆರೆಯಲಾಗಿದೆ. ಆದರೂ ಮಹಿಳಾ ಸಾಕ್ಷರತೆಯು ಅತ್ಯಂತ ಕೆಳಮಟ್ಟದಲ್ಲಿದ್ದರೂ ಸಹ ಶಾಲೆಗಳ ಮೂಲಸೌಲಭ್ಯಗಳ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕದ ಭಾಗದ ೩೯ ತಾಲ್ಲೂಕುಗಳಲ್ಲಿ ಪಂಚ ಸೌಲಭ್ಯಗಳ ಯೋಜನೆಯಲ್ಲಿ ಸರ್ವಶಿಕ್ಷಣ ಅಭಿವೃದ್ಧಿಯ ಯೋಜನೆಯ ಮೂಲಕ ಸಮುಚ್ಚಯಗಳ ಅಭಿವೃದ್ಧಿ ೨೦೧೧-೧೨ರ ಯೋಜನೆಗೆ ಹಣ ಬಿಡುಗಡೆ ಮಾಡಲಾಗಿದೆ. ಇದರ ಜೊತೆಗೆ ಕೆಳಕಂಡ ಸೌಲಭ್ಯಗಳನ್ನು ಸರ್ಕಾರಿ ಶಾಲೆಗಳಲ್ಲಿ ನೀಡಲಾಗುತ್ತಿದೆ.

ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿವಿಧ ರೀತಿಯ ಸೌಲಭ್ಯಗಳು

ನುರಿತ ಮತ್ತು ತರಬೇತಿ ಶಿಕ್ಷಕರಿಂದ ಪಾಠ ಬೋಧನೆ, ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ, ಉಚಿತ ಬ್ಯಾಗ್ ಮತ್ತು ನೋಟ್ ಪುಸ್ತಕ, ಮಧ್ಯಾಹ್ನದ ಬಿಸಿ ಊಟ, ವಿದ್ಯಾರ್ಥಿ ವೇತನ, ೮ನೇ ತರಗತಿಗೆ ಉಚಿತ ಸೈಕಲ್ ವಿತರಣೆ, ೧ನೇ ತರಗತಿಯಿಂದ ಇಂಗ್ಲಿಷ್ ಕಲಿಕೆ, ಚಿಣ್ಣರ ಜಿಲ್ಲಾ ದರ್ಶನ, ನಿರಂತರ ಸಹಪಠ್ಯ ಚಟುವಟಿಕೆಗಳು, ಪ್ರತಿಭಾ ಕಾರಂಜಿ, ಕಲಿಕಾ ಸಾಮಗ್ರಿಗಳಿಂದ ಪಾಠ, ಸ್ವಚ್ಛ ಸುಂದರ ಭೌತಿಕ ಪರಿಸರ, ಗ್ರಂಥಾಲಯ ಸೌಲಭ್ಯ.

ಇಷ್ಟಿದ್ದರೂ ಕೆಲವು ಜಿಲ್ಲೆಗಳಲ್ಲಿ ಸಾಕ್ಷರತೆಯ ಮಟ್ಟ ಉತ್ತಮವಾಗಿಲ್ಲ. ರಾಯಚೂರು, ಚಾಮರಾಜನಗರ, ಗುಲ್ಬರ್ಗ, ಕೊಪ್ಪಳ, ಬಿಜಾಪುರ, ಬಳ್ಳಾರಿ, ಬಾಗಲಕೋಟೆ ಮತ್ತು ಯಾದಗಿರಿ ಈ ಜಿಲ್ಲೆಗಳು ಶೇ. ೬೦ಕ್ಕಿಂತ ಕಡಿಮೆ ಮಹಿಳಾ ಸಾಕ್ಷರತೆ ಹೊಂದಿವೆ.

೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಸಾಕ್ಷರತೆಯ ಪ್ರಮಾಣವು ಶೇಕಡ ೭೫.೬೧ರಷ್ಟು ಕಂಡುಬಂದು ೨೩ನೇ ಸ್ಥಾನ ಪಡೆದಿದೆ. ಮೊದಲ ಮೂರು ಸ್ಥಾನಗಳಲ್ಲಿ ಕೇರಳ ಶೇ. ೯೪ರಷ್ಟು, ಲಕ್ಷದ್ವೀಪ ಶೇ. ೯೨ರಷ್ಟು, ಮಿಜೋರಾಂ ಶೇ. ೯೨ರಷ್ಟು ಸಾಕ್ಷರತೆ ಸಾಧಿಸಿರುವ ರಾಜ್ಯಗಳಾಗಿವೆ. ಕರ್ನಾಟಕದಲ್ಲಿ ಪುರುಷರ ಸಾಕ್ಷರತೆ ಶೇ. ೮೨.೮೪ರಷ್ಟು ಕಂಡುಬಂದರೆ ಮಹಿಳಾ ಸಾಕ್ಷರತೆಯು ೬೮.೧೫ರಷ್ಟು ಕಂಡುಬಂದು ಒಟ್ಟಾರೆಯಾಗಿ ಯಾದಗಿರಿ ಜಿಲ್ಲೆ ಕೊನೆಯ ಸ್ಥಾನದಲಿದ್ದು ಇದು ಶೇ. ೫೨.೩೬ರಷ್ಟು ಸಾಕ್ಷರತೆಯನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯು ೮೮.೬೨ರಷ್ಟು ಸಾಕ್ಷರತೆ ಹೊಂದಿ ಪ್ರಥಮ ಸ್ಥಾನದಲ್ಲಿದೆ. ದ್ವಿತೀಯ ಸ್ಥಾನ ಬೆಂಗಳೂರು ನಗರ ಜಿಲ್ಲೆ ಹೊಂದಿದೆ. ಶೇ. ೮೮.೪೮ರಷ್ಟು ಸಾಕ್ಷರತೆ ಸಾಧಿಸಿದೆ. ಕರ್ನಾಟಕದಲ್ಲಿ ಒಟ್ಟು ಸಾಕ್ಷರರ ಪ್ರಮಾಣ ೭೫.೧೦%. ಪುರುಷರ ಸಾಕ್ಷರತೆ ಪ್ರಮಾಣವು ಶೇ. ೮೨.೮೪ರಷ್ಟು ಕಂಡುಬಂದು ಮಹಿಳಾ ಸಾಕ್ಷರರ ಪ್ರಮಾಣ ಶೇ. ೬೮.೧೩ರಷ್ಟು. ದಕ್ಷಿಣ ಕನ್ನಡ ಜಿಲ್ಲೆಯು ಶೇ. ೯೩.೩೧ರಷ್ಟು ಸಾಕ್ಷರತೆಯನ್ನು ಹೊಂದಿದ್ದು ರಾಜ್ಯದಲ್ಲಿ ಪ್ರಥಮ ಸ್ಥಾನ ಹೊಂದಿದೆ. ಬೆಂಗಳೂರು ನಗರ ಜಿಲ್ಲೆಯು ಶೇ. ೯೧.೮೩ರಷ್ಟು ಸಾಕ್ಷರತೆಯನ್ನು ಹೊಂದಿದ್ದು ೨ನೇ ಸ್ಥಾನದಲ್ಲಿದೆ. ಯಾದಗಿರಿ ಜಿಲ್ಲೆಯು ಕೊನೆಯ ಸ್ಥಾನದಲ್ಲಿದ್ದು ಚಾಮರಾಜನಗರ, ರಾಯಚೂರು, ಗುಲ್ಬರ್ಗಾ, ರಾಮನಗರ ಕಡಿಮೆ ಸಾಕ್ಷರತೆ ಹೊಂದಿದ ಜಿಲ್ಲೆಗಳಾಗಿವೆ. ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಶೇಕಡ ೬೮.೧೫ರಷ್ಟು ಮಹಿಳಾ ಸಾಕ್ಷರತೆ ಸಾಧಿಸಿದರೆ ಜಿಲ್ಲಾವಾರು ಸಾಕ್ಷರತೆಯಲ್ಲಿ ಬೆಂಗಳೂರು ನಗರ ಶೇಕಡ ೮೪.೮೦ರಷ್ಟು ಮಹಿಳಾ ಸಾಕ್ಷರತೆಯನ್ನು ಹೊಂದಿ ಪ್ರಥಮ ಸ್ಥಾನದಲ್ಲಿದ್ದರೆ ದಕ್ಷಿಣ ಕನ್ನಡ ಜಿಲ್ಲೆ ದ್ವಿತೀಯ ಸ್ಥಾನದಲ್ಲಿದೆ. ಶೇ ೮೧.೪೧ರಷ್ಟು ಸಾಕ್ಷರತೆಯನ್ನು ಹೊಂದಿ ಯಾದಗಿರಿ ಕೊನೆಯ ಸ್ಥಾನದಲ್ಲಿದೆ. ರಾಯಚೂರು, ಚಾಮರಾಜನಗರ, ಗುಲ್ಬರ್ಗ, ಕೊಪ್ಪಳವು ಸಹ ಕೊನೆಯ ಸ್ಥಾನದಲ್ಲಿವೆ.[೧]

ಭಾರತೀಯ ಸಂದರ್ಭದಲ್ಲಿ ಮಹಿಳೆಯನ್ನು ಕೇವಲ ಒಂದು ಭೋಗದ ವಸ್ತುವಾಗಿ ಪರಿಗಣಿಸುವುದೇ ಹೆಚ್ಚು, ಮಹಿಳೆಯನ್ನು ಕೇವಲ ತನ್ನ ಅಡಿಯಾಳಾಗಿ ನೋಡುವ ಪರಿಪಾಟವನ್ನು ಪುರುಷವರ್ಗ ಅನುಸರಿಸುತ್ತ ಬಂದಿರುವುದನ್ನು ಚರಿತ್ರೆಯ ಕಾಲದಿಂದ ಪ್ರಸ್ತುತ ಕಾಲದವರೆಗಿನ ಸಮಾಜದ ಮೂಲಕ ತಿಳಿದುಬರುತ್ತದೆ. ಹೆಣ್ಣು ಕೇವಲ ಪುರುಷನ ಉಪಭೋಗಕ್ಕೆ ಸೀಮಿತವಾದವಳು, ಆಕೆಗೆ ಯಾವುದೇ ಪವಿತ್ರ ಕಾರ್ಯಗಳಲ್ಲಿ ಸ್ಥಾನವಿಲ್ಲ ಎಂದು ತಿಳಿಸಿರುವುದು ಮನುಸ್ಮೃತಿ ಮೂಲಕ ತಿಳಿದುಬರುತ್ತದೆ.[೨] ಅರಿಸ್ಟಾಟಲನು ಪೊಲಿಟಿಕ್ಸ್ ಕೃತಿಯಲ್ಲಿ ನಾಗರಿಕತ್ವದ ಸಿದ್ಧಾಂತಗಳನ್ನು ತಿಳಿಸುತ್ತ ಮಹಿಳೆಯರಿಗೆ ಆಲೋಚಿಸುವ ಶಕ್ತಿ ಇರದೇ ಇರುವುದರಿಂದ ಅವರಿಗೆ ನಾಗರಿಕತ್ವದ ಅವಕಾಶ

ನೀಡಬಾರದು ಎಂದು ತಿಳಿಸುತ್ತಾನೆ. ಹೆಣ್ಣು ಕೇವಲ ರಾಜಕೀಯ ದಾಳವಾಗಿ ಉಪಯೋಗಕ್ಕೆ ಬರುತ್ತಾಳೆ ಎಂದು ಕೌಟಿಲ್ಯ ತಿಳಿಸುತ್ತಾನೆ. ಗಾಂಧಿಯವರು ಹೆಣ್ಣು ತನ್ನ ಕೌಟುಂಬಿಕ ವ್ಯವಸ್ಥೆಗೆ ಧಕ್ಕೆ ಬಾರದಂಥ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು ಎನ್ನುತ್ತಾರೆ[೩](ಗಾಂಧಿ ಚಿಂತನೆಗಳು, ೧೯೯೮; ಪು.೧೫೬).

ಚರಿತ್ರೆ ಕಾಲದಿಂದ ಪ್ರಸ್ತುತ ಸಂದರ್ಭದಲ್ಲಿ ನಿಂತು ನೋಡಿದರೂ ಸಹ ಲಿಂಗತಾರತಮ್ಯವೆಂಬುದು ಸಮಾಜದಲ್ಲಿ ಅಗಾಧವಾದ ಬಿರುಕನ್ನು ಸೃಷ್ಟಿ ಮಾಡಿರುವುದನ್ನು ಕಾಣಬಹುದಾಗಿದೆ. ಇದು ಶಿಕ್ಷಣ ವ್ಯವಸ್ಥೆಯಲ್ಲಿಯೂ ಢಾಳಾವಾಗಿ ಕಾಣುತ್ತದೆ.

ಅಮರ್ತ್ಯಸೆನ್ ಅವರ ಪ್ರಕಾರ ಅಭಿವೃದ್ದಿಯ ದೃಷ್ಟಿಯಿಂದ ಶಿಕ್ಷಣವು ಎಲ್ಲರಿಗೂ ದೊರೆಯಬೇಕಾದ ಒಂದು ಸಾಮಾಜಿಕ ಅಗತ್ಯವಾಗಿದೆ. ಅದರಲ್ಲಿಯೂ ಪ್ರಾಥಮಿಕ ಶಿಕ್ಷಣವು ೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯವಾಗಿ ಒದಗಿಸಬೇಕೆಂಬುದು ನಮ್ಮ ಸಂವಿಧಾನದ ಆಶಯವಾಗಿದೆ. ಅದರಂತೆಯೇ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ಸಹ ನಿರಂತರವಾಗಿ ನಡೆಯುತ್ತಿದೆ. ಆದರೆ ಸಮಾಜದ ಎಲ್ಲಾ ವರ್ಗದ ಜನರು ಸಮಾನವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ. ಅಲ್ಲದೇ ಇಂದಿಗೂ ಶಿಕ್ಷಣದ ವಿಷಯದಲ್ಲಿ ಜಾತಿ, ವರ್ಗ, ಲಿಂಗ ಮತ್ತು ಪ್ರಾದೇಶಿಕ ಭಿನ್ನತೆಗಳು ಜೀವಂತವಾಗಿವೆ. ಹಾಗಾಗಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಪ್ರಯತ್ನ ಮತ್ತು ಪಡೆದುಕೊಳ್ಳುವ ಶಕ್ತಿ ಆಸಕ್ತಿಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಹೀಗೆ ಪರಿಗಣಿಸುವಾಗ ಶೈಕ್ಷಣಿಕವಾಗಿ ವಂಚಿತರಾಗಿರುವ ಗ್ರಾಮೀಣ ಹೆಣ್ಣುಮಕ್ಕಳನ್ನು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಗಮನಿಸಬೇಕಾಗಿದೆ.[೪]

ಶೇಕಡ ೧೦೦ರಷ್ಟು ಶಿಕ್ಷಣದಲ್ಲಿ ಅಭಿವೃದ್ಧಿ ಸಾಧಿಸಬೇಕೆಂಬ ಗುರಿ ಇದೆ. ಆದರೆ ಅದು ಪರಿಪೂರ್ಣವಾಗಿ ಈಡೇರುತ್ತಿಲ್ಲ. ಕುಟುಂಬದ ಎರಡು ಕಂಬಗಳಂತೆ ಗಂಡು-ಹೆಣ್ಣು. ಆದರೆ ಅದರಲ್ಲಿ ಪುರುಷನಿಗೆ ದೊರೆತ ಸ್ಥಾನ ಮಹಿಳೆಗೆ ಸಿಗದೇ ಹೋಗಿದೆ. ಈ ಅಸಮಾನತೆ ಶಿಕ್ಷಣದ ವಿಚಾರದಲ್ಲಿಯೂ ಕಂಡುಬರುತ್ತಿದೆ. ಹೀಗಾಗಿ ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ವಿಶೇಷ ಪ್ರಯತ್ನಗಳನ್ನು ಸಂವಿಧಾನದ ಮೂಲಕವೇ ಮಾಡಲಾಯಿತು. ಆದರೂ ಕನಿಷ್ಠ ವರ್ಷಗಳ ಶಾಲಾ ಭಾಗವಹಿಸುವಿಕೆಯಲ್ಲಿ ಹೆಣ್ಣುಮಕ್ಕಳು ನಿರೀಕ್ಷಿತ ಮಟ್ಟವನ್ನು ತಲುಪಲಿಲ್ಲ. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಕಟಿಸಿರುವ ಅಂಕಿ ಅಂಶಗಳು, ಸರ್ಕಾರ ವಿವಿಧ ಇಲಾಖೆಗಳು ಮತ್ತು ಸರ್ಕಾರವೇ ನಡೆಸುತ್ತಿರುವ ಸಂಶೋಧನಾ ಸಂಸ್ಥೆಗಳು(ಎನ್.ಸಿ.ಇ.ಆರ್.ಟಿ, ಎನ್.ಐ.ಇ.ಪಿ.ಪಿ ಮತ್ತು ಡಿ.ಎಸ್.ಇ.ಆರ್.ಟಿ.) ವಿವಿಧ ರಾಜ್ಯಗಳ(ಕರ್ನಾಟಕವೂ ಸೇರಿದಂತೆ) ವಾರ್ಷಿಕ ವರದಿಗಳು ಹಾಗೂ ಶಿಕ್ಷಣಕ್ಷೇತ್ರದಲ್ಲಿನ ಸಮಾಜವಿಜ್ಞಾನಗಳ ಸಂಶೋಧನೆಗಳು ಪ್ರಕಟಿಸಿರುವ ಪುಸ್ತಕಗಳು ಮತ್ತು ಲೇಖನಗಳು ಸೂಚಿಸುವ

ಅಂಶವೆಂದರೆ, ಶಿಕ್ಷಣ ಪಡೆದುಕೊಳ್ಳುವಲ್ಲಿ ಮೂರನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿದ್ದಾರೆ. ಉನ್ನತ ಆದಾಯದ ಕುಟುಂಬಕ್ಕೆ ಸೇರಿದ ಮಹಿಳೆಯರು ಹೆಚ್ಚು ಹೆಚ್ಚು ಶಿಕ್ಷಣ ಪಡೆಯುತ್ತಿದ್ದಾರೆ.

ಸಂಶೋಧನ ವಿಷಯದ ಸಮಸ್ಯೀಕರಣ

ಟಿ.ಆರ್. ಚಂದ್ರಶೇಖರ್ (೨೦೧೦) ಅವರು 'ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ' ಎಂಬ ತಮ್ಮ ಲೇಖನದಲ್ಲಿ ಅಮರ್ತ್ಯಸೇನ್, ಮೆಹಬೂಬ್-ಉಲ್-ಹಕ್ ಅವರು ಸಾಕ್ಷರತೆಯು ಅಭಿವೃದ್ಧಿಯ ಪ್ರಧಾನ ಸಾಧನ ಮತ್ತು ಪ್ರಾಥಮಿಕ ಗುರಿ ಎಂದು ಸಾಕ್ಷರತೆಯ ಮಹತ್ವವನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆಂದು ನಿರೂಪಿಸಿದ್ದಾರೆ. ಅಕ್ಷರಜ್ಞಾನ ಮತ್ತು ಶಿಕ್ಷಣ ಅವುಗಳಷ್ಟಕ್ಕೆ ಅವು ಮಹತ್ವ ಪಡೆದಿರುವ ಸಂಗತಿಗಳಾಗಿವೆ. ಸಾಕ್ಷರತೆಯು ಒದಗಿಸುವ ಅವಕಾಶಗಳನ್ನು ಪಡೆಯುವುದರ ಮೂಲಕ ಜನರು ತಮ್ಮ ಸಾಧಾರಣ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಬಹುದು. ತಮ್ಮ ಸ್ವಾತಂತ್ರ್ಯದ ವ್ಯಾಪ್ತಿಯನ್ನು ವಿಸ್ತೃತಗೊಳಿಸಿಕೊಳ್ಳಬಹುದು. ಶಿಕ್ಷಣವು ಜನರ ಸ್ವಾಭಿಮಾನವನ್ನು, ಆತ್ಮಗೌರವವನ್ನು ಮತ್ತು ಸಾಮಾಜಿಕ ಸಹಭಾಗಿತ್ವವನ್ನು ಉತ್ತಮಪಡಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿಯಾಗಿ ಮಹಿಳೆಗೆ ಅಕ್ಷರ ಸಂಸ್ಕೃತಿಯಿಂದ ಘನತೆ ಮತ್ತು ಮನ್ನಣೆ ದೊರೆಯುತ್ತದೆ. ಇಂತಹ ಮಹತ್ವದ ಶಿಕ್ಷಣ ದಕ್ಕಿಸಿಕೊಳ್ಳುವಲ್ಲಿ ನಗರದ ಮಹಿಳೆಯರು ಸಾಧನೆಗೈದಿದ್ದಾರೆಂದು ಹೇಳಬಹುದು. ಆದರೆ ಬಹುಸಂಖ್ಯಾತರಾದ ಗ್ರಾಮೀಣ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕರ್ನಾಟಕದ ಗ್ರಾಮೀಣ ಮತ್ತು ನಗರ ಮಹಿಳೆಯರ ಶಿಕ್ಷಣದ ಪ್ರಮಾಣ ನೋಡಿದಾಗ ಇದು ಸ್ಪಷ್ಟವಾಗಿ ಕಾಣಿಸುತ್ತದೆ.[೫]

೨೦೦೧ರ ಜನಗಣತಿಯ ಪ್ರಕಾರ ನಗರ ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೭೪.೧೩ ಇದೆ. ಗ್ರಾಮೀಣ ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೪೮ರಷ್ಟಿದೆ. ಮಹಿಳಾ ಜನಸಂಖ್ಯೆಯಲ್ಲಿ ಶೇ. ೭೦ರಷ್ಟು ಗ್ರಾಮೀಣ ಮಹಿಳೆಯರಿದ್ದಾರೆ. ಇತ್ತೀಚೆಗೆ ಭಾರತದ ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮಹಿಳೆಯರಿಗೆ ಶೇ. ೩೩ರಷ್ಟು ಮೀಸಲಾತಿ ನೀಡಲಾಗಿದೆ. ಗ್ರಾಮೀಣ ಮಹಿಳೆಯರು ಇಂದು ಈ ಮೀಸಲಾತಿ ಮೀರಿ ಪಂಚಾಯಿತಿಗಳಿಗೆ ಆಯ್ಕೆಯಾಗುತ್ತಿದ್ದಾರೆ. ಮಕ್ಕಳ ಶಿಕ್ಷಣ, ಕೃಷಿ, ಪಶುಪಾಲನೆ, ಆರೋಗ್ಯ ಮುಂತಾದವುಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಲು ಮಹಿಳೆಯರಿಗೆ ಶಿಕ್ಷಣ ಮಹತ್ವವಾಗಿದೆ. ಇಂತಹ ಶಿಕ್ಷಣದಿಂದ ಸಮೃದ್ಧ ಜೀವನ ನಡೆಸಲು ಮಹಿಳೆಯರಿಗೆ ಅಕ್ಷರಸಂಸ್ಕೃತಿ ಬೇಕು, ತನ್ನ ವ್ಯಕ್ತಿತ್ವ ಕಟ್ಟಿಕೊಳ್ಳಲು ಅಕ್ಷರಜ್ಞಾನ ಬೇಕು, ಅನಕ್ಷರತೆಯಿಂದಾಗಿ ತನ್ನ ಹಿತಾಸಕ್ತಿ ಈಡೇರಿಸಿಕೊಳ್ಳಲು, ಕುಟುಂಬದಲ್ಲಿ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ.[೬]

ಮುಜಾಮಿಲ್ ಜಾನ್ (೨೦೧೦) ಅವರು 'ಇನ್‌ಫ್ಯಾಕ್ಟ್ ಆಫ್ ಎಜುಕೇಷನ್' ಎಂಬ ಕೃತಿಯಲ್ಲಿ ಶಿಕ್ಷಣವು ಸಮಾಜ, ಇತಿಹಾಸ, ಧರ್ಮ, ಭಾಷೆ, ಮೌಲ್ಯಗಳು, ಸಾಹಿತ್ಯ, ಕಲೆ, ತಂತ್ರಜ್ಞಾನ ಮುಂತಾದ ಎಲ್ಲಾ ಅಂಶಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿ ಸುತ್ತದೆ ಎಂದಿದ್ದಾರೆ. ಶಿಕ್ಷಣ ವ್ಯಕ್ತಿಗೆ ಜ್ಞಾನ ಹಾಗೂ ತಿಳಿವಳಿಕೆಯನ್ನು ನೀಡುತ್ತದೆ. ಮುಖ್ಯವಾಗಿ ವ್ಯಕ್ತಿ ತನ್ನನ್ನು ತಾನು ತಿಳಿಯಲು ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು, ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಅತ್ಯಗತ್ಯ. ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬ ಹಾಗೂ ಸಮಾಜದಲ್ಲಿ ಸಾಮರಸ್ಯ, ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಲು ಶಿಕ್ಷಣ ಅಗತ್ಯ ಹಾಗೂ ಅನಿವಾರ್ಯ ಎಂದು ತಿಳಿಯಲಾಗಿದೆ.[೭]

ಕಾಮತ್ ಜ್ಯೋತ್ಸ್ನಾ (೨೦೧೦) ಅವರು. 'ಮಹಿಳೆಯರು: ಒಂದು ಅಧ್ಯಯನ' ಎಂಬ ಲೇಖನದಲ್ಲಿ ಈ ಶತಮಾನದ ಕೊನೆಯಲ್ಲಿ ಭಾರತೀಯ ಮಹಿಳೆ ಎಲ್ಲ ಕ್ಷೇತ್ರಗಳಲ್ಲಿಯ ಗಂಡಸರಿಗೆ ಸರಿಸಮಾನ ಶಿಕ್ಷಣ ಪಡೆದು ವಿವಿಧ ರಂಗಗಳಲ್ಲಿ ಮುಂದುವರಿಯುತ್ತಿರುವುದನ್ನು ಅಖಂಡ ದೇಶದ ಪ್ರಗತಿಗೆ ಹೋಲಿಸಿದಾಗ ಪ್ರಗತಿಪರ ಮಹಿಳೆಯರ ಸಂಖ್ಯೆ ಅತ್ಯಲ್ಪವೆಂದೇ ಹೇಳಬಹುದಾಗಿದೆ ಎಂದಿದ್ದಾರೆ. ಇತ್ತೀಚಿನ ಸಮೀಕ್ಷೆಯಲ್ಲಿ ಪತಿಯ ಮರಣದಿಂದ ನಿರ್ಗತಿಕರಾಗಿರುವ ಹೆಣ್ಣುಮಕ್ಕಳ ಸಂಖ್ಯೆ ವರ್ಷಕ್ಕೆ ೧೦ ಲಕ್ಷದಷ್ಟಿದೆ. ಆಪತ್‌ಕಾಲಕ್ಕೆ ಮಾಡಿಕೊಳ್ಳುವಂತಹ ಯಾವ ಶಿಕ್ಷಣವೂ ಹುಡುಗಿಯರಿಗೆ ದೊರೆಯುವಂತಿಲ್ಲ. ಸರಕಾರವಾದರೂ ಎಲ್ಲರಿಗೂ ಎಲ್ಲ ಕಾಲಕ್ಕೆ ಬಯಸುವ ನೌಕರಿಗಳನ್ನು ಕೊಡಮಾಡುವ ಸ್ಥಿತಿಯಲ್ಲಿ ಇಲ್ಲ. ಶಿಕ್ಷಣದೊಂದಿಗೆ ಶ್ರಮ, ಗೌರವದ ಕಲ್ಪನೆ ಸೇರ್ಪಡೆಯಾಗದೆ, ದೈಹಿಕಶ್ರಮದಿಂದ ಜೀವಿಸುವ ವರ್ಗದಂತೆ ಸ್ತ್ರೀಯರು ಅಕ್ಷರಾಭ್ಯಾಸ ದೊರೆತೊಡನೆ ಕೌಟುಂಬಿಕ ವೃತ್ತಿಗಳನ್ನು ಕೈಗೊಳ್ಳುವುದನ್ನು ಕೀಳಾಗಿ ಭಾವಿಸುತ್ತಾರೆ. ಸರ್ಕಾರಿ ನೌಕರಿಯೊಂದೇ ಸಮಾಜದಲ್ಲಿ ಮನ್ನಣೆ ತರುತ್ತದೆಂದು ನಂಬುವವರೇ ಅಲ್ಲದೆ ನಗರ ಮತ್ತು ಗ್ರಾಮಗಳ ಜೀವನದಲ್ಲಿ ಅಪಾರ ತಾರತಮ್ಯವಿದ್ದು ಈಗಲೂ ಅದು ಹೆಚ್ಚುತ್ತಲೇ ಇದೆ. ಆದರೆ ನಗರ ಮಹಿಳೆಯರ ವೃತ್ತಿ ಪ್ರವೃತ್ತಿಗಳು ಅವಕಾಶ ಪಡೆಯುತ್ತಿದ್ದರೆ, ಗ್ರಾಮಸ್ಥ ಮಹಿಳೆಯರಿಗೆ ಅವಕಾಶವೇ ಇಲ್ಲ. ದೇಶದ ಲಕ್ಷಗಟ್ಟಲೆ ಗ್ರಾಮೀಣ ಮಹಿಳೆಯರ ಸ್ಥಾನಮಾನ ಮತ್ತು ಶೈಕ್ಷಣಿಕ ಪ್ರಗತಿ ಅತ್ಯಂತ ನಿರಾಶಾದಾಯಕವಾಗಿಯೇ ಉಳಿದಿದೆ. ಇಂತಹ ಶಿಕ್ಷಣದ ಹಿನ್ನಡೆಯನ್ನು ಸರಿದೂಗಿಸುವ ಪ್ರಯತ್ನ ವಿವಿಧ ವಲಯಗಳಿಂದ ಆಗಬೇಕಾದ ಅಗತ್ಯವಿದೆ.[೮]

ಪ್ರಸ್ತುತ ಶಿಕ್ಷಣವನ್ನು ನಮ್ಮ ಸಂವಿಧಾನದ ಸಹಕಾರಿ ನೀತಿಯ ನಿರ್ದೇಶಕ ಸೂತ್ರಗಳಲ್ಲಿ ಕಲ್ಯಾಣರಾಷ್ಟ್ರ ಪರಿಕಲ್ಪನೆಯ ಭಾಗವಾಗಿ ಸೇರ್ಪಡೆಗೊಳಿಸಲಾಗಿದೆ. ಹೀಗಾಗಿ ಭಾರತ ಸರ್ಕಾರವು ೧೪ ವರ್ಷಗಳವರೆಗಿನ ಪ್ರಾಯದ ಎಲ್ಲಾ ಮಕ್ಕಳಿಗೂ ಶಿಕ್ಷಣ ನೀಡುವ ಸಾರ್ವತ್ರಿಕ ಉದ್ದೇಶ ಹೊಂದಿದೆ. ಈ ಮಾತು ನಮ್ಮ ಹೆಣ್ಣುಮಕ್ಕಳಿಗೂ ಅನ್ವಯಿಸುತ್ತದೆ. ಹೀಗೆ ಭಾರತೀಯ ಸಂವಿಧಾನವು

ಮೊಟ್ಟಮೊದಲ ಸಲಕ್ಕೆ ಲಿಂಗತಾರತಮ್ಯವಿಲ್ಲದೆ ಶಿಕ್ಷಣ ಅವಕಾಶಗಳನ್ನು ಗಂಡು ಹೆಣ್ಣು ಮಕ್ಕಳೀರ್ವರಿಗೂ ಕಲ್ಪಿಸಿತು. ಭಾರತೀಯ ಶಿಕ್ಷಣಪದ್ಧತಿಯಲ್ಲಿ ಪುರುಷರಿಗೆ ನೀಡಿದ ಶಿಕ್ಷಣಕ್ಕೆ ಪ್ರೋತ್ಸಾಹದ ಮಟ್ಟವನ್ನು ಇಂದಿಗೂ ಮಹಿಳೆಯರು ತಲುಪದಿರುವುದರಿಂದ ಶಿಕ್ಷಣದಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣದೆ ಮಹಿಳೆಯರು ಇಂದಿಗೂ ಸಬಲೀಕರಣಗೊಳ್ಳದಿರುವುದನ್ನು ನೋಡಲಾಗಿದೆ. ಆದ್ದರಿಂದ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕಾದ ಅಗತ್ಯವಿದೆ ಎಂದು ತಿಳಿದುಬಂದಿದೆ.

ಕೃಷ್ಣಮೂರ್ತಿ (೨೦೦೫) ಅವರು. 'ಭಾರತೀಯ ನಾರಿ ಸಮಾನತೆ' ಎಂಬ ಪುಸ್ತಕದಲ್ಲಿ ಕಡಿಮೆ ಶಿಕ್ಷಣ ಪಡೆದವರಿಗಿಂತ ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ಹೆಚ್ಚು ವೇತನದ ಕೆಲಸ ಪಡೆಯುವರು ಎಂದಿದ್ದಾರೆ. ಅಲ್ಲದೆ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗ ಪಡೆಯುವರು. ಆದರೆ ವಿವಾಹಿತ ಮಹಿಳೆಯರು ಕಾರ್ಮಿಕ ಪೇಟೆಯಿಂದ ಬರುವರು. ಏಕೆಂದರೆ ಇವರ ಶಿಕ್ಷಣವು ಪ್ರಾಥಮಿಕ ಮಟ್ಟದಿಂದ ಮಾಧ್ಯಮಿಕ ಮಟ್ಟದವರೆಗೆ ಏರಿಕೆಯಾಗಿರುತ್ತದೆ. ಗರ್ಭಧಾರಣೆ, ಮಗುವಿನ ಜನನ, ಮಕ್ಕಳ ಲಾಲನೆ, ಪಾಲನೆ ಕರ್ತವ್ಯಗಳು ಮಹಿಳೆಯರನ್ನು ಗಣನೀಯ ಅವಧಿಗೆ ಅಥವಾ ಕೆಲವೊಮ್ಮೆ ಶಾಶ್ವತವಾಗಿ ಉದ್ಯೋಗದಿಂದ ಹೊರದೂಡುವುವು. ಅಲ್ಲದೆ ಈ ಸ್ವರೂಪಗಳು ಉದ್ಯಮಪತಿಯ ಕೂಲಿ ತೀರ್ಮಾನಗಳ ಮೇಲೆ ಪ್ರಭಾವ ಬೀರುವುವು. ಹೀಗೆ ಪುರುಷರಿಗಿಂತ ಮಹಿಳೆಯರ ದುಡಿಮೆಗೆ ಕಡಿಮೆ ಮೌಲ್ಯ ಕಟ್ಟಿಕೊಡಲಾಗುತ್ತದೆ. ಆದರೆ ವಿವಾಹಿತ ಮಹಿಳೆಯರು ಕಾರ್ಮಿಕ ಪೇಟೆಯಿಂದ ಹಿಂದೆ ಸರಿಯಲು ಬೇರೊಂದು ಕಾರಣ ಕೂಡ ಇದೆ. ಶಿಕ್ಷಣದ ಹೆಚ್ಚಳವು ಮಾರುಕಟ್ಟೇತರ ಚಟುವಟಿಕೆಗಳಲ್ಲಿ ಮಹಿಳೆಯರ ಉತ್ಪತ್ತಿಯನ್ನು ವೃದ್ಧಿಸುವುದು. ಹೀಗಾಗಿ ಬಹಳ ಆಕರ್ಷಕವಾದ ಉದ್ಯೋಗಗಳು ಕುಟುಂಬದಿಂದ ಹೊರಗೆ ದೊರಕದಿದ್ದರೆ ಆಗ ಮಾಧ್ಯಮಿಕ ಶಿಕ್ಷಣವುಳ್ಳ ವಿವಾಹಿತ ಮಹಿಳೆಯರಿಗೆ ಮನೆಯೊಳಗೆ ಉಳಿಯುವುದೇ ಹೆಚ್ಚು ಆಕರ್ಷಕ ಆಯ್ಕೆಯಾಗಿ ತೋರುವುದು. ಪುರುಷರಿಗಿಂತ ಮಹಿಳಾ ಶಿಕ್ಷಣವು ಕುಟುಂಬದ ಕಲ್ಯಾಣದ ಮೇಲೆ ಅಪಾರ ಪ್ರಭಾವ ಬೀರುವುದು. ಜನಸಂಖ್ಯಾಶಾಸ್ತ್ರ, ಅರ್ಥಶಾಸ್ತ್ರ, ವೈದ್ಯಕೀಯ ವಿಜ್ಞಾನ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳು ತಾಯಂದಿರ ಶಿಕ್ಷಣ ಮತ್ತು ಶಿಶುಗಳ ಮರಣ ಉಳಿತಾಯ ನಡುವಿನ ನಿಕಟ ಸಂಬಂಧವನ್ನು ಗುರುತಿಸಿದೆ. ಈ ಸಂಬಂಧವು ವಿಕಾಸಶೀಲ ದೇಶಗಳಲ್ಲಿ ಬಹಳ ಶಕ್ತಿಯುತವಾಗಿ ತೋರುತ್ತದೆ. ತಾಯಂದಿರ ಶಾಲಾ ಶಿಕ್ಷಣವು ಒಂದು ವರ್ಷ ಹೆಚ್ಚಿದರೆ ಅದು ಶಿಶುಮರಣವನ್ನು ಶೇ. ೫ರಿಂದ ೧೦ರಷ್ಟು ಕಡಿಮೆಗೊಳಿಸುವುದು.[೯]

ಹೆಚ್ಚು ಶಿಕ್ಷಣ ಪಡೆದ ತಾಯಂದಿರು ಉತ್ತಮ ಶುಚಿತ್ವ, ಉತ್ತಮಗೊಂಡ ಪೌಷ್ಟಿಕಾಂಶಗಳು, ಕುಟುಂಬದ ಆಚರಣೆಗಳು, ಕುಟುಂಬದ ಆರೋಗ್ಯ ಕುರಿತು ಹೆಚ್ಚು ಪರಿಣಾಮಕಾರಿ ಪಾತ್ರ ವಹಿಸುವರು. ಶಿಕ್ಷಣವು ಆರೋಗ್ಯ ಪರಿಕರಗಳನ್ನು ಹೆಚ್ಚಾಗಿ ಬಳಸಲು ಉತ್ತೇಜಿಸುತ್ತ ತಾಯಿ ಮತ್ತು ಮಗುವಿನ ಪರಿಸರವನ್ನು ಚೆನ್ನಾಗಿ ನಿರ್ವಹಿಸುವ ಸಾಮರ್ಥ್ಯ ನೀಡುವುದೇ ಇದಕ್ಕೆ ಉತ್ತರ.

ನೈಜೀರಿಯಾದ ತಾಯಂದಿರಿಗೆ ಶಿಕ್ಷಣವು ಸ್ಥಳೀಯ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಚೆನ್ನಾಗಿ ಬಳಸುವುದನ್ನು ಕಲಿಸಿತು. ಕೊಳವೆ ನೀರು ಪೂರೈಕೆ ಮತ್ತು ನೀರು ಬಳಸುವ ವಿಧಾನವನ್ನು ಫಿಲಿಫೈನ್ಸ್‌ನ ತಾಯಂದಿರಿಗೆ ಹೆಚ್ಚು ಶಿಕ್ಷಣದಿಂದ ಮಕ್ಕಳ ಆರೋಗ್ಯ ಸಂರಕ್ಷಣೆಯನ್ನು ಕಲಿಸಿದೆ. ಸಾಮಾನ್ಯವಾಗಿ ಶಿಕ್ಷಣ ಮನೆಯಲ್ಲಿ ಹೆಚ್ಚು ಪರಿಣಾಮಕಾರಿ ಪಾತ್ರ ನಿರ್ವಹಿಸುವಂತೆ ಅವಶ್ಯಕವಿರುವ ಜ್ಞಾನ ನೀಡುವುದು. ವಿವಿಧ ದೇಶಗಳಲ್ಲಿ ಮೂಡಿ ಬಂದಿರುವ ಶಿಕ್ಷಣದ ಅರಿವಿನ ಮಹತ್ವವನ್ನು ತಿಳಿಯುವ ಅಗತ್ಯವಿದೆ ಎಂದು ತಿಳಿದುಬಂದಿದೆ.

ಅನ್ನಪೂರ್ಣೇಶ್ವರಿ (೨೦೧೧) ಅವರ 'ಮಹಿಳಾ ಶಿಕ್ಷಣ ಮತ್ತು ಅಭಿವೃದ್ಧಿ' ಎಂಬ ಕೃತಿಯಲ್ಲಿ ಶಿಕ್ಷಣವು ಮಹಿಳೆಯರು ತಮ್ಮ ಹಕ್ಕುಗಳನ್ನು ಮತ್ತು ಜವಾಬ್ದಾರಿಗಳನ್ನು ಚಲಾಯಿಸುವ ಮತ್ತು ನಿರ್ವಹಿಸುವ ಸಾಮರ್ಥ್ಯವನ್ನು ವೃದ್ಧಿಪಡಿಸುವುದು ಎಂಬ ಅಂಶವಿದೆ. ಭೂಮಾಲೀಕತ್ವದ ಹಕ್ಕು ಅನಕ್ಷರತೆಯಂತಹ ತೊಡಕುಗಳಿಂದ ಕ್ಷೀಣಿಸಬಹುದು. ಮಹಿಳೆಯರು ಸಮಾಕಾಲೀನ ವಿಷಯವನ್ನು ತಿಳಿಯದಿದ್ದರೆ ಮತದಾನದ ಹಕ್ಕಿಗೆ ಅರ್ಥವಿರುವುದಿಲ್ಲ. ಕುಟುಂಬದೊಳಗಿನ ಅಥವಾ ಬೀದಿಗಳಲ್ಲಿ ಮಹಿಳೆಯರ ವಿರುದ್ಧದ ಹಿಂಸೆಯು ಕೇವಲ ಬಡತನದೊಂದಿಗೆ ಬೆಸೆದುಕೊಂಡಿಲ್ಲ. ಅದು ಅನಕ್ಷರತೆಯೊಂದಿಗೆ ಸಂಬಂಧ ಪಡೆದಿದೆ. ಇದು ಮಹಿಳೆಯರು ತಮ್ಮ ಹಕ್ಕುಗಳನ್ನು ಚಲಾಯಿಸಲು ಅಡ್ಡಿಪಡಿಸುವುದು ಮತ್ತು ಕಾನೂನು ಪ್ರಕಾರ ನೆರವು ಪಡೆದು ಸಂರಕ್ಷಿಸಿಕೊಳ್ಳಲು ಅನಕ್ಷರತೆ ತೊಡಕಾಗುವುದು. ಇಂತಹ ಅನುಕೂಲತೆಗಳು ಕೂಡ ಮಹಿಳೆಯರಿಗೆ ಅಗತ್ಯವಾಗಿದೆ ಎಂದು ತಿಳಿದುಬಂದಿದೆ.[೧೦]

ಟಿ.ಆರ್. ಚಂದ್ರಶೇಖರ್ (೨೦೧೦) ಅವರು 'ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ ಪುಸ್ತಕದಲ್ಲಿ ಗ್ರಾಮೀಣ ಮತ್ತು ನಗರಗಳಿಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಸಾಕ್ಷರತೆ ಅಂತರವು ೧೯೯೧ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ. ೨೫.೫೪ ಅಂಶಗಳಷ್ಟಿದ್ದು ೨೦೦೧ರಲ್ಲಿ ಅದು ಶೇ. ೨೨.೪೪ರಷ್ಟು ಕಡಿಮೆಯಾಗಿದೆ ಎಂಬುದನ್ನು ತಿಳಿಸಿದ್ದಾರೆ. ಅದೇ ರೀತಿಯಲ್ಲಿ ನಗರ ಪ್ರದೇಶದಲ್ಲಿ ೧೯೯೧ರಲ್ಲಿ ಶೇ. ೧೭.೩೦ರಷ್ಟಿದ್ದು ೨೦೦೧ರಲ್ಲಿ ಶೇ. ೧೨.೫೩ ಅಂಶಗಳಿಗೆ ಕಡಿಮೆಯಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಲಿಂಗಸಂಬಂಧಿ ಸಾಕ್ಷರತಾ ಅಂತರವು ನಗರಪ್ರದೇಶ ದಲ್ಲಿರುವುದಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಅಧಿಕವಾಗಿದೆ. ಇಲ್ಲಿ ಎರಡು ಬಗೆಯ ಅಸಮಾನತೆಗಳು ನಮ್ಮ ಮುಂದಿವೆ. ಮೊದಲನೆಯದು ಗ್ರಾಮೀಣ ಮತ್ತು ನಗರ ಪ್ರದೇಶದ ನಡುವಿನ ಅಂತರವಾದರೆ ಎರಡನೆಯದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಲಿಂಗಸಂಬಂಧಿ ಸಾಕ್ಷರತಾ ಅಂತರ ಇವೆರಡನ್ನೂ ನಾವು ಏಕಕಾಲದಲ್ಲಿ ಎದುರಿಸಬೇಕಾಗಿದೆ. ಗ್ರಾಮೀಣ ಮತ್ತು ನಗರಪ್ರದೇಶಗಳ ನಡುವಿನ ಅಂತರವನ್ನು ಗಮನಿಸಿದರೆ ಸಾಕಾಗುವುದಿಲ್ಲ. ಇಲ್ಲಿ ನಾವು ಪ್ರಜ್ಞಾಪೂರ್ವಕವಾಗಿ ಲಿಂಗಸಂಬಂಧಿ ಅಸಮಾನತೆಯನ್ನು ಗಮನಿಸಬೇಕು. ಅದರ ನಿವಾರಣೆಗೂ ಪ್ರಯತ್ನಿಸಬೇಕಾದ ಅಗತ್ಯವಿದೆ ಎಂದು ತಿಳಿದುಬಂದಿದೆ.[೧೧]

ಡಿ.ಎಸ್. ನಾರಾಯಣ (೨೦೦೬) ಅವರು 'ಇಂಗ್ಲಿಷ್ ಕನ್ನಡ ಸಂಬಂಧ ಕುರಿತು ಚಿಂತನೆಗಳು' ಎಂಬ ಎಂ.ಫಿಲ್. ನಿಬಂಧದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಮಿಷನರಿಗಳು ಪ್ರಾದೇಶಿಕ ಭಾಷೆಯಲ್ಲಿ ಶಾಲೆಗಳನ್ನು ತೆರೆದ ಬಗ್ಗೆ ಚರ್ಚಿಸಿದ್ದಾರೆ. ಜೊತೆಗೆ ಮಿಷನ್ ಸ್ಕೂಲ್‌ಗಳು ಮತ್ತು ಕಾನ್ವೆಂಟ್ ಶಾಲೆಗಳನ್ನು ತೆರೆದರು. ಈ ರೀತಿಯಲ್ಲಿ ಪ್ರಾದೇಶಿಕ ಭಾಷೆ, ಮಾಧ್ಯಮ ಶಾಲೆಗಳು ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳು ಎಂದು ಎರಡು ರೀತಿಯಲ್ಲಿ ಶಿಕ್ಷಣ ಬೆಳೆದುಬರಲು ಪ್ರಾರಂಭವಾಯಿತು. ಈ ಬಗೆಯ ಶಿಕ್ಷಣದಿಂದಾಗಿ ಜನರ ಮನೋಭಾವನೆಗಳಲ್ಲಿಯೂ ಸಹ ಬದಲಾವಣೆ ಕಂಡುಬರತೊಡಗಿದವು. ಆಧುನಿಕ ತಂತ್ರಜ್ಞಾನ ವಿಜ್ಞಾನ ಮತ್ತು ಇನ್ನಿತರ ಜ್ಞಾನಶಾಖೆಗಳ ಅಧ್ಯಯನಕ್ಕೆ ಇಂಗ್ಲಿಷ್ ಭಾಷೆ ತಿಳಿಯುವಿಕೆ ಅನಿವಾರ್ಯ. ಆದರೆ ಅಗತ್ಯವಿದ್ದಲ್ಲಿ ಮಾತ್ರ ಇಂಗ್ಲಿಷ್ ಬಳಕೆ ಮಾಡಬೇಕು. ಉಳಿದಂತೆ ಕನ್ನಡ ಮಾಧ್ಯಮ ಬಳಕೆ ಉತ್ತಮ ಎಂದು ತಿಳಿಸಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡೂ ಮುಖ್ಯ ಆದರೆ ಪ್ರಾಥಮಿಕವಾಗಿ ಹೆಣ್ಣುಮಕ್ಕಳಿಗೆ ಅವರ ಭವಿಷ್ಯಕ್ಕಾಗಿ ಯಾವುದು ಉಪಯುಕ್ತ ಮಾಧ್ಯಮವೆಂದು ತಿಳಿದು ಆ ಭಾಷೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು ಎಂದು ತಿಳಿದುಬಂದಿದೆ.[೨]

ಯರ್ರಿಸ್ವಾಮಿ ಅವರು 'ಗ್ರಾಮ ಪಂಚಾಯಿತಿ ಮತ್ತು ಸಬಲೀಕರಣ' ಎಂಬ ಪಿ.ಎಚ್.ಡಿ. ಮಹಾಪ್ರಬಂಧದಲ್ಲಿ ಮಾನವನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭ್ಯುದಯದಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾಗಿದೆ ಎಂದಿದ್ದಾರೆ. ಮೂಲಭೂತ ಶಿಕ್ಷಣವನ್ನು ಒದಗಿಸುವುದು ಇಂದು ಸಾಂವಿಧಾನಕ ಹೊಣೆಯಾಗಿದೆ. ಸಂವಿಧಾನದ ೪೫ನೇ ವಿಧಿಯನ್ವಯ ೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಕೊಡಬೇಕೆಂದು ಹೇಳಿದ್ದಾರೆ. ಇಂದು ಶಿಕ್ಷಣವು ಮಾನವನ ಅಭಿವೃದ್ಧಿಯ ಮುಖ್ಯ ಸೂಚಕವಾಗಿದೆ. ಶಿಕ್ಷಣ ಅಭಿವೃದ್ಧಿಯ ದೃಷ್ಟಿಯಿಂದ ಸೀಮಿತ ಜವಾಬ್ದಾರಿಗಳನ್ನು ಪಂಚಾಯತ್‌ರಾಜ್‌ಗಳಿಗೆ ವಹಿಸಲಾಗಿದೆ. ಆದ್ದರಿಂದ ಶಿಕ್ಷಣ ಸುಧಾರಣೆಯಲ್ಲಿ ಪಂಚಾಯಿತಿ ಸಂಸ್ಥೆಗಳ ಪಾತ್ರ ಬಹಳ ಅಗತ್ಯವಾಗಿದೆ. ಅದರಲ್ಲೂ ಗ್ರಾಮೀಣ ಶಿಕ್ಷಣ ಸುಧಾರಣೆಯಲ್ಲಿ ಈ ಸಂಸ್ಥೆಗಳ ಪಾತ್ರ ಇನ್ನೂ ಹೆಚ್ಚಿದೆ. ಕಾರಣ ಗ್ರಾಮೀಣ ಸಾಕ್ಷರತೆಯನ್ನು ನಗರ ಸಾಕ್ಷರತೆಗೆ ಹೋಲಿಸಿದರೆ ಬಹಳ ಅಂತರವನ್ನು ಕಾಣುತ್ತೇವೆ. ಈ ಅಂತರಕ್ಕೆ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳ ದಾಖಲಾತಿ, ಶಾಲೆ ಬಿಟ್ಟವರ ಪ್ರಮಾಣ ಇವೆಲ್ಲವೂ ಕಾರಣವಾಗಿವೆ. ಆದ್ದರಿಂದ ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಅನುಷ್ಠಾನಗೊಳಿಸುವುದರೊಂದಿಗೆ ಹೆಣ್ಣುಮಕ್ಕಳಿಗೆ ಸಮರ್ಥ ಅಕ್ಷರ ಕಲಿಕೆಯನ್ನು ಮೂಡಿಸುವ ಅಗತ್ಯವಿದೆ ಎಂದು ತಿಳಿದುಬಂದಿದೆ.[೩]

೧೯೯೧ರಲ್ಲಿ ರಚಿತವಾದ ಎಚ್. ನರಸಿಂಹಯ್ಯನವರ ವರದಿಯು ಪ್ರಾಥಮಿಕ ಶಿಕ್ಷಣ ಕುರಿತು ೧ರಿಂದ ನಾಲ್ಕನೇ ತರಗತಿವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಶಿಫಾರಸ್ಸು

ಮಾಡಿತು. ಆದರೆ ಸರಕಾರ ಅಂಗೀಕರಿಸಿದರೂ ಅನುದಾನ ಸಂಹಿತೆ ೧೨ಎ ಪ್ರಕಾರ ಆಂಗ್ಲ ಮಾಧ್ಯಮ ಶಾಲೆಗೆ ಅನುಮತಿ ನೀಡಬಹುದೆಂದು ತಿಳಿಸಿತು. ಅಂದರೆ, ಇಂತಹ ವಿಭಿನ್ನ ನಿಲುವುಗಳಡಿಯಲ್ಲಿ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳಲಾಗದೆ ಶಿಕ್ಷಣ ಸಂಸ್ಥೆಗಳನ್ನು ನಿಯಮಿತವಾಗಿ ನಡೆಸಿಕೊಂಡು ಹೋಗುವ ತುರ್ತು ಅಗತ್ಯವಿದೆ ಎಂದು ತಿಳಿದುಬಂದಿದೆ.[೧೪]

ಈ ಎಲ್ಲಾ ಸಾಹಿತ್ಯಿಕ ಅಧ್ಯಯನ ಮಾಡಿದಾಗ ಕೆಲವು ಸಮಸ್ಯೆಗಳು ಹುಟ್ಟಿಕೊಳ್ಳುವುದು ಸಹಜವಾಗಿದೆ. ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗನುಸಾರ ಶಿಕ್ಷಣದ ಹಿಂದುಳಿದಿರುವಿಕೆಯನ್ನು, ಶಿಕ್ಷಣದ ಅಂತರವನ್ನು ಕಾಣಬಹುದಾಗಿದೆ. ಸಮಾನ ಶಿಕ್ಷಣನೀತಿ ಇದ್ದರೂ ಗ್ರಾಮೀಣ ಪ್ರದೇಶದ ಮತ್ತು ನಗರಪ್ರದೇಶದ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಅಂತರಗಳಿವೆ. ಪರಿಶಿಷ್ಟಜಾತಿಯ ಶಿಕ್ಷಣ ಪ್ರಮಾಣ ಸಾಮಾನ್ಯ ಮಹಿಳೆಯರ ಶಿಕ್ಷಣದ ನಡುವೆ ಅಗಾಧವಾದ ಅಂತರವೇಕೆ ಉಂಟಾಗುತ್ತಿದೆ? ಏಕ ರೀತಿಯ ಶಿಕ್ಷಣ ಮಾಧ್ಯಮವಿದ್ದರೂ ಆಂಗ್ಲ ಮತ್ತು ಕನ್ನಡ ಮಾಧ್ಯಮವೆಂಬ ಭಿನ್ನ ರೀತಿಯ ಶಿಕ್ಷಣ ಮಾಧ್ಯಮಗಳೇಕೆ? ಹೆಣ್ಣುಮಕ್ಕಳಿಗಾಗಿಯೇ ಪ್ರತ್ಯೇಕ ವಿವಿಧ ಅನುಷ್ಠಾನಗಳಿದ್ದರೂ, ವಿವಿಧ ಸಮುದಾಯ ಗ್ರಾಮೀಣ ಮತ್ತು ನಗರಗಳ ಹೆಣ್ಣುಮಕ್ಕಳ ಶಿಕ್ಷಣದ ಅಂತರ, ತಾರತಮ್ಯವೇಕೆ? ಈ ಎಲ್ಲಾ ಸಮಸ್ಯೆಗಳಿಗೆ ಕಾರಣ ಮತ್ತು ಉತ್ತರ ಹುಡುಕುವ ಸಲುವಾಗಿ ಕೆಳಗಿನ ಉದ್ದೇಶಗಳನ್ನಿಟ್ಟುಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಸಮಸ್ಯೀಕರಣ

ಅಧ್ಯಯನಗಳನ್ನು ಸಮೀಕ್ಷೆ ಮಾಡಿದ ನಂತರ ನಮಗೆ ಅನೇಕ ರೀತಿಯ ಪ್ರಶ್ನೆಗಳು ಎದುರಾದವು. ಗ್ರಾಮೀಣ ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಭಾಗವಹಿಸುವಿಕೆ, ಸಾಮಾಜಿಕ ಸ್ಥಿತಿಗತಿ ಹಾಗೂ ಆರ್ಥಿಕ ಸ್ಥಿತಿಗತಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಇತರೆ ಹಿಂದುಳಿದ ಸಮುದಾಯಗಳ ಶಾಲಾ ಭಾಗವಹಿಸುವಿಕೆ, ವಿವಿಧ ಯೋಜನೆಗಳ ಸೌಲಭ್ಯಗಳು ಕಂಡುಬಂದರೂ ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಗುಣಮಟ್ಟ ಹೇಗೆ ತಡೆಯೊಡ್ಡುತ್ತದೆ? ಗ್ರಾಮೀಣ ಮಟ್ಟದಲ್ಲಿ ಹಲವು ಸೌಲಭ್ಯಗಳಿದ್ದರೂ ಶಾಲಾ ಹಾಜರಾತಿ ಕಡಿಮೆಯಿದೆ ಏಕೆ? ಹೆಣ್ಣುಮಕ್ಕಳು ಶಾಲೆ ಬಿಡಲು ಯಾವ ಅಂಶಗಳು ಕಾರಣವಾಗಿವೆ? ಶಿಕ್ಷಣದ ಬಗೆಗೆ ಗ್ರಾಮೀಣ ಹೆಣ್ಣುಮಕ್ಕಳ ಮನೋಪ್ರವೃತ್ತಿ ಹಾಗೂ ಪೋಷಕರ ಮನೋಪ್ರವೃತ್ತಿ. ಗ್ರಾಮೀಣ ಪೋಷಕರ ಹಾಗೂ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಗೆ ಯಾವ ರೀತಿಯ ಸಂಬಂಧವಿದೆ? ಗ್ರಾಮೀಣ ಹೆಣ್ಣುಮಕ್ಕಳು ಶಾಲೆ ಬಿಡಲು ಯಾವ ರೀತಿಯ ಅಂಶಗಳು ಕಾರಣವಾಗುತ್ತವೆ. ಶಿಕ್ಷಣ ಪಡೆದುಕೊಳ್ಳುವಲ್ಲಿ ಹೆಣ್ಣುಮಕ್ಕಳ ಆಸಕ್ತಿ ಹೇಗಿದೆ? ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಪಡೆಯುವವರೆ? ಇಲ್ಲವೆ ಎಂಬಿತ್ಯಾದಿ. ಈ ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದರ ಮುಖಾಂತರ ಗ್ರಾಮೀಣ

ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿಯ ಚಿತ್ರಣವೇನು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಮೂಲ ಆಶಯವಾಗಿದೆ.

ಅಧ್ಯಯನದ ಉದ್ದೇಶಗಳು

ಸಂಶೋಧನ ಅಧ್ಯಯನಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನು ಪರಾಮರ್ಶಿಸಿದಾಗ ಕೆಲವು ಸಮಸ್ಯೆಗಳು ಗಮನಕ್ಕೆ ಬಂದವು. ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗನುಸಾರ ಶಿಕ್ಷಣದ ಹಿಂದುಳಿದಿರುವಿಕೆಯನ್ನು, ಶಿಕ್ಷಣದ ಅಂತರವನ್ನು ಕಾಣಬಹುದಾಗಿದೆ. ಸಮಾನ ಶಿಕ್ಷಣನೀತಿ ಇದ್ದರೂ ಗ್ರಾಮೀಣ ಪ್ರದೇಶದ ಮತ್ತು ನಗರಪ್ರದೇಶದ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಅಂತರಗಳಿವೆ. ಪರಿಶಿಷ್ಟ ಜಾತಿಯ ಶಿಕ್ಷಣ ಪ್ರಮಾಣ ಸಾಮಾನ್ಯ ಮಹಿಳೆಯರ ಶಿಕ್ಷಣದ ನಡುವೆ ಅಗಾಧವಾದ ಅಂತರವೇಕೆ ಉಂಟಾಗುತ್ತಿದೆ? ಏಕ ರೀತಿಯ ಶಿಕ್ಷಣ ಮಾಧ್ಯಮವಿದ್ದರೂ ಆಂಗ್ಲ ಮತ್ತು ಕನ್ನಡ ಮಾಧ್ಯಮವೆಂಬ ಭಿನ್ನ ರೀತಿಯ ಶಿಕ್ಷಣ ಮಾಧ್ಯಮಗಳೇಕೆ? ಹೆಣ್ಣುಮಕ್ಕಳಿಗಾಗಿಯೇ ಪ್ರತ್ಯೇಕ ವಿವಿಧ ಅನುಷ್ಠಾನಗಳಿದ್ದರೂ, ವಿವಿಧ ಸಮುದಾಯ ಗ್ರಾಮೀಣ ಮತ್ತು ನಗರಗಳ ಹೆಣ್ಣುಮಕ್ಕಳ ಶಿಕ್ಷಣದ ಅಂತರ, ತಾರತಮ್ಯವೇಕೆ? ಈ ಎಲ್ಲಾ ಸಮಸ್ಯೆಗಳಿಗೆ ಕಾರಣ ಮತ್ತು ಉತ್ತರ ಹುಡುಕುವ ಸಲುವಾಗಿ ಕೆಳಗಿನ ಉದ್ದೇಶಗಳನ್ನಿಟ್ಟುಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧. ಹೆಣ್ಣುಮಕ್ಕಳ ಶಿಕ್ಷಣ ಹಿಂದುಳಿದಿರುವಿಕೆಗೆ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳನ್ನು ತಿಳಿಯುವುದು.

೨. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಸಾಮಾನ್ಯವರ್ಗದ ಹೆಣ್ಣುಮಕ್ಕಳ ಶಿಕ್ಷಣದ ಅಂತರಕ್ಕೆ ಕಾರಣವನ್ನು ನೋಡುವುದು.

೩. ಹೆಣ್ಣುಮಕ್ಕಳ ಶಿಕ್ಷಣ ಪ್ರೋತ್ಸಾಹಕ್ಕಾಗಿ ವಿವಿಧ ಯೋಜನೆಗಳ ಅನುಷ್ಠಾನ ಹಾಗೂ ಅದರ ಪ್ರಭಾವಗಳನ್ನು ತಿಳಿಯುವುದು.

ಅಧ್ಯಯನದ ವಿಧಾನಗಳು

ಅಧ್ಯಯನವನ್ನು ಕನಕಪುರ ತಾಲೂಕಿನ ಸಾತನೂರು ಗ್ರಾಮಪಂಚಾಯಿತಿ ಮತ್ತು ದೊಡ್ಡ ಹಾಲಹಳ್ಳಿ ಗ್ರಾಮಪಂಚಾಯಿತಿಗಳಲ್ಲಿ ಕೈಗೊಳ್ಳಲಾಗಿದೆ. ಸಾತನೂರು ಗ್ರಾಮಪಂಚಾಯಿತಿಯು ತಾಲೂಕು ಕೇಂದ್ರವಾದ ಕನಕಪುರದಿಂದ ೧೫ ಕಿ.ಮೀ. ದೂರದಲ್ಲಿದೆ. ಪಂಚಾಯಿತಿ ವ್ಯಾಪ್ತಿಗೆ ಸಾತನೂರು, ಸೋರೆಕಾಯಿ ದೊಡ್ಡಿ, ನಾಗರಸನಕೋಟೆ, ಚಿಕ್ಕಹಾಲಹಳ್ಳಿ, ದೇವಿರಮ್ಮನದೊಡ್ಡಿ, ಕಾಳೇಗೌಡನ ದೊಡ್ಡಿ, ಹೊಸದೊಡ್ಡಿ ಹೀಗೆ ಏಳು ಹಳ್ಳಿಗಳು ಸೇರಿವೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ೭೭೭೬ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗರು ಮತ್ತು ಲಿಂಗಾಯಿತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಉಳಿದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಸಮುದಾಯದವರಿದ್ದಾರೆ. ಕೃಷಿ ಇಲ್ಲಿನ ಜನರ ಮುಖ್ಯ ಉದ್ಯೋಗವಾಗಿದೆ.

ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ಮತ್ತೊಂದು ಪಂಚಾಯಿತಿ ದೊಡ್ಡ ಆಲಹಳ್ಳಿ. ಕನಕಪುರ ತಾಲೂಕಿನಿಂದ ೨೧ ಕಿ.ಮೀ. ದೂರದಲ್ಲಿದೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ದೊಡ್ಡ ಆಲಹಳ್ಳಿ, ನಾಯಕನಹಳ್ಳಿ, ವೀರೇಗೌಡನದೊಡ್ಡಿ, ಬೋರನದೊಡ್ಡಿ, ಎಡಮಾರನಹಳ್ಳಿ, ಮಕ್ಕಳಂದ ಹಾಗೂ ಅಂಬೇಡ್ಕರ ನಗರ ಸೇರಿದಂತೆ ಒಟ್ಟು ೭ ಹಳ್ಳಿಗಳು ಒಳಗೊಂಡಿದೆ. ಪಂಚಾಯಿತಿ ಒಟ್ಟು ೬೨೧೦ ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿನ ಜನರ ಮುಖ್ಯ ಕಸುಬು ಕೃಷಿ. ಈ ಎರಡು ಗ್ರಾಮಪಂಚಾಯಿತಿಗಳಿಂದ ಎರಡು ಹಳ್ಳಿಗಳಂತೆ ಸಾತನೂರು ಗ್ರಾಮಪಂಚಾಯಿತಿಯಿಂದ ಸಾತನೂರು ಹಾಗೂ ನಾಗರಸನಕೋಟೆ ಹಳ್ಳಿಗಳನ್ನು ಮತ್ತು ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯಿಂದ ದೊಡ್ಡ ಆಲಹಳ್ಳಿ ಮತ್ತು ನಾಯಕನಹಳ್ಳಿಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ಎರಡು ಗ್ರಾಮಪಂಚಾಯಿತಿಗಳಿಂದ ಒಟ್ಟು ನಾಲ್ಕು ಹಳ್ಳಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಏಕೆಂದರೆ ಈ ನಾಲ್ಕು ಹಳ್ಳಿಗಳಲ್ಲಿ ಎಲ್ಲಾ ಜಾತಿ ಸಮುದಾಯಗಳ ಜನರು ನೆಲೆಸಿದ್ದಾರೆ. ಈ ಎರಡು ಗ್ರಾಮಪಂಚಾಯಿತಿಗಳ ನಡುವೆ ಆರ್ಥಿಕ, ಸಾಮಾಜಿಕವಾಗಿ ಅಂತಹ ವ್ಯತ್ಯಾಸಗಳಿಲ್ಲ. ಕೃಷಿ ಮತ್ತು ರೇಷ್ಮೆ ಕೃಷಿ ಪ್ರಧಾನ ಉದ್ಯೋಗವಾಗಿದೆ.

ಸಾತನೂರು ಗ್ರಾಮಪಂಚಾಯಿತಿಯಿಂದ ಸಾತನೂರು ಹಾಗೂ ನಾಗರಸನಕೋಟೆ ಆಯ್ಕೆ ಮಾಡಿಕೊಳ್ಳಲಾಗಿದೆ. ಸಾತನೂರು ಗ್ರಾಮದಲ್ಲಿ ೪೯೬೬ರಷ್ಟು ಜನಸಂಖ್ಯೆ ಇದೆ. ಇದರಲ್ಲಿ ಪುರುಷರು ೨೫೨೭ ಹಾಗೂ ೨೪೩೯ ಮಹಿಳೆಯರಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿಯ ೧೨೨೫ ಜನಸಂಖ್ಯೆ ಇದೆ. ಹಾಗೂ ಪರಿಶಿಷ್ಟ ಪಂಗಡದ ೫೭ ಜನರಿದ್ದಾರೆ.

ನಾಗರಸನಕೋಟೆ ಗ್ರಾಮದಲ್ಲಿ ೧೨೭೮ ಜನಸಂಖ್ಯೆ ಇದೆ. ಇದರಲ್ಲಿ ಪುರುಷರು ೬೬೩ ಹಾಗೂ ೬೧೫ ಮಹಿಳೆಯರಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿಯ ೧೪೭ ಜನಸಂಖ್ಯೆ ಇದೆ. ಹಾಗೂ ಪರಿಶಿಷ್ಟ ಪಂಗಡದ ೫೩ ಜನರಿದ್ದಾರೆ.

ಈ ಎರಡು ಹಳ್ಳಿಗಳಿಂದ ೧೫೦ ಕುಟುಂಬಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಸಾತನೂರುನಲ್ಲಿ ೭೮ ಕುಟುಂಬಗಳು ಹಾಗೂ ನಾಗರಸನಕೋಟೆಯಲ್ಲಿ ೭೨ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಾತನೂರಿನಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಒಕ್ಕಲಿಗ ಹಾಗೂ ಲಿಂಗಾಯಿತ ಸಮುದಾಯಗಳಿಂದ ತಲಾ ೧೩ ಕುಟುಂಬಗಳಂತೆ ಹಾಗೂ ನಾಗರಸನಕೋಟೆಯಿಂದ ತಲಾ ೧೨ ಕುಟುಂಬಗಳಂತೆ ಆಯ್ಕೆಮಾಡಿಕೊಳ್ಳಲಾಗಿದೆ.

ಸಾತನೂರು ಮತ್ತು ನಾಗರಸನಕೋಟೆ ಈ ಎರಡು ಹಳ್ಳಿಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಒಕ್ಕಲಿಗ ಹಾಗೂ ಲಿಂಗಾಯಿತ ಸಮುದಾಯಗಳಿಂದ ತಲಾ ೨೫ ಕುಟುಂಬಗಳಂತೆ ಒಟ್ಟು ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದೆ.

ಅಧ್ಯಯನಕ್ಕೆ ಒಳಪಡಿಸಿರುವ ಮತ್ತೊಂದು ಗ್ರಾಮಪಂಚಾಯಿತಿ ದೊಡ್ಡ ಆಲಹಳ್ಳಿ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯಿಂದ ದೊಡ್ಡ ಆಲಹಳ್ಳಿ ಮತ್ತು ನಾಯಕನಹಳ್ಳಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ದೊಡ್ಡ ಆಲಹಳ್ಳಿ ಗ್ರಾಮದಲ್ಲಿ ೪೧೭೦ರಷ್ಟು ಜನಸಂಖ್ಯೆ ಇದೆ. ಇದರಲ್ಲಿ ಪುರುಷರು ೨೧೩ ಹಾಗೂ ೨೦೪ ಮಹಿಳೆಯರಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿಯ ೬೦ ಜನಸಂಖ್ಯೆ ಇದೆ. ಹಾಗೂ ಪರಿಶಿಷ್ಟ ಪಂಗಡದ ೫೪ ಜನರಿದ್ದಾರೆ. ಹಾಗೆಯೇ ನಾಯಕನಹಳ್ಳಿ ಗ್ರಾಮದಲ್ಲಿ ೧೧೨೭ ಜನಸಂಖ್ಯೆ ಇದೆ.

ಸಾತನೂರು ಮತ್ತು ದೊಡ್ಡ ಆಲಹಳ್ಳಿ ಎರಡು ಹಳ್ಳಿಗಳಿಂದ ೧೫೦ ಕುಟುಂಬಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ದೊಡ್ಡ ಆಲಹಳ್ಳಿಯಲ್ಲಿ ೭೮ ಕುಟುಂಬಗಳು ಹಾಗೂ ನಾಯಕನಹಳ್ಳಿಯಲ್ಲಿ ೭೨ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ದೊಡ್ಡ ಆಲಹಳ್ಳಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಒಕ್ಕಲಿಗ ಹಾಗೂ ಲಿಂಗಾಯಿತ ಸಮುದಾಯಗಳಿಂದ ತಲಾ ೧೩ ಕುಟುಂಬಗಳಂತೆ ಹಾಗೂ ನಾಯಕನಹಳ್ಳಿಯಿಂದ ತಲಾ ೧೨ ಕುಟುಂಬಗಳಂತೆ ಆಯ್ಕೆಮಾಡಿಕೊಳ್ಳಲಾಗಿದೆ.

ದೊಡ್ಡ ಆಲಹಳ್ಳಿ ಮತ್ತು ನಾಯಕನಹಳ್ಳಿ ಈ ಎರಡು ಹಳ್ಳಿಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಒಕ್ಕಲಿಗ ಹಾಗೂ ಲಿಂಗಾಯಿತ ಸಮುದಾಯಗಳಿಂದ ತಲಾ ೨೫ ಕುಟುಂಬಗಳಂತೆ ಒಟ್ಟು ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದೆ.

ಸಾತನೂರು ಮತ್ತು ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಗಳಿಂದ ಒಟ್ಟು ೩೦೦ ಕುಟುಂಬಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ೩೦೦ ಕುಟುಂಬಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಒಕ್ಕಲಿಗ ಹಾಗೂ ಲಿಂಗಾಯಿತ ಸಮುದಾಯಗಳಿಂದ ತಲಾ ೫೦ ಕುಟುಂಬಗಳಂತೆ ಎಲ್ಲಾ ಸಮುದಾಯುಗಳ ಒಟ್ಟು ೩೦೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದೆ.

ಶಾಲೆಗಳಲ್ಲಿ ೪, ೫, ೬, ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ೩೦೦ ವಿದ್ಯಾರ್ಥಿಗಳು ಮತ್ತು ಅವರ ೩೦೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದೆ.

ಅಧ್ಯಯನದ ಮಿತಿ

ಪ್ರಸ್ತುತ ಮಹಾಪ್ರಬಂಧವು ಕೆಲವು ಮಿತಿಗಳು ಒಳಗೊಂಡಿದ್ದು, ಅಧ್ಯಾಯವು ರಾಮನಗರ ಜಿಲ್ಲೆ ಕನಕಪುರ ತಾಲೂಕನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡು ಅದರಲ್ಲಿ ಸಾತನೂರು ಪಂಚಾಯಿತಿ ಹಾಗೂ ದೊಡ್ಡ ಆಲಹಳ್ಳಿ ಪಂಚಾಯಿತಿಗೆ ಸೀಮಿತಗೊಳಿಸಲಾಗಿದೆ. ಹಿರಿಯ ಪ್ರಾಥಮಿಕ ಶಾಲೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಶಾಲೆಗಳಿಂದ ೨೦೧೬-೧೭ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿನಿಯರ ಮತ್ತು ಕುಟುಂಬಗಳನ್ನು ಸೀಮಿತಗೊಳಿಸಲಾಗಿದೆ.

ಜೊತೆಗೆ ಮುಖ್ಯೋಪಾಧ್ಯಾಯರು, ಶಿಕ್ಷಕಿಯರು, ಶಿಕ್ಷಕರು, ಎಸ್.ಡಿ.ಎಂ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಆ ಪಂಚಾಯಿತಿ ವ್ಯಾಪ್ತಿಯ ಮುಖಂಡರುಗಳಿಂದಲೂ ಮಾಹಿತಿ ಸಂಗ್ರಹಿಸಲಾಗಿದೆ.

ಇದೇ ಮಾದರಿಯಲ್ಲಿ ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳನ್ನು ಪ್ರಶ್ನಾವಳಿಯೊಂದಿಗೆ ವಿದ್ಯಾರ್ಥಿನಿಯರ ಕುಟುಂಬಗಳ ಸದಸ್ಯರ ಭೇಟಿ ಮಾಡಿ ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿ ಕುರಿತು ಮಾಹಿತಿ ಸಂಗ್ರಹಿಸಲಾಯಿತು. ಪ್ರಶ್ನಾವಳಿ ಜೊತೆ ಸಂದರ್ಶನ, ಅವಲೋಕನ, ಗುಂಪು ಚರ್ಚೆ ಮೂಲಕ ಸುರಕ್ಷಿತ ಕುಡಿಯುವ ನೀರು, ನೈರ್ಮಲ್ಯ, ಕೃಷಿ, ಕೃಷಿಕೂಲಿ, ಶಿಕ್ಷಣದ ಬಗ್ಗೆ ಪೋಷಕರಲ್ಲಿನ ಆಸಕ್ತಿ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿರುವ ಸಮಸ್ಯೆಗಳು ಮುಂತಾದವುಗಳ ಬಗ್ಗೆ ವಿವರವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಶಾಲಾ ಅಭಿವೃದ್ಧಿ ಕುರಿತಂತೆ ಎಲ್ಲ ಶಾಲೆಗಳಲ್ಲಿಯೂ ಎಸ್.ಡಿ.ಎಂ.ಸಿ. ಸಮಿತಿಗಳಿಗೆ ಈ ಸಮಿತಿಯ ಸದಸ್ಯರನ್ನು ಭೇಟಿ ಮಾಡಿ ಶಾಲಾ ಅಭಿವೃದ್ಧಿ ಕುರಿತಂತೆ ಇರುವ ಸಮಸ್ಯೆ ಸವಾಲುಗಳ ಕುರಿತಂತೆ ಮಾಹಿತಿ ಸಂಗ್ರಹಿಸಲಾಯಿತು. ಜೊತೆಗೆ ಶಾಲಾ ಶಿಕ್ಷಕರಿಂದಲೂ ಮಕ್ಕಳ ಭೌತಿಕ ಬೆಳವಣಿಗೆ ಪೂರಕ ಅಗತ್ಯತೆಗಳ ಕುರಿತಂತೆ ಪಾಠ ಪಠ್ಯಕ್ರಮ ಪಠ್ಯತೇರ ಚಟುವಟಿಕೆಗಳ ಕುರಿತು ಮಾಹಿತಿ ಸಂಗ್ರಹಿಸಲು ಶಾಲೆಗಳ ಭೌತಿಕ ಶಾಲಾ ಕೊಠಡಿಗಳ, ಪೀಠೋಪಕರಣಗಳ, ಶೌಚಾಲಯ, ಕುಡಿಯುವ ನೀರು ಮುಂತಾದವುಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲಾಗಿದೆ. ಈ ಎಲ್ಲವುದರ ಜೊತೆಗೆ ವಿದ್ಯಾರ್ಥಿನಿಯರೊಂದಿಗೆ ಗುಂಪು ಚರ್ಚೆ ನಡೆಸಿ ಶೈಕ್ಷಣಿಕ ಚಟುವಟಿಕೆಗಳ ಕಲಿಕೆಯಲ್ಲಿ ಸಮಸ್ಯೆ ಅವುಗಳ ಕುರಿತಂತೆ ಮಾಹಿತಿ ಕಲೆಹಾಕಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯ ಅಂಕಿ ಅಂಶಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಒಟ್ಟಾರೆ ವಿವರವಾದ ಚರ್ಚೆ ವಿಶ್ಲೇಷಣೆ ಮೂಲಕ ಪ್ರೌಢಪ್ರಬಂಧ ಸಿದ್ಧಗೊಳಿಸಲಾಗಿದೆ.

ಅಧ್ಯಯನದ ಅಧ್ಯಾಯಗಳ ವಿನ್ಯಾಸ

ಈ ಅಧ್ಯಯನವು ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಅಧ್ಯಾಯ ಒಂದು; ಪ್ರಸ್ತಾವನೆ ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅದರ ಮಹತ್ವ, ಅಧ್ಯಯನ ಕೈಗೊಂಡ ವಿಧಾನಗಳು ಮತ್ತು ಅಧ್ಯಯನದ ರೂಪುರೇಷೆಗಳ ಕುರಿತು ತಿಳಿಸಲಾಗಿದೆ.

ಅಧ್ಯಾಯ ಎರಡು; ಅಧ್ಯಯನಗಳ ಸಮೀಕ್ಷೆ ಇದರಲ್ಲಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಪ್ರಕಟಗೊಂಡ ಕೃತಿಗಳು, ವಿವಿಧ ಪತ್ರಿಕೆಗಳಲ್ಲಿ ಬಂದ ಲೇಖನಗಳು, ವಿವಿಧ ವರದಿಗಳು ಹಾಗೂ ಸಂಶೋಧನಾ ಪ್ರೌಢ ಪ್ರಬಂಧಗಳು, ಸರ್ಕಾರದ ವರದಿಗಳು, ಪುಸ್ತಕ ಮುಂತಾದವುಗಳ ಕುರಿತು ಸಾಹಿತ್ಯ ವಿಮರ್ಶೆ ಮಾಡಲಾಗಿದೆ.

ಅಧ್ಯಾಯ ಮೂರು; ಅಧ್ಯಯನ ಕ್ಷೇತ್ರ ಪರಿಚಯ ಎಂದಿದ್ದು ಇದರಲ್ಲಿ ಮುಖ್ಯವಾಗಿ ರಾಮನಗರ ಜಿಲ್ಲೆಯು ಹಿಂದೆ ಚಾರಿತ್ರಿಕವಾಗಿ ಎಷ್ಟು ಮಹತ್ವದ್ದಾಗಿತ್ತು, ಅದರ ಹಿನ್ನೆಲೆಯೇನು ಎಂಬುದನ್ನು ನೋಡುವುದರೊಂದಿಗೆ ಈ ಜಿಲ್ಲೆಯ ಭೌಗೋಳಿಕ ಸ್ವರೂಪ, ಜಿಲ್ಲೆಯಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳು, ಕೃಷಿ ವಿಧಾನ, ನೀರಾವರಿಯ ಸ್ವರೂಪ, ಜನಸಂಖ್ಯೆ, ಗುಡ್ಡಗಾಡು ಪ್ರದೇಶ, ಗಣಿಗಾರಿಕೆ ಮತ್ತು ಔದ್ಯೋಗಿಕತೆ, ನೈಸರ್ಗಿಕ ಪರಿಸರ ಮುಂತಾದವುಗಳನ್ನು ಕುರಿತು ಮಾಹಿತಿ ನೀಡಲಾಗಿದೆ.

ಅಧ್ಯಾಯ ನಾಲ್ಕು; ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣ ಬೆಳೆದು ಬಂದ ದಾರಿ ಎಂದಿದೆ. ಇದರಲ್ಲಿ ಭಾರತ ಸ್ವಾತಂತ್ರ್ಯವಾದ ತರುವಾಯ ಜಾರಿಗೆ ಬಂದ ಆಧುನಿಕ ಶಿಕ್ಷಣ ವ್ಯವಸ್ಥೆಯ ಸ್ವರೂಪದ ವಿವಿಧ ಹಂತಗಳ ಕುರಿತು ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ಅಂಕಿ ಅಂಶಗಳ ಮಾಹಿತಿ ವಿಶ್ಲೇಷಣೆ ಕುರಿತು ಅಧ್ಯಯನಕ್ಕೆ ಒಳಪಟ್ಟ ವಿದ್ಯಾರ್ಥಿನಿಯರ ಕುಟುಂಬಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಕುರಿತಂತೆ ಸಂಗ್ರಹಿಸಿದ ಪ್ರಾಥಮಿಕ ಮತ್ತು ಆನುಷಂಗಿಕ ಮಾಹಿತಿಯ ಅಂಕಿ ಅಂಶಗಳನ್ನು ವಿಶ್ಲೇಷಿಸಲಾಗಿದೆ.

ಕೊನೆಯಲ್ಲಿ ಸಮಾರೋಪ ಇದರಲ್ಲಿ ಚರ್ಚೆ, ಅಧ್ಯಯನದ ಸಾರಾಂಶ ಮತ್ತು ಫಲಿತಗಳನ್ನು ಕುರಿತು ವಿಶ್ಲೇಷಿಸುವುದರೊಂದಿಗೆ ಜೊತೆಗೆ ಸಲಹೆ ಸೂಚನೆಗಳನ್ನು ನೀಡಲಾಗಿದೆ.

ಮಾಹಿತಿಯೊದಗಿಸಿದ ಪರಾಮರ್ಶನ ಗ್ರಂಥಗಳ ವಿವರಗಳನ್ನು ನೀಡಲಾಗಿದೆ.

ಕೊನೆ ಟಿಪ್ಪಣಿಗಳು

೧. ಕೃಷ್ಣಮೂರ್ತಿ ಹೊಸಬಿಡು., ೨೦೧೨, ಭಾರತೀಯ ಅರ್ಥಶಾಸ್ತ್ರ, ಸಪ್ನ ಬುಕ್‌ಹೌಸ್, ಬೆಂಗಳೂರು, ಪು. ೨೯-೩೦

೨. ಮೀನಾಕ್ಷಿ ಬಿ., ೨೦೦೯, ಪ್ಲೋಟೋನ ವಿಚಾರಧಾರೆಗಳು, ಸಮತಾ ಪ್ರಕಾಶನ, ಧಾರವಾಡ, ಪು. ೨

೩. ಶೇಷಾದ್ರಿ ಬಿ., ೧೯೯೮, ಗಾಂಧೀಚಿಂತನೆಗಳು, ನವಕರ್ನಾಟಕ ಪಬ್ಲಿಕೆಷನ್, ಬೆಂಗಳೂರು, ಪು. ೧೫೬

೪. ಚಂದ್ರಶೇಖರ ಟಿ.ಆರ್., ೨೦೧೦, ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ, ಮಂಟಪಮಾಲೆ-೧೬೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೩

೫. ಅದೇ ಪು. ೩

೬. ಭಾರತೀಯ ಜನಗಣತಿ ವರದಿ, ೨೦೧೧, ಇಂಡಿಯನ್ ಅಡ್ಮಿಸ್ಟ್ರೇಟಿವ್ ಸರ್ವಿಸ್, ಭಾರತ ಸರ್ಕಾರ, ನವದೆಹಲಿ, ವ್ಯಾಲುಂ-೧, ಪು. ೩

೭. ಮುಜಾಮಿಲ್ ಜಾನ್, ೨೦೧೦, ಇನ್‌ಪ್ಯಾಕ್ಟ್ ಆಫ್ ಎಜ್ಯುಕೇಷನ್, ಹಿಮಾಲಯ ಬುಕ್‌ಹೌಸ್, ನವದೆಹಲಿ, ಪು. ೧೭೮

೮. ಕಾಮತ್ ಜೋತ್ಸ್ನಾ, ಮಹಿಳೆಯರ ಒಂದು ಅಧ್ಯಯನ (ಲೇಖನ), (ಇಪಿಡಬ್ಲ್ಯು) ಎಕನಾಮಿಕ್ ಪೊಲಿಟಕಲ್ ವಿಕ್ಲೀ, ಪು. ೨೬-೩೦

೯. ಕೃಷ್ಣಮೂರ್ತಿ, ೨೦೦೫, ಭಾರತೀಯ ನಾರಿ ಸಮಾನತೆ, ಚೇತನ ಬುಕ್‌ಹೌಸ್, ಮೈಸೂರು, ಪು.೧೪೮

೧೦. ಅನ್ನಪೂರ್ಣೇಶ್ವರಿ, ಮಹಿಳಾ ಮತ್ತು ಅಭಿವೃದ್ಧಿ, ಅಂಕಿತ ಪ್ರಕಾಶನ, ಗಾಂಧಿನಗರ, ಬೆಂಗಳೂರು, ಪು. ೬೯

೧೧. ಚಂದ್ರಶೇಖರ ಟಿ.ಆರ್., ೨೦೧೦, ಕರ್ನಾಟಕದಲ್ಲಿ ಲಿಂಗಸಂಬಂಧಿ ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೫

೧೨. ನಾರಾಯಣ ಡಿ.ಎಸ್., ೨೦೦೬, ಇಂಗ್ಲಿಷ್ ಮತ್ತು ಕನ್ನಡ ಸಂಬಂಧ ಕುರಿತು ಚಿಂತನೆಗಳು, ಎಂ.ಫಿಲ್ ಸಂಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೮೩

೧೩. ಯರ್ರಿಸ್ವಾಮಿ ಎಂ., ಗ್ರಾಮ ಪಂಚಾಯಿತಿ ಮತ್ತು ಸಬಲೀಕರಣ, ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ನರಸಿಂಹಯ್ಯ ಎಚ್., ೧೯೯೧, ಪ್ರಾಥಮಿಕ ಶಿಕ್ಷಣದ ವರದಿ, ವ್ಯಾ-೧, ಶಾಸನಸಭೆ, ಗ್ರಂಥಾಲಯ, ಬೆಂಗಳೂರು, ಪು. ೧೮

❑❑❑

ಅಧ್ಯಾಯ ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡರಲ್ಲಿ ಸಂಶೋಧನಾ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ.

೧. **ಹರ್ಟಗೊ**(Hartog Committe Report) **ಸಮಿತಿ ವರದಿಯು**(೧೯೨೯) ಸ್ವತಂತ್ರ ಪೂರ್ವದಲ್ಲೆ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ತೆರೆಯುವುದು. ಅವಶ್ಯಕತೆಗೆ ಅನುಗುಣವಾಗಿ ಪಠ್ಯ ಪುಸ್ತಕವನ್ನು ರೂಪಿಸುವುದು. ಮಹಿಳಾ ಶಿಕ್ಷಕಿಯರನ್ನು ಹಾಗೂ ಮಹಿಳಾ ತನಿಖಾಧಿಕಾರಿಗಳನ್ನು ನೇಮಕ ಮಾಡುವುದು. ಜೊತೆಗೆ ಸ್ತ್ರೀಯರ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಬೇಕು. ಸಮರ್ಪಕವಾದ ಪಿಠೋಪಕರಣಗಳಿರುವುದಿಲ್ಲ. ಹಳ್ಳಿಯ ವಾತಾವರಣಕ್ಕೆ ಹೊಂದಿಕೆಯಾಗುವ ಪಠ್ಯಕ್ರಮಗಳು ತರಬೇತಿ ಹೊಂದಿದ ಶಿಕ್ಷಕರ ಕೊರತೆ, ನೀರಸ ಹಾಗೂ ಪರಿಣಮಕಾರಿಯಲ್ಲದ ಭೋದನಾ ಪದ್ಧತಿ, ಪಾಲಕರ ಅನಕ್ಷರತೆ ಸ್ಥಳೀಯ ಪರಿಸರ ಮತ್ತು ಅವಶ್ಯಕತೆಗೆ ಹೊಂದಾಣಿಕೆಯಾಗದ ರಜಾದಿನಗಳು ಅಸಮಧಾನಕರ ರೀತಿಯಲ್ಲಿ ಜಾರಿಗೊಳಪಟ್ಟ ಕಡ್ಡಾಯ ಶಿಕ್ಷಣ ನೀತಿ ಮುಂತಾದವು ಗಳನ್ನು ಈ ಸಮಿತಿಯಲ್ಲಿ ಉಲ್ಲೇಖಿಸಿದ್ದಾರೆ.

೨. **ಶಿವಶಂಕರ್ ಹೆಚ್**.ವಿ. (೧೯೭೦) ಅವರು **ಭಾರತೀಯ ಶಿಕ್ಷಣ** ಎಂಬ ಪುಸ್ತಕದಲ್ಲಿ ಆಗಿನ ಮೈಸೂರು ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಮಸ್ಯೆಗಳನ್ನು ಅಧ್ಯಯನ ಮಾಡಿದರು. ಮೈಸೂರು ರಾಜ್ಯದ ಶಾಲೆಗಳ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಸಾಧನೆ ಈ ವಿದ್ಯಾರ್ಥಿಗಳ ಶಾಲೆಯ ವಾತಾವರಣ ಕುಟುಂಬದ ಪರಿಸರ ಪೋಷಕರ ನಡವಳಿಕೆ ಸಂಸ್ಕೃತಿ, ಸಮುದಾಯದ ಪ್ರಭಾವ ಬೀರಿದೆ ಎಂಬುದರ ಅಧ್ಯಯನ ಮಾಡಿ ಈ ಕೆಳಕಂಡ ಫಲಿತಗಳನ್ನು ಪಡೆದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರುಗಳಿಗೆ ಒದಗಿಸುತ್ತಿರುವ ಸಮವಸ್ತ್ರ ಪುಸ್ತಕಗಳು ಸರಿಯಾದ ಸಮಯಕ್ಕೆ ದೊರೆಯದಿರುವ ಕಾರಣದಿಂದ ಕುಟುಂಬದ ವರಮಾನ ಕಡಿಮೆ ಇರುವ ಕಾರಣದಿಂದ ಸಮವಸ್ತ್ರ ಮತ್ತು ಪುಸ್ತಕಗಳನ್ನು ಖರೀದಿಸಲು ಆಗದೆ

ಕಷ್ಟವಾಗುತ್ತಿತ್ತು. ತಮ್ಮ ಮಕ್ಕಳು ಶಾಲೆಗೆ ಹೋಗುವ ಬದಲು ಪ್ರತಿದಿನ ಸಂಪಾದನೆ ಮಾಡಿದರೆ ಉತ್ತಮ ಎಂಬ ಭಾವನೆ ಜನರಲ್ಲಿತ್ತು. ಪ್ರಾಥಮಿಕ ಶಾಲಾ ಹಂತದಲ್ಲಿ ಖಾಸಗಿ ಶಾಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಯರು ದಾಖಲಾತಿಯಾಗಲು ಶಾಲೆಗಳಲ್ಲಿರುವ ಆಟದ ಶುಲ್ಕ ಗ್ರಂಥಾಲಯ ಶುಲ್ಕ ವಂತಿಗೆ ಮತ್ತು ಪರಿಶಿಷ್ಟ ಜಾತಿಯವರು ವಾಸಿಸುತ್ತಿರುವ ಪ್ರದೇಶಗಳಿಂದ ದೂರದಲ್ಲಿ ಸ್ಥಾಪನೆಯಾಗಿರುವುದು ಕಾರಣವಾಗಿದೆ. ಮಾಧ್ಯಮಿಕ ಶಾಲೆಗಳಿಗೆ ತಮ್ಮ ಮಕ್ಕಳು ಶಾಲೆಗೆ ಹೋಗಲು ಒಲವಿರಲಿಲ್ಲ. ತಮ್ಮ ಹೆಣ್ಣುಮಕ್ಕಳು ಮನೆಯ ಕೆಲಸದಲ್ಲಿ ತೊಡಗಿಸಲು ಪೋಷಕರಿಗೆ ಹೆಚ್ಚು ಆಸಕ್ತಿಯಿತ್ತು.

೩. **ಹೆಗ್ಡೆ ಡಿ.ವಿ.** (೧೯೭೯) ಅವರ **ಮಕ್ಕಳ ಅಭಿವೃದ್ದಿ ಎಲ್ಲರ ಹೊಣೆ** ಎಂಬ ತಮ್ಮ ಲೇಖನದಲ್ಲಿ ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಕ್ಕಳ ಪ್ರಾಥಮಿಕ ಶಿಕ್ಷಣ, ದೈಹಿಕ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ಅನುಕೂಲವಾದ ಪರಿಸರ ಮತ್ತು ಪರಿಕರಗಳು ಅಗತ್ಯ. ವಾಸ್ತವವಾಗಿ ಬಡತನ, ಭೌಗೋಳಿಕ, ಸಾಂಸ್ಕೃತಿಕ ಅಥವಾ ದೈಹಿಕ ಕಾರಣಗಳೊಂದಿಗೆ ಇನ್ನಿತರೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶಿಕ್ಷಣದ ಕೊರತೆಗೆ ಕಾರಣವಾಗುತ್ತದೆ. ಅಲ್ಲದೆ ದೈಹಿಕ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ಅನುಕೂಲವಾದ ಪರಿಸರ ಮತ್ತು ಪರಿಕರಗಳ ಜೊತೆಗೆ ಶಿಕ್ಷಣ ಪಡೆದುಕೊಳ್ಳುವ ಇಚ್ಛಾಶಕ್ತಿ ಮತ್ತು ಮನೋಪ್ರವೃತ್ತಿಗಳು ಸಹ ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾಗಿರಬೇಕಾಗುತ್ತದೆ. ಆದ್ದರಿಂದ ಈ ಎಲ್ಲಾ ಅಧ್ಯಯನಗಳು ಗ್ರಾಮೀಣ ಭಾಗದ ಹೆಣ್ಣುಮಕ್ಕಳು ಶೈಕ್ಷಣಿಕವಾಗಿ ಯಾಕೆ ಹಿಂದುಳಿದಿದ್ದಾರೆ ಎಂಬ ಅಂಶವನ್ನು ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ ನೆಲೆಯನ್ನು ಅರ್ಥಮಾಡಿಕೊಳ್ಳುವ ಮೂಲಕ ಶೈಕ್ಷಣಿಕ ಸ್ಥಿತಿಗತಿಯನ್ನು ವಿವರಿಸಲು ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ನಿರ್ದಿಷ್ಟವಾಗಿ ಶಿಕ್ಷಣ ಕುರಿತಂತೆ ಗ್ರಾಮೀಣ ಹೆಣ್ಣುಮಕ್ಕಳು ಮನೋಪ್ರವೃತ್ತಿ ಮತ್ತು ಶಿಕ್ಷಣ ಪಡೆಯುವಾಗ ಹೆಣ್ಣುಮಕ್ಕಳು ಸ್ಥಳೀಯವಾಗಿ ಎದುರಿಸುತ್ತಿರುವ ಸಮಸ್ಯೆಯ ಕಾರಣ ಪರಿಹಾರಗಳನ್ನೊಳಗೊಂಡಂತೆ ಗ್ರಾಮೀಣ ಹೆಣ್ಣುಮಕ್ಕಳ ಸ್ಥಿತಿ ತಿಳಿದುಕೊಳ್ಳುವ ಅಗತ್ಯವಿದೆ ಎಂದಿದ್ದಾರೆ.

೪. **ಷಾಹ ಜೆ.ಎಚ್.** (೧೯೭೯) ಅವರು **ಓದುಗಾರಿಕೆ ಗ್ರಹಿಕೆ ಮತ್ತು ಕೆಲವು ಆಯ್ದ ವೈಯಕ್ತಿಕ ಹಾಗೂ ಮನೋವೈಜ್ಞಾನಿಕ ಚಲಕಗಳ ಅಧ್ಯಯನ** ಎಂಬ ತಮ್ಮ ಪಿಎಚ್.ಡಿ ಪ್ರಬಂಧದಲ್ಲಿ ಆಂಗ್ಲ ಮಾಧ್ಯಮಕ್ಕೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಮುಖ್ಯವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿನಿಯರ ಆಂಗ್ಲ ಭಾಷೆಯ ಕೀಳರಿಮೆ ಬಗ್ಗೆ ಭಾವನಗರದ ೮ ಮತ್ತು ೯ನೇ ತರಗತಿಯ ೪೧೨ ವಿದ್ಯಾರ್ಥಿಗಳ ಪ್ರತಿಶತ ತೆಗೆದುಕೊಂಡು ನಡೆಸಿದ ಅಧ್ಯಯನದಲ್ಲಿ ಕಂಡುಬಂದಂತಹ ಪ್ರಮುಖ ಅಂಶವೆಂದರೆ ಓದುಗಾರಿಕೆ ಗ್ರಹಿಕೆಯಲ್ಲಿ ನಗರ ಮತ್ತು ಗ್ರಾಮೀಣಗಳ ನಡುವೆ ಸಾಮಾಜಿಕ ಆರ್ಥಿಕ ಮಟ್ಟದಲ್ಲಿನ ವ್ಯತ್ಯಾಸ ಕಂಡುಬಂದಿದೆ. ನಗರ ಪ್ರದೇಶದ ಪೋಷಕರಲ್ಲಿ

ಆರ್ಥಿಕ ಸ್ವಾವಲಂಬನೆ ಇದು ಖಾಸಗಿ ಶಾಲೆಗಳಲ್ಲಿ ವ್ಯಾಸಂಗಕ್ಕೆ ಹೆಚ್ಚೆಚ್ಚು ಪ್ರೋತ್ಸಾಹವಿದ್ದು, ಮೂಲ ಸೌಲಭ್ಯ ಸುಸಜ್ಜಿತವಾದ ವಾಚನಾಲಯ, ಆಂಗ್ಲ ಭಾಷೆಯ ಬಗ್ಗೆ ಅರಿವಿರುತ್ತದೆ. ಗ್ರಾಮೀಣ ಭಾಗದಲ್ಲಿ ಶಾಲೆಗಳು ಮತ್ತು ಇತರೆ ಮೂಲಭೂತ ಸಮಸ್ಯೆಗಳು ಕಂಡುಬಂದು ಆಂಗ್ಲ ಬಾಷೆಯ ಬಗ್ಗೆ ತಿಳುವಳಿಕೆ ಮತ್ತು ಕೀಳರಿಮೆಗೆ ಕಾರಣ ಪೋಷಕರಿಗೆ ನಿರಾಸಕ್ತಿ ಇನ್ನಿತರೆ ಅಂಶಗಳು ಅಧ್ಯಯನದಿಂದ ತಿಳಿದುಬಂದಿದೆ.

೫. ಜೋಷಿ ಜಿ.ಎಸ್. (೧೯೮೦) ಅವರು **ಬರೋಡ ಜಿಲ್ಲೆಗೆ ಸಂಬಂಧಿಸಿದಂತೆ "ಹಿಂದುಳಿದ ವರ್ಗದವರ ಶೈಕ್ಷಣಿಕ ಸಮಸ್ಯೆಗಳು"** ಎಂಬ ಪುಸ್ತಕದಲ್ಲಿ ಇರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಶಾಲೆಯಲ್ಲಿ ಕೆಳಮಟ್ಟದ ಸಾಧನೆ ತೋರಲು ಕಾರಣವೆಂಬುದರ ಬಗ್ಗೆ ಅಧ್ಯಯನ ಮಾಡುತ್ತಾ, ಶಿಕ್ಷಕರನ್ನು ಮತ್ತು ವಿಷಯವಸ್ತುಗಳನ್ನು, ವಿದ್ಯಾರ್ಥಿಗಳು ಇಷ್ಟಪಡದಿರುವುದು ಕೆಳಮಟ್ಟದ ಸಾಧನೆ ತೋರಲು ಕಾರಣವಾಗಿದೆ ಮತ್ತು ಈ ಮಕ್ಕಳಲ್ಲಿ ಕುಟುಂಬದ ಮತ್ತು ದಿನನಿತ್ಯದ ಕಾರ್ಯಗಳಲ್ಲಿ ಘರ್ಷಣೆ ಇತ್ತು. ಈ ವಿಧ್ಯಾರ್ಥಿ ಮತ್ತು ವಿಧ್ಯಾರ್ಥಿನಿಯರಲ್ಲಿ ಶಾಲೆ ಸಂಯೋಜನೆ, ಸಾಮಾಜಿಕ ಸಂಯೋಜನೆ ಮತ್ತು ಸಾಧನೆಗಳ ನಡುವೆ ಸಂಬಂಧವಿರುವುದು ಇವರ ಅಧ್ಯಯನ ಫಲಿತವಾಗಿದೆ ಎಂದಿದ್ದಾರೆ.

೬. ೧೯೮೬ ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತದ ಶೈಕ್ಷಣಿಕ ಕ್ಷೇತ್ರಕ್ಕೆ ಒಂದು ಮಹತ್ವದ ಮೈಲುಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಅನಕ್ಷರತೆ ನಿವಾರಣೆಗೆ ಗಮನ ಹರಿಸಿತು. ಭಾರತ ಸಂವಿಧಾನವು ಸ್ತ್ರೀ-ಪುರುಷರಿಬ್ಬರಿಗೂ ೧೪ ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಹೆಣ್ಣುಮಕ್ಕಳ ಶಿಕ್ಷಣವನ್ನು ಉತ್ತೇಜಿಸಲು ಹಲವು ರೀತಿಯ ಶೈಕ್ಷಣಿಕ ಸೌಲಭ್ಯ, ಶಿಷ್ಯವೇತನ, ಉಚಿತ ಪ್ರವೇಶಾವಕಾಶ, ವಸತಿ ನಿಲಯ ಸೌಲಭ್ಯ ಮುಂತಾದವನ್ನು ಉತ್ತೇಜಿಸಲಾಗಿತ್ತು. ಸ್ವಾತಂತ್ರ್ಯ ನಂತರ ೧೯೫೧ರಲ್ಲಿ ಕೇವಲ ಶೇ. [೮.೮೬ರಷ್ಟು ಸ್ತ್ರೀ ಸಾಕ್ಷರತೆ ೨೦೦೧ರ ಜನಗಣತಿ ೮೫.೯೦ರಷ್ಟಿತ್ತು. ಲಿಂಗಾನುಪಾತದಲ್ಲಿ ರಾಜ್ಯವು ೨೦೦೧ರಲ್ಲಿ ೫೭.೪೫ರಷ್ಟು ಇತ್ತೆಂದು, ಒಟ್ಟು ದಾಖಲಾತಿ ರಾಜ್ಯದಲ್ಲಿ ೩೯.೮೯ ರಷ್ಟಿದೆ. ಪುರುಷರಿಗೆ ಹೋಲಿಸಿದರೆ ಕಡಿಮೆ ಇದೆ ಎಂಬ ಸಮಸ್ಯೆಗಳಿವೆ. ಕೌಟುಂಬಿಕ ಕಾರಣಗಳು, ಶಿಕ್ಷಣ ಸಂಬಂಧಿ ಕಾರಣಗಳು, ಸಾಮಾಜಿಕ ಕಾರಣಗಳು ಆರ್ಥಿಕ ಸಂಗತಿಗಳಿವೆ. ತಮ್ಮ ಲೇಖನದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಬರೆದಿದ್ದಾರೆ. ಇದಲ್ಲದೆ ಶಾಲಾ ಶಿಕ್ಷಣಕ್ಕೆ ೨೦೦೯-೧೦ನೇ ಸಾಲಿನಲ್ಲಿ ೨೬,೮೦೦ ಕೋಟಿ ರೂ.ಗಳನ್ನು ಯೋಜನಾ ವೆಚ್ಚಕ್ಕೆ ನಿಗದಿ ಮಾಡಿದ್ದು ೨೦೧೦-೧೧ರಲ್ಲಿ ಇದನ್ನು ೩೧.೦೩೬ ರೂ.ಗಳಿಗೆ ಏರಿಸಲು ಉದ್ದೇಶಿಸಲಾಗಿದೆ ಎಂದು ತಿಳಿಯಬಹುದಾಗಿದೆ.

೭. ನರಸಿಂಹಯ್ಯ ಹೆಚ್., ೧೯೯೧ರಲ್ಲಿ ರಚಿತವಾದ ಅವರ ವರದಿಯು ಪ್ರಾಥಮಿಕ ಶಿಕ್ಷಣ ಕುರಿತು ೧ ರಿಂದ ನಾಲ್ಕನೇ ತರಗತಿವರೆಗೆ ಮಾತೃಭಾಷಾ ಶಿಕ್ಷಣ ಕನ್ನಡವೇ ಶಿಕ್ಷಣ ಮಾಧ್ಯಮವಾಗ

ಬೇಕೆಂದು ಶಿಫಾರಸ್ಸು ಮಾಡಿತು. ಆದರೆ ಸರಕಾರ ಅಂಗೀಕರಿಸಿದರೂ ಅನುದಾನ ಸಂಹಿತೆ ೧೨ಎ ಪ್ರಕಾರ ಆಂಗ್ಲ ಮಾಧ್ಯಮ ಶಾಲೆಗೆ ಅನುಮತಿ ನೀಡಬಹುದೆಂದು ತಿಳಿಸಿತು. ಅಂದರೆ, ಇಂತಹ ವಿಭಿನ್ನ ನಿಲುವುಗಳಡಿಯಲ್ಲಿ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳಲಾಗದೆ ಶಿಕ್ಷಣ ಸಂಸ್ಥೆಗಳನ್ನು ನಿಯಮಿತವಾಗಿ ನಡೆಸಿಕೊಂಡು ಹೋಗುವ ತುರ್ತು ಅಗತ್ಯವಿದೆ ಎಂದು ತಿಳಿದು ಬಂದಿದೆ.

೮. **ಜೆ.ಪಿ. ನಾಯಕ್** (೧೯೯೪) ಅವರು **ಭಾರತೀಯ ಶಿಕ್ಷಣದಲ್ಲಿ ಸಮತಾಗುಣ ಮತ್ತು ಪರಿಮಾಣ** ಎಂಬ ಪುಸ್ತಕದಲ್ಲಿ ವಸಾಹತು ಮತ್ತು ಸಾಮ್ರಾಜ್ಯಶಾಹಿ ಉದ್ದೇಶಗಳಿಗಾಗಿ ೧೮೧೩ರಿಂದ ೧೯೨೧ರ ಅವಧಿಯಲ್ಲಿ ಬ್ರಿಟಿಷ್ ಆಡಳಿತಗಾರರು ಆಧುನಿಕ ಶಿಕ್ಷಣ ಪದ್ಧತಿಯ ಅಡಿಪಾಯವನ್ನು ಹಾಕಿದ್ದಲ್ಲದೆ ಮೇಲ್ವರ್ಗಗಳಿಗಾಗಿ ಶಿಕ್ಷಣ ಪದ್ಧತಿ ಕಟ್ಟಲು ಯತ್ನಿಸಿದರು. ಅದೇ ಅವಧಿಯಲ್ಲಿ ಶಿಕ್ಷಣ ಕ್ರಮದಲ್ಲಿ ತೀರ ಅಸಹ್ಯಕರವಾದ ಅಸಮಾನ ಅಂಶಗಳನ್ನು ಅವರು ತೆಗೆದು ಹಾಕಿದರು. ಆದುದರಿಂದ ಶಿಕ್ಷಣದಲ್ಲಿ ಸಹಮತೆಗೆ ಕೊಟ್ಟ ಅವರ ಕೊಡುಗೆ ಒಳಿತು ಕೆಡುಕುಗಳೆರಡರಿಂದ ಕೂಡಿತ್ತು. ಆದರೆ ಒಳಿತಿಗಿಂತ ಕೆಡುಕೆ ಹೆಚ್ಚು. ಸಾರ್ವಜನಿಕ ನಿಧಿಯಿಂದ ನಡೆಸಿದ ಅಥವಾ ಪೋಷಿಸಿದ ಶೈಕ್ಷಣಿಕ ಸಂಸ್ಥೆಗಳ ಪ್ರಜೆಗಳಿಗೂ ಮುಕ್ತ ಪ್ರವೇಶ ಕೊಟ್ಟಿದ್ದು ಬ್ರಿಟಿಷ್ ಆಡಳಿತಗಾರರ ಬೆಳವಣಿಗೆಗಳನ್ನು ಉಲ್ಲೇಖಿಸಬಹುದು ಎಂದಿದ್ದಾರೆ.

೯. **ಗೋವಿಂದೇಗೌಡ ಎಚ್.ಜಿ.** (೧೯೯೬) ಖ್ಯಾತ ಶಿಕ್ಷಣ ತಜ್ಞ(ಮಾಜಿ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ) ದಿನದಿಂದ ದಿನಕ್ಕೆ ಸಾಮಾನ್ಯರಲ್ಲಿ ಸರ್ಕಾರಿ ಶಾಲೆಗಳ ಮೇಲಿನ ಭರವಸೆ ಕುಸಿಯುತ್ತ ಬರುತ್ತಿದೆ. ಪರಿಣಮಕಾರಿಯಾದ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ಪಡೆಯಲು ಸಾಧ್ಯವೆ ಇಲ್ಲ ಎನ್ನುವ ನಿರಾಶಾವಾದ ಹಲವರಲ್ಲಿ ಮೂಡಿದೆ. ಹಾಗಾಗಿಯೇ ಆದಾಯದ ಒಂದು ಭಾಗ ಕಳೆದು ಕೊಂಡರೂ ಸರಿಯೇ ತಮ್ಮ ಮಕ್ಕಳು ಖಾಸಗಿ ಶಾಲೆಯ ಶಿಕ್ಷಣ ಪಡೆಯಬೇಕು ಎಂದು ಪೋಷಕರು ಹಾತೊರೆಯುತ್ತಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಖಾಸಗಿ ಶಾಲೆಗಳು ಹೆಚ್ಚಾಗುತ್ತಾ ಹೋಗುತ್ತಿವೆ ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ.

ಬಿಸಿಯೂಟ, ಪುಸ್ತಕ, ಸಮವಸ್ತ್ರ, ಚಪ್ಪಲಿ, ಬ್ಯಾಗುಗಳನ್ನು ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವಂತೆಯೇ ಹಲವು ಖಾಸಗಿ ಶಾಲೆಗಳು ತಾವು ತೆಗೆದುಕೊಳ್ಳುವ ಶುಲ್ಕದಲ್ಲಿ ಉತ್ತಮ ಪುಸ್ತಕಗಳು, ಸಮವಸ್ತ್ರ, ಬ್ಯಾಗುಗಳನ್ನು ನೀಡುತ್ತಿವೆ. ರಾಜ್ಯದಲ್ಲಿ ೪೫೬೭೭ ಪ್ರಾಥಮಿಕ ಶಾಲೆಗಳಿದ್ದು ೪೪೫೪೫ ಶಾಲೆಗಳನ್ನು ಸರ್ಕಾರಿ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ. ೬೮೩ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿದ್ದು ೨೦೦ಕ್ಕಿಂತ ಹೆಚ್ಚು ಶಾಲೆಗಳಿಗೆ ಕಟ್ಟಡವಿಲ್ಲ. ಕೇವಲ ಶೇ.೫೪ ರಷ್ಟು ಶಾಲೆಗಳಲ್ಲಿ ಆಟದ ಮೈದಾನಗಳಿದ್ದು ಶೇ.೭೪ರಷ್ಟು ಶಾಲೆಗಳಲ್ಲಿ ಮಾತ್ರ ಬಾಲಕಿಯರಿಗೆ ಶೌಚಾಲಯ ವ್ಯವಸ್ಥೆ ಕುಡಿಯುವ ನೀರು ಗ್ರಂಥಾಲಯ ಮತ್ತು ವಿದ್ಯುತ್ ಸಮಸ್ಯೆಗಳಿವೆ ಖಾಸಗಿ ಶಾಲೆಗಳು ಮೂಲಭೂತ ಸೌಲಭ್ಯಗಳ ಕಡೆಗೆ ವಿಶೇಷ ಗಮನ ನೀಡುತ್ತಿವೆ. ಸರ್ಕಾರಿ ಶಾಲೆಯ ಭೋಧನೆಯ ಗುಣಮಟ್ಟದ

ಬಗೆಗೆ ಹಲವರು ಮೂಗು ಮುರಿಯುತ್ತಾರೆ ಸ್ಪರ್ಧಾತ್ಮಕ ಮತ್ತು ಕ್ರಿಯಾತ್ಮಕ ಕಲಿಕೆ ಸರ್ಕಾರಿ ಶಾಲೆಗಳಲ್ಲಿ ಸಾಧ್ಯವಾಗುತ್ತಿಲ್ಲ ಎಂಬ ದೂರಿದೆ. ಬೋಧನೆ ಬಗೆಗೆ ದೂರುಗಳು, ಖಾಸಗಿ ಶಾಲೆ ಮೇಲೆ ಆ ದೂರುಗಳಿಲ್ಲ.

ಪ್ರಾಯೋಗಿಕ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ಲಭ್ಯವಾಗುತ್ತಿಲ್ಲ ಹಾಗೆಯೇ ಇಂಗ್ಲಿಷ್ ಮತ್ತು ಕಂಪ್ಯೂಟರ್ ಕಲಿಕೆಯಲ್ಲಿ ಸರ್ಕಾರಿ ಶಾಲೆಗಳು ಹಿಂದುಳಿದಿವೆ. ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳ ಸಾಮರ್ಥ್ಯ ಖಾಸಗಿ ಶಾಲೆ ಮಕ್ಕಳ ಸಾಮರ್ಥ್ಯಕಿಂತ ಹೆಚ್ಚಿದ್ದರೂ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಖಾಸಗಿ ಶಾಲೆ ಮಕ್ಕಳೆ ಗೆಲ್ಲುತ್ತಾರೆ. ನುರಿತ ಶಿಕ್ಷಕರ ಸಲಹೆ ಪ್ರೋತ್ಸಾಹ, ಸೌಲಭ್ಯ, ಸೂಕ್ತ ವೇದಿಕೆ ಕಲ್ಪಿಸಲು ಶಿಕ್ಷಣ ಇಲಾಖೆ ವಿಫಲವಾಗಿದ್ದೇ ಇದಕ್ಕೆ ಕಾರಣ ಎಂದು ಎನ್ನುತ್ತಾರೆ ತಜ್ಞರು.

೧೦. **ಎಚ್.ಜಿ. ಗೊವಿಂದೇಗೌಡ** (೧೯೯೬) ಅವರು **ಯೋಜನಾ ಮಾಸಪತ್ರಿಕೆಯಲ್ಲಿ** ರಾಜ್ಯದ ಶಾಲೆಗಳಲ್ಲಿ ಮೆರಿಟ್ ಆಧಾರಿತ ಶಿಕ್ಷಕರ ನೇಮಕಾತಿಯಲ್ಲಿ ಶೇ. ೫೦ರಷ್ಟು ಮಹಿಳೆಯರ ನೇಮಕ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತರಬೇತಿ ಕೇಂದ್ರ ಸ್ಥಾಪನೆ, ಶಾಲಾ ಕೊಠಡಿಗಳ ನಿರ್ಮಾಣ, ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಕೈ ಚೀಲ, ಮಧ್ಯಾಹ್ನದ ಉಚಿತ ಬಿಸಿಯೂಟ, ವಿದ್ಯಾರ್ಥಿ ವೇತನ ಇತ್ಯಾದಿಗಳಿಂದ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮತ್ತು ಶಾಲಾ ಹಾಜರಾತಿಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಲೆ ಇವೆ ಎಂದು ಮಾಜಿ ಶಿಕ್ಷಣ ಮಂತ್ರಿಗಳು ತಿಳಿಸಿದ್ದಾರೆ.

೧೧. **ಥೇಕೆಡತ್ ಕೆ.ಕೆ.** (೧೯೯೮) (ಅನು) **ಕೆ.ಎಲ್. ಗೋಪಾಲಕೃಷ್ಣಯ್ಯ** ಶತಮಾನದ ಸಂಚಿಕೆಯಲ್ಲಿ ಶಿಕ್ಷಣ ನಮ್ಮ ಜನಗಳಿಗೆ ಧರ್ಮಸೆರೆ, ವೈಜ್ಞಾನಿಕ ಪ್ರಜಾತಾಂತ್ರಿಕ ಶಿಕ್ಷಣ ಬೇಕೆಂದು ನಾವು ಒಪ್ಪಿಕೊಂಡಿದ್ದು, ಒಂದು ಶತಮಾನಕ್ಕೂ ಹೆಚ್ಚು ಅವಧಿಯ ಚಳುವಳಿಯ ಮೂಲಕ ಅಂದರೆ ೧೯೫೦ರ ಸಂವಿಧಾನ ಸಭೆಯಲ್ಲಿ ನಮ್ಮ ಸಂವಿಧಾನದ ೪೫ನೇ ವಿಧಿಯನ್ನು ಅಳವಡಿಸಿದ್ದು, ಈ ಸುಧೀರ್ಘ ಹೋರಾಟದ ಫಲಶೃತಿಯಾಗಿ ಇವತ್ತು ದೆಹಲಿಯಲ್ಲಿ ಕುಳಿತ ಆಡಳಿತಗಾರರು ಮತ್ತು ಅಧಿಕಾರಿಶಾಹಿಗಳು ಆಡುವ ಸುತ್ತು ಬಳಸಿನ ಮಾತುಗಳನ್ನು ಬಿಟ್ಟು ನೇರವಾಗಿ, ಸರಳವಾಗಿ ಹೇಳುವುದಾದರೆ, ೪೫ನೇ ವಿಧಿಯು "ಜನ ಸಾಮಾನ್ಯರಿಗೆ ಶಿಕ್ಷಣವನ್ನು ದೊರಕಿಸುವುದೇ ಪ್ರಜಾತಾಂತ್ರಿಕ ಶಿಕ್ಷಣದ ಸಾರ" ಎನ್ನುತ್ತದೆ. ಅದೇ ರೀತಿ ಶಿಕ್ಷಣದ ಸವಾಲುಗಳು (೧೯೮೫ ಆಗಸ್ಟ್) ಎಂಬ ದಸ್ತಾವೇಜಿನಲ್ಲಿ "ಶಿಕ್ಷಣದ ಎಲ್ಲಾ ಹಂತಗಳಲ್ಲಿ ಗಂಡು-ಹೆಣ್ಣು ಎರಡೂ ವರ್ಗಗಳ ದಾಖಲಾತಿಯಲ್ಲಿ ಸರ್ವತೋಮುಖ ಬೆಳವಣಿಗೆಯಾಗಿದೆ. ೧೯೫೦-೫೧ರಲ್ಲಿ ೨-೮ ಕೋಟಿಯಷ್ಟಿದ್ದ, ವಿಧ್ಯಾರ್ಥಿ ಸಂಖ್ಯೆಯು ೧೯೮೨-೮೩ರಲ್ಲಿ ೧೧.೪ ಕೋಟಿಗಳಿಗೆ ಏರಿ ವಾರ್ಷಿಕ ಶೇ. ೪.೫ರಷ್ಟು ಅಭಿವೃದ್ಧಿ ತೋರಿಸಿತ್ತು. ಇದೇ ಅವಧಿಯಲ್ಲಿ ಹೆಣ್ಣುಮಕ್ಕಳ ದಾಖಲಾತಿಯು ಶೇ. ೫.೫ ರ ಮಿಶ್ರ ಸಂಕಲನ ದರದಲ್ಲಿ ಬೆಳೆಯಿತು. ಇದಕ್ಕೆ ಹೋಲಿಸಿದಾಗ ಗಂಡುಮಕ್ಕಳ ಪ್ರಮಾಣವು ವಾರ್ಷಿಕ ಶೇ. ೩.೯ಗೆ

ಹೆಚ್ಚಾಗಿರುವುದು ಕಂಡುಬಂದಿದೆ. ಅದರೂ ಸಹ ಆರಂಭದಲ್ಲಿ ಹೆಣ್ಣುಮಕ್ಕಳ ಹಾಗೂ ಗಂಡುಮಕ್ಕಳ ದಾಖಲಾತಿಯಲ್ಲಿದ್ದ ತಾರತಮ್ಯದಿಂದಾಗಿ ಹೆಣ್ಣುಮಕ್ಕಳ ಪ್ರಮಾಣವು ಗಂಡುಮಕ್ಕಳ ದಾಖಲಾತಿಗಳಿಗಿಂತ ಕಡಿಮೆಯಾಗಿದೆ.

೧೨. ಕೃಷ್ಣಮೂರ್ತಿ (೧೯೯೮) ಅವರು **ಭಾರತೀಯ ನಾರಿ ಸಮಾನತೆ** ಎಂಬ ಪುಸ್ತಕದಲ್ಲಿ ಕಡಿಮೆ ಶಿಕ್ಷಣ ಪಡೆದವರಿಗಿಂತ ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ಹೆಚ್ಚು ವೇತನದ ಕೆಲಸ ಪಡೆಯುವರು. ಅಲ್ಲದೆ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗ ಪಡೆಯುವರು. ಆದರೆ ವಿವಾಹಿತ ಮಹಿಳೆಯರು ಗರ್ಭಧಾರಣೆ, ಮಗುವಿನ ಜನನ, ಮಕ್ಕಳ ಲಾಲನೆ, ಪಾಲನೆ ಕರ್ತವ್ಯಗಳು ಅವರನ್ನು ಗಣನೀಯ ಅವಧಿಗೆ ಅಥವಾ ಕೆಲವೊಮ್ಮೆ ಶಾಶ್ವತವಾಗಿ ಉದ್ಯೋಗದಿಂದ ಹೊರದೂಡುವುವು. ಅಲ್ಲದೆ ಈ ಸ್ವರೂಪಗಳು ಉದ್ಯಮಪತಿಯ ಕೂಲಿ ತೀರ್ಮಾನಗಳ ಮೇಲೆ ಪ್ರಭಾವ ಬೀರುವವು. ಹೀಗೆ ಪುರುಷರಿಗಿಂತ ಮಹಿಳೆಯರ ದುಡಿಮೆಗೆ ಕಡಿಮೆ ಮೌಲ್ಯ ಕಟ್ಟಿಕೊಡಲಾಗುತ್ತದೆ. ಆದರೆ ವಿವಾಹಿತ ಮಹಿಳೆಯರ ಕಾರ್ಮಿಕ ಪೇಟೆಯಿಂದ ಹಿಂದೆ ಸರಿಯಲು ಬೇರೊಂದು ಕಾರಣ ಕೂಡ ಇದೆ. ಶಿಕ್ಷಣದ ಹೆಚ್ಚಳವು ಮಾರುಕಟ್ಟೇತರ ಚಟುವಟಿಕೆಗಳಲ್ಲಿ ಮಹಿಳೆಯರ ಉತ್ಪತ್ತಿಯನ್ನು ವೃದ್ಧಿಸುವುದು. ಹೀಗಾಗಿ ಬಹಳ ಆಕರ್ಷಕವಾದ ಉದ್ಯೋಗಗಳು ಕುಟುಂಬದಿಂದ ಹೊರಗೆ ದೊರಕದಿದ್ದರೆ ಆಗ ಮಾಧ್ಯಮಿಕ ಶಿಕ್ಷಣವುಳ್ಳ ವಿವಾಹಿತ ಮಹಿಳೆಯರಿಗೆ ಮನೆಯೊಳಗೆ ಉಳಿಯುವುದೇ ಹೆಚ್ಚು ಆಕರ್ಷಕ ಆಯ್ಕೆಯಾಗಿ ತೋರುವುದು. ಪುರುಷರಿಗಿಂತ ಮಹಿಳಾ ಶಿಕ್ಷಣವು ಕುಟುಂಬದ ಕಲ್ಯಾಣದ ಮೇಲೆ ಅಪಾರ ಪ್ರಭಾವ ಬೀರುವುದು. ಜನಸಂಖ್ಯಾಶಾಸ್ತ್ರ, ಅರ್ಥಶಾಸ್ತ್ರ, ವೈದ್ಯಕೀಯ ವಿಜ್ಞಾನ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳು ತಾಯಂದಿರ ಶಿಕ್ಷಣ ಮತ್ತು ಶಿಶುಗಳ ಮರಣ ಉಳಿತಾಯ ನಡುವಿನ ನಿಕಟ ಸಂಬಂಧವನ್ನು ಗುರುತಿಸಿದೆ. ಈ ಸಂಬಂಧವು ವಿಕಾಸಶೀಲ ದೇಶಗಳಲ್ಲಿ ಬಹಳ ಶಕ್ತಿಯುತವಾಗಿ ತೋರುತ್ತದೆ. ತಾಯಂದಿರ ಶಾಲಾ ಶಿಕ್ಷಣವು ಒಂದು ವರ್ಷ ಹೆಚ್ಚಿದರೆ ಅದು ಶಿಶು ಮರಣವನ್ನು ಶೇ. ೫ ರಿಂದ ೧೦ರಷ್ಟು ಕಡಿಮೆಗೊಳಿಸುವುದು. ಹೆಚ್ಚು ಶಿಕ್ಷಣ ಪಡೆದ ತಾಯಂದಿರು ಉತ್ತಮ ಶುಚಿತ್ವ, ಉತ್ತಮಗೊಂಡ ಪೌಷ್ಠಿಕಾಂಶಗಳು, ಕುಟುಂಬದ ಆಚರಣೆಗಳು, ಕುಟುಂಬದ ಆರೋಗ್ಯ ಕುರಿತು ಹೆಚ್ಚು ಪರಿಣಾಮಕಾರಿ ಪಾತ್ರವಹಿಸುವಿಕೆ ಸಾಧಿಸುವರು. ಶಿಕ್ಷಣವು ಆರೋಗ್ಯ ಪರಿಕರಗಳನ್ನು ಹೆಚ್ಚಾಗಿ ಬಳಸಲು ಉತ್ತೇಜಿಸುತ್ತ ತಾಯಿ ಮತ್ತು ಮಗುವಿನ ಆರೋಗ್ಯ ಉತ್ತಮವಾಗಿರುತ್ತದೆ. ನೈಜೀರಿಯಾದ ತಾಯಂದಿರಿಗೆ ಶಿಕ್ಷಣವು ಸ್ಥಳೀಯ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಚೆನ್ನಾಗಿ ಬಳಸುವುದನ್ನು ಕಲಿಸಿತು. ಕೊಳವೆ ನೀರು ಪೂರೈಕೆ ಮತ್ತು ನೀರು ಬಳಸುವ ವಿಧಾನವನ್ನು ಫಿಲಿಪೈನ್ಸನ ತಾಯಂದಿರಿಗೆ ಹೆಚ್ಚು ಶಿಕ್ಷಣದಿಂದ ಮಕ್ಕಳ ಆರೋಗ್ಯ ಸಂರಕ್ಷಣೆಯನ್ನು ಕಲಿಸಿದೆ. ಸಾಮಾನ್ಯವಾಗಿ ಶಿಕ್ಷಣ ಮನೆಯಲ್ಲಿ ಹೆಚ್ಚು ಪರಿಣಾಮಕಾರಿ ಪಾತ್ರ ನಿರ್ವಹಿಸುವಂತೆ ಅವಶ್ಯಕವಿರುವ ಜ್ಞಾನ ನೀಡುವುದು. ವಿವಿಧ ದೇಶಗಳಲ್ಲಿ ಮೂಡಿ ಬಂದಿರುವ ಶಿಕ್ಷಣದ ಅರಿವಿನ ಮಹತ್ವವನ್ನು ತಿಳಿಯುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

೧೩. **ಜಿನ್ ಡ್ರೇಜ್ ಮತ್ತು ಅಮರ್ತ್ಯಸೇನ್ (೧೯೯೯) ಭಾರತದ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅವಕಾಶ** ಎಂಬ ಪುಸ್ತಕದಲ್ಲಿ ಶಿಕ್ಷಣವು ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ. ಶ್ರೀಲಂಕಾದಲ್ಲಿ ಆರ್ಥಿಕ ಬೆಳವಣೆಗೆಗಿಂತ ಶಿಕ್ಷಣ ಸುಧಾರಣೆಯ ಮೂಲಕ ಜನರ ಜೀವನದ ಗುಣಮಟ್ಟವನ್ನು ಸುಧಾರಿಸಿದೆ. ಭಾರತದ ಮಟ್ಟಿಗೆ ಕೇರಳದಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ಕಂಡುಬಂದರೂ, ಅರ್ಥಿಕ ಸಾಧನೆಯು ಕಡಿಮೆ ಇದೆ. ಥೈಲೆಂಡ್ ಮತ್ತು ದಕ್ಷಿಣ ಕೊರಿಯಾ ಇತ್ತೀಚಿಗೆ ಚೀನಾ ದೇಶಗಳ ರೀತಿಯಲ್ಲಿ ತ್ವರಿತ ಅರ್ಥಿಕ ಸಾಧನೆಯಲ್ಲಿ ಮುಂದುವರಿದಿವೆ. ಕೇವಲ ಶಿಕ್ಷಣವಲ್ಲದೆ ಇತರೆ ಸಾಮಾಜಿಕ ಅಂಶಗಳು ಸಹ ಇಲ್ಲಿ ಮುಖ್ಯವಾಗುತ್ತವೆ. ಆದರಿಂದ ಕೇರಳದಂತೆ ಇತರ ರಾಜ್ಯಗಳು ಕೂಡ ಶಿಕ್ಷಣದಲ್ಲಿ ಮುಂದುವರಿಯಬೇಕೆನ್ನುವುದು ಅನಿಸಿಕೆಯಾಗಿದೆ.

೧೪. **ಶ್ರೀವಾಸ್ತವ (೧೯೯೯)** ಅವರು ಡಿ.ಪಿ.ಇ.ಪಿ ಕುರಿತಾಗಿ ನಡೆಸಿದ ಅಧ್ಯಯನದಂತೆ ಪ್ರಥಮ ಹಂತದಲ್ಲಿ ಅನುಷ್ಠಾನಗೊಳಿಸಿದ ೪೦ ಜಿಲ್ಲೆಗಳಲ್ಲಿ ಶೈಕ್ಷಣಿಕ ಮತ್ತು ಲಿಂಗಸಂಬಂಧಿಯಾದ ಶೈಕ್ಷಣಿಕ ಅಂತರಗಳು ಸ್ವಲ್ಪ ಕಡಿಮೆಯಾಗಿವೆ. ಈ ಯೋಜನೆಯು ಪ್ರಥಮ ಹಂತದಲ್ಲಿ ಅನುಷ್ಠಾನಗೊಂಡ ೪೦ ಜಿಲ್ಲೆಗಳ ಪೈಕಿ ೨೪ ಜಿಲ್ಲೆಗಳಲ್ಲಿ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಕಲಿಕೆ ಸಾಮರ್ಥ್ಯವು ಶೇ. ೩ಕ್ಕಿಂತ ಕಡಿಮೆಯಾಗಿದೆ. ಆದರೆ ೧೪ ಜಿಲ್ಲೆಗಳಲ್ಲಿನ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆ ಮತ್ತು ಕಲಿಕಾ ಸಾಮರ್ಥ್ಯಗಳು ಗಂಡುಮಕ್ಕಳಿಗಿಂತ ಬಹಳ ಕಡಿಮೆಯಾಗಿರುವುದು ವಿಪರ್ಯಾಸ ಸಂಗತಿಯಾಗಿದೆ. ಪ್ರಥಮವಾಗಿ ಈ ಯೋಜನೆಯು ಜಾರಿಗೆ ಬಂದ ಒಟ್ಟು ೪೦ ಜಿಲ್ಲೆಗಳಲ್ಲಿ ೨೫ ಜಿಲ್ಲೆಗಳಲ್ಲಿ ಶಾಲೆ ಬಿಡುವ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಮಾಣವು ಹೆಚ್ಚಾಗಿ ೫ ಜಿಲ್ಲೆಗಳಲ್ಲಿ ಸಮನಾಗಿ ಮತ್ತು ಉಳಿದಂತೆ ೧೦ ಜಿಲ್ಲೆಗಳಲ್ಲಿ ಕಡಿಮೆಯಾಗಿರುವುದು ಅಧ್ಯಯನಗಳಿಂದ ಧೃಡಪಟ್ಟಿದೆ. ಈ ೪೦ ಜಿಲ್ಲೆಗಳಲ್ಲಿ ೧೧ ಜಿಲ್ಲೆಗಳಲ್ಲಿ ಮಾತ್ರ ಮಧ್ಯದಲ್ಲಿಯೆ ಶಾಲೆ ಬಿಡುವ ಹೆಣ್ಣುಮಕ್ಕಳ ಪ್ರಮಾಣವು ಶೇ. ೫ ಅಥವಾ ಅದಕ್ಕಿಂತ ಹೆಚ್ಚಾಗಿರುವುದು ಅಧ್ಯಯನದಿಂದ ಗುರುತಿಸಲ್ಪಟ್ಟಿದೆ.

೧೫. **ಲೈಟನ್ ಜಿ.ಕೆ.** (೨೦೦೦) ಅವರು **ವಿಲ್ಡ್ರನ್ ವರ್ಕ್ ಆಂಡ್ ಎಜುಕೇಶನ್** ಇ.ಪಿ.ಡಬ್ಲ್ಯೂ ಅಗಸ್ಟ್ (೨೦೦೦) ಲೇಖನದಲ್ಲಿ ವಿಕೇಂದ್ರಿಕರಣ, ಲಿಂಗ ಸಮಾನತೆ, ಶಿಕ್ಷಣ, ಶಿಕ್ಷಕರ ಸಾಮರ್ಥ್ಯ, ಶಿಕ್ಷಣದ ಗುಣಮಟ್ಟ, ತರಗತಿಯ ಚಟುವಟಿಕೆಗಳ ಜೊತೆಗೆ ಹೆಣ್ಣುಮಕ್ಕಳಿಗೆ ಶಿಕ್ಷಣ ಒದಗಿಸುವುದು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಮೂಲಕವಾಗಿ ಮಹಿಳೆಯರ ಸಬಲೀಕರಣ ಸಾಧಿಸುವುದು. ಲೋಕ ಜಂಬಿಸ್ ಕಾರ್ಯಕ್ರಮದ ಮೂಲಕ ಹೆಣ್ಣುಮಕ್ಕಳ ಶಾಲಾ ಶಿಕ್ಷಣವನ್ನು ವಿಸ್ತೃತಪಡಿಸಲು ಜಾರಿಗೆ ಬರುತ್ತದೆ. ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಪರೋಕ್ಷವಾಗಿ ಸಾಮಾಜಿಕ ತಾರತಮ್ಯ ಕಂಡುಬರುತ್ತದೆ. ಈ ಯೋಜನೆಯಲ್ಲಿ ಹಿಂದುಳಿದ ಹೆಣ್ಣುಮಕ್ಕಳಿಗೆ ನಿಗದಿತ ಪ್ರಮಾಣದ ಮೀಸಲಾತಿ ಇಲ್ಲದಿರುವುದರಿಂದ ಸಾಮಾಜಿಕವಾಗಿ ಈ ಯೋಜನೆಯಲ್ಲಿ ಮೇಲುಜಾತಿಯ ಹೆಣ್ಣುಮಕ್ಕಳು ಇದರ ಪ್ರಯೋಜನ ಪಡೆಯುತ್ತಾರೆ. ಹೀಗಾಗಿ

ಕಾರ್ಯಕ್ರಮದ ಅನುಷ್ಠಾನದಿಂದ ಹಿಂದುಳಿದ ಜಾತಿಯ ಹೆಣ್ಣುಮಕ್ಕಳಿಗೆ ಮಿಸಲಾತಿ ಸೌಲಭ್ಯ ಕಲ್ಪಿಸಿದರೆ ಈ ಯೋಜನೆಯ ಉದ್ದೇಶ ಸಫಲವಾಗುತ್ತದೆ ಎಂದು ಲೇಖಕರು ಸ್ಪಷ್ಟಪಡಿಸಿದ್ದಾರೆ.

೧೬. **ಕಾಮತ್ ಜ್ಯೋತ್ಸ್ನ (೨೦೦೦)** ಅವರು **ಮಹಿಳೆಯರು ಒಂದು ಅಧ್ಯಯನ** ಎಂಬ ಕೃತಿಯಲ್ಲಿ ಈ ಶತಮಾನದ ಕೊನೆಯಲ್ಲಿ ಭಾರತೀಯ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ಗಂಡಸರಿಗೆ ಸರಿಸಮಾನ ಶಿಕ್ಷಣ ಪಡೆದು ವಿವಿಧ ರಂಗಗಳಲ್ಲಿ ಮುಂದುವರೆಯುತ್ತಿರುವುದನ್ನು ಅಖಂಡ ದೇಶದ ಪ್ರಗತಿಗೆ ಹೋಲಿಸಿದಾಗ ಪ್ರಗತಿಪರ ಮಹಿಳೆಯರ ಸಂಖ್ಯೆ ಅತ್ಯಲ್ಪವೆಂದೆ ಹೇಳಬಹುದಾಗಿದೆ. ಇತ್ತೀಚಿನ ಸಮೀಕ್ಷೆಯಲ್ಲಿ ಪತಿಯ ಮರಣದಿಂದ ನಿರ್ಗತಿಕರಾಗಿರುವ ಹೆಣ್ಣುಮಕ್ಕಳ ಸಂಖ್ಯೆ ವರ್ಷಕ್ಕೆ ೧೦ ಲಕ್ಷದಷ್ಟಿದೆ. ಆಪತ್‌ಕಾಲಕ್ಕೆ ಮಾಡಿಕೊಳ್ಳುವಂತಹ ಯಾವ ಶಿಕ್ಷಣವೂ ಹುಡುಗಿಯರಿಗೆ ದೊರೆಯು ವಂತಿಲ್ಲ. ಸರಕಾರವಾದರೂ ಎಲ್ಲರಿಗೂ ಎಲ್ಲ ಕಾಲಕ್ಕೆ ಬಯಸುವ ನೌಕರಿಗಳನ್ನು ಕೊಡಮಾಡುವ ಸ್ಥಿತಿಯಲ್ಲಿ ಇಲ್ಲ. ಶಿಕ್ಷಣದೊಂದಿಗೆ ಶ್ರಮ, ಗೌರವದ ಕಲ್ಪನೆ ಸೇರ್ಪಡೆಯಾಗದೆ, ದೈಹಿಕಶ್ರಮದಿಂದ ಜೀವಿಸುವ ವರ್ಗದಂತೆ ಸ್ತ್ರೀಯರು ಅಕ್ಷರಭ್ಯಾಸ ದೊರೆತೊಡನೆ ಕೌಟುಂಬಿಕ ವೃತ್ತಿಗಳನ್ನು ಕೈಗೊಳ್ಳುವುದನ್ನು ಕೀಳಾಗಿ ಭಾವಿಸುತ್ತಾರೆ. ಸರ್ಕಾರಿ ನೌಕರಿಯೊಂದೆ ಸಮಾಜದಲ್ಲಿ ಮನ್ನಣೆ ತರುತ್ತದೆಂದು ನಂಬುವವರೆ ಅಲ್ಲದೆ ನಗರ ಮತ್ತು ಗ್ರಾಮಗಳ ಜೀವನದಲ್ಲಿ ಅಪಾರ ತಾರತಮ್ಯವಿದ್ದು ಈಗಲೂ ಅದು ಹೆಚ್ಚುತ್ತಲೆ ಇದೆ. ಆದರೆ ನಗರ ಮಹಿಳೆಯರ ವೃತ್ತಿ ಪ್ರವೃತ್ತಿಗಳ ಅವಕಾಶ ಹೊಂದುತ್ತಿದ್ದರೆ, ಗ್ರಾಮಸ್ಥ ಮಹಿಳೆಯರಿಗೆ ಅಂತಹ ಅವಕಾಶ ಇಲ್ಲ. ದೇಶದ ಲಕ್ಷಗಟ್ಟಲೆ ಗ್ರಾಮೀಣ ಮಹಿಳೆಯರ ಸ್ಥಾನಮಾನ ಮತ್ತು ಶೈಕ್ಷಣಿಕೆ ಪ್ರಗತಿ ಅತ್ಯಂತ ನಿರಾಶಾದಾಯಕವಾಗಿಯೇ ಉಳಿದಿದೆ. ಇಂತಹ ಶಿಕ್ಷಣದ ಹಿನ್ನಡೆಯನ್ನು ಸರಿದೂಗಿಸುವ ಪ್ರಯತ್ನ ವಿವಿಧ ವಲಯಗಳಿಂದ ಆಗಬೇಕಾದ ಅಗತ್ಯವಿದೆ.

೧೭. **ಎನ್.ಎಂ. ಕೃಷ್ಣ (೨೦೦೦) "ಮಹಿಳೆಯರು ಮೊದಲು ಅಕ್ಷರಸ್ಥರಾಗಬೇಕು"** ಎಂಬ ಶೀರ್ಷಿಕೆಯಲ್ಲಿ ಈ ರೀತಿಯಾಗಿ ಮಹಿಳೆಯರ ಶಿಕ್ಷಣ ಕಾರ್ಯಕ್ರಮದ ಬಗ್ಗೆ ಹೇಳಲಾಗಿದೆ. ಮಹಿಳೆಯರ ಅಭಿವೃದ್ಧಿ ಹಿತರಕ್ಷಣೆಗಾಗಿ ಹಲವಾರು ಕಾನೂನುಗಳು ಇದ್ದರೂ ಭ್ರಷ್ಟರಿಂದ ಎಲ್ಲ ನಿಸ್ಸತ್ವವಾಗಿವೆ. ಅಲ್ಲಲ್ಲಿ ತಲೆ ಎತ್ತಿರುವ ಮಹಿಳಾ ಸಂಘ ಸಂಸ್ಥೆಗಳು ಪ್ರಭಾವಿಗಳು ಕೈಗೆ ಸಿಲುಕಿ ತ್ರಿಶಂಕು ಪರಿಸ್ಥಿತಿಯಲ್ಲಿವೆ. ಮಹಿಳೆ ಮೊದಲು ಅಕ್ಷರಸ್ಥಳಾಗಬೇಕು. ತದನಂತರ ಸಂಘಟಿತಳಾಗಬೇಕು. ರಾಜ್ಯದೆಲ್ಲೆಡೆ ಮಹಿಳಾ ಸಂಘಟನೆಗಳು ಹೆಚ್ಚಾಗಿ ಸ್ಥಾಪನೆಯಾಗಬೇಕು. ಅಕ್ಷರಸ್ಥರು ಅನಕ್ಷರಸ್ಥರನ್ನೆಲ್ಲ ಒಂದುಗೂಡಿಸಿ ಬಲವಾದ ಸಂಘಟನೆಯ ಮುಖಾಂತರ ಅವರಿಗೆ ಮಾರ್ಗದರ್ಶನ ಮಾಡಬೇಕು. ಈ ನಿಟ್ಟನಲ್ಲಿ ಸರ್ಕಾರವು ಸಹ ಹೆಚ್ಚು ಕಾಳಜಿ ವಹಿಸಬೇಕು. ನ್ಯಾಯಾಂಗ ಚುರುಕಾಗಿ ಕೆಲಸ ಮಾಡಬೇಕು. ಮಹಿಳೆಯರ ಮೇಲೆ ನಡೆಯಬಹುದಾದ ದೌರ್ಜನ್ಯ ಶೋಷಣೆ, ಅತ್ಯಾಚಾರ, ಆರೋಪಿಗಳಿಗೆ ಕಠಿಣ ಶಿಕ್ಷೆ, ದಂಡ ವಿಧಿಸಬೇಕು ಎಂದು ಮಹಿಳೆಯರ ಹಕ್ಕು ಮತ್ತು ರಕ್ಷಣೆಯ ಬಗೆಯಲ್ಲಿ ಸರ್ಕಾರ ಕ್ರಮ ರೂಪಿಸಬೇಕು ಎಂಬ ಅಂಶ ಇರುತ್ತದೆಂದು ಹೇಳಲಾಗಿದೆ.

೧೮. **೨೦೦೧ರ ಸೆನ್‌ಸಾರ್ ರಿಪೋರ್ಟ್‌ ಅನ್ವಯ:** ಸಮಾನತೆಯ ದೃಷ್ಟಿಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೋಲಿಕೆ ಮಾಡಿದಾಗ ನಗರ ಭಾಗಕ್ಕಿಂತ ಗ್ರಾಮೀಣ ಭಾಗದಲ್ಲಿ ಮಹಿಳೆಯರ ಶಿಕ್ಷಣ ಮಟ್ಟವು ಕಡಿಮೆ ಕಂಡುಬಂದು, ಇದನ್ನು ಸರಿದೂಗಿಸಲು ಹಲವು ಸರ್ಕಾರಿ ಯೋಜನೆಗಳನ್ನು ಹಾಕಿಕೊಂಡು ಉಚಿತ ಶಿಕ್ಷಣ ಮತ್ತು ವಿಶೇಷ ಸೌಲಭ್ಯಗಳಾದ "ಸರ್ವಶಿಕ್ಷಣ ಅಭಿಯಾನ, ನಲಿ–ಕಲಿ, ಶಾಲಾ ಕಟ್ಟಡಗಳ ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಉಪಗ್ರಹ ಪ್ರಸಾರ ಶಿಕ್ಷಣ, ವಿಧ್ಯಾರ್ಥಿನಿಯರಿಗೆ ಉಚಿತ ಸೈಕಲ್ ವಿತರಣೆ ಮತ್ತು ಶಿಷ್ಯ ವೇತನಗಳನ್ನು ಗ್ರಾಮೀಣ ಭಾಗದಲ್ಲಿ ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಶಿಕ್ಷಣ ಇಲಾಖೆ ಜಾರಿಗೆ ತಂದಿದೆ. ೨೦೦೧ರ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ ಪುರುಷರ ಸಂಖ್ಯೆ ಶೇ. ೭೬.೧೦ ರಷ್ಟಿದ್ದರೆ, ಮಹಿಳೆಯರ ಸಂಖ್ಯೆಯೆ ಶೇ. ೫೬.೮೭ರಷ್ಟಿತ್ತು. ಗ್ರಾಮೀಣ ಭಾಗವನ್ನು ತೆಗೆದುಕೊಂಡರೆ ಪುರುಷರ ಸಂಖ್ಯೆ ಶೇ. ೭೦.೪೫ರಷ್ಟು ಕಂಡುಬಂದರೆ, ಮಹಿಳೆಯರ ಸಂಖ್ಯೆ ಶೇ. ೪೮.೦೧ರಷ್ಟು ಕಂಡುಬಂದು, ನಗರ ಪ್ರದೇಶದಲ್ಲಿ ಸಾಕ್ಷರತರ ಸಂಖ್ಯೆ ೮೬.೬೬ರಷ್ಟು ಪುರುಷರು ಸಾಕ್ಷರರಾಗಿದ್ದರೆ, ಮಹಿಳೆಯರ ಸಂಖ್ಯೆ ಶೇ. ೭೪.೧೨ರಷ್ಟು ಕಂಡುಬಂದಿದೆ. ಈ ರೀತಿ ಹೋಲಿಸಿದಾಗ ನಗರಕ್ಕಿಂತ ಗ್ರಾಮೀಣ ಭಾಗದ ಮಹಿಳೆಯರು ಹಿಂದೆ ಬಿದ್ದಿದ್ದಾರೆ. ಆದ್ದರಿಂದ ಶಿಕ್ಷಣ ಇಲಾಖೆ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಯೋಜನೆಗಳನ್ನು ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಣದ ಬಗ್ಗೆ ನೀಡಿರುವ ವರದಿಗಳ ಅನ್ವಯ ಯೋಜನೆಗಳನ್ನು ಜಾರಿಗೆ ತರುತ್ತಿದ್ದಾರೆ.

೧೯. **ಅಗರ್‌ವಾಲ್** (೨೦೦೧) ಅವರು **ಆ್ಯನ್ ಅಸೆಸ್‌ಮೆಂಟ್ ಆಫ್ ಟ್ರೆಂಡ್ ಇನ್ ಆಕ್ಸೆಸ್ ಆಂಡ್ ರಿಟೆಶ್ಷನ್** ಎಂಬ ಪುಸ್ತಕದಲ್ಲಿ ಒಟ್ಟು ಭಾರತದ ಜನಸಂಖ್ಯೆಯಲ್ಲಿ ಶೇ. ೧೬.೨೧ರಷ್ಟು ದಲಿತರಿದ್ದು, ಭಾರತದಲ್ಲಿ ಇಷ್ಟು ದಲಿತರಲ್ಲಿ ಶೇ. ೪೧.೫ರಷ್ಟು ಮಾತ್ರ ಸಾಕ್ಷರರಾಗಿರುವುದು ಹಿಂದುಳಿದವರ ಶೈಕ್ಷಣಿಕ ಸ್ಥಿತಿಗತಿಯನ್ನು ಸೂಚಿಸುತ್ತದೆ. ಕರ್ನಾಟಕದಲ್ಲಿಯ ಶೇ. ೪೭.೩ರಷ್ಟಿರುವ ದಲಿತರ ಸಾಕ್ಷರತಾ ಪ್ರಮಾಣವು ಭಾರತದ ಹಿಂದುಳಿದಿರುವವರ ಸಾಕ್ಷರತಾ ಪ್ರಮಾಣವನ್ನು ಲಿಂಗವಾರು ನೋಡಿದರೆ ಶೇ. ೫೪.೭೦ರಷ್ಟು ಪುರುಷರು ಮತ್ತು ಶೇ. ೩೫.೬ರಷ್ಟು ಮಹಿಳೆಯರು ಸಾಕ್ಷರರಾಗಿರುವುದು ಕಂಡುಬಂದಿದೆ. ನಿರ್ದಿಷ್ಟವಾಗಿ ೬ರಿಂದ ೧೪ ವಯೋಮಾನದ ಶೇ. ೬೭.೫ರಷ್ಟು ಮಕ್ಕಳು ಮಾತ್ರ ಔಪಚಾರಿಕವಾಗಿ ಶಾಲೆಗೆ ದಾಖಲಿಸಿದ್ದಾರೆ. ಆದರೆ ಉಳಿದ ಶೇ. ೩೭ರಷ್ಟು ಹಿಂದುಳಿದ ಮಕ್ಕಳು ಶಾಲೆಗೆ ದಾಖಲಾಗದೆ ಮಧ್ಯದಲ್ಲಿಯೇ ಶಾಲೆ ಬಿಡುತ್ತಾರೆ. ಶಾಲೆಗೆ ದಾಖಲಾದ ಮತ್ತು ಮಧ್ಯದಲ್ಲಿಯೇ ಶಾಲೆಬಿಡುವ ೬ರಿಂದ ೧೪ ವಯೋಮಾನದ ಹಿಂದುಳಿದ ಮಕ್ಕಳಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೆ ಜಾಸ್ತಿಯಾಗಿರುವುದು ಆತಂಕದ ವಿಷಯವಾಗಿದೆ ಎಂದಿದ್ದಾರೆ.

೨೦. **ಚಂದ್ರಶೇಖರ್ ಸಿ.ಪಿ. (೨೦೦೨) ಅವರ ವಿಫಲಗೊಂಡ ಮಾರುಕಟ್ಟೆ ಭಾರತದಲ್ಲಿ ನವ ಉದಾರೀಕರಣದ ಆರ್ಥಿಕ ಸುಧಾರಣೆಗಳು** ಎಂಬ ಪುಸ್ತಕದಲ್ಲಿ ಗ್ರಾಮೀಣ ಭಾಗದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭೂ ಒಡೆತನ ಕುಟುಂಬ, ಗಾತ್ರ ಜಾತಿ, ಲಿಂಗ, ಶಿಕ್ಷಣಕ್ಕೆ ಸಾಕ್ಷರತೆ, ವೃತ್ತಿ ಇತ್ಯಾದಿಗಳು ಬಡತನದ ಮೇಲೆ ಪರಿಣಾಮ ಬೀರುತ್ತವೆ. ಯಾವುದೇ ರೀತಿಯ ಅಸ್ತಿಗಳು ಇಲ್ಲದೆ ಶಿಕ್ಷಣವಿಲ್ಲದೆ ಕೂಲಿ ಅಧಾರಿತ ಉದ್ಯೋಗಗಳಲ್ಲಿ ತೊಡಗಿರುವುದನ್ನು ಗಮನಿಸಿದರೆ ಭಾರತದಲ್ಲಿ ಬಡತನ ಎಷ್ಟಿದೆ ಎಂಬುದು ತಿಳಿದುಬರುತ್ತದೆ. ಸಮಾಜದ ಕೆಲವು ವರ್ಗಗಳಲ್ಲಿ ಬಡತನದ ಪ್ರಮಾಣ ಹೆಚ್ಚು. ಅಂತಹ ವರ್ಗಗಳೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳು. ಸಂಪನ್ಮೂಲ ಅಥವಾ ಆಸ್ತಿಯಲ್ಲಿನ ಅಸಮಾನತೆ ಇದು ಮಹಿಳೆಯರ ಮತ್ತು ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು.

೨೧. **ಜಾರ್ಜ್ (೨೦೦೨) ಅವರ "ರೀಡರ್ ಇನ್ ಎಜುಕೇಶನ್ ನ್ಯಾಷನಲ್ ಕಾಪಿಲ್ ಆಪ್ ಎಜುಕೇಶನ್ ರಿಸರ್ಚಿಟ್ರೈನಿಂಗ್(NCERT) ಡೆವಲಪ್‌ಮೆಂಟ್ ಪ್ರಾಪರ್ಟಿ ಆಫ್ ಇಂಡಿಯನ್ ಎಜುಕೇಶನ್"** ತಮ್ಮ ಪುಸ್ತಕದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹುಡ್ ಡಿಶ್ ಪ್ಯಾಚ್ ವರದಿ ಮತ್ತು ಬ್ರಿಟಿಷರು ಭಾರತಕ್ಕೆ ಬಂದ ನಂತರದ ದಿನದಿಂದಲು ಸಹ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ರೀತಿಯಲ್ಲಿ ಶಿಕ್ಷಣಕ್ಕೆ ಹಣಕಾಸಿನ ಸಹಾಯ ಯಾವ ಯಾವ ಮೂಲದಿಂದ ಶಿಕ್ಷಣಕ್ಕೆ ಹರಿದು ಬರುತ್ತದೆ ಎಂಬುದನ್ನು ಪ್ರಮುಖವಾಗಿ ಈ ಕೆಳಕಂಡಂತಿವೆ. ರಾಜ್ಯ ಸರ್ಕಾರಗಳು, ವಿದ್ಯಾರ್ಥಿಗಳು ಪಾವತಿಸುವ ಶುಲ್ಕ, ಕೇಂದ್ರ ಸರ್ಕಾರದಿಂದ ಬರುವ ಹಣ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಂದ ಬರುವ ಹಣ, ಗ್ರಾಮೀಣ ಪ್ರದೇಶಗಳಿಗೆ ಜಿಲ್ಲಾ ಬೋರ್ಡ್‌ನಿಂದ ಬರುವ ಹಣ, ಸಂಘ ಸಂಸ್ಥೆಗಳಿಂದ ಬರುವ ಹಣ, ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳಿಂದ ಬರುವ ಹಣ. ಪ್ರಾಥಮಿಕ ಶಿಕ್ಷಣವು ಪಂಚವಾರ್ಷಿಕ ಯೋಜನೆಯಲ್ಲಿ ಯಾವ ರೀತಿ ಅಭಿವೃದ್ಧಿ ಹೊಂದುತ್ತಿವೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಧನ ವಿನಿಯೋಗವು ಈ ರೀತಿ ವಿನಿಯೋಗವಾಗಿದೆ ಎಂಬುದನ್ನು ತಿಳಿಸಿದ್ದಾರೆ. ಶೇ. ೮೫ ವಿನಿಯೋಗಿಸಿ ಶೇ. ೫೬ ಅಭಿವೃದ್ಧಿ ಹೊಂದಿತು. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ. ೯೭ರಷ್ಟು ವಿನಿಯೋಗಿಸಿ ಶೇ. ೮೯ರಷ್ಟು ಪ್ರಾಥಮಿಕ ಶಿಕ್ಷಣ ವಲಯ ಅಭಿವೃದ್ಧಿ ಹೊಂದಿದೆ ಎಂದಿದ್ದಾರೆ. (ಸಂಗ್ರಹಣೆ ಐ.ಐ.ಎಂ.ಬಿ ಲೈಬ್ರರಿ)

೨೨. **ಕೃಷ್ಣಪ್ಪ ಎಸ್. (೨೦೦೨) ಅವರ ಆಧುನಿಕ ಶಾಲಾ ವ್ಯವಸ್ಥೆ** ಎಂಬ ಪುಸ್ತಕದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ತರುವ ಅನೇಕ ಯೋಜನೆಗಳನ್ನು ರೂಪಿಸುವುದರಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಈ ಯೋಜನೆಗಳು ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ ಇವರ ಕುಟುಂಬವು ಎದುರಿಸುವಂತಹ ಪ್ರಮುಖ ನಿರ್ಬಂಧಗಳನ್ನು ನೇರವಾಗಿ ಕೈಗೆತ್ತಿಕೊಳ್ಳುತ್ತಿದೆ. ಈ ವ್ಯವಸ್ಥೆಯ ಯೋಜನೆಗಳೆಂದರೆ ಚಿಣ್ಣರ ಅಂಗಳ, ರಾತ್ರಿ ಶಾಲೆಗಳು,

ಕೊಳೆಗೇರಿ ನಿವಾಸಿಗಳ ಮಕ್ಕಳಿಗಾಗಿ ಬೀದಿಶಾಲೆಗಳು ಹೆಣ್ಣುಮಕ್ಕಳಿಗಾಗಿ ಕಿಶೋರಿ ಕೇಂದ್ರಗಳು, ಬಾ ಬಾಲೆ ಶಾಲೆಗೆ ಯೋಜನೆಗಳು ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಅನೇಕ ಮಕ್ಕಳನ್ನು ಪ್ರಾಥಮಿಕ ಮುಖ್ಯವಾಹಿನಿಗೆ ತರುವಲ್ಲಿ ಸಹಾಯಕವಾಗಿದೆ.

೨೩. (ಯರ್ರಿಸ್ವಾಮಿ (೨೦೦೨) ಅವರು **ಗ್ರಾಮ ಪಂಚಾಯಿತಿ ಮತ್ತು ಸಬಲೀಕರಣ** ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ) ಮಾನವನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭ್ಯುದಯದಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾಗಿದೆ. ಮೂಲಭೂತ ಶಿಕ್ಷಣವನ್ನು ಒದಗಿಸುವುದು ಇಂದು ಸಾಂವಿಧಾನಿಕ ಹೊಣೆಯಾಗಿದೆ. ಸಂವಿಧಾನದ ೪೫ ವಿಧಿಯನ್ವಯ ೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಕೊಡಬೇಕೆಂದು ಹೇಳಿದ್ದಾರೆ. ಇಂದು ಶಿಕ್ಷಣವು ಮಾನವನ ಅಭಿವೃದ್ಧಿಯ ಮುಖ್ಯ ಸೂಚಕವಾಗಿದೆ. ಶಿಕ್ಷಣ ಅಭಿವೃದ್ಧಿಯ ದೃಷ್ಟಿಯಿಂದ ಸೀಮಿತ ಜವಾಬ್ದಾರಿಗಳನ್ನು ಪಂಚಾಯತ್‌ರಾಜ್‌ಗಳಿಗೆ ವಹಿಸಲಾಗಿದೆ. ಆದ್ದರಿಂದ ಶಿಕ್ಷಣ ಸುಧಾರಣೆಯಲ್ಲಿ ಪಂಚಾಯಿತಿ ಸಂಸ್ಥೆಗಳ ಪಾತ್ರ ಬಹಳ ಅಗತ್ಯವಾಗಿದೆ. ಅದರಲ್ಲೂ ಗ್ರಾಮೀಣ ಶಿಕ್ಷಣ ಸುಧಾರಣೆಯಲ್ಲಿ ಈ ಸಂಸ್ಥೆಗಳ ಪಾತ್ರ ಇನ್ನೂ ಹೆಚ್ಚಿದೆ. ಕಾರಣ ಗ್ರಾಮೀಣ ಸಾಕ್ಷರತೆಯನ್ನು ನಗರ ಸಾಕ್ಷರತೆಗೆ ಹೋಲಿಸಿದರೆ ಬಹಳ ಅಂತರವನ್ನು ಕಾಣುತ್ತೇವೆ. ಈ ಅಂತರಕ್ಕೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ದಾಖಲಾತಿ ಶಾಲೆ ಬಿಟ್ಟವರ ಪ್ರಮಾಣ ಇವೆಲ್ಲವೂ ಕಾರಣವಾಗಿವೆ. ಆದ್ದರಿಂದ ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಅನುಷ್ಠಾನಗೊಳಿಸುವುದರೊಂದಿಗೆ ಹೆಣ್ಣು ಮಕ್ಕಳಿಗೆ ಸಮರ್ಥ ಅಕ್ಷರ ಕಲಿಕೆಯನ್ನು ಮೂಡಿಸುವ ಅಗತ್ಯವಿದೆ ಎಂದು ತಿಳಿದು ಬಂದಿದೆ.

೨೪. **ಕುಮಾರ** (೨೦೦೪) ಅವರು ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ **ಪ್ರಾಥಮಿಕ ಶಿಕ್ಷಣ: ಒಂದು ಚರ್ಚೆ** ಎಂಬ ಪುಸ್ತಕದಲ್ಲಿ ನಾವು ಕಳೆದ ಶತಮಾನವನ್ನು ಶೇ.೫ರ ಸಾಕ್ಷರತೆಯಿಂದ ಪ್ರಾರಂಭಿಸಿದೆವು ಎಂಬುದನ್ನು ಮರೆಯಲಾಗದು. ಶತಮಾನದ ಮಧ್ಯದ ವೇಳೆಗೆ ಶೇ. ೨೦ರಷ್ಟು ಸಾಧನೆ ಕಂಡೆವು. ೧೯೯೧ರ ಜನಗಣತಿಯಂತೆ ಸಾಕ್ಷರತೆ ಪ್ರಮಾಣವು ೫೧.೨ರಷ್ಟಿದೆ. ಆದರೆ ನಮ್ಮ ನೀತಿ ನಿರೂಪಣೆಯಲ್ಲಿ ಕಂಡುಬಂದ ಉತ್ಸಾಹ ಅದನ್ನು ಜಾರಿಗೆ ತರುವಲ್ಲಿ ಇರಲಿಲ್ಲ. ರಾಜಕೀಯ ಇಚ್ಛಾಶಕ್ತಿಯು ಸಹ ಮುಖ್ಯ ಸಾರ್ವತ್ರೀಕರಣಕ್ಕೆ. ಪ್ರತಿಸಲ ಇಂದೊಂದು ಗಡುವನ್ನು ನಾವು ವಿಸ್ತರಿಸುತ್ತಾ ಬಂದೆವು. ಶಿಕ್ಷಣಕ್ಕೆ ರಾಷ್ಟ್ರಮಟ್ಟದಲ್ಲಿ ನಾವು ಖರ್ಚು ಮಾಡುತ್ತಿದ್ದ ಹಣ ೧.೧ ಬಿಲಿಯನ್ ರೂಪಾಯಿಗಳಿಂದ(೧೯೫೦-೫೧) ೪೧೨ ಬಿಲಿಯನ್ (೧೯೯೭-೯೮) ಏರಿದೆ. ಆದರೆ ೩೬೦ ಪಟ್ಟು ಹೆಚ್ಚಾಗಿದೆ. ಇಂದು ಪ್ರಮುಖ ಅಂಶವೆಂದರೆ ಇಷ್ಟು ದೊಡ್ಡ ಪ್ರಮಾಣದ ಬಂಡವಾಳ ಹೆಚ್ಚಳವನ್ನು ನಾವು ೧೯೫೦-೫೧ರ ಸಮಯದಲ್ಲಿ ರೂಪಾಯಿಯ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ೧೯೯೭-೯೮ ರೂಪಾಯಿ ಮೌಲ್ಯದ ಹಿನ್ನೆಲೆಯಲ್ಲಿ ಲೆಕ್ಕ ಹಾಕಿದಾಗ ಒಟ್ಟಾರೆ ಹೆಚ್ಚಳ ಕೇವಲ ೫.೮ ಮಾತ್ರ ಆಗುತ್ತದೆ. ಇಷ್ಟಿದ್ದರೂ ಉದ್ದೇಶಿತ ಗುರಿಗಳನ್ನು ತಲುಪಲು ಸಾಧ್ಯವಾಗುತ್ತಿಲ್ಲವೆಂದು ತಿಳಿಯಬಹುದು.

೨೫. ಕುಮಾರ್ ಬಿ.ಆರ್. (೨೦೦೪) ಮಕ್ಕಳ ಅಂತರಿಕ ನಿರಕ್ಷರತೆ ಎಂಬ ಪಿಎಚ್.ಡಿ ಪ್ರಬಂಧದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. ರಾಜ್ಯದಲ್ಲಿ ಇನ್ನೂ ೬.೬೬ ಲಕ್ಷ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗಿರುವುದು ಗರ ಬಡಿಸುವ ಸಂಗತಿ. ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಪ್ರಮಾಣದಲ್ಲಿ ಗಣನೀಯ ಇಳಿಮುಖವಾಗಿರುವುದು ಕೊಂಚ ನೆಮ್ಮದಿಯ ವಿಚಾರ. ಕರ್ನಾಟಕದ ಈಶಾನ್ಯ ಜಿಲ್ಲೆಗಳಲ್ಲಿಯೇ ಈಗಲೂ ಇಂಥ ಮಕ್ಕಳ ಸಂಖ್ಯೆ ಜಾಸ್ತಿ ಇದೆ.(ಅರ್ಧಕ್ಕಿಂತ ಹೆಚ್ಚು) ಬಡತನ, ಅಜ್ಞಾನ ನಿಕಟ ಪರಿಸರದಲ್ಲಿ ಶಿಕ್ಷಣದ ಸವಲತ್ತು ಇಲ್ಲದಿರುವುದು ಮುಂತಾದ ಕಾರಣಗಳಿಂದಾಗಿ ಈ ಮಕ್ಕಳು ಕಡ್ಡಾಯ ಶಿಕ್ಷಣದಿಂದ ವಂಚಿತರಾಗಿದ್ದಾರೆ, ಹಾಗೆ ನೋಡಿದರೆ ಕಳೆದ ವರ್ಷದವರೆಗೆ ಈ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ದಿಸೆಯಲ್ಲಿ ಹೇಳಿಕೊಳ್ಳುವಂಥ ಪ್ರಗತಿ ಆಗಿರಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬಹುಪಾಲು ಪಾಲಕರು ತಮ್ಮ ಮಕ್ಕಳನ್ನು ದನಗಾಹಿಗಳಾಗಿಯೇ, ಕೂಲಿ ಮಾಡಿಸಿಕೊಂಡು ಬೆಳಿಸಿಬಿಡುತ್ತಾರೆ. ಇದು ಕೇವಲ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಲ್ಲ. ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿಯೂ ಅನೇಕ ಗ್ಯಾರೇಜ್‌ಗಳಲ್ಲಿ ಪುಟ್ಟ ಮಕ್ಕಳು ಮೆಕ್ಯಾನಿಕ್‌ಗಳಾಗಿ, ಮತ್ತು ಹೆಣ್ಣುಮಕ್ಕಳು ಶ್ರೀಮಂತರ ಮನೆಗಳಲ್ಲಿ ಮನೆಕೆಲಸ ಮಾಡುವುದು ಈಗಲೂ ಸಾಮಾನ್ಯ ದೃಶ್ಯ. ಬಾಲಕಾರ್ಮಿಕ ಪದ್ಧತಿಯನ್ನು ನಿಲ್ಲಿಸಲು ಸರ್ಕಾರ ಕೈಗೊಂಡ ಅನೇಕ ಯೋಜನೆಗಳು ಮಕ್ಕಳ ಬಡತನ, ಸಮಸ್ಯೆಯಿಂದಾಗಿಯೇ ಸಫಲವಾಗಿಲ್ಲ ಆದ್ದರಿಂದ ಮಕ್ಕಳ ಬದುಕಿನ ಬಗ್ಗೆ ಸರ್ಕಾರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು

೨೬. ಶಾಕುಂತಲಾ ಸಿ. ಶೆಟ್ರ ಮತ್ತು ಗಣಪತಿ ನಾಯಕ್ (೨೦೦೪) ಅವರ **ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ** ಲೇಖನದಲ್ಲಿ ಮಹಿಳಾ ಶಿಕ್ಷಣದ ಮಹತ್ವದ ಬಗ್ಗೆ ಯಾವುದೇ ರಾಷ್ಟ್ರವು ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಸಾಮರ್ಥ್ಯ ಮತ್ತು ಕೌಶಲ್ಯವನ್ನು ಬಳಸಿಕೊಳ್ಳುವಲ್ಲಿ ವಿಫಲವಾದಲ್ಲಿ ಅಭಿವೃದ್ಧಿ ಹೊಂದುವುದಿಲ್ಲ. ಭಾರತದಲ್ಲಿ ಒಟ್ಟು ಜನಸಂಖ್ಯೆಯ ಳಲಳಿರಷ್ಟಿರುವ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿದ್ಯಾವಂತರನ್ನಾಗಿಸಲು ಸರ್ಕಾರಗಳು ಬದ್ಧವಾಗಿವೆ. ಏಷ್ಯಾದಲ್ಲಿಯೆ ಭಾರತದ ಮಹಿಳಾ ಸಾಕ್ಷರತೆಯು ಅತ್ಯಂತ ಕಡಿಮೆ ಇದೆ. ಹೆಣ್ಣುಮಕ್ಕಳ ಶಿಕ್ಷಣದ ಕಾರ್ಯತಂತ್ರ(೨೦೦೨) ತಿಳಿಸುವುದೆನೆಂದರೆ "ಹೆಣ್ಣುಮಕ್ಕಳ ಶಿಕ್ಷಣದ ಮೇಲಿನ ಧನ ವಿನಿಯೋಗವು ವ್ಯಕ್ತಿ ಕುಟುಂಬಗಳನ್ನು ಒಳಗೊಂಡು ಇಡೀ ಸಮಾಜಕ್ಕೆ ಅತ್ಯಧಿಕ ಆರ್ಥಿಕ ಪ್ರತಿಫಲವನ್ನು ಮತ್ತು ಸಾಮಾಜಿಕ ಉಪಯುಕ್ತತೆ ಯನ್ನು ಬಂಡವಾಳವು ತಂದಿಟ್ಟಿದೆ.

೨೭. ದೀನಾ ಇಲ್ ವೆಲ್ (೨೦೦೪) ಅವರು ದಿಪರ್ ರಿಡಿಂಗ್ ಕಮಪುರೇಡಿಗ್ ಚಾಲೆಂಜಿಂಗ್ ಮೆಕ್ಸಿರಿಕೊ ಎಂಬ ಪುಸ್ತಕದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. ಅಮೆರಿಕಾ ಪ್ರಾಥಮಿಕ ಶಾಲೆಗಳ ಮಕ್ಕಳ ಆಂಗ್ಲ ಬರವಣಿಗೆ ಸಾಮರ್ಥ್ಯಗಳ ಬೆಳವಣಿಗೆಯ ಬಗೆಗೆ ಅಧ್ಯಯನ ಕೈಗೊಂಡರು. ಭಾಷಾ ಸಾಮರ್ಥ್ಯದ ಮೇಲೆ ಅವರ ಆರ್ಥಿಕತೆಯ ವರ್ಗ ಪ್ರಭಾವ ಬೀರುತ್ತದೆಂದು ಮೇಲ್ಮಟ್ಟದ ಆರ್ಥಿಕತೆ ಹೊಂದಿರುವ ಮಕ್ಕಳ ಭಾಷಿಕ ಕ್ಷಮತೆಯ ಕೆಳಮಟ್ಟದಾಗಿರುವುದಾಗಿ ತಿಳಿಸಿದ್ದಾರೆ.

ಪದಗಳ ಗುರುತಿಸುವಿಕೆಯ ನಡುವೆ ಪರಸ್ಪರ ಸಂಬಂಧವನ್ನು ತಾವು ಕೈಗೊಂಡ ಅಧ್ಯಯನದಲ್ಲಿ ತಿಳಿಸಿದ್ದಾರೆ. ಈ ಪುಸ್ತಕದಿಂದ ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ವಸ್ತು ವಿಷಯವನ್ನು ಪಡೆಯಬಹುದಾಗಿದೆ. ಯಾವುದೆಂದರೆ ಗ್ರಾಮೀಣ ಮತ್ತು ನಗರ ವಿದ್ಯಾರ್ಥಿನಿಯರ ಆಂಗ್ಲ ಮಾಧ್ಯಮದ ನಡುವಿನ ಪದಗಳ ವಿಚಾರಣೆ ಪದಗಳ ಸಾಮ್ಯತೆಯನ್ನು ತಿಳಿಯಲು ಸಹಕಾರಿಯಾಗಿದೆ.

೨೮. **ಚಂದ್ರಶೇಖರ್ ಟಿ.ಆರ್.**, (೨೦೦೫) ಅವರ **ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ** ಎಂಬ ಪುಸ್ತಕದಲ್ಲಿ ಅತ್ಯಂತ ಕೂತೂಹಲ ಸಂಗತಿಯೆಂದರೆ ಶಾಲೆ ಬಿಟ್ಟ ಮಕ್ಕಳ ಲಿಂಗ ಸ್ವರೂಪವನ್ನು ಪರಿಶೀಲಿಸಿದಾಗ ಹೆಣ್ಣುಮಕ್ಕಳ ಪ್ರಮಾಣವು ಗಂಡು ಮಕ್ಕಳ ಪ್ರಮಾಣಕ್ಕೆ ಸರಿಸುಮಾರು ಸಮನಾಗಿರುವುದು ಕಂಡುಬರುತ್ತದೆ. ರಾಜ್ಯಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಗಂಡು ಮಕ್ಕಳ ಪ್ರಮಾಣ ಶೇ. ೧೪.೫೯ ಮತ್ತು ಹೆಣ್ಣುಮಕ್ಕಳ ಪ್ರಮಾಣ ಶೇ. ೧೪.೩೪ರಷ್ಟಿದೆ ಇದೇ ಪರಿಸ್ಥಿತಿ ಸರಿಸುಮಾರು ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುತ್ತದೆ.

ಪ್ರಚಲಿತದಲ್ಲಿರುವ ಸಂಗತಿಯೆಂದರೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಲ್ಲಿ ಹೆಣ್ಣುಮಕ್ಕಳ ಪ್ರಮಾಣ ಅಧಿಕ ಎಂಬುದಾಗಿದೆ. ಈ ನಂಬಿಕೆ ವ್ಯಾಪಕವಾಗಿ ಹರಡಿದೆ. ಇದು ಎಲ್ಲಾ ಸಂದರ್ಭದಲ್ಲೂ ನಿಜವಾಗಿರಲು ಸಾಧ್ಯವಿಲ್ಲ. ಬದಲಾಗಿ ಇಲ್ಲಿ ಹೆಣ್ಣು-ಗಂಡುಗಳ ನಡುವೆ ತೀವ್ರ ಅಂತರಗಳೇನಿಲ್ಲ. ಇದೇ ಮಾತನ್ನು ಪ್ರೌಢ ಹಾಗೂ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳಲು ಸಾಧ್ಯವಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಮಗೆ ಮಾಹಿತಿ ಇಲ್ಲದಿರುವುದರಿಂದ ಅದನ್ನು ಕುರಿತು ಹೇಳಲಾಗದು. ಆದರೆ ಉನ್ನತ ಹಂತಕ್ಕೆ ಸಾಗಿದಂತೆ ಹೆಣ್ಣುಮಕ್ಕಳ ಪ್ರಮಾಣವು ಕಡಿಮೆಯಾಗುವುದನ್ನು ೧ ರಿಂದ ೭ ನೇ ತರಗತಿಯವರೆಗೂ ಲಿಂಗ ಸಂಬಂಧಿ ತಾರತಮ್ಯದ ಸೂಕ್ಷ್ಮತೆಯನ್ನು ಗುರುತಿಸಬಹುದು.

೨೯. **ಪ್ರಶಾಂತ್ ಎಚ್.ಡಿ.**, (೨೦೦೫) ಅವರ **ಹೆಣ್ಣುಮಕ್ಕಳ ಶಿಕ್ಷಣದ: ಒಂದು ಸ್ಥೂಲನೋಟ** ಎಂಬ ಪ್ರಬಂಧದಲ್ಲಿ ಇತ್ತೀಚಿನ ದಿನಗಳಲ್ಲಿ ಲಿಂಗಸಂಬಂಧಿ ಆಯಾಮಗಳಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಹೆಚ್ಚಾಗಿದೆ. ಶಾಲಾ ದಾಖಲಾತಿಯಲ್ಲಿ ಹೆಣ್ಣು ಮತ್ತು ಗಂಡುಮಕ್ಕಳ ಭಾಗವಹಿಸುವಿಕೆ ಹೆಚ್ಚಾಗಿದೆ. ಶಾಲಾ ದಾಖಲಾತಿಯಲ್ಲಿ ಹೆಣ್ಣು ಮತ್ತು ಗಂಡುಮಕ್ಕಳ ನಡುವಿನ ಅಂತರ ಸಾಕಷ್ಟು ಕಡಿಮೆಯಾದರೂ ಗಂಡು ಮಕ್ಕಳ ಶಾಲಾ ದಾಖಲಾತಿಗೆ ಹೋಲಿಸಿದರೆ ಹೆಣ್ಣುಮಕ್ಕಳ ಶಾಲಾ ದಾಖಲಾತಿ ಸ್ವಲ್ಪ ಕಡಿಮೆ ಇದೆ. ಒಟ್ಟು ಶಾಲಾ ದಾಖಲಾತಿ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡಾಗ ನಗರ-ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳ ಶಾಲಾ ದಾಖಲಾತಿ ದರದಲ್ಲಿ ಸಾಕಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಅದರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪಂಗಡ, ಇತರೆ ಹಿಂದುಳಿದ ಜಾತಿ ಹಾಗೂ ಕೆಲವು ಅಲ್ಪಸಂಖ್ಯಾತ ಗುಂಪುಗಳಿಗೆ ಸೇರಿದ ಹೆಣ್ಣುಮಕ್ಕಳ ಶಾಲಾ ದಾಖಲಾತಿಯಲ್ಲಿ ಇನ್ನೂ ಸಹ ಬಹಳ ಅಂತರ ವಿರುವುದು ಕಂಡುಬರುತ್ತದೆ.

ಪ್ರಾಥಮಿಕ ಶಾಲಾ ಹಂತದಲ್ಲಿ(೧ರಿಂದ ೫ರವರೆಗೆ) ಹೆಣ್ಣುಮಕ್ಕಳ ಶಾಲಾ ದಾಖಲಾತಿಯು ೧೯೫೦-೫೧ರಲ್ಲಿ ಶೇ. ೨೮.೮ ಇದ್ದದ್ದು, ೨೦೦೨-೦೩ರ ವೇಳೆಗೆ ಶೇ. ೮೬.೮ಕ್ಕೆ ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ ಮಾಧ್ಯಮಿಕ ಹಂತದಲ್ಲಿ ಶೇ. ೪.೬ರಷ್ಟು ಹೆಣ್ಣುಮಕ್ಕಳು ೧೯೫೦-೫೧ರಲ್ಲಿ ದಾಖಲಾಗಿದ್ದರೆ. ೨೦೦೨-೦೩ರ ಅವಧಿಯಲ್ಲಿ ಶೇ. ೫೦.೨ರಷ್ಟು ಹೆಣ್ಣುಮಕ್ಕಳು ಶಾಲೆಗಳಿಗೆ ದಾಖಲಾಗಿದ್ದಾರೆ. ಹಾಗೆಯೆ ೧೯೫೦-೫೧ ರಲ್ಲಿ ೧-೮ನೇ ತರಗತಿಯವರಗೆ ದಾಖಲಾದ ಹೆಣ್ಣುಮಕ್ಕಳ ಪ್ರಮಾಣ ಶೇ. ೧೭.೭ರಷ್ಟು ಮಾತ್ರ ೨೦೦೨-೦೩ರ ಅವಧಿಯಲ್ಲಿ ಶೇ. ೭೩.೧೧ರಷ್ಟು ಹೆಣ್ಣುಮಕ್ಕಳು ಮಾತ್ರ ದಾಖಲಾಗಿರುತ್ತಾರೆ.

ಶಾಲೆಗಳಲ್ಲಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಬೆಳವಣಿಗೆಯ ದರ ಗಂಡುಮಕ್ಕಳಿಗಿಂತ ಹೆಚ್ಚಾಗಿದೆ. ಇದಕ್ಕೆ ಹೆಣ್ಣುಮಕ್ಕಳು ಶೈಕ್ಷಣಿಕವಾಗಿ ಭಾಗವಹಿಸಲು ನೀಡಿದ ಪ್ರಾಶಸ್ತ್ಯ ಮಾತ್ರ ಎಂದು ಹೇಳಲು ಬರುವುದಿಲ್ಲ. ಆದರೆ ಸರ್ಕಾರಗಳು ವಿವಿಧ ಅಭಿವೃದ್ದಿ ಯೋಜನೆಗಳ ಮೂಲಕ ಹೆಣ್ಣುಮಕ್ಕಳ ಶೈಕ್ಷಣಿಕ ಮಟ್ಟ ಹೆಚ್ಚಿಸಲು ಹಾಕಿಕೊಂಡ ಯೋಜನೆಗಳು ಮಹತ್ವದ ಪಾತ್ರವನ್ನು ನಿರ್ವಹಿಸಿವೆ ಎಂದು ಹೇಳಬಹುದು. ಪ್ರಾಥಮಿಕ ಶಾಲಾ ಹಂತದಲ್ಲಿ (೧ ರಿಂದ ೫ ನೇ ತರಗತಿ) ೧೯೯೦-೯೧ ರಿಂದ ೨೦೦೦-೨೦೦೧ರ ನಡುವೆ ಹೆಣ್ಣುಮಕ್ಕಳ ಸಂಖ್ಯೆ ಗಂಡು ಮಕ್ಕಳಿಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಮಾಧ್ಯಮಿಕ ಶಾಲಾ (೬ ರಿಂದ ೮ನೇ ತರಗತಿ) ಹಂತದಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯು ಎರಡು ಪಟ್ಟುಗಿಂತಲೂ ಹೆಚ್ಚಾಗಿರುವುದು ತಿಳಿದುಬರುತ್ತದೆ. ಒಟ್ಟಾರೆ ಇದೇ ಅವಧಿಯಲ್ಲಿ ಪ್ರಾಥಮಿಕ ಹಂತದಲ್ಲಿ ಹೆಣ್ಣುಮಕ್ಕಳ ದಾಖಲಾತಿಯ ಸಂಖ್ಯೆ ೮ ಮಿಲಿಯನ್‌ಗಿಂತಲೂ ಹೆಚ್ಚಾಗಿದ್ದರೆ ಮಾಧ್ಯಮಿಕ ಹಂತದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ೪.೩ ಮಿಲಿಯನ್‌ನಷ್ಟು ಹೆಚ್ಚಾಗಿದೆ ಎಂದು ಲೇಖಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೩೦. **ಪ್ರಶಾಂತ್ ಎಚ್.ಡಿ., (೨೦೦೫)** ಅವರು **"ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ"** ಎಂಬ ಪುಸ್ತಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆ ಅದರ ಸಾರ್ವತ್ರೀಕರಣ ಮತ್ತು ಮೂಲಭೂತ ಹಕ್ಕಾಗಿ ಶಿಕ್ಷಣ ಎಂಬ ಬಹುಮುಖ್ಯ ಅಂಶಗಳನ್ನು ವಿವರಿಸಿದ್ದಾರೆ. ಸಾಕ್ಷರತೆಯಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕವಾದ ಅಸಮಾನತೆಗಳಿದ್ದು, ನಗರ, ಗ್ರಾಮೀಣ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿರುವ ಲಿಂಗ ತಾರತಮ್ಯದ ಅಂಶಗಳನ್ನು ಲೇಖಕರು ವಿವರವಾಗಿ ತಿಳಿಸಿದ್ದಾರೆ. ಮುಂದುವರಿದು ಲೇಖಕರು ಮಕ್ಕಳ ಶಿಕ್ಷಣ ಬದಲಾಗುತ್ತಿರುವ ಪೋಷಕರ ಮನೋಭಾವ ಮಕ್ಕಳ ಶಿಕ್ಷಣದ ಪ್ರೇರಕಾಂಶಗಳು ಗಂಡು ಮತ್ತು ಹೆಣ್ಣುಮಕ್ಕಳ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಭಾಗವಹಿಸುವಿಕೆ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಗ್ರಾಮ ಮಟ್ಟದಲ್ಲಿ ಸಾಕ್ಷರತೆ ನಿರುತ್ಸಾಹದಾಯಕವಾಗಿದೆ ಎಂದು ತಿಳಿಸುವ ಲೇಖಕರು ಶಿಕ್ಷಣದ ಬಗ್ಗೆ ಸ್ಥಳಿಯವಾಗಿ ಹೊಂದಿರುವ ಉದಾಸೀನತೆಯೇ ಕಾರಣ ಎಂದಿದ್ದಾರೆ.

೩೧. **ಮಹೇಶ್ ಎಂ. (೨೦೦೫) ಪಟ್ಟಣ ಪ್ರದೇಶಗಳ ಮಕ್ಕಳ ಸ್ಥಿತಿಗತಿ** ಎಂಬ ಪುಸ್ತಕದಲ್ಲಿ ಈ ರೀತಿ ಇದೆ. ಲಿಂಗರಾಜಪುರ, ಇಸ್ರೋ ಸ್ಲಂ, ಮಾರ್ಕಂಡೇಯ ಲೇಔಟ್. ರಾಮಕೃಷ್ಣ ನಗರ ಸೇವಾನಗರ, ರಾಜಗೋಪಾಲನಗರಗಳಲ್ಲಿ ನಿರ್ಲಕ್ಷಿತ ಪ್ರದೇಶಗಳ ಸಮೀಕ್ಷೆ ನಡೆಸಿದಾಗ ಕಂಡ ಪರಿಸ್ಥಿತಿಯನ್ನು ವಿಶ್ಲೇಷಣಾತ್ಮಕವಾಗಿ ದಾಖಲಿಸಿದೆ. ವರದಿಯಲ್ಲಿ ಗಮನಾರ್ಹವಾದ ಅಂಶಗಳು ಈ ರೀತಿ ಇರುತ್ತವೆ. ೬ರಿಂದ ೧೪ನೇ ವಯಸ್ಸಿನ ಮಕ್ಕಳು ಹೋಟಲ್ ಅಂಗಡಿ, ಮುಂಗಟ್ಟು ಗ್ಯಾರೇಜ್ ಟೀ. ಕಾಫಿ ಅಂಗಡಿಗಳಲ್ಲಿ ದುಡಿಯುವುದು ಸರ್ವೇ ಸಾಮಾನ್ಯ. ಈ ವಯಸ್ಸಿನ ಮಕ್ಕಳು ಯಾರು ಮತ್ತು ಇಂತಹ ಉದ್ದಿಮೆಗಳಲ್ಲಿ ಉಪಯೋಗಕ್ಕೆ ಬರುವವರು ಅಗಿರುತ್ತಾರೆ ಎಂಬ ಅಭಿಪ್ರಾಯವೇ ಅದಕ್ಕೆ ಕಾರಣ. ಆದರೆ ಬೆಳೆದಂತೆ ಈ ಮಕ್ಕಳು ಅವಿಧೇಯರಾಗಿರುವುದರಿಂದ ಕೆಲಸಕ್ಕೆ ಅನರ್ಹರಾಗಿರುತ್ತಾರೆ. ಇತರ ಉದ್ಯೋಗವೂ ಇಲ್ಲದೇ, ಶಿಕ್ಷಣವೂ ಇಲ್ಲದೆ ಇಂತಹ ಆ ಪ್ರದೇಶಗಳಲ್ಲಿ ಸುಮ್ಮನೆ ಅಡ್ಡಾಡುತ್ತಾರೆ ಎಂದು ಹೇಳಲಾಗಿದೆ.

೩೨. **ನಾರಾಯಣ ಡಿ.ಎಸ್., (೨೦೦೬) ಅವರು ಇಂಗ್ಲಿಷ್ ಕನ್ನಡ ಸಂಬಂಧ ಕುರಿತು ಚಿಂತನೆಗಳು** ಎಂಬ ಎಂ.ಫಿಲ್ ಪ್ರಬಂಧದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಮಿಷನರಿಗಳು ಪ್ರಾದೇಶಿಕ ಭಾಷೆಯಲ್ಲಿ ಶಾಲೆಗಳನ್ನು ತೆರೆದರು. ಜೊತೆಗೆ ಮಿಷನ್ ಸ್ಕೂಲ್‌ಗಳು, ಕಾನ್ವೆಂಟ್ ಶಾಲೆಗಳನ್ನು ತೆರೆದರು. ಈ ರೀತಿಯಲ್ಲಿ ಪ್ರಾದೇಶಿಕ ಭಾಷೆ, ಮಾಧ್ಯಮ ಶಾಲೆಗಳು ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳು ಎಂದು ಎರಡು ರೀತಿಯಲ್ಲಿ ಶಿಕ್ಷಣ ಬೆಳೆದುಬರಲು ಪ್ರಾರಂಭವಾಯಿತು. ಈ ಬಗೆಯ ಶಿಕ್ಷಣದಿಂದಾಗಿ ಜನರ ಮನೋಭಾವನೆಗಳಲ್ಲಿಯೂ ಸಹ ಬದಲಾವಣೆ ಕಂಡುಬರತೊಡಗಿದವು. ಆಧುನಿಕ ತಂತ್ರಜ್ಞಾನ ವಿಜ್ಞಾನ ಮತ್ತು ಇನ್ನಿತರ ಜ್ಞಾನಶಾಖೆಗಳ ಅಧ್ಯಯನಕ್ಕೆ ಇಂಗ್ಲಿಷ್ ಭಾಷೆ ತಿಳಿಯುವಿಕೆ ಅನಿವಾರ್ಯ. ಆದರೆ ಅಗತ್ಯವಿದ್ದಲ್ಲಿ ಮಾತ್ರ ಇಂಗ್ಲಿಷ್ ಬಳಕೆ ಮಾಡಬೇಕು. ಉಳಿದಂತೆ ಕನ್ನಡ ಮಾಧ್ಯಮ ಬಳಕೆ ಉತ್ತಮ ಎಂದು ತಿಳಿಸಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡೂ ಮುಖ್ಯ ಆದರೆ ಪ್ರಾಥಮಿಕ ಹೆಣ್ಣು ಮಕ್ಕಳಿಗೆ ಅವರ ಭವಿಷ್ಯಕ್ಕಾಗಿ ಯಾವುದು ಉಪಯುಕ್ತ ಮಾಧ್ಯಮವೆಂದು ತಿಳಿದು ಆ ಭಾಷೆಗೆ ಹೆಚ್ಚಿನ ಆಧ್ಯತೆಯನ್ನು ನೀಡಬೇಕು ಎಂದು ತಿಳಿದು ಬಂದಿದೆ.

೩೩. **ಬಂಡೋಪಾದ್ಯಾಯ** (೨೦೦೬) ಅವರು **ಭಾರತದಲ್ಲಿ "ಸರ್ವರಿಗೂ ಶಿಕ್ಷಣ"** ಎಂಬ ನೀತಿಯು ೧೯೪೭ ರಿಂದ ಅನುಷ್ಠಾದಲ್ಲಿದ್ದರೂ ಶಿಕ್ಷಣದ ಸಾರ್ವತ್ರೀಕರಣ ಸಂಪೂರ್ಣವಾಗಿಲ್ಲ ಶಿಕ್ಷಣದ ಸಾರ್ವತ್ರೀಕರಣ ಅನೇಕ ಪ್ರಯತ್ನಗಳ ಫಲವಾಗಿ ೨೦೦೧-೦೨ ರಲ್ಲಿ ಪ್ರಾಥಮಿಕ ಶಾಲೆ ಬಿಡುವ ಮಕ್ಕಳ ಸಂಖ್ಯೆ ಶೇ. ४೦.೦೭ ರಿಂದ ಶೇ. ೩೫.೦೬ಕ್ಕೆ ಕಡಿಮೆಯಾಗಿದ್ದರೂ ೬-೧೪ ವರ್ಷದೊಳಗಿನ ಸುಮಾರು ೨೩ ದಶಲಕ್ಷ ಮಕ್ಕಳು ಶಾಲೆಯಿಂದ ಹೊರಗಡೆ ಇದ್ದಾರೆ ಹಾಗೂ ಬಹುಸಂಖ್ಯೆ ಮಕ್ಕಳು ೫ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತಾರೆ. ಮಾನವ ಸಂಪನ್ಮೂಲ

ಅಭಿವೃದ್ಧಿ ಸಚಿವಾಲಯದ ೨೦೦೩-೦೪ರ ವರದಿಯಿಂದ ತಿಳಿಯುತ್ತದೆ. ೬-೧೪ ವರ್ಷದ ವಯಸ್ಸಿನ ಶೇ. ೩೦ ಮಕ್ಕಳಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳೆ ಶಾಲೆಗೆ ಹಾಜರಾಗದಿರುವುದನ್ನು ೧೯೯೬-೯೭ರ ರಾಷ್ಟ್ರೀಯ ಮಾದರಿ ಸಮೀಕ್ಷೆ ಗುರುತಿಸಿದೆ.

೩೪. **ನರಸಿಂಹಾಚಾರ್ ಎ.ಎಲ್.** (೨೦೦೬) ಅವರ **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ** ಎಂಬ ಪುಸ್ತಕದಲ್ಲಿ ಸೆಕಂಡರಿ ಶಿಕ್ಷಣದ ಸಂಸ್ಥೆಗಳ ವಿಸ್ತರಣೆಯನ್ನು ಮಿತಿಗೊಳಿಸಿ ಹೊಸ ಮಕ್ಕಳನ್ನು ಹೆಣ್ಣುಮಕ್ಕಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮುಂತಾದ ಗ್ರಾಮಾಂತರ ಆಧಾರದ ಮೇಲೆ ತಿಳಿಯಲಾಗುವುದು, ಗುಣಮಟ್ಟ ರಕ್ಷಿಸುವುದು(೧೧ರಿಂದ೧೨) ಮುಂದುವರಿಸುವುದು, ಮರು ಪ್ರವೇಶಕ್ಕೆ ಅವಕಾಶ ನೀಡಿ ಉದ್ಯಮ ವಿಶ್ವದೊಡನೆ ಸಂಬಂಧ ಕಲ್ಪಿಸಿ ವಿಷಯಾಧಾರಿತ ಪರೀಕ್ಷೆ ಹಾಗೂ ವೃತ್ತಿ ಶಿಕ್ಷಣದ ಗುಣಮಟ್ಟಗಳಿಗೆ ಬೇಕಾಗುವ ಅಂಶಗಳ ಅಭಿವೃದ್ಧಿಗೆ ಆಂತರಿಕ ವಿಕಾಸ ಸೌಲಭ್ಯ ಕಲ್ಪಿಸಲಾಗುವುದು ಹಾಗೂ ಉತ್ತಮ ಮೌಲ್ಯಗಳನ್ನು ರೂಢಿಸಲಾಗುವುದು. ದೂರಶಿಕ್ಷಣದ ಮೂಲಕ ಸೇವಾ ಶಿಕ್ಷಣ ಕಾರ್ಯಕ್ರಮಗಳ ಮುಖಾಂತರ ಸ್ತ್ರೀಯರಿಗೆ ಗ್ರಾಮಾಂತರದವರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಸಮಾಜದಿಂದ ವಂಚಿತರಾದವರಿಗೆ ಹೊಂದಿಕೆಯಾಗುವ ವೃತ್ತಿ ಶಿಕ್ಷಣಕ್ಕೆ ವ್ಯವಸ್ಥಿತ ಅನೌಪಚಾರಿಕ ವೃತ್ತಿಶಿಕ್ಷಣ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸುವುದು ಹಾಗೂ ಶಿಕ್ಷಣದ ಪ್ರಗತಿ ತಿಳಿಯುವುದು. ರಾಷ್ಟ್ರೀಯ ಮೌಲ್ಯಮಾಪನ ಮಾಡಲಾಗುವುದು ವಿವಿಧ ಪಂಗಡದವರನ್ನು ಶೈಕ್ಷಣಕ್ಕೆ ವಿದ್ಯಾರ್ಥಿ ವೇತನ ಬಹುಮಾನಗಳಿಂದ ಆಕರ್ಷಿಸಲಾಗುವುದು ಅಂಗವಿಕಲರಿಗೆ ಸೂಕ್ತ ವ್ಯವಸ್ಥೆ ಮಾಡಲಾಗುವುದು.

೩೫. **ಚಂದ್ರಶೇಖರ್ ಟಿ.ಆರ್.** (೨೦೦೬) ಅವರು **ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ** ಎಂಬ ಲೇಖನದಲ್ಲಿ ಪ್ರಮುಖವಾಗಿ ಪ್ರಾದೇಶಿಕ ಸ್ವರೂಪ ಎಂಬ ಮೂರು ಆಯಾಮಗಳನ್ನು ಚರ್ಚಿಸಿದ್ದಾರೆ. ಮದ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳ ಸಮಸ್ಯೆಗೆ ಅನೇಕ ಕಾರಣಗಳನ್ನು ಗುರುತಿಸುತ್ತಾ ಸಾಮಾಜಿಕ, ರಾಜಕೀಯ ಮತ್ತು ಚಾರಿತ್ರಿಕ ಕಾರಣಗಳು ಮುಖ್ಯ ಎಂದಿದ್ದಾರೆ. ಉಚಿತ ಪಠ್ಯ ಪುಸ್ತಕಗಳು, ಸಮವಸ್ತ್ರ ಮಧ್ಯಾಹ್ನದ ಊಟ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದರಿಂದ ಮದ್ಯದಲ್ಲಿಯೆ ಶಾಲೆ ಬಿಡುವ ಪ್ರಮಾಣವು ಸ್ವಲ್ಪ ಕಡಿಮೆಯಾದರೂ ಸಮುದಾಯದ ವಲಸೆಗಳು ಪುನರಾವರ್ತನೆಯಾಗುನ ಪ್ರದೇಶಗಳಲ್ಲಿ ಮಕ್ಕಳು ಶಾಲೆ ಬಿಡುವುದನ್ನು ಕಡಿಮೆಗೊಳಿಸಲು ಉದ್ಯೋಗ ಭದ್ರತೆಯು ಪ್ರಮುಖವಾಗಿರುತ್ತದೆ ಎಂಬುದನ್ನು ಲೇಖಕರು ಪ್ರತಿಪಾದಿಸಿದ್ದಾರೆ.

೩೬. **ಮಂದಿರ ಕುಮಾರ್** (೨೦೦೬) **"ಮಕ್ಕಳ ಆರೋಗ್ಯ ಮತ್ತು ಹಾಜರಾತಿ"** ಎಂಬ ಶೀರ್ಷಿಕೆಯಲ್ಲಿ ಈ ರೀತಿಯಾಗಿ ಹೇಳಲಾಗಿದೆ. ೦೬-೧೪ ವರ್ಷದ ಮಕ್ಕಳನ್ನು ಬಿಟ್ಟು ಜನ ಸಂಖ್ಯೆಯಲ್ಲಿ ಶೇ. ೬೦ ಮಕ್ಕಳಿಗೆ ಶಿಕ್ಷಣ ತಲುಪುತ್ತಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಈ ಸೇವೆಯ ಅನುಷ್ಠಾನ ಚೆನ್ನಾಗಿಯೇ ಇದೆಯಾದರೂ ದಾಖಲಾದ ಮಕ್ಕಳ ಸಂಖ್ಯೆಯ ಶೇ.

೫೦ರಷ್ಟು ಶಾಲೆಗೆ ಬರುವುದೆ ಇಲ್ಲ. ಜೊತೆಗೆ ಒಂದು ಶಾಲೆ ತೆರೆಯಲು ಏಳುನೂರರಿಂದ ಒಂದು ಸಾವಿರ ಜನಸಂಖ್ಯೆಯ ಅಗತ್ಯವಿದೆ ಎಂಬ ನಿಯಮದಿಂದಾಗಿ ಕಡಿಮೆ ಜನಸಂಖ್ಯೆ ಇರುವೆಡೆ, ಅದರಲ್ಲಿ ಪರಿಶಿಷ್ಟ ವರ್ಗ-ಪರಿಶಿಷ್ಟ ಪಂಗಡಗಳ ತೀರ ಬಡವರು ವಾಸಿಸುವೆಡೆ ಮಕ್ಕಳ ಅಭಿವೃದ್ಧಿ ಶಿಕ್ಷಣಕ್ಕಿಂತ ಅದರ ಪೌಷ್ಠಿಕತೆ ಆರೋಗ್ಯ ಸಾಧಕಗಳು ಸ್ವಲ್ಪ ಮೇಲು. ಹಾಗೆ ನೋಡಿದರೆ ಶಿಕ್ಷಣಕ್ಕೆ ಮಹತ್ವವನ್ನು ನೀಡಿಲ್ಲ ಎನ್ನಬಹುದು. ಶಿಕ್ಷಕರ ಹುದ್ದೆಗಳಲ್ಲಿ ಕೇವಲ ೫೦೦ ಹುದ್ದೆಗಳನ್ನು ಮಾತ್ರ ತುಂಬಲಾಗಿದ್ದು, ಶಾಲೆಯ ಮೇಲ್ವಿಚಾರಣೆ, ಯಾವುದೇ ಬಗೆಯ ಉಸ್ತುವಾರಿ, ಹಾಜರಾತಿ ಮಕ್ಕಳ ನಿಗಾ ವಹಿಸುವುದು. ಸಮುದಾಯದೊಂದಿಗೆ ಸಮಪರ್ಕ ಇಟ್ಟಿಕೊಳ್ಳುವುದು ಹೀಗೆ ಬಹು ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಶಿಕ್ಷಕರು ಒತ್ತಡಕ್ಕೆ ಒಳಗಾಗುತ್ತದೆ.

೩೭ ನಿರಂಕರ್ ಶ್ರೀವಾಸ್ತವ (೨೦೦೭) (ಎಲಿಮೆಂಟರಿ ಎಜುಕೇಶನ್ ಪಾವರ್ಟ & ಜಂಡರ್) ಬುಡಕಟ್ಟು ಸಮುದಾಯಗಳಿಂದ ಕೂಡಿದ ಈಶಾನ್ಯ ಪ್ರಾಂತ್ಯದ ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಂ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಯಲ್ಲಿ ಬಡತನ ಮತ್ತು ಲಿಂಗತಾರತಮ್ಯಗಳು ಎದ್ದು ಕಾಣುತ್ತಿವೆ ಈಶಾನ್ಯ ಪ್ರಾಂತ್ಯದ ಕೇಲವು ರಾಜ್ಯಗಳಲ್ಲಿ ಬಡತನದ ತೀವ್ರತೆ ನಗರ ಮತ್ತು ಗ್ರಾಮೀಣ ಬಡತನಗಳ ಅಂತರ ಹೆಚ್ಚಾಗಿದ್ದರೂ ಹೆಚ್ಚಿನ ಪ್ರಮಾಣದಲ್ಲಿರುವ ಸಾಕ್ಷರತೆಯಲ್ಲಿ ಲಿಂಗತಾರತಮ್ಯವಿದೆ. ಆಂದರೆ ಲಿಂಗ ತಾರತಮ್ಯಕ್ಕೆ ಬಡತನವೆ ಕಾರಣವಾಗಿಲ್ಲವೆಂಬುದು ವಿಶೇಷ. ಈಶಾನ್ಯ ರಾಜ್ಯಗಳ ಭಾಗದಲ್ಲಿ ಶಾಲೆಗೆ ಹೋಗುವ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚಾಗಿರುವುದು ವಿಭಿನ್ನ ಸಂಗತಿ. ಅದರಂತೆಯೇ ಈ ರಾಜ್ಯಗಳಲ್ಲಿ ಶಾಲೆಗೆ ಹೋಗುವ ಪರಿಶಿಷ್ಟ ಜಾತಿ/ಪಂಗಡದವರು ಹಾಗೂ ಇತರೆ ವರ್ಗದ ಮಕ್ಕಳಲ್ಲಿ ಮಹತ್ವದ ವ್ಯತ್ಯಾಸವಿಲ್ಲದಿರುವುದು ಸಮಧಾನಪಡುವ ವಿಷಯವಾಗಿದೆ.

೩೮. ಟಿ.ಎಚ್. ಕುಮಾರ್ (೨೦೦೮) ಅವರ **ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ** ಎಂಬ ಪುಸ್ತಕದಲ್ಲಿ ನಾವು ಕಳೆದ ಶತಮಾನವನ್ನು ಶೇ. ೫ರ ಸಾಕ್ಷರತೆಯಿಂದ ಪ್ರಾರಂಭಿಸಿದೆವು ಎಂಬುದನ್ನು ಮರೆಯಲಾಗದು. ಶತಮಾನದ ಮಧ್ಯದ ವೇಳೆಗೆ ಶೇ.೨೦ರಷ್ಟು ಸಾಧನೆ ಕಂಡೆವು. ೨೦೧೧ರ ಜನಗಣತಿಯಂತೆ ಸಾಕ್ಷರತೆಯ ಪ್ರಮಾಣವು ಒಟ್ಟಾರೆ ಶೇ. ೭೪.೪ರಷ್ಟು ಭಾರತದಲ್ಲಿ ಕಂಡುಬಂದರೆ, ಅದರಲ್ಲಿ ಪುರುಷರ ಸಾಕ್ಷರತೆಯ ಪ್ರಮಾಣವು ಶೇ. ೮೨.೧೪ರಷ್ಟು ಮತ್ತು ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ. ೬೪.೯೬ರಷ್ಟು ಕಂಡುಬಂದಿದೆ. ನಮ್ಮ ನೀತಿ ನಿರೂಪಣೆಯಲ್ಲಿ ಕಂಡುಬಂದ ಉತ್ಸಾಹ ಅದನ್ನು ಜಾರಿಗೆ ತರುವಲ್ಲಿ ಇರಲಿಲ್ಲ. ಶಿಕ್ಷಣಕ್ಕೆ ರಾಷ್ಟ್ರಮಟ್ಟದಲ್ಲಿ ನಾವು ಚರ್ಚೆಮಾಡುತ್ತಾ ಇದ್ದೇವೆ. ಯೋಜನೆಯ ಮೊತ್ತ (೧೯೫೦-೫೧) ೧.೧ ಬಿಲಿಯನ್ ರೂಪಾಯಿಗಳಿಂದ(೧೯೯೭-೯೮)ರವರೆಗೆ ೪೧೨ ಬಿಲಿಯನ್ ಏರಿದೆ. ಅಂದರೆ ೩೭೦ ಪಟ್ಟು ಹೆಚ್ಚಾಗಿದೆ. ಇಂದು ಪ್ರಮುಖ ಅಂಶವೆಂದರೆ ಇಷ್ಟು ದೊಡ್ಡ ಪ್ರಮಾಣದ ಬಂಡವಾಳದ ಹೆಚ್ಚಳವನ್ನು ನಾವು ೧೯೫೦-೫೧ರ ಸಮಯದಲ್ಲಿ ರೂಪಾಯಿ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ಪ್ರಸ್ತುತ ರೂಪಾಯಿ ಮೌಲ್ಯದ

ಹಿನ್ನೆಲೆಯಲ್ಲಿ ಲೆಕ್ಕ ಹಾಕಿದಾಗ ಒಟ್ಟಾರೆ ೫-೮ ಮಾತ್ರ ಹೆಚ್ಚಳ ಕಂಡುಬರುತ್ತದೆ. ಇಷ್ಟಿದ್ದರೂ ಉದ್ದೇಶಿತ ಗುರಿಗಳನ್ನು ತಲುಪಲು ಸಾಧ್ಯವಾಗುತ್ತಿಲ್ಲ ಎಂದು ಲೇಖಕರು ಹೇಳಿದ್ದಾರೆ.

೩೯. **ಚಂದ್ರಶೇಖರಯ್ಯ** (೨೦೦೮) ಅವರ **"ಪರಿಶಿಷ್ಟ ಜಾತಿ ಶೈಕ್ಷಣಿಕ ಸಮಸ್ಯೆಗಳು** ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಮೈಸೂರು ನಗರ ಪ್ರದೇಶ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರ ಕುಟುಂಬದ ಆರ್ಥಿಕ ಪರಿಸ್ಥಿತಿ ಉತ್ತಮ ಮಟ್ಟದಲ್ಲಿಲ್ಲದಿರುವುದೇ ಕಾರಣವಾಗಿದೆ ಮತ್ತು ಶಾಲೆಯ ಬಗ್ಗೆ ಪರಿಶಿಷ್ಟ ಜಾತಿಯ ಜನರಲ್ಲಿ ಉತ್ತಮ ಅಭಿಪ್ರಾಯವಿಲ್ಲ. ತಮ್ಮ ಮಕ್ಕಳು ಶಾಲೆಗೆ ಹೋಗುವ ಬದಲು ನೌಕರಿ ಮಾಡಿ ಪ್ರತಿದಿನ ಸಂಪಾದನೆ ಮಾಡಿದರೆ ಉತ್ತಮ ಎಂಬ ಭಾವನೆ ಈ ಜನರಲ್ಲಿದೆ. ಪ್ರಾಥಮಿಕ ಶಾಲಾ ಹಂತದಲ್ಲಿ ಖಾಸಗಿ ಶಾಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ದಾಖಲಾತಿಯಾಗಲು ಈ ಶಾಲೆಗಳಲ್ಲಿ ಶಾಲೆಯ ವಾರ್ಷಿಕ ಶುಲ್ಕ, ಗ್ರಂಥಾಲಯ ಶುಲ್ಕ, ಆಟದ ಶುಲ್ಕ ಇನ್ನಿತರೆ ವಂತಿಕೆಗಳು ಹಾಗೂ ಈ ಪ್ರದೇಶದಿಂದ ದೂರದಲ್ಲಿ ಈ ಶಾಲೆಗಳು ಸ್ಥಾಪನೆಯಾಗಿರುವುದು ಕೂಡ ಈ ವಿದ್ಯಾರ್ಥಿಗಳ ಶಾಲೆಯ ವಾತಾವರಣ ಕುಟುಂಬದ ಪರಿಸರ, ಪೋಷಕರ ನಡವಳಿಕೆ, ಸಂಸ್ಕೃತಿ, ಸಮುದಾಯದ ಪ್ರಭಾವ ಮತ್ತು ಜಾತಿಯ ವರ್ಗೀಕರಣ ಮುಂತಾದ ಅಂಶಗಳು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರುಗಳ ಮೇಲೆ ಯಾವ ರೀತಿಯ ಪ್ರಭಾವ ಬೀರಿದೆ ಎಂಬುದರ ಮೇಲೆ ಗಮನ ಹರಿಸಿದ್ದಾರೆ.

೪೦. **ಚಂದ್ರಶೇಖರ್ ಟಿ.ಆರ್.** (೨೦೧೦) ಅವರು **ಕರ್ನಾಟಕದಲ್ಲಿ ಲಿಂಗಸಂಬಂಧಿ ಸ್ವರೂಪ** ಎಂಬ ತಮ್ಮ ಲೇಖನದಲ್ಲಿ ಅಮರ್ತ್ಯಸೇನ್, ಮೆಹಬೂಬ್‌ಉಲ್‌ಹಕ್ ಅವರು ಸಾಕ್ಷರತೆಯು ಅಭಿವೃದ್ಧಿಯ ಪ್ರಧಾನ ಸಾಧನ ಮತ್ತು ಪ್ರಾಥಮಿಕ ಗುರಿ ಎಂದು ಸಾಕ್ಷರತೆಯ ಮಹತ್ವವನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆಂದು ನಿರೂಪಿಸಿದ್ದಾರೆ. ಅಕ್ಷರಜ್ಞಾನ ಮತ್ತು ಶಿಕ್ಷಣ ಅವುಗಳಷ್ಟಕ್ಕೆ ಅವು ಮಹತ್ವ ಪಡೆದಿರುವ ಸಂಗತಿಗಳಾಗಿವೆ. ಸಾಕ್ಷರತೆಯು ಒದಗಿಸುವ ಅವಕಾಶಗಳನ್ನು ಪಡೆಯುವುದರ ಮೂಲಕ ಜನರು ತಮ್ಮ ಸಾಧಾರಣ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಬಹುದು. ತಮ್ಮ ಸ್ವತಂತ್ರದ ವ್ಯಾಪ್ತಿಯನ್ನು ವಿಸ್ತೃತಗೊಳಿಸಿಕೊಳ್ಳಬಹುದು. ಶಿಕ್ಷಣವು ಜನರ ಸ್ವಾಭಿಮಾನವನ್ನು, ಆತ್ಮಗೌರವವನ್ನು ಮತ್ತು ಸಾಮಾಜಿಕ ಸಹಭಾಗಿತ್ವವನ್ನು ಉತ್ತಮಪಡಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿಯಾಗಿ ಮಹಿಳೆಗೆ ಅಕ್ಷರ ಸಂಸ್ಕೃತಿಯಿಂದ ಘನತೆ ಮತ್ತು ಮನ್ನಣೆ ದೊರೆಯುತ್ತದೆ. ಇಂತಹ ಮಹತ್ವವಾದ ಶಿಕ್ಷಣ ದಕ್ಕಿಸಿಕೊಳ್ಳುವಲ್ಲಿ ನಗರದ ಮಹಿಳೆಯರು ಒಂದು ಸಾಧನೆಗೈದಿದ್ದಾರೆಂದು ಹೇಳಬಹುದು. ಆದರೆ ಬಹುಸಂಖ್ಯಾತರಾದ ಗ್ರಾಮೀಣ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕರ್ನಾಟಕದ ಗ್ರಾಮೀಣ ಮತ್ತು ನಗರ ಮಹಿಳೆಯರ ಶಿಕ್ಷಣದ ಪ್ರಮಾಣ ನೋಡಿದಾಗ ಇದು ಸ್ಪಷ್ಟವೆನಿಸುತ್ತದೆ.

೨೦೦೧ರಂತೆ ನಗರ ಮಹಿಳೆಯರ ಶಿಕ್ಷಣ ಪ್ರಮಾಣ ೭೪.೧೩ ಇದೆ. ಗ್ರಾಮೀಣ ಮಹಿಳೆಯರ ಶಿಕ್ಷಣ ೪೮ರಷ್ಟಿದೆ. ಗ್ರಾಮೀಣ ಮಹಿಳೆಯರಿಗೆ ಶಿಕ್ಷಣವು ಅಗತ್ಯವಾಗಿದೆ. ಮಹಿಳಾ ಜನಸಂಖ್ಯೆಯಲ್ಲಿ

ಶೇ. ೭೦ರಷ್ಟು ಗ್ರಾಮೀಣ ಮಹಿಳೆಯರಿದ್ದಾರೆ. ಇತ್ತೀಚೆಗೆ ಭಾರತೀಯ ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮಹಿಳೆಯರಿಗೆ ೩೩ರಷ್ಟು ಮೀಸಲಾತಿ ನೀಡಲಾಗಿದೆ. ಗ್ರಾಮೀಣ ಮಹಿಳೆಯರು ಇಂದು ಈ ಮೀಸಲಾತಿ ಮೀರಿ ಪಂಚಾಯತಿಗಳಿಗೆ ಆಯ್ಕೆಯಾಗುತ್ತಿದ್ದಾರೆ. ಮಕ್ಕಳ ಶಿಕ್ಷಣ, ಕೃಷಿ, ಪಶುಪಾಲನೆ, ಆರೋಗ್ಯ ಮುಂತಾದವುಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಲು ಮಹಿಳೆಯರಿಗೆ ಶಿಕ್ಷಣ ಮಹತ್ವವಾಗಿದೆ. ಇಂತಹ ಶಿಕ್ಷಣದಿಂದ ಸಮೃದ್ಧಿ ಜೀವನ ನಡೆಸಲು ಮಹಿಳೆಯರಿಗೆ ಅಕ್ಷರ ಸಂಸ್ಕೃತಿ ಬೇಕು, ತನ್ನ ವ್ಯಕ್ತಿತ್ವ ಕಟ್ಟಿಕೊಳ್ಳಲು ಅಕ್ಷರಜ್ಞಾನ ಬೇಕು, ತನ್ನ ಹಿತಾಸಕ್ತಿಗಳಾಗುವುವು ಎಂಬುದನ್ನು ಕಂಡುಕೊಳ್ಳಲು ಕುಟುಂಬದಲ್ಲಿ ನಿರ್ಣಯ ತೆಗೆದುಕೊಳ್ಳಲು ಮಹಿಳೆಯರಿಗೆ ಶಿಕ್ಷಣ ಅಗತ್ಯವಾಗಿದೆ ಎಂದು ತಿಳಿದುಬಂದಿದೆ.

ಪ್ರಾಥಮಿಕ ಶಿಕ್ಷಣ, ಆರೋಗ್ಯ, ಆಹಾರ, ಭದ್ರತೆ, ದೈಹಿಕ ಘನತೆ, ಸ್ವಾಯತ್ತತೆಗಳಿಂದ ಮಹಿಳೆಯರು ವ್ಯವಸ್ಥಿತವಾಗಿ ವಂಚಿತರಾಗುತ್ತಿದ್ದಾರೆ. ಅಮರ್ಥ್ಯ ಸೇನ್ ಪ್ರಕಾರ ಸಮಾಜದಲ್ಲಿ ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆ ಇದ್ದಿದ್ದರೆ, ಅಭಿವೃದ್ಧಿಯ ಪ್ರಾಥಮಿಕ ಸಂಗತಿಗಳಾದ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಪೌಷ್ಠಿಕತೆ, ಉದ್ಯೋಗ, ಕೂಲಿ ಮುಂತಾದ ಸಂಗತಿಗಳಲ್ಲಿ ಮಹಿಳೆಯರು ತಾರತಮ್ಯ ಎದುರಿಸಬೇಕಾಗಿರಲಿಲ್ಲ. ಯು.ಎನ್.ಡಿ.ಪಿ.ಯ ೧೯೯೦ರಿಂದ ಪ್ರಕಟಿಸುತ್ತಿರುವ ಮಾನವ ಅಭಿವೃದ್ಧಿ ವರದಿಯಲ್ಲಿ ಕಂಡುಬರುವಂತಹ ಪ್ರಪಂಚದ ಯಾವುದೇ ದೇಶದಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣವು ಪುರುಷರ ಸಾಕ್ಷರತೆ ಪ್ರಮಾಣಕ್ಕೆ ಸಮನಾಗಿಲ್ಲ. ಮಹಿಳೆಯರು ಮನೆಯೊಳಗೆ ಮತ್ತು ಮನೆಯ ಹೊರಗೂ ದುಡಿಮೆ ಮಾಡಬೇಕಾಗಿರುವುದರಿಂದ ಉದ್ಯೋಗದಲ್ಲಿ ವೃತ್ತಿ ನೈಪುಣ್ಯತೆಯನ್ನು ಗಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾಗಿ ಮಹಿಳೆಯರು ತಮ್ಮ ಗೃಹಣಿಯ ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ಸಂಬಂಧಿಗಳಿಗೆ ಬಿಟ್ಟುಕೊಡುತ್ತಾರೆ.

'ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರು' ಎಂಬುದು ಒಂದು ಅಖಂಡವಾದ ಮತ್ತು ವಿಭಿನ್ನವಾದ ಗುಂಪಲ್ಲಿ ಅದನ್ನು ಭಿನ್ನವಾಗಿ ಪರಿಗಣಿಸಲು ಬರುವುದಿಲ್ಲ. ಒಂದು ವೇಳೆ ಅವರು ಒಂದು ವರ್ಗವಾಗಿದ್ದರೆ, ದಲಿತ ಮತ್ತು ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿ ವ್ಯತ್ಯಾಸವಿರಲು ಯಾವುದೇ ಕಾರಣಗಳಿಲ್ಲ. ಒಟ್ಟು ಜನಸಂಖ್ಯೆಯನ್ನು ತೆಗೆದುಕೊಂಡರೆ ಲಿಂಗಸಂಬಂಧಿ ಸಾಕ್ಷರತಾ ಅಂತರ ಶೇ. ೧೯.೭ ಅಂಶ ಗಳಷ್ಟಾಗುತ್ತದೆ. ಆದರೆ ಅದು ದಲಿತರಿಗೆ ಸಂಬಂಧಿಸಿದಂತೆ ಶೇ. ೨೨.೩೫ ಅಂಶಗಳಷ್ಟಿದ್ದರೆ, ದಲಿತೇತರರಿಗೆ ಸಂಬಂಧಿಸಿದಂತೆ ಅದು ಶೇ. ೧೬.೭೯ ಅಂಶಗಳಷ್ಟಿದೆ. ಅಂದರೆ ಸಾಕ್ಷರತೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಅಂತರ ದಲಿತೇತರರಲ್ಲಿರುವುದಕ್ಕಿಂತ ಅಧಿಕವಾಗಿದೆ. ಇದರ ಇನ್ನೊಂದು ಆಯಾಮವೆಂದರೆ ದಲಿತ ಮಹಿಳೆಯರು ಮತ್ತು ದಲಿತೇತರ ಮಹಿಳೆಯರ ನಡುವಿನ ಸಾಕ್ಷರತಾ ಅಂತರವಾಗಿದೆ ಎಂದಿದ್ದಾರೆ.

೪೧. **ವಿರಭದ್ರನಾಯ್ಕ ಪಿ. (೨೦೧೦) ಅವರ ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು ಎಂಬ ಮಂಟಪ ಮಾಲೆ (೧೯೪) ಪುಸ್ತಕದಲ್ಲಿ** ಎರಡು ಪೋಡುಗಳ ಸಮುದಾಯದ ಮಕ್ಕಳು ಕಾಡಿನಲ್ಲಿ ಆಟ ಆಡಿಕೊಂಡು ಕಾಲಕಳೆಯುತ್ತಿದ್ದಾರೆ. ಶಿಕ್ಷಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳೆರಡು ನಮ್ಮ ಮಕ್ಕಳಿಗೆ ಅನ್ಯಾಯ ಮಾಡುತ್ತಿವೆ. ಎರಡು ಪೋಡುಗಳ ನಡುವೆ ಶಾಲೆ ತೆರೆದು ಎರಡು ಪೋಡುಗಳಿಂದ ಇಬ್ಬರು ಅಡುಗೆಯವರನ್ನು ನೇಮಿಸಿಕೊಂಡರೆ ಮಕ್ಕಳನ್ನು ಕರೆದುಕೊಂಡು ಬರಲು ಸಹಕಾರಿಯಾಗುತ್ತದೆ. ಶಾಲೆ ಮುಗಿದ ಮೇಲೆ ಮಕ್ಕಳನ್ನು ವಾಪಸ್ಸು ಕರೆದುಕೊಂಡು ಹೊಗಲು ಸಹಕಾರಿಯಾಗುತ್ತದೆ. ನಾವು ನಮ್ಮ ಪೋಡುಗಳಲ್ಲಿ ಇರುವ ಎಲ್ಲಾ ಮಕ್ಕಳನ್ನು ಶಾಲೆಗೆ ವ್ಯವಸ್ಥಿತವಾಗಿ ಹೋಗುವಂತೆ ನೋಡಿಕೊಳ್ಳುತ್ತೇವೆ ಎಂದು ತಿಳಿಸಿದ್ದಾರೆ. ಒಟ್ಟಾರೆ ಈ ಪ್ರದೇಶದಲ್ಲಿ ಯಾವುದೇ ಮೂಲಸೌಕರ್ಯಗಳು, ಸಾರಿಗೆ ಸಂಪರ್ಕ ಇಲ್ಲದ ಕಾರಣ ಇಲ್ಲಿ ಕೆಲಸ ಮಾಡುವವರು ಬಹಳ ಬದ್ಧತೆಯಿಂದ ನಮ್ಮಲ್ಲೇ ವಾಸವಿದ್ದು ಕಲಿಸಬೇಕಾಗುತ್ತದೆ.

೪೨. ವಿ.ಪಿ. ನಿರಂಜನಾರಾಧ್ಯ (೨೦೧೦) ಸಾಕ್ಷರತೆಯಲ್ಲಿ ಪ್ರದೇಶವಾರು ಮತ್ತು ಜಾತಿವಾರು ಅಂತರ ಸಹ ಇದೆ. ಸಾಕ್ಷರತೆ ನಿರ್ಧರಿಸುವ ಮಾನದಂಡಗಳ ಕುರಿತು ಮರುಪರಿಶೀಲನೆ ನಡೆಸಬೇಕು. ಸಾಂಕೇತಿಕ ಸಾಕ್ಷರತೆಯ ಬದಲಾಗಿ ಕ್ರಿಯಾತ್ಮಕ ಸಾಕ್ಷರತೆ ನಮಗೆ ಬೇಕು. ಸಾಕ್ಷರತೆಯಿಂದ ಪ್ರಜಾಪ್ರಭುತ್ವದ ಬಲವರ್ಧನೆ ಆಗಬೇಕು. ಉತ್ತಮ ಆಡಳಿತ ಬರಬೇಕು. ಆದರೆ ವಾಸ್ತವಿಕತೆ ಇದಕ್ಕೆ ವಿರುದ್ಧವಾಗಿದೆ ಎಂದಿದ್ದಾರೆ.

೪೩. ಚಂದ್ರಶೇಖರ್ ಟಿ.ಆರ್., (೨೦೧೦) ಅವರು **ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ** (ಮಂಟಪಮಾಲೆ-೧೬೯) ಪುಸ್ತಕದಲ್ಲಿ ಗ್ರಾಮೀಣ ಮತ್ತು ನಗರಗಳಿಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಸಾಕ್ಷರತ ಅಂತರವು ೧೯೯೧ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇ. ೨೫.೫೪ರಷ್ಟಿದೆ. ೨೦೦೧ರಲ್ಲಿ ಅದು ಶೇ. ೨೨.೪೪ ಕಡಿಮೆಯಾಗಿದೆ. ಅದೇ ರೀತಿಯಲ್ಲಿ ನಗರ ಪ್ರದೇಶದಲ್ಲಿ ಅಂದು ೧೯೯೧ರಲ್ಲಿ ಶೇ. ೧೭.೩೦ರಷ್ಟಿದ್ದು ೨೦೦೧ರಲ್ಲಿ ಶೇ. ೧೨.೫೩ ಕಡಿಮೆಯಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಲಿಂಗಸಂಬಂಧಿ ಸಾಕ್ಷರತೆಯ ಅಂತರವು ನಗರ ಪ್ರದೇಶದಲ್ಲಿರುವುದಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಅಧಿಕವಾಗಿದೆ. ಇಲ್ಲಿ ಎರಡು ಬಗೆಯ ಅಸಮಾನತೆಗಳು ನಮ್ಮ ಮುಂದಿವೆ. ಮೊದಲನೆಯದು ಗ್ರಾಮೀಣ ಮತ್ತು ನಗರ ನಡುವಿನ ಅಂತರವಾದರೆ ಎರಡನೆಯದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಲಿಂಗಸಂಬಂಧಿ ಸಾಕ್ಷರತ ಅಂತರ ಇವೆರಡನ್ನೂ ಏಕಕಾಲದಲ್ಲಿ ಎದುರಿಸಬೇಕಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಂತರವನ್ನು ಗಮನಿಸಿದರೆ ಸಾಕಾಗುವುದಿಲ್ಲ. ಇಲ್ಲಿ ಪ್ರಜ್ಞಾಪೂರ್ವಕವಾಗಿ ಲಿಂಗಸಂಬಂಧಿ ಅಸಮಾನತೆಯನ್ನು ಗಮನಿಸಬೇಕು. ಅದರ ನಿವಾರಣೆಗೂ ಪ್ರಯತ್ನಿಸಬೇಕಾದ ಅಗತ್ಯವಿದೆಯೆಂದು ಒತ್ತಿ ಹೇಳಿದ್ದಾರೆ.

೪೪. ಪ್ರಶಾಂತ್ ಎಚ್.ಡಿ. (೨೦೧೦) ಅವರ **ಶೈಕ್ಷಣಿಕ ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು** ಎಂಬ ಪುಸ್ತಕದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಚಿಂತಿಸುವವರು ಕೂಡ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಬಗ್ಗೆ ನಕಾರಾತ್ಮಕ ಧೋರಣೆಯನ್ನು ತಾಳಿದ್ದಾರೆ. ಅತ್ಯಧಿಕ ಸಂಖ್ಯೆಯ ಪೋಷಕರು ತಮ್ಮ ಗಂಡುಮಕ್ಕಳು ಓದುವ ತನಕ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿದ್ದಾರೆ. ಆದರೆ ಬಹುತೇಕ ಪೋಷಕರು ಹೆಣ್ಣಮಕ್ಕಳ ಶಿಕ್ಷಣ ಕುರಿತು ಇಂತಹ ಮನೋಭಾವನೆಯನ್ನು ಹೊಂದಿರುವುದಿಲ್ಲ. ಸ್ವಲ್ಪ ಪ್ರಮಾಣದ ಹೆಣ್ಣುಮಕ್ಕಳು ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚಿನ ಶಿಕ್ಷಣ ಪಡೆಯುವುದನ್ನು ವಾಸ್ತವಿಕವಾಗಿ ಒಪ್ಪಿಕೊಳ್ಳುವ ಸ್ಥಿತಿಯಲಿಲ್ಲ. ಇದಕ್ಕೆ ಪ್ರಮುಖ ಕಾರಣ ತಮ್ಮ ಹಳ್ಳಿಗಳಿಂದ ಸ್ವಲ್ಪ ದೂರದಲ್ಲಿ ಶಾಲೆಗಳಿರುವುದು ಮತ್ತೊಂದು ಗ್ರಾಮದ ಶಾಲೆಗೆ ಹೆಣ್ಣುಮಕ್ಕಳು ಹೋಗುವುದು ಕೆಲವೇ ಪೋಷಕರಿಗೆ ಇಷ್ಟವಿಲ್ಲದಿರುವುದು. ಇದು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳು ದೊರೆಯದೆ ಇರುವ ಸಮಸ್ಯೆಯನ್ನು ಎತ್ತಿತೋರಿಸುತ್ತದೆ. ಪೋಷಕರು ಉನ್ನತ ಶಿಕ್ಷಣ ಪಡೆದ ಹೆಣ್ಣುಮಕ್ಕಳಿಗೆ ಮದುವೆ ಮಾಡುವುದು ಕಷ್ಟವಾಗುತ್ತದೆ.

೪೫. ನಿರಂಜನಾರಾಧ್ಯ ವಿ.ಪಿ. (೨೦೧೧) ಶಿಕ್ಷಣ ತಜ್ಞರು, ಸಾಕ್ಷರತೆಯಲ್ಲಿ ಪ್ರದೇಶವಾರು ಮತ್ತು ಜಾತಿವಾರು ಅಂತರ ಸಹ ಇದೆ. ಸಾಕ್ಷರತೆ ನಿರ್ಧರಿಸುವ ಮಾನದಂಡಗಳ ಕುರಿತು ಮರು ಪರಿಶೀಲನೆ ನಡೆಸಬೇಕು ಸಾಂಕೇತಿಕ ಸಾಕ್ಷರತೆಯ ಬದಲಾಗಿ ಕ್ರಿಯಾತ್ಮಕ ಸಾಕ್ಷರತೆ ನಮಗೆ ಬೇಕು. ಸಾಕ್ಷರತೆಯಿಂದ ಪ್ರಜಾಪ್ರಭುತ್ವದ ಬಲವರ್ಧನೆ ಆಗಬೇಕು. ಉತ್ತಮ ಆಡಳಿತ ಬರಬೇಕು. ಆದರೆ ವಾಸ್ತವಿಕತೆ ಇದಕ್ಕೆ ವಿರುದ್ಧವಾಗಿದೆ ಎಂದಿದ್ದಾರೆ.

೪೬. ರಂಗನಾಥ್ ಎಚ್.ಎ. (೨೦೧೧) ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಮತ್ತು ರಾಷ್ಟ್ರೀಯ ಮಾನ್ಯತೆ ಮತ್ತು ಮೌಲ್ಯಾಂಕ ಸಂಸ್ಥೆಯ(ನ್ಯಾಕ್) ನಿರ್ದೇಶಕರು ಐದಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ಹಾಸನ, ಹುಬ್ಬಳ್ಳಿ, ಧಾರವಾಡ, ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಪ್ರಾರಂಭಗೊಂಡಿದೆ. ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆಯಲ್ಲಿ ಬಹುಚರ್ಚಿತ ವಿಷಯ ಶೈಕ್ಷಣಿಕ ಗುಣಮಟ್ಟ ಕಡಿಮೆ ಮಕ್ಕಳಿರುವ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಿಲ್ಲ ಎಂದು ಶಿಕ್ಷಣ ಇಲಾಖೆ ಹೇಳಿದರೆ, ಸರ್ಕಾರಿ ಶಾಲೆಗಳು ಗುಣಮಟ್ಟದ ಶಿಕ್ಷಣ ನೀಡಲು ಸಂಪೂರ್ಣ ಸೋತಿರುವುದರಿಂದಲೇ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ದಿನದಿಂದ ದಿನಕ್ಕೆ ಇಳಿಯುತ್ತಿದೆ ಎನ್ನುತ್ತಾರೆ ಶಿಕ್ಷಣ ತಜ್ಞರು.

೪೭. ಎರಡು ವಾದಗಳು ಕೂಡ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಾಧ್ಯವಾಗುತ್ತಿಲ್ಲ ಎಂಬುದನ್ನು ಸಾಬೀತುಪಡಿಸುತ್ತಿವೆಯಾದರೂ ಆರ್ಥಿಕವಾಗಿ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಹೆಚ್ಚು ಹಣವನ್ನು ಒಂದು ಮಗುವಿಗೆ ಶಿಕ್ಷಣ ನೀಡಲು ವಿನಿಯೋಗಿಸುತ್ತಿವೆ. ಶಿಕ್ಷಣ ಇಲಾಖೆಯ ಆಪ್ತ ಮೂಲಗಳ ಪ್ರಕಾರ ಸ್ಕಾಲರ್ ಶಿಪ್ ಹೊರತುಪಡಿಸಿ ಪ್ರತಿ ಮಗುವಿಗೆ

೧೧೦೦೦ ರೂ.ಗಳನ್ನು ವೆಚ್ಚಮಾಡಲಾಗುತ್ತಿದೆ. ಆದರೆ ಅರೆ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಶೇ. ೭೫ರಷ್ಟು ಖಾಸಗಿ ಶಾಲೆಗಳು ಪ್ರತಿ ಮಗುವಿಗೆ ವಿನಿಯೋಗಿಸುತ್ತಿರುವ ಹಣ ಕೇವಲ ಆರ ರಿಂದ ಎಂಟು ಸಾವಿರಗಳು ಮಾತ್ರ ೨೦೦೧ರಲ್ಲಿ ಸರ್ವಶಿಕ್ಷಣ ಅಭಿಯಾನ ಜಾರಿಗೆ ಬಂದ ನಂತರ ಕೇಂದ್ರದಿಂದ ರಾಜ್ಯಕ್ಕೆ ಇದುವರೆಗೆ ೬೭೦೦ ಕೋಟಿ ರೂ. ಅನುದಾನ ಲಭ್ಯವಾಗಿದೆ. ಮೂರು ವರ್ಷಗಳ ಹಿಂದೆ ೯೫೦ ಕೋಟಿ ರೂ. ಅನುದಾನ ಸಿಕ್ಕರೆ, ಈ ವರ್ಷ ೧೫೦೦ ಕೋಟಿ ರೂ. ನೆರವು ದೊರೆತಿದೆ. ಆದರೂ ರಾಜ್ಯದ ೧೫೭ ಸರ್ಕಾರಿ ಶಾಲೆಗಳಲ್ಲಿ ಈ ವರ್ಷ ಮಕ್ಕಳ ದಾಖಲಾತಿ ನಡೆಯದಿರಲು ಕಾರಣವೇನು? ಸರಿಸುಮಾರು ೨೫೫೭ ಶಾಲೆಗಳನ್ನು ವಿಲೀನಗೊಳಿಸುವ ಪರಿಸ್ಥಿತಿ ಹೇಗೆ ನಿರ್ಮಾಣವಾಯಿತು? ಎಂಬುದು ಶಿಕ್ಷಣ ತಜ್ಞರ ಅಭಿಪ್ರಾಯವಾಗಿದೆ.

೪೮. ನಿರಂಜನಾರಾಧ್ಯಾ ವಿ.ಪಿ., (೨೦೧೧) ಉದಯವಾಣಿ ಅಂಕಣಕಾರ ಶಾಲೆಗಳನ್ನು ಮುಚ್ಚುವ ಅಥವಾ ವಿಲೀನಗೊಳಿಸುವ ವಿಚಾರದಲ್ಲಿ ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ(ಎನ್.ಎಲ್.ಎಸ್.ಡಿ.ಯು) ಸಂಸ್ಥೆಯು ಮಗು ಮತ್ತು ಕಾನೂನು ಕೇಂದ್ರ ಅಧ್ಯಯನವೊಂದನ್ನು ಮಾಡಿದೆ. ಇದಕ್ಕಾಗಿ ಕೇಂದ್ರ ಆಯ್ಕೆ ಮಾಡಿಕೊಂಡಿದ್ದು ರಾಮನಗರ ತಾಲೂಕು. ಈಗ ರಾಮನಗರ ಹೊಸ ಜಿಲ್ಲೆ. ಈ ಆದೇಶದನ್ವಯ ಮುಚ್ಚಬೇಕಾದ ಶಾಲೆಗಳ ಒಟ್ಟು ಸಂಖ್ಯೆ ೨೧ ಇದರಲ್ಲಿ ೧೪ ಕಿರಿಯ ಪ್ರಾಥಮಿಕ ಶಾಲೆ ಮತ್ತು ೭ ಹಿರಿಯ ಪ್ರಾಥಮಿಕ ಶಾಲೆಗಳು. ಮುಚ್ಚುತ್ತಿರುವ ಶಾಲೆಗಳ ಪರಿಸರದಲ್ಲಿ ವಾಸಿಸುತ್ತಿರುವ ಜನ ಕಡುಬಡವರು. ಪರಿಶಿಷ್ಟ/ಪಂಗಡದ ಹಿಂದುಳಿದ ವರ್ಗಗಳು ಹಾಗೂ ಇತರೆ ವರ್ಗಗಳಿಗೆ ಸೇರಿದವರು. ಮುಚ್ಚುತ್ತಿರುವ ೨೧ ಶಾಲೆಗಳಲ್ಲಿ ಒಟ್ಟು ೧೮೯ ಮಕ್ಕಳು ಪ್ರಾಥಮಿಕ ಶಿಕ್ಷಣದ ಮೂಲಭೂತ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಇನ್ನೂ ಆಘಾತಕಾರಿ ವಿಷಯ ಎಂದರೆ ಇವರಲ್ಲಿ ಬಹುತೇಕರು ಹೆಣ್ಣುಮಕ್ಕಳು. ಅಧ್ಯಯನದ ಸಂದರ್ಭದಲ್ಲಿ ಆದ ಸತ್ಯದರ್ಶನ ಒಂದೇ ಇಲ್ಲಿನವರು ಗಂಡುಮಕ್ಕಳನ್ನು ಹತ್ತಿರದ ಖಾಸಗಿ ಆಂಗ್ಲಮಾಧ್ಯಮ ಶಾಲೆಗೆ ಹೋದರೆ ಹೆಣ್ಣುಮಕ್ಕಳನ್ನು ಮಾತ್ರ ಗ್ರಾಮದ ಸರ್ಕಾರಿ ಕನ್ನಡ ಶಾಲೆಗೆ ಕಳುಹಿಸುತ್ತಿದ್ದಾರೆ. ತೊಡೆದು ಹಾಕಲಾಗಿದೆ ಎನ್ನಲಾಗುವ ಲಿಂಗತಾರತಮ್ಯ ಇಲ್ಲಿ ಇನ್ನೂ ಜೀವಂತವಾಗಿದೆ. ಹಾಗಾದರೆ ವಿಲೀನದಿಂದ ಪರಿಣಾಮ ಬೀರುವುದು ಯಾರ ಮೇಲೆ? ಹೆಣ್ಣುಮಕ್ಕಳ ಮೇಲೆ. ಶಾಲೆ ದೂರವಾಯಿತೆಂದೋ ಅಷ್ಟು ದೂರಕ್ಕೆ ಹೋದರೆ ಅವರ ಸುರಕ್ಷತೆಯ ಪ್ರಶ್ನೆ ಏಳುತ್ತದೆಂದೋ ನೆಪವೊಡ್ಡಿ ತಂದೆ-ತಾಯಿಗಳು ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸದಿರಲು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

೪೯. ೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಸಾಕ್ಷರತೆಯ ಪ್ರಮಾಣವು ಶೇ. ೭೫.೬೧ರಷ್ಟು ಕಂಡುಬಂದಿದ್ದು ೨೩ನೇ ಸ್ಥಾನ ಪಡೆದಿದೆ. ಮೊದಲ ೩ ಸ್ಥಾನಗಳಲ್ಲಿ ಕೇರಳ ಶೇ. ೯೪ರಷ್ಟು, ಲಕ್ಷದ್ವೀಪ ಶೇ. ೯೨ರಷ್ಟು ಮಿಜೊರಾಂ ಶೇ. ೯೨ರಷ್ಟು ಸಾಕ್ಷರತೆ ಸಾಧಿಸಿರುವ

ರಾಜ್ಯಗಳಾಗಿವೆ. ಕರ್ನಾಟಕದಲ್ಲಿ ಪುರುಷರ ಸಾಕ್ಷರತೆ ಶೇ. ೮೨.೮೪ರಷ್ಟು ಕಂಡುಬಂದರೆ ಮಹಿಳಾ ಸಾಕ್ಷರತೆಯು ಶೇ. ೬೮.೧೫ರಷ್ಟು ಕಂಡುಬಂದಿದೆ. ಒಟ್ಟಾರೆಯಾಗಿ ಯಾದಗಿರಿ ಜಿಲ್ಲೆ ಕೊನೆಯ ಸ್ಥಾನದಲಿದ್ದು, ಇದು ಶೇ. ೫೨.೩೬ರಷ್ಟು ಸಾಕ್ಷರತೆಯನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯು ೮೮.೬೨ರಷ್ಟು ಸಾಕ್ಷರತೆ ಹೊಂದಿ ಪ್ರಥಮ ಸ್ಥಾನದಲ್ಲಿದೆ. ದ್ವಿತೀಯ ಸ್ಥಾನ ಬೆಂಗಳೂರು ನಗರ ಜಿಲ್ಲೆ ಹೊಂದಿದೆ. ಶೇ. ೮೮.೪೮ರಷ್ಟು ಸಾಕ್ಷರತೆ ಸಾಧಿಸಿದೆ. ಕರ್ನಾಟಕದಲ್ಲಿ ಒಟ್ಟು ಸಾಕ್ಷರರ ಪ್ರಮಾಣ ೭೫.೧೦% ಪುರುಷರ ಸಾಕ್ಷರತೆ ಪ್ರಮಾಣವು ಶೇ. ೮೨.೮೪ರಷ್ಟು ಕಂಡುಬಂದು, ಮಹಿಳಾ ಸಾಕ್ಷರರ ಪ್ರಮಾಣ ಶೇ. ೬೮.೧೩ರಷ್ಟಿದೆ. ದಕ್ಷಿಣ ಕನ್ನಡ ಜಿಲ್ಲೆಯು ೯೩.೩೧ರಷ್ಟು ಸಾಕ್ಷರತೆಯನ್ನು ಹೊಂದಿದ್ದು, ರಾಜ್ಯದಲ್ಲಿ ಪ್ರಥಮ ಸ್ಥಾನ ಹೊಂದಿದೆ. ಬೆಂಗಳೂರು ನಗರ ಜಿಲ್ಲೆಯು ಶೇ. ೯೧.೮೩ರಷ್ಟು ಸಾಕ್ಷರತೆಯನ್ನು ಹೊಂದಿದ್ದು, ೨ನೇ ಸ್ಥಾನದಲ್ಲಿದೆ. ಯಾದಗಿರಿ ಜಿಲ್ಲೆಯು ಕೊನೆಯ ಸ್ಥಾನದಲ್ಲಿದ್ದು, ಚಾಮರಾಜನಗರ, ರಾಯಚೂರು, ಗುಲ್ಬರ್ಗ, ರಾಮನಗರ ಕಡಿಮೆ ಸಾಕ್ಷರತೆ ಹೊಂದಿದ ಜಿಲ್ಲೆಗಳಾಗಿವೆ. ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಶೇ. ೬೮.೧೫ರಷ್ಟು ಇದೆ. ಜಿಲ್ಲಾವಾರು ಸಾಕ್ಷರತೆಯಲ್ಲಿ ಬೆಂಗಳೂರು ನಗರ ಶೇ. ೮೪.೮೦ರಷ್ಟು ಮಹಿಳಾ ಸಾಕ್ಷರತೆಯನ್ನು ಹೊಂದಿ ಪ್ರಥಮ ಸ್ಥಾನದಲ್ಲಿದ್ದರೆ, ದಕ್ಷಿಣ ಕನ್ನಡ ಜಿಲ್ಲೆ ದ್ವಿತೀಯ ಸ್ಥಾನ ಶೇ. ೮೧.೪೧ರಷ್ಟು ಹೊಂದಿದೆ. ಯಾದಗಿರಿ ಕೊನೆಯ ಸ್ಥಾನದಲ್ಲಿದೆ. ರಾಯಚೂರು, ಚಾಮರಾಜನಗರ, ಗುಲ್ಬರ್ಗ, ಕೊಪ್ಪಳವು ಸಹ ಕೊನೆಯ ಸ್ಥಾನದಲ್ಲಿವೆ. ಇಷ್ಟೆಲ್ಲಾ ಮೇಲಿನ ಸೌಲಭ್ಯಗಳು ಇದ್ದರೂ ನಗರ ಪ್ರದೇಶಕ್ಕೆ ಹೋಲಿಸಿಕೊಂಡರೆ ರಾಮನಗರ ಜಿಲ್ಲೆ ಕನಕಪುರ ತಾಲೂಕಿನ ಹೆಣ್ಣುಮಕ್ಕಳ ಶಿಕ್ಷಣ ಕಡಿಮೆ ಇದೆ. ವಿವಿಧ ಯೋಜನೆಗಳ ಅನುಷ್ಠಾನಗೊಳಿಸುತ್ತಿದ್ದರೂ ಶಿಕ್ಷಣದ ಹಿಂದುಳಿಕೆಗೆ ಆರ್ಥಿಕ, ಸಾಮಾಜಿಕ ಸಂಗತಿಗಳು ಕಾರಣವಾಗಿದೆ. ಜೊತೆಗೆ ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗ ಹೆಣ್ಣುಮಕ್ಕಳ ಅಂತರಕ್ಕೆ ಕಾರಣಗಳೇನು ಎಂದು ತಿಳಿಯಲು ಈ ಅಧ್ಯಯನ ಕೈಗೊಳ್ಳಲಾಗಿದೆ.

೫೦. ಭಾರತದ ಮಾನವ ಅಭಿವೃದ್ಧಿ ವರದಿ (೨೦೧೧) ಹೆಣ್ಣುಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರವು ಆರಂಭಿಸಿರುವ ಅನೇಕ ಯೋಜನೆಗಳು ಫಲ ನೀಡಿರುವುದರಿಂದ ಶಿಕ್ಷಣ ಪಡೆಯುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ಏರಿದೆ. ಗ್ರಾಮಾಂತರ ಪ್ರದೇಶದಲ್ಲಿ ಹೆಣ್ಣುಮಕ್ಕಳನ್ನು ದುಡಿಸಿಕೊಳ್ಳುತ್ತಿರುವುದು ಜಾಸ್ತಿ. ಆದರೆ ಇತ್ತೀಚಿನ ಸಮೀಕ್ಷೆಯ ಪ್ರಕಾರ ಈ ವರ್ಗದ ಬಾಲ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಇಳಿದಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ. ೨.೨ರಷ್ಟು ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ. ಶೇ. ೩ರಷ್ಟು ಗಂಡುಮಕ್ಕಳು ದುಡಿಯುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ವಯಂ ಸೇವಾ ಸಂಸ್ಥೆಗಳ ನೇರವಿನೊಂದಿಗೆ ಸರ್ವಶಿಕ್ಷಣ ಅಭಿಯಾನದಂತಹ ಯೋಜನೆಗಳನ್ನು ಜಾರಿ ಮಾಡಿರುವುದರಿಂದ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸಾಕ್ಷರರಾಗುತ್ತಿದ್ದಾರೆ.

೫೧. **ರಫಿಕ್ ಅಹ್ಮದ್ (೨೦೧೨)** ಅವರು ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಸೇರಿದಂತೆ ಯಾವುದೇ ಪರೀಕ್ಷೆಯಲ್ಲಾದರೂ ಸರಿ ಯುವತಿಯರದ್ದೇ ಮೇಲುಗೈ. ಇದಕ್ಕೆ ಪೂರಕವೆಂಬಂತೆ ಕಳೆದ ಒಂದು ದಶಕದಲ್ಲಿ ರಾಜ್ಯದಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಶೇ. ೧೨ರಷ್ಟು ಪ್ರಗತಿ ಕಂಡಿದೆ. ಹಾಗಾದರೆ ಸಾಕ್ಷರತೆ ಪ್ರಮಾಣದಲ್ಲೂ ಮಹಿಳೆಯರು ಪುರುಷರಿಗಿಂತ ಮೇಲುಗೈ ಸಾಧಿಸಿದ್ದಾರೆಯೆ? ಖಂಡಿತಾ ಇಲ್ಲ. ಈಗಲೂ ನಮ್ಮ ರಾಜ್ಯದಲ್ಲಿ ಪೋಷಕರು ಹೆಣ್ಣುಮಗುವಿಗಿಂತ ಗಂಡುಮಗುವಿಗೆ ಶಿಕ್ಷಣ ನೀಡಲು ಆದ್ಯತೆ ನೀಡುತ್ತಾರೆ. ಹೀಗಾಗಿಯೇ ಈಗಲೂ ಪುರುಷರು ಹಾಗೂ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಶೇ. ೧೪.೭ರಷ್ಟು ಅಂತರವಿದೆ. ರಾಜ್ಯದ ಒಟ್ಟಾರೆ ಸಾಕ್ಷರತೆಯ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದ್ದರೂ ಪುರುಷ ಹಾಗೂ ಮಹಿಳೆಯರ ಸಾಕ್ಷರತೆ ಪ್ರಮಾಣದಲ್ಲಿ ಮಾತ್ರ ಸಮಾನತೆ ಸಾಧಿಸಲು ಸಾಧ್ಯವಾಗುತ್ತಿಲ್ಲ. ೨೦೧೧ರ ಜನಗಣತಿಯ ಸಾಕ್ಷರತೆ ಪ್ರಮಾಣ ಶೇ. ೭೫.೬೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇ. ೮೨.೮೫ರಷ್ಟಿದ್ದರೆ, ಮಹಿಳಾ ಸಾಕ್ಷರತೆ ಪ್ರಮಾಣ ಶೇ. ೬೮.೧೩ರಷ್ಟಿದೆ ಎಂದಿದ್ದಾರೆ.

೫೨. **ವಿ.ಪಿ ನಿರಂಜನಾರಾಧ್ಯ (೨೦೧೨)** ಖ್ಯಾತ ಶಿಕ್ಷಣ ತಜ್ಞರು, ಏಕರೂಪ ಶಿಕ್ಷಣ ನೀತಿ ಎಂಬ ವಿಚಾರ ಸಂಕಿರಣದಲ್ಲಿ ರಾಜ್ಯ ಸರ್ಕಾರ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ಅಡಿಯಲ್ಲಿ ಶೇ. ೨೦ರಷ್ಟು ಮಕ್ಕಳನ್ನು ಖಾಸಗಿ ಶಾಲೆಗೆ ದಾಖಲಿಸಲಿದ್ದು, ಅಲ್ಲಿ ಅವರ ಸ್ಥಿತಿಗತಿಯ ಬಗ್ಗೆ ಕಾಳಜಿವಹಿಸುವಂತಿಲ್ಲ ಎಂದು ಶಿಕ್ಷಣ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವ್ಯಾಪಾರಿ ಮನೋಭಾವದ ಶಿಕ್ಷಣ ಸಂಸ್ಥೆಗಳ ನಡುವೆ ಬಡ ಮಕ್ಕಳು ಬೆಳೆಯುತ್ತಿದ್ದಾರೆ. ಈ ಮಕ್ಕಳ ಶಿಕ್ಷಣದ ಸ್ಥಿತಿ ಹೇಗಿದೆ ಎಂಬುದನ್ನು ಸರ್ಕಾರ ಯೋಚಿಸುತ್ತಿಲ್ಲ. ಬಡಮಕ್ಕಳ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ ಎಂದು ಅವರು ಆರೋಪಿಸಿದರು. ಸರ್ಕಾರಿ ಶಾಲೆಗಳನ್ನು ಮುಚ್ಚುವ ಬದಲು ಅವುಗಳ ಪುನರ್ ರಚನೆಯ ಬಗ್ಗೆ ಆಲೋಚಿಸಬೇಕಿದೆ. ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗದಿರುವ ಕಾರಣಗಳನ್ನು ಮೊದಲು ಗುರುತಿಸಬೇಕು. ಪ್ರತಿಯೊಂದು ವಾರ್ಡ್ ಅಥವಾ ಒಂದು ಪಂಚಾಯತ್ ಸುಸಜ್ಜಿತವಾದ ಒಂದು ಶಾಲೆ ನಿರ್ಮಾಣಮಾಡಿ ಅವುಗಳ ಗುಣಮಟ್ಟವನ್ನು ಹೆಚ್ಚಿಸಿದರೆ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಮೇಯವೆ ಬರುವುದಿಲ್ಲ ಎಂದು ಅವರು ಹೇಳಿದ್ದಾರೆ.

೫೩. **ವಿಶ್ವೇಶ್ವರ ಹೆಗಡೆ ಕಾಗೇರಿ (೨೦೧೨)** **ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು,** ಏಕರೂಪ ಶಿಕ್ಷಣ ನೀತಿ ವಿಷಯ ಕುರಿತು ವಿಚಾರ ಸಂಕಿರಣದಲ್ಲಿ ಬ್ರಿಟಿಷರ ಕಾಲದ ಮೆಕಾಲೆ ಶಿಕ್ಷಣ ನೀತಿಯ ಪಳೆಯುಳಿಕೆಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಅವರು ಇನ್ನೂ ಇದುವರೆಗೂ ಅದೇ ಶಿಕ್ಷಣ ನೀತಿಗಳನ್ನೇ ಪ್ರತಿಪಾದಿಸುತ್ತಿದ್ದಾರೆ. ಶಿಕ್ಷಣವು ಹಕ್ಕು ಹೊರತು ಸವಲತ್ತಲ್ಲ. ಅದು ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರೂ ಪಡೆಯಬೇಕಾದ ಹಕ್ಕಾಗಿದೆ. ಆದರೆ ಜೀವನಾವಶ್ಯಕವಾದ ಶಿಕ್ಷಣದಿಂದ ಅನೇಕ ಮಂದಿ ವಂಚಿತರಾಗಿದ್ದಾರೆ ಎಂಬುದು ಐತಿಹಾಸಿಕ ಸತ್ಯವಾಗಿದೆ.

೫೪. **ಮುಜಾಮಿಲ್ ಜಾನ್** ಅವರು **ಇನ್‌ಫ್ಯಾಕ್ಟ್ ಆಫ್ ಎಜುಕೇಷನ್** ಎಂಬ ಕೃತಿಯಲ್ಲಿ ಶಿಕ್ಷಣವು ಸಮಾಜ, ಇತಿಹಾಸ, ಧರ್ಮ, ಭಾಷೆ, ಮೌಲ್ಯಗಳು, ಸಾಹಿತ್ಯ, ಕಲೆ, ತಂತ್ರಜ್ಞಾನ ಮುಂತಾದ ಎಲ್ಲಾ ಅಂಶಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತದೆ. ಶಿಕ್ಷಣ ವ್ಯಕ್ತಿಗೆ ಜ್ಞಾನ ಹಾಗೂ ತಿಳಿವಳಿಕೆಯನ್ನು ನೀಡುತ್ತದೆ. ಮುಖ್ಯವಾಗಿ ವ್ಯಕ್ತಿ ತನ್ನನ್ನು ತಾನು ತಿಳಿಯಲು ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು, ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಅತ್ಯಗತ್ಯ. ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬ ಹಾಗೂ ಸಮಾಜದಲ್ಲಿ ಸಾಮರಸ್ಯ, ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡಲು ಶಿಕ್ಷಣ ಅಗತ್ಯ ಹಾಗೂ ಅನಿವಾರ್ಯ ಎಂದು ತಿಳಿಯಲಾಗಿದೆ.

೫೫. **ಶಶಿಧರ್ ಕೆ.ಆರ್.** (೨೦೧೩) (ಸಂ) ಅವರ **ಸಾರ್ವಜನಿಕ ಶಿಕ್ಷಣ ಆಯುಕ್ತರು ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ,** ರಾಷ್ಟ್ರೀಯ ಶಿಕ್ಷಣ ಅಭಿಯಾನ ಮಾದರಿ ಶಾಲೆಗಳ ಬಗ್ಗೆ ವಿವರಿಸಿದರು. ರಾಷ್ಟ್ರದ ಯಾವ ಪ್ರದೇಶದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳನ್ನು ಗುರುತಿಸಿ ಕೇಂದ್ರಿಯ ವಿದ್ಯಾಲಯಗಳ ಮಾದರಿಯಲ್ಲಿ ಶಾಲೆಗಳನ್ನು ಪ್ರಾರಂಭಿಸುವುದು. ರಾಷ್ಟ್ರದಲ್ಲಿ ಇಂತಹ ೬ ಸಾವಿರ ಶಾಲೆಗಳಿಗೆ ಮಂಜೂರಾತಿ ದೊರಕಿದ್ದು, ಕರ್ನಾಟಕ ರಾಜ್ಯಕ್ಕೆ ಇಂತಹ ೭೪ ಶಾಲೆಗಳು ಮಂಜೂರಾಗಿರುತ್ತವೆ. ಈ ಶಾಲೆಗಳಲ್ಲಿ ೬ ರಿಂದ ೧೦ನೇ ತರಗತಿಯವರಗೆ ಕಲಿಯುವ ಅವಕಾಶವಿದ್ದು ಪ್ರತಿ ತರಗತಿಗೂ ೨ ವಿಭಾಗಗಳಿಗೆ ಅವಕಾಶವಿದ್ದು, ಒಂದು ಆಂಗ್ಲ ಮಾಧ್ಯಮ ಮತ್ತೊಂದು ಪ್ರಾಂತೀಯ ಭಾಷಾ ಮಾಧ್ಯಮದ ವಿಭಾಗಗಳಿರುತ್ತದೆ. ಪ್ರತಿ ತರಗತಿಗೆ ೮೦ ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ. ರಾಷ್ಟ್ರದ ಸಾಕ್ಷರತೆಯ ದೃಷ್ಟಿಯಿಂದ ಹೆಣ್ಣುಮಕ್ಕಳ ದಾಖಲಾತಿ ಉಳಿಯುವಿಕೆ ಅಂಶಗಳ ಆಧಾರದ ಮೇಲೆ ಕೇಂದ್ರ ಸರ್ಕಾರವು ಹೆಣ್ಣುಮಕ್ಕಳು ೧೨ನೇ ತರಗತಿಯನ್ನು ಮುಂದುವರೆಸಲು ಅನುಕೂಲವಾಗುವಂತೆ ಹಾಗೂ ರಾಷ್ಟ್ರದಲ್ಲಿ ಸಮಾನತೆ ಅಂಶವನ್ನು ಆಧರಿಸಿ ಶೈಕ್ಷಣಿಕವಾಗಿ ಹಿಂದುಳಿದ ತಾಲೂಕುಗಳಲ್ಲಿ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ೨೦೧೦–೧೧ನೇ ಸಾಲಿನಿಂದ ಪ್ರಾರಂಭಿಸಲು ಸಾಧ್ಯವಾಗುವಂತೆ ಕರ್ನಾಟಕ ರಾಜ್ಯದ ೬೨ ಶೈಕ್ಷಣಿಕವಾಗಿ ಹಿಂದುಳಿದ ತಾಲೂಕುಗಳಲ್ಲಿ ಈ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಅನುಮೋದನೆ ದೊರಕಿರುತ್ತದೆ.

ಶೈಕ್ಷಣಿಕವಾಗಿ ಹಿಂದುಳಿದಿರುವ ಪ್ರದೇಶಗಳನ್ನು ಗುರುತಿಸಿ ಕೇಂದ್ರೀಯ ವಿದ್ಯಾಲಯಗಳ ಮಾದರಿಯಲ್ಲಿ ತರಗತಿಯನ್ನು ಮುಂದುವರಿಸಲು ಅನುಕೂಲವಾಗುವಂತೆ ಹಾಗೂ ರಾಷ್ಟ್ರದ ಸಮಾನತೆ ಅಂಶವನ್ನು ಆಧರಿಸಿ ಶಾಲೆಗಳನ್ನು ಪ್ರಾರಂಭಿಸುವುದು. ರಾಷ್ಟ್ರದಲ್ಲಿ ಇಂತಹ ೬ ಸಾವಿರ ಶಾಲೆಗಳಿಗೆ ಮಂಜೂರಾತಿ ದೊರಕಿದ್ದು, ಕರ್ನಾಟಕ ರಾಜ್ಯಕ್ಕೆ ಇಂತಹ ೭೪ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಈ ಶಾಲೆಗಳಲ್ಲಿ ೬ರಿಂದ ೧೦ನೇ ತರಗತಿಯವರೆಗೆ ಕಲಿಯುವ ಅವಕಾಶವಿದ್ದು, ಪ್ರತಿ ತರಗತಿಗೂ ೨ ವಿಭಾಗಗಳಿಗೆ ಅವಕಾಶವಿದ್ದು, ಒಂದು ಆಂಗ್ಲ ಮಾಧ್ಯಮ

ಮತ್ತೊಂದು ಪ್ರಾಂತೀಯ ಭಾಷಾ ಮಾಧ್ಯಮದ ವಿಭಾಗಗಳಿರುತ್ತವೆ. ಪ್ರತಿ ತರಗತಿಗೆ ೮೦ ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ. ರಾಷ್ಟ್ರದ ಸಾಕ್ಷರತೆಯ ದೃಷ್ಟಿಯಿಂದ ಹೆಣ್ಣುಮಕ್ಕಳ ದಾಖಲಾತಿ ಉಳಿಯುವಿಕೆ ಅಂಶಗಳ ಆಧಾರದ ಮೇಲೆ ಕೇಂದ್ರ ಸರ್ಕಾರವು ಹೆಣ್ಣುಮಕ್ಕಳು ೧೨ನೇ ಶೈಕ್ಷಣಿಕವಾಗಿ ಹಿಂದುಳಿದ ತಾಲೂಕುಗಳಲ್ಲಿ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ ಕರ್ನಾಟಕ ರಾಜ್ಯ ೬೨ ಶೈಕ್ಷಣಿಕವಾಗಿ ಹಿಂದುಳಿದ ತಾಲೂಕುಗಳಲ್ಲಿ ಈ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಅನುಮೋದನೆ ದೊರೆತಿರುತ್ತದೆ. ಜೊತೆಗೆ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಯಲ್ಲಿನ ೧ರಿಂದ ೧೦ನೇ ತರಗತಿಯ ವಿದ್ಯಾರ್ಥಿಗಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಲ್ತ್‌ಕಾರ್ಡ್‌ಗಳನ್ನು ಶಾಲೆಗಳಿಗೆ ವಿತರಿಸಿದೆ ಎಂದು ಆಯುಕ್ತರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೫೬. ವಾಸು ಎ.ಅರ್. ಅವರು ತಮ್ಮ ಪುಸ್ತಕ **ಶಿಕ್ಷಣ ರೂಪಾಂಕುರದಲ್ಲಿ ಸಾಕ್ಷರತೆಯ** ಮಟ್ಟದಲ್ಲಿ ರಾಜ್ಯಗಳ ನಡುವೆ ಭಿನ್ನತೆ ಇದ್ದರೂ, ದೇಶದ ಸಾಕ್ಷರತೆಯ ಸರಾಸರಿ ಮಟ್ಟ ಶೇ. ೬೫.೩೮(೨೦೦೧ ಜನಗಣತಿ) ಬಹಳಷ್ಟು ಅಭಿವೃದ್ಧಿಶೀಲ ರಾಷ್ಟ್ರಗಳಿಗಿಂತ ಕಡಿಮೆಯಾಗಿದೆ. ಹಲವು ರಾಜ್ಯಗಳು ಉದಾಹರಣೆಗೆ, ಬಿಹಾರ(ಶೇ. ೪೭.೫೩ ಅಕ್ಷರತೆ ೨೦೦೧ ಜನಗಣತಿ) ಇನ್ನೂ ಕಡಿಮೆ ಸರಾಸರಿಯನ್ನು ಹೊಂದಿದೆ. ಹೆಚ್ಚಿನ ಸಂದರ್ಭಗಳಲ್ಲಿ ಕೆಳಜಾತಿಗೆ ಹಾಗೂ ಬುಡಕಟ್ಟಿಗೆ ಸೇರಿದ ಮಕ್ಕಳು ಹಾಗೂ ಹೆಣ್ಣುಮಕ್ಕಳು ಶಿಕ್ಷಣದಿಂದ ಹೊರಗುಳಿದಿದ್ದಾರೆ. ಆದ್ದರಿಂದ ರಾಷ್ಟ್ರದಲ್ಲಿ ಶೈಕ್ಷಣಿಕ ದಾರಿದ್ರ್ಯ ಇದೆ ಎಂದು ವಿವರಿಸುವುದು ಸಮರ್ಪಕವಾಗಿದೆ. ಇಲ್ಲಿ ೬-೧೪ ವಯೋಮಾನದ ಸುಮಾರು ೧೦೦ ಮಿಲಿಯನ್ ಮಕ್ಕಳು ಶಾಲಾ ವ್ಯವಸ್ಥೆಯಿಂದ ಹೊರಗುಳಿದಿದ್ದಾರೆ

೫೭. ಕೆ. ಮಂಜಪ್ಪ ಅವರು **ದಲಿತ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ** ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಬಡತನ ಸಮಸ್ಯೆಯಿಂದ ಅನೇಕ ಸಂಖ್ಯೆಯ ಮಕ್ಕಳು ಉತ್ತಮವಾದ ಬಟ್ಟೆ ಧರಿಸದೆ ಕೆಳದರ್ಜೆಯ ಬಟ್ಟೆಯನ್ನು ಧರಿಸಿಕೊಂಡು ಶಾಲೆಗೆ ಬಂದರೆ ಅವರಲ್ಲಿ ಅತೃಪ್ತಿ ಮತ್ತು ಕೀಳರಿಮೆಗಳು ಕಾಡಲಾರಂಭಿಸುತ್ತವೆ. ಈ ಕಾರಣದಿಂದಲೇ ಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಡುವಂತಹ ಅಪಾಯಗಳಿರುತ್ತವೆ. ಇದಕ್ಕೆ ಬಹುಮುಖ್ಯ ಕಾರಣ ಪೋಷಕರ ಆರ್ಥಿಕ ಕಾರಣ. ಇದನ್ನು ಮನಗಂಡು ಸರ್ಕಾರಗಳು ಎಲ್ಲಾ ಮಕ್ಕಳಿಗೆ ಸಮಾನತೆ ಮತ್ತು ಶಿಸ್ತು ಮೂಡಿಸುವ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ಬಡಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಶಾಲೆಗಳಲ್ಲಿ ಬಡಮಕ್ಕಳಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತ ಸಮವಸ್ತ್ರವನ್ನು ವಿತರಿಸುವುದು ಮಕ್ಕಳಿಗೆ ಹೊಸ ಬಟ್ಟೆ ನೀಡಿದಂತಾಗುತ್ತದೆ. ಜೊತೆಗೆ ಪೋಷಕರಿಗೆ ಅವರ ಮಕ್ಕಳ ಶೈಕ್ಷಣಿಕ ಆರ್ಥಿಕ ಭಾರವನ್ನು ಸ್ವಲ್ಪವಾದರೂ ಇಳಿಸಿದಂತಾಗುತ್ತದೆ. ಅದೇ ರೀತಿಯಾಗಿ ಶಾಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಹೆಣ್ಣುಮಕ್ಕಳಿಗೆ ಉಚಿತ ಬ್ಯಾಗ್

ಮತ್ತು ಪಠ್ಯಪುಸ್ತಕಗಳು, ನೋಟ್‌ಬುಕ್‌ಗಳು ವಿತರಿಸುತ್ತಿದ್ದು, ಇತ್ತೀಚೆಗೆ ಖಾಸಗಿ ಶಾಲೆಗಳಲ್ಲಿಯೂ ಅದರಲ್ಲಿ ಅನುದಾನಿತ ಶಾಲೆಗಳಲ್ಲಿ ಉಚಿತ ಬೈಸಿಕಲ್ ವಿತರಣೆ ಮಾಡಲಾಗುತ್ತಿದ್ದು ಉತ್ತಮ ಬೆಳವಣಿಗೆ ಎಂದಿದ್ದಾರೆ.

೫೮. ಕೀಲು ಪಿ., (೧೯೯೦) ಅವರು **ಕೇರಳ ಪ್ರೌಢಶಾಲಾ ವಿದ್ಯಾರ್ಥಿನಿಯರ ಮಾತೃಭಾಷೆಯಲ್ಲಿನ ಮೂಲಭಾಷೆ ಕೌಶಲ್ಯಗಳು** ಎಂಬ ಪಿಎಚ್.ಡಿ ಅಧ್ಯಯನದಲ್ಲಿ ಕೆಲವು ಸಾಮಾಜಿಕ ಚಲಕಗಳ ಸಹ ಸಂಬಂಧಗಳನ್ನು ಕುರಿತಾದ ಅಧ್ಯಯನ ಕೈಗೊಂಡು ೯ನೇ ತರಗತಿಯ ೧೦೦ ವಿದ್ಯಾರ್ಥಿನಿಯರನ್ನು ತೆಗೆದುಕೊಂಡು ಭಾಷೆಯಲ್ಲಿ ಆಲಿಸುವಿಕೆ, ಗ್ರಹಿಸುವಿಕೆ, ಪರಿವೀಕ್ಷಣ, ಸಾಮಾಜಿಕ, ಆರ್ಥಿಕಮಟ್ಟದ ಮಾಪನ, ಬೌದ್ಧಿಕ ಸಾಮಾಜಿಕ ಬುದ್ಧಿಶಕ್ತಿಯ ಪರಿವೀಕ್ಷಣ ಮುಂತಾದವುಗಳನ್ನು ಕಲೆಹಾಕಿ ಪೋಷಕರ ಆದಾಯ, ಉದ್ಯೋಗ ಮತ್ತು ಶಿಕ್ಷಣ, ಸಾಮಾಜಿಕ, ಕೌಟುಂಬಿಕವಾದ ಅಂತಸ್ತುಗಳು, ಆಲಿಸುವಿಕೆ, ಗ್ರಹಿಕೆ, ಓದುಗಾರಿಕೆ ಗ್ರಹಿಕೆ, ಕೈಬರಹ ವೇಗ, ಶಬ್ದಸಂಪತ್ತು, ಪೋಷಕರ ಶೈಕ್ಷಣಿಕ ಮಟ್ಟ ಮತ್ತು ಕುಟುಂಬದ ಸಾಂಸ್ಕೃತಿಕಮಟ್ಟ ಹಾಗೂ ಶಿಕ್ಷಣ, ಕಲಿಕೆಗೆ ಮನೆಯಲ್ಲಿರುವ ಸೌಲಭ್ಯಗಳು ಅನಾನುಕೂಲಗಳಾಗಿವೆ. ಪೋಷಕರ ಉದ್ಯೋಗಗಳಲ್ಲಿ ಗಮನಾರ್ಹ ವ್ಯತ್ಯಾಸವಿದೆಯೆಂಬ ಅಂಶವನ್ನು ಅಧ್ಯಯನದಲ್ಲಿ ತಿಳಿಸಿದ್ದಾರೆ.

೫೯. **ಶಾಕುಂತಲಾ ಸಿ. ಶೆಟ್ರ ಮತ್ತು ಗಣಪತಿ ನಾಯಕ್** (೨೦೧೪) ಅವರ **ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ** ಲೇಖನದಲ್ಲಿ ಮಹಿಳಾ ಶಿಕ್ಷಣದ ಮಹತ್ವದ ಬಗ್ಗೆ ಯಾವುದೇ ರಾಷ್ಟ್ರವು ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಸಾಮರ್ಥ್ಯ ಮತ್ತು ಕೌಶಲ್ಯವನ್ನು ಬಳಸಿಕೊಳ್ಳುವಲ್ಲಿ ವಿಫಲವಾದಲ್ಲಿ ಅಭಿವೃದ್ಧಿ ಹೊಂದುವುದಿಲ್ಲ. ಭಾರತದಲ್ಲಿ ಒಟ್ಟು ಜನಸಂಖ್ಯೆಯ ೪೮೩೮ರಷ್ಟಿರುವ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿದ್ಯಾವಂತರನ್ನಾಗಿಸಲು ಸರ್ಕಾರಗಳು ಬದ್ಧವಾಗಿವೆ. ಏಷ್ಯಾದಲ್ಲಿಯೆ ಭಾರತದ ಮಹಿಳಾ ಸಾಕ್ಷರತೆಯು ಅತ್ಯಂತ ಕಡಿಮೆ ಇದೆ. ಹೆಣ್ಣುಮಕ್ಕಳ ಶಿಕ್ಷಣದ ಕಾರ್ಯತಂತ್ರ (೨೦೦೨) ತಿಳಿಸುವುದೇನೆಂದರೆ "ಹೆಣ್ಣುಮಕ್ಕಳ ಶಿಕ್ಷಣದ ಮೇಲಿನ ಧನ ವಿನಿಯೋಗವು ವ್ಯಕ್ತಿ ಕುಟುಂಬಗಳನ್ನು ಒಳಗೊಂಡು ಇಡೀ ಸಮಾಜಕ್ಕೆ ಅತ್ಯಧಿಕ ಆರ್ಥಿಕ ಪ್ರತಿಫಲವನ್ನು ಮತ್ತು ಸಾಮಾಜಿಕ ಉಪಯುಕ್ತತೆಯನ್ನು ಬಂಡವಾಳವು ತಂದಿಟ್ಟಿದೆ.

೬೦. ಕರೂರ ಎನ್.ಜಿ.(೨೦೦೨), ಅವರು **ಶಿಕ್ಷಣ ಮಾರ್ಗ** ಎನ್ನುವ ಕೃತಿಯಲ್ಲಿ ಶಿಕ್ಷಣದ ಭಾಷಿಕ ಸಮಸ್ಯೆಗಳತ್ತ ಬೆಳಕು ಚೆಲ್ಲಿದ್ದಾರೆ. ಗುಣಮಟ್ಟದ ಶಿಕ್ಷಣ ದೊರೆಯಬೇಕಾದರೆ ಅನುಸರಿಸಬೇಕಾದ ಕ್ರಮಗಳಾವುವು, ಅದಕ್ಕಿರುವ ಅಡಚಣೆಗಳೇನು ಎಂಬುದನ್ನು ವಿಸ್ತೃತವಾಗಿ ವಿವರಿಸಿದ್ದಾರೆ. ಮುಖ್ಯವಾಗಿ ಮಕ್ಕಳು ತಮ್ಮದಲ್ಲದ ಪರಕೀಯ ಭಾಷೆಯನ್ನು ಕಲಿಯುವಾಗ ಅನುಭವಿಸುವ ಅಡಚಣೆಗಳಾವುವು ಎಂಬುದನ್ನು ವಿವರಿಸುತ್ತ ಪರಿಹಾರಗಳನ್ನೂ ಸೂಚಿಸಿದ್ದಾರೆ.

೬೧. **ಕುಮಾರಸ್ವಾಮಿ ಎಚ್.** ಅವರ **ಗುಣಮಟ್ಟದ ಶಿಕ್ಷಣ-ತರಗತಿಯಲ್ಲಿ ಪ್ರಕ್ರಿಯೆಗಳು** ಎನ್ನುವ ಲೇಖನವೊಂದು (ಜನವರಿ-ಜೂನ್ ೨೦೦೭), ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಅಭಿವೃದ್ಧಿ ಅಧ್ಯಯನ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. ಈ ಲೇಖನದಲ್ಲಿ ವಿಶೇಷವಾಗಿ ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಅನುಸರಿಸುತ್ತಿರುವ ಪಠ್ಯಕ್ರಮ, ಗುಣಮಟ್ಟದ ಶಿಕ್ಷಣ ಪಡೆಯುವಲ್ಲಿ ಸೋಲುಂಟಾಗುತ್ತಿರುವುದೆಲ್ಲಿ, ಮಕ್ಕಳು ಶಾಲೆಯಿಂದ ಹೊರಗುಳಿಯಲು ಇರುವ ಕಾರಣಗಳು, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶಿಕ್ಷಕರಿಗಿರುವ ಜವಾಬ್ದಾರಿಗಳು ಮುಂತಾದ ವಿಷಯಗಳ ಕುರಿತು ಚರ್ಚಿಸಿದ್ದಾರೆ.

೬೨. **ಪದ್ಮಾರಾಮಚಂದ್ರನ್ ಮತ್ತು ವಸಂತಕುಮಾರ್**(೨೦೦೫), ಅವರು **ಎಜುಕೇಷನ್ ಇನ್ ಇಂಡಿಯಾ** ಎಂಬ ಕೃತಿಯು ಇಂಗ್ಲೀಷಿನಲ್ಲಿದ್ದು ಅದು ಭಾರತದ ಪ್ರಾಚೀನ ಶಿಕ್ಷಣಪದ್ಧತಿಯಿಂದ ತೊಡಗಿ ಆಧುನಿಕ ಶಿಕ್ಷಣದಪದ್ಧತಿ ಜಾರಿಗೆ ಬಂದ ಬಗೆಯ ಕುರಿತು ತಿಳಿಸುವುದರೊಂದಿಗೆ ಆಧುನಿಕ ಶಿಕ್ಷಣದಲ್ಲಿ ಉಂಟಾಗುತ್ತಿರುವ ಪಲ್ಲಟಗಳ ಕುರಿತು ವಿವರಿಸುತ್ತದೆ.

೬೩. ರಾಜ ಎಂ.(೧೯೯೦), ಅವರು **ಎಜುಕೇಶನ್ ಡೆವಲಪ್‌ಮೆಂಟ್ ಆ್ಯಂಡ್ ಸೊಸೈಟಿ** ಕೃತಿಯಲ್ಲಿ ಸಮಾಜದ ವಿವಿಧ ಹಂತದ ಜಾತಿ, ಸಮುದಾಯಗಳು ಹೇಗಿವೆ, ಅವುಗಳ ಅಭಿವೃದ್ಧಿಗೆ ಶಿಕ್ಷಣ ಹೇಗೆ ಪೂರಕವಾಗಿದೆ, ಹಾಗೆಯೇ ಶಿಕ್ಷಣದ ಬೆಳವಣಿಗೆಗೆ ಜಾತಿಯಾಧಾರಿತ ಸಂಸ್ಥೆಗಳು ಪೂರಕವಾಗಿ ಹೇಗೆ ಕಾರ್ಯವೆಸಗುತ್ತಿಯೆಂಬುದನ್ನು ತುಂಬಾ ವಿಸ್ತಾರವಾಗಿ ವಿವೇಚಿಸಿದ್ದಾರೆ.

೬೪. **ಮುಜುಂಮದಾರ್, ಮನಾಬಿ**(೧೯೯೭), ಅವರು **ರೂರಲ್ ಲಿಟ್ರಸಿ ಸೀನ್ ಇನ್ ತಮಿಳುನಾಡು ಆ್ಯಂಡ್ ರಾಜಸ್ಥಾನ್** ಎನ್ನುವ ಕೃತಿಯು ತಮಿಳುನಾಡು ಮತ್ತು ರಾಜಸ್ಥಾನಗಳ ಗ್ರಾಮೀಣ ಶಿಕ್ಷಣದ ಸ್ಥಿತಿಗತಿಯನ್ನು ತೌಲನಿಕವಾಗಿ ನೋಡಲಾಗಿದ್ದು ತಮಿಳುನಾಡಿಗಿಂತ ರಾಜಸ್ಥಾನದ ಗ್ರಾಮೀಣ ಜನರು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣಗಳೇನಿರಬಹುದು ಎಂಬುದನ್ನು ವಿವರಿಸಲಾಗಿದೆ.

೬೫. **ರಾಮಚಂದ್ರನ್, ವಿಮಲ**(೧೯೯೯) ಅವರು **ಅಡಲ್ಟ್ ಎಜುಕೇಶನ್: ಎ ಟೇಲ್ ಆಫ್ ಎಂಪವರ್‌ಮೆಂಟ್ ಡಿನೈಡ್** ಕೃತಿಯಲ್ಲಿ ವಯಸ್ಕರ ಶಿಕ್ಷಣದಿಂದ ವ್ಯವಸ್ಥೆಯ ಸುಸ್ಥಿರತೆ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ದೃಷ್ಟಾಂತಗಳ ಮೂಲಕ ವಿವರಿಸಿದ್ದಾರೆ.

೬೬. **ರೇಖಾ ಕೌಲ್**(೧೯೯೩) ಅವರು **ಕಾಸ್ಟ್, ಕ್ಲಾಸ್ ಆ್ಯಂಡ್ ಎಜುಕೇಶನ್** ಕೃತಿಯಲ್ಲಿ ಶಿಕ್ಷಣ ಮತ್ತು ಜಾತಿ, ವರ್ಗಗಳ ಮಧ್ಯದ ಸಂಬಂಧ ಅಂತರಗಳು ಹೇಗೆ ಏರ್ಪಟ್ಟಿವೆ. ಶಿಕ್ಷಣ ಪಡೆಯುವುದರಿಂದ ತಳಜಾತಿ, ವರ್ಗಗಳು ಹೇಗೆ ಹೊಸ ದಿಕ್ಕಿನತ್ತ ಸಾಗಬಲ್ಲವು ಎಂಬುದನ್ನು ವಿವರಿಸಿದ್ದಾರೆ.

೬೭. **ವೈದ್ಯನಾಥನ್ ಎ., ಪಿ.ಆರ್.ಜಿ. ನಾಯರ್**(೨೦೦೦), ಅವರು **ಎಲಿಮೆಂಟರಿ ಎಜುಕೇಶನ್ ಇನ್ ರೂರಲ್ ಇಂಡಿಯಾ: ಎ ಗ್ರಾಸ್ ರೂಟ್ ವ್ಯೂ**-ಕೃತಿಯಲ್ಲಿ ಗ್ರಾಮಭಾರತದ ಶೈಕ್ಷಣಿಕ

ಸ್ಥಿತಿಗತಿಗಳು ಹೇಗಿವೆ, ಅದರ ಮೂಲ ಬೇರುಗಳು ಎತ್ತ ಸಾಗಿವೆ, ಶಿಕ್ಷಣವು ಗ್ರಾಮಭಾರತಕ್ಕೆ ಎಷ್ಟು ಪ್ರಮುಖ ಎಂಬುದನ್ನು ಕೃತಿಯು ತಿಳಿಸುತ್ತದೆ.

೬೮. **ಕರುಣಾ ಚನನಾ**(೨೦೦೧) ಅವರ **ಇಂಟರಾಗೇಟಿಂಗ್ ವುಮೆನ್ಸ್ ಎಜುಕೇಶನ್**, ಕೃತಿಯಲ್ಲಿ ಮಹಿಳಾ ಶಿಕ್ಷಣದ ಕುರಿತಾಗಿ ಸವಿವರವಾದ ಸ್ಥಿತಿಗತಿಗಳ ಚಿತ್ರಣ ಇದೆ.

೬೯. **ಅರುಣ್ ಸಿ. ಮೆಹತಾ**(೨೦೦೬) ಅವರ **ಎಲೆಮೆಂಟರಿ ಎಜುಕೇಶನ್ ಇನ್ ಇಂಡಿಯಾ**, ಕೃತಿಯಲ್ಲಿ ಭಾರತದ ಪ್ರಾಥಮಿಕ ಶಿಕ್ಷಣವು ಯಾವ ದಿಕ್ಕಿನಲ್ಲಿ ನಡೆಯುತ್ತಿದೆ, ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಗಳು ಹಾಕಿಕೊಂಡಿರುವ ಯೋಜನೆಗಳ ಸ್ವರೂಪ, ಅವುಗಳ ಪ್ರಸ್ತುತತೆ, ಪ್ರಾಥಮಿಕ ಶಿಕ್ಷಣದ ಕುರಿತು ನಡೆಯುತ್ತಿರುವ ಪ್ರಯೋಗಗಳ ಕುರಿತಾದ ವಿವರಗಳು ದೊರೆಯುತ್ತವೆ.

೭೦. **ಮಹಾಬಲೇಶ್ವರರಾವ್**(೨೦೧೨) ಅವರ **ಪ್ರೌಢ ಶಿಕ್ಷಣ ಸಮಸ್ಯೆಗಳು–ಸವಾಲುಗಳು** ಕೃತಿಯು ಪ್ರಾಥಮಿಕ ಹಂತವನ್ನು ದಾಟಿ ಪ್ರೌಢಶಿಕ್ಷಣಕ್ಕೆ ಕಾಲಿರಿಸುವ ಮಕ್ಕಳ ಸಮಸ್ಯೆಗಳೇನು, ವಿಶೇಷವಾಗಿ ಹೆಣ್ಣುಮಕ್ಕಳು ಪ್ರೌಢಹಂತದ ಶಿಕ್ಷಣದಿಂದ ವಂಚನೆಗೊಳಗಾಗಲು ಇರುವ ಕಾರಣಗಳೇನು, ಪರಿಹಾರೋಪಾಯಗಳೇನು ಎಂಬುದನ್ನು ತಿಳಿಸುತ್ತದೆ.

೭೧. **ಮಹಬಲೇಶ್ವರರಾವ್**(೨೦೧೨) ಅವರ **ಪ್ರೌಢ ಶಿಕ್ಷಣ ಮತ್ತು ಶಿಕ್ಷಕನ ಕರ್ತವ್ಯಗಳು** ಕೃತಿಯಲ್ಲಿ ಪ್ರೌಢಶಿಕ್ಷಣದಲ್ಲಿ ಮಕ್ಕಳು ಕಲಿಕಾಹಂತದಲ್ಲಿ ಅನುಭವಿಸುವ ತೊಂದರೆಗಳು, ವಿಶೇಷವಾಗಿ ಭಾಷಾ ಶುದ್ಧತೆ, ಗಣಿತ ಮತ್ತು ವಿಜ್ಞಾನಗಳ ಕಲಿಕೆಯಲ್ಲಿ ಗ್ರಾಮೀಣ ಮಕ್ಕಳ ಅಸಾಮರ್ಥ್ಯತೆ, ಈ ಹಂತದ ಮಕ್ಕಳಿಗೆ ಶಿಕ್ಷಕನು ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ತಿಳಿಸಲಾಗಿದೆ.

೭೨. **ರುಕ್ಮಿಣಿ ಬ್ಯಾನರ್ಜಿ**(೨೦೦೦), ಅವರ **ಪಾವರ್ಟಿ ಆ್ಯಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರೈಮ್ ಮುಂಬೈ ಆ್ಯಂಡ್ ದೆಹಲಿ** ಎನ್ನುವ ಕೃತಿಯಲ್ಲಿ ಮುಂಬೈ ಮತ್ತು ದೆಹಲಿಯಂತಹ ಮಹಾನಗರಗಳಲ್ಲಿರುವ ಸರ್ಕಾರಿ ಶಾಲೆಗಳು, ಅವುಗಳ ಪರಿಸರ, ಶಾಲೆಯಲ್ಲಿ ವ್ಯಾಸಂಗ ಮಾಡುವ ಮಕ್ಕಳ ಆರ್ಥಿಕ ಹಿನ್ನೆಲೆ ಮುಂತಾದವುಗಳ ಕುರಿತು ತುಲನಾತ್ಮಕವಾಗಿ ವಿವರಿಸಿದ್ದಾರೆ. ಈ ಕೃತಿಯಲ್ಲಿ ಮುಖ್ಯವಾಗಿ ಸರ್ಕಾರಿ ಶಾಲೆಗೆ ಹೋಗುವ ಮಕ್ಕಳು ಹಾಗೂ ಖಾಸಗಿ ಶಾಲೆಗಳಿಗೆ ಹೋಗುವ ಮಕ್ಕಳ ಮಧ್ಯದಲ್ಲಿರುವ ಅಂತರಗಳ ಕುರಿತು ವಿವರಿಸಿದ್ದಾರೆ.

೭೩. **ಶಾರದ ಜೈನ್, ಅಲೋಕ ಮತೂರ್, ಶೋಭಿತ ರಾಜ ಗೋಪಾಲ್ ಜ್ಯೂಹಿಪಾ**(೧೯೯೯), ಅವರ **ಚಿಲ್ಡ್ರನ್ ವರ್ಕ್ಸ್ ಆ್ಯಂಡ್ ಎಜುಕೇಶನ್, ರಿ ಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್** ಎಂಬ ಕೃತಿಯಲ್ಲಿ ಬಾಲ ಕಾರ್ಮಿಕ ಪದ್ಧತಿಯಿಂದ ಮಕ್ಕಳ ಮೇಲಾಗುವ ಪರಿಣಾಮಗಳು, ಅದಕ್ಕಿರುವ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳ ಕುರಿತು ವಿವೇಚಿಸಿದ್ದಾರೆ. ಶಾಲೆಯಿಂದ ಮಕ್ಕಳಿಗಾಗಿ ಪೋಷಕರು ಹಾಗೂ ಸರ್ಕಾರಗಳು ಯಾವ ನಿಟ್ಟಿನಲ್ಲಿ ಕಾರ್ಯ ತತ್ಪರಗೊಳ್ಳಬೇಕೆಂಬುದನ್ನು ತುಂಬಾ ಮಾರ್ಮಿಕವಾಗಿ ವಿವರಿಸಲಾಗಿದೆ.

ಎನ್.ಸಿ.ಇ.ಆರ್.ಟಿ. ವರದಿಗಳ ಮಾಹಿತಿಯನ್ನಾಧರಿಸಿ ಕುಲಕರ್ಣಿಯವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಜಾತಿಯ ವಿವಿಧ ವಯೋಗುಂಪಿನ ಮಕ್ಕಳು ಶಾಲಾ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸುವ ಪ್ರಮಾಣವನ್ನು ವಿವರಿಸಿದ್ದಾರೆ. ಕುಲಕರ್ಣಿಯವರ ವಿವರಣೆಯಂತೆ ಕಡಿಮೆ ಸಾಕ್ಷರತೆಯ ರಾಜ್ಯಗಳಾದ ಬಿಹಾರ, ರಾಜಸ್ಥಾನ ಮತ್ತು ಉತ್ತರಪ್ರದೇಶಗಳಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವಿಕೆಯ ಪ್ರಮಾಣ ವಿವಿಧ ಸಾಮಾಜಿಕ ಜಾತಿವರ್ಗಗಳಲ್ಲಿ ಅತ್ಯಂತ ಹೆಚ್ಚಾಗಿ ಕಂಡುಬರುತ್ತದೆ. ಈ ಸಂಗತಿಯು ಕಡಿಮೆ ಸಾಕ್ಷರತೆಯ ರಾಜ್ಯಗಳಲ್ಲಿ ಇತರೆ ಜಾತಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ನಡುವಿನ ಶೈಕ್ಷಣಿಕ ಅಂತರ ಹೆಚ್ಚುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ. ಈ ಅಂತರ ಕಡಿಮೆ ಸಾಕ್ಷರತೆಯನ್ನು ಹೊಂದಿದ ರಾಜ್ಯಗಳ ಮಹಿಳೆಯರಲ್ಲಿ ಬಹಳ ಅಧಿಕವಾಗಿದೆ. ಈ ಅಂತರವು ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತದ ಶಿಕ್ಷಣ ಪೂರ್ಣಗೊಳಿಸುವುದರಲ್ಲಿ ಅತಿಯಾಗಿದೆ. ಇದನ್ನು ಇತರೆ ಜಾತಿ ವರ್ಗಗಳಿಗೆ ಹೋಲಿಸಿದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕಲಿಯುವ ಸಾಮಾಜಿಕ ಅವಕಾಶ ಕಡಿಮೆ ಇರುವುದೇ ಕಾರಣವೆಂಬುದು ಕುಲಕರ್ಣಿಯವರ ವಾದ. ಆದರೆ ಹಿಮಾಚಲ ಪ್ರದೇಶ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಜಾತಿಗಳ ನಡುವಿನ ಸಾಕ್ಷರತೆ ಹಾಗೂ ಶಾಲಾ ಭಾಗವಹಿಸುವಿಕೆಗಳ ಅಂತರ ಗಣನೀಯವಾಗಿ ಇಳಿಕೆಯಾಗಿದೆ ಎಂದು ತಿಳಿಸಲಾಗಿದೆ.

ಕರ್ನಾಟಕದ ಆರ್ಥಿಕ ಮತ್ತು ಸಾಂಖ್ಯಿತ ನಿರ್ದೇಶನಾಲಯದ ಸಮೀಕ್ಷೆಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುವುದಕ್ಕೆ ಅವರು ಅನುಭವಿಸುತ್ತಿರುವ ಸಾಮಾಜಿಕ ಅಸಮಾನತೆಯೇ ಗಂಭೀರವಾದುದು ಎಂಬುದನ್ನು ತಿಳಿಸುತ್ತದೆ. ಶಾಲೆ ಬಿಟ್ಟ ಮಕ್ಕಳಲ್ಲಿ ಶೇಕಡ ೩೬ರಷ್ಟು ಮಕ್ಕಳು ಶಿಕ್ಷಣಕ್ಕೆ ತಗುಲಬಹುದಾದ ಖಾಸಗಿ ವೆಚ್ಚವನ್ನು ಪೋಷಕರು ಭರಿಸಲಾಗದಿದ್ದ ಕಾರಣದಿಂದ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುತ್ತಾರೆ. ಅದರಂತೆಯೇ ಶೇಕಡ ೩೨ರಷ್ಟು ಮಕ್ಕಳು ಅವರ ಮನೆಯಲ್ಲಿನ ಕೆಲಸಗಳಲ್ಲಿ ತಮ್ಮ ಪೋಷಕರಿಗೆ ನೆರವಾಗುವ ಕಾರಣದಿಂದಾಗಿ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುತ್ತಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹೆಣ್ಣುಮಕ್ಕಳ ವಿಷಯವಾಗಿ ಸ್ಪಷ್ಟವಾಗಿಲ್ಲ. ಆದರೆ ಈ ಹೆಣ್ಣುಮಕ್ಕಳು ತಮ್ಮ ಮನೆಯಲ್ಲಿನ ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ಕಾರಣಕ್ಕಾಗಿ ಮಧ್ಯದಲ್ಲಿಯೇ ಶಾಲೆ ಬಿಡುವುದು ದೃಢಪಟ್ಟಿದೆ. ಅಲ್ಲದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಬಡಕುಟುಂಬಗಳು ತಮ್ಮ ಮಕ್ಕಳ ದುಡಿಮೆಯನ್ನು ಅವಲಂಬಿಸಿರುವುದರಿಂದ ಮಕ್ಕಳನ್ನು ಶಾಲೆಯ ಬದಲಿಯಾಗಿ ದುಡಿಮೆಗೆ ಕಳಿಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ. ಈ ಕಾರಣದಿಂದಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಡುತ್ತಾರೆ. ನಮ್ಮ ಅಧ್ಯಯನಕ್ಷೇತ್ರದಲ್ಲಿಯೂ ಕೂಡ ಈ ಮೇಲೆ ಹೇಳಿದ ಎಲ್ಲಾ ರೀತಿಯಾದ ಲಕ್ಷಣಗಳು ಕಂಡುಬರುತ್ತವೆ. ಅಧ್ಯಯನ ಕ್ಷೇತ್ರದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಖಾಸಗಿ ವೆಚ್ಚ, ಮನೆ ಕೆಲಸ, ಚಿಕ್ಕಮಕ್ಕಳ ಪಾಲನೆ, ಬಡತನ ಇತ್ಯಾದಿ ಅಂಶಗಳು ಕಾರಣವಾಗಿವೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

ಕೊನೆಟಿಪ್ಪಣಿಗಳು

೧. Horlog Commette Report, 1929, ಕುರುಕ್ಷೇತ್ರ, ಮಾಸಪತ್ರಿಕೆ, ಆಗಸ್ಟ್ ೧೨, ಬೆಂಗಳೂರು, ಪು. ೧೮

೨. ಶಿವಶಂಕರ, ೧೯೭೦, ಭಾರತೀಯ ಶಿಕ್ಷಣ, ಗಾಯತ್ರಿ ಪ್ರಕಾಶನ, ಮೈಸೂರು, ಪು. ೧೬

೩. ಹೆಗ್ಡೆ ಡಿ.ವಿ., ಮಕ್ಕಳ ಅಭಿವೃದ್ಧಿ ಎಲ್ಲರ ಹೊಣೆ, ಯೋಜನಾ ಮಾಸಪತ್ರಿಕೆ (೨೦೦೪), ನವೆಂಬರ್ ಸಮಾಚಾರ ಮತ್ತು ಪ್ರಚಾರ ಸಚಿವಾಲಯ ಭಾರತ ಸರ್ಕಾರ, ಬೆಂಗಳೂರು, ಪು. ೮

೪. ಷಾಹ ಎಚ್., ೧೯೭೯, ಓದುಗಾರಿಕೆ ಗ್ರಹಿಕೆ ಮತ್ತು ಮನೋವೈಜ್ಞಾನಿಕ ಚಲಕಗಳ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪು. ೨೫

೫. ಜೋಷಿ ಜಿ.ಎಸ್., ೧೯೮೦, ಎಜುಕೇಶನ್ ಪ್ರಾಬ್ಲಮ್ ಆಫ್ ಶೆಡ್ಯೂಲ್ಡ್ ಕ್ಯಾಸ್ಟ್ ಆಂಡ್ ಶೆಡ್ಯೂಲ್ಡ್ ಟ್ರೈಬಲ್ ಆಫ್ ಬರೋಡ, ಯುನಿವರ್ಸಿಟಿ ಆಫ್ ಬರೋಡ, ವಾಲ್ಯೂ ನಂ–೨, ಪು. ೧೮೬–೧

೬. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿ ವರದಿ, ವ್ಯಾಲ್ಯೂಮ್–೧೧, ಕೇಂದ್ರ ಗ್ರಂಥಾಲಯ, ಬೆಂಗಳೂರು, ಪು. ೧೨೫

೭ ನರಸಿಂಹಯ್ಯ ಹೆಚ್., ೧೯೯೧ರಲ್ಲಿ, ಶೈಕ್ಷಣಿಕ ವರದಿ, ವ್ಯಾಲ್ಯೂಮ್–೧, ಶಾಸನಸಭೆ ಗ್ರಂಥಾಲಯ, ಬೆಂಗಳೂರು, ಪು. ೬೮

೮. ನಾಯಕ್ ಜೆ.ಪಿ., (ಮೂಲ) ೧೯೯೪, ಭಾರತೀಯ ಶಿಕ್ಷಣದಲ್ಲಿ ಸಮತಾಗುಣ ಮತ್ತು ಪರಿಮಾಣ, ಜಯಕುಮಾರು ಹಾನಗೋಳ್ (ಅನು), ಎಂ.ಬಿ.ಎಚ್. ಪ್ರಕಾಶನ, ಬೆಂಗಳೂರು, ಪು. ೧೩೦

೯. ಗೋವಿಂದೆಗೌಡ ಎಚ್.ಜಿ., ೧೯೯೬, ಮಾಜಿ ಶಿಕ್ಷಣ ಮಂತ್ರಿಗಳು, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಯೋಜನಾ, ಸೆಪ್ಟೆಂಬರ್, ಮಾಸಪತ್ರಿಕೆ, ಬೆಂಗಳೂರು, ಪು. ೧೨

೧೦. ಗೋವಿಂದೆಗೌಡ ಎಚ್.ಜಿ., ಮಾಜಿ ಶಿಕ್ಷಣ ಮಂತ್ರಿಗಳು, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಯೋಜನಾ, ಮಾಸ ಪತ್ರಿಕೆ, ಸೆಪ್ಟೆಂಬರ್, ೧೯೯೬, ಬೆಂಗಳೂರು, ಪು. ೧೪

೧೧. ಥೇಕೆಡತ್ ಕೆ.ಕೆ., (ಅನು) ಕೆ.ಎಲ್., ಗೋಪಾಲಕೃಷ್ಣಯ್ಯ ೧೯೯೮, ಶತಮಾನದ ಅಂಚಿನಲ್ಲಿ ಶಿಕ್ಷಣ, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು, ಪು. ೬೩

೧೨. ಕೃಷ್ಣಮೂರ್ತಿ, ೧೯೯೮, ಭಾರತೀಯ ನಾರಿ ಸಮಾನತೆ, ಆಧುನಿಕ ಸಾಲ ವ್ಯವಸ್ಥೆ, ಚೇತನ ಬುಕ್‌ಹೌಸ್, ಮೈಸೂರು, ಪು. ೨೮-೨೯

೧೩. Jean drez and Amarthya sen (1999) Indian Economic Development and Social Oppartunity, Oxford University Press, New Delhi, P. 163

೧೪. ಶ್ರೀವತ್ಸವ, ಚಿಲ್ಡ್ರನ್ ವರ್ಕ್ ಆ್ಯಂಡ್ ಎಜುಕೇಷನ್ (ಇಪಿಡಬ್ಲ್ಯೂ) ಆಗಸ್ಟ್, ಹಿತಕಾರಿ ಬುಕ್‌ಹೌಸ್, ಮುಂಬಯಿ, ಪು. ೩೫

೧೫. ಲೈಟನ್ ಜಿ.ಕೆ., ವಿಲ್ಡ್ರನ್ ವರ್ಕ್ ಆಂಡ್ ಎಜುಕೇಶನ್, ೨೦೦೦, ಇ.ಪಿ.ಡಬ್ಲ್ಯೂ, ಹಿತಕಾರಿಹೌಸ್, ಮುಂಬೈ, ಪು. ೯೫

೧೬. ಕಾಮತ್ ಜ್ಯೋತ್ಸ್ನಾ, ೨೦೦೦, ಮಹಿಳೆಯರ ಒಂದು ಅಧ್ಯಯನ, ಸಮತಾ ಪ್ರಕಾಶನ, ಬೆಂಗಳೂರು, ಪು. ೪೬

೧೭. ಕೃಷ್ಣ ಎನ್.ಎಂ., ೨೦೦೦, "ಮಹಿಳೆಯರು ಮೊದಲು ಅಕ್ಷರಸ್ಥರಾಗಬೇಕು", ಕನ್ನಡಪ್ರಭ ದಿನಪತ್ರಿಕೆ, ಜುಲೈ ೦೨, ಪು. ೮

೧೮. ೨೦೧೧ರ ಕರ್ನಾಟಕ ಜಣಗಣತಿ ವರದಿ, ರಿಜಿಸ್ಟ್ರಾರ್ ಜನರಲ್ ಆ್ಯಂಡ್ ಸೆನ್ಸಸ್ ಕಮಿಷನರ್ ಆಫ್ ಇಂಡಿಯಾ, ಪು. ೩

೧೯. ಅಗರ್‌ವಾಲ್, ೨೦೦೧, ಆ್ಯನ್ ಅಸೆಸ್‌ಮೆಂಟ್ ಆಫ್ ಟ್ರೆಂಡ್ ಇನ್ ಆಕ್ಸೆಸ್ ಆಂಡ್ ರಿಟೆಷನ್ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಪ್ಲಾನಿಂಗ್ ಆಂಡ್ ಆಡ್ಮಿನಿಸ್ಟ್ರೇಷನ್, ನ್ಯೂಡೆಲ್ಲಿ, ಪು. ೧೩೫

೨೦. ಚಂದ್ರಶೇಖರ ಸಿ.ಪಿ., ೨೦೦೭, ವಿಫಲಗೊಂಡ ಮಾರುಕಟ್ಟೆಯಲ್ಲಿ ಭಾರತದಲ್ಲಿನ ನವ ಉದಾರಿಕರಣ ಆರ್ಥಿಕ ಸುಧಾರಣೆಗಳು, ಗಣೇಶ ಪ್ರಕಾಶನ, ಬೆಂಗಳೂರು, ಪು. ೮೯

೨೧. ಜಾರ್ಜ್, ೨೦೦೨, "ರೀಡರ್ ಎಜುಕೇಶನ್ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನ್ ರಿಸರ್ಚ್ ಟ್ರೈನಿಂಗ್(NCERT) ಡವಲಪ್‌ಮೆಂಟ್ ಪ್ರಾಪರ್ಟಿ ಆಫ್ ಇಂಡಿಯನ್ ಎಜುಕೇಶನ್" ಮೆಟ್ರೋಪಾಲಿಟನ್ ನ್ಯೂಡೆಲ್ಲಿ, ಪು. ೨೯೧

೨೨. ಕೃಷ್ಣಪ್ಪ ಎಸ್., ೨೦೦೭, ಆಧುನಿಕ ಶಾಲಾ ವ್ಯವಸ್ಥೆ, ರಾಧಕೃಷ್ಣ ಪ್ರಕಾಶನ, ಬೆಂಗಳೂರು, ಪು. ೪೨

೨೩. ಯರ್ರಿಸ್ವಾಮಿ, ೨೦೦೨, ಗ್ರಾಮ ಪಂಚಾಯಿತಿ ಮತ್ತು ಸಬಲಿಕರಣ, ಅಪ್ರಕಟಿತ ಪಿಹೆಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೬೫

೨೪. ಕುಮಾರ್, ೨೦೦೪, ಪ್ರಾಥಮಿಕ ಶಿಕ್ಷಣದ ಒಂದು ಚರ್ಚೆ, ಶ್ರೀದೇವಿ ಪ್ರಕಾಶನ, ಬೆಂಗಳೂರು, ಪು. ೧೨

೨೫. ಕುಮಾರ್ ಬಿ.ಆರ್., ೨೦೦೪, ಮಕ್ಕಳ ಆತಂಕಕಾರಿ ನಿರಕ್ಷರತೆ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೧೨೬

೨೬. ಶಕುಂತಲಾ ಸಿ. ಶೆಟ್ಟರು ಗಣಪತಿ ನಾಯ್ಕ್, ೨೦೧೪, ಮಹಿಳಾ ದಿನಾಚರಣೆ ವಿಶೇಷ ಲೇಖನ ಯೋಜನಾ ಮಾಸಪತ್ರಿಕೆ, ಬೆಂಗಳೂರು, ಪು. ೨೧

೨೭. ದೀನಾ ಇಲ್ ವೆಲ್, ೨೦೦೪, ಡೀಪರ್ ರೀಡಿಂಗ್ ಕಂಪೇರಿಂಗ್ ಚಲೆಂಜ್ ಮೆಕ್ಸಿಕೊ ಸ್ಪನ್ ಹೌಸ್ ಪಬ್ಲಿಕೇಷನ್, ಯುಎಸ್ಎ, ವ್ಯಾಲ್ಯೂಮ್-೩, ಪು. ೧೮

೨೮. ಚಂದ್ರಶೇಖರ್ ಟಿ.ಆರ್., ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭೮

೨೯. ಪ್ರಶಾಂತ್ ಎಚ್.ಡಿ., ಹೆಣ್ಣುಮಕ್ಕಳ ಶಿಕ್ಷಣದ ಒಂದು ಸ್ಥೂಲನೋಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೫

೩೦. ಚಂದ್ರಶೇಖರ್ ಟಿ.ಆರ್., ೨೦೦೮, ಲಿಂಗಸಂಬಂಧಿ ಅಭಿವೃದ್ಧಿ ಅದ್ಯಯನ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೩೨

೩೧. ಮಹೇಶ್ ಎಂ., ೨೦೦೫, ಪಟ್ಟಣ ಪ್ರದೇಶದಲ್ಲಿ ಮಕ್ಕಳ ಸ್ಥಿತಿಗತಿ, ಅಂಕಿತ ಪ್ರಕಾಶನ, ಗಾಂಧಿ ಬಜಾರ್, ಬೆಂಗಳೂರು, ಪು. ೧೬

೩೨. ನಾರಾಯಣ ಡಿ.ಎಸ್., ೨೦೦೬, ಇಂಗ್ಲಿಷ್-ಕನ್ನಡ ಸಂಬಂಧ ಕುರಿತು ಚಿಂತನೆಗಳು, ಎಂ.ಫಿಲ್. ಸಂಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಪು. ೨೯

೩೩. ಬಂಡೋಪದ್ಯಾಯ, ೨೦೦೬, ಭಾರತದಲ್ಲಿ "ಸರ್ವರಿಗೂ ಶಿಕ್ಷಣ", ಐಬಿಎಚ್ ಪ್ರಕಾಶನ, ಬೆಂಗಳೂರು, ಪು. ೧೬೮

೩೪. ನರಸಿಂಹಾಚಾರ್, ೨೦೦೬, ಉದೋಯನ್ಮುಖ ಭಾರತದಲ್ಲಿ ಶಿಕ್ಷಣ, ಸಪ್ನ ಬುಕ್‌ಹೌಸ್, ಬೆಂಗಳೂರು, ಪು. ೧೨೬

೩೫. ಚಂದ್ರಶೇಖರ್ ಟಿ.ಆರ್., ೨೦೦೬, ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೯

೩೬. ಮಂದಿರ ಕುಮಾರ್, ೨೦೦೬, ಆರೋಗ್ಯ ಮತ್ತು ಹಾಜರಾತಿ, ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೧೮೦

೩೭. ನಿರಂಕರ್ ಶ್ರೀವಾಸ್ತವ, ೨೦೦೭, (ಎಲಿಮೆಂಟರಿ ಎಜುಕೇಶನ್ ಪಾವರ್ಟಿ & ಜಂಡರ್) ಇಪಿಡಬ್ಲ್ಯೂ, ಹಿತಕಾರಿ ಹೌಸ್, ಸಾಹಿತ್ ಭಗತ್ ಸಿಂಗ್ ರೋಡ್, ಮುಂಬೈ, ಪು. ೧೨

೩೮. ಕುಮಾರ ಟಿ.ಎಚ್., ೨೦೦೪, ಪ್ರಾಥಮಿಕ ಶಿಕ್ಷಣದ ಒಂದು ಚರ್ಚೆ, ಶ್ರೀದೇವಿ ಪ್ರಕಾಶನ, ಬೆಂಗಳೂರು, ಪು. ೧೫೩

೩೯. ಚಂದ್ರಶೇಖರಯ್ಯ, ೨೦೦೮, "ಪರಿಶಿಷ್ಟ ಜಾತಿ ಶೈಕ್ಷಣಿಕ ಸಮಸ್ಯೆಗಳು, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು. ೩೨

೪೦. ಟಿ.ಆರ್. ಚಂದ್ರಶೇಖರ್, ೨೦೧೦, ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೭

೪೧. ವಿರಭದ್ರನಾಯ್ಕ ಪಿ., ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೩

೪೨. ನಿರಂಜನಾರಾಧ್ಯಾ ವಿ.ಪಿ., ೨೦೧೧, ಉದಯವಾಣಿ ಅಂಕಣಕಾರ. (ಲೇ) ಅಕ್ಟೋಬರ್ ೩೧ ಸೋಮವಾರ, ಪು. ೮

೪೩ ಚಂದ್ರಶೇಖರ್ ಟಿ.ಆರ್., ೨೦೧೦, ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೩೫

೪೪. ಪ್ರಶಾಂತ್ ಎಚ್.ಡಿ., ೨೦೧೦, ಶೈಕ್ಷಣಿಕ ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೪೮

೪೫. ನಿರಂಜನಾರಾಧ್ಯಾ ವಿ.ಪಿ., ೨೦೧೧, ಉದಯವಾಣಿ ಅಂಕಣಕಾರ. (ಲೇ) ಅಕ್ಟೋಬರ್ ೩೧ ಸೋಮವಾರ, ಪು. ೮

೪೬ ರಂಗನಾಥ್ ಎಚ್.ಎ., (ಸಂ), ೨೦೧೧, ಬೆಂಗಳೂರ ವಿ.ವಿ ನಿವೃತ್ತ ಕುಲಪತಿಗಳು ಮತ್ತು ರಾಷ್ಟ್ರೀಯ ಮಾನ್ಯತೆ ಮತ್ತು ಮೌಲ್ಯಾಂಕನ ಸಂಸ್ಥೆ(ನ್ಯಾಕ್) ನಿರ್ದೇಶಕರು, ಬೆಂಗಳೂರು, ಪು. ೬೩

೪೭ ಅದೇ ಪು. ೭೩

೪೮. ನಿರಂಜನಾರಾಧ್ಯಾ ವಿ.ಪಿ., ೨೦೧೧, ಉದಯವಾಣಿ ಅಂಕಣಕಾರ. ಲೇಖನ, ಅಕ್ಟೋಬರ್ ೩೧ ಸೋಮವಾರ, ಪು. ೯

೪೯. ೨೦೧೧ರ ಕರ್ನಾಟಕ ಜಣಗಣತಿ ವರದಿ, ಭಾರತದ ಸಾಂಖ್ಯಿಕ ಇಲಾಖೆ, ಭಾರತ ಸರ್ಕಾರ, ನವದೆಹಲಿ, ವ್ಯಾಲ್ಯೂಮ್–೧, ಪು. ೮

೫೦. ಭಾರತದ ಮಾನವ ಅಭಿವೃದ್ಧಿ ವರದಿ, ೨೦೧೧, ಭಾರತದ ಸಾಂಖ್ಯಿಕ ಇಲಾಖೆ, ಭಾರತ ಸರ್ಕಾರ, ನವದೆಹಲಿ, ಪು. ೬೨

೫೧. ರಫೀಕ್ ಅಹ್ಮದ್, ೨೦೧೨, ಅಕ್ಷರಶಕ್ತಿ ಲೇಖನ ಉದಯವಾಣಿ ದಿನಪತ್ರಿಕೆ, ೮, ಸೆಪ್ಟೆಂಬರ್, ಪು. ೭

೫೨. ನಿರಂಜನಾರಾಧ್ಯ ವಿ.ಪಿ., ೨೦೧೨, ಏಕರೂಪ ಸಮಾನ ಶಿಕ್ಷಣ ನೀತಿ, ವಿಚಾರ ಸಂಕಿರಣ ಬೆಂಗಳೂರು, ೧೭ ಸೆಪ್ಟೆಂಬರ್.

೫೩. ವಿಶ್ವೇಶ್ವರ ಹೆಗಡೆ ಕಾಗೇರಿ, ೨೦೧೨, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಏಕರೂಪ ಸಮಾನ ಶಿಕ್ಷಣ ನೀತಿ, ವಿಚಾರಸಂಕಿರಣ ಬೆಂಗಳೂರು, ೧೭ ಸೆಪ್ಟೆಂಬರ್.

೫೪. ಮುಜಾಮಿಲ್ ಜಾನ್, ಇನ್ ಫ್ಯಾಕ್ಟ್ ಆಫ್ ಎಜುಕೇಷನ್, ನ್ಯಾಷನಲ್ ಬುಕ್ ಹೌಸ್ ನವದೆಹಲಿ, ಪು. ೨೧೩

೫೫. ಶಶಿಧರ್ ಕೆ.ಆರ್., ೨೦೧೩, ಸಮಕ್ಷಮ ಗುಣಾತ್ಮಕ ಶಾಲಾ ಶಿಕ್ಷಣದತ್ತ ಸಮುದಾಯ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಪು. ೧೨

೫೬. ವಾಸು ಎ.ಅರ್., ತಮ್ಮ ಶಿಕ್ಷಣ ರೂಪಾಂಕುರ, ಕರ್ನಾಟಕ ಪಬ್ಲಿಕೇಶನ್ ಎಂಬೆಸಿ ಸೇಂಟರ್, ಬೆಂಗಳೂರು, ಪು. ೬೬

೫೭. ಮಂಜಪ್ಪ ಕೆ., ದಲಿತ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ, ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೬

೫೮. ಕೀಲು ಪಿ., ೧೯೮೦, ಕೇರಳ ಪ್ರೌಢಶಾಲಾ ವಿದ್ಯಾರ್ಥಿನಿಯರ ಮಾತೃಭಾಷೆಯಲ್ಲಿನ ಮೂಲಭಾಷೆ ಕೌಶಲ್ಯಗಳು, ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪು. ೮೦

೫೯. ಶಕುಂತಲಾ ಸಿ. ಶೆಟ್ಟರು ಗಣಪತಿ ನಾಯ್ಕ್, ೨೦೧೪, ಮಹಿಳಾ ದಿನಾಚರಣೆ ವಿಶೇಷ ಯೋಜನಾ ಮಾಸಪತ್ರಿಕೆ, ಪು. ೧೬

೬೦. ಕರೂರ ಎನ್.ಜಿ (೨೦೦೨), ಶಿಕ್ಷಣ ಮಾರ್ಗ, ಕದಂಬ ಪ್ರಕಾಶನ, ಧಾರವಾಡ

೬೧. ಕುಮಾರಸ್ವಾಮಿ ಎಚ್ ರವರ ಗುಣಮಟ್ಟದ ಶಿಕ್ಷಣ – ತರಗತಿಯಲ್ಲಿ ಪ್ರಕ್ರಿಯೆಗಳು (ಚಂದ್ರ ಪೂಜಾರಿ, ಪ್ರಶಾಂತ್ ಎಚ್ ಡಿ, (ಸಂ) ಅಭಿವೃದ್ಧಿ ಅಧ್ಯಯನ, (ಜನವರಿ–ಜೂನ್ ೨೦೦೭) ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೨. ಪದ್ಮಾರಾಮಚಂದ್ರನ್ ಮತ್ತು ವಸಂತಕುಮಾರ್, (೨೦೦೫), ಎಜುಕೇಷನ್ ಇನ್ ಇಂಡಿಯಾ, ಏಷಿಯನ್ ಪಬ್ಲಿಕೇಶನ್, ನ್ಯೂಡೆಲ್ಲಿ.

೬೩. ರಾಜ ಎಂ. (೧೯೯೦), ಎಜುಕೇಶನ್ ಡೆವಲಪ್‌ಮೆಂಟ್ ಅಂಡ್ ಸೊಸೈಟಿ, ವಿಕಾಸ್ ಪಬಿಕೇಶನ್ ಹೌಸ್, ನ್ಯೂಡೆಲ್ಲಿ.

೬೪. ಮುಜುಮದಾರ್, ಮನಾಬಿ (೧೯೯೭), ರೂರಲ್ ಲಿಟ್ರಸಿ ಸೀನ್ ಇನ್ ತಮಿಳ್ನಾಡು ಅಂಡ್ ರಾಜಸ್ಥಾನ್, ಸೇಜ್ ಪಬ್ಲಿಕೇಶನ್ ನ್ಯೂಡೆಲ್ಲಿ.

೬೫. ರಾಮಚಂದ್ರನ್, ವಿಮಲ (೧೯೯೯), ಅಡಾಲ್ಟ್ ಎಜುಕೇಶನ್: ಎ ಟೇಲ್ ಆಫ್ ಎಂಪವರಮೆಂಟ್ ಡಿನೈಡ್, ಏಷಿಯನ್ ಪಬ್ಲಿಕೇಶನ್, ನ್ಯೂಡೆಲ್ಲಿ.

೬೬ ರೇಖಾ ಕೌಲ್ (೧೯೯೩), ಕಾಸ್ಟ್, ಕ್ಲಾಸ್ ಅಂಡ್ ಎಜುಕೇಶನ್, ಸೇಜ್ ಪಬ್ಲಿಕೇಶನ್, ನ್ಯೂಡೆಲ್ಲಿ.

೬೭ ವೈದ್ಯನಾಥನ್ ಎ., ಪಿ.ಆರ್.ಜಿ. ನಾಚಿಯರ್ (೨೦೦೦), ಎಲಿಮೆಂಟರಿ ಎಜುಕೇಶನ್ ಇನ್ ರೂರಲ್ ಇಂಡಿಯಾ: ಎ ಗ್ರಾಸ್ ರೂಟ್ ವ್ಯೂ, ಸೇಜ್ ಪಬ್ಲಿಕೇಶನ್, ನ್ಯೂಡೆಲ್ಲಿ

೬೮. ಕರುಣಾ ಚನನಾ (೨೦೦೧), ಇಂಟಿರಾಗೇಟಿಂಗ್ ವುಮೆನ್ಸ್ ಎಜುಕೇಶನ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಡೆಲ್ಲಿ

೬೯. ಅರುಣ್ ಸಿ ಮೆಹತಾ (೨೦೦೬), ಎಲಿಮೆಂಟರಿ ಎಜುಕೇಶನ್ ಇನ್ ಇಂಡಿಯಾ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಡೆಲ್ಲಿ

೭೦. ಮಹಾಬಲೇಶ್ವರರಾವ್ (೨೦೧೨), ಪ್ರೌಢ ಶಿಕ್ಷಣ ಸಮಸ್ಯೆಗಳು-ಸವಾಲುಗಳು, ಪ್ರಗತಿ ಗ್ರಂಥಾಲಯ, ಮೈಸೂರು.

೭೧. ಮಹಾಬಲೇಶ್ವರರಾವ್ (೨೦೧೨), ಪ್ರೌಢ ಶಿಕ್ಷಣ ಮತ್ತು ಶಿಕ್ಷಕನ ಕರ್ತವ್ಯಗಳು, ಪ್ರಗತಿ ಗ್ರಂಥಾಲಯ, ಮೈಸೂರು.

೭೨. ರುಕ್ಮಣಿ ಬ್ಯಾನರ್ಜಿ (೨೦೦೦), ಪಾವರ್ಟಿ ಆ್ಯಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರೈಮ್ ಮುಂಬೈ ಆ್ಯಂಡ್ ದೆಹಲಿ, ಸೇಜ್ ಪಬ್ಲಿಕೇಶನ್, ಡೆಲ್ಲಿ.

೭೩. ಶಾರದ ಜೈನ್, ಅಲೋಕ ಮತೂರ್, ಶೋಭಿತ ರಾಜ ಗೋಪಾಲ್ ಜ್ಯೂಹಿಷಾ(೧೯೯೯), ಅವರ ಚಿಲ್ಡ್ರನ್ ವರ್ಕ್ಸ್ ಆ್ಯಂಡ್ ಎಜುಕೇಶನ್, ರಿ ಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಡೆಲ್ಲಿ.

ಅಧ್ಯಾಯ ಮೂರು

ಅಧ್ಯಯನದ ಕ್ಷೇತ್ರ ಪರಿಚಯ

ಅಧ್ಯಾಯ ಮೂರು

ಅಧ್ಯಯನದ ಕ್ಷೇತ್ರ ಪರಿಚಯ

ರಾಮನಗರವು ಕರ್ನಾಟಕದ ೩೦ ಜಿಲ್ಲೆಗಳ ಪೈಕಿ ರಾಜಧಾನಿಗೆ ಅತ್ಯಂತ ಸಮೀಪದಲ್ಲಿರುವ ಜಿಲ್ಲೆಯಾಗಿದೆ. ರಾಮನಗರ ಜಿಲ್ಲೆಯು ಚನ್ನಪಟ್ಟಣ, ಕನಕಪುರ, ಮಾಗಡಿ, ರಾಮನಗರ ಎಂಬ ನಾಲ್ಕು ತಾಲೂಕುಗಳನ್ನು ಒಳಗೊಂಡಿದೆ. ದಕ್ಷಿಣ ಪ್ರಸ್ಥಭೂಮಿಯ ಎತ್ತರವಾದ ಪ್ರದೇಶದಿಂದ ಆವೃತವಾದ ಜಿಲ್ಲೆಯು ಹಲವು ವೈಶಿಷ್ಟ್ಯಗಳ ತೊಟ್ಟಿಲು ಅದೊಂದು ಪ್ರವಾಸಿಗರ ಸ್ವರ್ಗ. ಜಿಲ್ಲೆಯಾದ್ಯಂತ ಹರಡಿಕೊಂಡಿರುವ ಪ್ರವಾಸಿಧಾಮಗಳು, ಬೆಟ್ಟ ಗುಡ್ಡ ಗಿರಿ ಧಾಮಗಳ ಸಾಲುಗಳು, ಕೋಟೆ ಕೊತ್ತಲ, ದೇವಾಲಯಗಳು, ಧ್ಯಾನಮಂದಿರಗಳಿಂದ ಕೂಡಿದ್ದು, ೪೮೬.೩೮ ಚ.ಕಿ.ಮೀ. ನೈಸರ್ಗಿಕ ಅರಣ್ಯ ಪ್ರದೇಶವನ್ನು ಹೊಂದಿದೆ.

ರಾಮನಗರದ ಮೂಲ: ಬ್ರಿಟಿಷರ ಆಳ್ವಿಕೆಯಲ್ಲಿ ಸರ್ ಬ್ಯಾರಿ ಕ್ಲೋಸ್ ಎಂಬುವವರು ರಾಮನಗರಕ್ಕೆ ಬರುವುದಕ್ಕೆ ಮುಂಚೆ ಅರ್ಕಾವತಿ ನದಿಯ ದಂಡೆಯ ಮೇಲಿರುವ ಈ ಊರು ಒಂದು ಪುಟ್ಟ ಗ್ರಾಮವಾಗಿತ್ತು. ಪುರಾಣ ಕಾಲದಲ್ಲಿ ರಾಮನಗರಕ್ಕೆ ರಾಮಗಿರಿ, ಶಿವರಾಮಗಿರಿ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು.

೧೮೦೦ರಲ್ಲಿ ಕ್ಲೋಸ್‌ಪೇಟೆ ಎಂಬ ಹೆಸರಿನಲ್ಲಿ ನವನಗರವಾಗಿ ಇಂದಿನ ರಾಮನಗರವು ನಿರ್ಮಾಣವಾಯಿತು. ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಸಂಸ್ಥಾನದ ಮೊದಲ ಆಂಗ್ಲ ರೆಸಿಡೆಂಟಲ್ ಕರ್ನಲ್ ಕ್ಲೋಸ್ ೩ನೇ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಗವರ್ನರ್ ಜನರಲ್ ಲಾರ್ಡ್ ಕಾರನ್ ವಾಲಿಸ್ ಅವರ ಬಳಿ ಡೆಪ್ಯುಟಿ ಅಡಿಷನಲ್ ಜನರಲ್ ಆಗಿದ್ದರು. ೪ನೇ ಆಂಗ್ಲೋ ಮೈಸೂರು ಯುದ್ಧದ ವೇಳೆಗೆ ಅಡಿಷನಲ್ ಜನರಲ್ ಆಗಿ ಬಡ್ತಿ ಪಡೆದರು. ಟಿಪ್ಪು ಮರಣಾನಂತರ ಮೈಸೂರು ರಾಜಮನೆತನ ಹಾಗೂ ರಾಜ್ಯಾಡಳಿತ ಪುನರ್‌ವ್ಯವಸ್ಥೆ ಸಮಿತಿಯ ಸದಸ್ಯರಾಗಿ ೧೮೭೯ರಲ್ಲಿ ಇದೇ ಸಂಸ್ಥಾನದ ಪ್ರಪ್ರಥಮ ರೆಸಿಡೆಂಟ್ ಆಗಿಯೂ ನೇಮಕವಾದರು.

“ಆಗಿನ ದಿವಾನರಾದ ಪೂರ್ಣಯ್ಯನವರೊಡನೆ ಸಂಸ್ಥಾನದ ಕೆಲಸದ ಮೇಲೆ ರಾಮನಗರ ಭಾಗದಲ್ಲಿ ಸಂಚಾರ ಕೈಗೊಂಡರು. ಆಗ ತುಂಬಿ ಹರಿಯುತ್ತಿದ್ದ ಅರ್ಕಾವತಿ ನದಿ ದಾಟಲು ಅಲ್ಲಿನ ಹೊಳೆ ಸಾಲಿನ ಹಳ್ಳಿಯ ಜನರು ಅವರಿಗೆ ನೆರವು ನೀಡಿದರು. ಸ್ವಲ್ಪ ಸಮಯ ರಾಮಗಿರಿ ಬೆಟ್ಟದ ಮೇಲೆ ವಿಶ್ರಾಂತಿಗಾಗಿ ತಂಗಿದ್ದರ ಸವಿನೆನಪಿಗಾಗಿ ಈ ಊರಿಗೆ ‘ಕ್ಲೋಸ್ ಪೇಟೆ’ ಎಂದು ಹೆಸರಿಡಲಾಯಿತು”[೧] ಎಂಬ ವಿಚಾರವನ್ನು ನಗರದ ಪೇಟೆಬೀದಿಯಲ್ಲಿರುವ ಶಿಲಾಶಾಸನವು ತಿಳಿಸುತ್ತದೆ. ೧೮೮೪ರಲ್ಲಿ ಮೈಸೂರು ಸಂಸ್ಥಾನದ ಉಪವಿಭಾಗದ ಕೇಂದ್ರವಾಗಿದ್ದ ಕ್ಲೋಸ್‌ಪೇಟೆ ೧೯೨೮ರಲ್ಲಿ ತಾಲೂಕು ಕೇಂದ್ರವಾಯಿತು. ಸ್ವಾತಂತ್ರ್ಯ ನಂತರ ೧೯೪೯ರಲ್ಲಿ ಕ್ಲೋಸ್‌ಪೇಟೆಗೆ ‘ರಾಮನಗರ’ ಎಂದು ನಾಮಕರಣ ಮಾಡಲಾಯಿತು.

ರಾಮನಗರ ಚಾರಿತ್ರಿಕ ಹಿನ್ನೆಲೆ

ರಾಮನಗರ ಜಿಲ್ಲೆಯ ಬೆಟ್ಟಗುಡ್ಡ ಶಿಲಾಸಂಪತ್ತುಗಳ ಭೌಗೋಳಿಕ ಪರಿಸರದಲ್ಲಿ ಮಾನವ ಪ್ರಾಗೈತಿಹಾಸಿಕ ಕಾಲದ ನೆಲೆಗಳನ್ನು ಗುರುತಿಸಬಹುದು. “ಚನ್ನಪಟ್ಟಣ ತಾಲೂಕು ಸಿದ್ಧಪುರದಲ್ಲಿ ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ ಬೆಣಚುಕಲ್ಲಿನ ಆಯುಧಗಳು ದೊರೆತಿವೆ. ಈ ಆಯುಧಗಳು ಕ್ರಿಪೂ. ೧೦ ಸಾವಿರ ವರ್ಷಗಳಷ್ಟು ಪ್ರಾಚೀನವೆಂದು”[೨] ವಿದ್ವಾಂಸರು ಗುರುತಿಸಿದ್ದಾರೆ.

ಮಾಗಡಿ ತಾಲೂಕಿನ ಸಾವನದುರ್ಗ ಗುಡ್ಡಹಳ್ಳಿ, ಗವಿನಾಗಮಂಗಲ, ಕೋರಮಂಗಲ, ಹೂಜಿಗಲ್ಲು, ಕಲ್ಯಾಹೊಸಪಾಳ್ಯ, ಅಂಕನಹಳ್ಳಿ ಮುಂತಾದ ಸ್ಥಳಗಳಲ್ಲಿ ನೂರಾರು ಬೃಹತ್ ಶಿಲಾಗೋರಿಗಳಿವೆ. “೧೮೮೧ರಲ್ಲಿ ಕರ್ನಲ್ ಆರ್.ಬಿ. ಬ್ರೋನ್‌ವಿತ್ ಅವರು ಸಾವನದುರ್ಗದಲ್ಲಿ ನಡೆಸಿದ ಸಂಶೋಧನೆಯಲ್ಲಿ ಆದಿಮಾನವನ ಅಸ್ಥಿಪಂಜರ, ನವಶಿಲಾಯುಗದ ಆಯುಧಗಳು ಪಿಂಗಾಣಿ ಪಾತ್ರೆ, ಮಣ್ಣಿನ ಹೂಜಿಗಳು ದೊರೆತಿವೆ.”[೩] ಹಾಗೆಯೇ ಕನಕಪುರ ತಾಲೂಕಿನ ಗುತ್ತಲು ಹುಣಸೆಯಲ್ಲಿ ೪೫ ಶಿಲಾಗೋರಿಗಳಿದ್ದು, ಗೋರಿಗಳ ಸುತ್ತಲಿನ ನಾಲ್ಕು ಎಕರೆಗಳಷ್ಟು ಭೂ ಪ್ರದೇಶವು ಬೂದಿಮಣ್ಣನ್ನು ಹೊಂದಿದೆ. “ಸಾತನೂರು ಹೋಬಳಿ ವೀರೇಗೌಡನ ದೊಡ್ಡಿ ಬಳಿಯ ಬೊಳಾರೆಗೆ ಪೂರ್ವಾರ್ಧಕ್ಕೆ ೧೭೪ ಹೆಚ್ಚು ಬೃಹತ್ ಶಿಲಾಯುಗದ ಗೋರಿಗಳಿದ್ದು ಇಲ್ಲಿ ೨೦೦ ಶಿಲಾಸಮಾಧಿಗಳು ಕಂಡುಬಂದಿವೆ. ಇವುಗಳನ್ನು ಸ್ಥಳೀಯರು ಇದನ್ನು ಪಾಂಡವರ ಗುಡಿ ಎನ್ನುತ್ತಾರೆ.”[೪] ಈ ಹಳ್ಳಿಯಲ್ಲಿ ದೊರೆತ ಅತಿ ದೊಡ್ಡ ಕಲ್ಲಿನ ಶಿಲಾ ಸಮಾಧಿ ಮೇಲಿನ ಕಲ್ಲಿನ ಅಳತೆ ೩೫೦ ಸೇಂ.ಮೀ.ನಿಂದ ೨೫೦ ಸೆಂ.ಮೀ. ಅಗಲವಿದೆ.

ರಾಮನಗರದ ರಾಮದೇವರ ಬೆಟ್ಟದ ಕೋಟೆ ಜಗತಿಯ ಮೇಲಿರುವ ಶಾಸನವನ್ನು ತಜ್ಞರಾದ ಎಂ.ಜೆ. ನಾಗರಾಜ ಅವರು ವಿಶ್ಲೇಷಣೆ ಮಾಡಿ ಈ ಶಾಸನದಲ್ಲಿ ಹಕ್ಕ-ಬುಕ್ಕ ಅರಸರು ಕಟ್ಟಿಸಿದ ತ್ರಯಂಬಕ ಮಂಟಪ ಎಂದಿದ್ದಾರೆ. ತ್ರಯಂಬಕ ಮೂಲವನ್ನು ಗುರುತಿಸಿ ಹಕ್ಕಬುಕ್ಕರು ಮೂಲತಃ ರಾಮನಗರ ಪ್ರದೇಶದವರಾಗಿದ್ದು ಕಾಳಮುಖ ಶೈವಗುರು ಕ್ರಿಯಾಶಕ್ತಿಯ ಶಿಷ್ಯನಾದ ಕಾಕತೀಯ ಪ್ರತಾಪರುದ್ರನೊಂದಿಗೆ ಸಾಂಪ್ರದಾಯಿಕ ಸಂಬಂಧ ಬೆಳೆಸಿರಬಹುದು”[೫] ಎನ್ನಲಾಗಿದೆ.

೧೯೮೬ಕ್ಕಿಂತ ಮೊದಲು ಬೆಂಗಳೂರು ಜಿಲ್ಲೆಯಲ್ಲಿದ್ದ ಈ ಪ್ರದೇಶವು ೧೯೮೬ರ ನಂತರ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿಕೊಂಡಿತು. ತದನಂತರ ೨೦೦೭ ಆಗಸ್ಟ್ ತಿಂಗಳಲ್ಲಿ ಜಿಲ್ಲೆಯ ನಾಲ್ಕು ತಾಲೂಕುಗಳನ್ನೊಳಗೊಂಡ ರಾಮನಗರವು ರಾಜ್ಯದ ೨೮ನೇ ಜಿಲ್ಲೆಯಾಗಿ(ಸರ್ಕಾರಿ ಆದೇಶ ಸಂಖ್ಯೆ ಆರ್.ಡಿ.೨೮ ಒಡಪು, ಬೆಂಗಳೂರು ಆಗಸ್ಟ್ ೨೩ ತಿದ್ದುಪಡಿ ೨೩.೦೮.೨೦೦೭ರ ಅನ್ವಯ) ರೂಪುಗೊಂಡಿತು.

ರಾಮನಗರ ಜಿಲ್ಲೆಯ ಭೌಗೋಳಿಕತೆ

ರಾಮನಗರ ಜಿಲ್ಲೆಯು ೩೫೭೬ ಚ.ಕಿ.ಮೀ.ಗಳ ಭೂ ವಿಸ್ತೀರ್ಣ ಹೊಂದಿದೆ. ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. ೧.೮೫ ವಿಸ್ತೀರ್ಣ ಹೊಂದಿದ್ದು ವಿಸ್ತಾರದಲ್ಲಿ ಈ ಜಿಲ್ಲೆಯು ೨೭ನೇ ಸ್ಥಾನವನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ಒಟ್ಟು ನಾಲ್ಕು ತಾಲೂಕುಗಳಿದ್ದು ರಾಮನಗರ ತಾಲೂಕು ೬೨೦ ಚ.ಕಿ.ಮೀ. ವಿಸ್ತೀರ್ಣ, ಕನಕಪುರ ೧೬೦೧ ಚ.ಕಿ.ಮೀ. ವಿಸ್ತೀರ್ಣ, ಮಾಗಡಿ ೭೯೫ ಚ.ಕಿ.ಮೀ. ಹಾಗೂ ಚನ್ನಪಟ್ಟಣ ೫೩೪ ಚ.ಕಿಮೀ. ವಿಸ್ತೀರ್ಣ ಹೊಂದಿದೆ. ಈ ತಾಲೂಕುಗಳಲ್ಲಿ ಚನ್ನಪಟ್ಟಣ ಅತಿ ಕಡಿಮೆಯೆಂದರೆ ಶೇ. ೧೫.೦೨ರಷ್ಟು ವಿಸ್ತೀರ್ಣ ಹೊಂದಿದ್ದು, ಕನಕಪುರ ತಾಲೂಕು ಅತಿ ಹೆಚ್ಚು ಎಂದರೆ ಜಿಲ್ಲೆಯ ಶೇ. ೪೫.೦೩ ವಿಸ್ತೀರ್ಣ ಹೊಂದಿದೆ. ಆಡಳಿತದ ಅನುಕೂಲಕ್ಕಾಗಿ ಒಟ್ಟು ೧೮ ಹೋಬಳಿಗಳನ್ನು ರಚಿಸಿದ್ದಾರೆ. ಚನ್ನಪಟ್ಟಣ ತಾಲೂಕಿನಲ್ಲಿ ೩ ಹೋಬಳಿ, ಕನಕಪುರ ತಾಲೂಕಿನಲ್ಲಿ ೬ ಹೋಬಳಿ, ಮಾಗಡಿ ತಾಲೂಕಿನಲ್ಲಿ ೫ ಹಾಗೂ ರಾಮನಗರ ತಾಲೂಕಿನಲ್ಲಿ ೪ ಹೋಬಳಿಗಳಿವೆ."[೬] ಜಿಲ್ಲೆಯಲ್ಲಿ ೧೩೦ ಗ್ರಾಮಪಂಚಾಯಿತಿ ಹಾಗೂ ನಾಲ್ಕು ತಾಲೂಕು ಪಂಚಾಯಿತಿಗಳು ಕಾರ್ಯನಿರ್ವಹಿಸುತ್ತವೆ. ಜನಸಾಂದ್ರತೆ ಕಿ.ಮೀ.ಗೆ ೨೯೦ ಇದೆ. ಒಂದು ಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ.

ರಾಮನಗರ ಜಿಲ್ಲೆಯು ಬೆಟ್ಟಗುಡ್ಡಗಳಿಂದ ಕೂಡಿದ್ದು, ಜಿಲ್ಲೆಯನ್ನು ಸಪ್ತಬೆಟ್ಟಗಳ ಸೀಮೆ (ಸಿಟಿ ಆಫ್ ಸೆವೆನ್ ಹಿಲ್ಸ್) ಎಂದು ಕರೆಯುತ್ತಾರೆ. ರಾಮನಗರ ಸುತ್ತಮುತ್ತ ಈ ಬೆಟ್ಟಗುಡ್ಡಗಳಿವೆ. ಅವುಗಳನ್ನು ಶಿವರಾಮಗಿರಿ, ಯತಿರಾಜಗಿರಿ, ಕೃಷ್ಣಗಿರಿ, ಸೋಮಗಿರಿ, ರೇವಣಗಿರಿ, ಜಲಸಿದ್ಧಗಿರಿ, ಸೂಕಾಸುರಗಿರಿ ಎಂದು ಕರೆಯಲಾಗುತ್ತದೆ. ರಾಮನಗರ ಜಿಲ್ಲೆಯಲ್ಲಿ ವ್ಯಾಪಿಸಿರುವ ಇತರ ದುರ್ಗಮ ಬೆಟ್ಟಗಳೆಂದರೆ ಸಾವನದುರ್ಗ, ಕಬ್ಬಾಳುದುರ್ಗಾ ಹಾಗೂ ಭೀಮನಕಿಂಡಿ ಬೆಟ್ಟ. ಭೀಮನಕಿಂಡಿ ಬೆಟ್ಟವು ಏಷ್ಯಾದಲ್ಲಿಯೇ ಎರಡನೆ ಅತಿ ದೊಡ್ಡ ಶಿಲಾಶಿಖರವಾಗಿ ಪ್ರಸಿದ್ಧಿ ಪಡೆದಿದೆ. ಹಾಗೆಯೇ ಚುಂಚಿ ಜಲಪಾತ, ಅರ್ಕಾವತಿ, ಕಾವೇರಿಯ ಸಂಗಮ, ಮೇಕೆದಾಟು ಇತ್ಯಾದಿ ಪ್ರವಾಸಿ ತಾಣಗಳಿವೆ. ರಾಮನಗರದ ರೇಷ್ಮೆಗೂಡಿನ ಮಾರುಕಟ್ಟೆಯು ಏಷ್ಯಾದ ಅತಿ ದೊಡ್ಡ ಮಾರುಕಟ್ಟೆಯಾಗಿದೆ. "೧೮ನೇ ಶತಮಾನದಲ್ಲೇ ಚೀನಾದಿಂದ ಭಾರತಕ್ಕೆ ರೇಷ್ಮೆ ತಂದ ಕೀರ್ತಿ ಟಿಪ್ಪುಸುಲ್ತಾನನಿಗೆ ಸಲ್ಲುತ್ತದೆ."[೭] ಟಿಪ್ಪು ಕರಿಕಲ್ ಫಾರ್ಂ ರೇಷ್ಮೆ ಮೊಟ್ಟೆ ಉತ್ಪಾದನೆಯಲ್ಲಿ ದೇಶದಲ್ಲೇ ಮೊದಲ

ಕೇಂದ್ರವೆಂದು ಗುರುತಿಸಲಾಗಿದೆ. ಇದು ಚನ್ನಪಟ್ಟಣದ ಬಳಿಯ ಕೆಂಗಲ್ ಬಳಿಯಿದೆ. ಹೀಗೆ ಹಲವಾರು ವೈಶಿಷ್ಟ್ಯಗಳನ್ನು ರಾಮನಗರ ಜಿಲ್ಲೆ ಒಳಗೊಂಡಿದೆ.

ಚನ್ನಪಟ್ಟಣ: ಚನ್ನಪಟ್ಟಣ ತಾಲೂಕು ರಾಮನಗರ ಜಿಲ್ಲೆಯ ಒಂದು ತಾಲೂಕಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ರಾಮನಗರವು ಚನ್ನಪಟ್ಟಣ ತಾಲೂಕಿಗೆ ಒಂದು ಉಪ ತಾಲೂಕಾಗಿತ್ತು ಎಂಬುದು ಒಂದು ವಿಶೇಷ. ರಾಮನಗರ, ಕನಕಪುರ, ಮಂಡ್ಯ ಜಿಲ್ಲೆಯ ಮಳವಳ್ಳಿ, ಮದ್ದೂರು ತಾಲೂಕುಗಳು ಚನ್ನಪಟ್ಟಣ ತಾಲೂಕಿನ ಗಡಿಯನ್ನು ಹಂಚಿಕೊಂಡಿವೆ. ಈ ತಾಲೂಕಿನಲ್ಲಿ ಒಟ್ಟು ೧೪೬ ಗ್ರಾಮಪಂಚಾಯಿತಿಗಳು, ೫ ಜಿಲ್ಲಾಪಂಚಾಯಿತಿ ಕ್ಷೇತ್ರ, ೧೩೪ ಜನವಸತಿ ಗ್ರಾಮ, ೧೧ ಜನರಹಿತ ಬೇಚರಾಕ್ ಗ್ರಾಮಗಳನ್ನು ಹೊಂದಿದೆ.

ವಿರೂಪಾಕ್ಷಿಪುರ, ಮಳೂರು, ಕಸಬಾ ಎಂಬ ಮೂರು ಹೋಬಳಿಗಳು ಈ ತಾಲೂಕಿನಲ್ಲಿವೆ.

ತಾಲೂಕಿನ ಒಟ್ಟು ವಿಸ್ತೀರ್ಣ ೫೪೩ ಚ.ಕಿ.ಮೀ. ಇದ್ದು "೨೦೧೧ರ ಜನಗಣತಿಯಂತೆ ೨,೬೧,೩೦೪ ಒಟ್ಟು ಜನಸಂಖ್ಯೆಯನ್ನು ಹೊಂದಿದೆ. ಜಿಲ್ಲೆಯಲ್ಲಿಯೇ ಹೆಚ್ಚು ಅರಣ್ಯಪ್ರದೇಶವನ್ನು ಹೊಂದಿರುವ ತಾಲೂಕಾಗಿದೆ."[೮] ಈ ತಾಲೂಕು ೧೯೨.೯೦ ಚ.ಕಿ.ಮೀ. ಅರಣ್ಯವನ್ನು ಹೊಂದಿದೆ. ರಾಜ್ಯದಲ್ಲೇ ಅತಿ ದೊಡ್ಡ ಪೋಲಿಸ್ ತರಬೇತಿ ಶಾಲೆ ಈ ತಾಲೂಕಿನಲ್ಲಿದೆ.

ಈ ತಾಲೂಕಿನ ಮಣ್ಣು ವೈವಿಧ್ಯತೆಯಿಂದ ಕೂಡಿದ್ದು, ತೆಂಗು, ಮಾವು, ಅಡಿಕೆ, ವೀಳ್ಯೆದೆಲೆ, ಶುಂಠಿ, ಬಾಳೆ, ತರಕಾರಿ ಮತ್ತು ಹೂವಿನ ಕೃಷಿಗೆ ಸಹಕಾರಿಯಾಗಿದೆ.

೭೨.೬೦ ಚ.ಕಿ.ಮೀ. ರಾಜ್ಯ ಹೆದ್ದಾರಿ, ೧೧ ಕಿ.ಮೀ. ರೈಲ್ವೆ ಮಾರ್ಗವನ್ನು ಹೊಂದಿದೆ ಈ ನಾಡಿನಲ್ಲಿ ಕಟ್ಟಿಗೆಯಿಂದ ತಯಾರಿಸುವ ಗೊಂಬೆಗಳಿಗೆ ಇದು ಪ್ರಸಿದ್ಧವಾಗಿದ್ದು ಚನ್ನಪಟ್ಟಣದ ಗೊಂಬೆಗಳೆಂದೇ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆದಿವೆ. ವೈವಿಧ್ಯಮಯ ಸಾಂಸ್ಕೃತಿಕ ದಾಖಲೆಗಳಲ್ಲಿ ಇದರ ಕಾಣಿಕೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಗೊಂಬೆಯ ಲೋಕ, ಬೊಂಬೆ ನಗರಿ ಎಂದು ವಿಖ್ಯಾತಿ ಹೊಂದಿದ್ದು, "ಜಗತ್ತಿನ ಆಟದ ಸಾಮಾನುಗಳಲ್ಲಿ ವಿಶಿಷ್ಟತೆಯನ್ನು ಹೊಂದಿರುವುದಲ್ಲದೆ ಈ ಪ್ರದೇಶದಲ್ಲಿ ಮಾತ್ರ ದೊರೆಯುವ ವಿಶೇಷವಾದ ಅಲೆಮರದಿಂದ ತಯಾರಿಸುವ ಬಣ್ಣದ ಗೊಂಬೆಗಳು ಅಮೆರಿಕದ ಶ್ವೇತಭವನದಿಂದ ಹಿಡಿದು ದೂರದ ಡೆನ್ಮಾರ್ಕ್, ಜಪಾನ್, ಚೀನಾ ಮುಂತಾದ ವಿದೇಶಗಳಿಗೆ ವಾರ್ಷಿಕವಾಗಿ ೫೦ ಕೋಟಿಗೂ ಅಧಿಕ ಆಟಿಕೆಗಳು ರಫ್ತಾಗುತ್ತವೆ."[೯]

ಈ ಪ್ರದೇಶದ ಭೌಗೋಳಿಕ ಲಕ್ಷಣವನ್ನು ಗಮನಿಸಿ ಎರಡು ಭಾಗಗಳಾಗಿ ವಿಂಗಡಿಸಬಹುದು.

೧. ತಾಲೂಕಿನ ಉತ್ತರ ಮತ್ತು ವಾಯವ್ಯ ಭಾಗವು ಹಲವು ಬೆಟ್ಟಗಳ ಸಾಲುಗಳಿಂದ ಕೂಡಿದ್ದು, ಹೆಚ್ಚಾದ ಬೆಂಗಾಡು ಮತ್ತು ಕುರುಚಲು ಸಸ್ಯಗಳನ್ನೊಳಗೊಂಡ ಅರಣ್ಯವನ್ನು ಹೊಂದಿದೆ. ಹೆಚ್ಚು ನೀರಾವರಿ ಪ್ರದೇಶ ಕಂಡುಬರುವುದಿಲ್ಲ.

೨. ದಕ್ಷಿಣ ನೈರುತ್ಯ ಭಾಗವು ಮೈದಾನ ಪ್ರದೇಶವಾಗಿದ್ದು ಕೆಲವು ಕಡೆ ಕೆರೆ ಮತ್ತು ನೀರಾವರಿ ಸೌಲಭ್ಯ ಕಂಡುಬರುತ್ತದೆ.

ಕಣ್ವ ನದಿಯು ಈ ತಾಲೂಕಿನ ಮುಖ್ಯ ನದಿಯಾಗಿದ್ದು, ಮಾಗಡಿ ತಾಲೂಕಿನ ಶ್ರೀಪತಿಹಳ್ಳಿಯಲ್ಲಿ ಉದ್ಭವಿಸಿ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ. ಕಣ್ವ ನದಿ ಹರಿಯುವ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು ೬೫ ಮೀಟರ್ ಎತ್ತರವಾಗಿದ್ದು, ಜಲಾನಯನ ಪ್ರದೇಶದಿಂದ ೨೧೫ ಚ. ಹೊಂದಿದೆ. ಚನ್ನಪಟ್ಟಣ ತಾಲೂಕಿನ ಗಡಿಯಿಂದ ಪ್ರಾರಂಭವಾಗಿ ತಾಲೂಕಿನ ಗಡಿ ಗ್ರಾಮವಾದ ಗುಡಿಸರಗೂರಿನ ಸಮೀಪ ಕಾವೇರಿ ನದಿಯ ಉಪನದಿಯಾದ ಶಿಂಷಾ ನದಿಗೆ ಸೇರುತ್ತದೆ. ನದಿಯ ಅಕ್ಕಪಕ್ಕದಲ್ಲಿ ತೋಟಗಳಿದ್ದು ೫೦೦೦ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ. ತಾಲೂಕಿನಲ್ಲಿ ಹಲವಾರು ದೊಡ್ಡ ಕೆರೆಗಳಿವೆ. ರಾಮಮ್ಮನ ಕೆರೆ, ಕೂಡ್ಲೂರು ಕೆರೆ, ಮಳೂರು ಪಟ್ಟಣ, ಅಕ್ಕೂರು, ಹೊಂಗನೂರು ಕೆರೆಗಳು ಕೃಷಿಗೆ ನೀರನ್ನು ಒದಗಿಸುತ್ತವೆ.

ಚನ್ನಪಟ್ಟಣದಿಂದ ಸುಮಾರು ೮ ಕಿ.ಮೀ. ದೂರದಲ್ಲಿರುವ ಅಬ್ಬೂರಿನ ಬಳಿ ಈ ನದಿಗೆ ಮೈಸೂರು ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ ೧೯೪೦-೪೬ರ ಅವಧಿಯಲ್ಲಿ ಸಣ್ಣ ಅಣೆಕಟ್ಟು ನಿರ್ಮಾಣವಾಗಿದ್ದು ಸ್ವಾತಂತ್ರ್ಯಪೂರ್ವದಲ್ಲಿ ನಿರ್ಮಾಣವಾದ ಹಳೆಯ ಅಣೆಕಟ್ಟಾಗಿದ್ದು ಏಷ್ಯಾದಲ್ಲಿ ಪ್ರಥಮ ಸ್ವಯಂಚಾಲಿತ ತೂಬಿನ ತಾಂತ್ರಿಕತೆಯನ್ನು ಹೊಂದಿದ್ದು ಈ ತಾಲೂಕಿನ ಮೂವತ್ತು ಗ್ರಾಮಗಳಿಗೆ ನೀರು ಹಾಗೂ ವ್ಯವಸಾಯಕ್ಕೆ ಉಪಯುಕ್ತವಾಗಿದೆ. ಸದ್ಯಕ್ಕೆ ಇದು ಕಾವೇರಿ ನೀರಾವರಿ ನಿಗಮದ ವಶದಲ್ಲಿದೆ.

ಗವಿರಂಗಸ್ವಾಮಿ ಬೆಟ್ಟ, ಮಾಕಳಿ ಬೆಟ್ಟ, ನರಸಿಂಹಸ್ವಾಮಿ, ವಾಡೇಮಲ್ಲೇಶ್ವರ, ಚನ್ನಪ್ಪಾಜ್ಜಿಬೆಟ್ಟ, ತಾಲೂಕು ಗಡಿಯ ಶ್ರವಣಪ್ಪನಬೆಟ್ಟ, ಸಿದ್ಧೇಶ್ವರ ಬೆಟ್ಟಗಳಿವೆ.

ರಾಮನಗರ ಜಿಲ್ಲಾ ಪ್ರದೇಶದಲ್ಲಿ ವಿಜಯನಗರದ ರಾಜಪ್ರತಿನಿಧಿಯಾದ ಜಗದೇವರಾಯನು "ಉತ್ತರದ ಪಶ್ಚಿಮಘಟ್ಟದವರೆಗಿನ ಪ್ರದೇಶಕ್ಕೆ ಅರಸನಾಗಿದ್ದ; ಚನ್ನಪಟ್ಟಣ ಈ ಪ್ರಾಂತ್ಯದ ರಾಜಧಾನಿಯಾಗಿತ್ತು. ಈತನಿಗೂ ವಿಜಯನಗರ ಅರಸರಿಗೂ ವೈವಾಹಿಕ ಸಂಬಂಧ ಇದ್ದು, ಕ್ರಿ.ಶ. ೧೫೬೬ರಲ್ಲಿ ಪೆನುಗೊಂಡದ ಮೇಲೆ ನಡೆದ ಮುಸ್ಲಿಂ ಅರಸರ ದಾಳಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ.'[೧೦] ಈತನ ನಂತರ ಸ್ವಲ್ಪ ಸಮಯ ಮರಾಠರ ರಣೋಜಿರಾಯ, ನಂತರ ಇಮ್ಮಡಿ ಜಗದೇವ, ಮುಮ್ಮಡಿ ಜಗದೇವ ಮತ್ತು ಅಂಕುಶರಾಯರು ಚನ್ನಪಟ್ಟಣವನ್ನು ಆಳಿದರು. ಕ್ರಿ.ಶ. ೧೬೩೦ರಲ್ಲಿ ಈ ಪಾಳೆಯಪಟ್ಟಿನ ಒಡೆತನವನ್ನು ಮೈಸೂರಿನ ಚಾಮರಾಜ ಒಡೆಯರು ಗಳಿಸಿಕೊಂಡರು. ನಂತರ ಇದು ಟಿಪ್ಪು ಸುಲ್ತಾನ್ ಮತ್ತು ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು.

ಕನಕಪುರ

ಜಿಲ್ಲಾ ಕೇಂದ್ರ ರಾಮನಗರದಿಂದ ಕನಕಪುರ ೨೬ ಕಿ.ಮೀ. ದೂರದಲ್ಲಿ ಇದ್ದು ತನ್ನದೇ ಆದ ವಿಶೇಷತೆಗಳನ್ನು ಒಳಗೊಂಡಿದೆ. "ಈ ಹಿಂದೆ ಕನಕಪುರಕ್ಕೆ ಕಾಣೆಕಾರನಹಳ್ಳಿ, ಕಾನಕಾನಹಳ್ಳಿ ಎಂದು ಕರೆಯುತ್ತಿದ್ದು"[೧೧] ಕಾಣೆಕಾರ್ ಎಂದರೆ ಹೊಲಗದ್ದೆಯನ್ನು ಉಳ್ಳವನು ಎಂಬುದಾಗಿದೆ. ಕಾಣೆ ಎಂಬುದು ನಾಣ್ಯದ ಒಂದು ಅಂಶವೆಂಬ ಅರ್ಥವೂ ಹಾಗೂ ಲೇವಾದೇವಿಗಾರ ಎಂಬ ಅರ್ಥವೂ ಇದೆ. ಕನಕಪುರವೆಂದು ೧೦.೪.೧೯೫೨ರಂದು ಪುನರ್ ನಾಮಕರಣಗೊಂಡಿದೆ(RER No. Reven DEP. 279-352-RM 20-51-25 Bang 10-April-1952 Date/10-4-1952 ಅನ್ವಯ ಮೈಸೂರು ರಾಜ್ಯ ಪತ್ರ).

ಈ ತಾಲೂಕು ಪೂರ್ವದಲ್ಲಿ ತಮಿಳುನಾಡು ರಾಜ್ಯ, ಪಶ್ಚಿಮದಲ್ಲಿ ಚನ್ನಪಟ್ಟಣ ಮತ್ತು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕು ಗಡಿಯನ್ನು, ಉತ್ತರಕ್ಕೆ ಜಿಲ್ಲಾಕೇಂದ್ರ ರಾಮನಗರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ಲು ತಾಲೂಕು, ದಕ್ಷಿಣಕ್ಕೆ ಕಾವೇರಿ ನದಿ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಗಡಿಗಳನ್ನು ಹೊಂದಿದೆ.

ಸಮುದ್ರಮಟ್ಟದಿಂದ ೬೩೧ ಮೀಟರ್ ಎತ್ತರದಲ್ಲಿದೆ. ಸರಾಸರಿ ಕನಿಷ್ಠ ಉಷ್ಣಾಂಶ ೨೧°-೨೫° ಸಿ ಗರಿಷ್ಠ ೩೮° ೩೯° ಸೆಲ್ಸಿಯಸ್ ಹೊಂದಿದೆ. "ಕನಕಪುರ ತಾಲೂಕಿನ ನಕ್ಷೆಯು ಹಿಪ್ಪುನೇರಳೆ ಎಲೆಯ ಆಕಾರವನ್ನು ಹೊಂದಿದ್ದು ಕರ್ನಾಟಕ ರಾಜ್ಯದ ಎರಡನೆಯ ಅತಿದೊಡ್ಡ ತಾಲೂಕು ಎಂದು ಹೆಸರು ಗಳಿಸಿದೆ."[೧೨] ಈ ತಾಲೂಕಿನ ವಿಸ್ತೀರ್ಣ ೧೫೯೧ ಚ.ಕಿ.ಮೀ. ಇದ್ದು, ೮೧ ಗ್ರಾಮಲೆಕ್ಕಿಗರ ವೃತ್ತಗಳು, ೩ ನಾಡಕಚೇರಿಗಳನ್ನು, ೬ ಹೋಬಳಿಕೇಂದ್ರಗಳಾದ ಹಾರೋಹಳ್ಳಿ, ದೊಡ್ಡಮರಳುವಾಡಿ, ಕಸಬಾ, ಸಾತನೂರು, ಕೋಡಿಹಳ್ಳಿ, ಉಯ್ಯಂಬಳ್ಳಿ ಹಾಗೂ ೪೩ ಗ್ರಾಮ ಪಂಚಾಯಿತಿಗಳು, ೮ ಜಿಲ್ಲಾಪಂಚಾಯಿತಿಗಳು, ೩೦ ತಾಲೂಕುಪಂಚಾಯತ್ ಕ್ಷೇತ್ರಗಳನ್ನು, ೨೯ ಜನವಸತಿ ಗ್ರಾಮಗಳನ್ನು ೩೦ ಜನರಹಿತ ಬೇಚಾರಕ್ ಗ್ರಾಮಗಳನ್ನು ಹೊಂದಿದೆ. ೧೨೧.೩ ಚ.ಕಿ.ಮೀ. ಅರಣ್ಯಪ್ರದೇಶವನ್ನು ಹೊಂದಿದ್ದು, ಬಿಳಿಕಲ್ಲು ಬೆಟ್ಟ, ತೇರುಬೀದಿ, ಸಂಗಮ ಹುಣಸನಹಳ್ಳಿ ಬೆಲಂದವಾಡಿ ಪ್ರದೇಶಗಳು ದಟ್ಟವಾದ ಅರಣ್ಯವನ್ನು ಹೊಂದಿದ್ದು, ವನ್ಯಮೃಗಗಳು ಹಾಗೂ ಶ್ರೀಗಂಧ, ತೇಗ, ಹೊನ್ನೆ, ತೊರೆಮತ್ತಿ, ಬೀಟೆ ಮರದಂತಹ ಅತ್ಯುತ್ತಮ ಸಸ್ಯಸಂಪತ್ತನ್ನು ಒಳಗೊಂಡಿದೆ. ೪೭ ಕಿ.ಮೀ. ರಾಷ್ಟ್ರೀಯ ಹೆದ್ದಾರಿ, ೩೩.೫೦ ಕಿ.ಮೀ. ರಾಜ್ಯ ಹೆದ್ದಾರಿ ೩೮೩.೮೦ ಕಿ.ಮೀ. ಜಿಲ್ಲಾ ಮುಖ್ಯರಸ್ತೆಯನ್ನು ಮತ್ತು ಇತರೆ ೭೮೫.೪೦ ಕಿ.ಮೀ. ಗಾಮೀಣ ಪ್ರದೇಶದ ರಸ್ತೆಯನ್ನು ಹೊಂದಿದೆ. ಈ ತಾಲೂಕಿನಲ್ಲಿ ಅರ್ಕಾವತಿ ನದಿಗೆ ಹಾರೋಬೆಲೆ ಹತ್ತಿರ ಒಂದು ಅಣೆಕಟ್ಟು ನಿರ್ಮಿಸಲಾಗಿದೆ. ಇದು ತಾಲೂಕಿನ ಏಕೈಕ ನೀರಾವರಿ ಆಸರೆಯಾಗಿದೆ. ಈ ನದಿಯು ನಂದಿಬೆಟ್ಟದಲ್ಲಿ ಹುಟ್ಟಿ ತಾಲೂಕಿನ ಹೃದಯಭಾಗದಲ್ಲಿ ಸುಮಾರು ೪೫ ಕಿಃ. ಹರಿಯುತ್ತದೆ. ಈ ನದಿಯು ಪ್ರಾಚೀನ ಕಾಲದಿಂದಲೂ ಈ ಪ್ರಾಂತ್ಯದ ಕೃಷಿ ಚಟುವಟಿಕೆ ಹಾಗೂ ಆದಾಯದ ಮೂಲದ ಮೇಲೆ

ನಿಚ್ಚಳವಾದ ಪ್ರಭಾವ ಬೀರಿದೆ. ಕನಕಪುರ ತಾಲೂಕಿನ ಇತರೆ ನೀರಾವರಿಯ ಮೂಲಗಳಾಗಿ ಸುವರ್ಣಮುಖಿ, ವೃಷಭಾವತಿ, ಸುನಂದ ಹೊಳೆ, ಚಿಕ್ಕಹೊಳೆ, ಬಸವನಹೊಳೆ, ಸೀತಾಹೊಟ್ಟಲು ನದಿ ಹಾಗೂ ಕೆಲವು ಚಿಕ್ಕ ತೊರೆಗಳು ಜೀವನಾಧಾರಕ್ಕೆ ಪೂರಕ ಎನಿಸಿವೆ. ಹಾಗೆಯೇ ಪ್ರಾಕೃತಿಕವಾಗಿ ಬೆಟ್ಟಗುಡ್ಡಗಳಿಂದ ಕೂಡಿದ್ದು, ಐತಿಹಾಸಿಕ ಮಹತ್ವವುಳ್ಳ ಕಬ್ಬಾಳು ದುರ್ಗ ೧೦೬೮ ಮೀಟರ್ ಎತ್ತರವಾಗಿದೆ. ಹಾಗೆಯೇ ಏಷ್ಯಾದಲ್ಲೇ ಎರಡನೆಯ ಅತಿ ದೊಡ್ಡ ಶಿಲಾತೋರಣವೆಂದು ಹೆಸರು ಗಳಿಸಿರುವ ಕಂಚನಹಳ್ಳಿಯ ಭೀಮನ ಕಿಂಡಿಬೆಟ್ಟ ಹೊಸದುರ್ಗ, ಬಿಳಿಕಲ್ಲು ರಂಗನಾಥಸ್ವಾಮಿಬೆಟ್ಟ, ಚಿಕ್ಕಮುದುವಾಡಿಬೆಟ್ಟ, ಬಾಣಂತಿ ಮಾರಮ್ಮನಬೆಟ್ಟ ಈ ತಾಲೂಕಿನಲ್ಲಿಯೇ ಇವೆ. ಈ ಸ್ಥಳಗಳು ಹಿಂದೆ ಅಚ್ಚಲುನಾಡು, ಕಳಲೆನಾಡು, ಹೊಮ್ಮಳಿಗೆ ನಾಡು, ಚೊಕ್ಕನಾಡು, ಸಿಗಲನಾಡು, ಹರಿಯೂರುನಾಡು, ಏಳವೆನಾಡು, ದೇಸಿಗರನಾಡು, ಮಹಾನಾಡು ಎಂದು ಹೆಸರುಗಳಿಸಿದ್ದವು."[೧೩] ಇತಿಹಾಸದಲ್ಲಿ ದಾಖಲಾಗಿದ್ದ ಚನ್ನಪಟ್ಟಣದ ಜಗದೇವರಾಯನ ಆಡಳಿತಕ್ಕೆ ಒಳಪಟ್ಟಿದ ಪ್ರದೇಶವಾಗಿದ್ದ ಈ ಊರಿನಲ್ಲಿ ಅರ್ಕಾವತಿ ನದಿಯ ದಂಡೆಯ ಮೇಲೆ ಕೋಟೆಯೊಂದನ್ನು ಟಿಪ್ಪು ನಿರ್ಮಿಸಿದ್ದನು. "ಟಿಪ್ಪುಸುಲ್ತಾನ್ ಕಬ್ಬಾಳುದುರ್ಗಕ್ಕೆ "ಜಾಫರಬಾದ್" ಎಂದು ನಾಮಕರಣ ಮಾಡಿದ್ದ."[೧೪]

೧೭೯೩-೧೭೯೯ರಲ್ಲಿ ಬ್ರಿಟಿಷರ ಸೈನ್ಯವು ಕನಕಪುರದ ಮಾರ್ಗವಾಗಿ ಶ್ರೀರಂಗಪಟ್ಟಣವನ್ನು ತಲುಪುವುದನ್ನು ತಡೆಯಲು ಕನಕಪುರಕ್ಕೆ ಎರಡು ಬಾರಿ ಬೆಂಕಿ ಹಾಕಿಸಿ ಸುಟ್ಟನೆಂದು ಹಾಗೂ ಸೇತುವೆಯನ್ನು ನಾಶ ಮಾಡಿಸಿದ್ದ ಎಂದು ೧೮೦೦-೧೮೦೧ರಲ್ಲಿ ಕಾನಕಾನಹಳ್ಳಿಗೆ ಭೇಟಿ ನೀಡಿದ್ದ ಫ್ರಾನ್ಸಿಸ್ ಬುಕಾನನ್ ದಾಖಲಿಸಿದ್ದಾನೆ. ಹಿಂದೆ ಈ ಸ್ಥಳವು ಉತ್ತಮ ದರ್ಜೆಯ ಇದ್ದಿಲು ಉತ್ಪಾದನೆಯಲ್ಲಿ, ಕೆಂಪು ಹರುಳುಗಳ ಉತ್ಪಾದನೆಯಲ್ಲಿ ಹಾಗೂ ಉಕ್ಕು ಉತ್ಪಾದನೆಯಲ್ಲಿ ಹೆಸರು ಗಳಿಸಿತ್ತು ಎಂದು ತಿಳಿದುಬರುತ್ತದೆ. ಇಂದು ಮೇಕೆದಾಟು ಸಂಗಮ, ಚುಂಚುಫಾಲ್ಸ್, ಕಬ್ಬಾಳುದುರ್ಗ, ಮೈತ್ರೇಯಿ ಪಿರಮಿಡ್ ವ್ಯಾಲಿ ಮುಂತಾದ ಕ್ಷೇತ್ರಗಳಿಂದ ಈ ತಾಲೂಕು ಪ್ರಸಿದ್ಧ ಪ್ರೇಕ್ಷಣೀಯ ಕ್ಷೇತ್ರವಾಗಿದೆ. ಈ ತಾಲೂಕಿನಲ್ಲಿ ಬಹುಪಾಲು ಭಾಗ ಕಣಶಿಲೆಗಳಿಂದ ಕೂಡಿದ ಗ್ರಾನೈಟ್‌ಶಿಲೆಯ ಗುಡ್ಡಗಳಿವೆ. ಈ ಶಿಲೆಗಳನ್ನು ನವಿರಾಗಿ ಕತ್ತರಿಸಿ ಅತ್ಯಂತ ಕಲಾತ್ಮಕವಾಗಿ ಮೆರುಗು ನೀಡಿ ವಿದೇಶಕ್ಕೆ ರಫ್ತು ಮಾಡುತ್ತಾರೆ. ವಿದೇಶದಲ್ಲಿ ಇಲ್ಲಿಯ ಗ್ರಾನೈಟ್‌ಗೆ ಅಧಿಕವಾದ ಬೇಡಿಕೆ ಇದೆ. ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚು ವಿದೇಶಿ ವಿನಿಮಯ ಗಳಿಸುವಲ್ಲಿ ಈ ಉದ್ಯಮ ಸಹಕಾರಿಯಾಗಿದೆ. ಈ ಉದ್ಯಮವು ಕೆಲವೇ ಕೆಲವು ಜನರ ಕೈಯಲ್ಲಿ ಉಳಿದಿದ್ದು ನಿರಂತರ ನಿಸರ್ಗದ ಒಡಲನ್ನು ಸೀಳುತ್ತಾ ಪ್ರಕೃತಿಯ ಮೇಲೆ ಅತಿ ಹೆಚ್ಚಿನ ರೀತಿಯಲ್ಲಿ ಒತ್ತಡ ಹಾಕುತ್ತಿರುವುದು ಕಂಡುಬರುತ್ತಿದೆ. ಗಣಿಗಾರಿಕೆ ಮೀತಿಮಿರಿದ್ದು ತಾಲೂಕಿನಾದ್ಯಂತ ಇಂತಹ ದೃಶ್ಯವನ್ನು ನೋಡಬಹುದಾಗಿದೆ. ಹೀಗೆ ಗಣಿಗಾರಿಕೆ ಮುಂದುವರಿಯುವುದರಿಂದ ಈ ಸುಂದರ ನಿಸರ್ಗ ನಿರ್ಮಿತ ಪ್ರದೇಶವು ಮುಂದಿನ ಪೀಳಿಗೆಗೆ ದಕ್ಕದೆ ಹೋಗಬಹುದು ಎಂಬ ಆತಂಕವಿದೆ.

ಮಾಗಡಿ

ರಾಮನಗರ ಜಿಲ್ಲಾ ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿದೆ. ಮಾಗಡಿ ಪಟ್ಟಣದ ಹೆಸರಿನ ಬಗ್ಗೆ ಐತಿಹ್ಯವಿದೆ. "ಮಾಂಡವ್ಯ ಋಷಿಗಳು ಕೆಂಪೇಗೌಡನ ವಂಶಜರಿಗೆ ಮಹಾಲಕ್ಷ್ಮಿ ಗಣೆ ನಿಧಿ ದೊರೆತು ಮಹಾಗಣಿ, ಮಹಾಗಡಿ ಮಾಗಡಿಯಾಗಿದೆ. 'ಮಾ' ಎಂದರೆ ಲಕ್ಷ್ಮೀ ಗಡಿ ಎಂಬ ಅರ್ಥವಿದ್ದು ಮಾಗಡಿ ಲಕ್ಷ್ಮೀವಾಸ ಸ್ಥಳವಾಗಿತ್ತು ಎಂಬ ವಿಚಾರ ಪುರಾಣಗಳಲ್ಲಿ ಉಲ್ಲೇಖವಿದೆ."[೧೫]

'ಮಾಗಧಿ' ಎಂದರೆ ಹೊಗಳುವವರು ಹಾಗೂ ಸುವಾಸನೆಯುಕ್ತ ಮಲ್ಲಿಗೆ ಹೂ ಎಂಬ ಅರ್ಥಗಳಿವೆ. ಕ್ರಿ.ಶ. ೧೫೨೪ರ ಒಂದು ಶಾಸನವೊಂದರಲ್ಲಿ 'ಮಾಗುಂಡಿ' ಎಂಬ ಹೆಸರು ಉಲ್ಲೇಖವಾಗಿದೆ. ತಾಲೂಕಿನಲ್ಲಿ ೫ ಹೋಬಳಿಗಳಿದ್ದು ಮಾಡಬಾಳ್, ಕಸಬಾ, ತಿಪ್ಪಸಂದ್ರ, ಸೋಲೂರು ಮತ್ತು ಕುದೂರುಗಳನ್ನೊಳಗೊಂಡಿವೆ. ೩೨ ಗ್ರಾಮಪಂಚಾಯಿತಿಗಳು ಹಾಗೂ ೭೨ ಗ್ರಾಮಲೆಕ್ಕಾಧಿಕಾರಿಗಳ ವೃತ್ತಗಳಿವೆ. ಉತ್ತರಕ್ಕೆ ಶಿವಗಂಗೆ ಬೆಟ್ಟವನ್ನು ಸೇರಿಕೊಂಡು ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕು, ಪೂರ್ವಕ್ಕೆ ಅರ್ಕಾವತಿ ನದಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕು, ದಕ್ಷಿಣಕ್ಕೆ ರಾಮನಗರದ ತಾಲೂಕಿನ ಗಡಿ, ಪಶ್ಚಿಮಕ್ಕೆ ಹುತ್ತುರಿ ದುರ್ಗದ ಬೆಟ್ಟದವರೆಗೂ ಹಬ್ಬಿದೆ. "ಮಾಗಡಿ ತಾಲೂಕು ೮೯೯ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ೨೬ ಕಿ.ಮೀ. ರಾಷ್ಟ್ರೀಯ ಹೆದ್ದಾರಿಯನ್ನು, ೭೮.೪೦ ಕಿ.ಮೀ. ರಾಜ್ಯ ಹೆದ್ದಾರಿಯನ್ನು, ೩೫ ಕಿ.ಮೀ. ಜಿಲ್ಲಾ ಮುಖ್ಯರಸ್ತೆಯನ್ನು ಹೊಂದಿದೆ. ಇನ್ನಿತರ ರಸ್ತೆ ೬೫೮ ೧೫ ಕಿ.ಮೀ. ಹೊಂದಿದೆ. ಅಕ್ಷಾಂಶರೇಖೆ ೧೨° ೫೩.೩೬ ೧೩° ೦೮.೧೫ ಗರಿಷ್ಠ ರೇಖಾಂಶ ೭೭೦೬೧೧ ೭೭° ೧೬ ೪ಂಗಳು ಹೊಂದಿದ್ದು ಸಮುದ್ರಮಟ್ಟದಿಂದ ೮೪೫ ಮೀಟರ್ ಎತ್ತರದಲ್ಲಿದೆ. ಒಟ್ಟು ೨೮೬ ಗ್ರಾಮಗಳಿದ್ದು ಅದರಲ್ಲಿ ೨೭೪ ಜನವಸತಿ ಗ್ರಾಮಗಳಾಗಿದ್ದು, ೧೨ ಜನರಹಿತ ಬೇಚರಾಕ್ ಗ್ರಾಮಗಳಿವೆ. ಸುಮಾರು ೮೬.೪೪ ಚ.ಕಿ.ಮೀ. ಅರಣ್ಯವನ್ನು ಹೊಂದಿದೆ."[೧೬] ಅತ್ಯಮೂಲ್ಯವಾದ ಔಷಧಿಯ ಗಿಡಮೂಲಿಕೆಗಳನ್ನು ಹೊಂದಿರುವ ಹೆಗ್ಗಳಿಕೆಯು ಇಲ್ಲಿನ ಅರಣ್ಯಪ್ರದೇಶಕ್ಕೆ ಇದೆ. ಸಾವನದುರ್ಗ ರಕ್ಷಿತ ಅರಣ್ಯಪ್ರದೇಶವಾಗಿದ್ದು, ಭೌಗೋಳಿಕವಾಗಿ ತಗ್ಗುಪ್ರದೇಶವನ್ನು ಹೊಂದಿದೆ. ಈ ತಾಲೂಕಿನ ವ್ಯಾಪ್ತಿಯಲ್ಲಿ ಎರಡು ಜಲಾಶಯಗಳು ಕಂಡುಬರುತ್ತದೆ. ವೈ.ಜಿ. ಗುಡ್ಡ ಜಲಾಶಯವನ್ನು ಕಣ್ವ ನದಿಗೂ, ಮಂಚನಬೆಲೆ ಜಲಾಶಯವನ್ನು ಅರ್ಕಾವತಿ ನದಿಗೂ ಕಟ್ಟಲಾಗಿದೆ. ಇಲ್ಲಿ ಪ್ರತಿ ಚ.ಕಿ.ಮೀಟರ್‌ಗೆ ೨೫೫೮ ಜನಸಾಂದ್ರತೆಯಿದ್ದು ಲಿಂಗಾನುಪಾತದಲ್ಲಿ ಪ್ರತಿ ೧೦೦೦ ಪುರುಷರಿಗೆ ೯೮೭ ಜನ ಸ್ತ್ರೀಯರನ್ನು ಕಾಣಬಹುದಾಗಿದೆ. ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಅತಿಹೆಚ್ಚು ವೀರಶೈವ ಮಠಗಳಿವೆ.

ಐತಿಹಾಸಿಕವಾಗಿ ಸಾವನದುರ್ಗ, ತಿರುಮಲೆ ರಂಗನಾಥ ದೇವಸ್ಥಾನ, ಮಾಗಡಿಯ ಸೋಮೇಶ್ವರ ದೇವಾಲಯ, ಕಲ್ಯ ಬೆಟ್ಟದಲ್ಲಿರುವ ಆಂಧ್ರದ ಪಾಲ್ಕುರಿಕೆ ಸೋಮನಾಥ ಸರ್ವಶಿಲೆ ಚನ್ನಮ್ಮನವರ ಗದ್ದುಗೆಗಳು ಇತಿಹಾಸದ ದೃಷ್ಟಿಯಿಂದ ಪ್ರಮುಖವಾಗಿವೆ.

ಹೊಯ್ಸಳರು, ಗಂಗರು, ವಿಜಯನಗರದ ಮೂಲ ಅರಸು ಹರಿಹರಬುಕ್ಕರು ಈ ಸೀಮೆಯಲ್ಲಿ ಆಳ್ವಿಕೆ ನಡೆಸಿದ ಕುರುಹುಗಳಿವೆ. ಬುಕ್ಕರಾಯನ ಭಂಟ ವಿಠ್ಠಲನಾಥ ಕಲ್ಯದ ಕೆರೆ ಕಟ್ಟಿಸಿ ಕಾಲುವೆಗಳನ್ನು ನಿರ್ಮಿಸಿದ್ದನು. "ಮಾಗಡಿಯು ಕಾಲಾನಂತರ ಹಿತ್ತಾಳೆಯ ದೀಪದ ಕಂಬಗಳು ಹಾಗೂ ಗೃಹೋಪಯೋಗಿ ವಸ್ತುಗಳ ತಯಾರಿಕೆಯಲ್ಲಿ ಪ್ರಸಿದ್ಧಿ ಪಡೆಯಿತು. ಇದಲ್ಲದೆ ತಂಬೂರಿ ಮತ್ತು ವೀಣೆ ತಯಾರಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿಯನ್ನು ಪಡೆದ ಸ್ಥಳವಾಗಿತ್ತು."[೧೭] ಹೀಗೆ ಇತಿಹಾಸದ ಪುಟದಲ್ಲಿ ಮಾಗಡಿ ಮೊಗೆದಷ್ಟೂ ಐತಿಹಾಸಿಕ ಸಂಪನ್ಮೂಲಗಳನ್ನು ತನ್ನ ಒಡಲಿನಲ್ಲಿ ಇರಿಸಿಕೊಂಡಿರುವ ಆಸಕ್ತ ಸಂಶೋಧಕರ ಮಹಾವೃಕ್ಷವಾಗಿದೆ.

ರಾಮನಗರ

ರಾಮನಗರವು ಹಿಂದಿನ ಕ್ಲೋಸ್‌ಪೇಟೆ. ಇಲ್ಲಿ ರಾಜಪ್ರತಿನಿಧಿಯಾಗಿದ್ದ ಸರ್ ಬ್ಯಾರಿ ಕ್ಲೋಸ್ ಹೆಸರಿನಿಂದಾಗಿ ಈ ಹೆಸರು ಪ್ರಾಪ್ತವಾಯಿತು. ಇಲ್ಲಿ ಅನೇಕ ಹಿಂದೂ ಮತ್ತು ಮುಸ್ಲಿಂ ಆರಾಧನ ಸ್ಥಳಗಳಿವೆ. ರೇಷ್ಮೆ ಕೈಗಾರಿಕೆಯು ಸ್ಥಾಪನೆಯಾಗಿ ಸುಮಾರು ೨೦೦ ವರ್ಷಗಳು ಸಂದಿವೆ. ಇಲ್ಲಿನ ರೇಷ್ಮೆ ಮಾರುಕಟ್ಟೆಯು ಏಷ್ಯಾದಲ್ಲೇ ಹೆಸರುವಾಸಿಯಾಗಿದ್ದು, ೧೯೭೧ರಲ್ಲಿ ಈ ನಗರದ ಆಗ್ರಹಾರದಲ್ಲಿ ಮೊದಲಿಗೆ ರೇಷ್ಮೆ ಗೂಡಿನ ಮಾರುಕಟ್ಟೆ ಅಸ್ತಿತ್ವಕ್ಕೆ ಬಂದಿತು. ಕೆಲವು ವರ್ಷಗಳ ನಂತರ ಇದು ಬೆಂಗಳೂರು–ಮೈಸೂರು ಹೆದ್ದಾರಿಗೆ ಸ್ಥಳಾಂತರವಾಯಿತು. ರಾಮದೇವರ ಬೆಟ್ಟವು ರಾಮನಗರದ ಪೌರಾಣಿಕ ಮಹತ್ವವನ್ನು ಸಾರುವ ಶ್ರದ್ಧಾ ಕೇಂದ್ರವಾಗಿದೆ. ಈ ಪ್ರದೇಶವು ಸಮುದ್ರಮಟ್ಟದಿಂದ ೩೦೬೬ ಅಡಿ ಎತ್ತರದಲ್ಲಿದೆ. ತಾಲೂಕಿನ ಉತ್ತರದಲ್ಲಿ ಮಾಗಡಿ, ಈಶಾನ್ಯದಲ್ಲಿ ಬೆಂಗಳೂರು ದಕ್ಷಿಣ ತಾಲೂಕು, ಪೂರ್ವ ಮತ್ತು ಆಗ್ನೇಯದಲ್ಲಿ ಕನಕಪುರ ತಾಲೂಕು, ದಕ್ಷಿಣ ಮತ್ತು ಪಶ್ಚಿಮದಲ್ಲಿ ಚನ್ನಪಟ್ಟಣ ತಾಲೂಕು, ವಾಯವ್ಯದಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕು ಸುತ್ತುವರೆದಿದೆ.

ರಾಮನಗರ ತಾಲೂಕು ೬೩೩ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ನಾಲ್ಕು ಹೋಬಳಿಗಳಾದ ಕಸಬಾ, ಬಿಡದಿ, ಕೂಟಗಲ್ ಮತ್ತು ಕೈಲಂಚವನ್ನು ಹೊಂದಿದೆ. ೨ ನಾಡಕಛೇರಿಗಳು, ೨೩ ಗ್ರಾಮಪಂಚಾಯಿತಿಗಳು, ೪ ಜಿಲ್ಲಾಪಂಚಾಯಿತಿ ಕ್ಷೇತ್ರಗಳು ಮತ್ತು ೧೬ ತಾಲೂಕುಪಂಚಾಯಿತಿ ಕ್ಷೇತ್ರಗಳನ್ನೊಳಗೊಂಡಿದೆ. ೨೮ ಕಿ.ಮೀ. ರೈಲ್ವೆಹಳಿಯನ್ನು, ೧೧೪.೫೩ ಕಿ.ಮೀ. ರಾಜ್ಯ ಹೆದ್ದಾರಿ, ೧೬೦.೧೩ ಜಿಲ್ಲಾ ಮುಖ್ಯರಸ್ತೆ ಮತ್ತು ಇತರೆ ೫೨೨.೧೦ ಕಿ.ಮೀ. ಗ್ರಾಮೀಣ ರಸ್ತೆಯನ್ನು ಹೊಂದಿದೆ. ಒಟ್ಟು ೧೩೩ ಗ್ರಾಮಗಳನ್ನು ಹೊಂದಿದ್ದು ೧೨೩ ಜನವಸತಿಯ ಗ್ರಾಮಗಳು, ೧೦ ಜನರಹಿತ ಗ್ರಾಮಗಳನ್ನು ಒಳಗೊಂಡಿದೆ. ೮೫.೬೮ ಚ.ಕಿ.ಮೀ. ಅರಣ್ಯವನ್ನು ಹೊಂದಿದ್ದು, ಹಂದಿಗೊಂದಿ ಅರಣ್ಯ ಮತ್ತು ಹುಲ್ತಾರ್ ಅರಣ್ಯ ಹಾಗೂ ರಾಮಗಿರಿಬೆಟ್ಟ ಅರಣ್ಯವನ್ನು ಹೊಂದಿದೆ. ಹುಲಿಮುತ್ತಿಗೆ ಅರಣ್ಯ ಮತ್ತು ಪವಿತ್ರವನದಲ್ಲಿ ರಾಜ್ಯದಲ್ಲೇ ಅಪರೂಪವೆನಿಸುವ ವಿವಿಧ ಔಷಧೀಯ ಗಿಡಮೂಲಿಕೆಗಳನ್ನು ಬೆಳೆಸಲಾಗಿದೆ. ಈ ಜಿಲ್ಲಾ ವ್ಯಾಪ್ತಿಯಲ್ಲಿಯೇ ಅತಿಹೆಚ್ಚು ಕೈಗಾರಿಕೆಯ ಪ್ರದೇಶವನ್ನು

ಈ ತಾಲೂಕು ಹೊಂದಿದೆ. ತಾಲೂಕಿನಲ್ಲಿ ೨೬೬೬ಗಳ ಜನಸಂಖ್ಯೆ ಇದ್ದು, ಪ್ರತಿ ಚ.ಕಿ.ಮೀ.ಗೆ ೩೮೨ ಜನರನ್ನು ಒಳಗೊಂಡಿದೆ. ಲಿಂಗಾನುಪಾತದ ಪ್ರಕಾರ ಪ್ರತಿ ಸಾವಿರ ಪುರುಷರಿಗೆ ೯೫೪ ಸ್ತ್ರೀಯರನ್ನು ಹೊಂದಿದೆ. ಈ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಇತರ ತಾಲೂಕಿಗೆ ಹೋಲಿಸಿದರೆ ಲಿಂಗಾನುಪಾತ ಅತಿ ಕಡಿಮೆ ಹೊಂದಿರುವ ತಾಲೂಕಾಗಿ ರಾಮನಗರ ಕಂಡುಬರುತ್ತದೆ. ಈ ತಾಲೂಕಿನ ಪ್ರೇಕ್ಷಣೀಯ ಹಾಗೂ ಐತಿಹಾಸಿಕ ಕ್ಷೇತ್ರಗಳೆಂದರೆ ರೇವಣಸಿದ್ಧೇಶ್ವರ ಬೆಟ್ಟ ಹಾಗೂ ಜಲಸಿದ್ಧೇಶ್ವರ ಬೆಟ್ಟಗಳಾಗಿವೆ. ಜಾನಪದ ಕಲೆಗಳ ಸ್ವರ್ಗವೆಂದೇ ಪ್ರಸಿದ್ಧಿ ಪಡೆದಿರುವ ಜಾನಪದಲೋಕ, ಜೋಗರ ದೊಡ್ಡಿಯ ಕರಕುಶಲ ತರಬೇತಿ ಕೇಂದ್ರ, ನಾಮಧಾರಿ ಸೀಡ್ಸ್ ಕಂಪನಿಯ ಬೀಜೋತ್ಪಾದನಾ ಕೇಂದ್ರಗಳನ್ನು ತಾಲೂಕು ಒಳಗೊಂಡಿದ್ದು ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಸಿಖ್ ಧರ್ಮೀಯರು ಕಂಡುಬರುವ ತಾಲೂಕು ಎಂದು ಹೆಸರು ಪಡೆದಿದೆ. ರಾಜಕೀಯವಾಗಿ ರಾಜ್ಯಕ್ಕೆ ಮೂರು ಮುಖ್ಯಮಂತ್ರಿಗಳನ್ನು ನೀಡಿದ ತಾಲೂಕು ಎಂದು ಹೆಸರು ಪಡೆದಿದೆ. ಹಾಗೇಯೇ ಮಾಜಿ ಪ್ರಧಾನಿಗಳಾದ ದೇವೇಗೌಡರು ಈ ಕ್ಷೇತ್ರದಲ್ಲಿ ವಿಧಾನಸಭೆ ಅಭ್ಯರ್ಥಿಯಾಗಿದ್ದರೆಂಬ ಹೆಗ್ಗಳಿಗೂ ಈ ತಾಲೂಕು ಒಳಗಾಗಿದೆ.

ಹೊಯ್ಸಳರು, ಗಂಗರು, ಚನ್ನಪಟ್ಟಣದ ಪಾಳೇಗಾರರು, ವಿಜಯನಗರದ ಅರಸರು, ಹೈದರಾಲಿ, ಟಿಪ್ಪು, ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು. ರಾಮನಗರ ಅತಿ ವೇಗವಾಗಿ ಬೆಳೆಯುತ್ತಿರುವ ತಾಲೂಕು ಕೇಂದ್ರ ಎಂದು ಹೆಸರು ಗಳಿಸಿದೆ.

ಮೇಲ್ಮೈ ಮಣ್ಣಿನ ಲಕ್ಷಣ: ಗ್ರಾನೈಟ್ ಸೀಸ ಶಿಲಾದ್ರವ್ಯಗಳಿಂದ ರೂಪುಗೊಂಡ ಈ ಮಣ್ಣಿನಲ್ಲಿ ಹೆಚ್ಚು ಸುಣ್ಣ ಮತ್ತು ಉಪ್ಪಿನಾಂಶವಿದ್ದು, ಸಾವಯವದ ಅಂಶ ಕಡಿಮೆ ಇದೆ ಎಂದು ಹೇಳಲಾಗುತ್ತದೆ. ಹೆಚ್ಚು ಹಗುರ, ತೆಳು ಪದರವುಳ್ಳ ಈ ಮಣ್ಣು ಅಷ್ಟೊಂದು ಫಲವತ್ತಾದುದಲ್ಲ. ತೇವಾಂಶ ಉಳಿಸಿಕೊಳ್ಳುವ ಸಾಮರ್ಥ್ಯ ಕಡಿಮೆ. ಈ ಮಣ್ಣಿನಲ್ಲಿ ತೃಣಧಾನ್ಯಗಳಾದ ರಾಗಿ, ನವಣೆ, ಮೆಕ್ಕೆಜೋಳ, ಹಾರಕ ಇತ್ಯಾದಿ ಬೆಳೆಗಳ ಜೊತೆಗೆ ದ್ವಿದಳ ಧಾನ್ಯಗಳಾದ ಶೇಂಗಾ, ಅವರೆ, ಹುರುಳಿ, ತೊಗರಿ, ಅಲಸಂದಿಗಳಂತಹ ಮಳೆಯಾಶ್ರಿತ ಬೆಳೆಗಳನ್ನು ಬೆಳೆಯಬಹುದು. ನೀರಿನ ಸೌಲಭ್ಯವಿರುವ ಕಡೆ ಕಬ್ಬು, ಭತ್ತ, ತರಕಾರಿ, ಬಾಳೆ, ತೆಂಗು, ಅಡಿಕೆ ಇತ್ಯಾದಿ ಬೆಳೆಯಲಾಗುತ್ತದೆ. ಈ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಮಾವಿನ ಫಸಲು ಹೆಚ್ಚಾಗಿ ಕಂಡುಬರುತ್ತದೆ.

ರಾಮನಗರ ಜಿಲ್ಲೆಯಲ್ಲಿ ಚಳಿಗಾಲದ ತರುವಾಯ ತೇವಾಂಶದ ಕೊರತೆಯಿಂದಾಗಿ ಮರಗಳ ಎಲೆಗಳು ಉದುರುತ್ತವೆ. ಮತ್ತೆ ವಸಂತಋತುವಿನಲ್ಲಿ ಚಿಗುರುತ್ತವೆ. ಇವುಗಳನ್ನು ಎಲೆ ಉದುರುವ ಸಸ್ಯವರ್ಗ ಎನ್ನಲಾಗುತ್ತದೆ. ಇಂತಹ ಕಾಡುಗಳು ಜಿಲ್ಲೆಯಲ್ಲಿ ಕಂಡುಬರುತ್ತದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ತೇಗ, ಹೊನ್ನೆ, ಶ್ರೀಗಂಧ, ಮತ್ತಿ, ಆಲ, ಬೇವು, ಮಾವು, ಹಲಸು, ಬಾಗೆ, ಮುತ್ತುಗ ಮತ್ತು ಬಿದಿರು ಮುಂತಾದ ನೈಸರ್ಗಿಕವಾಗಿ ಬೆಳೆದ ಮರಗಳು ಕಂಡುಬರುತ್ತವೆ.

ರಾಗಿ ಜಿಲ್ಲೆಯ ಪ್ರಮುಖ ಬೆಳೆಯಾಗಿದೆ. ರಾಗಿ ಮುದ್ದೆ ಈ ಜಿಲ್ಲೆಯ ಪ್ರಮುಖ ಆಹಾರವಾಗಿದೆ. ಜಿಲ್ಲೆಯಲ್ಲಿ ರಾಗಿ ೬೩೨ರ ಹೆಕ್ಟೇರ್, ಭತ್ತ ೬೭೫೧ ಹೆಕ್ಟೇರ್, ಮೆಕ್ಕೆಜೋಳ ೩೩೮೪ ಹೆಕ್ಟೇರ್, ದ್ವಿದಳ ಧಾನ್ಯಗಳಾದ ಹುರುಳಿ ೭೪೭೬ ಹೆಕ್ಟೇರ್, ತೊಗರಿ ೩೫೫೯ ಹೆಕ್ಟೇರ್, ಅವರೆ ೨೧೫೪ ಹೆಕ್ಟೇರ್, ಅಲಸಂದಿ ೧೧೫೪ ಹೆಕ್ಟೇರ್, ಖಾದ್ಯ ತೈಲ ಬೆಳೆಗಳು ಶೇಂಗಾ ೩೧೭೩ ಹೆಕ್ಟೇರ್, ಹರಳು(ಔಡಲ) ೮೦/೨ ಹೆಕ್ಟೇರ್, ಎಳ್ಳು ೭೨೭ ಹೆಕ್ಟೇರ್, ಹುಚ್ಚೆಳ್ಳು ೬೧೭ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತದೆ. ತೋಟಗಾರಿಕೆ ಬೆಳೆಗಳಲ್ಲಿ ತೆಂಗು ೨೨೯೦೯೬ ಟನ್, ಮಾವು ೧೯೭೮೬೪ ಟನ್, ಅಡಿಕೆ ೨೮೭೦ ಟನ್, ಬಾಳೆ ೧೧೨೫೧೯ ಟನ್, ಸಪೋಟ ೫೯೦೩ ಟನ್, ಪಪ್ಪಾಯಿ ೯೦೩೧ ಟನ್ ಬೆಳೆಯಾಗುತ್ತದೆ. ಈ ಜಿಲ್ಲೆಯಲ್ಲಿ ಒಟ್ಟು ೭೩ ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿ ೨೨೯.೦೩ ಕಿ.ಮೀ., ಜಿಲ್ಲಾ ಮುಖ್ಯ ರಸ್ತೆಗಳು ೧,೫೫,೫೪೦ ಕಿ.ಮೀ. ಉದ್ದವನ್ನು ಹೊಂದಿದೆ.

ವಾಯುಗುಣ

ರಾಮನಗರ ಜಿಲ್ಲೆಯು ಸಮಶೀತೋಷ್ಣ ವಲಯದ ಮಾನ್ಸೂನ್ ವಾಯುಗುಣವನ್ನೊಳಗೊಂಡ ಮಳೆಯಧಾರಿತ ಪ್ರದೇಶವಾಗಿದೆ. ಸಮುದ್ರ ಮಟ್ಟದಿಂದ ೨೨೫೦ ಅಡಿ ಎತ್ತರದಲ್ಲಿದೆ. ಈ ಪ್ರದೇಶ ೧೨.೪೦ ಅಕ್ಷಾಂಶ ೮೩.೧೨ ರೇಖಾಂಶದಲ್ಲಿದೆ. ಈ ಪ್ರದೇಶದಲ್ಲಿ ಪ್ರತಿ ವರ್ಷ ಸರಾಸರಿ ೮೪೭ ಮೀ.ಮೀಟರ್ ಮಳೆ ಆಗುತ್ತದೆ ಎಂದು ದಾಖಲಿಸಿದೆಯಾದರೂ ಇತ್ತೀಚೆಗೆ ಮಳೆಯ ಪ್ರಮಾಣ ಕಡಿಮೆಯಾಗುತ್ತದೆಂದು ಸ್ಥಳೀಯರು ತಿಳಿಸುತ್ತಾರೆ. ಮಳೆಯ ಗರಿಷ್ಠ ಪ್ರಮಾಣ ೧೦೮೫ ಮೀ.ಮೀಟರ್ ಎಂದು ದಾಖಲಾಗಿದೆ. ಈ ಜಿಲ್ಲೆಯಲ್ಲಿ ಈಶಾನ್ಯ ದಿಕ್ಕಿನಿಂದ ಬೀಸುವ ಮಾನ್ಸೂನ್ ಮಾರುತಗಳು ಮಾತ್ರ ಮಳೆ ತರುತ್ತವೆ. ಸಾಮಾನ್ಯವಾಗಿ ಏಪ್ರಿಲ್‌ನಿಂದ ಜೂನ್‌ನಲ್ಲಿ ಹೆಚ್ಚಾಗಿ ಮಳೆಯಾಗುತ್ತದೆ. ಡಿಸೆಂಬರ್ ತಿಂಗಳಲ್ಲಿ ಅತ್ಯಂತ ಹೆಚ್ಚು ಚಳಿ ಮತ್ತು ತೇವಾಂಶ ಕಂಡುಬರುತ್ತದೆ. ಈ ತಿಂಗಳಲ್ಲಿ ಗರಿಷ್ಠ ಉಷ್ಣತೆ ೨೫° ಸೆ. ಮತ್ತು ಕನಿಷ್ಠ ೧೫° ಸೆ. ಆಗಿರುತ್ತದೆ. ಡಿಸೆಂಬರ್ ಮತ್ತು ಫೆಬ್ರವರಿಯ ನಡುವೆ ಉಷ್ಣತೆ ೨೦° ಸೆಂ.ಗಿಂತಲೂ ಕೆಳಗಿರುತ್ತದೆ.

ನದಿಗಳು

ಜಿಲ್ಲೆಯಲ್ಲಿ ಮುಖ್ಯವಾಗಿ ಅರ್ಕಾವತಿ, ಸುವರ್ಣಾವತಿ, ಕುಮುದ್ವತಿ, ವೃಷಭಾವತಿ, ಕಣ್ವ ಕಾವೇರಿ, ಶಿಂಷಾ ನದಿಗಳು ಹರಿಯುತ್ತವೆ. ಹಾಗೆಯೇ ಕಣ್ವ ಜಲಾಶಯ, ಇಗ್ಗಲೂರು ಜಲಾಶಯ, ಮಂಚನಬೆಲೆ ಜಲಾಶಯ, ವೈ.ಜಿ. ಗುಡ್ಡ ಜಲಾಶಯ ಹಾಗೂ ಹಾರೋಬೆಲೆ, ಭೈರಮಂಗಲ ಜಲಾಶಯಗಳಿದ್ದರೂ ಜಿಲ್ಲೆಯ ಬಹುಪಾಲು ಭೂಮಿ ಮಳೆಯನ್ನೇ ಅವಲಂಬಿಸಿದೆ.

ಅರಣ್ಯ

ಕರ್ನಾಟಕದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ೧೯೦.೫ ಲಕ್ಷ ಹೆಕ್ಟೇರ್ ಅಂದರೆ ಶೇ. ೧೬ರಷ್ಟು ಮಾತ್ರ ಅರಣ್ಯಗಳಿಂದಾವೃತವಾಗಿದೆ. ಇದು ಭಾರತದ ಸರಾಸರಿಗಿಂತಲೂ ಶೇ. ೨೨.೦೭ರಷ್ಟು ಕಡಿಮೆ. ರಾಷ್ಟ್ರೀಯ ಅರಣ್ಯನೀತಿಯಲ್ಲಿ ಗೊತ್ತುಪಡಿಸಿರುವಂತೆ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೩೩.೩ರಷ್ಟು ಅರಣ್ಯಗಳಿಂದ ಕೂಡಿರಬೇಕು.

ಜಿಲ್ಲೆಯ ಆರ್ಥಿಕ ವ್ಯವಸ್ಥೆ

ರಾಮನಗರ ಜಿಲ್ಲೆಯು ೩೨೫೫೬೧ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು, ವ್ಯವಸಾಯವೇ ಮುಖ್ಯ ಕಸುಬಾಗಿದೆ. ಭೂಮಿಯು ಕೆಂಪು, ಕಪ್ಪು ಮತ್ತು ಮರಳುಮಿಶ್ರಿತ ಮಣ್ಣಿನಿಂದ ಕೂಡಿದೆ. ರಾಗಿ, ಭತ್ತ, ಕಡಲೆಕಾಯಿ ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಜಿಲ್ಲೆಯಲ್ಲಿ ಮಂಚನಬೆಲೆ ಜಲಾಶಯವಿದೆ. ಈ ಜಲರಾಶಿವಿರುವ ಸುಮಾರು ೧೬೯ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. ಕಣ್ವ ನದಿಯು ಕಾವೇರಿ ನದಿಯ ಉಪನದಿ ಈ ನದಿಯು ಕುಡಿಯುವ ನೀರಿಗೆ ಚನ್ನಪಟ್ಟಣದ ಹಿಗ್ಗಲೂರು ಕೆರೆಗೆ ಈ ನದಿಯಿಂದ ನೀರನ್ನು ಶೇಖರಿಸಿ ಕೆರೆಗಳಿಗೆ ನೀರನ್ನು ಆ ಪ್ರದೇಶದಲ್ಲಿ ಬಿಡಲಾಗಿ ಅಂತರ್ ಜಲದ ಮಟ್ಟ ಬೆಳವಣಿಗೆ ಹೊಂದಿದೆ. ಅರ್ಕಾವತಿಯು ನಂದಿ ಬೆಟ್ಟದಲ್ಲಿ ಹುಟ್ಟಿ ಸಂಗಮದಲ್ಲಿ ಕಾವೇರಿ ನದಿಯನ್ನು ಸೇರುತ್ತದೆ. ಈ ನದಿಗೆ ಹಾರೋಬಲೆ ಡ್ಯಾಂ ನಿರ್ಮಿಸಿ ಸುತ್ತಲಿನ ಪ್ರದೇಶದ ವ್ಯವಸಾಯಕ್ಕೆ ಅನುಕೂಲಕರವಾಗಿದೆ. ಬಿಡದಿಯ ಬಳಿ ಬೈರಮಂಗಲ ಕೆರೆಯು ಅತ್ಯಂತ ದೊಡ್ಡ ಕೆರೆಯಾಗಿದ್ದು, ವೃಷಭಾವತಿ ನದಿಯ ನೀರನ್ನು ಈ ಕೆರೆಯಲ್ಲಿ ಸಂಗ್ರಹಿಸಲಾಗುತ್ತಿತ್ತು. ಕಾಲಾನಂತರ ಬೆಂಗಳೂರು ಮಹಾನಗರದ ತ್ಯಾಜ್ಯ ಹಾಗೂ ಕಲುಷಿತ ನೀರು ಈ ಕೆರೆಯಲ್ಲಿ ಸೇರಿ ತುಂಬಿದ ನೀರು ಅರ್ಕಾವತಿ ನದಿಗೆ ಸೇರುತ್ತದೆ. ದೊಡ್ಡ ಆಲಹಳ್ಳಿಯಲ್ಲಿ ಕೆರೆಯು ಸಮಾರು ೭೫೦ ಹೆಕ್ಟೇರ್ ವಿಸ್ತಾರ ಹೊಂದ್ದಿದ್ದು, ಕಬ್ಬಾಳು ಬೆಟ್ಟದ ಕಡೆಯಿಂದ ಬೀಳುವ ಮಳೆಯ ನೀರು ಬಂಡೆ ಹಳ್ಳದ ಮುಖಾಂತರ ಕೆರೆಗೆ ಬರುವುದರಿಂದ ಮೀನುಗಾರಿಕೆ ಹಾಗೂ ಕೃಷಿಗೆ ಅನುಕೂಲಕರವಾಗಿದೆ.

ರಾಮನಗರ ಜಿಲ್ಲೆಯಲ್ಲಿ ಕಾವೇರಿ ನದಿಗೆ ಸಂಗಮದಲ್ಲಿ ಬಂದು ಸೇರುತ್ತವೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕೆಲವು ನದಿಗಳು ಹರಿದರೂ ಮಳೆಯಾಶ್ರಿತ ನದಿಗಳಾಗಿರುವುದರಿಂದ ಮಳೆಗಾಲದಲ್ಲಿ ಹೆಚ್ಚು ಹರಿಯುತ್ತವೆ. ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ಜೊತೆಗೆ ಈ ನದಿಗಳಿಗೆ ನಗರವ್ಯಾಪ್ತಿಯ ಅಂದರೆ ಬೆಂಗಳೂರು ನಗರ, ರಾಮಗನರ ಜಿಲ್ಲೆಯ ಕೆಲವು ನಗರ ಹಾಗೂ ಪಟ್ಟಣ ಪ್ರದೇಶಗಳ ಕೈಗಾರಿಕೆಗಳ ತ್ಯಾಜ ವಸ್ತು ಮತ್ತು ಒಳಚರಂಡಿ ನೀರನ್ನು ಈ ನದಿಗಳಿಗೆ ಬಿಡಲಾಗುತ್ತಿದ್ದು, ಇದು ಹೆಚ್ಚು ಅಪಾಯಕಾರಿಯಾಗಿದೆ.

ಬಹುತೇಕ ಗ್ರಾಮೀಣ ಪ್ರದೇಶದಿಂದ ಕೂಡಿದ್ದು ಬೆಂಗಳೂರು ಮತ್ತು ಮೈಸೂರು ಜಿಲ್ಲೆಯ ಮಂಡ್ಯ ರಾಷ್ಟ್ರೀಯ ಹೆದ್ದಾರಿ ೪೮ರ ಮಧ್ಯೆ ಬರುತ್ತದೆ. ಕೃಷಿ ಮತ್ತು ರೇಷ್ಮೆಯನ್ನು ಜೀವನಾಧಾರ ಕಸುಬಾಗಿಸಿಕೊಂಡು ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿದ್ದಾರೆ. ಚನ್ನಪಟ್ಟಣದಲ್ಲಿ ಗೊಂಬೆಗಳ ಗುಡಿ ಕೈಗಾರಿಕೆ ಜಗತ್ ಪ್ರಸಿದ್ಧಿ ಮತ್ತು ರೇಷ್ಮೆಯನ್ನು ಯಥೇಚ್ಛವಾಗಿ ಬೆಳೆಯುವುದರಿಂದ ರೇಷ್ಮೆನಾಡು ಎಂದು ಹೆಸರಿದ್ದರು ಆರ್ಥಿಕ ಅಭಿವೃದ್ಧಿಗೆ ಸ್ವಲ್ಪಮಟ್ಟಿನ ಅನುಕೂಲವಾಗಿದ್ದು ಬೆಂಬಲ ಬೆಲೆ ಇಲ್ಲದೆ ರೇಷ್ಮೆ ಬೆಳೆಗಾರರು ಆರ್ಥಿಕ ಸಂಕಷ್ಟದಿಂದ ನಲುಗುತ್ತಿದ್ದಾರೆ. ಏಷ್ಯಾದಲ್ಲಿಯೇ ದೊಡ್ಡ ರೇಷ್ಮೆ ಮಾರುಕಟ್ಟೆ ಹೊಂದಿದ್ದರೂ, ಕೆಂಗಲ್ ಹನುಮಂತಯ್ಯ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಕುಮಾರಸ್ವಾಮಿ ಮೂರು ಜನ ಮುಖ್ಯಮಂತ್ರಿಗಳನ್ನು ಕಂಡ ಜಿಲ್ಲೆಯಾದರೂ ಅಭಿವೃದ್ಧಿಯನ್ನು ಇದುವರೆಗೂ ಹೊಂದದೆ ಇರುವುದು ಅಧ್ಯಯನಗಳಿಂದ ತಿಳಿಯಲಾಗಿದೆ.

ಆಧುನೀಕರಣದಿಂದ ಚನ್ನಪಟ್ಟಣದ ಬಣ್ಣದ ಗೊಂಬೆ, ಗೃಹಕೈಗಾರಿಕೆ ಮತ್ತು ಗ್ರಾಮೀಣ ಕುಶಲಕಲೆಗಳು ಭಾರಿ ಹೊಡೆತವನ್ನು ತಿಂದು ದುರ್ಬಲವಾಗಿವೆ ಎನ್ನಬಹುದು. ಕಲ್ಲುಗಣಿಗಾರಿಕೆಯ ಗಡಿಭಾಗಗಳಲ್ಲಿ ಕಾರ್ಖಾನೆಗಳು ನಡೆಯುತ್ತಿರುವುದರಿಂದ ಪರಿಸರ ಮಾಲಿನ್ಯ, ಅಂತರಜಲಮಟ್ಟ ಕ್ಷೀಣಿಸುತ್ತದೆ. ಇದಕ್ಕೆ ಗಣಿ ಮಾಫಿಯಾ ಕಾರಣವಾಗಿದ್ದು, ತೆಂಗಿನ ಮರಗಳು ನುಸಿಪೀಡೆಯಿಂದ ನಲುಗುತ್ತಿದ್ದು, ಅಭಿವೃದ್ಧಿಗೆ ಪೂರಕವಾದ ಮಾನವ ಶ್ರಮಶಕ್ತಿ ಮತ್ತು ಬಂಡವಾಳ ವಿನಿಯೋಗಗಳು ಏರುಪೇರಿನಿಂದ ಕೂಡಿದ್ದರೂ ಕಡೆಗಣಿಸುವಂತಿಲ್ಲ. ಅದೇ ರೀತಿಯಾಗಿ, ಕೃಷಿ ಕೈಗಾರಿಕೆ, ವಿದ್ಯುತ್, ನೀರಾವರಿ ಇತರೆ ಸೇವಾಕ್ಷೇತ್ರಗಳ ಸ್ಥಿತಿ ಉತ್ತಮವಾಗಿಲ್ಲ. ಸಾರಿಗೆ ಸಂಪರ್ಕ ತೃಪ್ತಿಕರವಾಗಿದೆ. ವಿಪರೀತ ಬೆಲೆ ಏರಿಕೆ ಬಿಸಿಯಿಂದ ಜನರ ಜೀವನಮಟ್ಟದ ಮೇಲೆ ಆರ್ಥಿಕ ಅಸ್ಥಿರತೆ ಇದೆ. ಕೆಲವೇ ಕೆಲವು ಜನರ ಮುಂದೆ ಸಂಪತ್ತು ಅಧೀನವಾಗಿದ್ದು, ನಿವ್ವಳ ಆದಾಯ ಚಾಲ್ತಿಯಲ್ಲಿರುವ ಬೆಲೆಗಳಲ್ಲಿ ೩,೧೫,೨೩೪ ೨೦೦೭-೦೮ರ ಪ್ರಕಾರ ಹಾಗೂ ಸ್ಥಿರಬೆಲೆಯು ೨,೩೬,೦೮೬, ೧೯೯೯-೨೦೦೦ದ ಮೂಲ ಮಾಹಿತಿಯ ಪ್ರಕಾರ ಹಾಗೂ ತಲಾ ಆದಾಯ ಚಾಲ್ತಿಯ ಬೆಲೆ ೨೦೦೭-೦೮ರ ಪ್ರಕಾರ ೨೮,೨೯೧ ಹಾಗೂ ಸ್ಥಿರಬೆಲೆ ೧೯೯೯-೨೦೦೦ ಪ್ರಕಾರ ೨೧,೧೩೪ ಜಿಲ್ಲೆಯಲ್ಲಿದೆ.

ರಾಮನಗರ ಜಿಲ್ಲೆ ೩೫೫೯೧೨ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊದಿದೆ. ಇದರಲ್ಲಿ ೯೯೪೬ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ೩೭೩೭೦ ಹೆಕ್ಟೇರ್ ಭೂಮಿ ಪಾಳು ಭೂಮಿಯಾಗಿದ್ದು, ೧೬೩೮೦ ಹೆಕ್ಟೇರ್ ಭೂಮಿಯನ್ನು ಕೃಷಿಗೆ ಬಳಸಲಾಗಿದೆ. ಇಲ್ಲಿ ರೈತರನ್ನು ಸಾಮಾನ್ಯವಾಗಿ ಅತಿ ಸಣ್ಣ ರೈತರು(೧ ಹೆಕ್ಟೇರ್ ಕ್ಕಿಂತ ಕಡಿಮೆ), ಸಣ್ಣ ರೈತರು(೧-೨), ಅರೆ ಮಧ್ಯೆ ರೈತರು(೨-೪), ಮಧ್ಯಮ(೪-೧೦) ಹಾಗೂ ದೊಡ್ಡ ರೈತರನ್ನು(೧೦ ಹೆಕ್ಟೇರ್‌ಗಿಂತ ಮೇಲ್ಪಟ್ಟು) ವಿಂಗಡಿಸಲಾಗಿದೆ. ಇದರಲ್ಲಿ ೧೩೪೯೨೩ ಹೆಕ್ಟೇರ್ ಅತೀ ಸಣ್ಣ ಹಿಡುವಳಿದಾರರು, ೫೩೨೪೭ ಸಣ್ಣ ಹಿಡುವಳಿದಾರರು, ೧೮೨೯೫ ಅರೆ ಮಧ್ಯಮ ಹಿಡುವಳಿದಾರರು, ೫೭೯೮ ಮಧ್ಯಮ ಹಿಡುವಳಿದಾರರು ಹಾಗೂ

೬೬೪ ದೊಡ್ಡ ಹಿಡುವಳಿದಾರರು ಒಟ್ಟು ೧೯೮೯೫ ಹಿಡುವಳಿದಾರರು ೨೦೦೭೫೨೯ ಹೆಕ್ಟೇರ್ ಭೂಮಿಯಲ್ಲಿ ಕೃಷಿನಿರತರಾಗಿದ್ದಾರೆ.

೨೦೧೦-೧೧ರ ಜಣಗಣತಿಯ ಪ್ರಕಾರ ೪೨೫೪೩ ಹೆಕ್ಟೇರ್ ಭೂಮಿಯಲ್ಲಿ ನೀರಾವರಿ ಕೃಷಿ ಮಾಡಲಾಗುತ್ತದೆ. ಕಾಲುವೆ, ಕೆರೆ, ಕೊಳವೆ ಬಾವಿ, ಏತ ನೀರಾವರಿ ಇನ್ನಿತರ ಮೂಲಗಳ ಮೂಲಕ ಕೃಷಿಗೆ ನೀರು ಒದಗಿಸಲಾಗುತ್ತದೆ. ಇತ್ತೀಚಿಗೆ ಬಾವಿಗಳಿಂದ ಕೃಷಿಗೆ ನೀರು ಪೂರೈಸುವುದು ಕಂಡುಬರುವುದಿಲ್ಲ. ಇಲ್ಲಿ ಭತ್ತ, ರಾಗಿ, ಮುಸುಕಿನ ಜೋಳ ಯಥೇಚ್ಛವಾಗಿ ಬೆಳೆಯುವ ಬೆಳೆಯಾಗಿದೆ. ಆದರೆ ಸಜ್ಜೆ, ಗೋದಿ, ಬೆಳೆಯುತ್ತಿಲ್ಲ. ಜೊತೆಗೆ ದ್ವಿದಳ ದಾನ್ಯಗಳಾದ ಹುರುಳಿ, ಉದ್ದು, ಅಲಸಂದಿ ಬೆಳೆಗಳನ್ನು ಬೆಲೆಯುತ್ತಾರೆ. ಜೊತೆಗೆ ಹರಳು, ಕಡಲೆಕಾಯಿ, ಎಳ್ಳು ಬೆಲೆಗಳನ್ನು ಬೆಳೆಯಲಾಗುತ್ತದೆ. ರಾಮನಗರ ಜಿಲ್ಲೆಯಲ್ಲಿ ರೇಶ್ಮೆ ಕೃಷಿಗೆ ಹೆಸರುವಾಸಿಯಾಗದ್ದು, ಚೀನಾ ರೇಶ್ಮೆ ಬೆಳೆಯ ಪ್ರಥಮ ಸ್ಥಾನದಲ್ಲಿದ್ದರೆ, ಭಾರತ ಎರಡನೇ ಸ್ಥಾನದಲ್ಲಿದೆ. ರೇಶ್ಮೆ ಉತ್ಪಾದನೆಯಲ್ಲಿ ರಾಷ್ಟ್ರದ ಈ ಜಿಲ್ಲೆಯು ಪ್ರಥಮ ಸ್ಥಾನದಲ್ಲಿದ್ದು, ಏಷ್ಯಾದಲ್ಲಿಯೇ ಅತೀ ದೊಡ್ಡ ರೇಶ್ಮೆ ಮಾರುಕಟ್ಟೆಯನ್ನು ಹೊಂದಿದೆ. ಜಿಲ್ಲೆಯಲ್ಲಿ ೨೦೦೮-೦೯ರ ಅಂಕಿ ಅಂಶದ ಪ್ರಕಾರ ೯೧೧೩ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪು ನೇರಳೆ ಕೃಷಿ ಬೆಳೆಯಲಾಗಿದ್ದು, ಈ ಜಿಲ್ಲೆಯಲ್ಲಿ ೨೨೯೧೧ರಷ್ಟು ರೈತರು ರೇಶ್ಮೆ ಕೃಷಿಯಲ್ಲಿ ನಿರತರಾಗಿದ್ದು, ಇತ್ತೀಚೆಗೆ ರೇಷ್ಮೆ ಬೆಳೆಗೆ ಆದ್ಯತೆ ಕಡಿಮೆ ಪ್ರಮಾಣವಾಗುತ್ತಿದೆ. ಕೃಷಿ ಜೊತೆಗೆ ಪಶುಪಾಲನೆ, ಮೀನುಗಾರಿಕೆ, ಕೋಳಿ ಸಾಕಾಣಿಕೆ ಪ್ರಮುಖವಾದ ಕೃಷಿಯಾಧಾರಿತ ಉದ್ದಿಮೆಯಾಗಿದೆ. ೬೧೦೫೭೮ ಜಾನುವಾರುಗಳು, ೩೫೭೭೫೬ ಪೌಲ್ಟ್ರಿ ಫಾರಂಗಳು ಇವೆ. ಮೀನುಗಾರಿಕೆ ಜಿಲ್ಲೆಯ ಮತ್ತೊಂದು ಉದ್ದಿಮೆಯಾಗಿದ್ದು, ೨೭೫೬ ಮೀನುಗಾರರ ಸಹಕಾರ ಸಂಘಗಳಿದ್ದು, ೨೩೯ ಜನ ಸದಸ್ಯರನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ಸಿದ್ಧ ಉಡುಪುಗಳು, ಬಟ್ಟೆ ಗಿರಣಿ, ರಾಸಾಯನಿಕ ಕೈಗಾರಿಕೆಗಳು, ಇಂಜಿನಿಯರಿಂಗ್ ಇತರ ಕೈಗಾರಿಕೆಗಳಿದ್ದು, ೧೮೧೩೧ಕ್ಕೂ ಹೆಚ್ಚು ಉದ್ಯೋಗಾವಕಾಶಗಳನ್ನು ದೊರಕಿಸಿಕೊಟ್ಟಿವೆ. ಸಣ್ಣ ಪ್ರವಾಣದ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳಿದ್ದು, ಉದ್ಯೋಗಾವಕಾಶಗಳನ್ನು ಒದಗಿಸಿಕೊಡುತ್ತಿವೆ.

ಪ್ರಸ್ತುತ ಜಿಲ್ಲೆಯು ರೇಶ್ಮೆನಾಡು ಎಂಬ ಖ್ಯಾತಿ ಹೊಂದಿದೆ. ಚನ್ನಪಟ್ಟಣ ಮತ್ತು ರಾಮನಗರದ ಎರಡು ತಾಲೂಕುಗಳು ಅಭಿವೃದ್ಧಿ ಹೊಂದಿವೆ. ಕನಕಪುರ ಮತ್ತು ಮಾಗಡಿ ಎರಡು ತಾಲೂಕುಗಳು ತೀರಾ ಹಿಂದುಳಿದಿವೆ. ಅಭಿವೃದ್ಧಿ ಹೊಂದಿದ ತಾಲೂಕುಗಳಲ್ಲಿ ಯಾಂತ್ರಿಕ ಬೇಸಾಯ ಹಾಗೂ ಕೆರೆಗಳಿಗೆ ನೀರು ಹಾಯಿಸಲಾಗುತ್ತದೆ. ಪ್ರಾದೇಶಿಕವಾಗಿ ಈ ತಾಲೂಕುಗಳನ್ನು ಪೂರ್ವ ಮತ್ತು ಪಶ್ಚಿಮಗಳೆಂದು ವಿಭಾಗಿಸಲಾಗಿದೆ. ಮಾಗಡಿ ಮತ್ತು ಕನಕಪುರ ತಾಲೂಕುಗಳನ್ನು ಪೂರ್ವ ತಾಲೂಕುಗಳೆಂದು ಹಾಗೂ ರಾಮನಗರ, ಚನ್ನಪಟ್ಟಣ ಪಶ್ಚಿಮ ಗುಡ್ಡಗಾಡು ಪ್ರದೇಶ, ಒಣಭೂಮಿ ಕೃಷಿಯನ್ನು ಹೊಂದಿದ ಪ್ರದೇಶಗಳಾಗಿದೆ. ಪಶ್ಚಿಮ ತಾಲೂಕುಗಳು ಜಿಲ್ಲಾಕೇಂದ್ರಕ್ಕೆ ಹತ್ತಿರವಾಗಿದ್ದು

ಹೆಚ್ಚು ನೀರಾವರಿ, ಕೃಷಿ ಹಾಗೂ ಗೊಂಬೆಗಳ ತಯಾರಿಕೆ ಕೈಗಾರಿಕೆ ಹೊಂದಿದ್ದು ಇದಕ್ಕೆ ವಿರುದ್ಧವಾಗಿ ಪೂರ್ವ ತಾಲೂಕು ಜಿಲ್ಲೆಯಿಂದ ದೂರವಿದ್ದು ಹೆಚ್ಚು ಒಣಭೂಮಿ ಕೃಷಿಯನ್ನು ಹೊಂದಿದೆ. ದೊಡ್ಡಗಾತ್ರ, ಮಧ್ಯಮಗಾತ್ರದ ಉದ್ಯಮಗಳು ಪಶ್ಚಿಮಭಾಗದ ತಾಲೂಕುಗಳಲ್ಲಿ ಕಂಡುಬರುತ್ತದೆ. ಪೂರ್ವಭಾಗದ ತಾಲೂಕುಗಲಲ್ಲಿ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಪೂರ್ವಭಾಗದ ಕನಕಪುರ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ರಾಮನಗರ ಜಿಲ್ಲೆಯಲ್ಲಿಯೇ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕು ಎಂದು ಗುರುತಿಸಲ್ಪಟ್ಟ ತಾಲೂಕು ಕನಕಪುರವಾಗಿದೆ. ಈ ತಾಲೂಕು ಸಂಪೂರ್ಣ ಒಣಭೂಮಿ, ಮಳೆಯಾಶ್ರಿತ ಪ್ರದೇಶವಾಗಿದ್ದು ಶೇ. ೭೦ಕ್ಕೂ ಹೆಚ್ಚು ಜನರು ರೇಷ್ಮೆ ಕೃಷಿ ಹಾಗೂ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಕೃಷಿಯೇತರ ಚಟುವಟಿಕೆಗಳಾದ ಹೈನುಗಾರಿಕೆ, ಕುರಿಸಾಗಾಣಿಕೆ, ಗಣಿಗಾರಿಕೆ, ನೇಕಾರಿಕೆ, ಕೂಲಿಕೆಲಸ, ಗಾರ್ಮೆಂಟ್ ಫ್ಯಾಕ್ಟರಿ ಕೆಲಸಗಳಿಗೆ ನಗರಪ್ರದೇಶಗಳನ್ನು ಅವಲಂಬಿಸಿದ್ದಾರೆ. ಮಳೆಯನ್ನು ನಂಬಿ ಕೃಷಿಯನ್ನು ಇಲ್ಲಿನ ಜನತೆ ಅವಲಂಬಿಸಿದೆ. ತಾಲೂಕಿನಾದ್ಯಂತ ಮಧ್ಯಮಗಾತ್ರದ ಕೆರೆಗಳಿದ್ದು, ಇದರ ಮೂಲಕ ಕೆಲ ಪ್ರದೇಶದಲ್ಲಿ ಕೃಷಿಯನ್ನು ಕೈಗೊಂಡಿದ್ದಾರೆ. ಆದರೆ ಕೆರೆಗಳು ಅಲ್ಪಸ್ವಲ್ಪ ನೀರಾವರಿ ಕೃಷಿಗೆ ಅನುಕೂಲವಾಗಿದೆ.

ಜಿಲ್ಲೆಯ ಶೈಕ್ಷಣಿಕ ವ್ಯವಸ್ಥೆ

ರಾಜಧಾನಿಗೆ ಹತ್ತಿರದಲ್ಲಿರುವ ರಾಮನಗರ ಜಿಲ್ಲೆಯು ಶೈಕ್ಷಣಿಕವಾಗಿ ಹಿಂದುಳಿದಿದೆ. ೨೦೧೧ರ ಜನಗಣತಿಯ ಪ್ರಕಾರ ೬೯.೨೦ರಷ್ಟು ಸಾಕ್ಷರತೆಯನ್ನು ಹೊಂದಿದ್ದು, ಪುರುಷ ಸಾಕ್ಷರತೆಯ ಪ್ರಮಾಣ ಶೇ. ೭೬.೯೨, ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೬೧.೩೦ರಷ್ಟು ಕಂಡುಬರುತ್ತದೆ. ಮಹಿಳಾ ಸಾಕ್ಷರತೆಯು ಪುರುಷ ಸಾಕ್ಷರತೆಗಿಂತ ಶೇಕಡ ೧೫ರಷ್ಟು ಕಡಿಮೆ ಇದೆ. ಜಿಲ್ಲೆಯಲ್ಲಿ ಒಟ್ಟು ೧೬೦೧ ಪ್ರಾಥಮಿಕ ಶಾಲೆಗಳು, ೨೮೨ ಪ್ರೌಢಶಾಲೆಗಳು, ೩೫ ಪದವಿಪೂರ್ವ ಕಾಲೇಜು, ೬ ಅನುದಾನಿತ ಪದವಿಪೂರ್ವ ಕಾಲೇಜು, ೨೭ ಅನುದಾನರಹಿತ ಪದವಿಪೂರ್ವ ಕಾಲೇಜು, ೬ ಸರಕಾರಿ ಪದವಿ ಕಾಲೇಜು, ೨ ಅನುದಾನಿತ ಪದವಿ ಕಾಲೇಜು, ೩ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ೬ ಇಂಜಿನಿಯರಿಂಗ್ ಕಾಲೇಜುಗಳಿವೆ. ೪ ಕೇಂದ್ರ ಗ್ರಂಥಾಲಯಗಳು ಹಾಗೂ ಗ್ರಾಮ ಪಂಚಾಯತಿಗೊಂದರಂತೆ ಗ್ರಂಥಾಲಯಗಳಿವೆ.

ಆರೋಗ್ಯ

ಬೆಂಗಳೂರಿಗೆ ಹತ್ತಿರದ ಜಿಲ್ಲೆ ಇದಾದುದರಿಂದ ಬಹುತೇಕ ಆರೋಗ್ಯ ತಪಾಸಣೆಗೆ ಬೆಂಗಳೂರು ನಗರವನ್ನು ಆಶ್ರಯಿಸಿದವರ ಪ್ರಮಾಣ ಅಧಿಕವಾಗಿದೆ. ಆದರೆ ಜನಸಾಮಾನ್ಯರು ತಾಲೂಕು ಆರೋಗ್ಯ ಕೇಂದ್ರಗಳನ್ನೇ ಆಶ್ರಯಿಸಿದ್ದಾರೆ. ಒಂದು ಜಿಲ್ಲಾಸ್ಪತ್ರೆ ಹಾಗೂ ತಾಲೂಕಿಗೊಂದರಂತೆ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಹಾಗೆಯೇ ಭಾರತೀಯ ವೈದ್ಯಪದ್ಧತಿ ಆಸ್ಪತ್ರೆಗಳು

ತಾಲೂಕಿಗೊಂದರಂತಿವೆ. ಹೋಬಳಿ ಮಟ್ಟದಲ್ಲಿ ಒಟ್ಟು ೧೮ ಹಾಗೂ ೪ ಸಮುದಾಯ ಆರೋಗ್ಯ ಕೇಂದ್ರಗಳು ಕಂಡುಬರುತ್ತವೆ. ಇವುಗಳಲ್ಲದೆ ಜಿಲ್ಲೆಯಾದ್ಯಂತ ಹಲವು ಖಾಸಗಿ ನರ್ಸಿಂಗ್ ಹೋಂಗಳು ಕಾರ್ಯ ನಿರ್ವಹಿಸುತ್ತವೆ.

ಉದ್ದಿಮೆಗಳು

ರಾಮನಗರ ಜಿಲ್ಲೆಯಲ್ಲಿ ಸಿದ್ಧ ಉಡುಪು ಕಾರ್ಖಾನೆ ೮, ಬಟ್ಟೆ ತಯಾರಿಕೆ ಕಾರ್ಖಾನೆ ೯, ರಾಸಾಯನಿಕ ಕಾರ್ಖಾನೆ ೧೦, ವಿವಿಧ ಉಪಕರಣಗಳ ತಯಾರಿಕಾ ಕಾರ್ಖಾನೆ ೮ ಇವೆ. "ಈ ಎಲ್ಲಾ ಕಾರ್ಖಾನೆಗಳಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರ ಸಂಖ್ಯೆ ೮೭೩೪"[೧೮] ರಷ್ಟಿದೆ. ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬಿಡದಿ ಕೈಗಾರಿಕಾ ಪ್ರದೇಶವಾಗಿ ಮಾರ್ಪಟ್ಟಿದೆ. ಜಪಾನ್ ಕಂಪನಿಯ ಟಯೋಟಾ, ಕಿರ್ಲೋಸ್ಕರ್ ಅರೆಕೋ ಕಂಪನಿ, ಕಾರು ಉತ್ಪಾದನೆ ಮತ್ತು ಬಿಡಿ ಭಾಗಗಳನ್ನು ಉತ್ಪಾದಿಸಲಾಗುತ್ತದೆ. **ಅಚ್ಚಲು ಬಿಳಿಯ ಸೇನಾಪತಿ** ವೆಲ್ಲಿ ಲಿಮಿಟೆಡ್ ಮತ್ತು **ಲಕ್ಷ್ಮಣ್** ಐಸೋಲ್ ಲಿಮಿಟೆಡ್ ಪ್ರಿಂಟಿಂಗ್ ಪ್ರೆಸ್‌ಗೆ ಬೇಕಾದ ಕಾಗದ ಮತ್ತು ರಟ್ಟುಗಳನ್ನು ಉತ್ಪಾದಿಸುತ್ತದೆ. ಕೈಗಾರಿಕಾ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಸಣ್ಣಪುಟ್ಟ ಉಪಕರಣಗಳ ತಯಾರಿಕಾ ಕಾರ್ಖಾನೆಗಳು ಮುಖ್ಯವಾದವು. ಇದಲ್ಲದೆ ಸಣ್ಣ ಕೈಗಾರಿಕಾ(ರಾಮನಗರ ಜಿಲ್ಲಾ ಅಂಕಿ ಅಂಶಗಳ ನೋಟ, ೧೨–೧೩ ಪು. ೭೯–೮೬) ಘಟಕಗಳಾದ ನಾಮಧಾರಿ ಸೀಡ್ಸ್ ಕಂಪನಿ, ತೆಂಗಿನ ನಾರಿನ ಕೈಗಾರಿಕೆಗಳು, ಬೀಡಿ ಉದ್ಯಮ, ಹೆಂಚು ಉದ್ಯಮ, ರೇಷ್ಮೆ ನೂಲು ಉತ್ಪಾದನಾ ಘಟಕಗಳು ಜಿಲ್ಲೆಯಾದ್ಯಂತ ಇವೆ. ಓರಿಯಂಟಲ್ ಟಿಂಬರ್ಸ್ ಇಂಡಸ್ಟ್ರಿಯಲ್ಸ್, ಮೈಸೂರು ಪಾಲಿಮರ್ಸ್ ಹಾಗೂ ಮಾಂಡ್ರೆ ಬ್ರಿಕ್ಸ್ ಮತ್ತು ಟೈಲ್ಸ್, ಮಣ್ಣು ಗೊಂಬೆ ತಯಾರಿಕೆ ಘಟಕಗಳು ಅರಗು ಮತ್ತು ಬಣ್ಣದ ತಯಾರಿಕೆ, ಕರ್ನಾಟಕ ಆರ್ಟ್ಸ್ ಆ್ಯಂಡ್ ಕ್ರಾಫ್ಟ್ ಎಂಪೋರಿಯಂ, ಸೀಗೆಪುಡಿ ತಯಾರಿಕಾ ಘಟಕ, ಚರ್ಮ ಮತ್ತು ಪ್ಲಾಸ್ಟಿಕ್ ಘಟಕಗಳು ಮುಂತಾದವುಗಳನ್ನು ಈ ಜಿಲ್ಲೆಯಲ್ಲಿ ಕಾಣಬಹುದಾಗಿದೆ.

ರಾಮನಗರ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೯೭೩೯೮ರಷ್ಟು ದುಡಿಯುವ ವರ್ಗದ ಜನರಿದ್ದಾರೆ. ಇದರಲ್ಲಿ ೪೧೫೪೦ರಷ್ಟು ಪುರುಷರು ಮತ್ತು ೫೫೮೫೮ರಷ್ಟು ಮಹಿಳೆಯರಿದ್ದಾರೆ. ೨೦೦೭–೦೮ನೇ ಸಾಲಿನಲ್ಲಿ ಜಿಲ್ಲೆಗಳಲ್ಲಿ ವಿವಿಧ ಬಾಬ್ತುಗಳಿಂದ ಅಂದರೆ ಕೃಷಿ ಮತ್ತು ಪಶುಸಂಗೋಪನೆಯಿಂದ ೬೪೯೮೨ ಲಕ್ಷ ರೂ.ಗಳು, ಅರಣ್ಯ ಹಾಗೂ ಮರಗೆಲಸದಿಂದ ೪೭೯೬ ಲಕ್ಷ ರೂ.ಗಳು, ಮೀನುಗಾರಿಕೆಯಿಂದ ೩೪೪೮ ಲಕ್ಷ ರೂ.ಗಳು, ಗಣಿ ಮತ್ತು ಕಲ್ಲು ಅಗೆತದಿಂದ ೧೧೧೭ ಲಕ್ಷ ರೂ.ಗಳು, ಒಟ್ಟು ಪ್ರಾಥಮಿಕ ವಲಯದಿಂದ ಒಟ್ಟು ೭೧೨೩೩ ಲಕ್ಷ ರೂ.ಗಳು ಬಂದಿವೆ. ೩೯೬೭೬ ಲಕ್ಷ ರೂ.ಗಳು ನಿರ್ಮಾಣಕಾರ್ಯದಿಂದ, ೨೪೨೭೯ ಲಕ್ಷ ರೂ.ಗಳು ವಿದ್ಯುಚ್ಛಕ್ತಿ, ಅನಿಲ ಮತ್ತು ನೀರು ಸರಬರಾಜಿನಿಂದ, ೧೯೭೩ ಲಕ್ಷ ರೂ.ಗಳು ಒಟ್ಟು ದ್ವಿತೀಯ ವಲಯದಿಂದ, ೬೬೪೪೮ ಲಕ್ಷ ರೂ.ಗಳು ರೈಲ್ವೆಯಿಂದ, ೨೦೮೩ ಲಕ್ಷ ರೂ.ಗಳು, ಸಾರಿಗೆಯಿಂದ, ೫೪೧೩ ಲಕ್ಷ ರೂ.ಗಳು ವ್ಯಾಪಾರ, ವಸತಿ ಮತ್ತು ವಿಮೆಯಿಂದ, ೮೭೦೦೧ ಲಕ್ಷ

ರೂ.ಗಳು ಸ್ಥಿರಾಸ್ತಿ, ವಸತಿಗೃಹಗಳ ಒಡೆತನ ಮತ್ತು ವ್ಯಾಪಾರ ಸೇವೆಗಳಿಂದ, ೩೩೪೦೦ ಲಕ್ಷ ರೂ.ಗಳು ಸಾರ್ವಜನಿಕ ಆಡಳಿತದಿಂದ ೧೯೪೯ ಲಕ್ಷ ರೂ.ಗಳಾಗಿದ್ದು ಇತರೆ ಸೇವೆಗಳಿಂದ ೨೪೬೨೩ ಲಕ್ಷ ರೂ.ಗಳು. ತೃತೀಯ ವಲಯದಿಂದ ೧೭೭೫೪೪ ಲಕ್ಷ ಆದಾಯ ಬಂದಿದೆ. ತಲಾ ಆದಾಯ ೨೮೨೧೯ ರೂ.ಗಳು ಅಂದಾಜು ಮಾಡಲಾಗಿದೆ. ರಾಮನಗರ ಜಿಲ್ಲೆ ಬೆಂಗಳೂರು ರಾಜಧಾನಿಯ ಸಮೀಪದ ಜಿಲ್ಲೆಯಾಗಿದ್ದು, ಬ್ಯಾಂಕು ವಹಿವಾಟು ಅಧಿಕವಾಗಿದೆ. ೬೪ ವಾಣಿಜ್ಯ ಬ್ಯಾಂಕುಗಳು, ೧೪ ಗ್ರಾಮೀಣ ಬ್ಯಾಂಕುಗಳಿವೆ. ಜೊತೆಗೆ ಸಹಕಾರಿ ಬ್ಯಾಂಕುಗಳು ಹಣದ ವಹಿವಾಟಿಗೆ ಸಹಕರಿಸುತ್ತವೆ. ಜಿಲ್ಲೆಯಲ್ಲಿ ಮುಖ್ಯ ಕೆಲಸಗಾರರ ಸಂಖ್ಯೆಯು ೩೨೦೨೮೭ರಷ್ಟು ಕಂಡುಬಂದು ಅದರಲ್ಲಿ ೨೨೯೮೯೬ ಪುರುಷ ಹಾಗೂ ೯೪೩೧೮ ಮಹಿಳಾ ಮುಖ್ಯ ಕೆಲಸಗಾರರು ಗ್ರಾಮೀಣ ಭಾಗದಲ್ಲಿದ್ದಾರೆ. ನಗರಪ್ರದೇಶದಲ್ಲಿ ೭೪೭೫೮ರಷ್ಟು ಒಟ್ಟು ಕೆಲಸಗಾರರಿದ್ದು, ಪುರುಷರ ಸಂಖ್ಯೆ ೫೬೧೫೯, ಮಹಿಳೆಯರ ಸಂಖ್ಯೆ ೧೮೫೯ ಕಂಡುಬರುತ್ತಾರೆ. ನಗರ ಪ್ರದೇಶದಲ್ಲಿ ಒಟ್ಟು ೮೬೨೯ ಅರೆಕೆಲಸಗಾರರು ಕಂಡುಬಂದರೆ, ೪೯೧೪ ಪುರುಷ ಹಾಗೂ ೩೭೧೫ ಮಹಿಳಾ ಅರೆ ಕೆಲಸಗಾರರು ಇರುವರು. ಒಟ್ಟು ಗ್ರಾಮೀಣ ಭಾಗದಲ್ಲಿದೆ ೨೧೮೮೭೬ ಕೃಷಿ ಸಾಗುವಳಿದಾರರು ಕಂಡುಬಂದರೆ ೧೪೪೧೬೧ ಪುರುಷ ಸಾಗುವಳಿದಾರರು ಹಾಗೂ ೭೪೧೭ ಮಹಿಳಾ ಕೃಷಿ ಸಾಗುವಳಿದಾರರು ಇರುವರು. ನಗರ ಭಾಗದಲ್ಲಿ ಒಟ್ಟು ೨೩೧೪ ಕೃಷಿ ಸಾಗುವಳಿದಾರರಿದ್ದು ೧೮೭೨ ಪುರುಷ ಹಾಗೂ ೪೪೨ ಮಹಿಳಾ ಸಾಗುವಳಿದಾರರು ಕಂಡುಬರುತ್ತಾರೆ. ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟಂತೆ ೯೪೯೬೪ರಷ್ಟಿದ್ದು, ಪುರುಷರ ಪ್ರಮಾಣ ೪೦೩೦೪ ಹಾಗೂ ಮಹಿಳೆಯರ ಪ್ರಮಾಣ ೫೪೬೪೦ರಷ್ಟಿರುತ್ತಾರೆ. ನಗರಪ್ರದೇಶದಲ್ಲಿ ೨೪೩೪ರಷ್ಟು ಕಂಡುಬಂದು, ಪುರುಷರ ಸಂಖ್ಯೆ ೧೨೧೬ರಷ್ಟಿದ್ದು, ಮಹಿಳಾ ಸಂಖ್ಯೆ ೧೨೧೮ರಷ್ಟಿದೆ. ಗ್ರಾಮೀಣ ಗೃಹಕೆಲಸಗಾರರು ೧೦೮೭೫ರಷ್ಟು, ಅದರಲ್ಲಿ ೫೪೬೪ ಪುರುಷ ಹಾಗೂ ೫೪೪ ಮಹಿಳಾ ಕೆಲಸಗಾರರಿದ್ದು, ನಗರ ಭಾಗದಲ್ಲಿ ಒಟ್ಟು ಇವರ ಸಂಖ್ಯೆ ೧೦೬೧೦ರಷ್ಟಿದ್ದು, ಪುರುಷರ ಸಂಖ್ಯೆ ೪೯೨೭ ಕೆಲಸಗಾರರಿದ್ದು, ಮಹಿಳೆಯರ ಸಂಖ್ಯೆ ೬೩೧೩ರಷ್ಟಿದ್ದು, ಗ್ರಾಮೀಣ ಭಾಗಕ್ಕೆ ಹೋಲಿಸಿದರೆ ಮಹಿಳಾ ಗೃಹಕೆಲಗಾರರು ಅಧಿಕ ಸಂಖ್ಯೆಯಲ್ಲಿದ್ದಾರೆ. ಕೃಷಿಯೇತರ ಕೆಲಸಗಾರರು ೯೯೦೩ ಒಟ್ಟು ಕೆಲಸಗಾರರಿದ್ದು, ೬೭೧೯೨ ಪುರುಷ ಕೆಲಸಗಾರರಿದ್ದು, ೩೧೯೦೧ ಮಹಿಳಾ ಕೆಲಸಗಾರರು ಕಂಡುಬರುತ್ತಾರೆ. ಕೃಷಿ ಕಾರ್ಮಿಕರು ಒಟ್ಟು ಸಂಖ್ಯೆ ೯೯೬೪ರಷ್ಟು ಅದರಲ್ಲಿ ೪೦೩೨೪ ಪುರುಷ ಹಾಗೂ ೫೪೬೪೦ ಮಹಿಳಾ ಕೃಷಿ ಕಾರ್ಮಿಕರಿದ್ದು, ಪುರುಷರಿಗಿಂತ ಮಹಿಳಾ ಕೃಷಿ ಕಾರ್ಮಿಕರು ಹೆಚ್ಚಾಗಿದ್ದಾರೆ.

ಸ್ತ್ರೀ ಶಕ್ತಿ ಯೋಜನೆ

ರಾಮನಗರ ಜಿಲ್ಲೆಯಲ್ಲಿ ಒಟ್ಟು ೪೪೦೭ ಸ್ವಸಹಾಯ ಗುಂಪುಗಳಿವೆ. ಅದರಲ್ಲಿ ಪರಿಶಿಷ್ಟ ಜಾತಿಯ ೧೪೮೧೫ ಮಹಿಳಾ ಸದಸ್ಯರಿದ್ದಾರೆ. ಪರಿಶಿಷ್ಟ ಪಂಗಡದ ೧೪೬೧ ಮಹಿಳೆಯರು ಹಾಗೂ ಎಲ್ಲಾ ವರ್ಗದ ಮಹಿಳೆಯರ ಸಂಖ್ಯೆ ೭೬೦೮೮ ಕಂಡುಬಂದಿದೆ. ಸ್ವಸಹಾಯ ಗುಂಪುಗಳು

ಸಂಗ್ರಹಿಸಿದ ಉಳಿತಾಯ ೨೧೬೩.೪೯ರಷ್ಟು ಹಣವನ್ನು ಬ್ಯಾಂಕುಗಳಿಂದ ಸಾಲ ಪಡೆದ ಗುಂಪುಗಳ ಸಂಖ್ಯೆ ೪೦೬೩ ಕಂಡುಬಂದು, ಬ್ಯಾಂಕಿನಿಂದ ಪಡೆದ ಸಾಲ ೪೩೭೯.೭೬ ರಷ್ಟಿದೆ. ಸರಕಾರ ಬಿಡುಗಡೆ ಮಾಡಿದ ನಿಧಿಯು ೨೭೬.೪೫ರಷ್ಟಿದೆ.

ರಾಜಕೀಯ ಹಿನ್ನೆಲೆ

ಕನಕಪುರ ತಾಲೂಕು ಜಿಲ್ಲೆಯಿಂದ ಪೂರ್ವಕ್ಕೆ ೨೫ ಕಿ.ಮೀ. ದೂರದಲ್ಲಿದೆ. ರಾಮನಗರ ಜಿಲ್ಲೆಯ ಕನಕಪುರ ತಾಲೂಕು ನಂಜುಂಡಪ್ಪ ಅವರ ಪ್ರಾದೇಶಿಕ ಅಸಮತೋಲನ ವರದಿಯಲ್ಲಿ ಅತ್ಯಂತ ಹಿಂದುಳಿದ ತಾಲೂಕೆಂದು ಪರಿಗಣಿಸಲಾಗಿದೆ. ಅವರ ಹಿಂದುಳಿದ ತಾಲೂಕುಗಳಲ್ಲಿ ಒಂದಾಗಿದ್ದು, ಉಪವಿಭಾಗವಾಗಿದ್ದು, ಈ ತಾಲೂಕು ಒಂದು ವಿಧಾನಸಭಾಕ್ಷೇತ್ರವನ್ನು ಹೊಂದಿದೆ. ವಿಧಾನಸಭಾ ಕ್ಷೇತ್ರವು ಕನಕಪುರ ಆಗಿದ್ದು ೨೫೯ ಗ್ರಾಮಗಳನ್ನು ಹೊಂದಿದೆ. ೪೩ ಗ್ರಾಮಪಂಚಾಯಿತಿಗಳು, ೬ ಹೋಬಳಿಗಳು, ೧ ಪುರಸಭೆ ಹೊಂದಿದ್ದು ಪ್ರಸ್ತುತ ನಗರಸಭೆಯಾಗಿದೆ. ಜಿಲ್ಲೆಯಲ್ಲಿ ಗ್ರಾಮಪಂಚಾಯಿತಿ ಒಟ್ಟು ೨೧೦೧ ಸದಸ್ಯರಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿ ಸದಸ್ಯರು ೪೮೨ ಇದ್ದು, ಪರಿಶಿಷ್ಟ ಪಂಗಡ ಸದಸ್ಯರ ಸಂಖ್ಯೆ ೧೮೭, ಹಿಂದುಳಿದ ವರ್ಗದ ಸದಸ್ಯರ ಸಂಖ್ಯೆ ೬೧೭ ಹಾಗೂ ಸಾಮಾನ್ಯ ವರ್ಗದ ಗ್ರಾಮಪಂಚಾಯಿತಿ ಸದಸ್ಯರ ಸಂಖ್ಯೆ ೮೧೫ ಅದೇ ರೀತಿಯಾಗಿ ತಾಲೂಕು ಪಂಚಾಯಿತಿಯ ಒಟ್ಟು ಸದಸ್ಯರ ಸಂಖ್ಯೆ ಈ ರೀತಿ ಇದ್ದು, ಪರುಷ ಸದಸ್ಯರ ಸಂಖ್ಯೆ ೪೭, ಮಹಿಳಾ ಸದಸ್ಯರ ಸಂಖ್ಯೆ ೩೬, ಒಟ್ಟು ಸದಸ್ಯರ ಸಂಖ್ಯೆ ೮೩ ಇದರಲ್ಲಿ ಪರಿಶಿಷ್ಟ ಜಾತಿ ಪರುಷರ ಸದಸ್ಯರ ಸಂಖ್ಯೆ ೯, ಮಹಿಳಾ ಪರಿಶಿಷ್ಟ ಜಾತಿ ಸದಸ್ಯರ ಸಂಖ್ಯೆ ೮, ಒಟ್ಟು ಪರಿಶಿಷ್ಟ ಜಾತಿ ಸದಸ್ಯರ ಸಂಖ್ಯೆ ೧೭, ಪರಿಶಿಷ್ಟ ಜಾತಿ ಸದಸ್ಯರ ಸಂಖ್ಯೆ ೪ ಇದ್ದು, ಇವು ನಾಲ್ಕು ಮಹಿಳೆಯರಿಗೆ ಮೀಸಲಾಗಿವೆ. ಹಿಂದುಳಿದ ವರ್ಗ ತಾಲೂಕುಪಂಚಾಯಿತಿ ಒಟ್ಟು ಸದಸ್ಯರ ಸಂಖ್ಯೆ ೨೭. ಅದರಲ್ಲಿ ಪರುಷರು ೧೭, ಮಹಿಳೆಯರು ೧೦. ಸಾಮಾನ್ಯ ವರ್ಗದ ಒಟ್ಟು ಸದಸ್ಯರ ಸಂಖ್ಯೆ ೩೫ ಆಗಿದ್ದು, ಪುರುಷರ ಸಂಖ್ಯೆ ೨೧, ಮಹಿಳೆಯರ ಸಂಖ್ಯೆ ೧೪, ಒಟ್ಟು ಸಾಮಾನ್ಯ ವರ್ಗದ ತಾಲೂಕು ಪಂಚಾಯಿತಿ ಸದಸ್ಯರ ಸಂಖ್ಯೆ ೩೫. ಜಿಲ್ಲಾ ಪಂಚಾಯಿತಿಯ ಸದಸ್ಯರ ಸಂಖ್ಯೆ ೨೨ ಆಗಿದ್ದು, ಪರುಷ ಸದಸ್ಯರ ಸಂಖ್ಯೆ ೧೩, ಮಹಿಳಾ ಸದಸ್ಯರ ಸಂಖ್ಯೆ ೯ ಇದೆ. ಈ ತಾಲೂಕಿನಲ್ಲಿ ಒಕ್ಕಲಿಗರು ಮತ್ತು ಲಿಂಗಾಯತ, ನಾಯಕ, ಹರಿಜನ, ಪ.ಪಂಗಡ, ಮುಸ್ಲಿಂ, ಕುರುಬ, ಕ್ರಿಶ್ಚಿಯನ್ ನಾಯಕ, ಬಣಜಿಗ, ಬ್ರಾಹ್ಮಣರು ಇತರೆ ಸಮುದಾಯಗಳಿದ್ದು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮೊದಲು ಈ ಸಮುದಾಯಗಳು ಜೆ.ಡಿ.ಎಸ್. ಪಕ್ಷದೊಂದಿಗೆ ಗುರುತಿಸಿಕೊಂಡಿದ್ದರು. ಕಳೆದ ಕ್ಷೇತ್ರ ಮರುವಿಂಗಡಣೆಯ ನಂತರ ಕಾಂಗ್ರೆಸ್ ಬೆಂಬಲ ದೊರೆಯಿತು. ವ್ಯಕ್ತಿಯ ಆಧಾರಿತ ಚುನಾವಣೆಯಿಂದ ಇಲ್ಲಿ ಆಡಳಿತ ಪಕ್ಷದವರು ಶಾಸಕರಾಗಿದ್ದಾರೆ. ಇದಕ್ಕೆ ಸ್ಥಳೀಯ ಶಾಸಕರ ಸಾಮಾಜಿಕ ಪ್ರಾತಿನಿಧ್ಯ ಕಾರಣವಾಗಿದೆ. ಆದರೂ ಸಹ ಈ ಜಿಲ್ಲೆಯು ಮೂರು ಮುಖ್ಯಮಂತ್ರಿಗಳು ಹಾಗೂ ಒಬ್ಬ ಪ್ರಧಾನಮಂತ್ರಿಯನ್ನು ನೀಡಿದ ಹೆಗ್ಗಳಿಕೆ ಇದೆ. ಕೆಂಗಲ್

ಹನುಮಂತಯ್ಯ, ಹೆಚ್.ಡಿ. ದೇವೇಗೌಡ, ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದರು, ಒಬ್ಬ ಪ್ರಧಾನಮಂತ್ರಿಯನ್ನು ಹೆಚ್.ಡಿ. ದೇವೇಗೌಡ ಈ ಜಿಲ್ಲೆಯ ಕೊಡುಗೆಯಾಗಿದೆ. ಇವರಿಗೆ ಪಕ್ಷಕ್ಕಿಂತ ವ್ಯಕ್ತಿಯೇ ಮುಖ್ಯವಾಗಿದೆ. ಇದಕ್ಕೆ ಶಾಸಕರು ಹಲವಾರು ಸಾಮಾಜಿಕ ಸೇವಾಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಕಾರಣವಾಗಿರಬಹುದು. ಇದರಿಂದ ಎಲ್ಲಾ ಸಮುದಾಯಗಳು ಹೆಚ್ಚಾಗಿ ಇವರನ್ನು ಬೆಂಬಲಿಸುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಕನಕಪುರ ತಾಲೂಕಿನ ಸಾತನೂರು ಮತ್ತು ದೊಡ್ಡ ಅಲಹಳ್ಳಿ ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಗ್ರಾಮಪಂಚಾಯಿತಿಗಳ ಬಗ್ಗೆ ಮುಂದೆ ಚರ್ಚಿಸಲಾಗಿದೆ.

ಕೊನೆಟಿಪ್ಪಣಿಗಳು

೧. ಗೋಪಾಲರಾವ್ ಎಚ್.ಎಸ್., ೧೯೯೯, ಕನಕಸಿರಿ, ಪು. ೮೪.

೨. ಗಾಯತ್ರಿ, ೧೯೯೫, ಮಾಗಡಿ ಇತಿಹಾಸ ಚರಿತ್ರೆ, ಅಭರಣ ಸುದ್ದಿ ವಿಶೇಷಾಂಕ, ಪು. ೯೧.

೩. ವೆಂಕಟಾಚಲಶಾಸ್ತ್ರೀ ಟಿ.ವಿ., ೨೦೧೦, ಕನಕಪುರ ಎಂಬ ಕಾನಕಾನಹಳ್ಳಿ, ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು, ಪು. ೨೧.

೪. ನಾಗರಾಜು ಎಂ.ಜಿ., ೨೦೦೧, ಶಿವರಾಯಗಿರಿ ಕ್ಷೇತ್ರದರ್ಶನ, ಶ್ರೀರಾಮ ಸೇವಾಮಂಡಳಿ ರಾಮನಗರ, ಪು. ೧೬.

೫. ರಾಮನಗರ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೧೩, ಜಿಲ್ಲಾಡಳಿತ, ರಾಮನಗರ, ಕರ್ನಾಟಕ ಸರ್ಕಾರ, ಪು. ೨೮–೨೯.

೬ ಜಿಲ್ಲಾ ಕೃಷಿ ದರ್ಶಿನಿ, ೨೦೧೧, ಕೃಷಿ ಇಲಾಖೆ, ರಾಮನಗರ ಜಿಲ್ಲಾಪಂಚಾಯತ್, ಪು.೧೬.

೭ ರಾಮನಗರ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೧೨, ಜಿಲ್ಲಾಡಳಿತ, ರಾಮನಗರ, ಕರ್ನಾಟಕ ಸರ್ಕಾರ, ಪು. ೭೯–೮೬.

೮. ಅದೇ ಪು. ೭೯–೮೬.

೯. ಚಿಣ್ಣರ ಜಿಲ್ಲಾ ದರ್ಶನ, ಶೈಕ್ಷಣಿಕ ಕೈಪಿಡಿ, ೨೦೧೨, ರಾಮನಗರ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಪು. ೩೨.

೧೦. ನಂಜುಂಡಸ್ವಾಮಿ ಎಸ್.ಎಸ್., ೧೯೮೬, ಪಾಳೇಗಾರರು ಮತ್ತು ಒಡೆಯರ ಇತಿಹಾಸ, ಸಮಾಜ ಪುಸ್ತಕ ಪ್ರಕಾಶನ, ಧಾರವಾಡ, ಪು. ೫೬.

೧೧. ವೆಂಕಟಚಲಶಾಸ್ತ್ರಿ ಟಿ.ವಿ., ೨೦೦೭, ಕಾನಕಾನಹಳ್ಳಿ ಚರಿತ್ರೆ, ಕನಕ ಸಿರಿ ಸಮ್ಮೇಳನ ಸಂಚಿಕೆ, ಪು. ೮,

೧೨. ರಾಮನಗರ ಜಿಲ್ಲಾ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರ ಕಚೇರಿ, ೨೦೧೨, ಕರ್ನಾಟಕ ಸರ್ಕಾರ, ರಾಮನಗರ ಜಿಲ್ಲಾ ಪಂಚಾಯತ್, ಪು. ೮-೧೩.

೧೩. ವೆಂಕಟಾಚಲಶಾಸ್ತ್ರಿ ಟಿ.ವಿ., ೨೦೧೦, ಕಾನಕಾನಹಳ್ಳಿ ಚರಿತ್ರೆ, ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು, ಪು. ೮.

೧೪. ಗೋಪಾಲರಾವ್ ಎಚ್.ಎಸ್., ೨೦೧೦, ಪ್ರಕೃತಿ ಸಿರಿಯ ಕನಕಪುರ (ಲೇ) ಕಟ್ಟಾಣೆ, ಪ್ರಥಮ ಜಿಲ್ಲಾ ಸಮ್ಮೇಳನ ಸಂಚಿಕೆ, ಪು. ೨೬೮.

೧೫. ಮುನಿರಾಜಪ್ಪ, ೨೦೦೫, ಮಾಗಡಿ ಸೀಮೆಯ ಸಾಂಸ್ಕೃತಿಕ ಇತಿಹಾಸ, ಸ್ಫೂರ್ತಿ ಪ್ರಕಾಶನ, ಮಾಗಡಿ, ಪು. ೫.

೧೬. ಜಿಲ್ಲಾ ಅಂಕಿಅಂಶಗಳ ಮುನ್ನೋಟ, ೨೦೧೩, ಕರ್ನಾಟಕ ಸರ್ಕಾರ, ರಾಮನಗರ ಜಿಲ್ಲಾ ಪಂಚಾಯತ್, ಪು. ೧೩-೧೮.

೧೭. ಅನಂತರಾಮರಾವ್, ೨೦೦೬, ಕರ್ನಾಟಕ ದರ್ಶನ, ವಿದ್ಯಾಸಿರಿ ಪ್ರಕಾಶನ, ಮಂಗಳೂರು, ಪು. ೪೭.

೧೮. ರಾಮನಗರ ಜಿಲ್ಲಾ ಅಂಕಿ-ಅಂಶ ನೋಟ, ೨೦೧೩, ಕರ್ನಾಟಕ ಸರ್ಕಾರ, ರಾಮನಗರ ಜಿಲ್ಲಾ ಪಂಚಾಯತ್, ಪು. ೧೫೨.

ಅಧ್ಯಾಯ ನಾಲ್ಕು

ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣ ಬೆಳೆದುಬಂದ ದಾರಿ

ಅಧ್ಯಾಯ ನಾಲ್ಕು

ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣ ಬೆಳೆದುಬಂದ ದಾರಿ

'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದೀತು' ಎನ್ನುವ ಗಾದೆ ಸೃಷ್ಟಿಯಾಗಿದೆ. ಈ ಗಾದೆ ಯಾವಾಗ ಸೃಷ್ಟಿಗೊಂಡಿತೋ ಯಾರು ಸೃಷ್ಟಿಸಿದರೋ ಗೊತ್ತಿಲ್ಲ. ಆದರೆ ಹೆಣ್ಣು ಮತ್ತು ಮಹಿಳೆ ನಡುವಿನ ಗಾಢವಾದ ಮಹತ್ವ ಈ ಗಾದೆಯಲ್ಲಿ ಅಡಗಿದೆ. ಹೆಣ್ಣಿನ ಶಿಕ್ಷಣಕ್ಕೆ ಇಷ್ಟು ಪ್ರಾಮುಖ್ಯವಿದ್ದರೆ, ಮಹಿಳೆಯರ ಶಿಕ್ಷಣ ಹಿಂದುಳಿದಿರುವುದು ನೋವಿನ ಸಂಗತಿಯಾಗಿದೆ. ಸ್ತ್ರೀಯರ ಬೆಳವಣಿಗೆಯಲ್ಲಿ ಅವರ ವ್ಯಕ್ತಿತ್ವ ವಿಕಾಸದಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾದ್ದುದಾಗಿದೆ. ನಮ್ಮ ಭಾರತದ ಸಂವಿಧಾನವು ಸ್ತ್ರೀಯರಿಗೂ ಸಮಾನತೆ ನೀಡಿರುವುದಲ್ಲದೆ, ಅವರ ಸಶಕ್ತಿಕರಣಕ್ಕೂ ಅವರ ಸ್ಥಾನಮಾನಗಳ ಅಬಿವೃದ್ಧಿಗೂ ವಿಶೇಷ ಗಮನ ಹರಿಸಬೇಕೆಂದು ರಾಜ್ಯಗಳಿಗೆ ಆದೇಶಿಸಿದೆ. ೨೦೦೦ ರಾಷ್ಟ್ರೀಯ ಪಠ್ಯ ವಸ್ತುವಿನ ವಿನ್ಯಾಸದಲ್ಲಿ, ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳ ನಡುವೆ ಸಮಾನತೆಯನ್ನು ಉಳಿಸಿಕೊಂಡಿರುವುದಲ್ಲದೆ ಸಾಮಾಜಿಕ ಕೇಡುಗಳ/ಅನಿಷ್ಟ ಪದ್ಧತಿಗಳ ನಿರ್ಮೂಲನ, ಹೆಣ್ಣು ಗಂಡುಗಳ ನಡುವಿನ ಸಮಾನತೆ ಮತ್ತು ಸ್ತ್ರೀಯರ ವ್ಯಕ್ತಿತ್ವಕ್ಕೆ ಅಗೌರವ ತರುವಂತಹ ಯಾವುದೇ ಆಚಾರ-ವಿಚಾರಗಳ ನಿರ್ಮೂಲನ ಇದೇ ಮುಂತಾದ ಮೌಲ್ಯಗಳನ್ನು ಎತ್ತಿಹಿಡಿಯಲಾಗಿದೆ. ಹೆಣ್ಣು ಮತ್ತು ಗಂಡಿನ ನಡುವಿನ ಬೇಧಭಾವವೆಂಬುವುದು ನಾವೇ ನಿರ್ಮಿಸಿಕೊಂಡು ಒಂದು ಮನೋವ್ಯಾಪರವಷ್ಟೇ ಹೊರತು ಈ ವ್ಯತ್ಯಯಗಳ ಸ್ವಾಭಾವಿಕವಾಗಿ ಪ್ರಕೃತಿಯಿಂದಲೇ ಆದದ್ದೆನ್ನೆಲ್ಲಾ, ಕಳೆದ ಹಲವಾರು ಶತಮಾನಗಳಿಂದ ಹೆಣ್ಣಿನ ಸ್ಥಾನಮಾನಕ್ಕೆ ಚ್ಯೂತಿ ಬಂದ ಕಾರಣದಿಂದ, ಸ್ತ್ರೀಯರ ವ್ಯಕ್ತಿತ್ವದಲ್ಲಿ ಸಂಪೂರ್ಣ ಬೆಳವಣಿಗೆಯನ್ನು ಕಾಣಲಾಗಿಲ್ಲ. ಹೀಗೆ ನಿರ್ಮಾಣವಾಗಿರುವ ಪರಿಸ್ಥಿತಿಯನ್ನು ಸುಧಾರಿಸಿ ಪರಿಹರಿಸಿ, ಸ್ತ್ರೀಯರ ವ್ಯಕ್ತಿತ್ವ ಸಂಪೂರ್ಣವಾಗಿ ವಿಕಾಸ ಹೊಂದಲು ಮೊದಲು ಆಕೆಗೆ ಸಮಾನ ಅವಕಾಶಗಳು ಪ್ರೋತ್ಸಾಹ ಸಿಗಬೇಕು.

ಮಹಿಳೆಯರ ಅದರಲ್ಲೂ ಗ್ರಾಮೀಣ ಮಹಿಳೆಯರ ಶಿಕ್ಷಣದ ಅಂಕಿ ಅಂಶಗಳ ಅಧಿಕೃತ ದಾಖಲೆಗಳನ್ನು ೧೯೫೧ರಿಂದ ಕಾಣಬಹುದಾಗಿದೆ. ೧೯೫೧ರಲ್ಲಿ ಗ್ರಾಮೀಣ ಶಿಕ್ಷಣ ಪ್ರಮಾಣ

ಕೇವಲ ೧೪ರಷ್ಟಿದ್ದು, ನಗರ ಶಿಕ್ಷಣ ಪ್ರಮಾಣ(೧೯ರಷ್ಟು) ಹೋಲಿಸಿದರೆ ಕಡಿಮೆಯೇ. ಇನ್ನು ಮಹಿಳಾ ಶಿಕ್ಷಣ ಮಟ್ಟದಲ್ಲಿ ಶೇ. ೭೦ರಷ್ಟು ಶಿಕ್ಷಿತ ಮಹಿಳೆಯರಿದ್ದಾರೆ. ಇವರಲ್ಲಿ ನಗರ ಮಹಿಳೆಯರ ಪ್ರಮಾಣ ಶೇ. ೯೫ರಷ್ಟಿದ್ದರೆ, ಗ್ರಾಮೀಣ ಮಹಿಳೆಯರು ಶೇ. ೫ರಷ್ಟು ಮಾತ್ರ ಶಿಕ್ಷಿತ ಮಹಿಳೆಯರಿದ್ದಾರೆ. ಹೀಗೆ ರಾಜ್ಯದ ಶಿಕ್ಷಣ ಪ್ರಮಾಣ ೧೯೫೧ರಿಂದ ಶೇ. ೧೯ರಷ್ಟು ಏರಿಕೆಯಾಗುತ್ತಾ ಬಂದಿತು. ೨೦೧೧ರಲ್ಲಿ ಶೇ. ೭೫ಕ್ಕೆ ತಲುಪಿದೆ. ಹಾಗೆಯೇ ಮಹಿಳಾ ಶಿಕ್ಷಣ ಪ್ರಮಾಣ ಶೇ. ೭ರಿಂದ ೬೮.೧೩ರಷ್ಟಕ್ಕೆ ಏರಿಕೆಯಾಗಿದೆ. ಆದರೆ ೬೦ ವರ್ಷಗಳಲ್ಲಿ ಶೇ. ೬೧ರಷ್ಟು ಮಹಿಳಾ ಶಿಕ್ಷಣ ಪ್ರಗತಿ ಸಾಧಿಸಿದೆ. ಅಂದರೆ, ಗ್ರಾಮೀಣ ಮಹಿಳೆಯರ ಶಿಕ್ಷಣ ರಾಜ್ಯದ ನಗರ ಮಹಿಳೆಯರ ಶಿಕ್ಷಣಕ್ಕೆ ಸರಿಸಮನಾಗಿ ಏರಿಕೆಯಾಗಿಲ್ಲ. ನಗರಪ್ರದೇಶದ ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೮೧.೭೧ರಷ್ಟಿದ್ದಾರೆ. ಗ್ರಾಮೀಣ ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೫೯.೬೦ರಷ್ಟಿದೆ. ನಗರ ಮತ್ತು ಗ್ರಾಮೀಣ ಮಹಿಳೆಯರ ನಡುವೆ ಶೇ. ೨೨.೧ರಷ್ಟು ಶಿಕ್ಷಣದ ಅಂತರವಿದೆ.

ಗ್ರಾಮೀಣ ಮಹಿಳೆಯರ ಶಿಕ್ಷಣ ಪ್ರಮಾಣ ೧೯೫೧ರಲ್ಲಿ ಶೇ. ೫ರಷ್ಟಿದ್ದಾರೆ. ೧೯೭೧ರಲ್ಲಿ ಶೇ. ೧೫ರಷ್ಟು, ೧೯೮೧ರಲ್ಲಿ ಶೇ. ೨೦ರಷ್ಟು, ೧೯೯೧ರಲ್ಲಿ ಶೇ. ೩೫ರಷ್ಟು, ೨೦೦೧ರಲ್ಲಿ ಶೇ. ೪೮.೧ರಷ್ಟು ಹಾಗೆಯೇ ೨೦೧೧ರಲ್ಲಿ ಶೇ. ೫೦.೬೦ರಷ್ಟು ಏರಿಕೆಯಾಗಿದೆ. ಆದರೆ ನಗರ ಮಹಿಳೆಯರಿಗಿಂತ ಶಿಕ್ಷಣದಲ್ಲಿ ಹಿಂದಿದ್ದಾರೆ.

ಪುರುಷ ಸಾಕ್ಷರರಿಗಿಂತ ಮಹಿಳಾ ಸಾಕ್ಷರರ ಪ್ರಮಾಣ ಹಿಂದಿನಿಂದಲೂ ಕಡಿಮೆ ಇದೆ. ಮಹಿಳಾ ಶಿಕ್ಷಣದ ಪ್ರಗತಿಗಾಗಿ ಹಲವು ಯೋಜನೆಗಳನ್ನು ಸರ್ಕಾರ ನಿರ್ಮಿಸುತ್ತಾ ಬಂದಿದೆ. ಆದರೂ ಸಹ ಮಹಿಳಾ ಸಾಕ್ಷರತೆಯ ಪ್ರಮಾಣ ಅಂದುಕೊಂಡಷ್ಟು ಗುರಿಯನ್ನು ಸಾಧಿಸಲು ಸಾಧ್ಯವಾಗಿಲ್ಲ ಎಂಬುದನ್ನು ಅಂಕಿಅಂಶಗಳು ತಿಳಿಸುತ್ತಿವೆ.

ಈ ಅಧ್ಯಾಯದಲ್ಲಿ ಸ್ವಾತಂತ್ರ್ಯ ಭಾರತದ ಪೂರ್ವದಿಂದಲೂ ಹೆಣ್ಣುಮಕ್ಕಳ ಶಿಕ್ಷಣ ಬೆಳೆದುಬಂದ ದಾರಿಯನ್ನು ಅವಲೋಕಿಸುವ ಪ್ರಯತ್ನ ಮಾಡಲಾಗಿದೆ.

ಪ್ರಾಚೀನ ಭಾರತದಲ್ಲಿ ಮಹಿಳೆಯರಿಗೆ ಶಿಕ್ಷಣದಲ್ಲಿ ಸಮಾನತೆ ಇತ್ತು ಎಂದು ವಾದಿಸಲಾಗುತ್ತದೆ. ಅದಕ್ಕೆ ಉದಾಹರಣೆಯಾಗಿ ಗಾರ್ಗೇಯ, ಲೀಲಾವತಿ ಮುಂತಾದವರ ಉದಾಹರಣೆಗಳನ್ನೂ ಕೊಡಲಾಗುತ್ತದೆ. ಆದರೆ ಮನುವಿನಂಥವರು ಹೆಣ್ಣನ್ನು ಕೇವಲ ಭೋಗದ ವಸ್ತುವಾಗಿ ನೋಡಿದ ಉದಾಹರಣೆಗಳೂ ಭಾರತದಲ್ಲಿವೆ.[೧]

ಭಾರತದಲ್ಲಿ ಮೊಘಲರ ದಾಳಿಯ ತರುವಾಯ ಬ್ರಿಟಿಷರು ಭಾರತವನ್ನು ಪ್ರವೇಶಿಸಿದರು. ಅವರು ವ್ಯಾಪಾರಕ್ಕೆಂದು ಪ್ರವೇಶಿಸಿ ನಂತರ ಸಣ್ಣ ಸಣ್ಣ ವಸಾಹತುಗಳನ್ನು ಸ್ಥಾಪಿಸಿಕೊಂಡರು. ಹೀಗೆ ವಸಾಹತುಗಳ ಸ್ಥಾಪನೆಯ ಮೂಲಕ ಭಾರತದ ಮೇಲೆ ಹಿಡಿತ ಸಾಧಿಸಲು ಪ್ರಾರಂಭಿಸಿದ ಬ್ರಿಟಿಷರು ನಂತರ ಭಾರತವನ್ನು ಒಂದೊಂದಾಗಿ ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಬ್ರಿಟೀಶರು ಭಾರತಕ್ಕೆ

ಬರುವಾಗ ಕೇವಲ ತಾವೊಂದೇ ಬರಲಿಲ್ಲ. ತಮ್ಮೊಂದಿಗೆ ತಮ್ಮ ಆಲೋಚನಾಕ್ರಮ, ಸಂಸ್ಕೃತಿ, ದಬ್ಬಾಳಿಕೆಯ ಮನೋಭಾವ ಎಲ್ಲವನ್ನೂ ತಂದರು. ಅದರ ಪರಿಣಾಮವೇ ಆಧುನಿಕ ಶಿಕ್ಷಣ.

ಅವರ ಆಲೋಚನಾಕ್ರಮದ ಪರಿಣಾಮವಾಗಿ ಭಾರತದಲ್ಲಿ ಜಡ್ಡುಗಟ್ಟಿದ ವಾತಾವರಣದಲ್ಲಿದ್ದವರಿಗೆ ಹೊಸ ವಿಚಾರಗಳತ್ತ ಗಮನ ಹರಿಸುವಂತಾಯಿತು. ಅಂತಹ ಮಹನೀಯರಲ್ಲಿ ಜ್ಯೋತಿಬಾ ಫುಲೆಯವರನ್ನು ನೆನಪಿಸಿಕೊಳ್ಳಬೇಕು. ಮಹಾರಾಷ್ಟ್ರದ ಸತಾರಾದಲ್ಲಿ ಏಪ್ರಿಲ್ ೧೧, ೧೮೨೭ರಲ್ಲಿ ಹುಟ್ಟಿದ ಫುಲೆಯವರು ಆಗಿನ ಬ್ರಿಟಿಷರ ಹೊಸ ಆಲೋಚನಾಕ್ರಮದಿಂದ ತುಂಬಾ ಪ್ರಭಾವಿತರಾದರು. ಭಾರತದ ಜನಸಾಮಾನ್ಯರಿಗೆ ಆಧುನಿಕ ಶಿಕ್ಷಣದ ಅಗತ್ಯತೆಯ ಕುರಿತು ಅವರು ಮನಗಂಡರು.

ಅದರಲ್ಲೂ ದಲಿತ ಹಾಗೂ ಮಹಿಳಾ ಶಿಕ್ಷಣದ ಕುರಿತು ಅವರು ಹೆಚ್ಚು ಆಸಕ್ತಿಯನ್ನು ತಾಳಿದರು. ದಲಿತರಿಗಾಗಿ ಶಾಲೆಗಳನ್ನು ಪ್ರಾರಂಭಿಸಿದ ಹೆಗ್ಗಳಿಕೆ ಫುಲೆಯವರಿಗೆ ಸಲ್ಲುತ್ತದೆ. ಅಷ್ಟೇ ಅಲ್ಲ ೧೮೪೮ರಲ್ಲಿ ಅವರು ಮಹಿಳೆಯರಿಗಾಗಿಯೇ ಪ್ರತ್ಯೇಕ ಶಾಲೆಯನ್ನು ಪ್ರಾರಂಭಿಸುತ್ತಾರೆ. ಅದಕ್ಕೂ ಮೊದಲು ಕ್ರಿಶ್ಚಿಯನ್ ಮಿಷನರಿಗಳು ಅಹಮದ್‌ನಗರದಲ್ಲಿ ಹೆಣ್ಣುಮಕ್ಕಳಿಗಾಗಿಯೇ ಶಾಲೆಯನ್ನು ಪ್ರಾರಂಭಿಸಿರುತ್ತಾರೆ. ಆ ಶಾಲೆಯನ್ನು ನೋಡುವ ಅವಕಾಶ ಫುಲೆಯವರಿಗೆ ದೊರೆಯಿತು. ಇದರಿಂದ ಪ್ರಭಾವಿತರಾದ ಫುಲೆಯವರು ದಲಿತರ ಮತ್ತು ಮಹಿಳೆಯರ ವಿಮೋಚನೆ ಅವರು ಗಳಿಸುವ ಶಿಕ್ಷಣದ ಮೂಲಕ ಸಾಧ್ಯವೆಂದು ಮನಗಂಡರು. ೧೮೪೮ರಲ್ಲಿ ಮಹಿಳೆಯರಿಗಾಗಿ ಪ್ರಾರಂಭಿಸಿದ ಶಾಲೆಯಲ್ಲಿ ಮಹಿಳೆಯೇ ಶಿಕ್ಷಕಿಯಾಗಿದ್ದರೆ ಒಳಿತು ಎಂದು ತಿಳಿದ ಫುಲೆಯವರು ತಾವು ಪ್ರಾರಂಭಿಸಿದ ಶಾಲೆಗೆ ತಮ್ಮ ಮಡದಿ ಸಾವಿತ್ರಿಬಾಯಿ ಫುಲೆಯವರನ್ನೇ ಶಿಕ್ಷಕಿಯಾಗಿ ನೇಮಿಸಿದರು.

ಸಾವಿತ್ರಿಬಾಯಿ ಫುಲೆಯವರು ಮಹಾರಾಷ್ಟ್ರದ ಸತಾರಾ ಜಿಲ್ಲೆಯವರೇ ಆಗಿದ್ದರು. ೧೮೩೧ರಲ್ಲಿ ಜನಿಸಿದ ಇವರು ತಮ್ಮ ಬಾಲ್ಯದಲ್ಲಿಯೇ ಜ್ಯೋತಿಬಾ ಫುಲೆಯವರನ್ನು ಮದುವೆಯಾಗುತ್ತಾರೆ. ಗಂಡನ ಮನೆಗೆ ಸೇರಿದ ತರುವಾಯ ಫುಲೆಯವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ಇವರೂ ಸಹ ಪ್ರಗತಿಗಾಮಿಯಾದರು. ಸ್ವತಃ ಗಂಡನಿಂದ ಶಿಕ್ಷಣ ಪಡೆದು ಮಹಿಳೆಯರಿಗಾಗಿ ಪ್ರಾರಂಭಿಸಿದ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಿದರು. ಹೀಗಾಗಿ ಭಾರತದ ಮೊದಲ ಶಿಕ್ಷಕಿಯೆಂದು ಅವರನ್ನು ಗುರುತಿಸಲಾಗುತ್ತದೆ. ಹೆಣ್ಣುಮಕ್ಕಳು ಶಾಲೆಗೆ ಬರಲು ಆಕರ್ಷಿತರಾಗುವಂತೆ ಆ ಕಾಲದಲ್ಲಿ ಶಾಲೆಗೆ ಸೇರಿದ ಹೆಣ್ಣುಮಕ್ಕಳಿಗೆ ಪ್ರೋತ್ಸಾಹಧನ ನೀಡಿದರು. ೧೮೫೨ರಲ್ಲಿ ಪುಣೆಯಲ್ಲಿ ಸಾವಿತ್ರಿಬಾಯಿ ಅವರ ನೇತೃತ್ವದಲ್ಲಿ ಮಹಿಳಾಮಂಡಲ ರಚನೆಯಾಯಿತು. ವಿಧವೆಯರಿಗೆ ಶಿಕ್ಷಣ ನೀಡುವುದು, ಅನಾಥ ಹೆಣ್ಣು ಶಿಶುಗಳ ರಕ್ಷಣೆ ಮುಂತಾದ ಮಹತ್ವದ ಕಾರ್ಯಗಳಲ್ಲಿ ಸಾವಿತ್ರಿಯವರ ಪಾತ್ರ ಮುಖ್ಯವಾಗಿದೆ.

ಮೂಲತಃ ಜ್ಯೋತಿರಾವ್ ಫುಲೆಯವರು ಹಿಂದುಳಿದ ಹೂಗಾರ(ಮಹಾರಾಷ್ಟ್ರದಲ್ಲಿ ಮಾಲಿ) ಜಾತಿಗೆ ಸೇರಿದವರಾಗಿದ್ದರು.[೨] ಆ ದಿನಗಳಲ್ಲಿ ಶಿಕ್ಷಣವೆಂದರೆ ಕೇವಲ ಪುರೋಹಿತಶಾಹಿಗಳಿಗೆ ಎನ್ನುವ ಅಭಿಪ್ರಾಯವಿದ್ದಿತು.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು, ದೇಶದಲ್ಲಿ ಜನಿಸಿದ ಪ್ರತಿಯೊಂದು ಮಗುವೂ ದೇಶದ ಆಸ್ತಿ ಎಂದು ೧೯೭೪ರಲ್ಲಿ ರಾಷ್ಟ್ರೀಯ ಮಕ್ಕಳನೀತಿಯ ಮೂಲಕ ಭಾರತ ಸರ್ಕಾರವು ಘೋಷಿಸಿತು. ಸರ್ಕಾರವು ಮಕ್ಕಳಹಕ್ಕುಗಳನ್ನು ರಕ್ಷಿಸುವ ಉದ್ದೇಶದಿಂದಾಗಿಯೇ ವಿಶೇಷವಾಗಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕುವ ಮೂಲಕ ದೃಢಪಡಿಸಿದೆ. ೨೦೧೩ರ ರಾಷ್ಟ್ರೀಯ ಮಕ್ಕಳನೀತಿ ಮಕ್ಕಳೆಂಬ ಮಾನವ ಸಂಪನ್ಮೂಲದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿ ರಚನಾತ್ಮಕ ಕೆಲಸಗಳಿಗೆ ಒತ್ತು ನೀಡಿ ಎಲ್ಲಾ ಮಕ್ಕಳಿಗೆ ಸಮಾನ ಅವಕಾಶ ಮತ್ತು ಶಿಕ್ಷಣ ನೀಡುವುದು ದೇಶದ ಆದ್ಯಕರ್ತವ್ಯವೆಂದು ಪ್ರತಿಪಾದಿಸಿದೆ.[೩] ಶಿಕ್ಷಣವನ್ನು ಅನುತ್ಪಾದಕ ಅಭಿವೃದ್ಧಿಯೆಂದೇ ಬಹುತೇಕ ತಿಳಿಯಲಾಗಿದೆ. ಆದರೆ ಶಿಕ್ಷಣವು ಪರೋಕ್ಷವಾಗಿ ಅಭಿವೃದ್ಧಿಗೆ ಕಾರಣವಾಗುತ್ತದೆಂದು ಮಾನವಾಭಿವೃದ್ಧಿಯ ವಕ್ತಾರ ಅಮರ್ತ್ಯಸೇನ್ ಅವರು ಅಭಿಪ್ರಾಯ ಪಡುತ್ತಾರೆ.

ಸೇವ್ ದಿ ಚೈಲ್ಡ್ ಸ್ವಯಂ ಸೇವಾ ಸಂಸ್ಥೆ ವರದಿಯ ಪ್ರಕಾರ ಭಾರತದಲ್ಲಿ ಮಕ್ಕಳ ಸ್ಥಿತಿ ಅತ್ಯಂತ ಹೀನಾಯವಾಗಿದೆ. ಅದರ ವರದಿಯ ಪ್ರಕಾರ ಭಾರತವು ೧೧೨ನೇ ಸ್ಥಾನದಲ್ಲಿದೆ. ಭಾರತದಲ್ಲಿ ಆರ್ಥಿಕಾಭಿವೃದ್ಧಿ ಸಾಧನೆಯಾಗಿದ್ದರೂ ಇದು ಬಡವರು ಮತ್ತು ಕಡುಬಡವರಿಗೆ ತಲುಪದೇ ಈ ವರ್ಗದ ಮಕ್ಕಳು ಅಭಿವೃದ್ಧಿಯಾಗಿಲ್ಲ ಎಂದು ವರದಿ ತಿಳಿಸಿದೆ. ಅಂದರೆ, ದೇಶವೊಂದರ ಅಭಿವೃದ್ಧಿಯನ್ನು ಅಳೆಯುವ ಪ್ರಮುಖ ಮಾನದಂಡಗಳಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ನಮ್ಮ ಸಂವಿಧಾನದ ಆಶಯದಂತೆ ಪ್ರತಿಯೊಬ್ಬ ಪ್ರಜೆಗೂ ಸಮಾನತೆ, ಸಾಮಾಜಿಕ ನ್ಯಾಯ, ತಾರತಮ್ಯರಹಿತ ಬದುಕಿನ ಶಿಕ್ಷಣದ ಅವಕಾಶ ಮತ್ತು ಹಕ್ಕುಗಳನ್ನು ನೀಡಬೇಕು. ಆದರೆ ಭಾರತದ ಸಂವಿಧಾನ ಈ ಆಶಯದಿಂದ ದೂರ ಸರಿಯುತ್ತಿದ್ದು ಹಿಂದೆ ಜಾತಿ ಆಧಾರಿತವಾಗಿ ಅಸಮಾನತೆಯಿಂದ ನರಳುತ್ತಿದ್ದ ಶಿಕ್ಷಣವ್ಯವಸ್ಥೆ ಇಂದು ಬಂಡವಾಳಶಾಹಿಯ ಕೈಸೇರಿ ವರ್ಗಾಧಾರಿತವಾದ ಶ್ರೇಣೀಕೃತ ವ್ಯವಸ್ಥೆಯಾಗಿ ಬೇರುಬಿಟ್ಟಿದೆ.[೪] ಇಲ್ಲಿ ಅನಾರೋಗ್ಯಕರ ಸ್ಪರ್ಧೆ ಏರ್ಪಟ್ಟಿದ್ದು ಯಾರು ಹೆಚ್ಚು ಹಣ ಕೊಡುತ್ತಾರೊ ಅವರಿಗೆ ಹೆಚ್ಚು ಮೌಲ್ಯದ ಶಿಕ್ಷಣ ಎಂಬುವಂತಾಗಿದೆ. ಸರ್ಕಾರ ಬಿಕರಿಗೊಳ್ಳುತ್ತದೆ. ಉಳ್ಳವರ ಪರವಾದ ಶೈಕ್ಷಣಿಕ ನೀತಿಗಳಿಂದಾಗಿ ಆರ್ಥಿಕ ಮತ್ತು ಸಾಮಾಜಿಕವಾಗಿ ದುರ್ಬಲವಾಗಿರುವ ಮಹಿಳೆ ತಳಸಮುದಾಯದ ಹಾಗೂ ಬಡವರ್ಗದವರು ಇಂದಿಗೂ ಸಮಾನ ಶಿಕ್ಷಣವನ್ನು ಪಡೆಯಲಾಗದೇ ಮುಖ್ಯವಾಹಿನಿಯಿಂದ ಅಂಚಿಗೆ ಸರಿಯುತ್ತಿದ್ದಾರೆ.

ಸಮಾನತೆಯನ್ನು ಸಾಧಿಸಲು ಸಮಾನ ಶಿಕ್ಷಣವ್ಯವಸ್ಥೆಯೊಂದೇ ಪ್ರಬಲ ಅಸ್ತ್ರ. ಆದರೆ ಸಮಾನ ಶಿಕ್ಷಣದ ಕುರಿತು ಎಲ್ಲಾ ನೀತಿ ಆಯೋಗಗಳಿಗೆ ಸಲಹೆಗಳನ್ನು ನಿರ್ಲಕ್ಷಿಸಿ ಸರ್ಕಾರ ವಿದ್ಯೆಯೆಂಬ ಮೂಲಭೂತ ಹಕ್ಕನ್ನು ಖಾಸಗಿಯವರ ಕೈಯಲ್ಲಿ ಒತ್ತೆಯಿಟ್ಟು ಸಮಾಜದಲ್ಲಿ ಅಸಮಾನತೆಯನ್ನು ತಾನೇ ಹೆಚ್ಚು ಮಾಡುತ್ತಿದೆ. ಹೀಗಾಗಿ ಇಂದು ಸಮಗ್ರ ಸಮಾನ ಶಾಲಾವ್ಯವಸ್ಥೆಯುಳ್ಳ ರಾಷ್ಟ್ರೀಯ ಶಿಕ್ಷಣನೀತಿಯೊಂದನ್ನು ಜಾರಿಗೆ ತರಲೇಬೇಕಾಗಿದೆ. ಮಗುಕೇಂದ್ರಿತ ಶಿಕ್ಷಣವನ್ನು ಯೋಜಿಸುವ ಯಾವುದೇ ದೇಶದವರು ೩-೬ ವರ್ಷ ವಯಸ್ಸಿನ ಮಕ್ಕಳು ಪೋಷಣೆಗಷ್ಟೇ ಪಾತ್ರರೆಂಬ ಅವೈಜ್ಞಾನಿಕ ನಂಬಿಕೆಯಿಂದಲೇ ಸರ್ಕಾರಗಳು ಇಂದಿಗೂ ಕಾರ್ಯ ನಿರ್ವಹಿಸುತ್ತಿವೆ.

ಕೇಂದ್ರ ಸರ್ಕಾರದ ಯೋಜನೆಯಂತೆ ೦-೬ ವರ್ಷದ ಮಕ್ಕಳ ಪೋಷಣೆಗಾಗಿ ದೇಶಾದ್ಯಂತ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದ ಮಕ್ಕಳೇ ಇರುತ್ತಾರೆಂಬುದು ಗಮನಾರ್ಹ. ಜೊತೆಗೆ ಅಂಗನವಾಡಿ ಕೇಂದ್ರಗಳು ೩-೬ ವಯೋಮಾನದ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣ ನೀಡಬೇಕೆಂಬ ನಿರ್ದೇಶನವನ್ನು ಸರ್ಕಾರ ತಂದಿದೆ. ಆದರೆ ಇದಕ್ಕೆ ಬೇರೆ ಬೇರೆ ವಯೋಮಾನಕ್ಕೆ ತಕ್ಕಂತೆ ಶಿಸ್ತುಬದ್ಧ ಸೂಚಿತ ನಮೂನೆಯ ಪಠ್ಯವಾಗಲಿ, ಪ್ರತ್ಯೇಕ ಕೊಠಡಿಯಾಗಲಿ, ತರಬೇತಾದ ಬೋಧನಾ ಸಿಬ್ಬಂದಿಯಾಗಲಿ ಇಲ್ಲ. ಇದು ಮಕ್ಕಳ ಪೋಷಣಾ ವ್ಯವಸ್ಥೆಯಾಗಿ ಆರೋಗ್ಯ ಇಲಾಖೆಯಡಿ ದಾಖಲಾಗುತ್ತದೆಯೇ ಹೊರತು ಶೈಕ್ಷಣಿಕ ವ್ಯವಸ್ಥೆಯಾಗಿ ಸರ್ಕಾರದಲ್ಲಿ ದಾಖಲಾಗುವುದೇ ಇಲ್ಲ. ಹೀಗಾಗಿ ಅದೊಂದು ಮಕ್ಕಳನ್ನು ಪಾಲಿಸುವ, ಪೋಷಿಸುವ ಮನೆಯಷ್ಟೇ ಹೊರತು ವಿದ್ಯಾಕೇಂದ್ರ ಅಲ್ಲವೇ ಅಲ್ಲ. ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಸಮಾನತೆ ಹಿಂದುಳಿದ ಮಕ್ಕಳಿಗೆ ಅದರಲ್ಲೂ ಹೆಣ್ಣುಮಕ್ಕಳಿಗೆ ಇಲ್ಲಿಂದಲೇ ಪ್ರಾರಂಭವಾಗಿ ದೊಡ್ಡ ಕಂದಕವನ್ನೇ ನಿರ್ಮಿಸಿದೆ.

೩-೬ ವರ್ಷ ವಯಸ್ಸಿನ ಖಾಸಗಿ ಕಿಂಡರ್‌ಗಾರ್ಟನ್‌ನಲ್ಲಿ ಕಲಿಯುವ ಮಕ್ಕಳು ನರ್ಸರಿ, ಎಲ್.ಕೆ.ಜಿ. ಮತ್ತು ಯು.ಕೆ.ಜಿ.ಗಳನ್ನು ಈ ಶಿಕ್ಷಣಕ್ಕಾಗಿಯೇ ಸಿದ್ಧಪಡಿಸಿದ ನಿಗದಿತ ನಮೂನೆಯ ಪಠ್ಯವನ್ನಾಧರಿಸಿ ಶಿಸ್ತು ಬದ್ಧವಾಗಿ ಆಂಗ್ಲ ಮಾಧ್ಯಮದಲ್ಲಿಯೇ ಕಲಿಯುತ್ತಾರೆ. ವಿಪರ್ಯಾಸವೇನೆಂದರೆ ಖಾಸಗಿ ಶಾಲೆಯಲ್ಲಿ ಕಲಿಯುತ್ತಿರುವ ಈ ೩-೬ ವಯೋಮಾನದ ಈ ಮಕ್ಕಳು ಸರ್ಕಾರದಲ್ಲಿ ಎಲ್ಲಿಯೂ ದಾಖಲಾಗುವುದಿಲ್ಲ. ಬೀದಿ ಬದಿಯಲ್ಲಿ ತರಕಾರಿ ವ್ಯಾಪಾರ ಮಾಡಲು ಪರವಾನಗಿ ತೆಗೆದುಕೊಳ್ಳಬೇಕಿರುವ ಈ ಕಾಲದಲ್ಲಿ ಬಹುಸಂಖ್ಯಾತ ಎಳೆಯ ಮಕ್ಕಳಿಗೆ ಪೂರ್ವ ಪ್ರಾಥಮಿಕ ಹಂತದ ಶಿಕ್ಷಣ ನೀಡುತ್ತಿರುವ ಈ ಖಾಸಗಿ ಶೈಕ್ಷಣಿಕ ಗುತ್ತಿಗೆದಾರರು ಸರ್ಕಾರದ ಯಾವುದೇ ಇಲಾಖೆಯಡಿಯಲ್ಲಿ ನೋಂದಣಿಯಾಗುವ ಅವಶ್ಯಕತೆಯಿಲ್ಲ. ರಾಜ್ಯದಲ್ಲಿ ಶಿಕ್ಷಣಹಕ್ಕು ಕಾಯ್ದೆ ಜಾರಿಯಾದ ನಂತರ ಇತ್ತೀಚೆಗೆ ದಾಖಲೀಕರಣದ ಬಗ್ಗೆ ಸಣ್ಣ ಪ್ರಯತ್ನಗಳಾಗುತ್ತಿವೆಯಾದರೂ ಯಾವ ಕಠಿಣ ಕ್ರಮವನ್ನೂ ಕೈಗೊಂಡಿಲ್ಲ. ಯಾವುದೇ ಒಪ್ಪಿಗೆಯನ್ನು ಪಡೆಯದೇ ಎಲ್ಲೆಂದರಲ್ಲಿ

ಬೇಕಾಬಿಟ್ಟಿಯಾಗಿ ಬೇರೆ ಬೇರೆ ಮಾದರಿ ಶಿಕ್ಷಣಕ್ರಮದ ಇಂತಹ ಆಂಗ್ಲ ಮಾಧ್ಯಮದ ಖಾಸಗಿ ಪೂರ್ವ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಳ್ಳುತ್ತಿದ್ದರೂ ಕೇಳುವವರೇ ಇಲ್ಲ. ಇಲ್ಲಿ ಕಲಿಯುತ್ತಿರುವ ಲಕ್ಷಾಂತರ ಮಕ್ಕಳ ಉಲ್ಲಂಘನೆಯ ಬಗೆಯಾಗಲಿ ಸರ್ಕಾರ ನಿಯಂತ್ರಣದ ಬಗೆಗಾಗಲಿ ಸರ್ಕಾರ ಒಮ್ಮೆಯೂ ಯೋಚಿಸಿಯೇ ಇಲ್ಲ. ಇನ್ನು ಅಧ್ಯಯನದ ಸಮೀಕ್ಷೆಯ ದಾಖಲೀಕರಣ ದೂರದ ಮಾತು. ಹೀಗಾಗಿ ಇತ್ತ ಖಾಸಗಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಕಲಿಯುತ್ತಿರುವ ಅಥವಾ ಸರ್ಕಾರದ ಅಂಗನವಾಡಿಗಳಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲದಂತೆ ಮಕ್ಕಳ ಕುರಿತು ಸರ್ಕಾರಕ್ಕೆ ಯಾವುದೇ ಜವಾಬ್ದಾರಿ ಕಾಳಜಿಗಳಿಲ್ಲವೆಂದು ಆಂಗ್ಲ ಭಾಷಾ ಪ್ರಾಥಮಿಕ ಶೈಕ್ಷಣಿಕ ವ್ಯವಸ್ಥೆಯಲ್ಲಿ ತಮ್ಮ ಮಕ್ಕಳನ್ನು ಸೇರಿಸಿ ಶಿಕ್ಷಣ ಕೊಡಿಸುವ ಬಹುಸಂಖ್ಯಾತ ಪೋಷಕರು ಆರು ವರ್ಷದ ನಂತರ ಮತ್ತೆ ತಮ್ಮ ಮಕ್ಕಳನ್ನು ಖಾಸಗಿಯಿಂದ ಸರ್ಕಾರಿ ಶಾಲೆಗೆ ಕನ್ನಡ ಮಾಧ್ಯಮಕ್ಕೆ ಸೇರಿಸುವ ಮನಸ್ಸು ಮಾಡುತ್ತಾರೆಯೇ? ಹೀಗೆಂದೇ ಸರ್ಕಾರಿ ಶಾಲೆಗಳು ವರ್ಷದಿಂದ ವರ್ಷಕ್ಕೆ ಬಹುಸಂಖ್ಯೆಯಲ್ಲಿ ಮುಚ್ಚಿಹೋಗುತ್ತಿದ್ದರೂ ಸರ್ಕಾರ ಮಾತ್ರ ಜಾಣಕಿವುಡುತನ ಪ್ರದರ್ಶಿಸುತ್ತಾ, ಸರ್ಕಾರಿ ಶಾಲೆಗೆ ಮಕ್ಕಳೇ ಬರುತ್ತಿಲ್ಲವೆಂದು ಅಲವತ್ತುಕೊಳ್ಳುತ್ತಾ ಗುಟ್ಟಾಗಿ ಖಾಸಗಿ ಶೈಕ್ಷಣಿಕ ವ್ಯವಸ್ಥೆಯನ್ನು ತಾನೇ ಕೊಬ್ಬಿಸುತ್ತಾ ತನ್ನ ತಲೆಯ ಮೇಲೆಯೇ ಚಪ್ಪಡಿ ಎಳೆದುಕೊಳ್ಳುತ್ತಿದೆ.

ಹೀಗೆಂದು ಸರ್ಕಾರ ಇದುವರೆಗೆ ಗಮನ ಹರಿಸುವ ಯಾವುದೇ ಶಿಸ್ತುಬದ್ಧ ಕಠಿಣಕ್ರಮವನ್ನು ಕೈಗೊಳ್ಳದ ತನ್ನ ತಳಮಟ್ಟದ ಶೈಕ್ಷಣಿಕ ವ್ಯವಸ್ಥೆಯಡಿ ದಾಖಲೇ ಮಾಡಿಲ್ಲದ ೩-೬ ವರ್ಷದ ಮಕ್ಕಳ ಪೂರ್ವ ಪ್ರಾಥಮಿಕ ಹಂತದಲ್ಲಿ ಮೊದಲು ಏಕರೂಪದ ಸಮಾನ ಶಿಕ್ಷಣವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೆ ತರುವ ಪ್ರಯತ್ನವನ್ನು ತುರ್ತಾಗಿ ಸಮರ್ಥವಾಗಿ ಮಾಡುವುದು ಮುಖ್ಯವಾಗಿದೆ. ಆ ನಂತರ ಹಂತಹಂತವಾಗಿ ಪ್ರಾಥಮಿಕ ಶೈಕ್ಷಣಿಕ ವ್ಯವಸ್ಥೆಯನ್ನು ಇದರಡಿಗೆ ತರಬಹುದು. ವಿಶೇಷವೆಂದರೆ ಭಾರತದಲ್ಲಿ ಹಲವು ಭಾಷೆಗಳಿರುವುದು ಸಮಸ್ಯೆಯಲ್ಲ.[೫] ನಮ್ಮ ಭಾಷೆಯಲ್ಲಿಯೇ ಎಲ್ಲ ಶಿಕ್ಷಣ ಪಡೆಯಬೇಕೆನ್ನುವ ಮನೋಭಾವ ಉನ್ನತ ಮಟ್ಟದಲ್ಲಿ ಇಲ್ಲದಿರುವುದೇ ಸಮಸ್ಯೆ. ಹೀಗಾದಾಗ ಮಾತ್ರ ಸರ್ಕಾರಿ ಶಿಕ್ಷಣವ್ಯವಸ್ಥೆ ತನ್ನಂತೆ ತಾನೇ ಬಲಗೊಳ್ಳುವುದು.

ಶಿಕ್ಷಣಕ್ಕೆ ಸಂಬಂಧಿಸಿದ ಪ್ರಯತ್ನಗಳನ್ನು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯನಂತರದ ಪ್ರಯತ್ನಗಳೆಂದು ಗುರುತಿಸಬಹುದು.[೬]

ಚಾರ್ಲ್ಸ್‌ವುಡ್ ವರದಿ ೧೮೫೪ ಮಹಿಳೆಯರ ಶಿಕ್ಷಣ ಬೆಂಬಲಿಸುವುದರೊಂದಿಗೆ ಶಿಕ್ಷಣಕ್ಕೆ ಈ ವರದಿಯು ಹೆಚ್ಚು ಆದ್ಯತೆಯನ್ನು ನೀಡಿತು.

ಹಂಟರ್ ಆಯೋಗ ೧೮೮೨ ಹಂಟರ್ ಆಯೋಗವು ದೇಶದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ನಿರ್ಲಕ್ಷದ ಹೊರತಂದಿದ್ದು, ಆಯೋಗ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಸ್ಥಳೀಯ ಮಂಡಳಿಗಳು ಮತ್ತು ಮುನ್ಸಿಪಾಲ್ ಮಂಡಳಿಗಳಿಗೆ ನೀಡಬೇಕೆಂದು ಶಿಫಾರಸ್ಸು ಮಾಡಿತು.

ಮಾನವ ಜೀವನದ ಆರಂಭದಲ್ಲಿ ಸ್ತ್ರೀ ಪುರುಷರಿಬ್ಬರೂ ಜ್ಞಾನವನ್ನು ದೃಷ್ಟಿ ಮಾಡಿದರೆಂದು ಐತಿಹಾಸಿಕ ಸಂಶೋಧನೆ ಮತ್ತು ಅಧ್ಯಯನಗಳು ತಿಳಿಸುತ್ತವೆ. ಸ್ತ್ರೀಯರು ವ್ಯವಸಾಯ ಕಂಡುಹಿಡಿದ ರೆಂದು, ಕೇಲವು ಕರಕುಶಲತೆಗಳನ್ನು ಪ್ರಾರಂಭಿಸಿದರೆಂದು, ಸ್ತ್ರೀಯರು ಮೊದಲ ವೈದ್ಯರೆಂದು, ಔಷಧಿಗಳನ್ನು ಅಭಿವೃದ್ಧಿ ಪಡಿಸಿದರೆಂದು ಕಂಡುಕೊಳ್ಳಲಾಗಿದೆ.

ಆದರೂ ಇಂದು ನಾವು ಮಾನವನ ಇತಿಹಾಸ, ಮಾನವ ಸಮಾಜ, ಇತ್ಯಾದಿ ಪದಗಳನ್ನು ಬಳಸುವಾಗ ಮಾನವ ಇತಿಹಾಸದ ದೃಶ್ಯದಿಂದ ಸ್ತ್ರೀಯರನ್ನು ದೂರಮಾಡಿ ಮಾತನಾಡುತ್ತೇವೆ. ವಿಷಾದದ ಸಂಗತಿಯೆಂದರೆ ಪುರುಷರು ಇತಿಹಾಸ, ಕಲಿಕೆ, ಶಿಕ್ಷಣದ ಜವಾಬ್ದಾರಿ ವಹಿಸಿಕೊಂಡು ಜ್ಞಾನದ ಸೃಷ್ಟಿ ಮತ್ತು ಬೆಳವಣಿಗೆಗೆ ಮೇಲ್ವರ್ಗಗಳ ಮತ್ತು ಪುರುಷ ಸಂಪೂರ್ಣ ಸ್ವತ್ತಾಯಿತು. ಇಂತಹ ಸಂದರ್ಭದಲ್ಲಿ ತತ್ವಗಳನ್ನು ವ್ಯಾಖ್ಯಾನಿಸುವ ತಮ್ಮ ಭವಿಷ್ಯವನ್ನು ನಿರ್ಧರಿಸುವ ವಿಷಯಗಳಲ್ಲಿ ಸ್ತ್ರೀಯರಿಗೆ ಯಾವ ಪಾತ್ರವು ಇರಲಿಲ್ಲ. ಮಾನವನ ಸಂಪನ್ಮೂಲಗಳ ಪೂರ್ಣ ವಿಕಾಸ ನಮ್ಮ ಕುಟುಂಬಗಳ ಅಭಿವೃದ್ಧಿ ಪ್ರಭಾವಯುತವಾದ ವಯಸ್ಸಿನಲ್ಲಿ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದಕ್ಕೆ ಮಹಿಳೆಯರ ಅಭಿವೃದ್ಧಿ ಮತ್ತು ಶಿಕ್ಷಣವು ಅತ್ಯಂತ ಪ್ರಮುಖವಾದ್ದುದೆಂದು ಕೊಠಾರಿ ಆಯೋಗವು ಹೇಳಿರುವುದು ಸಮರ್ಪಕವಾಗಿದೆ.

ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಕಾಶ ಖಚಿತಪಡಿಸುವುದು, ಗುಣಮಟ್ಟ ಉತ್ತಮ ಪಡಿಸುವುದು ಮತ್ತು ಅವರ ಸಕ್ರಿಯ ಸಹಭಾಗಿತ್ವ ಮಾರ್ಗದಲ್ಲಿ ಬರುವ ಪ್ರತಿ ಅಡ್ಡಿ ಅತಂಕಗಳನ್ನು ನಿವಾರಿಸುವುದು ಅತೀ ತುರ್ತು ಮಹತ್ವವಾಗಿದೆ ಎಂದು 'ಎಲ್ಲಾರಿಗೂ ಶಿಕ್ಷಣ' ಕುರಿತು ವಿಶ್ವ ಸಮ್ಮೇಳನ ತನ್ನ ಮೂರನೇ ಅನುಚ್ಛೇದದಲ್ಲಿ ಹೇಳಿದೆ.

ಪ್ರಾಚೀನ ಗ್ರಂಥಗಳು ಆಧುನಿಕ ಚಿಂತಕರು ಮತ್ತು ಮಹಿಳಾ ವಿಮೋಚನಾ ಕಾರ್ಯಾಕರ್ತರಲ್ಲರು ಹೆಣ್ಣುಮಕ್ಕಳ ಮತ್ತು ಸ್ತ್ರೀಯರ ಶಿಕ್ಷಣದ ಅವಶ್ಯಕತೆಗೆ ಸಾಕಷ್ಟು ಕಾರಣಗಳನ್ನು ಒದಗಿಸಿದ್ದಾರೆ.

ಲೋಯರ್ ಮಾಧ್ಯಮ ಹಂತದಲ್ಲಿ ಮೂರು ಭಾಷೆಗಳಲ್ಲಿ ಗಣಿತ, ವಿಜ್ಞಾನ, ಸಾಮಾಜಿಕ ಅಧ್ಯಯನ, ಕಲೆ, ದೈಹಿಕ ಶಿಕ್ಷಣ, ಕೆಲಸದ ಅನುಭವ ಇವುಗಳನ್ನು ಬೋಧನ ವಿಷಯವಾಗಿ ಈ ಆಯೋಗವು ಶಿಫಾರಸ್ಸು ಮಾಡಿತು. ಈ ಆಯೋಗವು ಶಿಕ್ಷಣ ಸೇವೆ ಸ್ಥಾಪನೆಗೆ ಭಾರತೀಯ ಆಡಳಿತ ಸೇವೆ ಶಿಕ್ಷಣ ಕ್ಷೇತ್ರಕ್ಕೆ ವೃತ್ತಿಪರ ನಿರ್ವಹಣೆ ತರಲು ಇದು ತಮ್ಮ ಸ್ಥಳಗಳ ಆಧಾರದ ಭೋದನೆ ಅಲ್ಲದೆ, ಬೋಧನೆ ಮತ್ತು ಆಡಳಿತಾತ್ಮಕ ಸಿಬ್ಬಂದಿ ಮತ್ತು ನಿಗಧಿತ ಕನಿಷ್ಠ ವೇತನ ಮಾಪನಗಳು, ಗುಣಮಟ್ಟ ಪ್ರಸ್ತಾಪಿಸಿತು.

೧೯೬೮ರ ರಾಷ್ಟ್ರೀಯ ನೀತಿ ಸ್ವಾತಂತ್ರ ನಂತರದ ಅವಧಿಯಲ್ಲಿ ಭಾರತ ಸರ್ಕಾರದ ಪ್ರಮುಖ ಕಾಳಜಿ ಮತ್ತು ರಾಷ್ಟ್ರೀಯ ಪ್ರಮುಖ ಅಂಶ ಶಿಕ್ಷಣಕ್ಕೆ ಹೆಚ್ಚು ಒತ್ತು ಹಾಗೂ ತಿರುವು ನೀಡಿದ ಆಯೋಗ ಈ ನೀತಿ. ಭಾರತ ಸರ್ಕಾರ ಶಿಕ್ಷಣ ಅಭಿವೃದ್ಧಿ, ತತ್ವಗಳು ಮತ್ತು ನೀತಿಗಳ ಬಗ್ಗೆ

ಮಾದರಿಯನ್ನು ರಚಿಸಲು ಈ ಆಯೋಗವನ್ನು ರಚಿಸುವುದರ ಜೊತೆಗೆ ಎಲ್ಲಾ ಹಂತಗಳಲ್ಲಿ ಮತ್ತು ಎಲ್ಲಾ ಅಂಶಗಳನ್ನು ಶಿಕ್ಷಣ ಆಯೋಗ ರೂಪಿಸಲಿ ಎಂದು ಶಿಫಾರಸ್ಸು ಮಾಡಿತು.

ಜೋಮ್‌ಟೀಯನ್ ಸಮ್ಮೇಳನದಲ್ಲಿ ಸೇರಿದ್ದ ೧೫೦ ದೇಶಗಳ ೧೫೦೦ ಪ್ರತಿನಿಧಿಗಳು ೨೦ ಅಂತರದ ಸರ್ಕಾರ ಸಂಸ್ಥೆಗಳು ೧೫೦ ಸರ್ಕಾರೇತರ ಸಂಸ್ಥೆಗಳು ಎಲ್ಲರಿಗೂ ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಗುರಿ ಸಾಧಿಸಲು ಹೊಸದಾಗಿ ಪ್ರಾರಂಭಿಸುವ ಮತ್ತು ಹೊಸ ಬದ್ಧತೆಯನ್ನು ವ್ಯಕ್ತಪಡಿಸಲೇಬೇಕಾದ ಅಗತ್ಯತೆಯನ್ನೇ ಪ್ರಮುಖ ವಿಷಯವನ್ನಾಗಿಸಿದೆ. ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ ಒದಗಿಸುವ ಆಂದೋಳನದಲ್ಲಿ ಪ್ರಕಟವಾದ ಮೂರು ಅತೀ ಮುಖ್ಯ ಅಂಶಗಳಲ್ಲಿ ಮೊದಲನೆಯದಾಗಿ ಶಾಲೆಗೆ ಹೋದವರಲ್ಲಿ ವಿಶ್ವದ ಎಲ್ಲಾ ಪ್ರದೇಶಗಳಲ್ಲಿಯೂ ಸಾಮಾನ್ಯವಾಗಿ ಅಂದರೆ ನಿರ್ಧಿಷ್ಟವಾದ ಉಪಸಹಾಯಕರಾದ ಆಫ್ರಿಕಾ ಮತ್ತು ಆಗ್ನೆಯ ಏಷ್ಯಾ ದೇಶಗಳಲ್ಲಿ ಹೆಣ್ಣುಮಕ್ಕಳು ಮತ್ತು ಸ್ತ್ರೀಯರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಶಿಕ್ಷಣದಲ್ಲಿ ಲಿಂಗ ಸಮಾನತೆಯು ಆದ್ಯತೆ ಪಡೆಯಬೇಕೆಂಬುವುದನ್ನು ಮತ್ತೊಮ್ಮೆ ಒತ್ತಿ ಹೇಳಲಾಗಿದೆ.

ಹೆಣ್ಣುಮಕ್ಕಳಿಗೆ ಮಹಿಳೆಯರಿಗೆ ಅವಕಾಶ ಖಚಿತ ಪಡಿಸಿ ಶಿಕ್ಷಣದ ಗುಣಮಟ್ಟ ಉತ್ತಮ ಪಡಿಸಲು ಹಾಗೂ ಅವರ ಸಕ್ರಿಯ ಸಹಭಾಗಿತ್ವಕ್ಕೆ ಅಡ್ಡ ಬರುವ ಅಡೆತಡೆಗಳನ್ನು ನಿವಾರಿಸಲು ಆದ್ಯತೆ ನೀಡಲು ಪ್ರತಿ ದೇಶ, ಸಂಸ್ಥೆ ತಮ್ಮ ನಿಯೋಗವು ಈ ಗುರಿ ಸಾಧನೆಗೆ ತನ್ನನ್ನು ಸಮರ್ಪಿಸಿಕೊಂಡಿದೆ.

ಹೆಣ್ಣುಮಕ್ಕಳಿಗೆ ಶಿಕ್ಷಣ ಎಂದಮೇಲೆ ಅವರು ಬೆಳೆದು ಸ್ತ್ರೀ ಆದಾಗ ಸಮುದಾಯದಲ್ಲಿ ರಾಜಕೀಯ ಮತ್ತು ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಹಕ್ಕನ್ನು ಚಲಾಯಿಸಲು ಸಮರ್ಥರಾಗುವ ಅಲ್ಲದೇ ಮನೆಯಲ್ಲಿಯೂ ಸಮುದಾಯದಲ್ಲಿಯೂ ಅಭಿವೃದ್ಧಿ ಯತ್ನಗಳಲ್ಲಿ ಸಹಭಾಗಿಗಳಾಗುವವರು ಒಬ್ಬ ಶುಶಿಕ್ಷಿತ ಮಹಿಳೆಯು ಹೆಚ್ಚು ಸ್ವಾತಂತ್ರವಾದ ವೈಯಕ್ತಿಕ ರಾಜಕೀಯ ಮತ್ತು ಆರ್ಥಿಕ ನಿರ್ಧಾರಗಳನ್ನು ಮಾಡುವವಳು ಜೊತೆಗೆ ಶಿಕ್ಷಣ ಪಡೆದ ಮಹಿಳೆಯರು ಉತ್ತಮ ಶಿಶು ಪೋಷಣೆಯ ಮೂಲಕ ಶಿಶು ಮರಣದರವನ್ನು ಕಡಿಮೆ ಮಾಡಿ ಹಡೆಯುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವರು. ೧೯೯೨ರ ವಿಶ್ವ ಬ್ಯಾಂಕ್ ಪ್ರಕಟಣೆಯು ಮಹಿಳೆಯರ ಶಿಕ್ಷಣದಲ್ಲಿ ಒಂದು ಹೆಚ್ಚುವರಿ ವರ್ಷವು ಫಲವತ್ತತೆಯನ್ನು ಶೇ. ೫ರಿಂದ ೧೦ರಷ್ಟು ಕಡಿಮೆ ಮಾಡುತ್ತದೆಂದು ತೋರಿಸಿದೆ.

ಸಾಮಾಜಿಕ ನೀತಿ-ನಿಯಮಗಳು ಹೆಣ್ಣುಮಕ್ಕಳ ಸಾಮಾಜಿಕ ಚಲನೆಯನ್ನು ನಿಯಂತ್ರಿಸುತ್ತವೆ. ತಮಗೆ ಬೇಕಾದ ರೀತಿಯಲ್ಲಿ ಸಾಮಾಜಿಕ ಸಮಸ್ಯೆಯನ್ನು ಹುಟ್ಟುಹಾಕಿದ ಮೂಲಭೂತವಾದಿಗಳೇ ಕಾರಣ ಎಂಬ ಆರೋಪವಿದೆ. ಮೂಲಭೂತವಾದಿಗಳು, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಅವಕಾಶ ಮತ್ತು ಸಾಮಾಜಿಕ ಬದಲಾವಣೆಗೆ ನೇರವಾದ ಸಂಬಂಧವಿರುವುದರಿಂದ ಪ್ರಸ್ತುತ ಭಾರತದ ಸಾಮಾಜಿಕ ನ್ಯಾಯ ಮತ್ತು ಸಮಾನತೆ ಕಡಿಮೆ.

ಮಹಿಳೆಯರ ಶೈಕ್ಷಣಿಕ ಪ್ರಗತಿಗಾಗಿ ಇಂದು ಸರ್ಕಾರ ಹತ್ತು ಹಲವು ಯೋಜನೆಗಳನ್ನು ಹಾಕಿಕೊಂಡಿದೆ.

ಕಪ್ಪುಹಲಗೆ ಯೋಜನೆ, ಕಲಿ ನಲಿ, ನಲಿ ಕಲಿ, ಮರಳಿ ಬಾ ಶಾಲೆಗೆ ಮುಂತಾದ ಯೋಜನೆಗಳಿವೆ. ಮಹಿಳೆಯರಿಗಾಗಿಯೇ ವಿಶೇಷವಾದ ಸವಲತ್ತುಗಳನ್ನೂ ಶಿಕ್ಷಣದಲ್ಲಿ ನೀಡಲಾಗುತ್ತಿದೆ. ಶಾಲೆ ತೊರೆದ ಹೆಣ್ಣುಮಕ್ಕಳಿಗಾಗಿಯೇ ಕಸ್ತೂರ ಬಾ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ. ಪ್ರಾಥಮಿಕ ಹಂತದಲ್ಲಿರುವ ಎಲ್ಲಾ ಮಕ್ಕಳಿಗೂ ಉಚಿತ ಶಿಕ್ಷಣ ಎಂದು ಘೋಷಿಸಲಾಗಿದೆ. ಪ್ರೌಢ ಹಂತದಲ್ಲಿ ಮಹಿಳೆಯರಿಗೆ ಉಚಿತ ಶಿಕ್ಷಣ ಇದೆ. ಉನ್ನತ ವ್ಯಾಸಂಗದಲ್ಲಿಯೂ ಮಹಿಳೆಯರಿಗೆ ಹಲವು ರಿಯಾಯತಿಗಳನ್ನು ಸರ್ಕಾರ ಘೋಷಿಸಿದೆ. ಹೀಗಿದ್ದೂ ಪುರುಷರಿಗೆ ಸಮಾನಕ್ಕೆ ಮಹಿಳೆಯರ ಶೈಕ್ಷಣಿಕ ಮಟ್ಟವು ತಲುಪಲು ಸಾಧ್ಯವಿಲ್ಲವಾಗಿದೆ.[೬]

ಶೈಕ್ಷಣಿಕ ಅವಕಾಶ ವಂಚಿತರಾದ ಹೆಣ್ಣುಮಕ್ಕಳನ್ನು ರಕ್ಷಿಸಿ ಪ್ರೋತ್ಸಾಹಿಸುವು ದಕ್ಕಾಗಿ ಸ್ವಾತಂತ್ರ್ಯ ಭಾರತದ ಸಂವಿಧಾನದಲ್ಲಿ ಹಲವಾರು ಅವಕಾಶಗಳನ್ನು ಕಲ್ಪಿಸಲಾಗಿದೆ. ಭಾರತ ಸಂವಿಧಾನದ ೪೬ನೇ ಪರಿಚ್ಛೇದದ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಅವಶ್ಯಕತೆಗಳನ್ನು ಪೂರೈಸಲು ವಿಶೇಷ ಯೋಜನೆಗಳನ್ನು ರೂಪಿಸುವ ಅವಕಾಶಗಳಿವೆ. ಆದರೂ ಕರ್ನಾಟಕದಲ್ಲಿ ೨೦೦೩–೦೪ನೇ ಸಾಲಿನಲ್ಲಿ ಶೇಕಡ ೪೯ರಷ್ಟು ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು ಬಡತನ ರೇಖೆಗಿಂತ ಕೆಳಗಿದ್ದರೆ, ಸುಮಾರು ಶೇಕಡ ೫೫.೦೪ರಷ್ಟು ನಗರಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು ಬಡತನ ರೇಖೆಗಿಂತ ಕೆಳಗಿದ್ದಾರೆ. ಶೇಕಡ ೭೦ರಷ್ಟು ಗ್ರಾಮೀಣ ಭಾಗದ ಪರಿಶಿಷ್ಟ ಕುಟುಂಬಗಳು ಕೇವಲ ಒಂದು ಎಕರೆ ಅಥವಾ ಅದಕ್ಕಿಂತ ಕಡಿಮೆ ಪ್ರಮಾಣದ ಜಮೀನು ಹೊಂದಿರುವುದರ ಮೂಲಕ ಪರಿಶಿಷ್ಟ ಜಾತಿಗಳ ಕೃಷಿ ಭೂಮಿಯ ಒಡೆತನ ಬಹಳ ಕನಿಷ್ಠ ಮಟ್ಟದಲ್ಲಿದೆ. ಕರ್ನಾಟಕ ಭೂಸುಧಾರಣೆ ಕಾಯಿದೆ ಪ್ರಕಾರ ಸರ್ಕಾರ ತೆಗೆದುಕೊಂಡ ಕ್ರಮಗಳಿಂದಾಗಿ ಬಹಳಷ್ಟು ಪರಿಶಿಷ್ಟ ಗೇಣಿದಾರರು ಮಾಲೀಕರಾದರು. ಅದರಂತೆ ಕರ್ನಾಟಕದ ಒಟ್ಟು ೭೦.೭೯ ಲಕ್ಷ ಹಿಡುವಳಿಗಳಲ್ಲಿ ಶೇಕಡ ೧೧.೬೫ರಷ್ಟು ಹಿಡುವಳಿಗಳನ್ನು(ಪರಿಶಿಷ್ಟ ಜಾತಿ) ಹೊಂದಿದ್ದಾರೆ. ಒಟ್ಟು ೧೨೩.೦೭ ಲಕ್ಷ ಹೆಕ್ಟೇರ್ ಹಿಡುವಳಿಯಲ್ಲಿ ಸುಮಾರು ಶೇಕಡ ೮.೦೭ರಷ್ಟು ಅಂದರೆ ೧೦.೭೧ ಲಕ್ಷ ಹೆಕ್ಟೇರ್ ಹಿಡುವಳಿಗಳನ್ನು ದಲಿತರು ಹೊಂದಿದ್ದಾರೆ. ಇದರಿಂದ ರಾಜ್ಯದ ಜನಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಅವರ ಕೃಷಿ ಭೂಮಿಯ ಒಡೆತನವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಂದಿಗೂ ಶೇಕಡ ೬೧ರಷ್ಟು ದಲಿತ ಕುಟುಂಬಗಳು ತಮ್ಮ ಜೀವನಕ್ಕೆ ಕೂಲಿಯನ್ನೇ ಅವಲಂಬಿಸಿದ್ದಾರೆ.[೭] ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳಲ್ಲಿ ಜಾತಿಪದ್ಧತಿ ಪ್ರಧಾನ ಪಾತ್ರ ವಹಿಸುತ್ತದೆ.

ಈ ಪರಿಸ್ಥಿತಿಯು ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಬಹುಸಂಖ್ಯೆಯ ದಲಿತ ಕುಟುಂಬಗಳು ಭೂಮಿಯನ್ನೇ ಹೊಂದಿರದ ಕಾರಣದಿಂದ

ಆರ್ಥಿಕವಾಗಿ ಮೇಲ್ಜಾತಿಯವರನ್ನೇ ಅವಲಂಬಿಸಬೇಕಾಗಿದೆ. ಇಲ್ಲಿಯೂ ಕೂಡ ದಲಿತರು ಮೇಲ್ಜಾತಿಯವರ ದಮನಕ್ಕೊಳಗಾಗುವುದರಿಂದ ಅವರು ಸಾಮಾಜಿಕವಾಗಿ ಇನ್ನಷ್ಟು ದುರ್ಬಲರಾಗುತ್ತಾರೆ. ದೇಶದ ಇತರೆ ಭಾಗಗಳಲ್ಲಿ ಇರುವಂತೆ ಕರ್ನಾಟಕದಲ್ಲಿಯೂ ಹೆಚ್ಚಾಗಿ ಶೇಕಡ ೭೫ರಷ್ಟು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಹುತೇಕರು ತಮ್ಮ ಜೀವನಕ್ಕಾಗಿ ಕೃಷಿ ಮತ್ತು ತತ್ಸಬಂಧಿತ ಚಟುವಟಿಕೆಗಳನ್ನು ಅವಲಂಬಿಸಿದ್ದಾರೆ. ಕೃಷಿ ಚಟುವಟಿಕೆಗಳಲ್ಲಿನ ಬದಲಾವಣೆಗಳು ಬರಗಾಲ, ಹಳ್ಳಿಗಳಲ್ಲಿನ ನಿರಂತರ ಕೆಲಸದ ಕೊರತೆ, ಕನಿಷ್ಠ ಕೂಲಿ ಇನ್ನೂ ಮುಂತಾದ ಕಾರಣಗಳಿಂದ ದಲಿತ ಭೂರಹಿತ ಕೃಷಿ ಕಾರ್ಮಿಕರು ದುಡಿಮೆಗಾಗಿ ನಗರಗಳಿಗೆ ವಲಸೆ ಹೋಗುತ್ತಿರುವುದು ಇತ್ತೀಚೆಗೆ ಅಧಿಕವಾಗಿದೆ.[೯]

ಗ್ರಾಮಗಳಿಂದ ನಗರಗಳಿಗೆ ವಲಸೆ ಬಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳು ಹೆಚ್ಚಾಗಿ ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ, ರಸ್ತೆಗಳಲ್ಲಿ ಕಸ ಗುಡಿಸುವುದು, ಚಿಂದಿ ಆಯುವುದು ಇನ್ನೂ ಮುಂತಾದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೆ ಈ ಕೆಲಸಗಳಿಂದ ಬರುವ ಆದಾಯವು ಅವರ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ಆದರೂ ನಗರಗಳಿಗೆ ವಲಸೆ ಬಂದು ಕೆಲವೇ ಕೆಲವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮಾತ್ರ ಲಾಭದಾಯಕವಾದ ಕೆಲಸಗಳನ್ನು ಮಾಡುತ್ತಿರುವುದು ಗೌಣವಾಗಿದೆ. ನಗರಗಳಿಗೆ ವಲಸೆ ಬಂದು ಪಟ್ಟಣಗಳಲ್ಲಿಯೇ ನೆಲೆಸಿರುವ ಹಾಗೂ ಪಟ್ಟಣಗಳಿಗೆ ಸಮೀಪವಿರುವ ಕೆಲವು ದಲಿತ ಉಪಜಾತಿಗಳು ದಲಿತರಿಗಾಗಿಯೇ ರೂಪಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿವೆ. ಆದರೂ ದಲಿತರ ಕೃಷಿಯನ್ನೇ ಆದಾಯದ ಮೂಲವನ್ನಾಗಿಸಿಕೊಂಡ ದಲಿತ ಕುಟುಂಬಗಳ ಸಂಖ್ಯೆ ಕೇವಲ ಶೇಕಡ ೧೫.೦೪ರಷ್ಟು ಇದ್ದರೆ, ಕೃಷಿಯೇತರ ಚಟುವಟಿಕೆಗಳನ್ನು ಆದಾಯದ ಮೂಲವನ್ನಾಗಿಸಿಕೊಂಡ ದಲಿತ ಕುಟುಂಬಗಳ ಸಂಖ್ಯೆ ಶೇಕಡ ೧೦.೯೮ರಷ್ಟಿದೆ. ಆದರೆ ಹಿಂದುಳಿದ ವರ್ಗಗಳು ಮತ್ತು ಇತರೆ ಕುಟುಂಬಗಳು ಕೃಷಿಯೇತರ ಚಟುವಟಿಕೆಗಳನ್ನು ಆದಾಯದ ಮೂಲವನ್ನಾಗಿಸಿಕೊಂಡ ಪ್ರಮಾಣಗಳು ಕ್ರಮವಾಗಿ ಶೇಕಡ ೪೭.೦೫ ಮತ್ತು ಶೇಕಡ ೩೮.೦೮ರಷ್ಟಿದೆ. ಇಲ್ಲಿಯೂ ಕೂಡ ದಲಿತರ ಸ್ಥಿತಿ ಉತ್ತಮವಾಗದೆ ಇರುವುದನ್ನು ಕಾಣಲಾಗಿದೆ.

ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳು, ಆಧುನಿಕ ಉತ್ಪಾದನಾ ವಿಧಾನ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳು, ಹೊಸ ರೀತಿಯ ವೃತ್ತಿ ಕಸುಬುಗಳು, ಆಧುನಿಕ ಸಂಘ-ಸಂಸ್ಥೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳನ್ನು ವಿರೋಧಿಸುವಂತೆ ಮಾಡಿವೆ. ಅನಂತರದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯಗಳು ಸಾಮಾಜಿಕ ಮತ್ತು ರಾಜಕೀಯವಾಗಿ ಒಂದಾಗಿ ಭೂಮಿಯ ಹಕ್ಕು, ಕೂಲಿಯ ಹೆಚ್ಚಳ, ಸಾಮಾಜಿಕವಾಗಿ ಮತ್ತು ರಾಜಕೀಯ ಸ್ಥಾನಮಾನ

ಗಳಿಗಾಗಿ ಹೋರಾಟ ಮಾಡುತ್ತಿರುವುದನ್ನು ಕಾಣುತ್ತೇವೆ. ಇದರ ಇನ್ನೊಂದು ಮಗ್ಗುಲಲ್ಲೇ ೧೯೭೦ರ ನಂತರದಲ್ಲಿ ಮೇಲ್ಜಾತಿಯವರಿಂದ ದಲಿತರ ಸಾಮಾಜಿಕ ಸಂಪನ್ಮೂಲಗಳ ಕೊರತೆಯ ಜೊತೆಗೆ ಸಾಂಸ್ಕೃತಿಕ ಮತ್ತು ಭೌತಿಕ ಸಂಪನ್ಮೂಲಗಳ ಸೌಲಭ್ಯದಿಂದ ವಂಚಿತವಾಗಿದೆ. ಅಲ್ಲದೆ ಅವರು ಇದುವರೆಗೂ ಸಾಮಾಜಿಕ ಬಹಿಷ್ಕಾರವನ್ನು ಅನುಭವಿಸುತ್ತಾ ಸಾಮಾಜಿಕ ಅಭಿವೃದ್ಧಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಒದಗಿಸಿದೆ.

ಭಾರತ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಮೀಸಲಾತಿಯ ಮೂಲಕ ದಲಿತರಿಗೆ ಶಿಕ್ಷಣ ನೀಡಿ ವಿವಿಧ ಕಸುಬುಗಳ ಚಲನಶೀಲತೆಯ ಮೂಲಕ ಸಣ್ಣ ಪ್ರಮಾಣದ ಆರ್ಥಿಕ ಚೇತರಿಕೆಗೆ ಮುಖ್ಯ ಕಾರಣವಾಗಿದೆ. ಇದರಿಂದಾಗಿ ಮೇಲ್ಜಾತಿಯವರ ಮೇಲಿನ ಅವಲಂಬನೆ ಸ್ವಲ್ಪ ಕಡಿಮೆಯಾಗಿ ದಲಿತರು ಸಾಮಾಜಿಕ ಸ್ಥಾನಮಾನ ಪಡೆಯುವಂತಾಗಿದೆ. ಮೇಲ್ಜಾತಿಯವರ ದಬ್ಬಾಳಿಕೆಯನ್ನು ಸಹಿಸದ ವಿದ್ಯಾವಂತ ದಲಿತರು ರಾಜಕೀಯ ಮತ್ತು ಸಾಂಸ್ಕೃತಿಕ ಹಕ್ಕುಗಳಿಗಾಗಿ ಮೊದಲಿಗಿಂತ ಹೆಚ್ಚಿನ ಪ್ರಮಾಣದ ಪ್ರಯತ್ನಗಳನ್ನು ಮಾಡುತ್ತಿರುವುದು ಕಂಡುಬರುತ್ತಿದೆ. ಈ ರೀತಿಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಾಸ್ತವಾಂಶಗಳನ್ನು ಅನುಭವಿಸುತ್ತಿರುವ ದಲಿತರ ಶಿಕ್ಷಣ ಬದಲಾವಣೆ ಗಳನ್ನು ತರುವುದರ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯಗಳ ಹೆಣ್ಣುಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ಸುಧಾರಿಸುವ ಸಾಧ್ಯತೆ ಇದೆ.

ಸಂಘಟನೆ ಮತ್ತು ಚಳುವಳಿಗಳು ೧೯೨೦ಕ್ಕಿಂತ ಪೂರ್ವದಲ್ಲಿಯೇ ಕಂಡುಬಂದರೂ ೧೯೨೦ರ ನಂತರದ ದಿನಗಳಲ್ಲಿ ದಲಿತರ ಹೋರಾಟಗಳಿಗೆ ಹೊಸ ಆಯಾಮ ದೊರೆಯಿತು. ಅಸ್ಪೃಶ್ಯತೆಯ ಆಚರಣೆಯ ವಿವಾದಗಳು ಸಾಮಾಜಿಕ ವಿವಾದಗಳಂತೆಯೇ ವ್ಯಾಖ್ಯಾನಿಸಲ್ಪಡುತ್ತಾ ಪ್ರಜಾಪಕ್ಷದಿಂದ ಕೂಡಿದ ಕಾಂಗ್ರೆಸ್ ಪಕ್ಷವು ೧೯೩೦ ಮತ್ತು ೧೯೩೫ರ ನಡುವೆ ಅಸ್ಪೃಶ್ಯತೆ ನಿಷೇಧ ಕಾಯ್ದೆಯನ್ನು ಜಾರಿಗೆ ತರುವಂತೆ ಸರ್ಕಾರವನ್ನು ಒತ್ತಾಯಿಸಿತು. ಇದೇ ಸಂದರ್ಭದಲ್ಲಿ ಹರಿಜನ ಸೇವಕ ಸಂಘವು ಇದಕ್ಕೆ ಬೆಂಬಲ ಸೂಚಿಸಿ, ಎಲ್ಲ ದೇವಾಲಯಗಳನ್ನು ಪ್ರವೇಶಿಸಲು ರಸ್ತೆಗಳು, ಕೆರೆಗಳು ಮತ್ತು ಸಾರ್ವಜನಿಕ ಸ್ಥಳಗಳನ್ನು ಬಳಸಿಕೊಳ್ಳಲು ದಲಿತರಿಗೆ ಸಮಾನವಾದ ಹಕ್ಕುಗಳಿರಬೇಕೆಂದು ಆಗ್ರಹಪಡಿಸಿತು. ಅಲ್ಲದೇ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮತ್ತು ಇತರೆ ಸಮುದಾಯಗಳ ಆರ್ಥಿಕ ಸುಧಾರಣೆಗಾಗಿ ಸರ್ಕಾರಿ ಭೂಮಿಗಳನ್ನು ದಲಿತರಿಗೆ ಹಂಚಬೇಕೆಂಬ ಸಲಹೆಗಳೂ ಕೂಡ ನೀಡಲ್ಪಟ್ಟ ಪರಿಣಾಮವಾಗಿ ೧೯೩೧ರ ವೇಳೆಗೆ ಆದಿಕರ್ನಾಟಕ ಜನಾಂಗಕ್ಕೆ ೯೭೬೩ ಎಕರೆಗಳಷ್ಟು ಭೂಮಿಯನ್ನು ಸರ್ಕಾರ ಹಂಚಿತಾದರೂ ಇದು ಬರೀ ಸಹಾನುಭೂತಿಯಿಂದ ಕೂಡಿದ ಸಹಾಯವಾಗಿತ್ತೇ ವಿನಾ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಿ ಗಳಿಸಿದ್ದಲ್ಲ. ಇಂದಿಗೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮತ್ತು ಇತರೆ ಸಮುದಾಯಗಳು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಲೇ ಇರಬೇಕಾದ ಸ್ಥಿತಿ ಇದ್ದು, ಹಿಂದುಳಿದ ಸಮುದಾಯಗಳನ್ನು ಸಂಘಟಿಸಿ ಸೂಕ್ತ ಮಾರ್ಗದರ್ಶನ ನೀಡಬಲ್ಲಂತಹ ವ್ಯಕ್ತಿ ಮತ್ತು ಶಕ್ತಿಗಳ ಕೊರತೆ ಎದ್ದು ಕಾಣುತ್ತದೆ.

ಕರ್ನಾಟಕದಲ್ಲಿ ದಲಿತ ಸಂಘಟನೆ, ಚಳುವಳಿ ಮತ್ತು ಹೋರಾಟಗಳಿಗೆ ಪ್ರೇರಣೆಯಾದವರೆಂದರೆ ಜ್ಯೋತಿಬಾ ಫುಲೆ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಆಗಿದ್ದಾರೆ. ಜ್ಯೋತಿಬಾ ಫುಲೆಯವರು ದಲಿತ ಹಿಂದುಳಿಯುವಿಕೆಗೆ ಅಜ್ಞಾನ ಕಾರಣ ಮತ್ತು ಅಜ್ಞಾನಕ್ಕೆ ಅನಕ್ಷರತೆಯೇ ಕಾರಣವೆಂಬುದನ್ನು ಪ್ರತಿಪಾದಿಸಿದರು. ಅದರಂತೆಯೆ ಜ್ಞಾನವೇ ಬಲ ಎಂಬ ತತ್ವವನ್ನು ಪರಿಣಾಮಕಾರಿಯಾಗಿ ರೂಪಿಸಿದ ಡಾ. ಬಿ.ಆರ್. ಅಂಬೇಡ್ಕರ್ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂಬ ಮೂರು ಸಂಗತಿಗಳನ್ನು ಒತ್ತಿ ಹೇಳಿದ್ದಾರೆ. ಜ್ಯೋತಿಬಾ ಫುಲೆ ಮತ್ತು ಅಂಬೇಡ್ಕರ್ ಇವರ ಪ್ರಯತ್ನಗಳು ಆಗಿನ ಮುಂಬಯಿ ಕರ್ನಾಟಕದ ಭಾಗವಾಗಿದ್ದ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಅದರಲ್ಲಿಯೂ ಬೆಳಗಾವಿ ಜಿಲ್ಲೆಯಲ್ಲಿ ವಿಶೇಷ ಪರಿಣಾಮ ಬೀರಿದವು. ಈ ನಿಟ್ಟಿನಲ್ಲಿ ದಲಿತರ ಒಗ್ಗಟ್ಟು ಮತ್ತು ಉದ್ಧಾರಗಳಿಗಾಗಿ ಶ್ರಮಿಸಿದವರಲ್ಲಿ ಬಳವಂತರಾವ್ ವರಾಳೆ, ದೇವರಾಯ ಇಂಗಳೆ, ಲಕ್ಷ್ಮಣ ಕಾಂಬಳೆ, ಎಂ.ಬಿ. ನಾಡಕರ್ಣಿ ಇನ್ನೂ ಮುಂತಾದವರಿದ್ದಾರೆ. ಈ ನಾಯಕರ ಪ್ರಯತ್ನ ಮತ್ತು ಪ್ರೇರಣೆಗಳ ಫಲವಾಗಿ ೧೯೨೪ರ ವೇಳೆಗೆ ದಲಿತ ಚಳುವಳಿ ಬೆಳಗಾವಿ ಜಿಲ್ಲೆಯಾದ್ಯಾಂತ ಹಬ್ಬಿತು. ಅಲ್ಲದೆ ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ ಕೆಲವು ಭಾಗಗಳಲ್ಲಿ ಅಸ್ಪೃಶ್ಯತಾ ವಿರೋಧಿ ಚಳುವಳಿಯನ್ನು ಮುನ್ನಡೆಸಿ, ಅದನ್ನು ಅಂಬೇಡ್ಕರ್ ಅವರಿಗೆ ಪರಿಚಯಿಸಲಾಯಿತು. ಈ ಶತಮಾನದ ಎರಡನೇ ದಶಕದಿಂದ ಏಕೀಕರಣದವರೆಗಿನ ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಗಮನಿಸಿದರೆ ಗಾಂಧಿ, ಅಂಬೇಡ್ಕರ್, ಕಾಂಗ್ರೆಸ್, ಪ್ರಜಾ ಸೋಶಿಯಲಿಸ್ಟ್ ನಡುವಣ ಸಂಬಂಧ ಮತ್ತು ಸಂಘರ್ಷಗಳು ಎದ್ದು ಕಾಣುತ್ತವೆ. ಈ ಹಿನ್ನೆಲೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಯತ್ನಗಳಿಗೆ ಆರಂಭದ ಬೆಂಬಲ ಸಿಕ್ಕಿದ್ದು ಉತ್ತರ ಕರ್ನಾಟಕದಲ್ಲಿ ಮಾತ್ರ, ಅನಂತರ ಡಾ. ಬಿ.ಆರ್. ಅಂಬೇಡ್ಕರ್ ಬೆಳಗಾವಿ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಸಂಚರಿಸಿದಾಗ ಹೋರಾಟಕ್ಕೆ ಚೈತನ್ಯ ಮೂಡಿತು.

ಮುಂದುವರಿದಂತೆ ಡಾ.ಬಿ.ಆರ್.ಅಂಬೇಡ್ಕರ್ ಬೆಳಗಾವಿಯಲ್ಲಿ ರಾಜಕೀಯವಾಗಿ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ಮತ್ತು ರಿಪಬ್ಲಿಕ್ ಪಕ್ಷದ ಚಟುವಟಿಕೆಗಳನ್ನು ಸಂಘಟಿಸಿದರು. ಇದರ ಫಲವಾಗಿ ೧೯೫೭ರ ಲೋಕಸಭೆಯ ಚುನಾವಣೆಯಲ್ಲಿ ಚಿಕ್ಕೋಡಿ ಕ್ಷೇತ್ರದಿಂದ ರಿಪಬ್ಲಿಕನ್ ಪಕ್ಷದ ಡಿ.ಎ.ಕಟ್ಟಿಯವರು ಕಾಂಗ್ರೆಸ್ ಪಕ್ಷದ ಬಲವಂತರಾವ್ ದಾತಾರ್‌ರನ್ನು ಸೋಲಿಸುವುದರ ಮೂಲಕ ದಲಿತರ ರಾಜಕೀಯ ಶಕ್ತಿ ಪ್ರದರ್ಶನವಾಯಿತು. ಜೊತೆಗೆ ಸಾಮಾನ್ಯ ಮತಕ್ಷೇತ್ರದಿಂದ ದಲಿತ ಪ್ರತಿನಿಧಿಯೊಬ್ಬರು ಆಯ್ಕೆಯಾದದ್ದು ಭಾರತದಲ್ಲಿಯೇ ಪ್ರಥಮ ಎಂಬ ಕೀರ್ತಿಯೂ ಲಭಿಸಿತು. ಅನಂತರದಲ್ಲಿ ದಲಿತ ಸಂಘಟನೆ, ಚಳುವಳಿ ಮತ್ತು ಹೋರಾಟಗಳು ಏಳುಬೀಳುಗಳನ್ನು ಕಂಡರೂ ದಲಿತ ಜನಾಂಗದ ಏಳಿಗೆ ಮತ್ತು ಬದುಕಿಗಾಗಿ ಅನೇಕ ಬುದ್ಧಿಜೀವಿಗಳು, ಲೇಖಕರು, ವಿದ್ಯಾರ್ಥಿಗಳು ನಡೆಸಿದ ಚರ್ಚೆ ಮತ್ತು ಸಮಾಲೋಚನೆಗಳಿಂದ ಸೂಕ್ತ ಪರಿಹಾರದ ಪ್ರಯತ್ನಗಳು ಕಂಡುಬಂದವು. ಈ ನಿಟ್ಟಿನಲ್ಲಿ ಕರ್ನಾಟಕ ದಲಿತ ಕ್ರಿಯಾ ಸಮಿತಿ, ದಲಿತ ಸಂಘರ್ಷ ಸಮಿತಿ, ದಲಿತ ವಿದ್ಯಾರ್ಥಿ ಒಕ್ಕೂಟಗಳನ್ನು ಹೇಳಬಹುದು[೧೦](ಲಕ್ಷ್ಮಣ್ ತೆಲಗಾವಿ).

ನಮ್ಮ ರಾಷ್ಟ್ರವು ಅಭಿವೃದ್ಧಿಶೀಲ ರಾಷ್ಟ್ರವಾಗಿದ್ದು ಶೇಕಡ ೫೭ಕ್ಕಿಂತ ಅಧಿಕ ಕೃಷಿಯನ್ನೇ ಅವಲಂಬಿಸಿದೆ. ಶೇಕಡ ೨೦ರಷ್ಟು ಸಂಪನ್ಮೂಲ ದೇಶದ ಶೇಕಡ ೮೦ರಷ್ಟು ಜನರಲ್ಲಿ ಹಂಚಿಕೆಯಾಗಿದೆ. ಆದುದರಿಂದ ಮಧ್ಯಮವರ್ಗದ ಜನರೇ ಕಂಡುಬರುತ್ತಾರೆ. ಮಹಿಳೆಯರು ಕೃಷಿ ಹಾಗೂ ಅದಕ್ಕೆ ಪೂರಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಗ್ರಾಮೀಣ ಭಾಗದಲ್ಲಿ ಕೃಷಿ ಭೂಮಿ ಅಥವಾ ಗದ್ದೆ, ಹೊಲಗಳಲ್ಲಿ ಕೂಲಿ ಕೆಲಸ ಮಾಡಿ ಜೊತೆಗೆ ಸಣ್ಣ ಪುಟ್ಟ ವ್ಯಾಪಾರ ಮಾಡುತ್ತಾರೆ. ಪುರುಷರಷ್ಟೆ ಕೆಲಸ ನಿರ್ವಹಿಸಿದರೆ ವೇತನ ಅರ್ಧಕ್ಕಿಂತ ಕಡಿಮೆ ಇದೆ. ನಗರಪ್ರದೇಶಗಳಲ್ಲಿ ಸಿದ್ಧ ಉಡುಪು ಕೈಗಾರಿಕೆಗಳು, ಮುದ್ರಣಯಂತ್ರ ಕೈಗಾರಿಕೆ, ಮನೆಗೆಲಸ, ಗಂಧದಕಡ್ಡಿ ಕಾರ್ಖಾನೆ ಇನ್ನಿತರ ಉದ್ದಿಮೆಗಳಲ್ಲಿ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಇದಕ್ಕೆ ಬಹುಮುಖ್ಯ ಕಾರಣ ಅನಕ್ಷರತೆ, ಬಡತನ, ಇನ್ನಿತರ ಜೀವನ ನಿರ್ವಹಣೆ ಕಷ್ಟವೆನಿಸಿದೆ. ಆದುದರಿಂದ ಶಿಕ್ಷಣ ಅತ್ಯಂತ ಅವಶ್ಯಕ.

ಮಕ್ಕಳಿಗೆ ಹಾಗೂ ವಯಸ್ಕರಿಗೆ ಶಿಕ್ಷಣದಲ್ಲಿ ಹಲವಾರು ರೀತಿಯ ವ್ಯತ್ಯಾಸವಿದೆ. ಮಾನಸಿಕ ಸ್ಥಿತಿ, ಆಚಾರ ವಿಚಾರಗಳು, ಆಲೋಚನಾಶಕ್ತಿ, ಆಲೋಚನಾ ವಿಷಯ ಹಾಗೂ ಅವರ ಹವ್ಯಾಸಗಳು, ಮನೋಧರ್ಮ ಇವು ಮಕ್ಕಳಿಗೂ, ಪುರುಷರಿಗೂ ಹಾಗೂ ಮಹಿಳೆಯರಿಗೂ ವಿವಿಧ ರೀತಿಯಿಂದ ಕೂಡಿರುತ್ತವೆ. ವಯಸ್ಸಾದವರಿಗೆ ಅಕ್ಷರದ ಬಗ್ಗೆ ಅರಿವಿಲ್ಲದಿದ್ದರೂ ಅವರಲ್ಲಿ ಅನುಭವ ಸಂಪತ್ತು ಮತ್ತು ತಾಳ್ಮೆ ಅಪಾರವಾಗಿರುತ್ತದೆ. ಆದ್ದರಿಂದ ವಯಸ್ಸಾದವರಿಗೆ ವಯಸ್ಕರ ಶಿಕ್ಷಣಕೇಂದ್ರಗಳು ಶಿಕ್ಷಣ ನೀಡುವಲ್ಲಿ ತಮ್ಮ ಶೈಕ್ಷಣಿಕ ಕಾರ್ಯಚಟುವಟಿಕೆಯನ್ನು ನಿರ್ವಹಿಸುತ್ತವೆ.

ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಪುರುಷರ ಸಂಖ್ಯೆ ಒಟ್ಟು ಜನಸಂಖ್ಯೆ ೬,೧೧,೩೦,೭೦೪ ಇದ್ದು, ಅದರಲ್ಲಿ ಮಹಿಳೆಯರ ಸಂಖ್ಯೆ ೩,೦೦,೭೨,೯೬೨ ಹಾಗೂ ೩,೧೦,೫೭,೭೪೨ ಇದೆ. ಪ್ರತಿ ಸಾವಿರ ಪುರುಷರಿಗೆ ೯೬೮ ಮಹಿಳೆಯರು ಇದ್ದಾರೆ. ವಿದ್ಯಾವಂತರ ಸಂಖ್ಯೆ ಒಟ್ಟು ೪,೧೦,೨೯೨,೩೨೨ ಇದೆ. ೩೨೩ ಕಂಡುಬರುತ್ತದೆ. ಶೇಕಡ ೭೫.೬೦ರಷ್ಟಿದೆ. ಇತರೆ ಸ್ತ್ರೀಯರ ಪ್ರಮಾಣ ೧,೮೨,೨೦,೮೫೫ರಷ್ಟಿದೆ. ಅಂದರೆ ಶೇಕಡ ೬೮.೧೩ರಷ್ಟಿದೆ. ಪುರುಷರ ಜನಸಂಖ್ಯೆ ಶೇಕಡ ೮೨.೮೫ರಷ್ಟಿದೆ. ಅಂದರೆ ೨,೨೮,೦೮,೪೬೮ ಜನರು ವಿದ್ಯಾವಂತರು ರಾಜ್ಯದಲ್ಲಿದ್ದು ಪುರುಷರು ಮತ್ತು ಮಹಿಳೆಯರಲ್ಲಿ ವಿದ್ಯಾಭ್ಯಾಸದ ಅಂತರವನ್ನು ತಿಳಿಯಬಹುದಾಗಿದೆ. ಆದುದರಿಂದ ಮಹಿಳೆಯರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡಬೇಕೆನ್ನುವುದು ಅಧ್ಯಯನದ ಅನಿಸಿಕೆಯಾಗಿದೆ.

ಶಿಕ್ಷಣವು ಕಲೆ, ಆರೋಗ್ಯ, ಶುಚಿತ್ವ, ಸಾಮರ್ಥ್ಯ, ಕೆಲಸಕಾರ್ಯಗಳ ನಿರ್ವಹಣೆ ಇತ್ಯಾದಿಗಳ ಜೊತೆಗೆ ವ್ಯವಹಾರಗಳು, ಕುಟುಂಬದ ಜವಾಬ್ದಾರಿ ಹಾಗೂ ದೇಶದ ಸಂಪತ್ತಿಗೆ ಅತ್ಯಂತ ಮಹತ್ವದ್ದಾಗಿರುತ್ತದೆ. ಗ್ರಾಮೀಣ ಭಾಗದ ಅಕ್ಷರಸ್ಥ ಮಹಿಳೆಯರು, ಬುಡಕಟ್ಟು, ಗುಡ್ಡಗಾಡು ಪ್ರದೇಶದ ಮಹಿಳೆಯರನ್ನು ಶಿಕ್ಷಣಕ್ಕೆ ಪ್ರಚೋದಿಸಿ ಅವರಲ್ಲಿ ಹುದುಗಿರುವ ಪ್ರತಿಭೆಗಳನ್ನು ಗುರುತಿಸಬಹುದಾಗಿದೆ. ಜನಪದ ಹಾಡುಗಳು, ಕುಣಿತಗಳು, ಲಾಲಿಹಾಡು, ಸೋಬಾನೆಪದ,

ಗೆಜ್ಜೆಕುಣಿತ, ಡೋಲುಕುಣಿತ, ವೀರಗಾಸೆ ನೃತ್ಯ, ಕೋಲಾಟ, ಕುಂಟೆಬಿಲ್ಲೆ, ಬಯಲಾಟ, ಕಂಬ ಹತ್ತುವ ಸ್ಪರ್ಧೆ ಇನ್ನಿತರ ಕ್ರೀಡೆಗಳಿಗೆ ಪ್ರೇರೇಪಿಸಿ ಕೀಳರಿಮೆಯನ್ನು ತೊಡೆದುಹಾಕಿ ಜೀವನಮಟ್ಟವನ್ನು ಸುಧಾರಿಸಲು ನೆರವಾಗುವುದು ಶಿಕ್ಷಣ.[೧೧]

ಇತ್ತೀಚಿನ ದಿನಗಳಲ್ಲಿ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣವಿರುವಂತಹ ಸಮುದಾಯದಲ್ಲಿ ಶಿಕ್ಷಣ ಪಡೆದು ಸದೃಢವಾಗಿ ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಕೊಡುಗೆ ನೀಡುವುದು ಅವಶ್ಯಕವೆನಿಸುವುದು. ಪ್ರತಿ ಮನೆಯ ಮಹಿಳೆ ಮಕ್ಕಳಿಗೆ ಗುರುವಿನ ಸ್ಥಾನ ಅಲಂಕರಿಸಿ ಮನೆಯಲ್ಲಿಯೇ ಪ್ರಥಮ ಪಾಠಶಾಲೆಯಾಗಿ, ಮಕ್ಕಳ ವಿದ್ಯಾಭ್ಯಾಸಕ್ಕೆ ಕಾಳಜಿ ವಹಿಸಬೇಕು, ದಾರಿದೀಪವಾಗಬೇಕು. ಸುಭದ್ರ ಸಮಾಜಕ್ಕೆ ಕಾರಣಗಳಾಗಬೇಕು. ಬಡತನ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಮೆಟ್ಟಿ ನಿಲ್ಲಬೇಕು. ಹುಟ್ಟಿದ ಮನೆಯಿಂದ ಮೆಟ್ಟಿದ ಮನೆಯಲ್ಲಿ ಕೀರ್ತಿ ತರಬೇಕು. ಅಕ್ಷರಜ್ಞಾನವೇ ಸ್ಫೂರ್ತಿಯ ಸೆಲೆಯಾಗಬೇಕು. ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪ್ರಕಾರ ಗ್ರಾಮೀಣ ಸಮಾಜದ ಕಾಳಜಿ ಗುಡಿಕೈಗಾರಿಕೆಯ ನೆಲದಲ್ಲಿ ಅನಕ್ಷರತೆಯು ದೇಶದ ಒಂದು ಶಾಪವಿದ್ದಂತೆ. ಅದನ್ನು ಹೋಗಲಾಡಿಸುವುದು ಪ್ರತಿಯೊಬ್ಬನ ಕರ್ತವ್ಯವೆಂದಿದ್ದಾರೆ.

ಸಾಕ್ಷರತೆಯಲ್ಲಿ ಮಹಿಳೆಯರು ಮತ್ತು ಪುರುಷರು

ಶಿಕ್ಷಣಕ್ರಮದಲ್ಲಿ ಮಹಿಳೆ ಮತ್ತು ಪುರುಷರ ನಡುವೆ ಬಹಳಷ್ಟು ಅಂತರಗಳಿವೆ. ಬಹುತೇಕ ಕುಟುಂಬಗಳಲ್ಲಿ ಅಥವಾ ಸಮುದಾಯಗಳಲ್ಲಿ ಮಹಿಳೆಯರನ್ನು ಎಲ್ಲ ವಿಚಾರಗಳಲ್ಲಿಯೂ ಕಡೆಗಣಿಸಿ ಪುರುಷರಿಗೆ ಆದ್ಯತೆ ನೀಡಿ ಶಿಕ್ಷಣ ನೀಡುತ್ತಾರೆ. ಸಮುದಾಯ ಕುಟುಂಬದಲ್ಲಿ ಪ್ರಮುಖ ಕೇಂದ್ರ ಬಿಂದು ಮಹಿಳೆ. ಮಹಿಳೆಯರಿಗೆ ಶಿಕ್ಷಣ ನೀಡಿದರೆ ಒಂದು ಸಂಸಾರದ ಕಣ್ಣು ತೆರೆದಂತೆ ಎಂಬ ಮಾತು ಅಕ್ಷರಶಃ ಸತ್ಯವಾಗುತ್ತದೆ. ಮಹಿಳೆಯರು ಸಬಲೆಯರಾಗಿ ಶಕ್ತಿಸಂಪನ್ನರಾಗಿ, ರಾಜಕೀಯ, ಆರ್ಥಿಕವಾಗಿ ಸಾಮಾಜಿಕವಾಗಿ ಸಬಲರಾಗುತ್ತಾರೆ.

ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ದೇಶದಲ್ಲಿ ಮಹಿಳೆಯರನ್ನು ಪುರುಷರ ಸರಿಸಮವಾಗಿ ಕಾಣುವಂತಹ ಲಕ್ಷಣಗಳು ಕಂಡುಬರುತ್ತಿಲ್ಲ. ಕೆಲವೊಂದು ಕ್ಷೇತ್ರಗಳಲ್ಲಿ ಬಿಟ್ಟರೆ(ಐಟಿ, ಬಿಟಿ) ಇನ್ನಿತರ ರಾಜಕೀಯ ವ್ಯವಸ್ಥೆಯಲ್ಲಿ ಪಂಚಾಯಿತಿ ಮಟ್ಟದಲ್ಲಿ ಇಟ್ಟಿರುವುದು ಗಮನಾರ್ಹ. ನಮ್ಮ ದೇಶದ ಸಂವಿಧಾನದಲ್ಲಿ ಮಹಿಳಾ ಶಿಕ್ಷಣಕ್ಕೆ ತನ್ನದೇಯಾದಂತಹ ಸ್ಥಾನಮಾನಗಳನ್ನು ಕಲ್ಪಿಸುವಲ್ಲಿ ಉಲ್ಲೇಖವಿದೆ. ಅದರೂ ಪ್ರಸ್ತುತ ೨೦೧೧ರ ಜನಗಣತಿಯಲ್ಲಿ ದೇಶದ ಸಾಕ್ಷರತೆಯ ಪ್ರಮಾಣ ೭೭.೮೪.೫೪.೧೨ ಅಕ್ಷರಸ್ಥರಲ್ಲಿ ಶೇಕಡ ೭೪.೦೪ ಅಕ್ಷರಸ್ಥರಿದ್ದು ೩೨.೪೨.೫೦.೩೫೮ ಮಹಿಳೆಯರಿದ್ದು ಶೇಕಡ ೬೫.೪೬ರಷ್ಟು ಶಿಕ್ಷಣ ಪಡೆದಿದ್ದರೆ, ೪೪.೪೨.೦೩.೭೭೬ರಷ್ಟು ಮಂದಿ ಅಂದರೆ ಶೇಕಡ ೮೨.೧೪ರಷ್ಟು ಪುರುಷರು ಶಿಕ್ಷಣ ಪಡೆದಿದ್ದಾರೆ. ಇಲ್ಲೇ ನಮಗೆ ತಿಳಿಯುವುದು ಶಿಕ್ಷಣದಲ್ಲಿ ೧೨೧ ಕೋಟಿಗೂ ಅಧಿಕ ಜನಸಂಖ್ಯೆಯಲ್ಲಿ ಮಹಿಳಾ ಶಿಕ್ಷಣದ ಪ್ರಭಾವ ಹೇಗಿದೆ ಎಂದು. ಐತಿಹಾಸಿಕ,

ಸ್ವಾತಂತ್ರ್ಯ ಹೋರಾಟ, ಪೌರಾಣಿಕ ಇನ್ನಿತರ ಕಥೆಗಳು ಕಾದಂಬರಿಗಳು ಮುಂತಾದವುಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದು ಅದೂ ಸಹ ಕುಟುಂಬದ ನಾಲ್ಕು ಗೋಡೆಗಳ ಮಧ್ಯೆ ಜೀವನ ಸಾಗಿಸಲು ಸೀಮಿತಗೊಳಿಸಿದ್ದಾರೆ. ಕೆಲವೇ ಕೆಲವು ಮಂದಿ ಸಮಾಜದ ಮುಖ್ಯ ವಾಹಿನಿಗೆ ಬರುತ್ತಾರೆ. ಅವರು ಮುಂದುವರಿದು ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಬೆಳವಣಿಗೆ ಹೊಂದಿದ ಕುಟುಂಬಗಳಿಗೆ ಅಥವಾ ಸಮುದಾಯಗಳಿಗೆ ಸೇರಿದವರಾಗಿರುತ್ತಾರೆ.

ಇಂದಿನ ಘನ ಸರ್ಕಾರಗಳು ಎಲ್ಲಾ ವರ್ಗ ಹಾಗೂ ವಿವಿಧ ಕೋಮಿನ ಹೆಣ್ಣುಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದ ಅಧ್ಯಯನದವರೆಗೆ ಯಾವುದೇ ಹೊರೆಯಿಲ್ಲದೆ, ಪ್ರಾಥಮಿಕ ಹಂತದಲ್ಲಿ ಉಚಿತ ಶಿಕ್ಷಣ ಹಾಗೂ ಸಾರ್ವಜನಿಕ ವಸತಿ ವಿದ್ಯಾರ್ಥಿನಿಲಯಗಳು ಸಮವಸ್ತ್ರಗಳು, ಪಠ್ಯಪುಸ್ತಕಗಳು, ವಿದ್ಯಾರ್ಥಿವೇತನ, ಮಧ್ಯಾಹ್ನದ ಬಿಸಿ ಊಟ, ಶೈಕ್ಷಣಿಕ ಪ್ರವಾಸ ಇನ್ನಿತರ ಕಾರ್ಯಕ್ರಮಗಳನ್ನು ಆಧುನಿಕ ಸರ್ಕಾರಗಳು ಹಮ್ಮಿಕೊಂಡಿರುವುದರಿಂದ ಅದೇ ರೀತಿ ಮಾಧ್ಯಮಿಕ ಉನ್ನತ ಶಿಕ್ಷಣಕ್ಕೆ ಹಂತಹಂತವಾಗಿ ಕೆಲವೊಂದು ಯೋಜನೆಗಳನ್ನು ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಮ್ಮಿಕೊಂಡಿರುವುದರಿಂದ ಅವರ ಜೀವನಮಟ್ಟ ನಿರ್ವಹಣೆ ಆರ್ಥಿಕ ಸದೃಢತೆ ಸಾಮಾಜಿಕ ಕಳಕಳಿ, ಬಡತನ, ಅನಕ್ಷರತೆ, ಮೂಢನಂಬಿಕೆಗಳು, ಕಂದಾಚಾರ, ಅನಾರೋಗ್ಯ ಇನ್ನಿತರ ಸಮಸ್ಯೆಗಳ ನಿರ್ಮೂಲನೆಗೆ ಶಿಕ್ಷಣ ಪಡೆಯಬೇಕು. ಈ ಹಿನ್ನೆಲೆಯಲ್ಲಿ ಮಹಿಳೆಯರು ಮತ್ತು ಪುರುಷರ ನಡುವಿನ ಹಲವಾರು ತೊಡಕಿಗೆ ಕಾರಣವಾದ ಅಂಶಗಳನ್ನು ಗಮನಿಸಬಹುದಾಗಿದೆ. ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಶಿಕ್ಷಣ ಗುಣಮಟ್ಟದ ಜೊತೆಗೆ ಅಂಕಿ ಅಂಶಗಳು ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳುವುದರಲ್ಲಿ ಸಾಕ್ಷರತೆಯ ಪ್ರಮಾಣದಲ್ಲಿ ತುಂಬ ವ್ಯತ್ಯಾಸಗಳನ್ನು ಗಮನಿಸಬಹುದಾಗಿದೆ.

ರಾಷ್ಟ್ರದ ಸಂವಿಧಾನದಲ್ಲಿ ಸಾಮರ್ಥ್ಯಕ್ಕೆ ಅನುಸಾರವಾಗಿ ಶಿಕ್ಷಣದ ಹಕ್ಕನ್ನು ನೀಡಿದ್ದು ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಪಾರಂಪರಿಕವಾಗಿ ವ್ಯತ್ಯಾಸವನ್ನು ಕಾಣಬಹುದು. ನಗರ ಹಾಗೂ ಗ್ರಾಮೀಣ ಭಾಗದಲ್ಲಿ ವಿದ್ಯಾವಂತ, ಶ್ರಮವಂತ ಆರ್ಥಿಕ ಸಬಲಕುಟುಂಬಗಳು, ರಾಜಕೀಯ ಹಿನ್ನೆಲೆಯಿಂದ ಬಂದ ಕೆಲವು ಸಮುದಾಯದವರು, ಇನ್ನಿತರ ಸಂಘಸಂಸ್ಥೆಗಳು ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ರೀತಿಯ ಸೇವೆಯಲ್ಲಿ ನಿರತರಾಗಿದ್ದಾರೆ. ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಜಾಥಾಗಳು ಇನ್ನಿತರ ಕಾರ್ಯಕ್ರಮಗಳ ಮೂಲಕ ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿವೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ

ದಾಖಲೆ (ವಿಧಿ) ೪೫ರ ಪ್ರಕಾರ "ನಮ್ಮ ರಾಷ್ಟ್ರದ ೧೪ ವರ್ಷದವರೆಗೆಗಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕು."[೧೨]

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ರಾಷ್ಟ್ರದ ಪ್ರಮುಖ ಯೋಜನೆಯಾಗಿದ್ದು, ನಿರಂತರ ಪ್ರಯತ್ನದಿಂದ ಭಾರತ ಸರ್ಕಾರವು ಕಾರ್ಯರೂಪಕ್ಕೆ ತಂದಿತು. ಈ ಯೋಜನೆಯು ಕೇವಲ

ಶಾಲಾ ವಯಸ್ಸಿನ ಮಕ್ಕಳ ದಾಖಲಾತಿಯಾಗಿರದೆ, ಮಕ್ಕಳಿಗಾಗಿ ಅರ್ಥಪೂರ್ಣವಾದ ಹಾಗೂ ಉಪಯುಕ್ತ ಶಿಕ್ಷಣ ಒದಗಿಸುವಂತಹದ್ದು. ಈ ಸಾಧನೆಯನ್ನು ಶಾಲಾ ಪಠ್ಯಕ್ರಮದಲ್ಲಿ ಪೂರಕ ಕಲಿಕೆಯ ಫಲಿತಾಂಶ, ನಿಯಮಾವಳಿಗಳಲ್ಲಿಯ ಗಣನೀಯ ಬದಲಾವಣೆ ಹಾಗೂ ಬೋಧನಾ ವಿಧಾನವು ಪರಿಪೂರ್ಣ ಸಾಧನೆಗೆ ಸಹಾಯಕವಾಗಿದೆ.

ನಮ್ಮ ದೇಶದ ಪ್ರಾಥಮಿಕ ಶಿಕ್ಷಣ ಪದ್ಧತಿಯು ಏಕರೂಪದ್ದಾಗಿರದೆ ಅದು ಅನೇಕ ಪದ್ಧತಿಯ ಮಿಶ್ರಣವಾಗಿದೆ. ಇವುಗಳಲ್ಲಿ ಕೆಲವು ಶಾಲೆಗಳು ರಾಜ್ಯದ ಪಠ್ಯಕ್ರಮವನ್ನು ಅನುಸರಿಸಿದರೆ ಕೆಲವು ಶಾಲೆಗಳಲ್ಲಿ ಆಂಗ್ಲ ಬೋಧನಾ ಪದ್ಧತಿ ಜಾರಿಯಲ್ಲಿದೆ. ಕೆಲವು ಶಾಲೆಗಳು ಅತಿ ದೂರದ ಗ್ರಾಮದಲ್ಲಿದ್ದು, ಒಬ್ಬರೋ ಇಲ್ಲವೆ ಇಬ್ಬರು ಶಿಕ್ಷಕರನ್ನು ಹೊಂದಿದವುಗಳಾಗಿವೆ. ಈ ರೀತಿಯ ತಾರತಮ್ಯಗಳು ಕೇವಲ ಶಾಲಾ ಬಗೆಗಳಲ್ಲಿ ಆಗಿರದೆ ಶಿಕ್ಷಣ ಪಡೆಯುವ ಮಕ್ಕಳನ್ನೂ ಒಳಗೊಂಡಿದೆ.

ಕೆಲವು ಶಾಲೆಗಳು ಬಾಲಕರಿಗೆ ಸೀಮಿತವಾಗಿದ್ದರೆ, ಕೆಲವು ಕೇವಲ ಹೆಣ್ಣುಮಕ್ಕಳಿಗೆ ಸೀಮಿತವಾಗಿವೆ. ಇನ್ನು ಕೆಲವು ಶಾಲೆಗಳು ಬಾಲಕ ಬಾಲಕಿಯರನ್ನು ಹೊಂದಿವೆ. ಕೆಲವು ಶಾಲೆಗಳಲ್ಲಿ ನಗರ ಪ್ರದೇಶದ ಉನ್ನತ ಕುಟುಂಬ ಮಕ್ಕಳು ದಾಖಲಾದರೆ, ಶಿಕ್ಷಣವೇ ಕಾಣದ ಗ್ರಾಮೀಣ ಕುಟುಂಬದ ಮಕ್ಕಳು ಕೂಡ ದಾಖಲಾಗುತ್ತಾರೆ. ಕೆಲವು ಶಾಲೆಗಳಲ್ಲಿ ಮಧ್ಯಮ ಹಾಗೂ ಹೆಚ್ಚು ಆದಾಯವಿರುವ ಕುಟುಂಬದ ಮಕ್ಕಳು ದಾಖಲಾಗುತ್ತಾರೆ. ಇದರ ಜೊತೆ ಜೊತೆಗೆ ಸಮಾಜದ ತುಳಿತಕ್ಕೆ ಒಳಗಾದ ಕುಟುಂಬದ ಮಕ್ಕಳು ಕೂಡ ಶಾಲೆಗೆ ದಾಖಲಾಗುತ್ತಾರೆ. ಇದರಿಂದ ನಗರದ ಕೊಳಚೆ ಪ್ರದೇಶಗಳಲ್ಲಿ ಕೊಳಚೆ ಶಾಲೆಗಳು, ಬುಡಕಟ್ಟು ಶಾಲೆಗಳನ್ನು ಕುಗ್ರಾಮಗಳಲ್ಲಿ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಎಂದು ವರ್ಗೀಕರಿಸಲಾಗಿದೆ. ಈ ರೀತಿಯ ಹಲವು ವ್ಯತ್ಯಾಸಗಳೆಡೆಗೆ ಬೆಳಕು ಚೆಲ್ಲಿ ಶಾಲೆಗೆ ಹೋಗುವ ಮಕ್ಕಳಲ್ಲಿ ಮೇಲಿನ ವ್ಯತ್ಯಾಸಗಳನ್ನು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವು ತೊಲಗಿಸಬಲ್ಲದೇ? ಒಂದು ವೇಳೆ ಈ ಯೋಜನೆ ನಮ್ಮ ದೇಶದ ಶಾಲಾ ಮಕ್ಕಳಿಗೆ ಸಮಾನ ಶಿಕ್ಷಣ ಸಮಾನ ಅವಕಾಶ ನೀಡಿದಲ್ಲಿ ಸಾರ್ವತ್ರಿಕ ದಾಖಲಾತಿ ಯಲ್ಲಿಯೂ ಪ್ರಗತಿಯನ್ನು ಕಾಣಬಹುದಾಗಿದೆ.

ನಮ್ಮ ರಾಷ್ಟ್ರವು ವಿವಿಧತೆಯಲ್ಲಿ ಏಕತೆ ಮತ್ತು ವೈವಿಧ್ಯತೆಯನ್ನು ಹೊಂದಿದ್ದು, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗದ ಅಭ್ಯುದಯವನ್ನು ಗುರಿಯಾಗಿಟ್ಟುಕೊಂಡು ಯೋಜನಾಬದ್ಧ ಅಭಿವೃದ್ಧಿ ಕಾರ್ಯಕ್ರಮಗಳಿದ್ದರೂ ಸಹ ಕರ್ನಾಟಕದಲ್ಲಿ ಈ ಕಾರ್ಯಗಳ ಅಡಿಯಲ್ಲಿ ಆಗಿರುವ ಪ್ರಗತಿ ಚೇತೋಹಾರಿಯಾಗಿಲ್ಲ. ಪರಿಶಿಷ್ಟ ಪಂಗಡಗಳ ಪ್ರಚಲಿತ ಸಾಕ್ಷರತಾ ಮಟ್ಟ ಮೇಲಿನ ಅಂಶಗಳನ್ನು ಪುಷ್ಟೀಕರಿಸುತ್ತದೆ. ಈ ಬುಡಕಟ್ಟುಗಳ ದೊಡ್ಡ ಭಾಗ ೬೮.೭ ದಶಲಕ್ಷ ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದರೆ, ಕೇವಲ ೧೦ ದಶಲಕ್ಷ ಜನ ಪಟ್ಟಣಗಳಲ್ಲಿ ವಾಸಿಸುತ್ತಿದ್ದಾರೆ. ಬುಡಕಟ್ಟು ಸಮುದಾಯದ ಸಂಖ್ಯೆಯು ಇಡೀ ದೇಶದ ಜನಸಂಖ್ಯೆಯ ಶೇಕಡಾ ೧೧ರಷ್ಟಿದೆ.

ವಿಷಾದನೀಯ ಅಂಶವೇನೆಂದರೆ ೨೦೦೧ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆ ೫,೨೭,೩೩,೯೫೮ ಆಗಿದ್ದು, ಅಕ್ಷರಸ್ಥರ ಸಂಖ್ಯೆ ೧,೫೧, ೩೨,೮೦೨ ಆಗಿರುತ್ತದೆ. ಅಕ್ಷರಸ್ಥರಲ್ಲಿ ಸ್ತ್ರೀಯರು ೯, ೫೯೫,೬೪೦ ಆಗಿದ್ದರೆ, ಪುರುಷರ ಸಂಖ್ಯೆಯು ೫೫, ೩೭, ೧೬೨ ಆಗಿರುತ್ತದೆ. ನಮ್ಮ ರಾಜ್ಯದ ಒಟ್ಟಾರೆ ಅಕ್ಷರಸ್ಥರು ಶೇಕಡಾ ೬೭.೦೪ ಆಗಿರುತ್ತದೆ. ಅದರಲ್ಲಿಯೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಬುಡಕಟ್ಟು ಸಮುದಾಯದ ಶೈಕ್ಷಣಿಕ ಮಟ್ಟ ತೃಪ್ತಿಕರವಾಗಿಲ್ಲ. ಹೆಣ್ಣುಮಕ್ಕಳ ಸಾಕ್ಷರತಾ ಮಟ್ಟ ಶೇಕಡ ೧೮.೯೯ರಷ್ಟಿದೆ. ಸಾಕ್ಷರತೆಯು ಮಾತ್ರ ಪ್ರಗತಿಯನ್ನು ಸಾಧಿಸಲಾರದು. ಶಿಕ್ಷಣವು ಪ್ರಗತಿಯನ್ನು ಸಾಧಿಸಲು ಸಹಾಯಕವಾಗಿದೆ. ಪ್ರತಿ ವ್ಯಕ್ತಿ ಕಲಿಕೆಯಿಂದ ಜ್ಞಾನವನ್ನು ಪಡೆದು ರಾಷ್ಟ್ರದ ಆರ್ಥಿಕ ಸ್ವಾವಲಂಬನೆ ಹಾಗೂ ಪ್ರಗತಿಗೆ ಸಹಾಯವಾಗಬೇಕಿದೆ.

ಶಿಕ್ಷಣವು ತನ್ನದೇ ಆದ ರೂಪರೇಷೆಗಳನ್ನು, ವಿಧಿ ವಿಧಾನಗಳನ್ನು ಒಳಗೊಂಡಿದ್ದು, ವ್ಯಕ್ತಿಗೆ ಜ್ಞಾನ ನೀಡುವಲ್ಲಿ ಫಲಕಾರಿಯಾಗಿದೆ. ಇದರಲ್ಲಿ ಬುಡಕಟ್ಟು ಸಮುದಾಯದ ಅವಶ್ಯಕತೆಗಳು ಒಳಗೊಂಡಿದ್ದರೂ ಆರ್ಥಿಕ, ಸಾಮಾಜಿಕ ಕಾರಣಗಳಿಂದ ಈ ವರ್ಗವು ಇನ್ನೂ ಹಿಂದುಳಿದಿದೆ. ಬುಡಕಟ್ಟು ಸಮುದಾಯದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಭಾರತ ಸರ್ಕಾರ "ಸರ್ವತೋಮುಖ ಅಭಿವೃದ್ಧಿ" ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಉದ್ದೇಶವನ್ನು ಈಡೇರಿಸಲು ವಿಶೇಷ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದೆ.

ಭಾರತ ಸಂವಿಧಾನದ ಕಾಲಂ ೪೬ರ ಪ್ರಕಾರ "ಹಿಂದುಳಿದ ವರ್ಗಗಳ ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿಗೆ ವಿಶೇಷ ಜಾಗೃತಿ ವಹಿಸುವುದು, ಅದರಲ್ಲಿ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಾಮಾಜಿಕ ಅಂಧಕಾರ ಹಾಗೂ ಸಾಮಾಜಿಕ ಪಿಡುಗುಗಳಿಂದ ರಕ್ಷಿಸುವುದೇ ಆಗಿದೆ."[೧೩] ಶಿಕ್ಷಣದ ಈ ಎಲ್ಲಾ ಯೋಜನೆಗಳು ಪರಿಶಿಷ್ಟ ಪಂಗಡದ ಕೇವಲ ಆರ್ಥಿಕ ಸ್ವಾವಲಂಬನೆ ಸಾಧಿಸುವುದು ಆಗಿರದೆ, ಬುಡಕಟ್ಟು ಸಮುದಾಯದ ಆಂತರಿಕ ಶಕ್ತಿಯನ್ನು ಬೆಳೆಸುವುದು ಆಗಿದೆ.

ಸರ್ವರಿಗೂ ಸಮಾನ ಶಿಕ್ಷಣ

ಈ ವಿಷಯವು ಈಗಾಗಲೇ ತಿಳಿಸಿದ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಸಮಸ್ಯೆಯಾಗಿದ್ದು, ಮಗು ವಿವಿಧ ಬಗೆಯ ಶಾಲೆಗಳಿಂದ ಕಲಿತ ಪ್ರತಿಫಲವಾಗಿದ್ದಾನೆ. ಎಲ್ಲಾ ಬಗೆಯ ಶಾಲೆಗಳು ಕೇವಲ ಮೂಲಭೂತ ಸಮಾನ ಅಂಶಗಳನ್ನು ಹೊಂದಿವೆಯೋ ಎಂಬುದನ್ನು ತಿಳಿಸುತ್ತವೆ. ಇದು ಸಾರ್ವತ್ರೀಕರಣಕ್ಕೆ ತೆಗೆದುಕೊಂಡು ಹೋಗುತ್ತದೆ. ಸರ್ವರಿಗೂ ಸಮಾನ ಶಿಕ್ಷಣ ಎಂದರೆ ದೇಶದ ಪ್ರತಿ ಮೂಲೆ ಮೂಲೆಯಲ್ಲಿ ಶಾಲೆಗಳನ್ನು ತೆಗೆಯುವುದು ಎಂದರ್ಥವಾಗಿರದೆ ಮಕ್ಕಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದೂ ಆಗಿದೆ. ಇದರ ಅನ್ವಯ ಪ್ರಾಥಮಿಕ ಶಾಲಾ ಹಂತದಲ್ಲಿ ಈ ಮೇಲಿನ ಅಂಶವನ್ನು ಈಡೇರಿಸಲು ರಾಷ್ಟ್ರ ಕೆಲವು ಮೂಲ ಉದ್ದೇಶಗಳನ್ನು ಹಂತ ಹಂತ

ರೀತಿಯಲ್ಲಿ ರೂಪಿಸಲಾಯಿತು. ಶಿಕ್ಷಣದ ಸಾರ್ವತ್ರೀಕರಣಕ್ಕೆ ಕನಿಷ್ಠ ಮಟ್ಟಗಳನ್ನು ಅಳವಡಿಸಿ, ಮಕ್ಕಳ ಸಾಧನೆಯ ಆಧಾರದ ಮೇಲೆ ನಿರ್ಧರಿಸಲಾಯಿತು.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ

ಹಿನ್ನೆಲೆ: ಪ್ರಜಾಪ್ರಭುತ್ವದ ಯಶಸ್ಸಿಗೆ ಶಿಕ್ಷಣ ಅತ್ಯವಶ್ಯಕ. ಸಂವಿಧಾನದ ನಿರ್ದೇಶಕ ತತ್ವಗಳ ರೀತ್ಯಾ ೬–೧೪ ವಯೋಮಿತಿಯ ಎಲ್ಲಾ ಮಕ್ಕಳಿಗೆ ಸಾಕಷ್ಟು ಶಿಕ್ಷಣ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿ ೧೯೯೨ರಲ್ಲಿ ಪುನರ್‌ವಿಮರ್ಶಿಸಲ್ಪಟ್ಟಿತು. ಅಲ್ಲದೆ ಇದರ ಅನುಷ್ಠಾನಕ್ಕಾಗಿ ೧೯೯೨ರಲ್ಲಿ ಕ್ರಿಯಾ ಯೋಜನೆ ರೂಪಿಸಲಾಯಿತು. ಅದರಂತೆ ಕ್ರಿ.ಶ. ೨೦೦೦ದ ವೇಳೆಗೆ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ ಮಕ್ಕಳ ಕಲಿಕೆಯ ಗುಣಮಟ್ಟವನ್ನು ಉತ್ತಮ ಪಡಿಸುವುದು ನಮ್ಮ ಮುಂದಿರುವ ಗುರಿ. ಈ ಗುರಿ ಸಾಧನೆಗಾಗಿ ಹಮ್ಮಿಕೊಳ್ಳಲಾದ ವಿಶಿಷ್ಟ ಯೋಜನೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ).

ಯೋಜನಾ ಪೂರ್ವದಲ್ಲಿ,

೧. ಪ್ರಾಥಮಿಕ ಶಾಲೆಗಳ ಆಂತರಿಕ ಮತ್ತು ಬಾಹ್ಯ ಗುಣಮಟ್ಟ

೨. ಹೆಣ್ಣುಮಕ್ಕಳ ಶಿಕ್ಷಣ

೩. ಗಿರಿಜನರ ಶಿಕ್ಷಣ

೪. ಶಿಕ್ಷಕ ತರಬೇತಿಯ ಗುಣಮಟ್ಟ

೫. ಪಠ್ಯ ಪುಸ್ತಕಗಳ ವಿನ್ಯಾಸ ಮತ್ತು ಗುಣಮಟ್ಟ

ಈ ವಿಷಯಗಳ ಬಗ್ಗೆ ಅಧ್ಯಯನವನ್ನು ಕೈಗೊಳ್ಳಲಾಯಿತು. ಈ ಅಧ್ಯಯನಗಳ ಆಧಾರದ ಮೇಲೆ ವಿಶ್ವ ಬ್ಯಾಂಕಿನ ಸಾಲದ ನೆರವಿನಿಂದ ೧೯೯೪–೯೫ನೇ ಸಾಲಿನಲ್ಲಿ ರಾಷ್ಟ್ರದ ೭ ಪ್ರಾಂತ್ಯಗಳ ೪೨ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು.

ಕರ್ನಾಟಕ ರಾಜ್ಯ: ವಿಶ್ವಬ್ಯಾಂಕ್ ನೆರವಿನಿಂದ ಕೇಂದ್ರ ಪುರಸ್ಕೃತ ಯೋಜನೆಯಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಕರ್ನಾಟಕ ರಾಜ್ಯದ ಕೋಲಾರ, ಮಂಡ್ಯ, ರಾಯಚೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ೧ನೇ ಹಂತದಲ್ಲಿ ಹಾಗೂ ಬಳ್ಳಾರಿ, ಬೀದರ್, ಬಿಜಾಪುರ, ಧಾರವಾಡ, ಕಲಬುರ್ಗಿ(ಗುಲ್ಬರ್ಗಾ), ಬೆಂಗಳೂರು ಗ್ರಾಮಾಂತರ ಮತ್ತು ಮೈಸೂರು ಜಿಲ್ಲೆಗಳಲ್ಲಿ ೨ನೇ ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ ಹಾಗೂ ಮಹಿಳಾ ಸಾಕ್ಷರತೆ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವ ಆಧಾರದ ಮೇಲೆ ಈ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಸಂಪೂರ್ಣ ಸಾಕ್ಷರತಾ ಆಂದೋಲನವು ಮುಕ್ತಾಯದ ಹಂತಕ್ಕೆ ಬಂದಿದ್ದು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಬೇಡಿಕೆ

ಉಂಟಾಗಿದ್ದು ಈ ಜಿಲ್ಲೆಗಳ ಆಯ್ಕೆಗೆ ಇರುವ ಇನ್ನೊಂದು ಕಾರಣ. ಮೊದಲ ಹಂತದ ನಾಲ್ಕು ಜಿಲ್ಲೆಗಳಲ್ಲಿ ೧೯೯೪ ಜನವರಿ ೨೬ರಿಂದ ಸಾಂಕೇತಿಕವಾಗಿ ಯೋಜನೆ ಪ್ರಾರಂಭಗೊಂಡಿರುತ್ತದೆ. ೨ನೇ ಹಂತದ ಏಳು ಜಿಲ್ಲೆಗಳಲ್ಲಿ ೧೯೯೭ರ ಅಕ್ಟೋಬರ್‌ನಿಂದ ಯೋಜನೆ ಜಾರಿಗೆ ಬಂದಿರುತ್ತದೆ.

ಯೋಜನೆಯ ಪ್ರಮುಖ ಧ್ಯೇಯೋದ್ದೇಶಗಳು

ಸಾಮಾಜಿಕ ವರ್ಗೀಕರಣ ಹಾಗೂ ಲಿಂಗಭೇದ ಕಾರಣಗಳಿಂದಾಗಿ ಶಾಲಾ ದಾಖಲಾತಿ ಮತ್ತು ಕಲಿಕಾ ಸಾಧನೆಯಲ್ಲಿ ವಿವಿಧ ಮಕ್ಕಳ ನಡುವೆ ಇರುವ ಅಂತರವನ್ನು ಹಾಗೂ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಶೇಕಡಾ ೫ಕ್ಕಿಂತ ಕಡಿಮೆಗೊಳಿಸುವುದು.

- ಭಾಷೆ ಹಾಗೂ ಗಣಿತ ವಿಷಯಗಳಲ್ಲಿ ಕಲಿಕಾ ಮಟ್ಟವನ್ನು ಮೌಲ್ಯಾಂಕಾಧಾರಿತ ಮಟ್ಟದಿಂದ ಶೇಕಡಾ ೨೫ರಷ್ಟು ಹೆಚ್ಚಿಸುವುದು. ಇತರೆ ವಿಷಯಗಳಲ್ಲಿ ಪ್ರಾಥಮಿಕ ಶಾಲೆಯ ಎಲ್ಲಾ ಮಕ್ಕಳ ಕನಿಷ್ಠ ಕಲಿಕಾ ಸಾಮರ್ಥ್ಯವನ್ನು ಶೇಕಡಾ ೪೦ಕ್ಕಿಂತ ಹೆಚ್ಚು ಮಾಡುವುದು.
- ಪ್ರಾಥಮಿಕ ಹಂತದಲ್ಲಿ ಶಾಲೆ ತೊರೆಯುವ ಮಕ್ಕಳ ಒಟ್ಟಾರೆ ಪ್ರಮಾಣವನ್ನು ಶೇಕಡಾ ೧೦ಕ್ಕಿಂತ ಕಡಿಮೆಗೊಳಿಸುವುದು.
- ರಾಷ್ಟ್ರೀಯ ನಿಗದಿತ ಪ್ರಮಾಣದಲ್ಲಿ ಎಲ್ಲಾ ಮಕ್ಕಳಿಗೂ ೧ರಿಂದ ೪ನೇ ತರಗತಿವರೆಗೆ ಉತ್ತಮ ಶಾಲಾ ಸೌಲಭ್ಯ ಅಥವಾ ತತ್ಸಮಾನವಾದ ಅನೌಪಚಾರಿಕ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು.
- ಪ್ರಾಥಮಿಕ ಶಿಕ್ಷಣವನ್ನು ಪುನರ್ ನಿರ್ಮಾಣ ಮಾಡುವ ಉದ್ದೇಶದಿಂದ ಬಿಡಿ ಬಿಡಿಯಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬದಲು ಆಯ್ದ ಜಿಲ್ಲೆಗಳಲ್ಲಿ ಸಮಗ್ರವಾದ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿದೆ.

ಯೋಜನೆಯ ವೈಶಿಷ್ಟ್ಯಗಳು

- ಜಿಲ್ಲಾ ಪ್ರಾಥಮಿಕ ಯೋಜನೆಯು ಕೇವಲ ಹಣವನ್ನು ವೆಚ್ಚ ಮಾಡುವ ಯೋಜನೆಯಾಗಿರುವುದಿಲ್ಲ. ಬದಲಿಗೆ ಅದು ನಿಗದಿತ ಗುರಿ ಸಾಧನೆಯ ದಿಕ್ಕಿನಲ್ಲಿ ಧೃಡ ನಿರ್ಧಾರದಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿಶಿಷ್ಟ ಯೋಜನೆಯಾಗಿದೆ.
- ಇದು ನಿಗದಿತ ಹಣಕ್ಕೆ ರೂಪಿಸಿದ ಯೋಜನೆಯಲ್ಲ. ರೂಪಿಸಲಾದ ಯೋಜನೆಗೆ ಅನುಗುಣವಾಗಿ ಹಣವನ್ನು ನಿಗದಿಪಡಿಸುವ ಯೋಜನೆ.
- ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಯು ರಾಜ್ಯಮಟ್ಟದ ಆಯ-ವ್ಯಯ ಪುಸ್ತಕದಿಂದ ಆಯ್ದ ಜಿಲ್ಲೆಗಳ ಮೇಲೆ ಹೇರಲಾದ ಅಥವಾ ಹೊರಗಿನಿಂದ ಆಮದು ಮಾಡಿಕೊಳ್ಳಲಾದ ಯೋಜನೆಯಲ್ಲ. ಇದು ಸ್ಥಳೀಯರು ಭಾಗವಹಿಸುವ ಮೂಲಕ ಜಿಲ್ಲಾ ಮಟ್ಟದಲ್ಲಿಯೇ ತಯಾರಿಸಲಾದ ಯೋಜನೆಯಾಗಿರುತ್ತದೆ.

- ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಯು ನಾಲ್ಕು ಗೋಡೆಗಳಿಗೆ ಸೀಮಿತವಾದ ಯೋಜನೆಯಲ್ಲ. ರಾಜ್ಯದಲ್ಲಿ ಹಾಗೂ ಹೊರ ರಾಜ್ಯಗಳ ವಿವಿಧ ಜಿಲ್ಲೆಗಳಲ್ಲಿನ ಉತ್ತಮ ಅಂಶಗಳ ವಿನಿಮಯಕ್ಕೆ ಇಲ್ಲಿ ಅವಕಾಶವಿದೆ.
- ಯೋಜನೆಯ ತಯಾರಿ ಮತ್ತು ಪ್ರಸ್ತುತಪಡಿಸುವಿಕೆಯಲ್ಲಿ ವೃತ್ತಿ ಪ್ರಾವೀಣ್ಯತೆಗೆ ಒತ್ತು ಕೊಡಲಾಗಿದೆ.
- ಜಿಲ್ಲೆಗಳ ಆಯ್ಕೆಯಲ್ಲಿ ಸೂಕ್ತ ಮಾನದಂಡವನ್ನು(ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ, ಮಹಿಳಾ ಸಾಕ್ಷರತೆ, ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವುದು ಹಾಗೂ ಸಂಪೂರ್ಣ ಸಾಕ್ಷರತಾ ಆಂದೋಲನದ ಫಲವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಬೇಡಿಕೆ ಹೆಚ್ಚಿರುವುದು) ಅನುಸರಿಸಲಾಗಿದೆ.
- ಪ್ರಾಥಮಿಕ ಶಿಕ್ಷಣದೊಡನೆ ಇತರೆ ಸೇವೆಗಳಾದ ಸಮಗ್ರ ಬಾಲ ವಿಕಾಸ ಯೋಜನೆ, ಆರೋಗ್ಯ ಸೇವೆಗಳನ್ನು ಹತ್ತಿರ ತರಲು ಒತ್ತು ಕೊಡಲಾಗಿದೆ.
- ಯೋಜನೆಯ ಅನುಷ್ಠಾನದಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ.
- ಅನೌಪಚಾರಿಕ ಶಿಕ್ಷಣಕ್ಕೆ ಒತ್ತು ಕೊಡಲಾಗಿದೆ.
- ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಯೋಜನೆಗಳ ತಯಾರಿ, ಅನುಷ್ಠಾನ, ಆಡಳಿತ ನಿರ್ವಹಣೆ, ಮೌಲ್ಯಮಾಪನ ಮುಂತಾದ ಕಾರ್ಯಗಳಲ್ಲಿ ತೊಡಗಿರುವ ಜಿಲ್ಲಾಮಟ್ಟದ, ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಸಂಸ್ಥೆಗಳ ಸಾಮರ್ಥ್ಯವನ್ನು ಉತ್ತಮ ಪಡಿಸುವುದಕ್ಕೆ ಆದ್ಯತೆ ಕೊಡಲಾಗಿದೆ.
- ಯೋಜನೆಯ ಒಟ್ಟು ವೆಚ್ಚದ ಶೇ. ೭೦ರಷ್ಟು ಅಂಶವನ್ನು ಶೈಕ್ಷಣಿಕವಾದ ಉದ್ದೇಶಗಳಿಗೆ ನಿಗದಿ ಮಾಡಲಾಗಿದೆ.

ಯೋಜಿತ ಕಾರ್ಯ ಚಟುವಟಿಕೆಗಳು

- ಶಾಲಾ ಸೌಲಭ್ಯಗಳಿಲ್ಲದ ಗ್ರಾಮ ಹಾಗೂ ವಸತಿ ಪ್ರದೇಶದಲ್ಲಿ ಹೊಸದಾಗಿ ಶಾಲೆಗಳನ್ನು ತೆರೆದು ಶಿಕ್ಷಕರನ್ನು ನೇಮಕ ಮಾಡುವುದು ಹಾಗೂ ಶಾಲಾ ಕಟ್ಟಡಗಳ ನಿರ್ಮಾಣ.
- ಹಾಲಿ ಇರುವ ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಹಾಗೂ ಕಟ್ಟಡಗಳಿಗೆ ದೊಡ್ಡ ಪ್ರಮಾಣದ ದುರಸ್ಥಿ ಕಾರ್ಯ.
- ಸಾಧ್ಯವಾದ ಎಲ್ಲಾ ಕಡೆ ಕುಡಿಯುವ ನೀರು, ಶೌಚಾಲಯ ಮುಂತಾದ ಸೌಲಭ್ಯಗಳನ್ನು ಆದ್ಯತೆ ಮೇರೆಗೆ ಒದಗಿಸುವುದು.
- ಹೊಸ ಶಾಲೆಗಳಿಗೆ ಹಾಗೂ ಹಾಲಿ ಇರುವ ಎಲ್ಲಾ ಶಾಲೆಗಳಿಗೆ ಬೋಧನಾ ಕಲಿಕಾ ಉಪಕರಣಗಳನ್ನು ಒದಗಿಸುವುದು.

- ಮಕ್ಕಳಿಗೆ ಪೂರಕ ವಾಚನ ಪುಸ್ತಕಗಳು, ಅಭ್ಯಾಸ ಪುಸ್ತಕಗಳು ಮತ್ತು ಶಿಕ್ಷಕರ ಕೈಪಿಡಿಗಳ ರಚನೆ, ಮುದ್ರಣ ಹಾಗೂ ಸರಬರಾಜು.
- ಗ್ರಾಮ ಶಿಕ್ಷಣ ಸಮಿತಿ, ಸ್ಥಳೀಯ ಶಿಕ್ಷಣ ಸಮಿತಿ ಹಾಗೂ ಮಾತೆ ಶಿಕ್ಷಕಿ ಸಂಘಗಳ ಸ್ಥಾಪನೆ ಹಾಗೂ ತರಬೇತಿ, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯನ್ನು ಬಲಪಡಿಸುವುದು.
- ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಕರಿಗೆ ನಿರಂತರವಾಗಿ ಸೇವಾ ನಿರತ ತರಬೇತಿ ವ್ಯವಸ್ಥೆ ಮಾಡುವುದು.
- ಜಿಲ್ಲಾಮಟ್ಟ ಹಾಗೂ ರಾಜ್ಯಮಟ್ಟದಲ್ಲಿ ಶೈಕ್ಷಣಿಕ ಮಾಹಿತಿ ಗಣಕೀಕರಣ ವ್ಯವಸ್ಥೆ ಮಾಡುವುದು.
- ಶೈಕ್ಷಣಿಕ ಆಡಳಿತಗಾರರು ಹಾಗೂ ಮೇಲ್ವಿಚಾರಕ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡುವುದು.

ಆಡಳಿತ ವ್ಯವಸ್ಥೆ: ಯೋಜನೆಯ ಅನುಷ್ಠಾನದಲ್ಲಿ ಹೆಚ್ಚಿನ ಸ್ವಾಯತ್ತತೆಯನ್ನು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರವು ಕರ್ನಾಟಕ ಪ್ರಾಥಮಿಕ ಶಿಕ್ಷಣ ವಿಕಾಸ ಯೋಜನಾ ಸಮಿತಿ ಎಂಬ ಸಂಸ್ಥೆ (ಸೊಸೈಟಿ)ಯನ್ನು ಸ್ಥಾಪಿಸಿದೆ. ಈ ಸಂಸ್ಥೆಯನ್ನು ಸಂಘ ಸಂಸ್ಥೆಗಳ ನೋಂದಣಿ ಕಾಯಿದೆ ಅನುಸಾರವಾಗಿ ನೊಂದಾಯಿಸಲಾಗಿದೆ. ನಿರ್ವಹಣಾ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿ ಸಂಸ್ಥೆಯು ಎರಡು ಪ್ರಮುಖ ಅಂಗಗಳಾಗಿವೆ.

ನಿರ್ವಹಣಾ ಮಂಡಳಿ: ಯೋಜನೆಯ ಅನುಷ್ಠಾನದಲ್ಲಿ ಉನ್ನತಾಧಿಕಾರವುಳ್ಳ ಈ ಸಮಿತಿಗೆ ರಾಜ್ಯದ ಮುಖ್ಯಮಂತ್ರಿಯವರು, ಅಧ್ಯಕ್ಷರು, ಪ್ರಾಥಮಿಕ ಶಿಕ್ಷಣ ಸಚಿವರು, ಉಪಾಧ್ಯಕ್ಷರು, ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು, ಭಾರತ ಸರ್ಕಾರದ ಪ್ರತಿನಿಧಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಈ ಸಮಿತಿಯು ವರ್ಷಕ್ಕೊಮ್ಮೆ ಸಭೆ ಸೇರಿ ಪ್ರಮುಖವಾದ ನೀತಿ ನಿರ್ಣಯಗಳನ್ನು ಕೈಗೊಳ್ಳುವುದು.

ಕಾರ್ಯಕಾರಿ ಸಮಿತಿ: ಯೋಜನೆಯ ಅನುಷ್ಠಾನಕ್ಕೆ ಅಗತ್ಯವೆನಿಸಿದ ಆಡಳಿತಾತ್ಮಕ ವ್ಯವಹಾರವನ್ನು ನಿಯಂತ್ರಿಸುವ ಸಮಿತಿ ಇದಾಗಿರುತ್ತದೆ. ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು/ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇದರ ಅಧ್ಯಕ್ಷರು. ಶಿಕ್ಷಣ ತಜ್ಞರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ಭಾರತ ಸರ್ಕಾರದ ಪ್ರತಿನಿಧಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಹಾಗೂ ಶಿಕ್ಷಕರ ಸಂಘದ ಪ್ರತಿನಿಧಿಗಳು ಸದಸ್ಯರಾಗಿರುವ ಈ ಸಮಿತಿಯು ಮೂರು ತಿಂಗಳಿಗೊಮ್ಮೆ ಅಥವಾ ಅಗತ್ಯವೆನಿಸಿದಾಗ ಸಭೆ ಸೇರುವುದು. ರಾಜ್ಯ ಯೋಜನಾ ನಿರ್ದೇಶಕರು ಮೇಲ್ಕಂಡ ಎರಡೂ ಸಮಿತಿಯ ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

ರಾಜ್ಯ ಯೋಜನಾ ನಿರ್ದೇಶನಾಲಯ

ಭಾರತೀಯ ಆಡಳಿತ ಸೇವೆಯ ಪೂರ್ಣ ಕಾಲಿಕಾ ಯೋಜನಾ ನಿರ್ದೇಶಕರು ಮುಖ್ಯಸ್ಥರಾಗಿರುವ ಈ ನಿರ್ದೇಶನಾಲಯವು ಯೋಜನೆಗಳ ತಯಾರಿ, ಅನುಷ್ಠಾನ, ನಿಯತ ಕಾಲಿಕ ವರದಿಗಳ ಸಲ್ಲಿಕೆ, ಜಿಲ್ಲೆಗಳಿಗೆ ಮಾರ್ಗದರ್ಶನ ಮುಂತಾದ ದಿನನಿತ್ಯದ ಆಡಳಿತ ವ್ಯವಹಾರಗಳನ್ನು ನಿರ್ವಹಿಸುತ್ತದೆ.

ಜಿಲ್ಲಾ ಅನುಷ್ಠಾನ ಸಮಿತಿ: ಯೋಜನಾ ವ್ಯಾಪ್ತಿಯ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಅನುಷ್ಠಾನ ಸಮಿತಿಗಳನ್ನು ರಚಿಸಲಾಗಿದೆ. ಜಿಲ್ಲಾಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ಸದಸ್ಯ ಕಾರ್ಯದರ್ಶಿ ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯ ಅಧಿಕಾರಿಯಾಗಿರುತ್ತಾರೆ. ಇತರೆ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿಯ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರು, ಶಿಕ್ಷಕರ ಸಂಘದ ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ವಾರ್ಷಿಕ ಕ್ರಿಯಾ ಯೋಜನೆಗಳ ತಯಾರಿ ಹಾಗೂ ಅನುಷ್ಠಾನ ಈ ಸಮಿತಿಯ ಜವಾಬ್ದಾರಿಯಾಗಿರುತ್ತದೆ.

ತಾಲೂಕು ಅನುಷ್ಠಾನ ಸಮಿತಿ : ತಾಲ್ಲೂಕು ಮಟ್ಟದಲ್ಲಿ ಯೋಜನೆಯ ಅನುಷ್ಠಾನವನ್ನು ಈ ಸಮಿತಿ ನೋಡಿಕೊಳ್ಳುತ್ತದೆ. ಕ್ಷೇತ್ರ ಶಿಕ್ಷಣಾಧಿಕಾರಿ ಅಧ್ಯಕ್ಷರಾಗಿಯೂ, ಸಹಾಯಕ ಶಿಕ್ಷಣಾಧಿಕಾರಿ ಸಂಚಾಲಕರಾಗಿಯೂ ಇರುವ ಈ ಸಮಿತಿಯಲ್ಲಿ ಶಿಕ್ಷಕರ ಸಂಘದ ಪ್ರತಿನಿಧಿ, ಇನ್ನಿತರ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರಾಗಿರುತ್ತಾರೆ.

ಗ್ರಾಮ ಶಿಕ್ಷಣ ಸಮಿತಿ/ಸ್ಥಳೀಯ ಶಿಕ್ಷಣ ಸಮಿತಿ : ಗ್ರಾಮ ಮಟ್ಟದಲ್ಲಿ ಶಾಲೆಯ ಆಡಳಿತ ವ್ಯವಸ್ಥೆಯನ್ನು ನೋಡಿ ಕೊಳ್ಳಲು ಗ್ರಾಮ ಶಿಕ್ಷಣ ಸಮಿತಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸ್ಥಳೀಯ ಶಿಕ್ಷಣ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಆ ಗ್ರಾಮದಲ್ಲಿ ವಾಸವಾಗಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷ/ ಸದಸ್ಯರು ಈ ಸಮಿತಿಯ ಅಧ್ಯಕ್ಷರು, ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ. ೭ ರಿಂದ ೧೫ ಜನ ಸದಸ್ಯರಿರುವ ಈ ಸಮಿತಿಯಲ್ಲಿ ಕನಿಷ್ಠ ಮೂರನೇ ಒಂದು ಭಾಗ ಮಹಿಳೆಯರಿರುತ್ತಾರೆ. ಪರಿಶಿಷ್ಟ ಜಾತಿ/ವರ್ಗ, ಶಿಕ್ಷಣಾಸಕ್ತರು, ಅಲ್ಪಸಂಖ್ಯಾತರು ಮತ್ತಿತರ ವರ್ಗಗಳ ಸದಸ್ಯರಿರುತ್ತಾರೆ. ಶಾಲೆಗೆ ಸರ್ಕಾರದಿಂದ ಬರುವ ಅನುದಾನ ಹಾಗೂ ಸ್ಥಳೀಯವಾಗಿ ಸಂಗ್ರಹಿಸಲಾಗುವ ವಂತಿಗೆಯ ನಿರ್ವಹಣೆ, ದಾಖಲಾತಿಯನ್ನು ಉತ್ತಮಪಡಿಸುವುದು ಮತ್ತಿತರ ಶಾಲಾಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆ ಈ ಸಮಿತಿಯ ಕರ್ತವ್ಯವಾಗಿರುತ್ತದೆ.

ಹಣಕಾಸು-ವೆಚ್ಚದ ಪರಿಮಿತಿಗಳು

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಗಾಗಿ ಭಾರತ ಸರ್ಕಾರವು ವಿಶ್ವಬ್ಯಾಂಕಿನಿಂದ ಪಡೆದ ಸಾಲದ ನೆರವಿನಿಂದ ರಾಜ್ಯದ ಸೊಸೈಟಿಗೆ ಒಟ್ಟು ವೆಚ್ಚದ ಶೇಕಡ ೮೫ರಷ್ಟನ್ನು ಅನುದಾನವನ್ನು

ನೀಡುತ್ತದೆ. ಉಳಿದ ಶೇಕಡ ೧೫ರಷ್ಟನ್ನು ರಾಜ್ಯ ಸರ್ಕಾರದಿಂದ ಭರಿಸಬೇಕಾಗುತ್ತದೆ. ಇದನ್ನು ಗಣನೆಗೆ ತೆಗೆದುಕೊಳ್ಳದೇ ರಾಜ್ಯಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕಾಗಿ ೧೯೯೧-೯೨ನೇ ಸಾಲಿನಲ್ಲಿ ಮಾಡಿದ ವೆಚ್ಚವನ್ನು ಕನಿಷ್ಠವಾಗಿ ಮುಂದುವರೆಸಿಕೊಂಡು ಹೋಗಬೇಕೆಂಬ ಕಟ್ಟಳೆ ಇದೆ. ಯೋಜನಾ ಅವಧಿಯ ನಂತರ ಪುನರಾವರ್ತನೆಯಾಗುವ ವೆಚ್ಚಗಳ ಋಣಭಾರವನ್ನು ರಾಜ್ಯ ಸರ್ಕಾರವು ವಹಿಸಿಕೊಳ್ಳಬೇಕಾಗುತ್ತದೆ.

ಜಿಲ್ಲೆಗಳಿಗೆ ಮಂಜೂರಾಗುವ ಯೋಜನಾ ಮೊತ್ತವು ಏಕ ರೂಪವಾಗಿರಬೇಕೆಂಬ ನಿಬಂಧನೆಯಿಲ್ಲ. ಜಿಲ್ಲಾ ಯೋಜನೆಗಳ ಗಾತ್ರ ಹಾಗೂ ಅಗತ್ಯತೆಗಳಿಗನುಗುಣವಾಗಿ ಮತ್ತು ಅವಶ್ಯಕತೆಗಳ ಪ್ರತಿಪಾದನೆಯ ಆಧಾರದ ಮೇಲೆ ಜಿಲ್ಲೆಗಳಿಗೆ ಹಣವನ್ನು ಮಂಜೂರು ಮಾಡಲಾಗುತ್ತದೆ. ಈ ಮಂಜೂರಾತಿಯು ಒಂದು ಜಿಲ್ಲೆಗೆ ಗರಿಷ್ಠ ೩೦-೪೦ ಕೋಟಿ ರೂಪಾಯಿಗಳವರೆಗೂ ಇರಬಹುದಾಗಿದೆ. ಒಟ್ಟು ಯೋಜನಾ ವೆಚ್ಚದಲ್ಲಿ ಕಟ್ಟಡ ನಿರ್ಮಾಣಕ್ಕೆ ಶೇ. ೨೪, ಆಡಳಿತ ವೆಚ್ಚ ಶೇ. ೬ ಎಂಬುದಾಗಿ ಮಿತಿಗೊಳಿಸಿ ಉಳಿದ ಸುಮಾರು ಶೇ. ೭೦ರಷ್ಟು ಹಣವನ್ನು ಶೈಕ್ಷಣಿಕ ಉದ್ದೇಶಗಳಿಗೆ ಖರ್ಚು ಮಾಡಬೇಕೆಂಬ ನಿಬಂಧನೆ ಇದೆ.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಮೂಲಕ ರಾಜ್ಯಕ್ಕೆ ಸಂದಾಯವಾಗಬೇಕಾದ ಅನುದಾನದ ಮೊತ್ತವು ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ಪ್ರಾಥಮಿಕ ಶಿಕ್ಷಣ ವಿಕಾಸ ಯೋಜನಾ ಸಮಿತಿ ಎಂಬ ನೊಂದಾಯಿತ ಸಂಸ್ಥೆಗೆ ಬಿಡುಗಡೆಯಾಗುತ್ತದೆ. ರಾಜ್ಯ ಸಮಿತಿಯಿಂದ ಜಿಲ್ಲೆಗಳ ಅಗತ್ಯಕ್ಕನುಗುಣವಾಗಿ ಜಿಲ್ಲಾ ಅನುಷ್ಠಾನ ಸಮಿತಿಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ವಿವಿಧ ಕಾರ್ಯಕ್ರಮಗಳು

೧. ಶಾಲಾ ಸೌಲಭ್ಯ ಒದಗಿಸುವುದು

೧. ಹೊಸ ಶಾಲೆಗಳನ್ನು ಪ್ರಾರಂಭಿಸುವುದು, ಶಾಲಾ ಕಟ್ಟಡ ನಿರ್ಮಾಣ, ಶೌಚಾಲಯ ನಿರ್ಮಾಣ ಮತ್ತು ನೀರಿನ ಸೌಲಭ್ಯ ಒದಗಿಸುವುದು.

❖ ಕನಿಷ್ಠ ೨೦೦ ಜನಸಂಖ್ಯೆ ಹೊಂದಿದ್ದು ಸುಮಾರು ೨೦ ವಿದ್ಯಾರ್ಥಿಗಳು ದೊರೆಯುವ ಶಾಲೆಗಳು ಇಲ್ಲದ ಹಳ್ಳಿಗಳು ಮತ್ತು ಜನವಸತಿ ಸ್ಥಳಗಳಲ್ಲಿ ಯೋಜನೆಯ ವತಿಯಿಂದ ಹೊಸದಾಗಿ ಶಾಲೆಗಳನ್ನು ತೆರೆದು ಶಿಕ್ಷಕರ ನೇಮಕಾತಿ ಮಾಡಿ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲಾಗುವುದು.

❖ ಇಂತಹ ಸ್ಥಳಗಳನ್ನು ಗುರುತಿಸುವ ಜವಾಬ್ದಾರಿಯು ಕ್ಷೇತ್ರ ಶಿಕ್ಷಣಾಧಿಕಾರಿ(ಬಿಇಒ) ಅವರದ್ದಾಗಿರುತ್ತದೆ.

❖ ಸ್ಥಳವನ್ನು ಗುರುತಿಸುವಾಗ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ಪಂಗಡದ ವಿದ್ಯಾರ್ಥಿಗಳು ಜಾಸ್ತಿ ಇರುವ ಹಾಗೂ ಶಾಲೆಗೆ ಬರಬೇಕಾದ ಹೆಣ್ಣು ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಪ್ರಾತಿನಿಧ್ಯ ನೀಡಲಾಗುವುದು.

❖ ಈ ಸ್ಥಳಗಳನ್ನು ಜಿಲ್ಲಾ ಅನುಷ್ಠಾನ ಸಮಿತಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು.

❖ ಪ್ರತಿಯೊಂದು ಶಾಲೆಗೆ ಪ್ರಥಮ ವರ್ಷದಲ್ಲಿ ಒಬ್ಬರು ಶಿಕ್ಷಕರನ್ನು, ಎರಡನೇ ವರ್ಷದಲ್ಲಿ ಇನ್ನೊಬ್ಬರು ಶಿಕ್ಷಕರನ್ನು ನೇಮಕ ಮಾಡಲಾಗುವುದು. ಶಿಕ್ಷಕರನ್ನು ನೇಮಕಾತಿ ನಿಯಮಗಳ ಪ್ರಕಾರ ಜಿಲ್ಲಾ ಮಟ್ಟದ ಸಂಪನ್ಮೂಲ ಮೂಲಕ ನೇಮಕ ಮಾಡಲಾಗುವುದು. ಕೇಂದ್ರಕ್ಕೆ ಸ್ಥಳೀಯರಾದ, ಗ್ರಾಮಸ್ಥರಿಂದಲೇ ಆಯ್ಕೆಯಾದ ೧೦ನೇ ತರಗತಿ ಪಾಸಾದ ಬೋಧಕರನ್ನು ನೇಮಕ ಮಾಡಲಾಗುವುದು. ಈ ನೇಮಕಾತಿ ಪತ್ರವನ್ನು ಗ್ರಾಮ ಶಿಕ್ಷಣ ಸಮಿತಿಯೇ ನೀಡುವುದು. ಈ ಬೋಧಕರಿಗೆ ಮಾಸಿಕ ಒಂದು ಸಾವಿರ ರೂಪಾಯಿಗಳ ಸಂಭಾವನೆಯನ್ನು ಗ್ರಾಮ ಶಿಕ್ಷಣ ಸಮಿತಿಯ ಮೂಲಕ ಪಾವತಿ ಮಾಡಲಾಗುವುದು. ಅಲ್ಲದೇ, ಕಲಿಕಾ ಕೇಂದ್ರಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಯೋಜನೆಯಿಂದ ಪೂರೈಸಲಾಗುವುದು.

ಅಂಗನವಾಡಿ ಕೇಂದ್ರಗಳನ್ನು ಬಲಪಡಿಸುವುದು: ಪ್ರಾಥಮಿಕ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳು ಶಾಲೆಗೆ ಗೈರುಹಾಜರಿ ಆಗುವುದನ್ನು ತಪ್ಪಿಸುವುದು ಈ ಶಾಲೆಗೆ ಗೈರುಹಾಜರಾಗುವುದರಿಂದ ಅರ್ಧದಿನ ಮಾತ್ರ ಕಾರ್ಯನಿರ್ವಹಿಸುವ ಅಂಗನವಾಡಿ ಕೇಂದ್ರಗಳ ಕೆಲಸದ ವೇಳೆಯನ್ನು ಪೂರ್ತಿ ದಿನಕ್ಕೆ ಅಂದರೆ ಶಾಲಾ ಸಮಯದ ಜೊತೆಗೆ ಸರಿಹೊಂದುವಂತೆ ವಿಸ್ತರಿಸುವುದು. ಇದರಿಂದ ಚಿಕ್ಕಮಕ್ಕಳನ್ನು ಅಂಗನವಾಡಿ ಕೇಂದ್ರದಲ್ಲಿ ಬಿಟ್ಟು ಹೆಣ್ಣುಮಕ್ಕಳು ಶಾಲೆಗೆ ಹಾಜರಾಗಲು ಅನುಕೂಲವಾಗುತ್ತದೆ. ಈ ಹೆಚ್ಚುವರಿ ಕೆಲಸಕ್ಕಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ವತಿಯಿಂದ ನಿಯಮಾನುಸಾರ ಸಂಭಾವನೆಯನ್ನು ನೀಡಲಾಗುವುದು. ಈ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಪ್ರತಿ ಜಿಲ್ಲೆಯಲ್ಲಿ ಆಯ್ದ ಒಂದು ಕ್ಷೇತ್ರದಲ್ಲಿ ಕಾರ್ಯಗತಗೊಳಿಸಲಾಗುತ್ತದೆ. ಇದರ ಯಶಸ್ಸಿನ ಬಗ್ಗೆ ಒಂದು ಅಧ್ಯಯನ ನಡೆಸಿ ನಂತರ ಉಳಿದ ಕ್ಷೇತ್ರಗಳಿಗೆ ವಿಸ್ತರಿಸಲು ಪರಿಶೀಲಿಸಲಾಗುವುದು.

ಗ್ರಾಮ ಶಿಕ್ಷಣ ಪ್ರೇರಕರ ನೇಮಕ: ವಾಹನ ಸಂಪರ್ಕವಿಲ್ಲದ, ಮುಖ್ಯ ರಸ್ತೆಗಳಿಂದ ದೂರವಿರುವ ಗ್ರಾಮಗಳಲ್ಲಿ ಶಿಕ್ಷಕರು ಆಗಾಗ ಶಾಲಾ ಕೆಲಸಕ್ಕೆ ಗೈರುಹಾಜರಾಗುವ ಸಂಭವವಿರುತ್ತದೆ. ಕೆಲವು ಗ್ರಾಮೀಣ ಶಾಲೆಗಳಲ್ಲಿ ಶಿಕ್ಷಕರ ಮಕ್ಕಳ ಅನುಪಾತ ಹೆಚ್ಚಾಗಿದ್ದು, ಎಲ್ಲಾ ಮಕ್ಕಳಿಗೆ ಸೂಕ್ತ ಗಮನ ಕೊಡಲು ಶಿಕ್ಷಕರಿಗೆ ಸಾಧ್ಯವಾಗದೇ ಇರುವ ಸಂಭವವಿರುತ್ತದೆ. ಇಂತಹ ಸಂದರ್ಭಗಳಲ್ಲಿ ಗ್ರಾಮದ ಸ್ಥಳೀಯ ವಿದ್ಯಾವಂತರ ಪೈಕಿ ಒಬ್ಬರನ್ನು ಗ್ರಾಮ ಶಿಕ್ಷಣ ಸಮಿತಿಯ ಶಿಫಾರಸ್ಸಿನ ಪ್ರಕಾರ ಆಯ್ಕೆ ಮಾಡಿ ಗ್ರಾಮ ಶಿಕ್ಷಣ ಪ್ರೇರಕರು ಎಂಬುದಾಗಿ ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಇವರಿಗೆ

ಒಂದು ತಿಂಗಳಿಗೆ ರೂ. ೧೦೦೦/- ಸಂಭಾವನೆ ನೀಡಲು ಅವಕಾಶವಿದೆ. ಗ್ರಾಮದಲ್ಲಿ ಶಾಲೆಗೆ ಹಾಜರಾಗದೇ ಇರುವ ಅದರಲ್ಲೂ ಹೆಣ್ಣುಮಕ್ಕಳನ್ನು ಶಾಲೆಗೆ ಹಾಜರಾಗುವಂತೆ ಮಾಡುವುದೇ ಈ ಗ್ರಾಮ ಶಿಕ್ಷಣ ಪ್ರೇರಕರ ಕರ್ತವ್ಯವಾಗಿದೆ.

೨. ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು : ೬ ರಿಂದ ೧೪ರ ವಯೋಮಿತಿಯ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲು ಮಾಡಿಕೊಂಡು ಅವರು ಮಧ್ಯದಲ್ಲಿ ಶಾಲೆ ಬಿಡದಂತೆ ಉಳಿಸಿಕೊಳ್ಳುವುದು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಯ ಧ್ಯೇಯವಾಗಿದೆ. ಅದಕ್ಕಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಜನಜಾಗೃತಿ ಕಾರ್ಯಕ್ರಮ

ಜನರಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸುವ ಸಲುವಾಗಿ ಮಕ್ಕಳನ್ನು ಶಾಲೆಯಲ್ಲಿ ಉಳಿಸಿ ಶೈಕ್ಷಣಿಕ ಪ್ರಗತಿಯನ್ನುಂಟು ಮಾಡುವ ಸಲುವಾಗಿ ಕೆಳಕಂಡಂತೆ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅ. ಕಲಾಜಾಥ: ಕಲಾಜಾಥವು ತಾಲೂಕು ಮಟ್ಟದಲ್ಲಿ ನಡೆಸುವ ಒಂದು ಕಾರ್ಯಕ್ರಮ. ಈ ಉದ್ದೇಶಕ್ಕಾಗಿ ಸ್ಥಳೀಯ ಕಲಾವಿದರನ್ನೊಳಗೊಂಡ ಒಂದು ತಂಡವನ್ನು ತಾಲ್ಲೂಕು ಮಟ್ಟದಲ್ಲಿ ರಚಿಸಲಾಗುತ್ತದೆ. ಈ ತಂಡವು ಸಮಸ್ಯಾತ್ಮಕ ಗ್ರಾಮಗಳಿಗೆ ಭೇಟಿಕೊಟ್ಟು ಶಿಕ್ಷಣದ ಪ್ರಾಮುಖ್ಯತೆಯನ್ನು ಬಿಂಬಿಸುವ, ಅಗತ್ಯ ಸಂದೇಶಗಳನ್ನು ಒಳಗೊಂಡ ಬೀದಿ ನಾಟಕ, ಹಾಡು, ನೃತ್ಯ, ಪ್ರಹಸನ ಮುಂತಾದ ಕಲಾ ಪ್ರಕಾರಗಳ ಮೂಲಕ ಪ್ರದರ್ಶಿಸಿ ಜನರಲ್ಲಿ ಶಿಕ್ಷಣದ ಬಗ್ಗೆ ಜಾಗೃತಿಯನ್ನುಂಟು ಮಾಡುತ್ತದೆ. ಈ ತಂಡವು ಪ್ರದರ್ಶಿಸುವ ಕಾರ್ಯಕ್ರಮಗಳಲ್ಲಿ ಹಾಜರಾತಿ ಉತ್ತಮ ಪಡಿಸಲು ಸಹಕಾರಿಯಾಗುವ ಅಂಶವಿರುತ್ತದೆ. ಇದಲ್ಲದೆ ಜೀತ ಪದ್ಧತಿ, ಬಾಲ್ಯ ವಿವಾಹ, ವರದಕ್ಷಿಣೆ, ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಮುಂತಾದ ಅಂಶಗಳನ್ನು ಒಳಗೊಂಡಿರುತ್ತದೆ.

ಆ. ಚಿಣ್ಣರ ಮೇಳ: ಈ ಮೇಳದ ಉದ್ದೇಶವೇನೆಂದರೆ, ಪ್ರಾಥಮಿಕ ಶಿಕ್ಷಣ ಕಲಿಕೆಯ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ನಂಬಿಕೆಯನ್ನು ಮೂಡಿಸುವುದು ಹಾಗೂ ಮಕ್ಕಳಿಗೆ ಕಲಿಕೆಯ ಆಕರ್ಷಕ ಮತ್ತು ಹರ್ಷದಾಯಕವಾಗಿರುವಂತೆ ಮಾಡುವುದು. ಮೇಳದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಒಂದು ಸಮೂಹ ಸಂಪನ್ಮೂಲ ಸಮಿತಿ ವ್ಯಾಪ್ತಿಯಲ್ಲಿ ಬರುವ ೫-೬ ಶಾಲೆಗಳಿಂದ ಆಯ್ದ ವಿದ್ಯಾರ್ಥಿಗಳ ತಂಡವು ಸಮೂಹದ ಆಯ್ದ ಒಂದು ಊರಿನಲ್ಲಿ(ಹಳ್ಳಿಯಲ್ಲಿ) ೩ ದಿನಗಳ ಕಾಲ ಉಳಿದುಕೊಂಡು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವರು. ಚಿತ್ರ ಬರೆಯುವುದು, ಕಾಗದದ ಕಲೆ, ಕತೆ ಹೇಳುವುದು, ಹಾಡು, ನೃತ್ಯ, ಊರು ಸುತ್ತಿ ಅನುಭವ ಪಡೆಯವುದು, ನಿಸರ್ಗದ ಅಧ್ಯಯನ ಮತ್ತು ರಂಗೋಲಿ ಬಿಡಿಸುವುದು, ಜೇಡಿಮಣ್ಣಿನಿಂದ ಆಕೃತಿಗಳ ತಯಾರಿಕೆ ಮುಂತಾದ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿರುವ ಪ್ರತಿಭೆ ಹಾಗೂ ಕೌಶಲ್ಯವನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗುವುದು.

ಸ್ಥಳೀಯ ಪೋಷಕರ(ಮೇಳ ನಡೆಯುವ ಹಳ್ಳಿಯ) ಕೆಲವು ಮನೆಗಳಲ್ಲಿ ಈ ತಂಡದ ಒಂದೊಂದು ಮಗುವು (ವಿದ್ಯಾರ್ಥಿಯು) ಮೂರು ದಿನಗಳು ಇರುವ ಅವಕಾಶ ಕಲ್ಪಿಸಿ ಕೊಡುವುದು. ಈ ಅವಧಿಯಲ್ಲಿ ಸದರಿ ಮಗುವು ಆಯಾ ಕುಟುಂಬದ ರೀತಿ-ನೀತಿ, ಆಚಾರ-ವಿಚಾರ, ಜೀವನ ವಿಧಾನಗಳ ಬಗ್ಗೆ ತಿಳಿದುಕೊಳ್ಳಲು ಸಹಾಯವಾಗುವುದು. ಈ ಮೇಳವು ೯ ವಿಷಯಗಳನ್ನು ಹೊಂದಿರುತ್ತದೆ.

೧. ಸುತ್ತಾಡೋಣ (ವಿಹಾರ)

೨. ಸೃಜನ ಶೀಲತೆ

೩. ಆಡಿ ನಲಿ

೪. ಮಾಡಿ ನೋಡು

೫. ಕಥೆ ಕಟ್ಟೋಣ

೬. ಸವಾಲು ಜವಾಬು

೭. ಓರಿಗಾಮಿ

೮. ಹಾಡುಗಳು

೯. ಆಟಗಳು

ಇ. ಗ್ರಾಮೀಣ ಶಿಕ್ಷಣ ಸಮಿತಿಯ ಮೇಳ: ಈ ಮೇಳವು ೧ ದಿನದ ಕಾರ್ಯಕ್ರಮವಾಗಿರುತ್ತದೆ. ಇದು ಕ್ಷೇತ್ರ ಮಟ್ಟದಲ್ಲಿ ನಡೆಯುತ್ತದೆ. ಈ ಮೇಳದಲ್ಲಿ ಹೆಣ್ಣುಮಕ್ಕಳ ಶಿಕ್ಷಣ, ಗಂಡು-ಹೆಣ್ಣು ಮಕ್ಕಳ ಸಮಾನತೆಗೆ ಒತ್ತುಕೊಡುವ ಬಗ್ಗೆ ಚರ್ಚಿಸಲಾಗುತ್ತದೆ.

❖ ಗ್ರಾಮೀಣ ಶಿಕ್ಷಣ ಸಮಿತಿಯ ಮೇಳದಲ್ಲಿ ಶಿಕ್ಷಕರು/ ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಭಾಗವಹಿಸಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಸಮಸ್ಯೆಗಳನ್ನು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಲು ಅನುಕೂಲವಾಗುತ್ತದೆ.

❖ ಯಾವುದಾದರೂ ಒಂದು ಗ್ರಾಮದಲ್ಲಿ ಕೈಗೊಂಡ ಶಾಲಾಭಿವೃದ್ಧಿ ಕಾರ್ಯಕ್ರಮಗಳನ್ನು ತಿಳಿದುಕೊಂಡು, ಈ ಮೇಳದಲ್ಲಿ ಚರ್ಚಿಸಿ ತಮ್ಮ ಗ್ರಾಮದಲ್ಲೂ ಅಳಡಿಸಿಕೊಳ್ಳಲು ಅನುಕೂಲವಾಗುವಂತೆ ಚರ್ಚಿಸಿ ಕ್ರಮ ಕೈಗೊಳ್ಳುತ್ತಾರೆ.

ಈ. ಮನೆ ಭೇಟಿ ಮೇಳ: ಮಕ್ಕಳ ದಾಖಲಾತಿಗಾಗಿ ಅದರಲ್ಲಿಯೂ ಹೆಣ್ಣುಮಕ್ಕಳನ್ನು ಶಾಲೆಯೆಡೆಗೆ ತರಲು ಈ ಪ್ರಯತ್ನವಾಗಿದೆ.

* ಇದು ಒಂದು ದಿನದ ಕಾರ್ಯಕ್ರಮ ಮತ್ತು ಅಗತ್ಯಕ್ಕೆ ತಕ್ಕಂತೆ ಸಮಯವನ್ನು ನಿಗದಿಗೊಳಿಸಬಹುದು.

* ಈ ಕಾರ್ಯಕ್ರಮದಲ್ಲಿ ಸಮೂಹದ ಸುತ್ತಮುತ್ತಲಿನ ಶಾಲೆಯ ಹೆಣ್ಣುಮಕ್ಕಳ ತಾಯಂದಿರನ್ನು ಕರೆಯಿಸಿ ಒಂದೇ ಕಡೆ ಸೇರಿಸಿ ಈ ಕಾರ್ಯಕ್ರಮವನ್ನು ನಡೆಸುತ್ತಾರೆ.

* ಈ ಕಾರ್ಯಕ್ರಮದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಅವಶ್ಯಕತೆ, ಗಂಡು–ಹೆಣ್ಣು ಮಕ್ಕಳ ನಡುವಿನ ಸಮಾನತೆ, ಪೌಷ್ಠಿಕ ಆಹಾರ ಇತ್ಯಾದಿ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತಾರೆ, ಸ್ಥಳೀಯ ವೈದ್ಯರನ್ನು ಕರೆಯಿಸಿ ಮಕ್ಕಳ ಆರೋಗ್ಯ ಶಿಕ್ಷಣದ ಬಗ್ಗೆ ತಪಾಸಣೆ ಸಹ ನಡೆಸುತ್ತಾರೆ.

* ವಿವಿಧ ಹುದ್ದೆಯಲ್ಲಿ ಪ್ರಮುಖ ಸ್ತ್ರೀಯರನ್ನು ಕರೆಯಿಸಿ ಮಕ್ಕಳ ಮತ್ತು ಇತರ ವಿಷಯಗಳ ಬಗ್ಗೆ ತಿಳುವಳಿಕೆ ನೀಡುತ್ತಾರೆ.

ಉ. ಪ್ರಚಾರ ಮಾಧ್ಯಮದ ಸಾಮಗ್ರಿ: ಜನಜಾಗೃತಿ ಕಾರ್ಯಕ್ರಮಗಳಲ್ಲಿ ಬಳಸಬಹುದಾದ ವಿವಿಧ ಮಾಧ್ಯಮ ಸಾಮಗ್ರಿಗಳನ್ನು ಪ್ರಚಾರ ಮಾಧ್ಯಮ ಸಾಮಗ್ರಿ ಎಂದು ಕರೆಯಬಹುದು. ಭಿತ್ತಿ ಚಿತ್ರಗಳು, ಧ್ವನಿ ಸುರಳಿ, ಶ್ರವ್ಯ ದೃಶ್ಯ ಸುರುಳಿಗಳು, ಚಲನಚಿತ್ರಗಳು, ಸ್ಥಿರಚಿತ್ರಗಳು, ಬ್ಯಾನರ್‌ಗಳು ಇತ್ಯಾದಿ ಸಾಮಗ್ರಿಗಳ ಮೂಲಕ ಸಮುದಾಯದಲ್ಲಿ ಶಿಕ್ಷಣದ ಬಗ್ಗೆ ಅರಿವನ್ನು ಉಂಟುಮಾಡಬಹುದು. ಇದೇ ಸಾಧನೆಗಳ ಮೂಲಕ ಗ್ರಾಮ ಶಿಕ್ಷಣ ಸಮಿತಿ ಮೇಳ, ಕಲಾಜಾಥ ಇತ್ಯಾದಿಗಳ ಬಗ್ಗೆ ಪ್ರಚಾರ ನೀಡಿ ಜನಗಳಿಗೆ ತಿಳುವಳಿಕೆ ನೀಡಬಹುದು.

ಶಾಲಾ ಅನುದಾನ ಮತ್ತು ಶಿಕ್ಷಕರ ಅನುದಾನ

ಶಾಲಾ ಅನುದಾನ: ಶಾಲೆಗಳಿಗೆ ಅಗತ್ಯವಾದ ಸಣ್ಣ ಪುಟ್ಟ ದುರಸ್ತಿ ಮುಂತಾದ ತಾತ್ಕಾಲಿಕ ಅಗತ್ಯವನ್ನು ಪೂರೈಸಿಕೊಳ್ಳುವುದಕ್ಕಾಗಿ ಶಾಲೆಗಳಿಗೆ ಅನುದಾನವನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ವತಿಯಿಂದ ನೀಡಲಾಗುವುದು.

ಶಿಕ್ಷಕರ ಅನುದಾನ: ಶಿಕ್ಷಕರು ಬೋಧನೆಗೆ ಅಗತ್ಯವಾದ ಅಲ್ಪ ವೆಚ್ಚದ ಬೋಧನಾ ಸಾಮಗ್ರಿಗಳನ್ನು ತಯಾರಿಸಿ ಕೊಳ್ಳುವುದಕ್ಕಾಗಿ ಅನುದಾನವನ್ನು ನೀಡಲಾಗುವುದು. ಈ ಅನುದಾನವನ್ನು ನೇರವಾಗಿ ಶಿಕ್ಷಕರ ಬ್ಯಾಂಕ್ ಖಾತೆಗೆ ಜಮಾಯಿಸುವ ಶಿಕ್ಷಕರಿಗೆ ಮಾತ್ರ ಅನ್ವಯಿಸುತ್ತದೆ.

ಶಾಲಾ ಮಕ್ಕಳ ಆರೋಗ್ಯ ದಾಖಲೆ ಪತ್ರ: ಈ ಕಾರ್ಯಕ್ರಮವನ್ನು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಜಿಲ್ಲಾ ಶಿಕ್ಷಣದ ಸಂಶೋಧನೆ ಹಾಗೂ ತರಬೇತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ. ಇದರ ಮುಖ್ಯ ಉದ್ದೇಶ ವಿದ್ಯಾರ್ಥಿಳ ದೈಹಿಕ ಆರೋಗ್ಯ ಸ್ಥಿತಿಯ ಬಗ್ಗೆ ಖಚಿತ ಮಾಹಿತಿಯನ್ನು ದಾಖಲಿಸಿ ಮುಂದಿನ ವೈದ್ಯಕೀಯ ತಪಾಸಣೆ ಹಾಗೂ ಆರೋಗ್ಯ ಪ್ರಗತಿಯ ಬಗ್ಗೆ ಕ್ರಮ ಕೈಗೊಳ್ಳಲು ಈ ಚೀಟಿಗಳನ್ನು ನೀಡಲಾಗಿದೆ.

ಈ ದಾಖಲೆ ಪತ್ರದಲ್ಲಿ ಮಕ್ಕಳ ಆರೋಗ್ಯ ತಪಾಸಣೆಯ ಮಾಹಿತಿ ಲಭ್ಯವಿದ್ದು ಎತ್ತರ, ತೂಕ, ಅಳತೆ, ದೃಷ್ಟಿ, ಅಂಗವಿಕಲತೆ, ರಕ್ತದ ಗುಂಪು ಮತ್ತು ಲಸಿಕೆ ನೀಡಿಕೆಯ ವಿವರಗಳನ್ನು ನಮೂದಿಸಲಾಗುತ್ತದೆ. ಈ ದಾಖಲೆ ಪತ್ರದಲ್ಲಿ ವಿದ್ಯಾರ್ಥಿಯು ೫ ವರ್ಷಗಳ ವೈದ್ಯಕೀಯ ಸ್ಥಿತಿಯ ಮಾಹಿತಿಯನ್ನು ದಾಖಲಿಸಲು ಅವಕಾಶವಿರುತ್ತದೆ.

೩. ಗುಣಮಟ್ಟ ಸುಧಾರಣೆ

ಅ. ಕಲಿಕಾ ಕನಿಷ್ಠ ಹಂತಗಳ ಆಧಾರಿತ ಅಭ್ಯಾಸ ಪುಸ್ತಕಗಳು ಮತ್ತು ಶಿಕ್ಷಕರ ಕೈಪಿಡಿಗಳು : ಕಲಿಕಾ ಕನಿಷ್ಠ ಹಂತಗಳ ಆಧಾರಿತ ಅಭ್ಯಾಸ ಪುಸ್ತಕಗಳು ಚಟುವಟಿಕೆಯ ಬೋಧನೆಗೆ ಸಹಕಾರಿಯಾಗಿವೆ. ಈ ಪುಸ್ತಕಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ ದಾಖಲಾದ ೧ ರಿಂದ ೪ನೆಯ ತರಗತಿಯ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಉಚಿತವಾಗಿ ಪೂರೈಸಲಾಗುತ್ತಿದೆ. ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ದೃಷ್ಟಿಯಿಂದ ಮಕ್ಕಳ ಆಸಕ್ತಿಗೆ ಅನುಗುಣವಾಗಿ ಚಟುವಟಿಕೆ ಮತ್ತು ಅಭ್ಯಾಸಗಳನ್ನು ಒಳಗೊಂಡ ಪುಸ್ತಕಗಳು ರಚನೆಯಾಗಿವೆ. ಈ ಪುಸ್ತಕಗಳನ್ನು ಮೊದಲು ಯುನಿಸೆಫ್ ನೆರವಿನಿಂದ ರಾಜ್ಯದ ಪ್ರತಿ ಕ್ಷೇತ್ರದಲ್ಲಿ ಆಯ್ದ ೧೦-೧೫ ಪ್ರಾಥಮಿಕ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ೧೯೯೩-೯೪ನೇ ಸಾಲಿನಲ್ಲಿ ನಿಗದಿಪಡಿಸಲಾಗಿತ್ತು. ನಂತರ ೯೫-೯೬ನೇ ಸಾಲಿನಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ವತಿಯಿಂದ ಈ ಪುಸ್ತಕಗಳ ಪರಿಶೀಲನೆ ಮತ್ತು ಪರಿಷ್ಕರಣೆಯನ್ನು ಕೈಗೊಳ್ಳಲಾಯಿತು. ಪರಿಷ್ಕೃತ ಪುಸ್ತಕಗಳನ್ನು ೧೯೯೬-೯೭ನೇ ಸಾಲಿನಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ ಜಿಲ್ಲೆಗಳ ಕನ್ನಡ ಮಾಧ್ಯಮದ ೧ ಮತ್ತು ೨ನೇ ತರಗತಿಯ ಎಲ್ಲಾ ಶಾಲೆಗಳಿಗೆ ಒದಗಿಸಲಾಯಿತು.

- ಈ ಪುಸ್ತಕಗಳನ್ನು ಉಚಿತವಾಗಿ ಸರ್ಕಾರಿ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ.
- ಪ್ರತಿ ತರಗತಿಯ ಭಾಷೆ, ಗಣಿ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ಮಕ್ಕಳ ಅಭ್ಯಾಸ ಪುಸ್ತಕ ಮತ್ತು ಶಿಕ್ಷಕರ ಕೈಪಿಡಿಗಳನ್ನು ರಚಿಸಿ ಪ್ರಕಟಿಲಾಗಿದೆ.
- ಈ ಪುಸ್ತಕಗಳ ರಚನಾ ಕಾರ್ಯವನ್ನು ಜಿಲ್ಲಾ ಶಿಕ್ಷಣದ ಸಂಶೋಧನೆ ಹಾಗೂ ತರಬೇತಿಯ ಪಠ್ಯ ಪುಸ್ತಕ ವಿಭಾಗದವರು ನಿರ್ವಹಿಸಿರುತ್ತಾರೆ.
- ಪುಸ್ತಕಗಳ ಮುದ್ರಣಕ್ಕೆ ಸಂಬಂಧಪಟ್ಟ ರಾಷ್ಟ್ರೀಯ ನಿರ್ವಹಣಾ ಮಂಡಳಿ ಪ್ರಕ್ರಿಯಗಳನ್ನು ರಾಜ್ಯ ಯೋಜನಾ ಕಚೇರಿಯಲ್ಲಿ ನಿರ್ವಹಿಸಿ ಮುದ್ರಣ ವೆಚ್ಚವನ್ನು ಆಯಾ ಜಿಲ್ಲೆಯ ವಾರ್ಷಿಕ ಯೋಜನೆಯಲ್ಲಿ ಭರಿಸಲಾಗುತ್ತಿದೆ.

೪. ಕ್ಷೇತ್ರ ಸಂಪನ್ಮೂಲ ಸಮಿತಿ ಮತ್ತು ಸಮೂಹ ಸಂಪನ್ಮೂಲ ಸಮಿತಿಗಳ ಸ್ಥಾಪನೆ

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತಾಲೂಕು ಮಟ್ಟದಲ್ಲಿಯೇ ನಿರಂತರ ತರಬೇತಿ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಜಿಲ್ಲೆಗಳಲ್ಲಿ ಪ್ರತಿ ಕ್ಷೇತ್ರಕ್ಕೆ

ಒಂದರಂತೆ ಕ್ಷೇತ್ರ ಸಂಪನ್ಮೂಲ ಸಮಿತಿ ಹಾಗೂ ೧೦-೧೫ ಶಾಲೆಗಳ ೪೦-೫೦ ಶಿಕ್ಷಕರುಗಳನ್ನೊಳಗೊಂಡಂತೆ ಸಮೂಹ ಸಂಪನ್ಮೂಲ ಕೇಂದ್ರಗಳನ್ನು ಆರಂಭಿಸಲಾಗಿದೆ.

ಕ್ಷೇತ್ರ ಸಂಪನ್ಮೂಲ ಸಮಿತಿ

* ಇದು ತಾಲೂಕು ಮಟ್ಟದಲ್ಲಿ ಶಿಕ್ಷಣಕ್ಕೆ ಒಂದು ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ.
* ಇವರಲ್ಲಿ ಸಂಯೋಜಕರು ಸೇರಿ ಆರು ಜನ ಸಂಪನ್ಮೂಲ ವ್ಯಕ್ತಿಗಳಿರುತ್ತಾರೆ. ಶೇಕಡ ೫೦% ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರಾತಿನಿಧ್ಯ ನೀಡಲಾಗಿದೆ.
* ಕ್ಷೇತ್ರ ಸಂಪನ್ಮೂಲ ಸಮಿತಿಗಳು ನಿರಂತರವಾಗಿ ಪ್ರಾಥಮಿಕ ಶಾಲಾ ಶಿಕ್ಷಕರು, ಗ್ರಾಮ ಶಿಕ್ಷಣ ಸದಸ್ಯರು ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರದ ಬೋಧಕರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುತ್ತಾರೆ.
* ಕ್ಷೇತ್ರ ಸಂಪನ್ಮೂಲ ಸಮಿತಿ ಸಿಬ್ಬಂದಿ ಸಮೂಹ ಸಂಪನ್ಮೂಲ ಸಮಿತಿ ಹಂತದಲ್ಲಿ ನಡೆಯುವ ಮಾಸಿಕ ಸಭೆಗಳಿಗೆ ಹಾಜರಾಗುವುದಲ್ಲದೆ ಈ ಸಭೆಗಳನ್ನು ಯೋಜಿಸುವ ಬಗ್ಗೆ ಮಾರ್ಗದರ್ಶನ ನೀಡುತ್ತಾರೆ.
* ಕ್ಷೇತ್ರ ಸಂಪನ್ಮೂಲ ಸಮಿತಿಯಲ್ಲಿ ನಡೆಯುವ ಎಲ್ಲಾ ತರಬೇತಿಗಳು ಉಪಯುಕ್ತವಾಗಿರುತ್ತದೆ.
* ಸಮೂಹ ಸಂಪನ್ಮೂಲ ಸಮಿತಿ ಸಂಯೋಜಕರ ವೇತನ, ರಜೆ, ಮಂಜೂರತಿ ಇತ್ಯಾದಿ ಬಗ್ಗೆ ಕ್ಷೇತ್ರ ಸಂಪನ್ಮೂಲ ಸಮಿತಿ ಸಮನ್ವಯಾಧಿಕಾರಿಗಳೇ ನಿರ್ವಹಣಾ ಅಧಿಕಾರಿಗಳಾಗಿರುತ್ತಾರೆ.

ಸಮೂಹ ಸಂಪನ್ಮೂಲ ಸಮಿತಿ

* ೧೦ ಅಥವಾ ೧೫ ಶಾಲೆಗಳಿಗೆ ಮತ್ತು ೪೦-೫೦ ಶಿಕ್ಷಕರಿಗೆ ಒಂದು ಸಮೂಹ ಕೇಂದ್ರವಿರುತ್ತದೆ.
* ಸಮೂಹ ಸಂಪನ್ಮೂಲ ಸಮಿತಿಯಲ್ಲಿ ಒಬ್ಬ ಪೂರ್ಣಕಾಲಿಕ ಸಂಯೋಜಕರು ಇರುತ್ತಾರೆ. ಇವರು ಪ್ರಾಥಮಿಕ ಶಾಲಾ ಶಿಕ್ಷಕರ ಶ್ರೇಣಿಗೆ ಸೇರಿದವರಾಗಿರುತ್ತಾರೆ.
* ಸಮೂಹ ಸಂಪನ್ಮೂಲ ಸಮಿತಿ ಸಂಯೋಜಕರು ಪ್ರತಿ ತಿಂಗಳಿಗೊಮ್ಮೆ ಸಮೂಹ ಸಂಪನ್ಮೂಲ ಕೇಂದ್ರದಲ್ಲಿ ಶಿಕ್ಷಕರ ಮಾಸಿಕ ಸಮಾಲೋಚನಾ ಸಭೆ ಏರ್ಪಡಿಸಿ ಬೋಧನೆ, ಮೌಲ್ಯಮಾಪನ ಇತ್ಯಾದಿಗಳ ಬಗ್ಗೆ ಪರಿಷ್ಕೃತ ವಿಧಾನಗಳ ಬಗ್ಗೆ ವಿಚಾರ ವಿನಿಮಯಕ್ಕೆ ಅವಕಾಶ ಮಾಡಿಕೊಡುತ್ತಾರೆ.
* ಸಮೂಹ ಸಂಪನ್ಮೂಲ ಸಮಿತಿ ಸಂಯೋಜಕರು ತಮ್ಮ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ಮತ್ತು ಅನೌಪಚಾರಿಕ ಶಿಕ್ಷಣ (ಎನ್‌ಎಫ್‌ಇ) ಕೇಂದ್ರಗಳಿಗೆ ಭೇಟಿ ನೀಡಿ ಶೈಕ್ಷಣಿಕ ಪ್ರಗತಿ ಬಗ್ಗೆ ಪರಾಮರ್ಶಿಸಿ ಸೂಕ್ತ ಮಾರ್ಗದರ್ಶನ ನೀಡುತ್ತಾರೆ.
* ಸಮೂಹ ಸಂಪನ್ಮೂಲ ಸಮಿತಿ ಸಂಯೋಜಕರು ಇಎಂಐಎಸ್ ನಮೂನೆಗಳನ್ನು ಸಂಬಂಧಿಸಿದ ಶಾಲೆಗಳಿಂದ ಭರ್ತಿ ಮಾಡಿಸಿ, ಪರಿಶೀಲಿಸಿ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಕಳುಹಿಸುತ್ತಾರೆ.

ಕ್ಷೇತ್ರ ಸಂಪನ್ಮೂಲ ಸಮಿತಿ ಸಿಬ್ಬಂದಿಯ ತರಬೇತಿ

ಕ್ಷೇತ್ರ ಸಂಪನ್ಮೂಲ ಸಮಿತಿ ಕೇಂದ್ರಗಳಿಗೆ ಸಂಪನ್ಮೂಲ ವ್ಯಕ್ತಿಗಳನ್ನು ರಾಜ್ಯಮಟ್ಟದ ತರಬೇತಿ ಕಾರ್ಯಾಗಾರಗಳಿಗೆ ನಿಯೋಜಿಸಿಕೊಂಡು ವಿವಿಧ ವಿಷಯಗಳ ತರಬೇತಿಯನ್ನು ನೀಡಲಾಗುತ್ತಿದೆ.

ಈ ಸಂಬಂಧ ತರಬೇತಿಯ ರೂಪುರೇಷೆಗಳನ್ನು ಮೊಟ್ಟ ಮೊದಲು ಪ್ರಾಥಮಿಕ ಶಿಕ್ಷಣ, ಶಿಕ್ಷಣ ಪ್ರವರ್ಧಕ ಮತ್ತು ಶಿಕ್ಷಕರ ಸಾಹಿತ್ಯ ಎಂಬ ಪುಸ್ತಕಗಳನ್ನು ತಯಾರಿಸಿ ಕ್ಷೇತ್ರ ಸಂಪನ್ಮೂಲ ಸಮಿತಿ ಮೂಲಕ ಶಿಕ್ಷಕರಿಗೆ / ವ್ಯಕ್ತಿಗಳಿಗೆ ತರಬೇತಿ ನೀಡಿ, ೧೦ ದಿನಗಳ ನಂತರ ಮಾನವ ಸಂಪನ್ಮೂಲ ತರಬೇತಿಯನ್ನು ಮಂಗಳೂರಿನಲ್ಲಿ ನೀಡಲಾಯಿತು.

೧೯೯೬-೯೭ನೇ ಸಾಲಿನಲ್ಲಿ ಕಲಿಕಾ ಕನಿಷ್ಠ ಹಂತಗಳ ಆಧಾರಿತ ಪುಸ್ತಕಗಳನ್ನು ೧ ಮತ್ತು ೨ನೇ ತರಗತಿಗಳಿಗೆ ಹೊಸದಾಗಿ ಒದಗಿಸಿದಾಗ ಈ ಪುಸ್ತಕಗಳ ಬಳಕೆಯ ಬಗ್ಗೆ ಎಲ್ಲಾ ಕ್ಷೇತ್ರ ಸಂಪನ್ಮೂಲ ಸಮಿತಿ ಸಿಬ್ಬಂದಿಯವರಿಗೆ ಮೂರು ದಿನಗಳ ತರಬೇತಿಯನ್ನು ರಾಜ್ಯ ಕಛೇರಿಯಿಂದ ನೀಡಲಾಗಿದೆ. ಇದಾದ ನಂತರ ಶಿಕ್ಷಕರ ತರಬೇತಿಗಳನ್ನು ಕ್ಷೇತ್ರ ಸಂಪನ್ಮೂಲ ಸಮಿತಿಗಳಲ್ಲಿ ನಡೆಸಲಾಯಿತು. ನಂತರ ಒಂದು ಅನುಭವ ಹಂಚಿಕೆ ಕಾರ್ಯಾಗಾರವನ್ನು ನಡೆಸಲಾಯಿತು. ಈ ಕಾರ್ಯಾಗಾರದಲ್ಲಿ ಶಿಬಿರಾರ್ಥಿಗಳು ಕೆಲವು ಸಮಸ್ಯೆಗಳನ್ನು ಮುಂದಿಟ್ಟರು. ಅದರಲ್ಲಿ ಮುಖ್ಯವಾಗಿ ಹಳೆ ತರಬೇತಿ (೧೦ ದಿನಗಳ) ಉಪನ್ಯಾಸ ಮಾದರಿಯಲ್ಲಿತ್ತೆಂದು ಮನವರಿಕೆಯಾಗಿ ಆಗಸ್ಟ್ ೧೯೯೭ರಲ್ಲಿ ಒಂದು ಪಾಲ್ಗೊಳ್ಳುವ ಮಾದರಿ ತರಬೇತಿ ಕಾರ್ಯಾಗಾರ ನಡೆಸಲಾಯಿತು. ಈ ಅನುಭವದ ಆಧಾರದ ಮೇಲೆ ಆಯ್ದ ಸಂಪನ್ಮೂಲ ವ್ಯಕ್ತಿಗಳ ಸಹಾಯದಿಂದ ಹೊಸದಾಗಿ ತರಬೇತಿ ಸಂಚಿಕೆಗಳನ್ನು ರಚಿಸಲಾಯಿತು. ಅವುಗಳೆಂದರೆ ಚಿಗುರು, ಮಂಥನ, ಆಡೋಣ ಬಾ ಇದರಲ್ಲಿ ಮುಖ್ಯವಾಗಿ ಶಿಶು ಕೇಂದ್ರೀಕೃತ ಶಿಕ್ಷಣಕ್ಕೆ ಪೂರಕವಾದ ಚಟುವಟಿಕೆ ಆಧಾರಿತ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

ಇದಾದ ನಂತರ ಕ್ಷೇತ್ರ ಸಂಪನ್ಮೂಲ ಸಮಿತಿಯವರಿಗೆ ಐದು ತಂಡಗಳಲ್ಲಿ ತರಬೇತಿ ನಡೆಸಲಾಗಿದೆ. ಅಲ್ಲದೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಒಂದನೇ ಹಂತದ ಜಿಲ್ಲೆಗಳಿಂದ ಆಯ್ದ ಸಂಪನ್ಮೂಲ ವ್ಯಕ್ತಿಗಳಿಂದ ಒಟ್ಟು ಎಂಟು ತಂಡಗಳನ್ನು ರಚಿಸಿ ಹೊಸ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಜಿಲ್ಲೆಗಳ ಕ್ಷೇತ್ರ ಸಂಪನ್ಮೂಲ ಸಮಿತಿ ಸಿಬ್ಬಂದಿಗಳಿಗೆ ದೃಷ್ಟಿಕೋನದ ತರಬೇತಿಯನ್ನು ಎರಡು ಹಂತಗಳಲ್ಲಿ ಅಂದರೆ ಮೂರು ದಿನಗಳ ತರಬೇತಿ ಕಾರ್ಯಕ್ರಮಗಳನ್ನು ಶೈಕ್ಷಣಿಕ ಆಡಳಿತಗಾರರಿಗೂ ಆರು ದಿನಗಳ ತರಬೇತಿಯನ್ನು ಕ್ಷೇತ್ರ ಸಂಪನ್ಮೂಲ ಸಮಿತಿ ಸಿಬ್ಬಂದಿಗೂ ನೀಡಲಾಗಿದೆ.

ಕ್ಷೇತ್ರ ಸಂಪನ್ಮೂಲ ಸಮಿತಿ, ಸಮೂಹ ಸಂಪನ್ಮೂಲ ಸಮಿತಿ ಸಿಬ್ಬಂದಿಯ ಅನುಭವ ಹಂಚಿಕೆ ಕಾರ್ಯಾಗಾರಗಳು

* ಕ್ಷೇತ್ರ ಸಂಪನ್ಮೂಲ ಸಮಿತಿ, ಸಮೂಹ ಸಂಪನ್ಮೂಲ ಸಮಿತಿಗಳ ಅನುಭವ ಹಂಚಿಕೆ ಕಾರ್ಯಕ್ರಮ ಜಿಲ್ಲಾ ಮಟ್ಟದಲ್ಲಿ ಸರಾಸರಿ ಮೂರು ತಿಂಗಳಿಗೊಮ್ಮೆ ನಡೆಯುತ್ತದೆ.

* ಇದರಲ್ಲಿ ಮೂರು ಅಥವಾ ನಾಲ್ಕು ಕ್ಷೇತ್ರ ಸಂಪನ್ಮೂಲ ಸಮಿತಿಗಳ ಸಿಬ್ಬಂದಿ ಹಾಗೂ ಕ್ಷೇತ್ರ ಸಂಪನ್ಮೂಲ ಸಮಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಮೂಹ ಸಂಪನ್ಮೂಲ ಸಮಿತಿ ಸಮನ್ವಯ ಅಧಿಕಾರಿಗಳು ಸಂಧಿಸುವರು. ಹೀಗೆ ಪ್ರತಿ ಕ್ಷೇತ್ರ ಸಂಪನ್ಮೂಲ ಸಮಿತಿ, ಸಮೂಹ ಸಂಪನ್ಮೂಲ ಸಮಿತಿಗಳ ೩೦ ಅಥವಾ ೪೦ ಮಂದಿ ಜಿಲ್ಲಾಮಟ್ಟದಲ್ಲಿ ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರದ ನೇತೃತ್ವದಲ್ಲಿ ೩ ಅಥವಾ ೪ ತಿಂಗಳಿಗೊಮ್ಮೆ ಸಭೆ ಸೇರಿ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ. ಈ ಅನುಭವ ಹಂಚಿಕೆ ಕಾರ್ಯಕ್ರಮದಿಂದ ತರಬೇತಿಗಳು ಬೋಧನಾ ಕಲಿಕೆ ಪ್ರಕ್ರಿಯೆಗಳ ಬಗ್ಗೆ ಹಿಂದಿನ ಮಾಹಿತಿ ಒದಗಿಸಲು ಅನುಕೂಲವಾಗುವುದು.

* ಬೋಧನಾ ಕಲಿಕೆ ಹಾಗೂ ತರಬೇತಿ ಹಂತಗಳಲ್ಲಿ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅನುಭವ ಹಂಚಿಕೆ ಕಾರ್ಯಾಗಾರ ಒಂದು ಅವಕಾಶ ನೀಡುತ್ತದೆ ಹಾಗೂ ಮುಂದಿನ ತರಬೇತಿ ಕಾರ್ಯಕ್ರಮಗಳಿಗೆ ಮಾರ್ಗದರ್ಶನ ಮಾಡುತ್ತದೆ.

* ರಾಜ್ಯಮಟ್ಟದಲ್ಲಿ ಕ್ಷೇತ್ರ ಸಂಪನ್ಮೂಲ ಸಮಿತಿ ಸಿಬ್ಬಂದಿಯವರಿಗೆ ನಡೆಸುವ ಅನುಭವ ಹಂಚಿಕೆ ಕಾರ್ಯಾಗಾರಗಳಲ್ಲಿ ಆಯಾ ಕ್ಷೇತ್ರ ಸಂಪನ್ಮೂಲ ಸಮಿತಿಗಳಲ್ಲಿ ತರಬೇತಿ ಮತ್ತು ಶಾಲೆಗಳ ಭೇಟಿಯ ಸಮಯದಲ್ಲಿ ಅನುಭವಗಳ ಬಗ್ಗೆ ಹಾಗೂ ತರಬೇತಿಗಳನ್ನು ನಡೆಸುವಾಗ ತರಬೇತಿಗಳಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ಕೂಲಂಕುಷವಾಗಿ ಚರ್ಚೆ ನಡೆಸಲಾಗುವುದು ಹಾಗೂ ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲಾಗುವುದು.

ಕ್ಷೇತ್ರ ಸಂಪನ್ಮೂಲ ಸಮಿತಿ/ ಸಮೂಹ ಸಂಪನ್ಮೂಲ ಸಮಿತಿ ಕಟ್ಟಡ ನಿರ್ಮಾಣ

ತಾಲೂಕು ಸಭಾ ಭವನ, ಕಛೇರಿ ಕೊಠಡಿ, ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆ ಮಾಡಲಾಗಿದೆ. ಕ್ಷೇತ್ರ ಸಂಪನ್ಮೂಲ ಸಮಿತಿ ಕಟ್ಟಡಗಳನ್ನು ಬಿಆರ್‌ಸಿ ಜೊತೆ ಸೇರ್ಪಡೆ ಮಾಡಿ ಹೊಸ ವಿನ್ಯಾಸದ ಕಟ್ಟಡಗಳನ್ನು ರಚಿಸಲಾಗುವುದು. ಇದರಿಂದ ಕಟ್ಟಡದಲ್ಲಿ ಬಿಆರ್‌ಸಿ ಮತ್ತು ಕ್ಷೇತ್ರ ಸಂಪನ್ಮೂಲ ಸಮಿತಿ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಸಲು ಹೆಚ್ಚಿನ ಸ್ಥಳಾವಕಾಶ ಕಲ್ಪಿಸಿದಂತಾಗುವುದು.

ಕ್ಷೇತ್ರ ಸಂಪನ್ಮೂಲ ಸಮಿತಿ ಕಟ್ಟಡ

ಸಮೂಹ ಮಟ್ಟದಲ್ಲಿ ಸುಮಾರು ೧೦-೧೫ ಶಾಲೆಗಳಿಗೆ ಒಂದರಂತೆ ಕೇಂದ್ರ ಸ್ಥಳದಲ್ಲಿ ಸಮೂಹ ಸಂಪನ್ಮೂಲ ಸಮಿತಿ ಕಟ್ಟಡಗಳನ್ನು ಕಟ್ಟಲಾಗುವುದು. ಇದರ ಒಟ್ಟು ವಿಸ್ತೀರ್ಣ ಸುಮಾರು ೬೦೦ ಚದರ ಅಡಿಗಳಿಷ್ಟಿದ್ದು, ಇದರಲ್ಲಿ ೫೦ ಜನರಿಗೆ ಸಭೆ ಸೇರಲು/ ತರಬೇತಿ

ನೀಡಲು ಅನುಕೂಲವಾಗುವಂತೆ ಕೊಠಡಿಗಳನ್ನು ನಿರ್ಮಿಸಲಾಗುವುದು. ಶೌಚಾಲಯ, ವರಾಂಡ ಇತ್ಯಾದಿಗಳನ್ನು ಅಳವಡಿಸಲಾಗುತ್ತದೆ. ಇದರ ಅಂದಾಜು ವೆಚ್ಚ ರೂ. ೩.೫೦ಲಕ್ಷ. ಇದರ ನಿರ್ಮಾಣ ಜಾಗತಿಕ ಬ್ಯಾಂಕ್‌ನವರು ನೀಡಿರುವ ಮಾರ್ಗಸೂಚಿಯಂತೆ ನಿರ್ಮಾಣ ಮಾಡಲಾಗುತ್ತದೆ.

ಕ್ಷೇತ್ರ ಸಂಪನ್ಮೂಲ ಸಮಿತಿ ಮಟ್ಟದಲ್ಲಿ ಮಾಸಿಕ ವಿಚಾರ ವಿನಿಮಯ ಸಭೆ

* ಪ್ರತಿ ತಿಂಗಳು ನಿಗದಿತ ದಿನಾಂಕದಂದು ಕ್ಷೇತ್ರ ಸಂಪನ್ಮೂಲ ಸಮಿತಿ ವ್ಯಾಪ್ತಿಯಲ್ಲಿ ಬರುವ ಒಂದರಿಂದ ನಾಲ್ಕನೇ ತರಗತಿಗಳಿಗೆ ಬೋಧಿಸುವ ಶಿಕ್ಷಕರು ಸಮಾಲೋಚನೆ ಸಭೆ ಸೇರುತ್ತಾರೆ.

* ಈ ಸಭೆಯಲ್ಲಿ ಶಿಕ್ಷಕರು ತಮಗೆ ಇರುವ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಾರೆ.

* ಪ್ರಸ್ತುತ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಮಾರ್ಗೋಪಾಯಗಳನ್ನು ಕಂಡುಕೊಳ್ಳುತ್ತಾರೆ.

* ಬೋಧನೆಯಲ್ಲಿ ತಾವು ಕಳೆದ ಒಂದು ತಿಂಗಳಲ್ಲಿ ಅಳವಡಿಸಿಕೊಂಡಿರುವ ಎಲ್ಲಾ ವಿಧಾನಗಳ ಬಗ್ಗೆ ಚರ್ಚಿಸುತ್ತಾರೆ.

* ಚಟುವಟಿಕೆ ಆಧಾರಿತ ಬೋಧನೆ, ಅದರಲ್ಲಿನ ಸಮಸ್ಯೆಗಳು ಮತ್ತು ಶಿಕ್ಷಣ ರಂಗದಲ್ಲಿ ಸಮುದಾಯದ ಭಾಗವಹಿಸುವಿಕೆ ಇತ್ಯಾದಿಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ.

* ಸಭೆಗೆ ಹಾಜರಾಗುವ ಪ್ರತಿ ಶಿಕ್ಷಕರಿಗೆ ಪ್ರಯಾಣ ಭತ್ಯೆ ಮತ್ತು ಮಧ್ಯಾಹ್ನದ ಊಟ ನೀಡಲಾಗುತ್ತದೆ.

* ಕ್ಷೇತ್ರ ಸಂಪನ್ಮೂಲ ಸಮಿತಿಯ ಸಂಪನ್ಮೂಲ ವ್ಯಕ್ತಿಯೊಬ್ಬರು ಈ ಸಭೆಯಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡುತ್ತಾರೆ.

* ಸಭೆಯ ಉದ್ದೇಶವು ಶಿಕ್ಷಕರಲ್ಲಿ ಉದ್ಭವಿಸುವ ಪ್ರಶ್ನೆಗಳಿಗೆ ಉತ್ತರ ಕೊಡುವಲ್ಲಿ ಹಾಗೂ ಶಿಕ್ಷಣದ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳುವಲ್ಲಿ ಒಂದು ಉತ್ತಮ ಹೆಜ್ಜೆಯಾಗಿದೆ.

೫. ಶಿಕ್ಷಕ ತರಬೇತಿ ಮತ್ತು ಕೈಪಿಡಿ

ಸೇವಾನಿರತ ಪ್ರಾಥಮಿಕ ಶಿಕ್ಷಕರ ತರಬೇತಿಗಾಗಿ ತರಬೇತಿ ರೂಪುರೇಷೆಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆವತಿಯಿಂದ ಸಿದ್ಧಪಡಿಸಲಾಗಿದೆ. ಈ ತರಬೇತಿಯ ರೂಪುರೇಷೆಗಳು ಮೂರು ಸಂಚಿಕೆಗಳಲ್ಲಿರುತ್ತದೆ.

ಚಿಗುರು: ಈ ಸಂಚಿಕೆಯಲ್ಲಿ ಎರಡು ಶಾಲೆಗಳ ಕಥೆ, ಮಕ್ಕಳು ಕಲಿಯುವ ವಿಧಾನ, ಕಲಿಕಯಲ್ಲಿ ಉಪಯೋಗಿಸುವ ವಸ್ತುಗಳು ಇತ್ಯಾದಿ ವಿವರಗಳಿರುತ್ತವೆ. ಇದನ್ನು ತರಬೇತಿಯಲ್ಲಿ ಭಾಗವಹಿಸುವ ಶಿಕ್ಷಕರಿಗೆ ಕೊಡಲಾಗುತ್ತದೆ.

ಮಂಥನ: ಇದು ತರಬೇತಿ ಸಂಚಿಕೆ, ತರಬೇತಿದಾರರ ಉಪಯೋಗಕ್ಕಾಗಿ ಇರುವ ಪುಸ್ತಕ. ಪರಿಣಾಮಕಾರಿ ತರಬೇತಿ ತಂತ್ರಗಳ ಬಗ್ಗೆ ಇಲ್ಲಿ ವಿವರಗಳನ್ನು ಒದಗಿಸಲಾಗಿದೆ. ತರಬೇತಿ ವಿನ್ಯಾಸವನ್ನು ಸಂದರ್ಭಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವ ಸ್ವಾತಂತ್ರ್ಯವನ್ನು ತರಬೇತಿದಾರರಿಗೆ ಕಲ್ಪಿಸಲಾಗಿದೆ.

ಆಡೋಣ ಬಾ: ತರಗತಿಯಲ್ಲಿ ಮತ್ತು ತರಬೇತಿ ಶಿಬಿರದಲ್ಲಿ ನಡೆಸಬಹುದಾದ ವಿವಿಧ ಚಟುವಟಿಕೆಗಳ ಕುರಿತ ಮಾಹಿತಿ ಈ ಪುಸ್ತಕದಲ್ಲಿರುತ್ತದೆ. ಇದನ್ನು ತರಬೇತಿಗೆ ಹಾಜರಾಗುವ ಎಲ್ಲಾ ಶಿಕ್ಷಕರಿಗೆ ಕೊಡಲಾಗುತ್ತದೆ.

* ಈ ತರಬೇತಿಯು ಪಾಲ್ಗೊಳ್ಳುವಿಕೆ ಹಾಗೂ ಚಟುವಟಿಕೆ ಆಧಾರಿತ ತರಬೇತಿಯಾಗಿರುತ್ತದೆ.
* ಈ ತರಬೇತಿಗಳಲ್ಲಿ ಶಿಕ್ಷಕರ ಗುಣಾತ್ಮಕ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಲಾಗಿದೆ.

೬. ಲಿಂಗ ತರಬೇತಿ

ಈ ತರಬೇತಿಯು ಮುಖ್ಯವಾಗಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಅದರಲ್ಲೂ ಸಮಾಜದಲ್ಲಿನ ಹೆಣ್ಣು ಮಕ್ಕಳಲ್ಲಿರುವ ನಾಚಿಕೆ–ಮೇಲು–ಕೀಳು ಎಂಬ ಅಸಮಾನತೆಯನ್ನು ನಿವಾರಿಸುವ ಸಲುವಾಗಿ ಹಮ್ಮಿಕೊಳ್ಳಲಾಗಿದೆ. ಈ ತರಬೇತಿಯ ಅಡಿಯಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಅದರಲ್ಲಿಯೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಎಂಬ ವರ್ಗಬೇಧವಿಲ್ಲದೆ ಎಲ್ಲರು ಸಮಾನ ಮನಸ್ಕರು ಎಂಬ ಭಾವನೆ ಬೆಳೆಯುವಂತಹ ಶಿಕ್ಷಣವನ್ನು ನೀಡಲಾಗುವುದು.

ಈ ತರಬೇತಿಗೆ ನಿದರ್ಶನವಾಗಿ ಯೋಜನೆಯಡಿಯಲ್ಲಿ 'ಮಲ್ಕಾ' ಎಂಬ ಕಿರು ಚಿತ್ರವನ್ನು ತಯಾರಿಸಲಾಗಿದೆ. ಹೆಣ್ಣು ಮಗುವಿನ ಶಿಕ್ಷಣದ ಬಗ್ಗೆ ಹೆಚ್ಚು ಒತ್ತು ಕೊಟ್ಟಿರುವ ಈ ಚಿತ್ರವನ್ನು ಪ್ರತಿಯೊಂದು ವರ್ಗವು ವೀಕ್ಷಿಸಿ ಆ ಮಟ್ಟದಲ್ಲಿ ತಮ್ಮ ಮಕ್ಕಳನ್ನು ತರುವಂತಹ ಅವಕಾಶ ಕಲ್ಪಿಸಿಕೊಳ್ಳಲು ಅನುವು ಮಾಡಲಾಗಿದೆ.

ವರ್ಗಬೇಧವಿಲ್ಲದೆ ಗಂಡು/ಹೆಣ್ಣುಮಕ್ಕಳನ್ನು ಜೊತೆಯಾಗಿ ಕೆಲಸ ಮಾಡಿಸುವ, ಆಟ ಆಡಿಸುವ ಮತ್ತು ಕಲೆತು ಕಲಿಯುವ ಅವಕಾಶ ಈ ತರಬೇತಿ ಮೂಲಕ ನೀಡಲಾಗಿದೆ.

ಹೆಣ್ಣುಮಕ್ಕಳಿಗೆ ಗುಡಿಸುವ, ನೀರು ತರುವ ಕೆಲಸಗಳನ್ನು ವಹಿಸುವುದು ಹಾಗೂ ಹೆಣ್ಣು ಮಗು ಅಳುವ ಹಾಗೆ ಅಳಬೇಡ ಎಂಬಂತೆ ಮೂದಲಿಸುವುದು ಮುಂತಾದ ಧೋರಣೆಗಳನ್ನು ನಿವಾರಿಸಿ ಎಲ್ಲರೂ ಸಮಾನ ಎಂಬ ಭಾವನೆ ಬೆಳೆಸುವುದು ಈ ತರಬೇತಿಯ ಉದ್ದೇಶವಾಗಿರುತ್ತದೆ.[೧೪]

೭. ಗ್ರಾಮ ಶಿಕ್ಷಕ ಪ್ರೇರಕರು ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರದ ಬೋಧಕರ ತರಬೇತಿ

* ಪ್ರಸ್ತುತ ಅನೌಪಚಾರಿಕ ಶಿಕ್ಷಣ ಕೇಂದ್ರಗಳ ಬೋಧಕರು ಮತ್ತು ಗ್ರಾಮ ಶಿಕ್ಷಕರ ಪ್ರೇರಕರಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಜೊತೆಯಲ್ಲಿಯೇ ಆರು ದಿವಸಗಳ ಚಟುವಟಿಕೆ ಆಧಾರಿತ ತರಬೇತಿಯನ್ನು ನೀಡಲಾಗುತ್ತಿದೆ.

* ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ ಉಪಯೋಗಿಸಲು ಖುಷಿಯೋಖುಷಿ ಎಂಬ ಶೀರ್ಷಿಕೆಯ ಮಕ್ಕಳ ಪುಸ್ತಕ ಮತ್ತು ಶಿಕ್ಷಕರ ಕೈಪಿಡಿಗಳನ್ನು ರಾಜ್ಯ ಕಛೇರಿಯಿಂದ ತಯಾರಿಸಿ ಪ್ರಕಟಿಸಿ ಜಿಲ್ಲೆಗಳಿಗೆ ನೀಡಲಾಗಿದೆ.

* ಮಧ್ಯ ಪ್ರದೇಶದ ಏಕಲವ್ಯ ಸಂಸ್ಥೆಯವರು ಹಿಂದಿಯಲ್ಲಿ ಪ್ರಕಟಿಸಿದ ಇದೇ ಶೀರ್ಷಿಕೆಯ ಪುಸ್ತಕಗಳನ್ನು ಕನ್ನಡಕ್ಕೆ ರೂಪಾಂತರಗೊಳಿಸಿ ಈ ಪುಸ್ತಕಗಳನ್ನು ಪ್ರಕಟಿಸಲಾಗಿದೆ.

* ಅನೌಪಚಾರಿಕ ಶಿಕ್ಷಣ ಕೇಂದ್ರದ ಬೋಧಕರು ಹಾಗೂ ಗ್ರಾಮ ಶಿಕ್ಷಣ ಪ್ರೇರಕರಿಗೆ ತರಬೇತಿ ನೀಡಲು ತರಬೇತಿ ಸಂಚಿಕೆಗಳನ್ನು ಪ್ರತ್ಯೇಕವಾಗಿ ತಯಾರಿಸಿ ತರಬೇತಿಗಳನ್ನು ಹಮ್ಮಿಕೊಳ್ಳುವ ಕಾರ್ಯಕ್ರಮವನ್ನು ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

೮. ಗಣಿತ ಪ್ರಯೋಗಾಲಯ

ಶಾಲೆಗಳಲ್ಲಿ ಗಣಿತವನ್ನು ಸರಳವಾಗಿ ಆಕರ್ಷಕವಾಗಿರುವಂತೆ ಬೊಧಿಸುವ ದೃಷ್ಟಿಯಿಂದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಒಂದನೇ ಹಂತದ ಜಿಲ್ಲೆಗಳ ಕ್ಷೇತ್ರ ಸಂಪನ್ಮೂಲ ಸಮಿತಿ/ಸಮೂಹ ಸಂಪನ್ಮೂಲ ಸಮಿತಿಗಳಿಗೆ ಗಣಿತದ ಸಾಮಗ್ರಿಗಳ ಸರಬರಾಜು ಮಾಡಲಾಗಿದೆ. ಈ ಸಾಮಗ್ರಿಗಳಲ್ಲಿ ೧೦೦ ಮಾದರಿಗಳು ಹಾಗೂ ಬಳಕೆದಾರರ ಕೈಪಿಡಿ ಅಳವಡಿಸಲಾಗಿರುತ್ತದೆ. ಸುವಿದ್ಯಾ ಸಂಸ್ಥೆಯಿಂದ ಈ ಸಾಮಗ್ರಿಗಳ ಬಳಕೆ ಹಾಗೂ ಕ್ಷೇತ್ರ ಸಂಪನ್ಮೂಲ ಸಮಿತಿ/ಸಮೂಹ ಸಂಪನ್ಮೂಲ ಸಮಿತಿ ಬೋಧಕ ವರ್ಗದವರಿಗೆ ಗಣಿತದ ಉಪಕರಣ ಹಾಗೂ ಬಳಸುವ, ತಯಾರಿಸುವ ತರಬೇತಿಯನ್ನು ಏರ್ಪಡಿಸಲಾಗಿದೆ. ಇದೇ ರೀತಿ ಶಿಕ್ಷಕರು ಸ್ಥಳೀಯವಾಗಿ ದೊರೆಯಬಹುದಾದ ಸಾಮಗ್ರಿಗಳನ್ನು ಬಳಸಿಕೊಂಡು ಗಣಿತದ ಮಾದರಿಗಳನ್ನು ತಯಾರಿಸಿ ಮಕ್ಕಳಿಗೆ ಗಣಿತವನ್ನು ಸರಳವಾಗಿ ಕಲಿಯಲು ಅನುವಾಗುವಂತೆ ಉಪಕರಣಗಳನ್ನು ತಯಾರಿಸಬೇಕಿರುತ್ತದೆ. ಇದಕ್ಕಾಗಿ ಶಿಕ್ಷಕರು ಅವರಿಗೆ ನೀಡುವ ವಾರ್ಷಿಕ ಅನುದಾನ ರೂ. ೫೦೦ನ್ನು ಬಳಸಬೇಕಿರುತ್ತದೆ.

೯. ಬೋಧನಾ ಕಲಿಕಾ ಸಾಮಗ್ರಿ ಹಾಗೂ ಪೂರಕ ವಾಚನಾ ಸಾಮಗ್ರಿಗಳು

ಮಕ್ಕಳ ಪಠ್ಯಪುಸ್ತಕಗಳಲ್ಲದೆ ಕಲಿಯಲು ಉಪಯೋಗಿಸುವ ಇತರೇ ಸಾಮಗ್ರಿಗಳನ್ನು ಬೋಧನಾ-ಕಲಿಕಾ ಹಾಗೂ ಪೂರಕ ವಾಚನ ಸಾಮಗ್ರಿ ಎಂದು ಕರೆಯುತ್ತೇವೆ. ಪಠ್ಯಪುಸ್ತಕಗಳ ಜೊತೆಗೆ ಹೆಚ್ಚಿನ ಅಭ್ಯಾಸಕ್ಕಾಗಿ ಉಪಯೋಗಿಸುವ ಪುಸ್ತಕಗಳನ್ನು ಪೂರಕ ವಾಚನ ಪುಸ್ತಕಗಳು ಎಂದು ಕರೆಯುತ್ತೇವೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯಲ್ಲಿ ಹೊಸ ಶಾಲೆಗಳಿಗೆ ಬೋಧನಾ ಕಲಿಕಾ ಸಾಮಗ್ರಿ ಮತ್ತು ಪೂರಕ ವಾಚನ ಪುಸ್ತಕಗಳನ್ನು ಒದಗಿಸಲು ಅವಕಾಶವಿರುತ್ತದೆ. ಉದಾ: ಭೂಪಟ, ಚಿತ್ರಪಟ ಇತ್ಯಾದಿ.

೧೦. ಭಿತ್ತಿ ಪತ್ರಿಕೆಗಳು

ಮೂರು ಮತ್ತು ನಾಲ್ಕನೇ ತರಗತಿ ಮಕ್ಕಳಲ್ಲಿ ಓದು ಆಸಕ್ತಿ ಬೆಳೆಸಲು ಹಾಗೂ ಅವರು ಸ್ವತಃ ಚಟುವಟಿಕೆ ಮಾಡಿ ಕಲಿಯಲು ಪ್ರೇರೇಪಿಸುವ ಸಲುವಾಗಿ 'ಕಲಿ-ನಲಿ' ಮಾಸಿಕ ಭಿತ್ತಿ ಪತ್ರಿಕೆಯನ್ನು

ರಾಜ್ಯ ಯೋಜನಾ ಕಛೇರಿಯಿಂದ ಪ್ರಕಟಿಸಲಾಗುತ್ತಿದೆ. ಇದಕ್ಕೆ ರಾಜ್ಯ ಮಟ್ಟದಲ್ಲಿ ಒಂದು ತಜ್ಞರ ಸಮಿತಿ ಇರುತ್ತದೆ.

ವ್ಯಂಗ್ಯಚಿತ್ರ, ಪದಬಂಧ, ಗಣಿತ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳ, ಲಿಂಗಭೇದಕ್ಕೆ ಸಂಬಂಧಿಸಿದ ಚಟುವಟಿಕೆಗಳು, ಚಿತ್ರ ರಚನೆ, ಕಥೆ, ಪರಿಸರ ಅಧ್ಯಯನ ಇತ್ಯಾದಿಗಳನ್ನು ಈ ಭಿತ್ತಿ ಪತ್ರಿಕೆ ಒಳಗೊಂಡಿರುತ್ತದೆ.

ಇದುವರೆಗೂ ೨೦ ಮಾಸಿಕ ಭಿತ್ತಿ ಪತ್ರಿಕೆಗಳನ್ನು ಹೊರತರಲಾಗಿದೆ. ಇದರಿಂದ ಪ್ರೇರಿತರಾಗಿ ಇನ್ನು ಮುಂದೆ ಜಿಲ್ಲಾ ಮಟ್ಟದಲ್ಲಿಯೇ ಈ ಕಾರ್ಯಕ್ರಮವನ್ನು ರೂಪಿಸಲು ಯೋಜಿಸಲಾಗುತ್ತಿದೆ. ಈ ಭಿತ್ತಿ ಪತ್ರಿಕೆಗಳನ್ನು ಮಕ್ಕಳಿಗಾಗಿ ಉಪಯೋಗಿಸುವ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಲಾಗುತ್ತಿದೆ.

೧೧. ಸಾಮರ್ಥ್ಯ ನಿರ್ಮಾಣ

ಅ. ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಇಲಾಖೆಯ ಬಲವರ್ಧನೆ: ಸದರಿ ಸಂಸ್ಥೆಯು ಶಿಕ್ಷಣದ ಗುಣಮಟ್ಟದ ಸುಧಾರಣೆಗಾಗಿ ರಾಜ್ಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬಲಪಡಿಸುವ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಯೋಜನೆಯಡಿಯಲ್ಲಿ ಅವಕಾಶವನ್ನು ಒದಗಿಸಲಾಗಿದೆ. ಈ ಸಂಸ್ಥೆಗೆ ಬೇಕಾದ ಸಲಕರಣೆಗಳಾದ ಗಣಕಯಂತ್ರ, ನಕಲು ಪ್ರತಿ ಯಂತ್ರ ಹಾಗೂ ಇತರೆ ಉಪಕರಣಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ವತಿಯಿಂದ ಒದಗಿಸಲಾಗಿದೆ. ಅಲ್ಲದೆ ಜಿಲ್ಲಾ ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಕಾರ್ಯಾಗಾರಗಳನ್ನು ನಿರ್ವಹಿಸಲು ಅನುದಾನವನ್ನು ನೀಡಲಾಗಿದೆ. ಇದರ ಜೊತೆಗೆ ಮಧ್ಯಕಾಲೀನ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಪ್ರಗತಿಯ ಸಮೀಕ್ಷೆ ಬಗ್ಗೆಯೂ ಸಹ ರಾಜ್ಯಮಟ್ಟದ ಶಿಕ್ಷಣ ಸಂಶೋಧನೆ ಮತ್ತು ತರಬೇತಿಯ ಕಾರ್ಯನಿರ್ವಹಿಸಿರುತ್ತದೆ.

ಈ ಸಂಸ್ಥೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬಲಪಡಿಸಲು ಪುನರ್‌ರಚನೆ ಮಾಡಲಾಗುತ್ತಿದ್ದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪುನರ್‌ರಚನೆಯ ಅಂಗವಾಗಿ ವೃಂದ ಮತ್ತು ಶ್ರೇಣಿ ನಿಯಮಗಳನ್ನು ಹೊಸದಾಗಿ ರಚಿಸಲಾಗುತ್ತಿದೆ. ಇದರಂತೆ ಶೇಕಡಾ ೩೦% ನೇರ ನೇಮಕಾತಿಯಿಂದಲೂ ಶೇ. ೪೦% ಇಲಾಖೆಯಿಂದ ನಿಯೋಜನೆ ಮೇಲೂ ಶೇ. ೩೦% ಇತರೆ ಸರ್ಕಾರೇತರ ಇಲಾಖೆಗಳಿಂದ (NGO Ient service) ಎರವಲು ಪಡೆದು ತುಂಬಲಾಗುತ್ತದೆ. ಇದರಲ್ಲಿ ಏಳು ವಿಭಾಗಗಳನ್ನು ರಚಿಸಲಾಗುತ್ತಿದೆ ಹಾಗೂ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಲಾಗಿದ್ದು., ಇದಕ್ಕಾಗಿ ತಗಲುವ ವೇತನ ಇತ್ಯಾದಿ ವೆಚ್ಚಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಆಯವ್ಯಯದಿಂದ ಭರಿಸಲಾಗುತ್ತದೆ.

ಈ ಸಂಸ್ಥೆಯ ಕಟ್ಟಡ ಕಾಮಗಾರಿಗಳಿಗಾಗಿ ೩.೫೩ ಕೋಟಿ ರೂಪಾಯಿ(ವಸತಿ ಮತ್ತು ಸಮೂಹ ಕಟ್ಟಡ ಸೇರಿ)ಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ವತಿಯಿಂದ ಮೀಸಲಾಗಿರಿಸಲಾಗಿದೆ. ಅಲ್ಲದೇ ಗ್ರಂಥಾಲಯ ಹಾಗೂ ನಿಯತಕಾಲಿಕಗಳನ್ನೂ ಒದಗಿಸಲು ಹಣ ಮೀಸಲಾಗಿರಿಸಿದೆ.

ಬ. ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರಗಳ ಬಲವರ್ಧನೆ : ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರಗಳ ಬಲವರ್ಧನೆಗಾಗಿ ಕಾರ್ಯಕ್ರಮವನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ವಾರ್ಷಿಕ ಯೋಜನೆಯಲ್ಲಿ ಅಳವಡಿಸಲಾಗಿದೆ. ಅದರಂತೆ ಗ್ರಂಥಾಲಯ ಪುಸ್ತಕಗಳು, ನಕಲು ಪ್ರತಿ ಯಂತ್ರ, ಛಾಯಾಚಿತ್ರ ಯಂತ್ರ(ಮಂಡ್ಯ ಜಿಲ್ಲೆಗೆ ಮಾತ್ರ) ವಾಹನ ಇತ್ಯಾದಿಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ವತಿಯಿಂದ ಒದಗಿಸಲಾಗಿದೆ. ಈ ಬಗ್ಗೆ ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರದ ಪ್ರಾಂಶುಪಾಲರು ಅವರ ಅವಶ್ಯಕತೆಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾ ಯೋಜನಾ ಕಛೇರಿಯವರು ಈ ಪ್ರಸ್ತಾವನೆಯ ಪ್ರಕಾರ ಆಯವ್ಯಯವನ್ನು ನಿಗದಿ ಮಾಡಿ ಜಿಲ್ಲಾ ಅನುಷ್ಠಾನ ಸಮಿತಿಯ(DIC) ಅನುಮತಿ ಪಡೆದು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಖರೀದಿ ನಿಯಮಗಳ ಪ್ರಕಾರ ಖರೀದಿಸಲು ಕ್ರಮ ಕೈಗೊಳ್ಳುತ್ತಾರೆ. ಇವುಗಳನ್ನು ಹೇಗೆ ಉಪಯೋಗಿಸಬೇಕು ಎಂಬುದರ ಬಗ್ಗೆ ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರದಲ್ಲಿಯ ಎಲ್ಲಾ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗುವುದು.

ಕ. ಸೂಕ್ಷ್ಮ ಯೋಜನೆ: ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಸಮುದಾಯದ ಭಾಗವಹಿಸುವಿಕೆ ಅತ್ಯಂತ ಪ್ರಾಮುಖ್ಯವಾದ ಅಂಶ. ಶೈಕ್ಷಣಿಕ ಸಮಸ್ಯೆಗಳು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಭಿನ್ನವಾಗಿದ್ದು, ನಾವು ಶೈಕ್ಷಣಿಕ ಕಾರ್ಯ ಯೋಜನೆಯನ್ನು ರೂಪಿಸಬೇಕೆಂದರೆ ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಯನ್ನು ರೂಪಿಸಬೇಕಾದ ಅವಶ್ಯಕತೆ ಇದೆ.

* ಸೂಕ್ಷ್ಮ ಯೋಜನೆ ಒಂದು ನಿರಂತರ ಚಟುವಟಿಕೆ ಇದರ ಮೂಲಕ ಸಮುದಾಯದ ಭಾಗವಹಿಸುವಿಕೆ ಸಾಧ್ಯವಾಗುತ್ತದೆ.
* ಭಾಗವಹಿಸುವ ಮೂಲಕ ಸಮುದಾಯಕ್ಕೆ ಪ್ರಾಥಮಿಕ ಶಿಕ್ಷಣದ ಅಗತ್ಯತೆಯ ಬಗ್ಗೆ ಅರಿವು ಮೂಡುತ್ತದೆ.
* ಹಳ್ಳಿಯ ನಿರ್ದಿಷ್ಟ ಕಾರ್ಯ ಯೋಜನೆ ರೂಪಿಸಲು ಸಾಧ್ಯವಾಗುತ್ತದೆ.
* ಜನರಿಗೂ ಸಹ ತಮ್ಮ ಹಳ್ಳಿಗಳಲ್ಲಿ ಮಕ್ಕಳು ಯಾವ ಕಾರಣಗಳಿಂದ ಶಾಲೆಗೆ ಹೋಗಲು ತೊಂದರೆಯಾಗಿದೆ ಎಂಬ ಅರಿವು ಮೂಡುತ್ತದೆ.
* ಇದರಲ್ಲಿ ಸಾಮಾಜಿಕ ಋತುಮಾನದ ನಕ್ಷೆಗಳನ್ನು ಗ್ರಾಮಸ್ಥರೇ ಬರೆದು ಬಿಡಿಸಿ ಆ ಊರಿನಲ್ಲಿರುವ ಶಿಕ್ಷಣಕ್ಕೆ ಸಂಬಂಧಪಟ್ಟ ಅಡಚಣೆಗಳನ್ನು ಗುರುತಿಸುತ್ತಾರೆ.
* ಮಕ್ಕಳ ಜವಾಬ್ದಾರಿ ನಕ್ಷೆಯ ಮುಖಾಂತರ ಅವರು ಮಾಡುವ ದಿನಚರಿ ಮತ್ತು ಅವರಿಗಿರುವ ಕೆಲಸದ ಒತ್ತಡ ಜನರಿಗೆ ಅರ್ಥವಾಗುತ್ತದೆ.

ಸೂಕ್ಷ್ಮ ಯೋಜನೆಯಲ್ಲಿ ಭಾಗಿಯಾಗಿ ಮನೆಯಿಂದ ಮನೆಗೆ ಹೋಗಿ ಸಮೀಕ್ಷೆ ನಡೆಸಿ ಪ್ರತಿಯೊಂದು ಮಗುವಿಗಿರುವ ತೊಂದರೆಯನ್ನು ಅಂದರೆ ಯಾವ ಕಾರಣಕ್ಕಾಗಿ ಶಾಲೆಗೆ ಹೋಗುತ್ತಿಲ್ಲ ಎಂಬ ಬಗ್ಗೆ ಅರ್ಥೈಸಿಕೊಂಡು ಹಳ್ಳಿಯಲ್ಲಿರುವ ಪ್ರತಿಯೊಂದು ಮಗುವಿಗೆ ತಕ್ಕಂತಹ ಶೈಕ್ಷಣಿಕ

ವಿನ್ಯಾಸವನ್ನು ರೂಪಿಸಲು ಅನುವು ಮಾಡಿಕೊಡುತ್ತಾರೆ. ಪ್ರತಿಯೊಂದು ಮಗುವು ಶಾಲೆಗೆ ಹೋಗಲು ಅಡಚಣೆಗಳನ್ನು ಗುರುತಿಸಿ ಗ್ರಾಮ ಶಿಕ್ಷಣ ಸಮಿತಿಯ ವತಿಯಿಂದ ಸೂಕ್ಷ್ಮ ಯೋಜನೆಯ ಭಾಗವಾಗಿ ರೂಪಿಸಲಾಗುತ್ತದೆ.

ಗ್ರಾಮ ಶಿಕ್ಷಣ ವತಿಯಲ್ಲಿ ಶಾಲೆಗೆ ಬಾರದಿರುವ ಮತ್ತು ದಾಖಲಾಗದೇ ಇರುವ ಮಕ್ಕಳ ಹೆಸರು/ವಯಸ್ಸು, ತಂದೆ, ತಾಯಿ ಹೆಸರು, ವೃತ್ತಿ, ವಿದ್ಯಾರ್ಹತೆಗಳನ್ನು ಗುರುತಿಸಲಾಗುತ್ತಿದೆ. ಸೂಕ್ಷ್ಮ ಯೋಜನೆಯ ಮುಖಾಂತರ ಗ್ರಾಮ ಶಿಕ್ಷಣ ಸಮಿತಿಗಳಿಗೆ ಜವಾಬ್ದಾರಿ ಹೆಚ್ಚಿಸಿ ಅವುಗಳನ್ನು ಬಲಗೊಳಿಸಲಾಗುತ್ತದೆ. ಎಲ್ಲಾ ಮೂಲಗಳಿಂದ ಸಂಗ್ರಹಿಸಿದಂತಹ ಶೈಕ್ಷಣಿಕ ಮಾಹಿತಿಗಳನ್ನು ಕ್ರೋಡೀಕರಿಸಿ ಗ್ರಾಮಸ್ಥರೇ ಪ್ರಾಥಮಿಕ ಶಿಕ್ಷಣದ ಪ್ರಗತಿಗೆ ಒಂದು ಕಾರ್ಯ ಯೋಜನೆಯನ್ನು ರೂಪಿಸಿ ಪ್ರತಿಯೊಂದು ವಿಷಯಕ್ಕೆ ನಿಯಮಿತವಾದ ಕಾಲಾವಧಿಯನ್ನು ಗೊತ್ತುಪಡಿಸುತ್ತಾರೆ.

ಸೂಕ್ಷ್ಮ ಯೋಜನೆಯ ತರಬೇತಿ ಕೈಪಿಡಿಯನ್ನು ರಚಿಸಲಾಗಿದೆ. ಅಲ್ಲದೆ ಒಟ್ಟು ೧೧ ಜಿಲ್ಲೆಗಳಲ್ಲಿ ಜಿಲ್ಲೆಗೆ ೪೦ರಂತೆ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಈಗಾಗಲೇ ಸೂಕ್ಷ್ಮ ಯೋಜನೆ ಬಗ್ಗೆ ಐದು ದಿನಗಳ ಚಟುವಟಿಕೆ ಆಧಾರಿತ ತರಬೇತಿ ನೀಡಲಾಗಿದೆ. ಗ್ರಾಮ ಮಟ್ಟದಲ್ಲಿ ಸೂಕ್ಷ್ಮ ಯೋಜನೆ ನಾಲ್ಕು ದಿನಗಳು ನಡೆಯುತ್ತವೆ. ಈಗಾಗಲೇ ಸೂಕ್ಷ್ಮ ಯೋಜನೆ ಹಮ್ಮಿಕೊಂಡಿರುವ ಗ್ರಾಮಗಳಲ್ಲಿ ಸುಮಾರು ಐದು ಜಿಲ್ಲೆಗಳಲ್ಲಿ ೧೨೦ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯಲು ಗುರುತಿಸಲಾಗಿದೆ.

ಡ. ಗ್ರಾಮ ಶಿಕ್ಷಣ ಸಮಿತಿ ತರಬೇತಿ

ರಚನೆ : ಗ್ರಾಮ ಶಿಕ್ಷಣ ಸಮಿತಿಗೆ ಸದರಿ ಗ್ರಾಮದ ಪಂಚಾಯತ್ ಅಧ್ಯಕ್ಷರು/ ಸದಸ್ಯರು ಅಧ್ಯಕ್ಷರಾಗಿರುತ್ತಾರೆ. ಊರಿನ ಶಾಲೆಯ ಮುಖ್ಯ ಶಿಕ್ಷಕರು ಕಾರ್ಯದರ್ಶಿಗಳಾಗಿರುತ್ತಾರೆ. ಗ್ರಾಮ ಶಿಕ್ಷಣ ಸಮಿತಿಯಲ್ಲಿ ೧/೩ರಷ್ಟು ಮಹಿಳಾ ಪ್ರತಿನಿಧಿಗಳಿರಬೇಕು. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಪ್ರತಿನಿಧಿಗಳು ಹಾಗೂ ಅಂಗವಿಕಲ ವಿದ್ಯಾರ್ಥಿ ಪೋಷಕರು ಇರುತ್ತಾರೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಪ್ರತಿವರ್ಷ ಗ್ರಾಮ ಸಮನ್ವಯ ಸಮಿತಿಗೆ ಅನುದಾನ ಮಂಜೂರು ಮಾಡುತ್ತದೆ. ಇದನ್ನು ಗ್ರಾಮದ ಶಾಲೆಗಳಿಗೆ ಅಗತ್ಯವಾದ ಕುಡಿಯುವ ನೀರಿನ ಸೌಲಭ್ಯ, ಶಾಲೆಗೆ ಸುಣ್ಣ, ಬಣ್ಣ, ಜಮಖಾನ ಖರೀದಿಸಲು ಇತ್ಯಾದಿ ಅಗತ್ಯಗಳಿಗಾಗಿ ಒದಗಿಸಬಹುದು.

ತರಬೇತಿ : ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರಿಗೆ ನಾಲ್ಕು ದಿನಗಳ ತರಬೇತಿ ಶಿಬಿರವನ್ನು ಕ್ಷೇತ್ರ ಸಂಪನ್ಮೂಲ ಸಮಿತಿಯು ಏರ್ಪಡಿಸುತ್ತದೆ. ಇದರಲ್ಲಿ ಗ್ರಾಮ ಶಿಕ್ಷಣ ಸಮಿತಿ ತರಬೇತಿದಾರರ ಕೈಪಿಡಿಯಲ್ಲಿ ಸೂಚಿತ ವಿಷಯಗಳ ಮೂಲಕ ತರಬೇತಿ ನೀಡಲಾಗುತ್ತದೆ.

ಲ. ಶಾಲೆ ಮತ್ತು ಸಮುದಾಯ

ಕರ್ನಾಟಕ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ)ಗಳ ರಚನೆ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪ್ರಸ್ತಾವನೆಯಲ್ಲಿ ಡಾ. ರಾಜಾರಾಮಣ್ಣನವರ ಅಧ್ಯಕ್ಷತೆಯ ಕಾರ್ಯತಂಡದ ಮಧ್ಯಂತರ ವರದಿಯ ಶಿಫಾರಸ್ಸಿನಂತೆ ಕರ್ನಾಟಕ ರಾಜ್ಯದ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಖಚಿತ ಪಡಿಸಲು ಹಾಗೂ ತತ್ಸಂಬಂಧಿಯಾದ ವಿಷಯಗಳನ್ನು ಕುರಿತು ಶಿಕ್ಷಣ ಕಾಯ್ದೆಗೆ ತಿದ್ದುಪಡಿಯನ್ನು ಸೂಚಿಸಲಾಗಿದೆ.

೨. ಈ ಕೆಳಗಿನ ಕಾರಣಗಳಿಗಾಗಿ ಈ ತಿದ್ದುಪಡಿಯು ಅವಶ್ಯವಾಗಿದೆ

೧. ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಬಹುದು.

೨. ಶಾಲೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.

೩. ತಮ್ಮ ಮಕ್ಕಳ ಏಳಿಗೆಯ ಬಗ್ಗೆ ಸದಾ ಕಾಳಜಿಯುಳ್ಳ ಪೋಷಕರು/ಪಾಲಕರು ಶಿಕ್ಷಣ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು.

೪. ಶಿಕ್ಷಣ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ ಆಡಳಿತವನ್ನು ಸುಧಾರಿಸುವುದು.

೫. ಶಿಕ್ಷಕರನ್ನು ಪ್ರೇರೇಪಿಸಿ ಅವರ ಜವಾಬ್ದಾರಿಯನ್ನು ಹೆಚ್ಚಿಸುವುದು.

೬. ಗ್ರಾಮ ಶಿಕ್ಷಣ ಸಮಿತಿಗಳ ರಚನೆಯಲ್ಲಿ ಉಳಿದುಕೊಂಡ ನ್ಯೂನ್ಯತೆಗಳನ್ನು ಹೋಗಲಾಡಿಸುವುದು.

೭. ಶಾಲಾ ಯೋಜನೆ ಹಾಗೂ ಅಭಿವೃದ್ಧಿಗಾಗಿ ಶಾಲೆಯನ್ನೇ ಒಂದು ಘಟಕವನ್ನಾಗಿ ಪರಿಗಣಿಸಿ ಪ್ರಕಲ್ಪನಾತ್ಮಕ ದಾಖಲೆ (ವಿಜನ್ ಡಾಕ್ಯುಮೆಂಟ್) ತಯಾರಿಸುವುದು.

೮. ದಾಖಲಾತಿ/ ಹಾಜರಾತಿ ಶಿಕ್ಷಣ ಗುಣಮಟ್ಟ ಸುಧಾರಣೆ ಕುರಿತಂತೆ ಇರುವ ಸಮಸ್ಯೆಗಳನ್ನು ಪರಿಹರಿಸುವುದು.

೯. ತರಗತಿಯ ಚಟುವಟಿಕೆಗಳನ್ನು ಶಿಸ್ತುಬದ್ಧವಾಗಿ ಸಂಘಟಿಸುವುದು.

೧೦. ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು.

ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಶಾಲಾ ಅಭಿವೃದ್ಧಿ ಸಮಿತಿ ಮತ್ತು ಗ್ರಾಮ ಶಿಕ್ಷಣ ಸಮಿತಿಗಳನ್ನು ರದ್ದುಪಡಿಸಿ, ಶಾಲಾ ಮಟ್ಟದಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ, ಗ್ರಾಮ ಪಂಚಾಯತ್ ಮಟ್ಟದಲ್ಲಿ ಗ್ರಾಮ ಪಂಚಾಯತ್ ಶಿಕ್ಷಣ ಸಮಿತಿ, ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯತ್ ಶಿಕ್ಷಣ ಸಮಿತಿ ಹಾಗೂ ನಗರ ಮಟ್ಟದಲ್ಲಿ ನಗರ ಸಭೆ/ಕಾರ್ಪೋರೇಷನ್ ಸಮಿತಿಗಳ ರಚನೆಯನ್ನು ಉದ್ದೇಶಿಸಲಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ ೧೯ಲಕ್ಷಿಕ್ಕೆ ತಿದ್ದುಪಡಿ ತರುವ

ಪ್ರಕ್ರಿಯೆಯು ಪೂರ್ಣಗೊಳ್ಳಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇರುವುದರಿಂದ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ(ಎಸ್.ಡಿ.ಎಂ.ಸಿ)ಗಳ ರಚನೆಗೆ ಕಾನೂನು ತಿದ್ದುಪಡಿಗೆ ಪ್ರಕ್ರಿಯೆ ಪ್ರಾರಂಭಿಸುವುದರೊಂದಿಗೆ ಸರ್ಕಾರದ ಕಾರ್ಯಕಾರಿ ಆದೇಶವನ್ನು ಹೊರಡಿಸುವಂತೆ ಪ್ರಸ್ತಾವನೆಯಲ್ಲಿ ಕೋರಲಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ ೧೯೮೩ ಗೆ ತಿದ್ದುಪಡಿ ತರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಪ್ರಕ್ರಿಯೆ ಪೂರ್ಣಗೊಳ್ಳಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇರುವುದನ್ನು ಸರ್ಕಾರವು ಮನಗಂಡು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ರಚನೆ ಕುರಿತಂತೆ ಈ ಕೆಳಕಂಡಂತೆ ಆದೇಶಿಸಿದೆ.

೩. ಸರ್ಕಾರಿ ಆದೇಶ ಸಂಖ್ಯೆ: ಇಡಿ ೧ ಪಿ ಬಿ ಎಸ್ ೨೦೦೧, ಬೆಂಗಳೂರು,
ದಿನಾಂಕ: ೨೮.೪.೨೦೦೧

ಕರ್ನಾಟಕ ರಾಜ್ಯದಲ್ಲಿ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಖಚಿತಪಡಿಸಲು ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ(ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು) ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ(ಎಸ್.ಡಿ.ಎಂ.ಸಿ)ಗಳ ರಚನೆಗೆ ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

೪. ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ(ಎಸ್.ಡಿ.ಎಂ.ಸಿ)ಯ ರಚನೆ

ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯು ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ.

ಅ. ಪೋಷಕ ಸಭೆಯಿಂದ ೯ ಜನ ಪೋಷಕ ಪ್ರತಿನಿಧಿಗಳನ್ನು ಆಯ್ದುಕೊಳ್ಳಬೇಕು. ಈ ಒಂಭತ್ತು ಜನರಲ್ಲಿ ಕನಿಷ್ಠ ಮೂವರು ಮಹಿಳಾ ಪ್ರತಿನಿಧಿಗಳು ಖಾಯಂ ಇರಬೇಕು. ಕನಿಷ್ಠ ಇಬ್ಬರು ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿದವರಾಗಿರಬೇಕು. ಒಬ್ಬರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು.

ಯಾವುದೇ ಪೋಷಕರು ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ಸದಸ್ಯರಾಗಿರಕೂಡದು. ಒಂದು ವೇಳೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಅಲ್ಪಸಂಖ್ಯಾತ ಪ್ರತಿನಿಧಿಗಳು ಲಭ್ಯವಿಲ್ಲದಿದ್ದಲ್ಲಿ ಇತರರಿಂದ ಭರ್ತಿ ಮಾಡುವುದು. ೩ ವರ್ಷದ ಒಳಗೆ ಮುಂದೆ ಈ ವರ್ಗದ ಮಕ್ಕಳು ದಾಖಲಾದಲ್ಲಿ ಅಂತಹ ಪೋಷಕರನ್ನು ಗಮನಿಸಿ ಮುಂದೆ ಉದ್ಭವಿಸುವ ಸ್ಥಾನಗಳಿಗೆ ಆದ್ಯತೆಯ ಮೇರೆಗೆ ಭರ್ತಿ ಮಾಡುವುದು.

ಆ. ಈ ಕೆಳಗಿನವರು ಪದನಿಮಿತ್ತ ಸದಸ್ಯರಾಗಿರಬೇಕು.

i) ಆ ಕ್ಷೇತ್ರವನ್ನು ಪ್ರತಿನಿಧಿಸುವ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರು.

ii) ಅಂಗನವಾಡಿ ಇದ್ದಲ್ಲಿ ಅದರ ಶಿಕ್ಷಕಿಯೊಬ್ಬರು.

iii) ಆ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಾಥಮಿಕ ಆರೋಗ್ಯ ಕಾರ್ಯಕರ್ತರು

iv) ಆ ಶಾಲೆಯ ಮುಖ್ಯ ಗುರುಗಳು.

ಇ. ಈ ಕೆಳಗಿನವರು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗೆ ನಾಮನಿರ್ದೇಶಿತ ಸದಸ್ಯರಾಗಿರಬೇಕು.

i) ಶಾಲೆಯನ್ನು ದತ್ತು ತೆಗೆದುಕೊಂಡ ಮಹನೀಯರು.

ii) ಶಾಲೆ ಕಟ್ಟಲು ಭೂಮಿ ದಾನ ಮಾಡಿದ ದಾನಿಗಳು, ಶಾಲಾ ಕಟ್ಟಡವನ್ನು ಕಟ್ಟಿಸಿಕೊಟ್ಟ ಮಹನೀಯರು ಮತ್ತು ರೂಪಾಯಿ ೧೦,೦೦೦-೦೦ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಶೈಕ್ಷಣಿಕ ಉಪಕರಣಗಳನ್ನು ಕೊಡಿಸಿದ ಮಹನೀಯರು ಅಥವಾ ರೂಪಾಯಿ ೧೦,೦೦೦-೦೦ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ದಾನ ಮಾಡಿದ ದಾನಿಗಳು.

iii) ಆ ಕ್ಷೇತ್ರದಲ್ಲಿ ವಾಸಿಸುವ ಒಬ್ಬ ಶಿಕ್ಷಣ ತಜ್ಞರು ಅಥವಾ ಒಬ್ಬ ನಿವೃತ್ತ ಶಿಕ್ಷಕರು.

iv) ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಇಬ್ಬರು ಸದಸ್ಯರು.

v) ಯುವಕ ಸಂಘ ಅಥವಾ ಯುವತಿ ಸಂಘದ ಒಬ್ಬ ಪದಾಧಿಕಾರಿಗಳು.

vi) ಏಳನೇ ವರ್ಗದ ಅಥವಾ ಹತ್ತನೇ ವರ್ಗದ ಒಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿ ನಾಮ ನಿರ್ದೇಶನಗೊಂಡ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.

೨. ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಕಾಲಾವಧಿ

ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಕಾಲಾವಧಿಯು ಮೂರು ವರ್ಷಗಳದ್ದಾಗಿರುತ್ತದೆ.

೩. ಸ್ಥಾಯಿ ಸಮಿತಿಗಳ ರಚನೆ

ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯು ಬೇರೆ ಬೇರೆ ವಿಷಯ ಸಮಿತಿಗಳನ್ನು ಸ್ಥಾಯಿ ಸಮಿತಿಗಳಾಗಿ ರಚಿಸಿಕೊಳ್ಳಬಹುದು. ಅವಶ್ಯಕತೆಗನುಗುಣವಾಗಿ ಅದು ಪ್ರತಿಯೊಂದು ಸ್ಥಾಯಿ ಸಮಿತಿಗೂ ಗೌರವ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು. ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿಯು ಈ ಕೆಳಕಂಡಂತೆ ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಬಹುದು.

* ಅಭಿವೃದ್ಧಿ ಸಮಿತಿ

* ಮೇಲುಸ್ತುವಾರಿ ಸಮಿತಿ

* ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯು ಬೇರೆ ಯಾವುದೇ ಸಮಿತಿಯನ್ನು ರಚಿಸಬಹುದು.

೪. ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಅಧಿಕಾರಗಳು

* ಶಾಲೆಯು ಸರಿಯಾಗಿ ಕೆಲಸ ಮಾಡುವುದನ್ನು ಖಾತರಿಪಡಿಸಿಕೊಳ್ಳುವುದು. ಶಿಕ್ಷಕ ಸಿಬ್ಬಂದಿಯ ಸಕಾಲಿಕ ಹಾಗೂ ನಿಯಮಿತ ಹಾಜರಾತಿಯ ಮೇಲೆ ಗಮನವಿಡುವುದು. ಸದಸ್ಯರು ಶಿಕ್ಷಕರ ಹಾಜರಾತಿ ವಹಿಯನ್ನು ಶಾಲೆಯಲ್ಲಿಯೇ ಪರಿವೀಕ್ಷಿಸಬಹುದು.

* ಶಿಕ್ಷಕ ಸಿಬ್ಬಂದಿಯ ಸಕಾಲಿಕ ಹಾಗೂ ನಿಯಮಿತ ಹಾಜರಾತಿಯಲ್ಲಿ ಏನಾದರೂ ದೋಷ ಕಂಡುಬಂದರೆ, ಈ ಬಗ್ಗೆ ಮಾಸಿಕ ಸಭೆಯಲ್ಲಿ ಚರ್ಚಿಸಿ, ಗೊತ್ತುವಳಿ ಪಾಸು ಮಾಡಿ ಸೂಕ್ತ ಕ್ರಮಕ್ಕೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸುವುದು. ಮೇಲಧಿಕಾರಿಗಳು ಈ ಬಗ್ಗೆ ತೆಗೆದುಕೊಂಡ ಕ್ರಮದ ಕುರಿತು ಗೊತ್ತುವಳಿ ಸ್ವೀಕರಿಸಿದ ೩೦ ದಿನಗಳೊಳಗೆ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗೆ ತಿಳಿಸಬೇಕು.

* ಕಿರಿಯ ಮತ್ತು ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳಿಗೆ ಸಾಂದರ್ಭಿಕ ಹಾಗೂ ನಿರ್ಬಂಧಿತ ರಜೆ ಮಂಜೂರು ಮಾಡುವ ಅಧಿಕಾರವು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಿಗೆ ಇರುತ್ತದೆ.

* ಒಂದು ವರ್ಷದಲ್ಲಿ ನಾಲ್ಕಕ್ಕೆ ಮೀರದಂತೆ ಸ್ಥಳೀಯ ರಜೆಗಳನ್ನು ನಿರ್ಧರಿಸುವುದು.

* ನಿರುಪಯುಕ್ತವಾದ ವಿಜ್ಞಾನೋಪಕರಣಗಳು, ಕಲಿಕೆಯ ಸಾಧನಗಳು, ಪೀಠೋಪಕರಣಗಳು, ಆಡದ ಸಾಮಗ್ರಿಗಳು, ನಕಾಶೆಗಳು, ಭೂಪಟಗಳು, ವಾಚನಾಲಯದ ಪುಸ್ತಕಗಳು ಇತ್ಯಾದಿ ಎಲ್ಲಾ ಸಾಮಗ್ರಿಗಳು ಸೇರಿ ಗರಿಷ್ಠ ಕಿರಿಯ ಪ್ರಾಥಮಿಕ ಶಾಲೆಗಳಿಗೆ ವಾರ್ಷಿಕ ರೂ. ೨೦೦೦.೦೦, ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಾರ್ಷಿಕ ರೂ. ೫೦೦೦.೦೦ ಮತ್ತು ಪ್ರೌಢಶಾಲೆಗಳಿಗೆ ವಾರ್ಷಿಕ ರೂ. ೧೦೦೦೦.೦೦ ದ ಮಿತಿಯಲ್ಲಿ ನಿರುಪಯುಕ್ತವೆಂದು ಘೋಷಿಸುವುದು. ಹೀಗೆ ಘೋಷಿಸಿದ ಪೀಠೋಪಕರಣಗಳನ್ನು ಹರಾಜು ಮಾಡಿ ಬಂದ ಹಣವನ್ನು ಶಾಲೆಯ ಶಿಕ್ಷಣ ನಿಧಿಗೆ ಜಮಾ ಮಾಡುವುದು.

* ಸಾಂಸ್ಕೃತಿಕ ಚಟುವಟಿಕೆಗಳು, ಆಟೋಟ ಸ್ಪರ್ಧೆಗಳು, ರಾಜ್ಯದೊಳಗಿನ ಶೈಕ್ಷಣಿಕ ಪ್ರವಾಸಗಳು, ಬೇರೆ ರೀತಿಯ ಸಂದರ್ಶನಗಳು ಇತ್ಯಾದಿಗಳನ್ನು ಸಂಘಟಿಸಲು ಅನುಮತಿ ನೀಡುವುದು.

* ಶಾಲೆಯು ದಾನವಾಗಿ ಸ್ವೀಕರಿಸಿದ ಹಾಗೂ ಖರ್ಚು ಮಾಡಿದ ಹಣದ ಲೆಕ್ಕ ಪತ್ರಗಳನ್ನು ಹಾಗೂ ತತ್ಸಂಬಂಧಿಯಾದ ದಾಖಲೆಗಳನ್ನು ಪರೀಕ್ಷಿಸುವುದು.

* ಶಾಲೆಯ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ನಿಯಮಿತವಾಗಿ ಹರಾಜು ಮಾಡಿ ಬಂದ ಹಣವನ್ನು ಶಾಲೆಯ ಶಿಕ್ಷಣ ನಿಧಿಗೆ ಜಮಾ ಮಾಡುವುದು.

* ವಾಚನಾಲಯ ನಿಧಿ, ಕ್ರೀಡಾ ನಿಧಿ, ಪ್ರಯೋಗಾಲಯ ನಿಧಿ ಇತ್ಯಾದಿ ಸರ್ಕಾರೇತರ ನಿಧಿಗಳ ಅನುಮೋದನೆಯನ್ನು ನಿಯಮಾನುಸಾರ ನೀಡುವುದು.

* ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ರಾಜ್ಯ ವಲಯ ಮತ್ತು ಕೇಂದ್ರ ವಲಯದಿಂದ ಬಿಡುಗಡೆಯಾಗುವ ಹಣದಲ್ಲಿ ಆ ಶಾಲೆಗೆ ಬೇಕಾಗುವ ಸಾಧನ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಅಧಿಕಾರ ಹೊಂದಿರುತ್ತದೆ.

೫. ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಕರ್ತವ್ಯಗಳು:

i) ಶಾಲೆಯ ವ್ಯಾಪ್ತಿಯಲ್ಲಿನ ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲು ಮಾಡುವಂತೆ ಪೋಷಕರಲ್ಲಿ ಅರಿವು ಮೂಡಿಸುವುದು ಹಾಗೂ ಈ ರೀತಿ ದಾಖಲಾದ ಮಕ್ಕಳನ್ನು ನಿಯಮಿತವಾಗಿ ಶಾಲೆಗೆ ಕಳುಹಿಸುವಂತೆ ಮಾಡುವುದು.

ii) ಶಾಲೆಯ ವ್ಯಾಪ್ತಿಯಲ್ಲಿರುವ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು ದಾಖಲಾತಿ ಆಂದೋಲನ, ಬುನಾದಿ ತರಬೇತಿ, ಚಿಣ್ಣರ ಅಂಗಳ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುವುದು. ಶಾಲೆಯಿಂದ ಹೊರಗುಳಿದ ಮಕ್ಕಳ ಯಾದಿಯನ್ನು ತಯಾರಿಸಿ ಸಾರ್ವಜನಿಕ ಸ್ಥಳಗಳಾದ ಶಾಲೆ, ಚಾವಡಿ, ಗ್ರಾಮ ಪಂಚಾಯಿತಿ ಸಮುದಾಯ ಭವನ ಇತ್ಯಾದಿಗಳಲ್ಲಿ ಪ್ರಸಿದ್ಧಪಡಿಸುವುದು.

iii) ಶಾಲೆಯಲ್ಲಿ ಓದುವ ಎಲ್ಲಾ ಮಕ್ಕಳು ನಿರ್ದಿಷ್ಟ ಗುಣಮಟ್ಟದ ಕಲಿಕೆ ಪಡೆಯಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವುದು.

iv) ಶಾಲೆಯ ಆವರಣವನ್ನು ಹಾಗೂ ಕಟ್ಟಡವನ್ನು ಅತಿಕ್ರಮಣ ಹಾಗೂ ವಿನಾಶಕಗಳಿಂದ ಕಾಪಾಡುವುದು.

v) ವೇಳಾಪಟ್ಟಿಯಂತೆ ಪ್ರತಿ ವರ್ಷ ೨೨೦ ಕಲಿಕಾ ದಿನಗಳು ಮತ್ತು ಪ್ರತಿ ದಿನ ಐದೂವರೆ ಗಂಟೆಗಳು ಶಾಲೆ ನಡೆಯುವುದನ್ನು ಖಾತರಿ ಪಡಿಸಿಕೊಳ್ಳುವುದು.

vi) ವರ್ಷದಲ್ಲಿ ಮೂರು ಸಲ ಅಂದರೆ ಜುಲೈ, ನವಂಬರ್ ಹಾಗೂ ಫೆಬ್ರವರಿ ಈ ತಿಂಗಳ ಪೋಷಕರ ಸಭೆಗಳನ್ನು ಆಯೋಜಿಸುವುದು.

vii) ಶಾಲಾ ಶಿಕ್ಷಣ ನಿಧಿ ಸ್ಥಾಪಿಸುವುದು.

ಶಾಲಾ ಅಭಿವೃದ್ಧಿಗಾಗಿ ಶಾಲಾ ಅಭಿವೃದ್ಧಿ ಹಾಗೂ ಮೆಲುಸ್ತುವಾರಿ ಸಮಿತಿಯು ಸಾರ್ವಜನಿಕರಿಂದ ವಂತಿಗೆಗಳನ್ನು ದಾನವನ್ನು ಸ್ವೀಕರಿಸಬಹುದು. ಸಮಿತಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಒಂದು ಖಾತೆ ತೆರೆದು ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಜಂಟಿಯಾಗಿ ಆ ಖಾತೆಯನ್ನು ನಿರ್ವಹಿಸುವ ಕೆಳಕಾಣಿಸಿದ ಎಲ್ಲಾ ಹಣವನ್ನು ಈ ಖಾತೆಗೆ ಜಮಾ ಮಾಡುವುದು.

ಅ. ಶಾಲೆಯ ಸೌಲಭ್ಯಗಳಿಗಾಗಿ ಸರ್ಕಾರದಿಂದ ಅಥವಾ ಸಂಘ ಸಂಸ್ಥೆಗಳಿಂದ ಕೊಟ್ಟ ಹಣ.

ಆ. ಶಾಲೆಗೆ ಕೊಡಲ್ಪಟ್ಟ ಸಾದಿಲ್ವಾರು ಹಣ.

ಇ. ಶಾಲಾ ಅಭಿವೃದ್ಧಿಗಾಗಿ ದಾನಿಗಳು ಕೊಟ್ಟ ಹಣ.

viii) ಗ್ರಾಮ್ ಪಂಚಾಯತ್ ಅಥವಾ ತಾಲೂಕು ಪಂಚಾಯಿತಿಯ ತಾಂತ್ರಿಕ ಸಹಾಯಕ ಸಲಹೆಗಳೊಂದಿಗೆ ಶಾಲೆಯ ಕಟ್ಟಡ ನಿರ್ಮಾಣ, ಹೆಚ್ಚುವರಿ ನಿರ್ಮಾಣ, ದುರಸ್ತಿ ಕಾರ್ಯಗಳನ್ನು ನೇರವಾಗಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯೇ ಮಾಡಬೇಕು.

ix) ದಾನಿಗಳನ್ನು ಗುರುತಿಸಿ ಅವರನ್ನು ಸಂಪರ್ಕಿಸಿ, ಶಾಲೆಯನ್ನು ದತ್ತು ತೆಗೆದುಕೊಳ್ಳಲು ಪ್ರೇರೇಪಿಸಬೇಕು.

x) ಶಾಲಾ ಸಂಕೀರ್ಣ ಕಾರ್ಯಕ್ರಮದಲ್ಲಿ ಶಿಕ್ಷಕರು ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸುವುದು.

xi) ಶಾಲಾ ಮಕ್ಕಳಿಗಾಗಿ ಆರೋಗ್ಯ ಶಿಬಿರವನ್ನು ಏರ್ಪಡಿಸುವುದು ಹಾಗೂ ಅವರಿಗೆ ಆರೋಗ್ಯ ಚೀಟಿಗಳನ್ನು ಕೊಡುವುದು.

xii) ಸರ್ಕಾರದಿಂದ ಕೊಡಲ್ಪಡುವ ಪ್ರೋತ್ಸಾಹದಾಯಕ ಸೌಲಭ್ಯಗಳನ್ನು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವಂತೆ ನೋಡಿಕೊಳ್ಳುವುದು.

೬. ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು

* ಒಂಭತ್ತು ಜನ ಪೋಷಕ ಪ್ರತಿನಿಧಿಗಳಿಂದ ಒಬ್ಬರನ್ನು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರೆಂದು ಬಹುಮತದಿಂದ ಆರಿಸುತ್ತದೆ.

* ಆಯಾ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಪದನಿಮಿತ್ತ ಸದಸ್ಯರಾದ ಆಯಾ ಶಾಲೆಯ ಮುಖ್ಯ ಗುರುಗಳು ಆಯಾ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಖಜಾಂಜಿಗಳಾಗಿರುತ್ತಾರೆ.

೭. **ಸಭೆ ನಡೆಸುವುದು:** ಸಭೆ ನಡೆಸಲು ಪೋಷಕ ಪ್ರತಿನಿಧಿಗಳಲ್ಲಿ ಮೂರನೇ ಎರಡು ಭಾಗದಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ.

೮. **ಪೋಷಕರ ಸಭೆಯ ರಚನೆ:** ಪ್ರತಿಯೊಂದು ಶಾಲೆಗೂ ಒಂದು ಪೋಷಕರ ಸಭೆ ಇರುತ್ತದೆ. ಮುಖ್ಯ ಗುರುಗಳ ಹತ್ತಿರ ನೋಂದಾಯಿತ ಪೋಷಕರ ಪಟ್ಟಿ ಇರುತ್ತದೆ.(ತಂದೆ ಮತ್ತು ತಾಯಿ ಇಬ್ಬರೂ, ತಂದೆ ತಾಯಿ ಇಲ್ಲದಿದ್ದಲ್ಲಿ ಪೋಷಕರು/ವಾರಸುದಾರರು) ಈ ಪಟ್ಟಿಯನ್ನು ಪರಿವೀಕ್ಷಣೆಗೆ ಇಡಬೇಕು ಹಾಗೂ ಪ್ರಕಟಿಸಬೇಕು.

ಪೋಷಕ ಸಭೆಯ ಕುರಿತಾದ ಸೂಚನೆಯನ್ನು ಶಾಲೆಯ ಫಲಕ ಗ್ರಾಮದ ಚಾವಡಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ೧೫ ದಿನಗಳ ಮುಂಚಿತವಾಗಿ ಪ್ರಕಟಿಸತಕ್ಕದ್ದು. ಈ ಸೂಚನೆಯಲ್ಲಿ ಪೋಷಕ ಸಭೆಯು ನಡೆಯುವ ದಿನಾಂಕ ಹಾಗೂ ಸಮಯವನ್ನು ಪ್ರಕಟಿಸತಕ್ಕದ್ದು.

ಪೋಷಕ ಸಭೆ ನಡೆಸಲು ಗೊತ್ತುಪಡಿಸಿದ ಅಧಿಕಾರಿ: ಆಯಾ ಮುಖ್ಯ ಶಿಕ್ಷಕರ ಸಮ್ಮುಖದಲ್ಲಿ ಪೋಷಕರ ಸಭೆಯ ರಚನೆ, ಗೊತ್ತುವಳಿ, ಅಂಗೀಕಾರ, ಅಧ್ಯಕ್ಷರ ಅಧಿಕಾರ ಸ್ವೀಕಾರ ಹಾಗೂ ಪ್ರಥಮ ಸಭೆ ನಡೆಯುತ್ತದೆ.

ಸಭೆ ನಡೆಯುವಿಕೆ: ಪ್ರತಿಯೊಂದು ಶಾಲೆಗೂ ಒಂದು ಪೋಷಕರ ಸಭೆ ಇರುತ್ತದೆ. ಮುಖ್ಯ ಗುರುಗಳ ಹತ್ತಿರ ನೋಂದಾಯಿತ ಪೋಷಕರ ಪಟ್ಟಿ ಇರುತ್ತದೆ. ಪ್ರತಿ ವರ್ಷ ಜುಲೈ ತಿಂಗಳಲ್ಲಿ ಆಯಾ ಶಾಲೆಯ ಮುಖ್ಯ ಗುರುಗಳು ಇಂತಹ ನೋಂದಾಯಿತ ಪೋಷಕರ ಸಭೆ ಕೂಡಿಸುತ್ತಾರೆ. ಆ ಸಭೆಯು ಆ ವರ್ಷಕ್ಕೆ ಪೋಷಕ ಸಭೆಯು ರಚಿತವಾಯಿತೆಂಬ ಬಗ್ಗೆ ಗೊತ್ತುವಳಿಯನ್ನು ಅಂಗೀಕರಿಸುತ್ತದೆ. ಪೋಷಕ ಸಭೆಯ ನಂತರ ಇದೇ ಸಭೆಯಲ್ಲಿ ೯ ಜನ ಪೋಷಕ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುತ್ತದೆ ಅಗತ್ಯವಿದ್ದಲ್ಲಿ ಕೈ ಎತ್ತುವ ಮೂಲಕ ಅಯ್ಕೆ ಮಾಡಲ್ಪಡುತ್ತದೆ.

ಅಧ್ಯಕ್ಷರ ಆಯ್ಕೆ: ಪೊಷಕರ ಸಭೆಯ ತಕ್ಷಣ ಈ ಒಂಭತ್ತು ಜನ ಪೊಷಕ ಪ್ರತಿನಿಧಿಗಳು ತಮ್ಮಲ್ಲಿ ಒಬ್ಬರನ್ನು ಅಧ್ಯಕ್ಷರೆಂದು ಆಯ್ಕೆ ಮಾಡುತ್ತಾರೆ. ಆಯಾ ಶಾಲೆಯ ಮುಖ್ಯ ಶಿಕ್ಷಕರು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗುತ್ತಾರೆ.

ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತವಾರಿ ಸಮಿತಿಯ ರಚನೆ: ಅಧ್ಯಕ್ಷರ ಆಯ್ಕೆಯ ನಂತರ ಈ ೯ ಜನ ಪೋಷಕ ಪ್ರತಿನಿಧಿಗಳು ಸೇರಿ ಪದನಿಮಿತ್ತ ಸದಸ್ಯರು ಹಾಗೂ ನಾಮ ನಿರ್ದೇಶನದ ಸದಸ್ಯರನ್ನು ನೇಮಕ ಮಾಡಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯನ್ನು ರಚಿಸಲು ನಿರ್ಣಯ ಕೈಗೊಳ್ಳಬೇಕು.

ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಪ್ರಥಮ ಸಭೆ: ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ರಚನೆಯಾದ ೭ ದಿನದೊಳಗೆ ಪ್ರಥಮ ಸಭೆಯ ನಿರ್ಣಯ ಹಾಗೂ ಅಧ್ಯಕ್ಷರ ಸೂಚನೆ ಮೇರೆಗೆ ಕರೆಯಬೇಕು. ಈ ಸಭೆಯ ನಂತರ ಪ್ರತೀ ತಿಂಗಳಿಗೂ ಒಮ್ಮೆ ಸಭೆ ಸೇರಿ ಶಾಲೆಯ ಪ್ರಗತಿಯ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು.

ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯು ರಚನೆಯಾದ ದಿನದಿಂದ ಮೂರು ವರ್ಷಗಳವರೆಗೆ ಅಸ್ತಿತ್ವದಲ್ಲಿರುತ್ತದೆ. ಮೂರು ವರ್ಷದ ನಂತರ ಹೊಸ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ರಚನೆಗಾಗಿ ಈ ಮೇಲೆ ಹೇಳಿದ ಪ್ರಕ್ರಿಯೆಯಂತೆಯೇ ಕ್ರಮ ಕೈಗೊಳ್ಳತಕ್ಕದ್ದು. ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಅವಧಿ ಪೂರ್ಣಗೊಳ್ಳುವ ವರ್ಷದ ಜೂನ್ ತಿಂಗಳಲ್ಲಿಯೇ ಮೇಲಿನ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು.

ಪ್ರಗತಿ ಪರಿಶೀಲನೆಗಾಗಿ ಪ್ರತೀ ಶೈಕ್ಷಣಿಕ ವರ್ಷದಲ್ಲಿ ಮೂರು ಬಾರಿ ಅಂದರೆ ಜುಲೈ, ನವೆಂಬರ್ ಹಾಗೂ ಫೆಬ್ರವರಿ ತಿಂಗಳಿನಲ್ಲಿ ಪೋಷಕ ಸಭೆಯು ಸೇರಿರುತ್ತದೆ. ಪೋಷಕ ಪ್ರತಿನಿಧಿಗಳ/ ಪೋಷಕರ ಸದಸ್ಯತ್ವವು ಮಗು ಶಾಲೆಯಲ್ಲಿರುವವರೆಗೆ ಮಾತ್ರ ಅಸ್ತಿತ್ವದಲ್ಲಿರುತ್ತದೆ.

ಪ್ರಾಥಮಿಕ ಶಿಕ್ಷಣದ ಮೇಲೆ ವ್ಯಕ್ತಿಗಳ ಹಾಗೂ ಸಮಾಜದ ಭವಿಷ್ಯ ನಿರ್ಧಾರವಾಗುತ್ತದೆ. ಇಂದಿನ ಹಾಗೂ ಮುಂಬರುವ ದಿನಗಳಲ್ಲಿ ಪ್ರತಿಯೊಂದು ಮಗುವೂ ಕನಿಷ್ಠ ಪಕ್ಷ ನಾಲ್ಕು ವರ್ಷಗಳಾದರೂ ಶಾಲೆ ಅಥವಾ ಅನೌಪಚಾರಿಕ ಕೇಂದ್ರಗಳಲ್ಲಿ ಶಿಕ್ಷಣವನ್ನು ಪಡೆಯದಿದ್ದರೆ ಅವರ ಜೀವ ಕಷ್ಟಕರವಾಗುತ್ತದೆ. ಆದ್ದರಿಂದ ಪ್ರಾಥಮಿಕ ಶಿಕ್ಷಣ ಪಾತ್ರ ಅತಿ ಮುಖ್ಯ. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದಿದ್ದಲ್ಲಿ ಭಿನ್ನ ಕುಟುಂಬಗಳಿಂದ ಬಂದ ಮಕ್ಕಳು ಬೇರೆ ಬೇರೆ ಮಟ್ಟದ ಶಿಕ್ಷಣ ಪಡೆಯುವಂತಾಗುತ್ತದೆ. ಇದರಿಂದ ಈಗಿರುವ ತಾರತಮ್ಯಗಳೇ ಮುದುವರಿದು ಸಮಾನತೆಯ ಅವಕಾಶ ಅಶಿಕ್ಷಿತ ಕುಟುಂಬಗಳ ಮಕ್ಕಳಿಗೆ ಕಡಿಮೆಯಾಗಿ ಅವರು ಹಿಂದುಳಿಯಬೇಕಾಗುತ್ತದೆ. ಹೀಗೆ ಹಿಂದಿನ ಪೀಳಿಗೆಯ ದುರ್ಬಲತೆಗಳಾದ ಅನಕ್ಷರತೆ, ಬಡತನ ಇತ್ಯಾದಿಗಳು ಮುಂದಿನ ಪೀಳಿಗೆಗೂ ವರ್ಗವಾಗುವ ಸಂಭವವಿದೆ. ಇದನ್ನು ಸರಿಪಡಿಸಲು ಪ್ರಾಥಮಿಕ ಶಿಕ್ಷಣದಲ್ಲಿ ಕಲಿಕಾ ಕನಿಷ್ಠ ಹಂತಗಳ ಯೋಜನೆಯು ಅನಿವಾರ್ಯವೆನಿಸಿವೆ.

ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅಖಿಲ ಭಾರತ ಮಟ್ಟದಲ್ಲಿ ಒಂದು ಸಲಹಾ ಸಮಿತಿಯು ಈ ಕೆಳಕಂಡ ಸಲಹೆಗಳನ್ನು ಮಾಡಿದೆ;

ಅ. ಪ್ರಾಥಮಿಕ ಶಿಕ್ಷಣ ಪಡೆದ ವ್ಯಕ್ತಿ ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ಕೆಲವು ಕನಿಷ್ಠ ಸಾಮರ್ಥ್ಯಗಳನ್ನು ಪಡೆದಿರಬೇಕು.

ಆ. ಸರಾಸರಿ ಮಟ್ಟದ ಚತುರತೆಯನ್ನು ಹೊಂದಿರುವ ಎಲ್ಲಾ ಮಕ್ಕಳು ಈ ಕನಿಷ್ಠ ಸಾಮರ್ಥ್ಯಗಳನ್ನು ಸಾಧಿಸಬೇಕು.

ಮೇಲಿನ ಉದ್ದೇಶ ಸಾಧನೆಗಾಗಿ ನಾವು ಶಿಕ್ಷಕರನ್ನು ಸಜ್ಜುಗೊಳಿಸಬೇಕಾಗಿದೆ. ಇದಕ್ಕಾಗಿ ಶಿಕ್ಷಕರ ಕೈಪಿಡಿಗಳನ್ನು, ಇತರೆ ಬೋಧನಾ ಸಾಮಗ್ರಿಗಳನ್ನು ತಯಾರಿಸಿ ಅವುಗಳನ್ನು ತರಗತಿಗಳಲ್ಲಿ ಉಪಯೋಗಿಸುವಲ್ಲಿ ಶಿಕ್ಷಕರಿಗೆ ಸೂಕ್ತ ತರಬೇತಿಯನ್ನೂ ಸಹ ನೀಡಬೇಕಾಗಿದೆ. ಇದಕ್ಕಾಗಿ ಪ್ರಾಥಮಿಕ ಶಿಕ್ಷಣ 'ಕಲಿಕಾ ಕನಿಷ್ಠ ಹಂತಗಳು' ಎಂಬ ಯೂನಿಸೆಫ್ (UNICEF) ಸಹಾಯಿತ ಯೋಜನೆಯನ್ನು ನಮ್ಮ ಕಛೇರಿಯಲ್ಲಿನ ರಾಜ್ಯಮಟ್ಟದ ಸಂಪನ್ಮೂಲ ಘಟಕವು ಹಮ್ಮಿಕೊಂಡಿದೆ. ಈ ಯೋಜನೆಗಾಗಿ ಯೂನಿಸೆಫ್ ವತಿಯಿಂದ ಈಗಾಗಲೇ ರೂ. ೫೦ ಲಕ್ಷಗಳ ಸಹಾಯಧನ ಬಂದಿದೆ. ಈ ಯೋಜನೆಯ ಪ್ರಥಮ ಹಂತದಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರು ಸುಲಭವಾಗಿ ಕನಿಷ್ಠ ಕಲಿಕಾ ಹಂತಗಳ ಬಗ್ಗೆ ಆಳವಾದ ಮಾಹಿತಿಯನ್ನು ಪಡೆದು ಕಾರ್ಯೋನ್ಮುಖರಾಗಲು 'ಪ್ರಾಥಮಿಕ ಶಿಕ್ಷಣದಲ್ಲಿ ಕನಿಷ್ಠ ಕಲಿಕಾ ಹಂತಗಳು' ಎಂಬ ಆಂಗ್ಲ ಹೊತ್ತಿಗೆಯನ್ನು ಕನ್ನಡಕ್ಕೆ

ಅನುವಾದಿಸಲಾಗಿದೆ. ಈ ಹೊತ್ತಿಗೆಯ ಆಂಗ್ಲ ಆವೃತ್ತಿಯ ಯಥಾವತ್ತಾದ ಅನುವಾದವಾಗದೇ ಎಲ್ಲಾ ಪ್ರಾಥಮಿಕ ಶಿಕ್ಷಕರಿಗೆ ಕನಿಷ್ಠ ಕಲಿಕಾ ಹಂತಗಳು ವಿವಿಧ ದ್ರಷ್ಟಿಕೋನಗಳನ್ನು ಸರಳವಾಗಿ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನವಾಗಿದೆ. ಭಾಷೆಯು ಸರಳವಾಗಿದ್ದು ಮೂಲವಸ್ತು ವಿಷಯಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಇದರಲ್ಲಿ ಹೇಳಲಾದ ಎಲ್ಲಾ ಅಂಶಗಳನ್ನು ಕಾರ್ಯರೂಪಕ್ಕೆ ತರುವ ಹೊಣೆ ಶಿಕ್ಷಕರ ಮೇಲಿದೆ. ಆದ್ದರಿಂದ ಶಿಕ್ಷಕರು, ವಿವಿಧ ಹಂತದ ಶೈಕ್ಷಣಿಕ ಆಡಳಿತಗಾರರು ಮತ್ತು ಸಮುದಾಯದ ಜನರು ಈ ಹೊತ್ತಿಗೆಯನ್ನು ಓದಿ, ಅರ್ಥಮಾಡಿಕೊಂಡು, ಅನುಷ್ಠಾನಗೊಳಿಸಿ, ಕನಿಷ್ಠ ಕಲಿಕಾ ಹಂತದ ಯೋಜನೆಯ ಸಂಪೂರ್ಣ ಯಶಸ್ಸಿಗೆ ಕಾರಣರಾಗುವರೆಂದು ಆಶಿಸಲಾಗಿದೆ.

ಕಲಿಕಾ ಕನಿಷ್ಠ ಹಂತಗಳು ಯೋಜನೆಯನ್ನು ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯದ ಮಾನ್ಯ ಶಿಕ್ಷಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ರಾಜ್ಯಮಟ್ಟದ ಸಲಹಾ ಸಮಿತಿಯನ್ನು ರಚಿಸಲಾಗಿದ್ದು, ಅದರ ಸಲಹೆ ಸೂಚನೆಗಳು ಯೋಜನೆಯ ಅನುಷ್ಠಾನದಲ್ಲಿ ಸಹಾಯಕವಾಗಲಿದೆ.

ಕಲಿಕಾ ಕನಿಷ್ಠ ಹಂತಗಳು ಯೋಜನೆಯನ್ನು ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯದ ಮಾನ್ಯ ಶಿಕ್ಷಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ರಾಜ್ಯಮಟ್ಟದ ಸಲಹಾ ಸಮಿತಿಯನ್ನು ರಚಿಸಲಾಗಿದ್ದು, ಅದರ ಸಲಹೆ ಸೂಚನೆಗಳು ಯೋನೆಯ ಅನುಷ್ಠಾನದಲ್ಲಿ ಸಹಾಯಕವಾಗಲಿದೆ.

ಕಲಿಕಾ ಕನಿಷ್ಠ ಹಂತಗಳು

೧. ಕೆಲವು ಪ್ರಮುಖ ಲಕ್ಷಣಗಳು

ಪೀಠಿಕೆ: ಜಾತಿ, ಸಮುದಾಯ, ಭೌಗೋಳಿಕ ಪರಿಸರ ಅಥವಾ ಲಿಂಗಭೇಧವಿಲ್ಲದೆ ಎಲ್ಲಾ ಮಕ್ಕಳಿಗೂ ಹೋಲಿಸಬಹುದಾದ ಗುಣಮಟ್ಟದ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿಕೊಡುವ ಮೂಲಭೂವಾದ ಉದ್ದೇಶದಿಂದ ಕಲಿಕಾ ಕನಿಷ್ಠ ಹಂತಗಳನ್ನು ರೂಪಿಸಬೇಕಾದ ಅವಶ್ಯಕತೆ ಮೂಡಿಬಂದಿದೆ. ಈ ಕಲಿಕಾ ಕನಿಷ್ಠ ಹಂತಗಳನ್ನು ರೂಪಿಸಿರುವ ನೀತಿಯ ಮುಖ್ಯ ದೃಷ್ಟಿಯ ಸಮಾನತೆ ಹಾಗೂ ಪ್ರಸ್ತುತ ಶಿಕ್ಷಣ ರಂಗದಲ್ಲಿರುವ ತಾರತಮ್ಯಗಳನ್ನು ಕಡಿಮೆ ಮಾಡುವುದೇ ಆಗಿದೆ. ರಾಷ್ಟ್ರದಲ್ಲಿ ಶಾಲೆಗೆ ಹೋಗಬೇಕಾಗಿರುವ ಮಕ್ಕಳಲ್ಲಿ ಬಹುಪಾಲು ಮಕ್ಕಳು ವಂಚಿತ ಹಾಗೂ ಅನಾನುಕೂಲ ಸ್ಥಿತಿಯಲ್ಲಿರುವ ಸಮುದಾಯದ ಮಕ್ಕಳಾಗಿದ್ದಾರೆ, ಇವರಲ್ಲಿ ಬಾಲಕಾರ್ಮಿಕರು, ಶಾಲೆ ತೊರೆದವರು ಮತ್ತು ಬಾಲಕಿಯರು ಸೇರಿದ್ದಾರೆ. ಇವರಿಗೆ ಕೆಲ ವರ್ಷಗಳವರೆಗೆ ಪ್ರಾಥಮಿಕ ಶಿಕ್ಷಣ ಮಾತ್ರವೇ ವ್ಯವಸ್ಥಿತ ಕಲಿಕೆಗೆ ಇರುವ ಏಕೈಕ ಅವಕಾಶವಾಗಿದೆ. ಆದ್ದರಿಂದ ಈ ಮಕ್ಕಳ ಅಭಿವೃದ್ಧಿ ಪರ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಕಲಿಕಾ ಗುಣಮಟ್ಟದಲ್ಲಿ ಸಮಾನತೆ ಮತ್ತು ಬೆಳವಣಿಗೆಯನ್ನು ಸಂಯೋಜಿಸುವ ಪ್ರಯತ್ನ ಇದಾಗಿದೆ. ಸಮಿತಿಯು ಕನಿಷ್ಠ ಕಲಿಕಾ ಹಂತಗಳನ್ನು ನಿರ್ಧರಿಸುವಾಗ ಮೇಲ್ಕಂಡ ಅಂಶಗಳ ಬಗ್ಗೆ ಕಾಳಜಿಯನ್ನು ಪ್ರಧಾನವಾಗಿ ಪರಿಗಣಿಸಿದೆ.

ಕಲಿಕಾ ಕನಿಷ್ಠ ಹಂತಗಳನ್ನು ಹಲವು ರೀತಿಯಲ್ಲಿ ವಿವರಿಸಬಹುದು. ಉದಾಹರಣೆಗೆ ವೀಕ್ಷಿಸಬಹುದಾದ ಅತ್ಯುತ್ತಮ ವರ್ತನೆಗಳೆಂದು ನಿರೂಪಿತವಾಗಿರವ ನಿರೀಕ್ಷಿತ ಕಲಿಕಾ ಫಲಗಳನ್ನೇ ಕಲಿಕಾ ಕನಿಷ್ಠ ಹಂತಗಳು ಎಂದು ಕರೆಯಬಹುದು. ಕಲಿಕಾ ಉದ್ದೇಶಗಳಾದ ಜ್ಞಾನ, ಗ್ರಹಿಕೆ, ಅನ್ವಯ, ವಿಶ್ಲೇಷಣೆ, ಸಂಶ್ಲೇಷಣೆ ಮತ್ತು ಮೌಲ್ಯಮಾಪನ- ಮುಂತಾದವುಗಳನ್ನು ನಿರೀಕ್ಷಿತ ಕಲಿಕಾ ಫಲಗಳೆಂದು ಗುರುತಿಸಬಹುದು. ಪ್ರತಿಯೊಂದು ಮಗುವು ಯಾವುದೇ ಒಂದು ತರಗತಿಯ ಅಥವಾ ಶಿಕ್ಷಣ ಹಂತದ ಕೊನೆಯಲ್ಲಿ ಸಾಧಿಸಬಹುದೆಂದು ನಿರೀಕ್ಷಿಸಲಾದ ಕಲಿಕಾ ಸಾಮರ್ಥ್ಯಗಳ ನೈಪುಣ್ಯತೆಯನ್ನು ಸಹ ಕಲಿಕಾ ಕನಿಷ್ಠ ಹಂತಗಳು ಎಂದು ಕರೆಯಬಹುದು. ಈ ವಿವಿಧ ಹೇಳಿಕೆಗಳು ಪರಸ್ಪರ ವಿರುದ್ಧವೇನೂ ಅಲ್ಲ. ಲಭ್ಯವಿರುವ ಹಲವು ಪರ್ಯಾಯಗಳಲ್ಲಿ ಸಮಿತಿಯು ಅತ್ಯುತ್ತಮ ಸಾಮರ್ಥ್ಯಗಳನ್ನು ಕಲಿಕಾ ಕನಿಷ್ಠ ಹಂತಗಳಾಗಿ ರೂಪಿಸಿದೆ. ಬೋಧನಾ ವಿಷಯನವನ್ನು ಸೇರ್ಪಡೆ ಮಾಡುವಾಗ ಅಥವಾ ಕಲಿಕೆಯ ನಿರ್ದಿಷ್ಟ ವಿಧಾನಗಳನ್ನು ರೂಪಿಸುವಾಗ ಪ್ರತಿಯೊಂದು ಕಲಿಕಾ ಸಾಮರ್ಥ್ಯವನ್ನು ಉಪಸಾಮರ್ಥ್ಯಗಳಾಗಿ ವಿಭಜಿಸಬಹುದು.

ಕಲಿಕಾ ಕನಿಷ್ಠ ಹಂತಗಳು ಒದಗಿಸಲಾದ ಪಠ್ಯ ವಸ್ತುವಿನ ಪ್ರಮಾಣ ಮತ್ತು ನಿರೀಕ್ಷಿತ ಕಲಿಕಾ ಫಲಗಳ ಸೂಕ್ತತೆಯ ಬಗ್ಗೆ ಮನವರಿಕೆ ಮಾಡಿಕೊಳ್ಳುವ ಒಂದು ತಾರ್ಕಿಕ ಮಾನದಂಡವಾಗಿ ಪ್ರತಿನಿಧಿಸುತ್ತವೆ. ಕಲಿಕಾ ಕನಿಷ್ಠ ಹಂತದ ಗುಂಪಿನಲ್ಲಿ ಯಾವುದನ್ನೂ ಅಂತಿಮ ಎಂದು ಹೇಳಬರುವುದಿಲ್ಲ. ಸಮಿತಿಯು ಅಭಿವೃದ್ಧಿ ಪಡಿಸಿದ ಕಲಿಕಾ ಕನಿಷ್ಠ ಹಂತಗಳಿಗೂ ಈ ಪರಿಮಿತಿ ಅನ್ವಯವಾಗುತ್ತದೆ. ಕಲಿಕಾ ಕನಿಷ್ಠ ಹಂತಗಳನ್ನು ರೂಪಿಸುವಾಗ ದೃಷ್ಟಿಯಲ್ಲಿಟ್ಟು ಕೊಳ್ಳಬೇಕಾದ ಎರಡು ಮೂಲ ಉದ್ದೇಶಗಳನ್ನು ಈ ಕೆಳಗೆ ನೀಡಲಾಗಿದೆ.

೧. ವಿವಿಧ ಬೆಳವಣಿಗೆಯ ಹಂತಗಳಿಗೆ ಸರಿಹೊಂದುವಂತೆ ವಿವಿಧ ತರಗತಿ ಅಥವಾ ಹಂತಗಳಲ್ಲಿ ಇರಬೇಕಾದ ಮಕ್ಕಳ ಜ್ಞಾನವಲಯದ ಸಾಮರ್ಥ್ಯಗಳು.

೨. ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳ ರೂಪುರೇಷೆಗಳನ್ನು ನಿರ್ಧರಿಸುವ ಪರಿಸರದ ಸ್ಥಿತಿಗತಿಗಳ ಸಾಕ್ಷ್ಯಾಧಾರಿತ ವಾಸ್ತವತೆ.

ಕನಿಷ್ಠ ಕಲಿಕೆಯ ಹಂತಗಳ ಅರ್ಥವನ್ನು ತಾಂತ್ರಿಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು, ಸಮಿತಿಯು ಮಾಡಿಲ್ಲ. ಪ್ರಸ್ತುತ ಅಧ್ಯಾಯವು ಕಲಿಕಾ ಕನಿಷ್ಠ ಹಂತಗಳನ್ನು ರೂಪಿಸಲು ಬೇಕಾದ ಅವಶ್ಯಕತೆಗಳ ಬಗ್ಗೆ ಚರ್ಚಿಸುತ್ತದೆ.

೨. ಕಲಿಕಾ ಕನಿಷ್ಠ ಹಂತಗಳು ಸ್ಪಷ್ಟನೆ: ಗುಣಮಟ್ಟ ಕುರಿತ ವಿಷಯ: ಮಕ್ಕಳು ಶಿಕ್ಷಣದ ಪ್ರತಿ ಹಂತದ ಕೊನೆಯಲ್ಲಿ ಏನನ್ನು ಕಲಿಯಬೇಕೆಂದು ಸ್ಪಷ್ಟವಾಗಿ ಒತ್ತು ನೀಡಲಾಗಿದೆಯೋ ಅದು ಪ್ರಮುಖವಾಗಿ ಮೂರು ವಿಷಯಗಳನ್ನೊಳಗೊಂಡಿದೆ.

ಮೊದಲನೆಯದಾಗಿ, ಸ್ಪಷ್ಟವಾಗಿ ನಿರೂಪಿತವಾದ ಕಲಿಕಾ ಅಂಕಗಳು ಶಿಕ್ಷಣ ವ್ಯವಸ್ಥೆಯಲ್ಲಿ

ಕ್ರಮಿಸಬೇಕಾದ ಗುರಿಯ ಕಲ್ಪನೆ ಹಾಗೂ ಹೊಣೆಗಾರಿಕೆಯನ್ನು ತರಲು ಪ್ರಯತ್ನಿಸುತ್ತದೆ. ಈ ದಿಸೆಯಲ್ಲಿ ಹಲವು ಬಾರಿ ಸೂಚಿಸಿರುವಂತೆ ಶಿಕ್ಷಕರಿಗಾಗಲೀ, ವಿದ್ಯಾರ್ಥಿಗಳಿಗಾಗಲೀ, ಇದರ ಪರಿಣಾಮವಾಗಿ ಪೋಷಕರಿಗಾಗಲೀ, ಶೈಕ್ಷಣಿಕ ಯೋಜಕರಿಗಾಗಲೀ ತಾವು ಎಲ್ಲಿದ್ದೇವೆ? ಎಲ್ಲಿರಬೇಕು? ಎನ್ನುವ ಬಗ್ಗೆ ಪರಿಜ್ಞಾನವಿದ್ದಂತಿಲ್ಲ. ವಿದ್ಯಾರ್ಥಿಗಳ ಪ್ರಗತಿಯನ್ನು ಅಳೆಯಲು ರೂಪಿತವಾಗಿರುವ ಮಾಪನಗಳು ಇಲ್ಲದಿರುವುದರಿಂದ ಶಿಕ್ಷಕರು ಗುರಿಯನ್ನು ತಪ್ಪುವುದು ಆಶ್ಚರ್ಯವೇನಲ್ಲ. ಕ್ರಮಬದ್ಧವಾದ ಹಾಜರಿಯಾಗಲಿ, ಪಠ್ಯ ಕ್ರಮದ ಪೂರೈಸುವಿಕೆಯಾಗಲೀ ಯಾವ ಕಾಲಕ್ಕೂ ನಿಜವಾದ ಕಲಿಕೆಗೆ ಪರ್ಯಾಯವೆನಿಸುವುದಿಲ್ಲ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳಬಹುದು. ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕಿಂತ ದುಡಿಮೆಗೆ ಹಚ್ಚುವುದು ಹೆಚ್ಚು ಉಪಯೋಗಕರವೆಂದು ಪೋಷಕರು ಭಾವಿಸಬಹುದು. ಯಾವುದೇ ಒಂದು ನಿರ್ದಿಷ್ಟ ಶೈಕ್ಷಣಿಕ ಹಂತದ ಕೊನೆಯಲ್ಲಿ ಎಲ್ಲಾ ಮಕ್ಕಳು ಕನಿಷ್ಠ ಕಲಿಕೆಯ ಹಂತಗಳನ್ನು ತಲುಪಬೇಕೆನ್ನುವುದು. ಶಿಕ್ಷಣ ವ್ಯವಸ್ಥೆಗೆ ಒಂದು ನಿರ್ದಿಷ್ಟ ದಿಕ್ಕನ್ನು ಒದಗಿಸುವುದರ ಮೂಲಕ ಜವಾಬ್ದಾರಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತದೆ.

ಎರಡನೆಯದಾಗಿ ಶಾಲೆಗಳ ಸುಧಾರಣೆಗಳ ಬಗ್ಗೆ ಕಾರ್ಯಕ್ರಮ ರೂಪಿಸುವಲ್ಲಿ ಕಲಿಕಾ ಕನಿಷ್ಠ ಹಂತಗಳು ಪರಿಣಾಮಕಾರಿ ಸಾಧನಗಳಾಗಬಹುದೆಂದು ಆಶಿಸಬಹುದಾಗಿದೆ. ನಿಜವಾದ ಅರ್ಥದಲ್ಲಿ ಶಾಲೆ ಆಥವಾ ಶಿಕ್ಷಣ ವ್ಯವಸ್ಥೆಯ ಗುಣಮಟ್ಟವು ಅದರ ವಿದ್ಯಾರ್ಥಿಗಳು ಮತ್ತು ಪದವೀಧರರು ನಿರ್ವಹಿಸಬಲ್ಲ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಶಾಲೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಯೋಚಿಸುವಾಗ ಈ ಉದ್ದೇಶಕ್ಕಾಗಿ ಮಾಡಲಾಗುವ ತಲಾ ವೆಚ್ಚಕ್ಕೆ ಹೆಚ್ಚು ಗಮನ ಈಗ ನೀಡಲಾಗುತ್ತಿದೆ. ಇದಕ್ಕೆ ಬದಲಾಗಿ ಮಕ್ಕಳ ವಾಸ್ತವಿಕ ಕಲಿಕೆಯ ಆಧಾರದ ಮೇಲೆ ಶಾಲೆಯ ಗುಣಮಟ್ಟವನ್ನು ನಿರ್ಧರಿಸುವುದು ಅವಶ್ಯಕವಾಗಿದೆ. ಒಳ್ಳೆಯ ಶಾಲೆ ಎಂದರೆ ಯಾವುದು? ಉತ್ತಮ ಕಟ್ಟಡಗಳೇ? ಹೆಚ್ಚಿನ ಬೋಧನೋಪಕರಣಗಳೇ? ಅಥವಾ ಅರ್ಹ ಅಧ್ಯಾಪಕರೇ? ಈ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಪಡೆಯಲು ಹಾಗೂ ಉತ್ತಮ ಸೌಲಭ್ಯಗಳು ಯಾವುವು ಎಂದು ನಿರ್ಧರಿಸುವ ಮೊದಲು ನಾವು ಪ್ರತಿಯೊಂದು ಮಗು ವಾಸ್ತವವಾಗಿ ಸಾಧಿಸಬೇಕೆಂದು ಅಪೇಕ್ಷಿಸಲಾಗುವ ಸಾಮರ್ಥ್ಯಗಳನ್ನು ವಿವರಿಸಬೇಕಾಗುತ್ತದೆ.

ಮೂರನೆಯದಾಗಿ, ಅತ್ಯಂತ ಮೂಲಭೂತವಾದ ವಿಷಯವೆಂದರೆ, ನಮ್ಮ ಸರ್ಕಾರಿ ಹಾಗೂ ನಗರ ಪಾಲಿಕೆಗಳ ಶಾಲೆಗಳಲ್ಲಿ ಕಲಿತ ಮಕ್ಕಳು ಅಲ್ಲಿ ೫ ವರ್ಷಗಳಿಗೂ ಹೆಚ್ಚು ಕಾಲವನ್ನು ಕಳೆದರೂ ಕೂಡ ಅವರ ಪಠ್ಯ ಪುಸ್ತಕಗಳನ್ನೇ ಅವರು ಓದಲು ಸಮರ್ಥರಾಗಿಲ್ಲ. ಈ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ನಂತರ ಶಿಕ್ಷಣ ಸೌಲಭ್ಯಗಳು ವಿರಳ. ಆದ್ದರಿಂದ ಕಲಿವು ಅವರ ಜೀವನವಿಡಿ ಪ್ರಯೋಜನವಾಗಬೇಕು ಮತ್ತು ಅವರು ಶಾಲೆಯಲ್ಲಿ ಕಳೆದ ವರ್ಷಗಳು ವ್ಯರ್ಥವಾಗದಂತೆ ಶಿಕ್ಷಣ ವ್ಯವಸ್ಥೆಯು ಎಚ್ಚರ ವಹಿಸಬೇಕು. ಪರಿಸರ ಅಥವಾ ಶಾಲೆ ಯಾವುದೇ

ಇರಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಷ್ಟರಲ್ಲಿ ಎಲ್ಲಾ ಮಕ್ಕಳು ಒಂದು ಕಲಿಕಾ ಕನಿಷ್ಠ ಹಂತವನ್ನು ತಲುಪಬೇಕು. ಇದರಿಂದ ಅವರು ಅಕ್ಷರಸ್ಥರಾಗಿ ಪ್ರಪಂಚವನ್ನು ಅರಿಯಲು ಸಮುದಾಯದ ಉಪಯುಕ್ತ ಪೌರರಾಗಲು ಸಹಾಯವಾಗಬೇಕು.

೩. ಕಲಿಕಾ ಕನಿಷ್ಠ ಹಂತದ ಸ್ಪಷ್ಟನೆ: ಪಠ್ಯ ಕ್ರಮ ಕುರಿತ ವಿಷಯ: ಕಲಿಕೆಯು ವೈಯಕ್ತಿಕ ಜ್ಞಾನ ಮತ್ತು ಜ್ಞಾನೇತರ ವಲಯಗಳನ್ನು ವಿಕಾಸಗೊಳಿಸುವುದರಿಂದ ಪ್ರತಿಯೊಂದು ಪಠ್ಯ ಕ್ರಮವು ಕೆಲವು ವಿಶಿಷ್ಟ ಶೈಕ್ಷಣಿಕ ಗುರಿಗಳು ಮತ್ತು ಅವುಗಳಿಗೆ ಸಂಬಂಧಿಸಿದ ಕಲಿಕಾ ಫಲಗಳನ್ನು ನಿಗದಿಪಡಿಸುತ್ತದೆ. ಸಾಧಾರಣವಾಗಿ ಇವುಗಳನ್ನು ಆದರ್ಶ ಕಲಿಕಾ ಸನ್ನಿವೇಶಗಳಿಗೆ ಹೊಂದುವಂತೆ ರಚಿಸಲಾಗುತ್ತಿದೆ. ಅಂದರೆ ಇದರ ಗುರಿ ವಿದ್ಯಾರ್ಥಿಯ ವ್ಯಕ್ತಿತ್ವವು ಸಂಪೂರ್ಣವಾಗಿ ವಿಕಾಸಗೊಂಡು ಅವನು ಸಾಮಾಜಿಕವಾಗಿ ಉಪಯುಕ್ತ ಜೀವನ ನಡೆಸಲು ಸಹಾಯ ಮಾಡುವುದಾಗಿದೆ. ಈಗಿನ ಪಠ್ಯ ಕ್ರಮದ ಗುರಿಗಳು ಮತ್ತು ಅಪೇಕ್ಷಿತ ಕಲಿಕಾ ಫಲಗಳು ಮಕ್ಕಳನ್ನು ಉನ್ನತ ವ್ಯಾಸಂಗಕ್ಕೆ ಸಿದ್ಧಪಡಿಸುವ ಉದ್ದೇಶವುಳ್ಳವಾಗಿವೆ ಎಂಬ ಟೀಕೆಗೆ ಗುರಿಯಾಗಿವೆ. ತತ್ಪರಿಣಾಮವಾಗಿ ಪ್ರಾಥಮಿಕ ಹಂತದಲ್ಲಿ ಪಠ್ಯಕ್ರಮವು ಅಗತ್ಯಕ್ಕಿಂತ ಹೆಚ್ಚು ಮಾಹಿತಿಯಿಂದ ಕೂಡಿದ್ದು, ಮಕ್ಕಳ ನಿತ್ಯ ಜೀವನದಿಂದ ದೂರವಾಗಿದೆ.

ಪ್ರಾಥಮಿಕ ಹಂತದ ಪ್ರಾರಂಭದ ವರ್ಷಗಳಲ್ಲಿ ಮಕ್ಕಳ ನಿರೀಕ್ಷಿತ ಕಲಿಕಾ ಫಲವು ಅವರ ಪ್ರಬುದ್ಧತೆಯನ್ನು ಆಧರಿಸಿಲ್ಲ ಎಂದು ಹೇಳಲಾಗುತ್ತಿದೆ, ಈ ದ್ವಂದ್ವವು ಶೈಕ್ಷಣಿಕ ಸಾಧನೆಗೆ ಮತ್ತು ಸಮಾನತೆಗೆ ಮಾರಕವಾಗಿದೆ. ಪಠ್ಯವಸ್ತುವಿನ ಹೊರೆ ಹಲವು ಬಾರಿ ಶಿಕ್ಷಕರು ಬೋಧನ–ಕಲಿಕಾ ಪ್ರಕ್ರಿಯೆಯ ಮೂಲಭೂತ ತತ್ವಗಳನ್ನು ಕಡೆಗಣಿಸುವಂತೆ ಮಾಡುತ್ತದೆ. ಪಠ್ಯವಸ್ತುವನ್ನು ಪೂರ್ಣಗೊಳಿಸದೇ ಪ್ರಮುಖವಾಗಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಕಲಿಕೆಯನ್ನು ಕಡೆಗಣಿಸು ವಂತಾಗಿದೆ. ಸಾಂಪ್ರದಾಯಿಕ ಪಠ್ಯಪುಸ್ತಕಗಳು, ಉಪನ್ಯಾಸ ಪದ್ಧತಿಯ ಬೋಧನೆ, ಪಠ್ಯವಸ್ತುವನ್ನು ಪೂರ್ಣಗೊಳಿಸಲು ಸುಲಭ ಮಾರ್ಗಗಳಾಗಿವೆ. ಆದ್ದರಿಂದ ಪಠ್ಯಪುಸ್ತಕಗಳಿಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಇದು ಮಕ್ಕಳಲ್ಲಿ ಕುರುಡು ಪಾಠಕ್ಕೆ ದಾರಿ ಮಾಡಿಕೊಟ್ಟಿದೆ. ಇದರಿಂದ ಮನೆಯಲ್ಲಿ ಕಲಿಕೆಗೆ ಸೂಕ್ತ ಅನುಕೂಲವಿಲ್ಲದ, ವಂಚಿತ ವರ್ಗದ ಮಕ್ಕಳ ಕಲಿಕೆಗೆ ಧಕ್ಕೆಯಾಗಿದೆ. ಇದೇ ಕಾರಣದಿಂದ ಅನುತ್ತೀರ್ಣತೆ ಮತ್ತು ಶಾಲೆಯನ್ನು ಅರ್ಧದಲ್ಲೇ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಎಲ್ಲಾ ತೊಡಕುಗಳನ್ನು ದಾಟಿ ಕಲಿಯುವ ಮಕ್ಕಳು ಕಲಿಯಬೇಕಾಗಿರುವ ಮೂಲಭೂತ ಕೌಶಲ್ಯಗಳನ್ನು ಸಂಪೂರ್ಣವಾಗಿ ಕಲಿಯುತ್ತಿಲ್ಲ.

ಪ್ರಸ್ತುತ ಪಠ್ಯ ವಸ್ತುವಿನ ಹೊರೆ ಹಾಗೂ ಅನಾವಶ್ಯಕ ವಿಷಯಗಳನ್ನು ಗುರುತಿಸುವ ಮೂಲಕ ಸಮಸ್ಯೆಗಳ ಪರಿಹಾರಕ್ಕಾಗಿ ಕಲಿಕಾ ಕನಿಷ್ಠ ಹಂತಗಳನ್ನು ರೂಪಿಸಲಾಗಿದೆ. ಪ್ರಾಥಮಿಕ ಶಿಕ್ಷಣದ ಔಚಿತ್ಯ ಹಾಗೂ ಅವನ್ನು ಕ್ರಿಯಾತ್ಮಕವಾಗಿಸುವ ದಿಸೆಯಲ್ಲಿ ವ್ಯಾಪಕವಾದ ಪಠ್ಯವಸ್ತುವಿನ ಸುಧಾರಣೆಯತ್ತ ಕಲಿಕಾ ಕನಿಷ್ಠ ಹಂತ ಒಂದು ಅಂಗವಾಗಿದೆ.

ಈ ಪ್ರಯತ್ನದ ಪರಿಣಾಮಗಳು ಯಾವುವೆಂದರೆ;

* ಪಠ್ಯಕ್ರಮದ ಹಾಗೂ ಅನಾವಶ್ಯಕ ಮತ್ತು ಅಸಂಗತ ವಿವರಣೆಯನ್ನು ನೆನಪಿಟ್ಟುಕೊಳ್ಳುವ ಹೊರೆಯನ್ನು ಕಡಿಮೆ ಮಾಡುವುದು.

* ಪುಸ್ತಕದಲ್ಲಿರುವ ಮಾಹಿತಿಗಳನ್ನು ಮತ್ತು ವಸ್ತುನಿಷ್ಠ ವಿಷಯಗಳನ್ನು ಅರ್ಥಪೂರ್ಣ ತಿಳುವಳಿಕೆಯನ್ನಾಗಿ ಪರಿವರ್ತಿಸಿ ಅನ್ವಯಿಸಲು ಶಿಕ್ಷಕರಿಗೆ ಹೆಚ್ಚು ಅವಕಾಶ ನೀಡುವುದು.

* ಮೂಲಭೂತ ಸಾಮರ್ಥ್ಯಗಳನ್ನು ಹಾಗೂ ಕೌಶಲ್ಯಗಳನ್ನು ಕಲಿಸಿ ನಂತರ ಅವು ಶಾಶ್ವತವಾಗಿ ಉಳಿಯುವಂತೆ ಮಾಡುವುದರ ಮೂಲಕ ಅವರನ್ನು ಅನಕ್ಷರತೆಯ ಕಡೆಗೆ ಹೋಗದಂತೆ ತಡೆಯುವುದು.

* ಪ್ರತಿಭಾವಂತ ಮಕ್ಕಳಷ್ಟೆ ಅಲ್ಲದೆ ಬಹುತೇಕ ಮಕ್ಕಳು ಅದರಲ್ಲೂ ಪ್ರಥಮ ಪೀಳಿಗೆ ಕಲಿಕೆದಾರರು ಕಲಿಕೆಯ ಪ್ರಭುತ್ವ ಹೊಂದಲು ಅವಕಾಶ ನೀಡುವುದು.

೪. ಕಲಿಕಾ ಕನಿಷ್ಠ ಹಂತಗಳ ಕೆಲವು ಮೂಲಭೂತ ಲಕ್ಷಣಗಳು: ಕಲಿಕಾ ಕನಿಷ್ಠ ಹಂತಗಳ ನಿರೂಪಣೆಯ ಕಲಿಕಾ ಸಾಧನೆಗಳನ್ನು ತೀವ್ರಗೊಳಿಸುವುದರ ಜೊತೆಗೆ ಇದುವೇ ವ್ಯವಸ್ಥೆಯ ಹಾಗೂ ಶಿಕ್ಷಕರ ಗುರಿಸಾಧನೆಯ ಸೂಚಿಯಾಗಬೇಕು. ಆದುದರಿಂದ ಕಲಿಕಾ ಕನಿಷ್ಠ ಹಂತಗಳು ಸಮಂಜಸವಾಗಿಯೂ, ಕ್ರಿಯಾಶೀಲವಾಗಿಯೂ, ಸುಲಭವಾಗಿ ಅರ್ಥವಾಗುವಂತೆಯೂ, ಸಾಧನೀಯವಾಗಿಯೂ ಮತ್ತು ಮೌಲ್ಯಮಾಪನ ಮಾಡುವಂತೆಯೂ ಇರಬೇಕು.

ಸಾಧನೀಯತೆ: ಕಲಿಕಾ ಕನಿಷ್ಠ ಹಂತಗಳ ಮೂಲಸ್ವರೂಪವು ತೃಪ್ತಿಪಡಿಸಬೇಕಾದ ಅಂಶವೇನೆಂದರೆ ಕಲಿಯುವವರೆಲ್ಲರೂ ಸಾಧಿಸಬಹುದಾದ ಕಲಿಕಾ ಉದ್ದೇಶಗಳಿಗೆ ಅನುರೂಪವಾಗಿರಬೇಕು. ಈ ಅಗತ್ಯತೆಯು ಕೆಳಕಂಡ ಕೆಲವೊಂದು ನಿರ್ದಿಷ್ಟ ಕಾರಣಗಳಿಂದಾಗಿದೆ ಅವುಗಳೆಂದರೆ :

i) ಸಾಧಿಸಬಲ್ಲ ನಿರ್ದಿಷ್ಟಗಳು ಮತ್ತು ಗುರಿಗಳಾಗಿ: ನಮ್ಮ ಪಠ್ಯವಸ್ತುವಿನ ಉದ್ದೇಶಗಳು ಮಕ್ಕಳ ನಿತ್ಯ ಜೀವನ ಪರಿಸರದಿಂದ ದೂರಾವಾಗಿವೆ ಎಂಬುದು ಸಾಮಾನ್ಯ ಅಭಿಪ್ರಾಯ. ಕೆಲವೇ ಶಿಕ್ಷಕರು ಮಾತ್ರ ಮಕ್ಕಳಲ್ಲಿ ಈ ಉದ್ದೇಶಗಳನ್ನು ಈಡೇರಿಸುವಲ್ಲಿ ಶಕ್ತರಾಗಿದ್ದಾರೆ. ಶಿಕ್ಷಕರದಲ್ಲಿ ನಿಗದಿತ ಪಠ್ಯಕ್ರಮದ ಮೂಲೋದ್ದೇಶಗಳನ್ನು ಸಾಧಿಸಬಹುದೆಂದು ಆತ್ಮವಿಶ್ವಾಸ ಮೂಡಿದಾಗ ಮಾತ್ರ ಗುರಿನಿಷ್ಠ ಬೋಧನೆ ಸಾಧ್ಯ ಶಿಕ್ಷಕರು ಕಲಿಕಾ ಉದ್ದೇಶಗಳನ್ನು ನಿರ್ವಹಿಸಬಹುದಾದ ಗುರಿಗಳನ್ನಾಗಿ ಬಳಸುವಂತಹ ಸನ್ನಿವೇಶವನ್ನು ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ತರಬೇಕಾಗಿದೆ.

ii) ಪ್ರತಿಯೊಂದು ಮಗುವಿನ ಕಲಿಕಾ ಪ್ರಭುತ್ವದ ಸಾಧನೆಗಾಗಿ: ಪ್ರಸಕ್ತ ಉದ್ದೇಶಗಳನ್ನು ತರಗತಿಯ ಕೆಲವೇ ಮಕ್ಕಳು ಸಾಧಿಸುವಂತವರಾಗಿದ್ದಾರೆ ಎಂಬುದು ಸಾಧನಾ ಪರೀಕ್ಷೆಗಳಿಂದ ತಿಳಿದುಬಂದಿದೆ. ಬಹುತೇಕ ಮಕ್ಕಳು ಕಲಿಯುವುದಿಲ್ಲ, ಅಪೂರ್ಣವಾಗಿ ಕಲಿಯುತ್ತಾರೆ ಅಥವಾ ಕಲಿತದ್ದನ್ನು ಬೇಗ ಮರೆಯುತ್ತಾರೆ. ಆದುದರಿಂದ ಕಲಿಕಾ ಕನಿಷ್ಠ ಹಂತಗಳು ಮಕ್ಕಳ ನಿಜ ಜೀವನಕ್ಕೆ ಹತ್ತಿರವಾಗಿದ್ದು,

ತರಗತಿಯ ಎಲ್ಲಾ ಮಕ್ಕಳು ಸಾಧಿಸುವಂತಿರಬೇಕು. ಮುಂಬರುವ ದಿನಗಳಲ್ಲಿ ಶೇ. ೮೦ರಷ್ಟು ಅಥವಾ ಹೆಚ್ಚು ಮಕ್ಕಳು ಕನಿಷ್ಠ ಶೇ. ೮೦ರಷ್ಟು ಸೂಚಿತ ಕಲಿಕಾ ಹಂತಗಳನ್ನು ಸಾಧಿಸಲೇಬೇಕೆಂಬುದು ಶಿಕ್ಷಕರ ಗುರಿಯಾಗಿರಬೇಕು.

iii) ಮಕ್ಕಳ ಸಾಧನಾಮಟ್ಟವು ಪ್ರಾಂತ್ಯ, ಜಿಲ್ಲೆ, ಶಾಲಾ ಸನ್ನಿವೇಶ, ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಮತ್ತಿತರೆ ಅಂಶಗಳನ್ನು ಅವಲಂಬಿಸಿದೆ. ಆದುದರಿಂದ ಸಾಧಿಸಬಹುದಾದ ಕಲಿಕಾ ಕನಿಷ್ಠ ಹಂತಗಳ ನಿರೂಪಣೆಯು ಅವುಗಳ ಅನುಷ್ಠಾನದಲ್ಲಿ ಸಂದರ್ಭಕ್ಕೆ ತಕ್ಕಂತೆ ಹೊಂದಾಣಿಕೆಗೆ ಅವಕಾಶವಿದ್ದಾಗ ಮಾತ್ರ ಸಾಧ್ಯ. ಪ್ರತಿಯೊಂದು ಪ್ರದೇಶ ಅದರಲ್ಲೂ ಜಿಲ್ಲೆಗಳು ತಮ್ಮ ತಮ್ಮ ಪರಿಸ್ಥಿತಿಗೆ ಅನುಗುಣವಾಗಿ ಕಲಿಕಾ ಕನಿಷ್ಠ ಹಂತಗಳನ್ನು ವಿಶ್ಲೇಷಿಸಿರಬೇಕು ಹಾಗೂ ಶಾಲೆಗಳಲ್ಲಿನ ಎಲ್ಲಾ ಮಕ್ಕಳು ಈ ಹಂತವನ್ನು ಮುಟ್ಟುವ ರೀತಿಯಲ್ಲಿ ನಿಗದಿಪಡಿಸಿದ ಕಾಲಮಿತಿಯಲ್ಲಿ ಇವುಗಳನ್ನು ಸಾಧಿಸಲು ಮಧ್ಯಂತರ ಗುರಿಗಳನ್ನು ಇಟ್ಟುಕೊಳ್ಳಬೇಕು. ಶಾಲಾ ವ್ಯವಸ್ಥೆಗೆ ಒದಗಿಸಬಹುದಾದ ಎಲ್ಲಾ ಸೌಲಭ್ಯಗಳನ್ನು ಸುಧಾರಿಸುವುದರಿಂದ ಪ್ರತಿ ಶಾಲೆ ಅಥವಾ ಜಿಲ್ಲೆಯು ಕಲಿಕಾ ಕನಿಷ್ಠ ಹಂತಗಳನ್ನು ಸಾಧಿಸಬಹುದೆಂದು ನಿರೀಕ್ಷಿಸಲಾಗಿದೆ. ಈ ಸಾಧನೆಯ ಕಾಲಮಿತಿಯಲ್ಲಿ ವ್ಯತ್ಯಾಸ ಸಾಧ್ಯ. ಎಲ್ಲೆಲ್ಲಿ ಕಲಿಕಾ ಮೌಲ್ಯಗಳು ಕೆಳಮಟ್ಟದಲ್ಲಿವೆಯೋ ಅಲ್ಲಲ್ಲಿ ಹೆಚ್ಚಿನ ಸಂಪನ್ಮೂಲಗಳನ್ನು ದೊರಕಿಸಿಕೊಡಲು ಶ್ರಮಿಸಬೇಕು. ಜೊತೆಗೆ ಅಭಿವೃದ್ಧಿಯ ವೇಗವನ್ನು ತೀವ್ರಗೊಳಿಸಬೇಕು. ಇದರಿಂದ ಅಸಮಾನತೆಯನ್ನು ಕುಗ್ಗಿಸಿ ಅತಿ ಕಡಿಮೆ ಅವಧಿಯಲ್ಲಿ ಇಡೀ ದೇಶದ ಶಿಕ್ಷಣ ಮಟ್ಟವನ್ನು ಸಮಾನತೆಯತ್ತ ಒಯ್ಯಬಹುದು.

ಸಂವಹನ: ಈ ಕಲಿಕಾ ಕನಿಷ್ಠ ಹಂತಗಳು ನೈಜ ಹಾಗೂ ಸಾಧಿಸಬಲ್ಲವುಗಳಷ್ಟಾದರೆ ಸಾಲದು, ಇವು ಎಲ್ಲಾ ಶಿಕ್ಷಕರಿಗೂ ತಿಳಿಯುವ ರೀತಿ ಮತ್ತು ಭಾಷೆಯಲ್ಲಿರುವುದು ಅಷ್ಟೇ ಮುಖ್ಯ. ಏಕೆಂದರೆ ಬಹಳಷ್ಟು ಶಿಕ್ಷಕರು ಯಾವುದೇ ರೀತಿಯ ಸಹಾಯವಾಗಲೀ ಅಥವಾ ಮಾರ್ಗದರ್ಶನವಾಗಲೀ ಸಿಗದ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುತ್ತಾರೆ. ಈ ಕಲಿಕಾ ಕನಿಷ್ಠ ಹಂತಗಳು ಕೇವಲ ಪ್ರಾಥಮಿಕ ಶಿಕ್ಷಕರಿಗೆ ಅಷ್ಟೇ ಅಲ್ಲ ಅನೌಪಚಾರಿಕ ಶಿಕ್ಷಣದ ಶಿಕ್ಷಕರಿಗೆ, ಪೋಷಕರಿಗೆ ಮತ್ತು ಸಮುದಾಯಕ್ಕೆ ಕೂಡ ಅರ್ಥವಾಗುವಂತಿರಬೇಕು. ಈ ರೀತಿಯಾಗಿ ಸಾಧಿಸಬಲ್ಲ ಗುರಿಗಳಾಗಿ ಕಲಿಕಾ ಕನಿಷ್ಠ ಹಂತಗಳು ಕೆಲಸ ಮಾಡಬೇಕಾದರೆ ಅವು ಸರಳವಾಗಿರಬೇಕು. ಪ್ರಾಥಮಿಕ ಶಿಕ್ಷಕರು ಹಾಗೂ ಅನೌಪಚಾರಿಕ ಶಿಕ್ಷಕರ ಶೈಲಿಗೆ ಅನುಗುಣವಾಗಿ ಅವರು ಬೋಧಿಸಲು ಮತ್ತು ಮೌಲ್ಯಮಾಪನ ವಿಧಾನಗಳನ್ನು ರೂಪಿಸಲು ಅನುವಾಗುವಂತೆ ಈ ಸಮಿತಿಯ ವರದಿಯು ಪ್ರಯತ್ನಿಸಿದೆ.[೧೪]

ಮೌಲ್ಯನಿರ್ಣಯ: ಕಲಿಯುವಿಕೆಯಲ್ಲಿ ಮೌಲ್ಯಮಾಪನ ಅತ್ಯಗತ್ಯ. ಇದು ಕಲಿಕಾ ಕನಿಷ್ಠ ಹಂತಗಳಿಗೂ ಅನ್ವಯವಾಗುತ್ತದೆ. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು ಅಂತರ್ಗತ ವಾಗಿರುವಂತಹ ಕಲಿಕಾ ಕನಿಷ್ಠ ಹಂತಗಳು ತಯಾರಾಗಬೇಕು. ಬಹಳಷ್ಟು ಶಾಲೆಗಳಲ್ಲಿ ಈಗ

ಕ್ರಮವಾದ ಮೌಲ್ಯಮಾಪನ ವಿಧಾನಗಳಿಲ್ಲ. ಅನೇಕ ರಾಜ್ಯಗಳಲ್ಲಿ ಸ್ವಯಂಚಾಲಿತ ತೇರ್ಗಡೆ ಅಥವಾ ಅನುತ್ತೀರ್ಣ ರಹಿತವಾದಂತಹ ಧೋರಣೆಗಳನ್ನು ಅನುಸರಿಸಲಾಗುತ್ತಿದೆ. ಇದರಿಂದಾಗಿ ಬಹಳಷ್ಟು ಮಕ್ಕಳು ಶಾಲೆಯನ್ನು ತೊರೆಯುವ ಸಂಭವವಿದೆ. ಶಾಲೆಗಳಲ್ಲಿ ಸುವ್ಯವಸ್ಥಿತವಾದ ಬೋಧನ ಕಲಿಕೆಯ ಪರಿಸರವನ್ನು ಸೃಷ್ಟಿಸಿದಾಗ ಸ್ವಯಂಚಾಲಿತ ತೇರ್ಗಡೆಯ ಧೋರಣೆ ಅರ್ಥಪೂರ್ಣವಾಗುತ್ತದೆ. ಬಹಳಷ್ಟು ಶಿಕ್ಷಕರು ಈ ಅನುತ್ತೀರ್ಣ ರಹಿತ ಧೋರಣೆಯನ್ನು ಪರೀಕ್ಷಾ ರಹಿತ ವಿಧಾನವೆಂದು ಪರಿಗಣಿಸಿ ಮೌಲ್ಯಮಾಪನವನ್ನೇ ತ್ಯಜಿಸಿದ್ದಾರೆಂದು ಹೇಳಬಹುದು. ಇದರಿಂದಾಗಿ ಪ್ರಾಥಮಿಕ ಶಿಕ್ಷಣದ ಅಂತಿಮ ಹಂತ ತಲುಪಿದಾಗ ಮಕ್ಕಳ ಕಲಿಕಾ ಪ್ರಭುತ್ವವು ಯಾರಿಗೂ ತಿಳಿಯುವುದಿಲ್ಲ. ಈ ಪರಿಸ್ಥಿತಿಯನ್ನು ಅವಲೋಕಿಸಿ ೧೯೮೯ರಲ್ಲಿ ಎಂಟನೇ ಯೋಜನೆಯ ಕಾರ್ಯತಂಡವು ಮಕ್ಕಳ ವ್ಯಾಪಕ ಮೌಲ್ಯಮಾಪನಾ ಪದ್ಧತಿಯ ಅಳವಡಿಕೆಗಾಗಿ ಶಿಫಾರಸ್ಸು ಮಾಡಿದೆ.

ಅವಶ್ಯಕ ಕಲಿಕಾ ವಸ್ತು ವಿಷಯಗಳಲ್ಲಿ ಮಕ್ಕಳು ಕಲಿಕಾ ಸಾಧಿಸುವಂತಹ ಸ್ಪಷ್ಟ ಗುರಿಗಳನ್ನು ಹೊಂದಿರಬೇಕು. ಪೋಷಕರೂ ಸಹ ತಮ್ಮ ಮಕ್ಕಳ ಕಲಿಕಾ ಪ್ರಗತಿಯನ್ನು ಮೌಲ್ಯಮಾಪನ ಮಾಡುವುದರಲ್ಲಿ ಆಸಕ್ತಿ ಹೊಂದಿರುತ್ತಾರೆ. ಶಿಕ್ಷಕರೂ ಸಹ ತಾವು ಬೋಧಿಸುವ ವಿಷಯಗಳ ಕಲಿಕಾ ಫಲಗಳ ಬಗ್ಗೆ ತಿಳಿದಿರಬೇಕು. ಶಾಲೆಗಳ ಮತ್ತು ಶಿಕ್ಷಕರ ನಿರ್ವಹಣಾ ಪ್ರಗತಿಯು ಕಲಿಯುವವರ ಪ್ರಗತಿಯನ್ನು ಅವಲಂಬಿಸಿದೆ. ಶೈಕ್ಷಣಿಕ ಆಡಳಿತಗಾರರು ಇಡೀ ವ್ಯವಸ್ಥೆಯಲ್ಲಿ ಗುಣವಿಮರ್ಶೆ ಮಾಡುವಂತಹ ಸಧನಗಳನ್ನು ಅಳವಡಿಸಬೇಕು.

ಶಿಕ್ಷಕರು ಕಲಿಕಾ ಕನಿಷ್ಠ ಹಂತಗಳ ಸ್ಪಷ್ಟ ಗುರಿಯನ್ನು ಹೊಂದಿರುವುದರ ಜೊತೆಗೆ ಸಾಧನಗಳನ್ನು ತಯಾರಿಸಿ ಬಳಸಲು ಅವಕಾಶವಿರಬೇಕು. ಮಗುವು ಯಾವ ಸಾಮರ್ಥ್ಯಗಳನ್ನು ಕಲಿತಿಲ್ಲವೋ ಅವುಗಳನ್ನು ಗುರುತಿಸಿ ಪುನ: ಕಲಿಯುವಂತೆ ಸಹಾಯ ಮಾಡಬೇಕು. ಜೊತೆಗೆ ಪರಿಹಾರ ಬೋಧನೆಯನ್ನು ಕೈಗೆತ್ತಿಕೊಳ್ಳಬೇಕು. ಇದು ಮಗುವು ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋಗುವಾಗ ತಾನು ಕಲಿತ ವಿಷಯಗಳ ಮೇಲೆ ಪ್ರಭುತ್ವ ಗಳಿಸಲು ನೆರವಾಗಬೇಕು. ಹೀಗೆ ಕಲಿಯುವವನ ಸಾಧನೆಯನ್ನು ಶಿಕ್ಷಕರು ಸುಲಭವಾಗಿ ಅಳೆಯಲು ಬರವಣಿಗೆ, ಮೌಖಿಕ ಅಥವಾ ಇತರ ರೀತಿಯ ಪರೀಕ್ಷೆಗಳನ್ನು ಬಳಸುವಂತೆ ಕಲಿಕಾ ಕನಿಷ್ಠ ಹಂತಗಳನ್ನು ರೂಪಿಸಲಾಗಿದೆ.

ಕಲಿಕಾ ಧಾರೆ: ಒಂದನೇ ತರಗತಿಯಿಂದ ೫ನೇ ತರಗತಿಯವರೆಗೆ ಇರುವ ಕಲಿಕೆಯ ಪ್ರತಿ ಕಲಿಕಾ ಘಟಕದ ಮೇಲೆ ಮಕ್ಕಳು ಪ್ರಭುತ್ವ ಸಾಧಿಸಲು ಅನುವಾಗುವಂತೆ ಈ ಕಲಿಕಾ ಕನಿಷ್ಠ ಹಂತಗಳನ್ನು ಸರಳವೂ ವ್ಯಾಪಕವೂ ಆಗಿರುವಂತೆ ರಚಿಸಲು ಪ್ರಯತ್ನಿಸಲಾಗಿದೆ. ಈ ಕಲಿಕೆಯ ಘಟಕಗಳನ್ನು ಒಂದು ಶ್ರೇಣೀಕೃತ ಕ್ರಮದಲ್ಲಿ ಇರುವಂತೆ ನೋಡಿಕೊಳ್ಳಲಾಗಿದೆ. ಹಾಗೂ ಒಂದು ಕಲಿಕಾ ಘಟಕದಿಂದ ಮತ್ತೊಂದು ಕಲಿಕಾ ಘಟಕಕ್ಕೆ ನಿರಂತರ ಸಂಬಂಧವನ್ನು ಕಲ್ಪಿಸಲಾಗಿದೆ. ಇದು ಮಕ್ಕಳಿಗೆ ಕಲಿಕಾ ಕನಿಷ್ಠ ಹಂತವನ್ನು ಸಾಧಿಸುವುದರ ಜೊತೆಗೆ ನಮ್ಮ ಕಲಿಕೆಯನ್ನು ಅರ್ಥಪೂರ್ಣ ಹಾಗೂ ಆನಂದದಾಯಕವಾಗುವಂತೆ ಮಾಡುತ್ತದೆ.

೫. ಅನೌಪಚಾರಿಕ ಶಿಕ್ಷಣದಲ್ಲಿ ತುಲನಾತ್ಮಕ ಕಲಿಕೆ: ಕಲಿಕಾ ಕನಿಷ್ಠ ಹಂತಗಳನ್ನು ತರಗತಿವಾರು ಐದು ಹಂತಗಳನ್ನಾಗಿ ವಿಂಗಡಿಸಿದೆ. ಹೀಗಿದ್ದರೂ ಈ ಸೂಚಿಗಳು ಉಲ್ಲಂಘಿಸಲಾಗದ ವಿಂಗಡಣೆಗಳೇನೂ ಅಲ್ಲ.

ಪರಿಸರ ಅಧ್ಯಯನ: ಕಲಿಕಾ ಕನಿಷ್ಠ ಹಂತಗಳು

ಸಾಮಾನ್ಯವಾಗಿ ಪರಿಸರವು ನಿಸರ್ಗ ಮತ್ತು ಮಾನವ ಎಂಬ ಎರಡು ಮುಖ್ಯ ಅಂಶಗಳನ್ನು ಒಳಗೊಂಡಿದೆ. ಈ ಎರಡು ಅಂಶಗಳು ಪರಿಸರ ಅಧ್ಯಯನದ ಪಠ್ಯವಸ್ತುವಿನಲ್ಲಿ ಭಾಗ–೧ ಮತ್ತು ಭಾಗ–೨ ಅಥವಾ ಸಾಮಾಜಿಕ ಅಭ್ಯಾಸ ಮತ್ತು ವಿಜ್ಞಾನ ಎಂಬುದಾಗಿ ಕರೆಯಲ್ಪಟ್ಟಿದೆ. ವಾಸ್ತವವಾಗಿ ಮಾನವ, ನಿಸರ್ಗ ಮತ್ತು ಸಮಾಜ– ಇವುಗಳ ಪರಸ್ಪರ ವರ್ತನೆಯಿಂದ ಉಂಟಾದ ಉಪಲಬ್ಧವನ್ನು ಸಮಗ್ರ ಪರಿಸರ ಎಂದು ಪರಿಗಣಿಸಬಹುದು.

ಉದ್ದೇಶಿತ ಪಠ್ಯ ವಸ್ತುವು ಮೇಲ್ಕಂಡ ಮೂರು ಅಂಶಗಳನ್ನು ಒಳಗೊಂಡಿದ್ದು, ೧೦ ಪ್ರಮುಖ ಸಾಮರ್ಥ್ಯಗಳ ಸುತ್ತ ಹೆಣೆಯಲ್ಪಟ್ಟಿದೆ. ಮೊದಲನೆಯದು ನೈಸರ್ಗಿಕ ಮತ್ತು ಸಾಮಾಜಿಕ ಪರಿಸರ ಹಾಗೂ ವ್ಯಕ್ತಿಯ ಉತ್ತಮ ಜೀವನಕ್ಕೆ ಸಂಬಂಧಿಸಿದ್ದು, ಮುಂದಿನ ಐದು ಸಾಮರ್ಥ್ಯಗಳು ಸಾಮಾಜಿಕ ಅಂಶಗಳಾದ ನಾಗರಿಕ ಪರಿಸರ, ವೃತ್ತಿ ಪ್ರಪಂಚ, ಮಾನವ ಮತ್ತು ನೈಸರ್ಗಿಕ ಪರಿಸರ, ಮಾನವನ ಭೂತ–ವರ್ತಮಾನ ಸಂಬಂಧ ಮತ್ತು ಪರಿಸರ ಪ್ರಭಾವಿತ ಸಹಜ ಸಮಸ್ಯೆಗಳನ್ನು ಒಳಗೊಂಡಿದೆ. ಕೊನೆಯ ನಾಲ್ಕು ಸಾಮರ್ಥ್ಯಗಳು ನೈಸರ್ಗಿಕ ಪರಿಸರದ ವೈಜ್ಞಾನಿಕ ಅಂಶಗಳನ್ನಲ್ಲದೆ ವೈಯಕ್ತಿಕ ಮತ್ತು ಸಾಮಾಜಿಕ ಅಂಶಗಳನ್ನು ಅಂದರೆ ಆರೋಗ್ಯ ಸಜೀವ–ನಿರ್ಜೀವ ವಸ್ತುಗಳು ಮತ್ತು ಭೂಮಿ–ಆಕಾಶಕ್ಕೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿದೆ.

ವಿಷಯ ವಸ್ತುವೂ ಸೇರಿದಂತೆ ಜ್ಞಾನ, ಭಾವನಾತ್ಮಕ ಮತ್ತು ಮನೋಬಲ ವಲಯಗಳ ಬೆಳವಣಿಗೆಯು ಗುರಿಯಾಗಿರುವ ಈ ಹತ್ತು ಸಾಮರ್ಥ್ಯಗಳನ್ನು ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

ವಿದ್ಯಾರ್ಥಿಯು,

೧. ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದಲ್ಲಿ ತನ್ನ ಉತ್ತಮ ಜೀವನಕ್ಕೆ ಸಂಬಂಧಿಸಿದಂತಹ ಅರಿವನ್ನು ಪಡೆಯುವನು.

೨. ಸಾಮಾಜಿಕ–ನಾಗರಿಕ ಪರಿಸರದ ಮುಖ್ಯ ಅಂಶಗಳನ್ನು ಅರ್ಥೈಸಿ ತನ್ನ ಕಾರ್ಯತತ್ಪರತೆಯನ್ನು ಕಂಡುಕೊಳ್ಳುವನು.

೩. ವೃತ್ತಿಯಲ್ಲಿ ತೊಡಗಿರುವ ಹಲವಾರು ವ್ಯಕ್ತಿಗಳನ್ನು ತಿಳಿದು 'ವೃತ್ತಿ ಪ್ರಪಂಚ'ವನ್ನು ಮೆಚ್ಚುವನು.

೪. ಮಾನವ ಮತ್ತು ಅವನ ಪರಿಸರಗಳ ಪ್ರಭಾವಿತ ಸಂಬಂಧಗಳನ್ನು ತಿಳಿದು ಅರ್ಥೈಸುವನು.

೫. ಮಾನವನ ಭೂತ ಮತ್ತು ವರ್ತಮಾನಗಳ ಸಂಬಂಧಗಳನ್ನು ಗಮನಿಸಿ ಭೂತಕಾಲದ ಘಟನೆಗಳನ್ನು ಸರಿಯಾದ ದೃಷ್ಟಿಯಲ್ಲಿ ನೋಡುವನು.

೬. ಸರಳ ಮತ್ತು ಸುಲಭ ಸಾಮಾಜಿಕ, ಆರ್ಥಿಕ ಸಂದರ್ಭಗಳು ಮತ್ತು ಸಮಸ್ಯೆಗಳನ್ನು ಗಮನಿಸಿ, ವಿಶ್ಲೇಷಿಸಿ ತನ್ನ ಅನುಭವದ ಇತಿಮಿತಿಯೊಳಗೆ ಸಾಧ್ಯ ಪರಿಹಾರಗಳನ್ನು ಕಂಡುಕೊಳ್ಳುವನು.

೭. ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಅಂಶಗಳನ್ನು ತಿಳಿಯುವನು.

೮. ತನ್ನ ಪರಿಸರದಲ್ಲಿರುವ ಸಜೀವಿಗಳ ಬಗ್ಗೆ ಮಾಹಿತಿ ಸಂಗ್ರಹಿಸುವ, ವರ್ಗೀಕರಿಸುವ ಕೌಶಲ್ಯಗಳನ್ನು ಬೆಳೆಸಿಕೊಂಡು ಸರಳ ತೀರ್ಮಾನಗಳಿಗೆ ಬರುವನು.

೯. ಕೆಲವು ಸಮಾನ ಗುಣಗಳುಳ್ಳ ನಿರ್ಜೀವ ವಸ್ತುಗಳನ್ನು ವೀಕ್ಷಿಸುವನು ಮತ್ತು ಪರೀಕ್ಷಿಸುವನು.

೧೦. ಭೂಮಿ ಮತ್ತು ಆಕಾಶಗಳ ಸರಳ ಘಟನೆಗಳನ್ನು ವೀಕ್ಷಿಸಿ ತೀರ್ಮಾನಗಳಿಗೆ ಬರುವನು.

ಕಲಿಕಾ ಕನಿಷ್ಠ ಹಂತಗಳ ಯೋಜನೆಯು ಪರಿಸರ ಅಧ್ಯಯನದ ವಿವಿಧ ಘಟಕಗಳ ಮಧ್ಯೆ ವಿಂಗಡಣಾ ರೇಖೆ ಎಳೆಯದೆ ಸಹ ಸಂಬಂಧವನ್ನು ಪ್ರತಿಪಾದಿಸುತ್ತದೆ. ಪ್ರತಿಯೊಂದು ಮಗುವೂ ತಾನು ಬೆಳೆದಂತೆಲ್ಲಾ ಸಾಮಾಜಿಕ ಜವಾಬ್ದಾರಿಯುತ ಪೌರತ್ವವನ್ನು ಬೆಳೆಸಿಕೊಳ್ಳಬೇಕು. ಪರಿಸರದ ಪ್ರಾಮುಖ್ಯತೆಯ ಮತ್ತು ಪರಿಸರ ಸಂರಕ್ಷಣೆಯ ಅಗತ್ಯತೆಯನ್ನು ಅರಿತುಕೊಳ್ಳಬೇಕು. ಅವನಲ್ಲಿ ಪಕ್ವತೆ ಬೆಳೆದಂತೆಲ್ಲಾ ಸಾಮಾಜಿಕ, ಆರ್ಥಿಕ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಅವನು ವಿಸ್ತರಿಸಿಕೊಳ್ಳಬೇಕು. ಇಂತಹ ಉದಾತ್ತ ಜೀವನದ ಗುರಿಗಳನ್ನು ಸಾಧಿಸಲು ಮೇಲೆ ಹೇಳಿದ ಸಾಮರ್ಥ್ಯಗಳನ್ನು ಪ್ರಾಥಮಿಕ ಶಿಕ್ಷಣದ ಪ್ರಾರಂಭ ಹಂತದಲ್ಲಿಯೇ ಪ್ರತಿಯೊಂದು ಮಗುವೂ ಸಿದ್ಧಿಸಿಕೊಳ್ಳಬೇಕು.

ಪ್ರಮುಖ ಸಾಮರ್ಥ್ಯಗಳನ್ನು ಹಂತ ಹಂತವಾಗಿ ಬೆಳೆಸುವಾಗ ಉಪಸಾಮರ್ಥ್ಯಗಳನ್ನು ವಿಷಯ ಘಟಕಕ್ಕೆ ಅನುಗುಣವಾಗಿ ಕ್ರಮಬದ್ಧ ಮತ್ತು ಅಂತರ ಸಂಬಂಧ ಸೂಚಿಸುವಂತೆ ಚಿತ್ರಿಸಲಾಗಿದೆ. ಶಿಕ್ಷಕರು ಬೋಧನೆ ಮತ್ತು ಮೌಲ್ಯಮಾಪನ ಮಾಡುವಾಗ ಒಂದು ವರ್ಗದಲ್ಲಿ ಸಾಮರ್ಥ್ಯಗಳ ಸಮಾನಾಂತರ ಹಾಗೂ ವರ್ಗಗಳ ನಡುವೆ ಲಂಬಸಂಬಂಧಗಳಿರುವುದನ್ನು ಗಮನದಲ್ಲಿಟ್ಟುಕೊಂಡಿಬೇಕು. ಪ್ರಮುಖ ವಸ್ತು ವಿಷಯಗಳನ್ನು ಒಳಗೊಂಡಂತೆ ಸಾಮರ್ಥ್ಯಗಳನ್ನು ಸೂಚಿಸಲು ನಿರ್ದಿಷ್ಟ ಸಂಖ್ಯಾ ವ್ಯವಸ್ಥೆಯನ್ನು ಬಳಸಲಾಗಿದೆ.

ಉದಾ: ಉಪಸಾಮರ್ಥ್ಯ ೫, ೪, ೨ ಎಂಬುದು ೪ನೇ ತರಗತಿಯ ೫ನೆಯ ಪ್ರಮುಖ ಸಾಮರ್ಥ್ಯಕ್ಕೆ ಸೇರಿದ್ದಾಗಿದೆ ಮತ್ತು ವಸ್ತು ವಿಷಯವಾದ 'ಆದಿ ಕಾಲದಿಂದ ವರ್ತಮಾನ ಕಾಲದವರೆಗೆ ಮಾನವನ ಪ್ರಗತಿ'ಯ ಎರಡನೇ ಸಾಮರ್ಥ್ಯ ಸೂಚಿಸುತ್ತದೆ.

ಪ್ರತಿಯೊಂದು ಸಾಮರ್ಥ್ಯ ಅಥವಾ ಉಪಸಾಮರ್ಥ್ಯವು ನಿರೀಕ್ಷಿತ ಕಲಿಕಾ ಫಲವನ್ನು ವಿವರಿಸುವ ಉದ್ದೇಶಿತ ಪಠ್ಯವಸ್ತುವನ್ನು ಸೂಚಿಸುತ್ತದೆ. ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಣಾಮಕಾರಿ ಹಾಗೂ ಆಕರ್ಷಕ ಬೋಧನಾ-ಕಲಿಕಾ ವಿಧಾನಗಳನ್ನು ಅನುಸರಿಸಬೇಕು. ಪರಿಸರ ಅಧ್ಯಯನದ

ಬೋಧನಾ ತಂತ್ರಗಳು ಚಟುವಟಿಕೆ ಆಧಾರಿತವಾಗಿರಬೇಕು. ಮಗುವಿಗೆ ತರಗತಿಯ ಒಳಗೆ ಮತ್ತು ಹೊರಗೆ ಸಾಕಷ್ಟು ಕಲಿಕಾ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ತನ್ನ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರವನ್ನು ವೀಕ್ಷಿಸಿ, ಅನ್ವೇಷಿಸಿ, ವಿಶ್ಲೇಷಿಸಿ, ವ್ಯಾಖ್ಯಾನಿಸಿ ಮೆಚ್ಚುವಂತಾಗಬೇಕು.

ಕಲಿಕಾ ಕನಿಷ್ಠ ಹಂತಗಳ ಅನುಷ್ಠಾನಕ್ಕಾಗಿ ಕಾರ್ಯಯೋಜನೆ

ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ ಕಲಿಕಾ ಕನಿಷ್ಠ ಹಂತಗಳನ್ನು ಅನುಷ್ಠಾನಗೊಳಿಸುವಾಗ ಕಾರ್ಯತಂತ್ರಗಳನ್ನು ಎಚ್ಚರಿಕೆಯಿಂದ ರೂಪಿಸಬೇಕಾಗುತ್ತದೆ. ಇದರ ಪೂರ್ಣ ಅಳವಡಿಕಾ ಕಾರ್ಯಯೋಜನೆಯನ್ನು ಮೂರು ಅಥವಾ ಹೆಚ್ಚು ಹಂತಗಳಾಗಿ ವಿಭಜಿಸಬಹುದು. ಪೂರ್ಣ ಸಿದ್ಧತೆಯೊಂದಿಗೆ ಮೊದಲ ಹಂತದಲ್ಲಿ ಈ ಪಠ್ಯ ವಸ್ತು ಯೋಜನೆಯನ್ನು ಎರಡು ಅಥವಾ ಮೂರು ರಾಜ್ಯಗಳ ಆಯ್ದ ಜಿಲ್ಲೆಗಳಲ್ಲಿ ಅಥವಾ ತಾಲೂಕುಗಳಲ್ಲಿ ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಬಹುದು. ಈ ಹಂತದಲ್ಲಿ ಶೈಕ್ಷಣಿಕ ಸಾಧನೆಯ ಮಟ್ಟವನ್ನು ಹೆಚ್ಚಿಸಲು ಕೆಲವು ಸಂಶೋಧನಾ ಕೇಂದ್ರಗಳಿಗೆ ಹಾಗೂ ಚಾಲ್ತಿಯಲ್ಲಿರುವ ಸುಧಾರಣಾ ಯೋಜನೆಗಳಿಗೆ ಕಲಿಕಾ ಕನಿಷ್ಠ ಹಂತದ ಮಾದರಿಗಳನ್ನು ಅನುಸರಿಸುವಂತೆ ಉತ್ತೇಜಿಸಬಹುದು. ಇದಲ್ಲದೆ ಆಯ್ದ ಶಾಲೆಗಳಲ್ಲಿ ಹಾಗೂ ಅನೌಪಚಾರಿಕ ಶಿಕ್ಷಣ ಕೇಂದ್ರದಲ್ಲಿ ಕಲಿಕಾ ಕನಿಷ್ಠ ಹಂತಗಳನ್ನು ಅಳವಡಿಸಲು ವಿಶ್ವವಿದ್ಯಾಲಯಗಳು ಹಾಗೂ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ತಜ್ಞರಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಉತ್ತೇಜನ ನೀಡಬಹುದು.

ಈ ಹಂತದ ಪ್ರಧಾನ ಉದ್ದೇಶಗಳೆಂದರೆ ಉದ್ದೇಶಿತ ಕಲಿಕಾ ಕನಿಷ್ಠ ಹಂತಗಳು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಹೇಗೆ ಕಾರ್ಯನಿರ್ವಹಿಸಬಲ್ಲವು? ಮಕ್ಕಳಲ್ಲಿ ನಿರೀಕ್ಷಿತ ಪ್ರಭುತ್ವ ಮಟ್ಟವನ್ನು ತಲುಪಲು ಶಿಕ್ಷಕರಿಗೆ ಯಾವ ರೀತಿಯ ಪ್ರಶಿಕ್ಷಣ ಮತ್ತು ಬೋಧನಾ ಸಾಮಗ್ರಿಗಳನ್ನ ಒದಗಿಸಬೇಕು. ಪ್ರಸ್ತುತ ಪಠ್ಯಪುಸ್ತಕದಲ್ಲಿ ಯಾವ ರೀತಿಯ ಪುನರ್‌ರಚನೆ ಮತ್ತು ಮಾರ್ಪಾಟಿನ ಅವಶ್ಯಕತೆ ಇದೆ? ವಿವಿಧ ಹಂತಗಳಲ್ಲಿ ಯಾವ ರೀತಿಯ ಕ್ರಿಯಾತ್ಮಕ ಮೌಲ್ಯಮಾಪನ ಮತ್ತು ಸಂಯೋಜನೆಯ ವಿಧಾನವನ್ನು ರೂಪಿಸಬಹುದು? ಕಲಿಕಾ ಸಾಧನೆಯ ಗುಣಮಟ್ಟವನ್ನು ವೃದ್ಧಿಸುವ ಅಂತಿಮ ಗುರಿಯನ್ನು ಮುಟ್ಟಲು ಯಾವ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕ್ರಮಗಳ ಅವಶ್ಯಕತೆ ಇದೆ? ಎಂಬುವೇ ಆಗಿವೆ. ಎರಡನೇ ಮತ್ತು ಮೂರನೇ ಹಂತಗಳು ಕಲಿಕಾ ಕನಿಷ್ಠ ಹಂತ ಮತ್ತು ಇತರೆ ಸಂಬಂಧಿತ ಅಂಶಗಳನ್ನು ಪರಿಷ್ಕರಿಸಿ, ಅನುಷ್ಠಾನಗೊಳಿಸಲು ಕ್ರಮಬದ್ಧವಾದ ವಿಸ್ತರಣಾ ಕಾರ್ಯಗಳನ್ನು ಹಮ್ಮಿಕೊಳ್ಳುವ ಗುರಿಯನ್ನು ಹೊಂದಿರಬೇಕು.

ಪ್ರಥಮ ಹಂತದಲ್ಲಿ ರಾಜ್ಯಗಳ ಆಯ್ದ ಜಿಲ್ಲೆ ಅಥವಾ ತಾಲೂಕುಗಳ ಸಂಖ್ಯೆ ೪ ರಿಂದ ೬ಕ್ಕೆ ಮೀರಬಾರದು ಎಂದು ಉದ್ದೇಶಿಸಿದೆ. ಆದರೆ ಆಯ್ಕೆ ಮಾಡಿದ ತಾಲೂಕಿನಲ್ಲಿರುವ ಎಲ್ಲಾ ಪ್ರಾಥಮಿಕ ಶಾಲೆಗಳನ್ನು ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ಅನುಷ್ಠಾನಕ್ಕಾಗಿ ಆಯ್ಕೆ ಮಾಡಬೇಕಾಗುತ್ತದೆ. ಹೋಲಿಕೆಯ ಉದ್ದೇಶಕ್ಕಾಗಿ ಪಕ್ಕದ ಜಿಲ್ಲೆಗಳ ಅಥವಾ ತಾಲೂಕುಗಳ

ಮಾಹಿತಿಯನ್ನು ಪಡೆದುಕೊಳ್ಳಬಹುದು. ಯಾವುದಕ್ಕೂ ಸಾಧನೆಯ ಹೆಗ್ಗುರತನ್ನು ಗುರುತಿಸಲು ಪೂರ್ವಭಾವಿ ಪರೀಕ್ಷೆಯನ್ನು ನಡೆಸಬೇಕು. ಈ ಹಂತವನ್ನು ಪರಿಣಾಮಕಾರಿಯಾಗಿ ಮಾಡಲು ಅಗತ್ಯ ಪ್ರಾರಂಭಿಕ ಕ್ರಮಗಳನ್ನು ಸ್ಥಳೀಯ ಶಿಕ್ಷಕರ, ಮುಖ್ಯೋಪಾಧ್ಯಾಯರ, ಪರಿವೀಕ್ಷಕರ ಮತ್ತು ಸಮುದಾಯದ ಸದಸ್ಯರ ಪೂರ್ಣ ಪಾಲ್ಗೊಳ್ಳುವಿಕೆಯನ್ನು ಪಡೆಯಬೇಕು. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರಗಳ ಜವಾಬ್ದಾರಿಯನ್ನು ನಿರ್ವಹಿಸುವ ಸ್ಥಳೀಯ ಸಂಸ್ಥೆಗಳ ಜೊತೆಗೆ ಜಿಲ್ಲಾ ಉಪನಿರ್ದೇಶಕರ ಕಛೇರಿ, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (ಪ್ರಾರಂಭವಾಗಿರುವೆಡೆ) ಇತರೆ ಸಂಬಂಧಿಸಿದವರನ್ನೊಳಗೊಂಡ ಜಿಲ್ಲಾಮಟ್ಟದ ಪ್ರಾಧಿಕಾರವು ಈ ಕಾರ್ಯಕ್ರಮದ ನಿರೂಪಣೆ, ನಿರ್ವಹಣೆ, ಹೊಂದಾಣಿಕೆ, ಅನುಷ್ಠಾನ ಮತ್ತು ಮೌಲ್ಯಮಾಪನ ಜವಾಬ್ದಾರಿಯನ್ನು ನಿರ್ವಹಿಸಬೇಕು.

ಅಂತಿಮವಾಗಿ ಈ ನವೀನ ಕಾರ್ಯಕ್ರಮದ ಕಾರ್ಯಾಚರಣೆಗೆ ಆಯಾ ಜಿಲ್ಲೆಯನ್ನು ಒಂದು ಘಟಕವನ್ನಾಗಿ ಮಾಡಬೇಕು. ಸ್ಥಳೀಯ ಮಟ್ಟದ ಅಧಿಕಾರಿಗಳು ರಾಜ್ಯ ವಿದ್ಯಾ ಇಲಾಖೆ, ಶಿಕ್ಷಣ ತರಬೇತಿ ಮತ್ತು ಸಂಶೋಧನಾ ಸಂಸ್ಥೆ, ರಾಜ್ಯಮಟ್ಟದ ಅಧಿಕಾರಿಗಳು ಮತ್ತು ರಾಷ್ಟ್ರಮಟ್ಟದ ಅಧಿಕಾರಿಗಳ ಸಹಕಾರದೊಂದಿಗೆ ಸಿದ್ಧತೆ, ಸಂಯೋಜನೆ ಅನುಷ್ಠಾನ, ಮೌಲ್ಯಮಾಪನ ಮತ್ತು ವಿಸ್ತರಣೆಯ ಮೂಲಕ ಈ ಘಟಕವು ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಬಹುದು. ಅಂತಿಮ ವಿಶ್ಲೇಷಣೆಯಾಗಿ ರಾಷ್ಟ್ರೀಯ ಮಟ್ಟದಲ್ಲಿ ನಿರ್ಧರಿಸಲ್ಪಟ್ಟ ಕಲಿಕಾ ಕನಿಷ್ಠ ಹಂತದ ಕನಿಷ್ಠ ಅವಶ್ಯಕ ಸಾಧನ ಮಟ್ಟವನ್ನು ಆದಷ್ಟು ಜಾಗ್ರತೆಯಾಗಿ ಪ್ರತಿ ಜಿಲ್ಲೆಯಲ್ಲಿ ಸಾಧಿಸಬೇಕು. ಕೆಲವು ಜಿಲ್ಲೆ ಮತ್ತು ಅವುಗಳಲ್ಲಿನ ಶಾಲೆಗಳು ತಮ್ಮದೇ ಆದ ಕಾಲಮಿತಿ ಮತ್ತು ಸಂಪನ್ಮೂಲಗಳ ಅವಶ್ಯಕತೆಯ ಕಾರಣಗಳಿಂದ ಹಿಂದೆ ಉಳಿಯಬಹುದು. ಆದರೆ ಅವುಗಳು ಕಲಿಕಾ ಕನಿಷ್ಠ ಹಂತಗಳನ್ನು ತಲುಪಲು ತಮ್ಮದೇ ಆದ ಮಧ್ಯಮಾವಧಿ ಹಂತಗಳನ್ನು (Intermediate phase) ನಿಗದಿಪಡಿಸಿಕೊಳ್ಳಬಹುದು. ಈ ಬಗ್ಗೆ ತೆಗೆದುಕೊಳ್ಳಲಾದ ಅವಧಿಯನ್ನು ಸ್ಥಳೀಯವಾಗಿ ನಿರ್ಧರಿಸಿರಬೇಕು. ಒಟ್ಟಿನಲ್ಲಿ ನಿರ್ಧರಿಸಲ್ಪಟ್ಟ ಕೆಲವು ವರ್ಷಗಳ ಅವಧಿಯಲ್ಲಿ ಒಂದು ರಾಜ್ಯದ ಎಲ್ಲಾ ಜಿಲ್ಲೆಗಳು ಮತ್ತು ರಾಷ್ಟ್ರದ ಎಲ್ಲಾ ರಾಜ್ಯಗಳು ಎಲ್ಲಾ ಮಕ್ಕಳಿಗೆ ಅನ್ವಯವಾಗುವಂತೆ ಕಲಿಕಾ ಕನಿಷ್ಠ ಹಂತದಲ್ಲಿ ನಿಗದಿಪಡಿಸಿದ ಗುರಿಯನ್ನು ಸಾಧಿಸುವಂತಿರಬೇಕು. ಆಂಧ್ರಪ್ರದೇಶ, ಬಿಹಾರ, ಒರಿಸ್ಸಾ, ರಾಜಸ್ಥಾನ ಹಾಗೂ ಉತ್ತರ ಪ್ರದೇಶ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಲಾದ ಹಾಗೂ ಕಾರ್ಯಾಚರಣೆಗೆ ತರಲು ಉದ್ದೇಶಿಸಿದ ವಿಶೇಷ ಕಾರ್ಯಕ್ರಮಗಳ ಮತ್ತು ಯೋಜನೆಗಳಡಿಯಲ್ಲಿ ಒದಗಿಸಲಾದ ಸಂಪನ್ಮೂಲಗಳನ್ನು ಅಯಾ ಜಿಲ್ಲೆಗಳ ಎಲ್ಲಾ ಶಾಲೆಗಳಲ್ಲಿ ಕನಿಷ್ಠ ಕಲಿಕಾ ಹಂತಗಳ ಯಶಸ್ವಿ ಅಳವಡಿಕೆಗೆ ಬಳಸಿಕೊಳ್ಳಬಹುದು.

ಈ ಕಾರ್ಯಕ್ರಮದಲ್ಲಿ ಕೇಂದ್ರ ಬಿಂದುವಾದ ಶಿಕ್ಷಕನಿಗೆ ನೆರವು ನೀಡಲು ವಿವಿಧ ಪಠ್ಯ ಕ್ರಮಗಳಿಗನುಗುಣವಾಗಿ ಶಿಕ್ಷಕರ ಕೈಪಿಡಿಗಳನ್ನು ರಚಿಸುವುದು ಅಗತ್ಯವಾಗಿದೆ. ಈ ಕೈಪಿಡಿಗಳು ಕಲಿಕಾ ಕನಿಷ್ಠ ಹಂತಕ್ಕೆ ಸಂಬಂಧಿಸಿದಂತೆ ವಿವರಣಾ ಟಿಪ್ಪಣಿಗಳಿಂದ ಮತ್ತು ಸಚಿತ್ರವಾದ ವಿವರಣೆ

ಗಳಿಂದ ಕೂಡಿರಬೇಕು. ಈ ಕೈಪಿಡಿಗಳು ಪರಿಣಾಮಕಾರಿ ಬೋಧನೆಗೆ ಮತ್ತು ಮೌಲ್ಯಮಾಪನಕ್ಕೆ ಶಿಕ್ಷಕರಿಗೆ ಸಹಾಯ ಮಾಡುವಂತಿರಬೇಕು. ಈ ವಿಧಾನಕ್ಕೆ ಸಂಬಂಧಿಸಿದಂತೆ ಪಠ್ಯ ಪುಸ್ತಕಗಳನ್ನು ಪರಿಷ್ಕರಿಸುವವರೆಗೆ ಈಗಿರುವ ಪಠ್ಯ ಪುಸ್ತಕಗಳನ್ನು ಉಪಯೋಗಿಸಿ ಕಲಿಕಾ ಕನಿಷ್ಠ ಹಂತಗಳನ್ನು ಹೇಗೆ ಸಾಧಿಸಬೇಕೆಂಬ ಸಾಮಗ್ರಿಗಳು ಮತ್ತು ಚಟುವಟಿಕೆ ಆಧಾರಿತ ವಿಧಾನಗಳನ್ನು ಹೇಗೆ ಅನುಸರಿಬೇಕು ಎಂಬ ಬಗ್ಗೆ ಸಲಹೆಗಳಿದ್ದರೆ ವಿದ್ಯಾರ್ಥಿಯ ಕಲಿಕೆಯನ್ನು ಅರ್ಥಪೂರ್ಣ, ಪರಿಣಾಮಕಾರಿ ಮತ್ತು ಹರ್ಷದಾಯಕವನ್ನಾಗಿ ಮಾಡಬಹುದು. ಪ್ರಾಥಮಿಕ ಶಾಲಾ ಶಿಕ್ಷಕರ ಹಾಗೂ ಅನೌಪಚಾರಿಕ ಶಿಕ್ಷಣ ಕೇಂದ್ರಗಳ ಬೊಧಕರ ಕೈಪಿಡಿಗಳ ಜೊತೆಗೆ ಪರಿವೀಕ್ಷಕರಿಗೆ ಮತ್ತು ಇತರೆ ಸ್ಥಳೀಯ ಕಾರ್ಯಕರ್ತರುಗಳಿಗೆ ತಮ್ಮ ಕಾರ್ಯಧಕ್ಷತೆಯನ್ನು ಹೆಚ್ಚಿಸಿಕೊಳ್ಳಲು ನೆರವಾಗುವಂತೆ ಕಲಿಕಾ ಕನಿಷ್ಠ ಹಂತಗಳ ಬಗ್ಗೆ ಕೈಪಿಡಿಗಳನ್ನು ತಯಾರಿಸಬೇಕು.

ರಾಷ್ಟ್ರ ವ್ಯಾಪ್ತಿಯಾಗಿ ಕಲಿಕಾ ಕನಿಷ್ಠ ಹಂತದ ಕರಡನ್ನು ಸಿದ್ಧಪಡಿಸಿದ್ದರೂ ಸಹ ಸ್ಥಳೀಯ ಅಗತ್ಯತೆ, ಅವುಗಳ ಸುಸಂಬದ್ಧತೆ ಹಾಗೂ ಕಾರ್ಯರೂಪತೆಯನ್ನು ಸಾಧಿಸುವ ಉದ್ದೇಶದಿಂದ ಸ್ಥಳೀಯ ಉದಾಹರಣೆಗಳನ್ನು ಸಾಮಗ್ರಿಗಳನ್ನು ಮತ್ತು ಪರಿಸರವನ್ನು ಬಳಸಿಕೊಳ್ಳುವ ಪೂರ್ಣ ಅವಕಾಶವಿದೆ, ಈ ನಿರ್ದಿಷ್ಟ ಅಂಶವನ್ನು ಕೈಪಿಡಿಯಲ್ಲಿ ಸ್ಪಷ್ಟವಾಗಿ ತೋರಿಸುವುದರಿಂದ ರಾಷ್ಟ್ರೀಯ ಪಠ್ಯವಸ್ತು ಚೌಕಟ್ಟಿನೊಳಗೆ ಗರಿಷ್ಠ ವಿಕೇಂದ್ರೀಕರಣವನ್ನು ಸಾಧಿಸಬಹುದಾಗಿದೆ. ಹೆಚ್ಚಾಗಿ ಕಲಿಕಾ ಕನಿಷ್ಠ ಹಂತವನ್ನು ಜಾರಿಗೊಳಿಸುವ ಸಲುವಾಗಿ ಏರ್ಪಡಿಸಲಾಗುವ ಶಿಕ್ಷಕರ ತರಬೇತಿ, ಪುನರ್ ತರಬೇತಿ ಅವಧಿಯಲ್ಲಿ ಈ ಅಂಶಕ್ಕೆ ಸಾಕಷ್ಟು ಒತ್ತುಕೊಡಬೇಕು. ಕಾಲಾನುಕ್ರಮದಲ್ಲಿ ಕಲಿಕಾ ಕನಿಷ್ಠ ಹಂತದಲ್ಲಿ ನಿಗದಿಯಾದ ನಿರ್ದಿಷ್ಟ ಸಾಮರ್ಥ್ಯಗಳ ಆಧಾರದ ಮೇಲೆ ಪಠ್ಯ ಪುಸ್ತಕ ಸಾಮಗ್ರಿಗಳು, ವಿದ್ಯಾರ್ಥಿ ಅಭ್ಯಾಸ ಪುಸ್ತಕಗಳು, ಘಟಕವಾರು ಮೌಲ್ಯಮಾಪನ, ಅಭ್ಯಾಸ ಪತ್ರಿಕೆಗಳು ಹಾಗೂ ಪುಷ್ಟೀಕರಿಸುವ ಸಾಮಗ್ರಿಗಳನ್ನು ಕುರಿತಂತೆ ಸಮಗ್ರ ಬೋಧನಾ ಸಾಮಗ್ರಿಗಳನ್ನು ತಯಾರಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ತಯಾರಿಸಲಾಗಿರುವ ಆರಂಭದ ಪಠ್ಯಪುಸ್ತಕಗಳನ್ನು ಪರಿಶೀಲಿಸುವುದು ಸೂಕ್ತ.

ಪ್ರತ್ಯೇಕವಾಗಿ ಪ್ರಸ್ತಾಪಿಸಿದಂತೆ ಅನುಷ್ಠಾನದ ಪ್ರಥಮ ಹಂತದಿಂದ ಪ್ರಾರಂಭವಾಗುವ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನಾ ವಿಧಾನವನ್ನು ಗುಣಮಟ್ಟ ಕಾಯ್ದುಕೊಳ್ಳುವ ಸಲುವಾಗಿ ಕಲಿಕಾ ಕನಿಷ್ಠ ಹಂತದ ಅವಿಭಾಜ್ಯ ಅಂಗವನ್ನಾಗಿಸಬೇಕು. ಪ್ರಗತಿಯ ಬಗ್ಗೆ ನಿಗಾ ಇಡಲು ಪೂರ್ವಪರೀಕ್ಷೆ ಮತ್ತು ಪೂರ್ವೋತ್ತರ ಪರೀಕ್ಷೆ, ಪರಿಹಾರ ಪರೀಕ್ಷೆ, ಪರಿಹಾರ ಬೋಧನೆ, ಪ್ರಭುತ್ವ ಕಲಿಕೆ ಮತ್ತು ಒರೆ ಆಧಾರಿತ ಮೌಲ್ಯಮಾಪನಗಳನ್ನು (Criterion-referenced evaluation) ಒಳಗೊಂಡಂತೆ ಬೋಧನೆ ಮತ್ತು ಮೌಲ್ಯಮಾಪನ ಕಾರ್ಯಗಳು ಒಂದಕ್ಕೊಂದು ಹೊಂದಿಕೊಂಡಂತಿರಬೇಕು. ಈ ಉದ್ದೇಶಗಳಿಗಾಗಿ ಘಟಕ ಪರೀಕ್ಷೆ ಹಾಗೂ ಇತರೇ ಮೌಲ್ಯ ಮಾಪನಾ ಸಾಧನಗಳಿಂದ ಶಬ್ಧ ಸಂಪತ್ತಿನ ಪರೀಕ್ಷೆ, ಉಕ್ತಲೇಖನ, ಮನಸ್ಸಿನಲ್ಲಿ ಮಾಡಬಲ್ಲ ಗಣಿತ ಹಾಗೂ ಅನ್ವಯ ಪರೀಕ್ಷೆಗಳಂತಹ

ಪರೀಕ್ಷಾ ಅಂಶಗಳ (Test items) ಒಂದು ದೊಡ್ಡ ಕೂಡು ನಿಧಿ(Poolex)ಯನ್ನು ತಯಾರಿಸಿ ಒದಗಿಸುವ ಮೂಲಕ ಶಿಕ್ಷಕರ ದುಡಿಮೆಯು ಹೆಚ್ಚು ದಕ್ಷ ಹಾಗೂ ಪರಿಣಾಮಕಾರಿಯಾಗಲು ನೆರವಾಗುವಂತೆ ಮಾಡಬೇಕು. ಅದೇ ರೀತಿಯಲ್ಲಿ ಮೇಲ್ವಿಚಾರಕರು ವಿದ್ಯಾರ್ಥಿಗಳನ್ನು ಸ್ಥಳದಲ್ಲೇ ಪರೀಕ್ಷಿಸಲು, ಜಿಲ್ಲಾ ಮಟ್ಟದ ಅಧಿಕಾರಿಗಳು ವಿದ್ಯಾರ್ಥಿಗಳ ಅರ್ಹತೆಗಳನ್ನು ಹೋಲಿಸಲು ಅಥವಾ ಅಂಥವೇ ಇತರ ಉದ್ದೇಶಗಳಿಗಾಗಿ ಈ ಕೂಡುನಿಧಿ ಪರೀಕ್ಷಾ ಸಾಮಗ್ರಿಗಳು ನೆರವಾಗುತ್ತವೆ.

ಮೊದಲನೆಯ ಹಂತ ಪ್ರಾರಂಭವಾಗುವ ಮೊದಲು ಕಲಿಕಾ ಕನಿಷ್ಠ ಹಂತದ ಕೈಪಿಡಿಗಳು, ಪಠ್ಯ ಸಾಮಗ್ರಿಗಳು ಮತ್ತು ವಿಷಯ ಕೂಡುನಿಧಿಗಳ ಆಧಾರದ ಮೇಲೆ ಶಿಕ್ಷಕರಿಗೆ ಸೂಕ್ತ ತರಬೇತಿ ಕಾರ್ಯಕ್ರಮವನ್ನು ರೂಪಿಸಬೇಕು. ಅಂತೆಯೇ ಇದನ್ನು ವಿಸ್ತರಣೆ ಕಾರ್ಯಕ್ರಮದ ಅಂಗವಾಗಿ ಎರಡು ಮತ್ತು ಮೂರನೇ ಹಂತವನ್ನು ಪ್ರಾರಂಭಿಸುವ ಮುನ್ನ ಪುನರಾವರ್ತನೆ ಮಾಡಬೇಕು. ಇಂತಹುದೇ ತರಬೇತಿಯನ್ನು ಮೇಲ್ವಿಚಾರಕರು ಹಾಗೂ ಇತರೇ ಸಿಬ್ಬಂದಿಯವರಿಗೆ ಅವರ ನಿರ್ದಿಷ್ಟ ಕರ್ತವ್ಯಗಳ ನಿರ್ವಹಣೆ ಬಗ್ಗೆ ನೀಡಬೇಕಾಗುವುದು. ಈ ಎಲ್ಲಾ ಕಾರ್ಯನಿರ್ವಾಹಕರುಗಳಿಗೆ ವ್ಯವಸ್ಥಿತ ರೀತಿಯಲ್ಲಿ ಸಂಚಿತ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನದ ಪೂರ್ಣಾವಧಿಗೆ ಅತೀ ಜಾಗರೂಕತೆಯಿಂದ ರೂಪಿಸಿ ನೀಡಬೇಕು. ಈ ತರಬೇತಿಯು ಅಲ್ಪಾವಧಿಯದಾಗಿದ್ದು ಕಾರ್ಯನಿಷ್ಠ ಮತ್ತು ಕ್ರಿಯಾತ್ಮಕವಾಗಿರಬೇಕು.

ವಿವಿಧ ರೀತಿಯಲ್ಲಿ ಸ್ಥಳೀಯ ಸಮುದಾಯವನ್ನು ಕ್ರಿಯಾತ್ಮಕವಾಗಿ ತೊಡಗಿಸುವಂತೆ ಕ್ರಮ ತೆಗೆದುಕೊಳ್ಳಬೇಕು. ಎಲ್ಲಿ ಸ್ಥಳೀಯ ಶಿಕ್ಷಣ ಸಮಿತಿಗಳು ಅಸ್ತಿತ್ವದಲ್ಲಿವೆಯೋ ಅಲ್ಲಿ ಅವುಗಳ ಸಹಕಾರ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಪಡೆದು ಅಂದರೆ ಮುಖ್ಯವಾಗಿ ಶಾಲೆಗೆ ಸರಿಯಾಗಿ ಬಾರದಿರುವ ಮಕ್ಕಳ (ಇತರರನ್ನೊಳಗೊಂಡಂತೆ) ಪೋಷಕರೊಂದಿಗೆ ಸಂಪರ್ಕ ಹೊಂದಿ ಅವರು ಮಕ್ಕಳನ್ನು ಶಾಲೆಗೆ ನಿಯಮಿತವಾಗಿ ಕಳಿಸಲು ಪ್ರೇರೇಪಿಸಿ, ಅಂತಹ ಮಕ್ಕಳು ಕಲಿಕಾ ಕನಿಷ್ಠ ಹಂತದಲ್ಲಿ ನಿರೂಪಿಸಿರುವ ಕನಿಷ್ಠ ಮಟ್ಟದ ಸಾಧನೆಯನ್ನು ಪಡೆಯುವಲ್ಲಿ ಹಿಂದೆ ಬೀಳದಂತೆ ನೋಡಿಕೊಳ್ಳಬೇಕು. ಸ್ಥಳೀಯವಾಗಿ ಅಂತಹ ಆಸು–ಪಾಸಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಅಥವಾ ಕಾರ್ಯಕರ್ತರಿದ್ದಲ್ಲಿ ಶಾಲೆಯ ಗುಣಮಟ್ಟ ಏರಿಸುವ ಸಲುವಾಗಿ ಅವರ ಸಹಕಾರ ಮತ್ತು ಮಾರ್ಗದರ್ಶನ ಪಡೆಯುವುದನ್ನು ಪರಿಶೀಲಿಸಬಹುದು. ಅಂತಹ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಇತರರ ಜೊತೆಗೆ ನಿವೃತ್ತ ಶಿಕ್ಷಕರು ಅಥವಾ ಇತರ ವೃತ್ತಿ ನಿರತರು ಹತ್ತಿರದ ಪ್ರಾಥಮಿಕ ಹಾಗೂ ಪ್ರೌಢ ಹಂತದ ಪ್ರಶಿಕ್ಷಕರು ಆರೋಗ್ಯ ಕಾರ್ಯಕರ್ತರು ಹಳ್ಳಿಯಲ್ಲಿನ ಇತರರು ಕಾಲಕಾಲಕ್ಕೆ ಶಾಲೆ ಅಥವಾ ಅನೌಪಚಾರಿಕ ಶಿಕ್ಷಣ ಕೇಂದ್ರಗಳಿಗೆ ತಮ್ಮ ಸಹಾಯ ಹಸ್ತವನ್ನು ನೀಡಬಹುದು. ಸಂಗ್ರಹಿಸಿ ಹೇಳುವುದಾದರೆ ಕಲಿಕಾ ಕನಿಷ್ಠ ಹಂತದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸ್ಥಳೀಯವಾಗಿ ಲಭ್ಯವಿರುವ ಭೌತಿಕ, ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳನ್ನು ಗರಿಷ್ಠವಾಗಿ ಬಳಸಿಕೊಳ್ಳಬೇಕು.

ಅಂತೆಯೇ ಪರಸ್ಪರ ಬಲಪಡಿಸುವ ಹಾಗೂ ಆಂತರಿಕ ಬೆಂಬಲ ಗಳಿಸುವ ಉದ್ದೇಶದಿಂದ ಸಾಧ್ಯವಿರುವ ಕಡೆಗಳಲ್ಲೆಲ್ಲಾ ಶಾಲೆಗಳನ್ನು ಸೇರಿಸಿ, ಶಾಲಾ ಸಮೂಹಗಳು ಅಥವಾ ಸಂಕೀರ್ಣಗಳನ್ನು ಪ್ರಾರಂಭಿಸಬಹುದು. ಅರವತ್ತರ ದಶಕದಲ್ಲಿ ಶಿಕ್ಷಣ ಆಯೋಗವು ಸೂಚಿಸಿದಂತೆ ಶಾಲಾ ಸಂಕೀರ್ಣಗಳು ಅನುಭವಗಳನ್ನು ಹಾಗೂ ಸಾಮಗ್ರಿಗಳನ್ನು ಉಪಯೋಗಿಸುವಲ್ಲಿ ಸಹಕಾರ ನೀಡುವುದರಿಂದ ಬೋಧನೆ, ಮೌಲ್ಯಮಾಪನ ಮತ್ತು ಸಂಯೋಜನೆಯ ಹಲವು ಸಮಸ್ಯೆಗಳನ್ನು ನಿವಾರಿಸುವುದರ ಜೊತೆಗೆ ಪರೀಕ್ಷಾ ಸಾಮಗ್ರಿಗಳನ್ನು ತಯಾರಿಸಲು ಪರಿಹಾರ ವಿಧಾನಗಳನ್ನು ಸೂಚಿಸಿ, ಕಾಲ ಮತ್ತು ವೆಚ್ಚವನ್ನು ತಗ್ಗಿಸಿ ಕಲಿಕಾ ವಿಧಾನದ ಗುಣಮಟ್ಟವನ್ನು ಉತ್ತಮಪಡಿಸಲು ಒಂದಕ್ಕೊಂದು ನೆರವಾಗುವುವು. ಶಾಲಾ ಸಂಕೀರ್ಣ ವಿಧಾನಗಳನ್ನು ಅನುಸರಿಸಿದಲ್ಲಿ ಇಂತಹ ಸಮೂಹಗಳ ವ್ಯಾಪ್ತಿಯನ್ನು ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ತಾಲೂಕಿನೊಳಗೆ ಆಯಕಟ್ಟಿನ ಪ್ರದೇಶಗಳಲ್ಲಿನ ಶಾಲೆಗಳನ್ನು ೫ ರಿಂದ ೧೦ಕ್ಕೆ ಸೀಮಿತಗೊಳಿಸಬೇಕು. ಗುರುತಿಸಿದ ಅಗತ್ಯತೆಗಳ ಗುರಿಯನ್ನು ಸಾಧಿಸಲು ಸಹಕಾರ ನೀಡುವ ಸಲುವಾಗಿ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರು ತಮ್ಮದೇ ಅದ ಸಮಿತಿಗಳನ್ನು ರಚಿಸಿಕೊಳ್ಳಬಹುದು.

ಅನುಷ್ಠಾನ ತಂತ್ರವು ಪರಿಣಾಮಕಾರಿಯಾಗಲು ಮತ್ತು ಅದರ ನಾಯಕತ್ವಕ್ಕಾಗಿ ಸೂಕ್ತ ಸಂಪನ್ಮೂಲ ವ್ಯವಸ್ಥೆ ಅಗತ್ಯ. ಇದನ್ನು ಜಿಲ್ಲಾಮಟ್ಟದಲ್ಲಿ ಸ್ಥಾಪಿಸತಕ್ಕದ್ದು. ಪ್ರಾರಂಭಿಕ ಹಂತದಲ್ಲಿ ಸಾಕಷ್ಟು ಪೂರ್ವ ಸಿದ್ಧತೆಯನ್ನು ಮಾಡಿಕೊಂಡು ವಿವರವಾದ ಅನುಷ್ಠಾನದ ಕಾರ್ಯಕ್ರಮಗಳನ್ನು ರೂಪಿಸಿ ಅಗತ್ಯವಿರುವ ಆರ್ಥಿಕ ಆಯವ್ಯಯವನ್ನು ನಿಗದಿಪಡಿಸಿಕೊಳ್ಳಬೇಕು. ತರಬೇತಿ ಸಾಮಗ್ರಿಗಳು, ಪೂರ್ವ ಪರೀಕ್ಷೆ ಮತ್ತು ಪೂರ್ವೋತ್ತರ ಪರೀಕ್ಷೆಗಳಿಗಾಗಿ ಮೌಲ್ಯಮಾಪನ ಸಲಕರಣೆಗಳು ಎಲ್ಲರಲ್ಲೂ ಮೂಡಿದ ಉತ್ಸಾಹ ಮತ್ತು ಕಾಲಕಾಲಕ್ಕೆ ಬರಬಹುದಾದ ತೊಂದರೆಗಳ ನಿವಾರಣೆ ಮುಂತಾದ ಎಲ್ಲಾ ಕ್ರಮಗಳ ಸಹಾಯದಿಂದ ಯೋಜನೆಯ ಅನುಷ್ಠಾನ ಕಾರ್ಯವು ಪೂರ್ಣ ಪ್ರಮಾಣದಲ್ಲಿ ಭರದಿಂದ ಮುಂದೆ ಸಾಗುವಂತೆ ಮಾಡಬಹುದು. ಈ ವಿಧಾನವು ಪ್ರಥಮ ಹಂತದ ಅಂತ್ಯದಲ್ಲಿ ಕಲಿಕಾ ಕನಿಷ್ಠ ಹಂತದ ಕಾರ್ಯಕ್ರಮ ಜಾರಿ ಕುರಿತು ಸಂಯೋಜನಾ ಕಾರ್ಯ ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ರಾಷ್ಟ್ರಮಟ್ಟದಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಿಕ್ಷಣ ಇಲಾಖೆ(MHRD)ಯ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ(NCERT), ರಾಷ್ಟ್ರೀಯ ಯೋಜನೆ ಮತ್ತು ಆಡಳಿತ ಸಂಸ್ಥೆ(NIEPA), ರಾಷ್ಟ್ರೀಯ ಮೌಲ್ಯಮಾಪನ ಸಂಸ್ಥೆ(NEO)ಗಳೊಂದಿಗೆ ಈ ಕಾರ್ಯಕ್ರಮಗಳು ಜಾರಿಯಲ್ಲಿ ಪ್ರಧಾನ ಪಾತ್ರ ವಹಿಸಬೇಕು. ಇತರೆ ಕಾರ್ಯಗಳ ಜೊತೆಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಈ ಕೆಳಕಂಡ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ.

'ಸರ್ವರಿಗೂ ಶಿಕ್ಷಣ' ಮತ್ತು ರಾಷ್ಟ್ರೀಯ ಕಾರ್ಯಕ್ರಮವಾದ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಅಂಗವಾಗಿ ಈ ಕಾರ್ಯಕ್ರಮದಡಿಯಲ್ಲಿ ಸಮಾನತ್ವದ ಜೊತೆಗೆ ಗುಣಮಹತ್ವದ ಕಾರ್ಯದಲ್ಲಿ ಜಿಲ್ಲಾ ಮತ್ತು ರಾಜ್ಯ ಶಿಕ್ಷಣ ಇಲಾಖೆಯ ಪ್ರಾಧಿಕಾರಗಳೊಡನೆ ಸಮನ್ವಯ ಸಾಧಿಸುವ ಕಾರ್ಯವನ್ನು ನಿರ್ವಹಿಸಬೇಕು. ರಾಷ್ಟ್ರೀಯ ಶಿಕ್ಷಣ ಸಚಿವಾಲಯವು ವಿವಿಧ ಸಂಸ್ಥೆಗಳ ನೆರವಿನಿಂದ ಇದಕ್ಕೆ ಅಗತ್ಯವಾಗಿರುವ ಸಂಪನ್ಮೂಲ ಸಂಗ್ರಹಣೆಯ ಕಾರ್ಯ ನಿರ್ವಹಿಸುವುದರ ಜೊತೆಗೆ ಸಂಬಂಧಿಸಿದ ಜನರನ್ನು ಪ್ರೇರೇಪಿಸಿ ಮೊದಲನೇ ಹಾಗೂ ಅನಂತರದ ಹಂತಗಳಲ್ಲಿ ಕಲಿಕಾ ಕನಿಷ್ಠ ಹಂತಗಳನ್ನು ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ ಒಂದು ಕಾಲಮಿತಿಯ ಕಾರ್ಯಕ್ರಮವಾಗಿ ಅಳವಡಿಸಲು ಅಗತ್ಯವಾದ ರಾಜಕೀಯ ಇಚ್ಛಾಶಕ್ತಿ(Political Will) ಉಂಟಾಗುವುದನ್ನು ಖಚಿತಪಡಿಸಿಕೊಳ್ಳಬೇಕು.

ರಾಷ್ಟ್ರೀಯ ಮಟ್ಟದಲ್ಲಿ ಈ ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯನ್ನು ನಿಯಮಿತವಾಗಿ ಪರಾಮರ್ಶಿಸಿ ಅಂತಿಮ ಗುರಿಯಾದ ಎಲ್ಲಾ ಮಕ್ಕಳ ಶಿಕ್ಷಣ ಗುಣಮಟ್ಟ ಮತ್ತು ಸಾಧಿಸಲು ಅಗತ್ಯವಾದ ಕೆಲವು ಬದಲಾವಣೆಯನ್ನು ಮಾಡಲು ಕ್ರಮಕೈಗೊಳ್ಳಬೇಕು. ಸಚಿವಾಲಯವು ಈ ಗುರಿ ಸಾಧನೆಗಾಗಿ ಭಾಷೆ ಗಣಿತ ಮತ್ತು ಪರಿಸರ ಅಧ್ಯಯನದ ಮೂಲಭೂತ ಕಲ್ಪನೆ ಕುರಿತು ಸಾಧನೆಯ ಸಮೀಕ್ಷೆಗಳನ್ನು (ಸಾಮಾಜಿಕ ಪೌರಸೌಲಭ್ಯ ಮತ್ತು ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದಂತೆ) ನಡೆಸಬೇಕು. ಅವುಗಳಲ್ಲಿ ಕಂಡುಬಂದ ಲೋಪದೋಷಗಳನ್ನು ಜಿಲ್ಲೆಗಳ ನಡುವೆ, ರಾಜ್ಯಗಳ ನಡುವೆ, ಗ್ರಾಮೀಣ ಹಾಗೂ ನಗರ ಪ್ರದೇಶಗಳ ನಡುವೆ ಇರುವ ವಿದ್ಯಾರ್ಥಿಗಳ ಗುಣಮಟ್ಟದಲ್ಲಿನ ಅಸಮಾನತೆಗಳನ್ನು ನಿವಾರಿಸಲಾಗದಿದ್ದಲ್ಲಿ ಆದಷ್ಟು ಕಡಿಮೆ ಮಾಡುವಲ್ಲಿ ಅನುಸರಣಾ(Follow up) ಕಾರ್ಯಗಳನ್ನು ಕೈಗೊಳ್ಳಬೇಕು. ಈ ಕಾರ್ಯನಿರ್ವಹಣೆಗಾಗಿ ಆದಷ್ಟು ಜಾಗ್ರತೆ ರಾಷ್ಟ್ರೀಯ ಮೌಲ್ಯಮಾಪನ ಸಂಸ್ಥೆಯನ್ನು ಪ್ರಾರಂಭಿಸಬೇಕು.[೧೫]

ಪ್ರಾಥಮಿಕ ಹಂತದಲ್ಲಿ ಕಲಿಕಾ ಕನಿಷ್ಠ ಹಂತ ನಿಗದಿಪಡಿಸುವ ಕಾರ್ಯ ಮುಗಿದ ನಂತರ ರಾಷ್ಟ್ರೀಯ ಶಿಕ್ಷಣ ಸಚಿವಾಲಯವು ಕೂಡಲೇ ಇಂತಹ ಹಂತವನ್ನು ೫ರಿಂದ ೭ನೇ ತರಗತಿಗಳ ಹಿರಿಯ ಪ್ರಾಥಮಿಕ ಹಂತಕ್ಕೆ ನಿಗದಿಪಡಿಸುವ ಕಾರ್ಯವನ್ನು ಪ್ರಾರಂಭಿಸಬೇಕು. ಇಲ್ಲದಿದ್ದಲ್ಲಿ ಮೊದಲಿನ ೫ ವರ್ಷಗಳಲ್ಲಿ ಮಾಡಲಾದ ಕಾರ್ಯವು ಅಪೂರ್ಣವಾಗುವುದರ ಜೊತೆಗೆ ಹೆಚ್ಚು ಲಾಭದಾಯಕವಾಗದು. ಈ ಕಾರ್ಯವು ಕಾಲಾನುಕ್ರಮದಲ್ಲಿ ೮, ೯ ಮತ್ತು ೧೦ನೇ ತರಗತಿಗಳನ್ನೊಳಗೊಂಡ ಸಾಮಾನ್ಯ ಶಿಕ್ಷಣದ ಅಂತ್ಯದವರಿಗೂ ಸಾಗಬೇಕು.

ಎನ್.ಸಿ.ಇ.ಆರ್.ಟಿ., ಎನ್.ಐ.ಇ.ಪಿ.ಎ. ಹಾಗೂ ರಾಜ್ಯಗಳಲ್ಲಿನ ಇತರ ಸಂಬಂಧಿತ ಸಂಸ್ಥೆಗಳನ್ನು ಕಲಿಕಾ ಕನಿಷ್ಠ ಹಂತದ ಅನುಷ್ಠಾನ ಕಾರ್ಯದಲ್ಲಿ ತೊಡಗಿಸಬೇಕು. ಜೊತೆಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಈ ಕಾರ್ಯಕ್ರಮವನ್ನು ಆರಂಭಿಸುವಲ್ಲಿ, ಮುಂದುವರೆಸುವಲ್ಲಿ ಹಾಗೂ ಸಂಪನ್ಮೂಲ ಸಂಗ್ರಹಣೆ ಮತ್ತು ಫಲಿತಾಂಶವನ್ನು ಪರಾಮರ್ಶಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು.

ಎನ್.ಸಿ.ಇ.ಆರ್.ಟಿ.ಯು ಕಲಿಕಾ ಕನಿಷ್ಠ ಹಂತದ ವಿವಿಧ ಹಂತಗಳ ಅನುಷ್ಠಾನಕ್ಕಾಗಿ ಶಿಕ್ಷಕರು ಹಾಗೂ ಇತರೆಯವರ ತರಬೇತಿಗಾಗಿ ಕೈಪಿಡಿಗಳ ರಚನೆಯಾಗಿ ಮತ್ತು ಇತರೆ ಸಾಮಗ್ರಿಗಳ ತಯಾರಿಕೆಗಾಗಿ ಜೊತೆಗೆ ಮೌಲ್ಯಮಾಪನ ಸಾಮಗ್ರಿಗಳ ಒಂದು ಕೂಡುನಿಧಿ ಸ್ಥಾಪಿಸಲು ಹಾಗೂ ಇಂತಹ ಇತರೆ ಉದ್ದೇಶಗಳಿಗಾಗಿ ಒಂದು ವಿಶೇಷ ಘಟಕವನ್ನು ಸ್ಥಾಪಿಸಬೇಕು. ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣದ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿರುವ ಲಕ್ಷಾಂತರ ಮಕ್ಕಳ ಕಲಿಕೆಯ ಗುಣಮಟ್ಟ ಮತ್ತು ಸಮತೋಲನವನ್ನು ಕಾಯ್ದುಕೊಳ್ಳುವುದು ಅಷ್ಟು ಸುಲಭವಲ್ಲ. ಇದರಿಂದಾಗಿ ಕಲಿಕಾ ಕನಿಷ್ಠ ಹಂತಗಳ ಸಂಪನ್ಮೂಲ ಘಟಕಗಳಲ್ಲಿ ಭಾಷೆ ಗಣಿತ ಮತ್ತು ಸಾಮಾನ್ಯ ಅಭ್ಯಾಸಗಳಂತಹ ವಿಷಯಗಳ ಪರಿಣಿತರು ಹಾಗೂ ಶಿಕ್ಷಕರು ತರಬೇತಿ, ಕೈಪಿಡಿ ರಚನೆ ಇತರೆ ಸಾಮಗ್ರಿ ತಯಾರಿಕೆ ಮೌಲ್ಯ ಮಾಪನ ಕುರಿತಂತೆ ನುರಿತ ಪರಿಣಿತರು ಇರತಕ್ಕದ್ದು. ಇವರೆಲ್ಲರೂ ದಕ್ಷರೂ ಮತ್ತು ನಿಪುಣರಾಗಿರುವುದು ಅತ್ಯಂತ ಮುಖ್ಯವಾದುದು.

ಪ್ರಥಮ ಹಂತದ ಅನುಭವಗಳ ಅವಲೋಕನೆಯ ಆಧಾರದ ಮೇಲೆ ಕಲಿಕಾ ಕನಿಷ್ಠ ಹಂತ ಹಾಗೂ ಇತರೆ ಸಂಬಂಧಿಸಿದ ಅಂಶಗಳ ಬಗ್ಗೆ ಅಗತ್ಯ ಬದಲಾವಣೆಗಳನ್ನು ಮಾಡಿದ ನಂತರ ಎರಡನೆಯ ಹಂತವನ್ನು ಆಯ್ದು ಪ್ರದೇಶಗಳಲ್ಲಿನ ಜಿಲ್ಲೆ ಅಥವಾ ಜಿಲ್ಲಾ ವಲಯಗಳಲ್ಲಿ ಆರಂಭಿಸಬಹುದು. ಸಾಕಷ್ಟು ಸಂಪನ್ಮೂಲಗಳು ಲಭ್ಯವಾದಲ್ಲಿ ಮತ್ತು ಮೊದಲನೇ ಹಂತದ ಅನುಭವವು ಉತ್ತೇಜನಕಾರಿಯಾಗಿದ್ದಲ್ಲಿ ಈ ಕಾರ್ಯಕ್ರಮವನ್ನು ವಿವಿಧ ರಾಜ್ಯಗಳ ೫೦ ಜಿಲ್ಲೆಗಳಲ್ಲಿ ಪ್ರಾರಂಭಿಸಬಹುದು. ಈ ಅಧ್ಯಾಯವು ಹಿಂದಿನ ಪ್ಯಾರಾಗಳಲ್ಲಿ ತಿಳಿಸಲಾದ ಎಲ್ಲಾ ಮುಖ್ಯ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಂತಿಮ ಗುರಿಯಾದ ಎಲ್ಲಾ ಮಕ್ಕಳ ಪ್ರಭುತ್ವ ಮಟ್ಟದ ಕಲಿಕೆಯ ಗುಣಮಟ್ಟ ಸಾಧನೆಯ ಬಗ್ಗೆ ಯಾವುದೇ ರೀತಿಯಲ್ಲಿ ರಾಜಿಯಾಗದಂತೆ ಜಾರಿಗೆ ತರಬೇಕು. ಪುನಃ ಎರಡನೇ ಹಂತದ ಅನುಷ್ಠಾನದ ಅನುಭವಗಳು ಮತ್ತು ಫಲಿತಾಂಶದ ವಿಶ್ಲೇಷಣೆಯ ನಂತರ ಅಗತ್ಯ ಬದಲಾವಣೆಯೊಂದಿಗೆ ಮೂರನೇ ಹಂತದಲ್ಲಿ ರಾಷ್ಟ್ರದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ಜಿಲ್ಲೆಗಳಲ್ಲಿ ಈ ಕಲಿಕಾ ಕನಿಷ್ಠ ಹಂತಗಳ ಕಾರ್ಯಕ್ರಮವನ್ನು ಜಾರಿಗೊಳಿಸಬಹುದು. ಪ್ರಾಥಮಿಕ ಶಿಕ್ಷಣದಲ್ಲಿ ಶಿಕ್ಷಣದ ಗುಣಮಟ್ಟ ಏರಿಕೆ ಮತ್ತು ಸಮತ್ವ ಹೆಚ್ಚಿಸಲು ಈ ರೀತಿ ಗಳಿಸಿದ ಅನುಭವನ್ನು ಬಳಸಿಕೊಂಡು ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟಗಳಲ್ಲಿನ ಅಭಿವೃದ್ಧಿ ಮತ್ತು ಅಗತ್ಯತೆಗಳ ಬೆಳಕಿನಲ್ಲಿ ಮುಂದಿನ ಪರಿಷ್ಕರಣಾ ಸರಣಿಯನ್ನು ಕಾಲಕಾಲಕ್ಕೆ ಕೈಗೊಳ್ಳಬೇಕೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ.

ಮೂಲ ಶಿಕ್ಷಣದ(Basic Education) ಗುರಿ ಹೊಂದಿರುವ ನಿರ್ವಹಣಾ ವ್ಯವಸ್ಥೆಗಳ ಆಂತರಿಕ ಮತ್ತು ಮೂಲ ವ್ಯತ್ಯಾಸವನ್ನು ವಯಸ್ಕರ ಶಿಕ್ಷಣದ ಪೂರ್ವ ಮತ್ತು ಪೂರ್ವೋತ್ತರ ಕಾರ್ಯಕ್ರಮದ ಪಠ್ಯವಸ್ತುವಿನಲ್ಲಿರುವ ಸಮರ್ಥ್ಯಗಳನ್ನು ಹೋಲಿಕೆಯೊಂದಿಗೆ ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳಬೇಕು. ಇಂತಹ ವಿಶ್ಲೇಷಣೆಯು ವಯಸ್ಕರು ಮತ್ತು ಮಕ್ಕಳ ಕಲಿಕಾ ಸಾಮರ್ಥ್ಯವನ್ನು ತುಲನಾತ್ಮಕವಾಗಿ ರೂಪಿಸುವಲ್ಲಿ ಸಹಾಯವಾಗಬಹುದು.

೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಾಲಾ ಶಿಕ್ಷಣದ ಪ್ರತಿ ಹಂತಕ್ಕೂ ಕಲಿಕೆಯ ಕನಿಷ್ಠ ಮಟ್ಟವನ್ನು ರೂಪಿಸಬೇಕೆಂದು ಶಿಫಾರಸ್ಸು ಮಾಡಿದೆ. ಜೊತೆಗೆ ವಿದ್ಯಾರ್ಥಿಗಳು ಈ ಮಟ್ಟವನ್ನು ಖಂಡಿತವಾಗಿ ಸಾಧಿಸುವಂತೆ ಕ್ರಮಕೈಗೊಳ್ಳಬೇಕೆಂದು ಸೂಚಿಸಿತು. ಪರಿಷ್ಕೃತ ನೀತಿ ನಿರೂಪಣೆ ಹಾಗೂ ಕ್ರಿಯಾ ಕಾರ್ಯಕ್ರಮಗಳಲ್ಲಿಯೂ ಎಲ್ಲಾ ವಿದ್ಯಾರ್ಥಿಗಳು ಕಲಿಕೆಯ ಕನಿಷ್ಟ ಮಟ್ಟವನ್ನು ಮುಟ್ಟಲೇ ಬೇಕಾದ ತುರ್ತು ಅವಶ್ಯಕತೆಯನ್ನು ಮತ್ತೇ ಹೇಳಲಾಗಿದೆ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯ ನಿರ್ದೇಶನದ ಅನುಸಾರ ೧೯೯೦ರಲ್ಲಿ ಕೇಂದ್ರ ಸರ್ಕಾರ ಮಾನವ ಸಂಪನ್ಮೂಲ ಹಾಗೂ ಅಭಿವೃದ್ಧಿ ಇಲಾಖೆಯ ಶಿಕ್ಷಣ ವಿಭಾಗವು ಪ್ರಾಥಮಿಕ ಹಂತದಲ್ಲಿ ಕಲಿಕೆಯ ಕನಿಷ್ಠ ಮಟ್ಟವನ್ನು ರೂಪಿಸಲು ಒಂದು ಸಮಿತಿಯನ್ನು ನೇಮಿಸಿತು. ೧೯೯೧ರಲ್ಲಿ ಈ ಸಮಿತಿಯು ಪ್ರಾಥಮಿಕ ಹಂತದಲ್ಲಿ ಕಲಿಕೆಯ ಕನಿಷ್ಠ ಹಂತಗಳು ಎಂಬ ಶೀರ್ಷಿಕೆಯ ವರದಿಯನ್ನು ಸಲ್ಲಿಸಿತು. ಈ ವರದಿಯಲ್ಲಿ ಮಕ್ಕಳು ಭಾಷೆಗಳು ಗಣಿತ, ಪರಿಸರ ಅಧ್ಯಯನಗಳಲ್ಲಿ ಗಳಿಸಬೇಕಾದ ಕನಿಷ್ಠ ಕಲಿಕಾ ಮಟ್ಟವನ್ನು ಗುರುತಿಸಲಾಯಿತು.

೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯು ಸ್ತ್ರೀಯರ ಸ್ಥಾನಮಾನ ಹೆಚ್ಚಿಸಲು ಮತ್ತು ಸಬಲೀಕರಣಕ್ಕಾಗಿ ಸಮಾನತೆಗಾಗಿ ಶಿಕ್ಷಣವನ್ನು ಒತ್ತಿ ಹೇಳಿದೆ. ಮಹಿಳಾ ಅಧ್ಯಯನವನ್ನು ಪ್ರೋತ್ಸಾಹಿಸುವುದು ಮತ್ತು ಅನಕ್ಷರತೆಯ ನಿರ್ಮೂಲನೆ ಮತ್ತು ತಾಂತ್ರಿಕ ಹಾಗೂ ಔದ್ಯಮಿಕ ಶಿಕ್ಷಣದಲ್ಲಿ ಮಹಿಳೆಯರ ಸಹಭಾಗಿತ್ವಗಳು ಅವಶ್ಯಕವಾಗಿವೆ. ಇದೆಲ್ಲದರ ಜೊತೆಗೆ ಹೆಣ್ಣುಮಕ್ಕಳ ಶಿಕ್ಷಣವನ್ನು ಉತ್ತೇಜಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮಕೈಗೊಂಡಿವೆ. ರಾಜ್ಯ ಶಿಕ್ಷಣ ನಿರ್ದೇಶನಾಲಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಪ್ರತ್ಯೇಕ ವಿಭಾಗಗಳು ಹಾಗೂ ಹೆಣ್ಣುಮಕ್ಕಳಿಗಾಗಿ ಪಾಲಿಟೆಕ್ನಿಕಗಳ ಸ್ಥಾಪನೆ, ಮಹಿಳಾ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವಯಂ ಸೇವಾ ಶಿಕ್ಷಣ ಸಂಸ್ಥೆಗಳಿಗೆ ಸಹಾಯ, ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕಿಯರಿಗೆ ವಾಸಕ್ಕಾಗಿ ಗೃಹನಿರ್ಮಾಣ, ಹೆಣ್ಣುಮಕ್ಕಳಿಗೆ ವಸತಿ ನಿಲಯಗಳು, ಹೆಣ್ಣುಮಕ್ಕಳ ಶಿಕ್ಷಣ ಸಮಸ್ಯೆಗಳನ್ನು, ಕಾರ್ಯಕ್ರಮಗಳನ್ನು ಚರ್ಚಿಸಲು ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಗೋಷ್ಠಿಗಳು ಇವುಗಳನ್ನು ೮೬ರ ಶಿಕ್ಷಣ ನೀತಿಯು ಒಳಗೊಂಡಿದೆ. ನಮ್ಮ ಸಮಾಜದಲ್ಲಿ ಮುಂದುವರೆದಿರುವ ಲಿಂಗತಾರತಮ್ಯದಿಂದ ದೂರ ಸರಿದು ಸ್ತ್ರೀ ಹಾಗೂ ಪುರುಷ ಗುಣಗಳನ್ನು ಪುನಃ ವ್ಯಾಖ್ಯಾ ಮಾಡಲು ಶಿಕ್ಷಣ ಸಹಾಯ ಮಾಡಬೇಕು. ಶಿಕ್ಷಣವು ಮಹಿಳೆಯರನ್ನು ಕೆಳಗಿನ ಮಟ್ಟದಿಂದ ಮೇಲೆತ್ತಿ ಬಾಲಕಿಯರಿಬ್ಬರಲ್ಲೂ ಪೋಷಿಸುವ, ಕಾಳಜಿ ವಹಿಸುವ ನಮ್ರತೆಯಿಂದ ವರ್ತಿಸುವ ಗುಣಗಳನ್ನು ಉತ್ತೇಜಿಸಬೇಕಲ್ಲದೆ ಧೈರ್ಯ ಮತ್ತು ಸ್ವಾತಂತ್ರ್ಯಗಳನ್ನು ಜೊತೆಗೆ ಎಲ್ಲಾ ಧನಾತ್ಮಕ ಗುಣಗಳನ್ನು ಉತ್ತೇಜಿಸಬೇಕು ಏಕೆಂದರೆ ಬಾಲಕ, ಬಾಲಕಿಯರ ನಡುವಿನ ವ್ಯತ್ಯಾಸ ಜೈವಿಕವೇ ವಿನಃ ಮನೋವೈಜ್ಞಾನಿಕ ಅಥವಾ ಸಾಮಾಜಿಕವಲ್ಲ.

ಶಿಕ್ಷಣ ಮತ್ತು ಜ್ಞಾನಗಳ ಈವರೆಗೆ ಮಹಿಳೆಯರನ್ನು ದುರ್ಬಲರನ್ನಾಗಿಸುವ ಸಾಧನೆಗಳೇ ಆಗಿವೆ. ಆದ್ದರಿಂದ ಶಿಕ್ಷಣ ಸಂಸ್ಥೆ ಒಂದು ಧನಾತ್ಮಕ ವಾತಾವರಣವನ್ನು ನಿರ್ಮಿಸಿ ಮಹಿಳೆಯರು ಆತ್ಮಪ್ರತಿಷ್ಠೆ ಬೆಳಸಿಕೊಳ್ಳಲು ಮಾನವರಾಗಿ ತಮ್ಮ ಸಾಮರ್ಥ್ಯಗಳನ್ನು ಪೂರ್ಣವಾಗಿ ಅಭಿವೃದ್ಧಿ ಪಡಿಸಿಕೊಳ್ಳಲು ತಮ್ಮ ಜೀವನವನ್ನು ತಮ್ಮೊಟ್ಟಿಗೆ ಹತೋಟಿಗೆ ತಂದುಕೊಳ್ಳಲು ಅಗತ್ಯವಾದ ವಿಶ್ಲೇಷಣಾ ಕೌಶಲ್ಯಗಳನ್ನು ಬೆಳಸಿಕೊಳ್ಳಲು ಶಿಕ್ಷಣ ಸಹಾಯಕವಾಗಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣವು ಉಚಿತ ಶಿಕ್ಷಣವು ಆಗಿದೆ. ಅಭಿವೃದ್ಧಿ ಹೊಂದಿದ ಕೆಲವು ದೇಶಗಳಲ್ಲಿ ಉಚಿತ ಶಿಕ್ಷಣವೆಂದರೆ ಮಕ್ಕಳಿಗೆ ಶುಲ್ಕದ ಪೂರ್ಣ ವಿನಾಯಿತಿ, ಉಚಿತ ಪಠ್ಯ ಹಾಗೂ ಕೆಲವು ಲೇಖನ ಪುಸ್ತಕ ಸಾಮಗ್ರಿಗಳು, ಮಧ್ಯಾಹ್ನದ ಬಿಸಿಯೂಟ ಮತ್ತು ಶಾಲಾ ವಾಹನ ವ್ಯವಸ್ಥೆ ಎಲ್ಲವೂ ಸೇರಿರುತ್ತದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ಎಲ್ಲ ಸೌಲಭ್ಯಗಳನ್ನು ಉಚಿತವಾಗಿ ಕೊಡಲು ಸಾಧ್ಯವಿಲ್ಲ. ಭಾರತದಲ್ಲಿ ಈ ಅಂತರ ಶಿಕ್ಷಣಕ್ಕೆ ಭೋದನ ಶುಲ್ಕ ಇಲ್ಲವಾದರೂ ಇಂತಹ ಅನುಕೂಲಗಳನ್ನು ಆಯ್ಕೆಯ ಆಧಾರದ ಮೇಲೆ ಕೆಲವು ಮಕ್ಕಳಿಗೆ ಒದಗಿಸಲಾಗುತ್ತದೆ. ಯುನಸ್ಕೊ ಸರ್ವರಿಗೂ ಶಿಕ್ಷಣ ತನ್ನ ಬದ್ಧತೆಯನ್ನು ಸೂಚಿಸಿದ ನಂತರ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪರಿಕಲ್ಪನೆಗಳಿಗೆ ಹೊಸ ತಿರುವು ಬಂದಿದೆ.

ನಮ್ಮ ದೇಶದ ಅತ್ಯಂತ ದುರದೃಷ್ಟ ಸಂಗತಿ ಎಂದರೆ ಬಡತನ. ನಮ್ಮ ಸಮಾಜದಲ್ಲಿ ಬಡತನದ ಅಂಚಿನಲ್ಲಿರುವ ಜನರನ್ನು ಮಾನವ ಜೀವನದ ಮುಖ್ಯವಾಹಿನಿಗೆ ತರಬೇಕಾಗಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಸೌಲಭ್ಯವಂಚಿತರು, ಮಕ್ಕಳು, ಹೆಣ್ಣುಮಕ್ಕಳು ಮತ್ತು ಮಹಿಳೆಯರು ಔಪಚಾರಿಕ ಶಿಕ್ಷಣದ ಅವಕಾಶ ಪಡೆಯುವ ಮಾರ್ಗದಲ್ಲಿ ಹಲವಾರು ಅಡೆತಡೆಗಳನ್ನು ಎದುರಿಸುತ್ತಿದ್ದಾರೆ. ಸೌಲಭ್ಯ ವಂಚಿತ ಹಾಗೂ ಸಮಾಜದಿಂದ ತುಳಿತಕ್ಕೊಳಪಟ್ಟ ಜನರಿಗೆ ಶಿಕ್ಷಣ ನೀಡುವುದಲ್ಲದೇ ಅವರ ಜೀವನದ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಸಹ ಶಿಕ್ಷಣ ಸಹಕಾರಿಯಾಗಿದೆ.

ನಗರದ ಜನತೆಗೆ ಹೋಲಿಸಿದರೆ ಗ್ರಾಮೀಣ ಜನರಿಗೆ ಶಿಕ್ಷಣದ ಅವಕಾಶಗಳು ತುಂಬಾ ಕಡಿಮೆ ಇವೆ. ಸುಲಭವಲ್ಲದ ಅವಕಾಶಗಳಿರುವ ಶಿಕ್ಷಣವು ಗ್ರಾಮೀಣ ಹಾಗೂ ನಗರಪ್ರದೇಶಗಳ ನಡುವಿನ ಶೈಕ್ಷಣಿಕ ಅಸಮಾತೋಲನವನ್ನು ತೊಡೆದು ಹಾಕುವುದಲ್ಲದೆ ಎಲ್ಲ ವರ್ಗದ ಜನರಿಗೆ ಸಮಾನ ಅವಕಾಶಗಳನ್ನು ಒದಗಿಸುವುದು ಶಿಕ್ಷಣವು ಅಭಿವೃದ್ಧಿಗೆ ಪ್ರಬಲವಾದ ಶೈಕ್ಷಣಿಕ ಕಾರ್ಯಕ್ರಮವನ್ನು ಜನಪ್ರಿಯಗೊಳಿಸುವುದು ಹಾಗೂ ರಾಷ್ಟ್ರೀಯ ಆರ್ಥಿಕತೆಯನ್ನು ಅಭಿವೃದ್ಧಿಗೊಳಿಸುವ ಸವಾಲನ್ನು ಎದುರಿಸುವುದಕ್ಕೆ ಸಹಕಾರಿಯಾಗಬಲ್ಲದು. ಜೀವನ ಪರ್ಯಾಂತ ಶಿಕ್ಷಣ ಮತ್ತು ಮುಂದುವರೆದ ಶಿಕ್ಷಣ ಒದಗಿಸುವಲ್ಲಿ ಜ್ಞಾನ ಯುಗದಲ್ಲಿ ಇತ್ತೀಚಿನ ಬೆಳವಣಿಗೆಗಳು ಕಾಲದೊಂದಿಗೆ ಹಂಚಿಕೊಳ್ಳಲು ಜನರು ಜೀವನಸಾಗಿಸಲು ಸಹಾಯಕವಾಗಿ ಅತೀ ಹೆಚ್ಚು ಜನರಿಗೆ ತಲುಪಬಲ್ಲದು.

ಮಹಿಳಾ ಸಾಕ್ಷರತೆಗೆ ಸಂಬಂಧಿಸಿದಂತೆ ಆಕಾಶವಾಣಿ, ದೂರದರ್ಶನಗಳು ಧನಾತ್ಮಕವಾಗಿ ಸ್ಪಂದಿಸುತ್ತಿದ್ದು, ರೇಡಿಯೋ ನಾಟಕಗಳ ಪ್ರಸಾರ ಶಿಕ್ಷಣ ಕಾರ್ಯಕ್ರಮಗಳು ಕುರಿತು ಕಿರುನಾಟಕ ಪ್ರಸಾರ, ದೂರದರ್ಶನಗಳಲ್ಲಿ ರಸಪ್ರಶ್ನೆ, ವಿದ್ಯುನ್ಮಾನಗಳ ಜೊತೆ ಶ್ರೀಮಂತವಾದ ಜನಪದ ಮಾಧ್ಯಮವನ್ನು ಸಾಕ್ಷರತೆ ಸಂದೇಶ ಸಾರಲು ಎಲ್ಲಾ ಕ್ಷೇತ್ರಗಳಲ್ಲೂ ಸಂಘಟಿಸಲು ಬಳಕೆಯಾಗುತ್ತಿರುವುದು ಕರ್ನಾಟಕದಲ್ಲಿ ಯಕ್ಷಗಾನ, ಬಯಲಾಟ, ಮಹಾರಾಷ್ಟ್ರದಲ್ಲಿ ಥಿಯೇಟರ್ ಆಪೇರ್, ಒರಿಸ್ಸಾದಲ್ಲಿ ಪಾಲ ಮತ್ತು ದಾಸ್ಕದಿಯಾ ಓದು ಬರಹ ಇನ್ನಿತರ ಹಲವಾರು ಶಿಕ್ಷಣ ಸ್ನೇಹಿ ಕಾರ್ಯಕ್ರಮಗಳನ್ನು ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಾಹಿನಿಗಳು ಪ್ರಸಾರ ಮಾಡುವುದನ್ನು ಕಾಣಬಹುದಾಗಿದೆ.

ಕಳೆದ ದಶಕದಲ್ಲಿ ಪ್ರಗತಿ ಸಾಧನೆಯಾಗಿದ್ದರೂ ಈಗಲೂ ಗಂಡುಮಕ್ಕಳಿಗಿಂತ ಕಡಿಮೆ ಸಂಖ್ಯೆಯಲ್ಲಿ ಬಾಲಕಿಯರು ಶಾಲೆಗೆ ದಾಖಲಾಗುತ್ತಿದ್ದಾರೆ. ಒಮ್ಮೆ ದಾಖಲಾದ ಮೇಲೆ ಈ ಮಕ್ಕಳು ಕಲಿಕೆಯಲ್ಲಿ ಬಾಲಕರಷ್ಟು ಸಫಲರು ಆಗುವುದಿಲ್ಲ. ಬಾಲಕರಿಗಿಂತ ಕಡಿಮೆ ಸಂಖ್ಯೆಯ ಬಾಲಕಿಯರು ಪ್ರಾಥಮಿಕ ಶಿಕ್ಷಣವನ್ನು ಮುಗಿಸುತ್ತಾರೆ. ಅನೇಕ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಯಲ್ಲಿ ಮುಂದುವರಿಯುವ ಗಮನಾರ್ಹ ಪ್ರಮಾಣದ ಲಿಂಗಧಾರಿತ ಅಂತರವು ಪ್ರೌಢಶಾಲೆ ಸಾಗುವ ಹಂತದಲ್ಲಿ ಇನ್ನು ಹೆಚ್ಚಾಗುತ್ತಿದೆ. ಶಿಕ್ಷಣವಿಲ್ಲದ ಅಥವಾ ಕಡಿಮೆ ಶಿಕ್ಷಣ ಪಡೆದ ಹುಡುಗಿಯರು ತಮ್ಮ ಜೀವನವನ್ನು ಸುಧಾರಿಸಿಕೊಳ್ಳುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಪರಿಣಾಮಕಾರಿಯಾಗಿ ಉನ್ನತ ಮಟ್ಟದ ಶಿಕ್ಷಣಪಡೆಯುವ ಹಕ್ಕನ್ನು ವಂಚಿಸಿದಾಗ ಇತರ ಎಲ್ಲಾ ಮಾನವ ಹಕ್ಕುಗಳ ವಂಚನೆಯು ಆಗಿ ಸಂಪೂರ್ಣ ಸಾಮರ್ಥ್ಯಗಳ ವಿಕಾಸದಲ್ಲಿ ಮುಂದಿನ ತಲೆಮಾರು ಅವಕಾಶಗಳನ್ನು ಅದರಲ್ಲಿಯೂ ಹೆಣ್ಣುಮಕ್ಕಳ ಅವಕಾಸವನ್ನು ಕುಗ್ಗಿಸುತ್ತದೆ.

ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ರಾಷ್ಟ್ರಗಳು ಶಿಕ್ಷಣ ಪಡೆದಂತೆ ಯಾವುದೇ ಸಮಾಜ ಅತ್ಯುತಮ ಹೂಡಿಕೆಯೆಂದರೆ ಹೆಣ್ಣುಮಕ್ಕಳ ಶಿಕ್ಷಣವೇ ಮಾತ್ರ. ಸುಶಿಕ್ಷಿತ ಮಹಿಳೆಯರು ತಾನು ಉತ್ತಮ ತಾಯಿ, ಕೆಲಸಗಾರ್ತಿ ಮತ್ತು ನಾಗರಿಕಳಾಗಲು ಅಗತ್ಯವಾದ ಎಲ್ಲಾ ಕೌಶಲ್ಯಗಳು, ಮಾಹಿತಿ ಮತ್ತು ಆತ್ಮವಿಶ್ವಾಸವನ್ನು ಹೊಂದಿರುತ್ತಾಳೆ. ಶಾಲೆಗಳು ಹೆಣ್ಣುಮಕ್ಕಳಿಗಾಗಿ ತಮ್ಮ ಬಾಗಿಲನ್ನು ತೆರೆದು ಸಮಾಜದ ಲಾಭಗಳನ್ನು ಇಮ್ಮಡಿಯಾಗಿಸುತ್ತದೆ. ಏಕೆಂದರೆ ವಿವಾಹವಾಗಿ ಮಕ್ಕಳಿಗೆ ಜನ್ಮ ನೀಡುವ ಸಂದರ್ಭದಲ್ಲಿ ಆಗಬಹುದಾದ ತೊಡಕು ಇನ್ನಿತರೆ ವಿಷಯ ವಸ್ತುಗಳು ಶಿಕ್ಷಿತ ಮಹಿಳೆಗೆ ಸಾಧ್ಯವಾಗುತ್ತದೆ. ಹಿಂದಿನ ವಿಶ್ವ ಬ್ಯಾಂಕ್‌ನ ಖ್ಯಾತ ಅರ್ಥಶಾಸ್ತ್ರಜ್ಞಾನ ಲಾರೆನ್ಸ್ ಸಮ್ಮರ್ಸ್ ಅವರು ಹೆಣ್ಣುಮಕ್ಕಳ ಶಿಕ್ಷಣದ ಲಾಭಗಳನ್ನು ಯಾರಾದರೂ ಎಣಿಸುವುದಾದರೆ ಅಭಿವೃದ್ಧಿ ಪರ ವಿಶ್ವದಲ್ಲಿ ಹೂಡಿಕೆಗಿಂತ ಹೆಚ್ಚು ದರದ ಪ್ರತಿಫಲ ಎಂದಿದ್ದಾರೆ.

ಮಕ್ಕಳ ಶಾಲಾ ಭಾಗವಹಿಸುವಿಕೆಯ ಹೆಚ್ಚಳ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧನೆಯ ದೃಷ್ಟಿಯಿಂದ ರಾಷ್ಟ್ರದ ವಿವಿಧ ರಾಜ್ಯಗಳಂತೆ ಕರ್ನಾಟಕ ರಾಜ್ಯವೂ ಕೂಡ ಶೈಕ್ಷಣಿಕ ಅಭಿವೃದ್ಧಿ

ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದೆ. ೧೯೯೫ರ ಜನವರಿ ೨೬ರಂದು ಪ್ರಥಮವಾಗಿ ಕೋಲಾರ, ಮಂಡ್ಯ, ರಾಯಚೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಔಪಚಾರಿಕವಾಗಿ ಡಿ.ಪಿ.ಇ.ಪಿ ಯೋಜನೆಯನ್ನು ಜಾರಿಗೊಳಿಸಲಾಯಿತು. ಅನಂತರ ೧೯೯೬-೯೭ರಲ್ಲಿ ಬೆಂಗಳೂರು, ಬೀದರ್, ಬಳ್ಳಾರಿ, ಧಾರವಾಡ, ಗುಲ್ಬರ್ಗಾ ಮತ್ತು ಮೈಸೂರು ಜಿಲ್ಲೆಗಳನ್ನೊಳಗೊಂಡಂತೆ ಒಟ್ಟು ೧೬ ಜಿಲ್ಲೆಗಳಲ್ಲಿ ಈ ಯೋಜನೆ ಚಾಲ್ತಿಯಲ್ಲಿದೆ. ಕಡಿಮೆ ಭಾಗವಹಿಸುವಿಕೆಯ ಆಧಾರದ ಮೇಲೆಯೇ ಡಿ.ಪಿ.ಇ.ಪಿ ಯೋಜನೆಗಾಗಿ ಈ ಜಿಲ್ಲೆಗಳನ್ನು ಆಯ್ಕೆ ಮಾಡಿ ಯೋಜನೆಯ ಅಂತ್ಯದ ವೇಳೆಗೆ ವಿವಿಧ ಸಾಮಾಜಿಕ ವರ್ಗಗಳ ನಡುವೆ ಮತ್ತು ಲಿಂಗ ಸಂಬಂಧಿಯಾಗಿ ಇರುವ ಶಿಕ್ಷಣದ ಅಂತರಗಳನ್ನು ಶೇಕಡ ೩ಕ್ಕಿಂತ ಕಡಿಮೆಗೊಳಿಸುವಂಹ ಪ್ರಮುಖ ಗುರಿಯನ್ನು ಹೊಂದಲಾಗಿತ್ತು. ಆದರೆ ಯೋಜನೆಯ ಅನುಷ್ಠಾನದಿಂದಾಗಿ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರೊಂದಿಗೆ ಮಧ್ಯದಲ್ಲಿಯೇ ಶಾಲೆ ಬಿಡದಂತೆ ನೋಡಿಕೊಳ್ಳಲು ಸಾಮಾಜಿಕ ಮತ್ತು ಆರ್ಥಿಕ ಸ್ವಭಾವದ ತೊಡಕಗಳು ಅಡ್ಡಿಯಾಗಿವೆ.

ಸಾಮಾಜಿಕ ವರ್ಗ ಮತ್ತು ಲಿಂಗಸಂಬಂಧಿ ಅಂತರಗಳನ್ನು ಮಿತಿಗೊಳಿಸುವ ಡಿ.ಪಿ.ಇ.ಪಿ. ಯೋಜನೆಯ ಗುರಿ ಮತ್ತು ಉದ್ದೇಶಗಳು ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಗೊತ್ತಾಗದಿರುವ ಸ್ಥಿತಿ ಇದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಹಿನ್ನಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಎಂಬುದು ಬಹುತೇಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ತಿಳಿದಿಲ್ಲ. ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿಯೂ ಕೂಡ ಮರೆಮಾಚಿದ ಸಾಮಾಜಿಕ ತಾರತಮ್ಯವು ಕಂಡುಬರುತ್ತದೆ. ಅದೇನೆಂದರೆ ಈ ಯೋಜನೆಯ ಅನುಷ್ಟಾನ ಸಂದರ್ಭದಲ್ಲಿ ಕೀಳರಿಮೆಯಿಂದ ಮುಂದೆ ಬರಲಾಗದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಮಕ್ಕಳನ್ನು ಗುರುತಿಸುವುದೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ಯೋಜನೆಯ ಪ್ರಯೋಜನಪರಿಶಿಷ್ಟ ಜಾತಿಯವರಿಗಿಂತ ಹೆಚ್ಚಾಗಿ ಇತರ ಜಾತಿ ಮಕ್ಕಳಿಗೆ ಲಭ್ಯವಾಗುತ್ತವೆ. ಈ ದೃಷ್ಟಿಯಿಂದ ಪರಿಶಿಷ್ಟ ಜಾತಿ ಮಕ್ಕಳನ್ನು ಜಾಗೃತಗೊಳಿಸುವ ಅಗತ್ಯವಿರುವುದನ್ನು ನಮ್ಮ ಅಧ್ಯಯನ ಗುರುತಿಸುತ್ತದೆ.

ಲಿಂಗಾಧಾರಿತ ಮತ್ತು ಸಾಮಾಜಿಕ ಶೈಕ್ಷಣಿಕ ಅಸಮಾನತೆಯಲ್ಲಿರುವ ಅಂತರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ರೂಪಿಸಲಾಯಿತು. ಆದರೆ ಈ ಕಾರ್ಯಕ್ರಮವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ರೂಪಿತವಾದ ಕಾರ್ಯಕ್ರಮವಾದ್ದರಿಂದ ಸ್ಥಳೀಯ ಮಟ್ಟದಲ್ಲಿ ಮಕ್ಕಳ ಶಾಲಾ ಭಾಗಹಿಸುವಿಕೆಗೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಇರುವ ಸವಾಲುಗಳನ್ನು ಅರ್ಥ ಮಾಡಿಕೊಳ್ಳದಿರುವುದೇ ಡಿ.ಪಿ.ಇ.ಪಿ. ಕಾರ್ಯಕ್ರಮದ ಪ್ರಮುಖ ದೋಷ. ಅಷ್ಟೇ ಅಲ್ಲದೆ ಐರೋಪ್ಯ ರಾಷ್ಟ್ರಗಳು ನೀಡಿದ ಸಾಲಕ್ಕೆ ಮರುಹೊಂದಾಣಿಕೆಯನ್ನು ಸಲ್ಲಿಸುವ ರೀತಿಯಲ್ಲಿ ಈ

ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಈ ಕುರಿತಾಗಿ ನಮ್ಮಲ್ಲಿ ಸಾಕಷ್ಟು ಅಧ್ಯಯನಗಳು ಕಾಣಸಿಗುತ್ತವೆ. ಆದ್ದರಿಂದ ಈ ಕಾರ್ಯಕ್ರಮವನ್ನು ಒಂದು ಜನಾಂದೋಲನವಾಗಿ ರೂಪಿಸಬೇಕಾಗಿದೆ.

ಹೆಣ್ಣುಮಕ್ಕಳಿಗೆ ಶಿಕ್ಷಣ ಒದಗಿಸುವುದು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಮೂಲಕವಾಗಿ ಮಹಿಳೆಯರ ಸಬಲೀಕರಣ ಸಾಧಿಸುವುದು ಈ ಲೋಕಜಂಬಿಷ್ ಕಾರ್ಯಕ್ರಮದ ಮೂಲ ಆಶಯವಾಗಿರುತ್ತದೆ. ಇದರಿಂದ ಶಿಕ್ಷಣದ ಪರಿಸರಕ್ಕೆ ಅನುಕೂಲವಿದೆ. ಈ ರೀತಿಯಲ್ಲಿ ಲೋಕಜಂಬಿಷ್ ಕಾರ್ಯಕ್ರಮ ಕೂಡ ಹೆಣ್ಣುಮಕ್ಕಳ ಶಾಲಾ ಶಿಕ್ಷಣವನ್ನು ವಿಸ್ತೃತಪಡಿಸಲು ಜಾರಿಗೆ ಬಂದಿರುತ್ತದೆ.

ಆದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗದ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಪರೋಕ್ಷವಾಗಿ ಸಾಮಾಜಿಕ ತಾರತಮ್ಯ ಕಂಡುಬರುತ್ತದೆ. ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿ, ಹೆಣ್ಣುಮಕ್ಕಳಿಗೆ ನಿಗದಿತ ಪ್ರಮಾಣದ ಮೀಸಲಾತಿ ಇಲ್ಲದಿರುವುದರಿಂದ ಸಾಮಾಜಿಕವಾಗಿ ಮೇಲ್ಜಾತಿಯ ಹೆಣ್ಣುಮಕ್ಕಳೇ ಇದರ ಪ್ರಯೋಜನ ಪಡೆದುಕೊಳ್ಳುವುದು ಸಾಮಾನ್ಯವಾಗಿದೆ. ವಾಸ್ತವವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳು ಈ ಯೋಜನೆಯ ಉದ್ದೇಶವು ಸಫಲವಾಗುವುದಿಲ್ಲ. ಹಾಗಾಗಿ ಲೋಕಜಂಬಿಷ್ ಕಾರ್ಯಕ್ರಮದ ಅನಿಷ್ಠಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹೆಣ್ಣುಮಕ್ಕಳಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿದರೆ ಈ ಯೋಜನೆಯ ಉದ್ದೇಶ ಸಫಲವಾಗುತ್ತದೆ.

ಕೊನೆಟಿಪ್ಪಣಿಗಳು

೧. ಬಿಪಿನ್ ಚಂದ್ರ, ೨೦೧೨, ಆಧುನಿಕ ಭಾರತದ ಇತಿಹಾಸ, (ಕನ್ನಡಕ್ಕೆ) ಎಚ್.ಎಸ್. ಗೋಪಾಲರಾವ್, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ಪು. ೧೬೯

೨. ಮುರಳಿಧರ ಜಗತಾಪ, ಸಮಾಜ ಸುಧಾರಕ ಮಹಾತ್ಮ ಫುಲೆ, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೨೦೧೫, ಪು. ೭-೯.

೩. ನ್ಯಾಷನಲ್ ಪಾಲಿಸಿ ಫಾರ್ ಚಿಲ್ಡ್ರನ್ ೨೨, ೧೯೭೪, ಗೌರ್ನಮೆಂಟ್ ಆಫ್ ಇಂಡಿಯ, ಡಿಪಾರ್ಟ್‌ಮೆಂಟ್ ಆಫ್ ಸೋಶಿಯಲ್ ವೆಲ್‌ಫೇರ್ ವಾ.ನಂ. ೧, ೧೪೧೭೪ ಸಿಡಿಡಿ

೪. ಸಪೋರ್ಟ ಸರ್ವೆ ಆಫ್ ಯುನಿಟ್, ಸೆವ್ ದ ಚಿಲ್ಡ್ರನ್ ನಂ. ೧೩೬, ರಿಚ್‌ಮಂಡ್ ರೋಡ್, ಬೆಂಗಳೂರು, ಪು. ೧೮

೫. ಅಮ್ಮಾನ ಮದನ್, ಫಸ್ಟ್ ಕ್ವಿಟ್ ಆನ್ ಎಜ್ಯುಕೇಷನ್ ಇಪಿಡಬ್ಲ್ಯೂ ಜುಲೈ ೨೦, ೨೦೦೫ ಹಿತಕಾರಿ ಬುಕ್‌ಹೌಸ್, ಮುಂಬಯಿ, ಪು. ೨೯

೬. ಜಯದೇವ ಜಿ.ಎಸ್., ೨೦೦೫, ಜಾಗತೀಕರಣ ಶಿಕ್ಷಣ ಮತ್ತು ಸಮಾಜ, ಅಭಿರುಚಿ ಪ್ರಕಾಶನ, ಮೈಸೂರು, ಪು. ೬೬

೭. ಯೋಜನಾ ಅಭಿವೃದ್ಧಿ ಮಾಸಪತ್ರಿಕೆ, ಸರ್ವರಿಗೂ ಶಿಕ್ಷಣ ವಿಶೇಷ ಸಂಚಿಕೆ, ಸೆಪ್ಟೆಂಬರ್ ೨೦೧೩, ಬೆಂಗಳೂರು, ಪು. ೧೨

೮. ೨೦೧೧-೧೨ ವಾರ್ಷಿಕ ವರದಿ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು, ಪು. ೨೬

೯. ಕೃಷ್ಣಯ್ಯ ಗೌಡ, ೨೦೧೩, ಭಾರತದ ಆರ್ಥಿಕತೆ, ಸಪ್ನ ಬುಕ್‌ಹೌಸ್, ಬೆಂಗಳೂರು,

೧೦. ಲಕ್ಷ್ಮಣ್ ತೆಲಗಾವಿ, ೨೦೦೨, ಕರ್ನಾಟಕದ ದಲಿತ ಚಳುವಳಿ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ-೧

೧೧. ರಾಜ ಬಿ., ವರುಣ, ೨೦೧೪, ಮಹಿಳೆ ಮತ್ತು ಅಭಿವೃದ್ಧಿ, ಧಾರವಾಡ, ಪು.೩೪-೩೬

೧೨. ಸಮಕ್ಷಮ ಗುಣಾತ್ಮಕ ಶಾಲಾ ಶಿಕ್ಷಣದತ್ತ ಸಮುದಾಯ, ಆಯುಕ್ತರ ಕಛೇರಿ, ೨೦೧೩, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಪು. ೧೭

೧೩. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ೧೯೯೧, ಪುಟ ೩೬೩

೧೪. ಅಂತಾರ್ಜಲ ಸ್ಕೂಲ್ ಎಜ್ಯುಕೇಷನ್. ಕೆ.ಆರ್.ಎನ್ಐಸಿ.ಇನ್. ಎಸ್‌ಡಿಎಂಸಿ, ದಿನಾಂಕ ೨೫.೩.೧೫, ಸುತ್ತೋಲೆ, ಪು. ೬೬

೧೫. ಮಲ್ಲಿಕಾರ್ಜುನ ಕಿಚಡಿ, ೨೦೦೨, ಬಳ್ಳಾರಿ ಜಿಲ್ಲೆಯ ಬೇಡರ ಶಿಕ್ಷಣ ಸ್ಥಿತಿಗತಿ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

❑❑❑

ಅಧ್ಯಾಯ ಐದು

ಕ್ಷೇತ್ರಕಾರ್ಯದ ಅಂಕಿ. ಅಂಶಗಳ ಮಾಹಿತಿ ವಿಶ್ಲೇಷಣೆ

ಅಧ್ಯಾಯ ಐದು


ಮಾಹಿತಿ ಅಂಕಿ ಅಂಶಗಳ ವಿಶ್ಲೇಷಣೆ

ಐದನೇ ಅಧ್ಯಾಯದಲ್ಲಿ ಮಾಹಿತಿ ಅಂಕಿ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ ಎಂಬ ಅಧ್ಯಾಯನವನ್ನು ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಗಳ ವ್ಯಾಪ್ತಿಯ ಸಾತನೂರು, ನಾಗರಸನೋಟಿ, ದೊಡ್ಡ ಆಲಹಳ್ಳಿ ಮತ್ತು ನಾಯಕನಹಳ್ಳಿ ವ್ಯಾಪ್ತಿಯ ಈ ನಾಲ್ಕು ಹಳ್ಳಿಗಳಿಂದ ನಾಲ್ಕು ಶಾಲೆಗಳ ೩೦೦ ವಿದ್ಯಾರ್ಥಿನಿಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆಯೇ ಈ ವಿದ್ಯಾರ್ಥಿನಿಯರ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಿ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

ಕೋಷ್ಟಕ ೫.೧. ಸಮುದಾಯಗಳು

ಸಮುದಾಯ	**ಸಾತನೂರು ಪಂಚಾಯಿತಿ**	**ದೊಡ್ಡ ಆಲಹಳ್ಳಿ ಪಂಚಾಯಿತಿ**	**ಒಟ್ಟು**
ಪರಿಶಿಷ್ಟ ಜಾತಿ	೨೫	೨೫	೫೦ (೧೬.೬೭)
ಪರಿಶಿಷ್ಟ ಪಂಗಡ	೨೫	೨೫	೫೦ (೧೬.೬೭)
ಹಿಂದುಳಿದ ವರ್ಗ	೭೫	೭೫	೧೫೦ (೫೦)
ಅಲ್ಪಸಂಖ್ಯಾತರು	೨೫	೨೫	೫೦ (೧೬.೬೭)
ಒಟ್ಟು ಕುಟುಂಬಗಳು	೧೫೦	೧೫೦	೩೦೦

ಲಂಬಚಿತ್ರ ೫.೧. ಸಮುದಾಯಗಳ ಪ್ರಮಾಣ




ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ ನೋಡುವ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸಾತನೂರು ಪಂಚಾಯಿತಿಯಿಂದ ಸಾತನೂರು ಮತ್ತು ನಾಗರಸನಕೋಟೆ ಹಾಗೂ ದೊಡ್ಡ ಆಲಹಳ್ಳಿ ಪಂಚಾಯಿತಿಯಿಂದ ದೊಡ್ಡ ಆಲಹಳ್ಳಿ ಮತ್ತು ನಾಯಕನಹಳ್ಳಿ ಒಟ್ಟು ನಾಲ್ಕು ಹಳ್ಳಿಗಳನ್ನು ಅಧ್ಯಯನದ ಸಮೀಕ್ಷೆಗೊಳಪಡಿಸಲಾಗಿದೆ. ಸಾತನೂರು ಪಂಚಾಯಿತಿಯಿಂದ ಪರಿಶಿಷ್ಟ ಜಾತಿಯ ೨೫ ಕುಟುಂಬಗಳು, ಪರಿಶಿಷ್ಟ ಪಂಗಡದ ೨೫ ಕುಟುಂಬಗಳು, ಅಲ್ಪಸಂಖ್ಯಾತ ೨೫ ಕುಟುಂಬಗಳು ಆಯ್ಕೆ ಮಾಡಿಕೊಳ್ಳಲಾಗಿದೆ ಒಕ್ಕಲಿಗ, ಲಿಂಗಾಯತ ಮತ್ತು ಇತರೆ ಸಮುದಾಯಗಳು ಸೇರಿದಂತೆ ಒಬಿಸಿ ೭೫ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸಾತನೂರು ಗ್ರಾಮಪಂಚಾಯಿತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಒಟ್ಟು ೭೫ ಕುಟುಂಬಗಳನ್ನು ಮತ್ತು ಒಬಿಸಿ ೭೫ ಕುಟುಂಬಗಳು ಒಟ್ಟಾರೆ ೧೫೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದೇ ಮಾದರಿಯಲ್ಲಿ ದೊಡ್ಡ ಅಲಹಳ್ಳಿ ಗ್ರಾಮಪಂಚಾಯಿತಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರ ಒಟ್ಟು ೭೫ ಕುಟುಂಬಗಳು ಮತ್ತು ಒಬಿಸಿ ೭೫ ಕುಟುಂಬಗಳು ಸೇರಿದಂತೆ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯಿಂದ ೧೫೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಎರಡು ಗ್ರಾಮಪಂಚಾಯಿತಿಗಳಿಂದ ಪರಿಶಿಷ್ಟ ಜಾತಿಯ ೫೦ ಕುಟುಂಬಗಳು, ಪರಿಶಿಷ್ಟ ಪಂಗಡದ ೫೦ ಕುಟುಂಬಗಳು, ಅಲ್ಪಸಂಖ್ಯಾತರ ೫೦ ಕುಟುಂಬಗಳು ಆಯ್ಕೆ ಮಾಡಿಕೊಳ್ಳಲಾಗಿದೆ ಒಕ್ಕಲಿಗ, ಲಿಂಗಾಯಿತ ಮತ್ತು ಇತರೆ ಸಮುದಾಯಗಳು ಸೇರಿದಂತೆ ಒಬಿಸಿ ೧೫೦ ಕುಟುಂಬಗಳು ಸೇರಿದಂತೆ ಒಟ್ಟಾರೆಯಾಗಿ ೩೦೦ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಿ ಮಾಹಿತಿ ಸಂಗ್ರಹಿಸಲಾಗಿದೆ.




ಕೋಷ್ಟಕ ೫.೨. ಕುಟುಂಬದ ಮಾದರಿ

ಸಮುದಾಯ	ಸಾತನೂರು ಪಂಚಾಯಿತಿ			ದೊಡ್ಡ ಆಲಹಳ್ಳಿ ಪಂಚಾಯಿತಿ			ಒಟ್ಟು	
	ಅವಿಭಕ್ತ	ವಿಭಕ್ತ	ಒಟ್ಟು	ಅವಿಭಕ್ತ	ವಿಭಕ್ತ	ಒಟ್ಟು	ಅವಿಭಕ್ತ	ವಿಭಕ್ತ
ಪರಿಶಿಷ್ಟ ಜಾತಿ	೧೧ (೭.೩೩)	೧೪ (೯.೩೩)	೨೫ (೧೬.೬೭)	೧೨ (೮)	೧೩ (೮.೬೭)	೨೫ (೧೬.೬೭)	೨೩ (೪೬)	೨೭ (೫೪)
ಪರಿಶಿಷ್ಟ ಪಂಗಡ	೧೦ (೬.೬೭)	೧೫ (೧೦)	೨೫ (೧೬.೬೭)	೫ (೩.೩೩)	೨೦ (೧೩.೩೩)	೨೫ (೧೬.೬೭)	೧೫ (೩೦)	೩೫ (೭೦)
ಹಿಂದುಳಿದ ವರ್ಗ	೩೩ (೨೨)	೪೨ (೨೮)	೭೫ (೫೦)	೪೩ (೨೮.೬೭)	೩೨ (೨೧.೩೩)	೭೫ (೫೦)	೭೬ (೫೦.೬೭)	೭೪ (೪೯.೩೩)
ಅಲ್ಪ ಸಂಖ್ಯಾತರು	೯ (೬)	೧೬ (೧೦.೬೭)	೨೫ (೧೬.೬೭)	೧೧ (೭.೩೩)	೧೪ (೯.೩೩)	೨೫ (೧೬.೬೭)	೨೦ (೪೦)	೩೦ (೬೦)
	೬೩ (೪೨)	೮೭ (೫೮)	೧೫೦ (೫೦)	೭೧ (೪೭.೦೩)	೭೯ (೫೨.೬೭)	೧೫೦ (೫೦)	೧೩೪ (೪೪.೬೭)	೧೬೬ (೫೫.೩೩)

ಲಂಬಚಿತ್ರ ೫.೨. ಕುಟುಂಬ ಮಾದರಿ ಪ್ರಮಾಣ



ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬಗಳು ಪ್ರಾಥಮಿಕ ಘಟಕಗಳಾಗಿವೆ. ಕುಟುಂಬಗಳನ್ನು ಪ್ರಧಾನವಾಗಿ ಅವಿಭಕ್ತ ಹಾಗೂ ವಿಭಕ್ತ ಕುಟುಂಬಗಳೆಂದು ಪರಿಗಣಿಸಬಹುದಾಗಿದೆ. ಅವಿಭಕ್ತ ಕುಟುಂಬ ಗ್ರಾಮೀಣ ಸಮಾಜದ ಮುಖ್ಯ ಲಕ್ಷಣವಾಗಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ೧೬೬ ಕುಟುಂಬಗಳು ಅಂದರೆ ಶೇ. ೫೫.೩೩ರಷ್ಟು ವಿಭಕ್ತ ಕುಟುಂಬಗಳು ಹಾಗೂ ೧೩೪ ಕುಟುಂಬಗಳು ಶೇ. ೪೪.೬೭ರಷ್ಟು ಅವಿಭಕ್ತ ಕುಟುಂಬಗಳಿವೆ. ಪರಿಶಿಷ್ಟ ಜಾತಿಯ ಶೇ. ೪೬ರಷ್ಟು ಕುಟುಂಬಗಳು ಅವಿಭಕ್ತ ಕುಟುಂಬಗಳಿವೆ. ಪರಿಶಿಷ್ಟ ಪಂಗಡದ ಶೇ. ೩೦ರಷ್ಟು ಕುಟುಂಬಗಳು ಅವಿಭಕ್ತ ಕುಟುಂಬಗಳಿವೆ. ಅಲ್ಪಸಂಖ್ಯಾತ ಶೇ. ೪೦ರಷ್ಟು ಕುಟುಂಬಗಳಿದ್ದು,





ಹಿಂದುಳಿದ ವರ್ಗ(ಒಬಿಸಿ)ಗಳ ಶೇ. ೫೦.೬೭ರಷ್ಟು ಕುಟುಂಬಗಳು ವಿಭಕ್ತ ಕುಟುಂಬಗಳಿವೆ. ಎಲ್ಲಾ ಸಮುದಾಯಗಳು ವಿಭಕ್ತ ಕುಟುಂಬಗಳತ್ತ ಒಲವು ತೋರುತ್ತಿವೆ. ಆದರೂ ಕೃಷಿ ಅವಲಂಬಿತ ಒಬಿಸಿ ಕುಟುಂಬಗಳು ಅವಿಭಕ್ತ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾತನೂರು ಗ್ರಾಮ ಪಂಚಾಯಿತಿಯಲ್ಲಿ ಶೇ. ೪೨ರಷ್ಟು ಅವಿಭಕ್ತ ಕುಟುಂಬಗಳಿದ್ದಾರೆ. ದೊಡ್ಡ ಆಲಹಳ್ಳಿಯಲ್ಲಿ ಶೇ. ೪೭.೦೩ರಷ್ಟು ಅವಿಭಕ್ತ ಕುಟುಂಬಗಳಿವೆ. ಆದರೆ ಸಾತನೂರು ಗ್ರಾಮಪಂಚಾಯಿತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವಿಭಕ್ತ ಕುಟುಂಬಗಳಿವೆ.

ಕೋಷ್ಟಕ ೫.೩. ವಸತಿ ಒಡೆತನ

ಸಮುದಾಯ	ಸಾತನೂರು ಪಂಚಾಯಿತಿ		ದೊಡ್ಡ ಆಲಹಳ್ಳಿ ಪಂಚಾಯಿತಿ		ಒಟ್ಟು	
	ಸ್ವಂತ	ಬಾಡಿಗೆ	ಸ್ವಂತ	ಬಾಡಿಗೆ	ಸ್ವಂತ	ಬಾಡಿಗೆ
ಪರಿಶಿಷ್ಟ ಜಾತಿ	೨೧ (೧೪)	೪ (೨.೬೭)	೨೦ (೧೩.೩೩)	೫ (೩.೩೩)	೪೧ (೮೨)	೯ (೧೮)
ಪರಿಶಿಷ್ಟ ಪಂಗಡ	೨೩ (೧೫.೩೩)	೨ (೧.೩೩)	೨೪ (೧೪)	೧ (೦.೬೭)	೪೭ (೯೪)	೩ (೬)
ಹಿಂದುಳಿದ ವರ್ಗ	೭೧ (೪೭.೩೩)	೪ (೨.೬೭)	೭೦ (೪೬.೬೭)	೫ (೩.೩೩)	೧೪೧ (೯೪)	೯ (೬)
ಅಲ್ಪ ಸಂಖ್ಯಾತರು	೨೫ (೧೬.೬೭)	೦ (೦)	೨೨ (೧೪.೬೭)	೩ (೨)	೪೭ (೯೪)	೩ (೬)
	೧೪೦ (೯೩.೩೩)	**೧೦** (೬.೬೭)	**೧೩೬** (೧೯.೬೭)	**೧೪** (೯.೩೩)	**೨೭೬** (೯೨)	**೨೪** (೮)

ಲಂಬಚಿತ್ರ ೫.೩. ವಸತಿ ಒಡೆತನ ಪ್ರಮಾಣ





ವಸತಿ ಪ್ರತಿ ವ್ಯಕ್ತಿಗೂ ಅಗತ್ಯವಾಗಿ ಬೇಕಾದ ಮೂಲಭೂತ ಸೌಲಭ್ಯವಾಗಿದೆ. ನಿಸರ್ಗ ನಿಯಮದಂತೆ ಬದುಕುತ್ತಿರುವ ಪಕ್ಷಿಗಳು ತಮ್ಮದೇ ಆದ ಗೂಡು ಕಟ್ಟಿಕೊಳ್ಳುತ್ತವೆ. ಆದರೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಾ ವ್ಯಕ್ತಿಗಳು ತಮ್ಮ ಸ್ವಂತ ಮನೆ ಹೊಂದುವಂತಹ ಆರ್ಥಿಕ ಸ್ಥಿತಿ ಹೊಂದಿಲ್ಲ. ಶ್ರೀಮಂತರು ತಮಗೆ ಬೇಕಾದ ರೀತಿಯಲ್ಲಿ ಅಂದದ ಚೆಂದದ ಮನೆಗಳನ್ನು ಕಟ್ಟಿಕೊಂಡರೆ ಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸರ್ಕಾರವೇ ಮನೆ ನಿರ್ಮಿಸಿ ಕೊಡುತ್ತಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಅಂದರೆ ಶೇ. ೯೨ರಷ್ಟು ಕುಟುಂಬಗಳು ಸ್ವಂತ ಮನೆಗಳನ್ನು ಹೊಂದಿವೆ. ಉಳಿದ ಶೇ. ೮ರಷ್ಟು ಕುಟುಂಬಗಳು ಮಾತ್ರ ಬಾಡಿಗೆ ಮನೆಯಲ್ಲಿ ನೆಲೆಸಿವೆ. ಪರಿಶಿಷ್ಟ ಪಂಗಡದ ಶೇ. ೯೪ರಷ್ಟು ಕುಟುಂಬಗಳು ಸ್ವಂತ ಮನೆ ಹೊಂದಿರುವುದು ಕಾಣಬಹುದಾಗಿದೆ. ಸಾತನೂರು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿನ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ವಂತ ಮನೆಗಳನ್ನು ಹೊಂದಿವೆ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿನ ಕುಟುಂಬಗಳು ಸಾತನೂರು ಗ್ರಾಮಪಂಚಾಯಿತಿಗಿಂತ ಕಡಿಮೆ ಸಂಖ್ಯೆಯ ಸ್ವಂತ ಮನೆಗಳನ್ನು ಹೊಂದಿವೆ.

ಕೋಷ್ಟಕ ೫.೪. ಪಂಚಾಯಿತಿಯ ಒಟ್ಟು ಶಿಕ್ಷಣ

ಗ್ರಾಮಪಂಚಾಯಿತಿ	**ಪುರುಷ**	**ಮಹಿಳೆ**	**ಒಟ್ಟು**
ಸಾತನೂರು	೮೧.೪೪	೬೭.೯೪	೭೪.೮೪
ದೊಡ್ಡ ಆಲಹಳ್ಳಿ	೬೫.೦೮	೪೯.೧೮	೫೭.೨೬
ಒಟ್ಟು	**೬೩.೩೧**	**೫೭.೫೮**	**೬೬.೪೪**

ಸಾತನೂರು ಮತ್ತು ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಸಾತನೂರು, ನಾಗರಸಕೋಟೆ, ಸೊರೆಕಾಯಿದೊಡ್ಡಿ, ಚಿಕ್ಕ ಆಲಹಳ್ಳಿ, ದೇವಿರಮ್ಮನದೊಡ್ಡಿ, ಕಾಳೇಗೌಡನದೊಡ್ಡಿ, ಹೊಸದೊಡ್ಡಿ ಒಟ್ಟು ಏಳು ಹಳ್ಳಿಗಳು ಬರುತ್ತವೆ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ದೊಡ್ಡ ಆಲಹಳ್ಳಿ, ಅಂಬೇಡ್ಕರ್ ನಗರ, ನಾಯಕನಹಳ್ಳಿ, ಯಡಮಾರನಹಳ್ಳಿ, ಮಕಳಾಂದ, ವೀರೇಗೌಡನದೊಡ್ಡಿ, ದೇವೇಗೌಡನದೊಡ್ಡಿ ಒಟ್ಟು ಏಳು ಹಳ್ಳಿಗಳು ಬರುತ್ತವೆ. ಒಟ್ಟಾರೆಯಾಗಿ ಎರಡು ಗ್ರಾಮಪಂಚಾಯಿತಿಗಳ ವ್ಯಾಪ್ತಿಗೆ ಒಳಪಟ್ಟ ಹಳ್ಳಿಗಳ ಜನರ ಶಿಕ್ಷಣವನ್ನು ಗಮನಿಸಿದಾಗ ಮಹಿಳಾ ಶಿಕ್ಷಣ ಅತ್ಯಂತ ನಿಕೃಷ್ಟವಾಗಿರುವುದು ಕಾಣಬಹುದು. ಪಂಚಾಯಿಗಳ ವ್ಯಾಪ್ತಿಗೆ ಒಳಪಡುವ ಹಳ್ಳಿಗಳ ಜನರ ಶಿಕ್ಷಣ ಪ್ರಮಾಣ ಶೇ. ೬೬.೪೪ರಷ್ಟಿದೆ. ಲಿಂಗವಾರು ಗಮನಿಸಿದಾಗ ಪುರುಷರ ಶಿಕ್ಷಣ ಪ್ರಮಾಣ ಶೇ. ೬೩.೩೧ರಷ್ಟಿದ್ದರೆ, ಮಹಿಳಾ ಶಿಕ್ಷಣ ಪ್ರಮಾಣ ಶೇ. ೫೭.೫೭ರಷ್ಟಿದೆ. ಅಧ್ಯಯನಕ್ಕೆ ಒಳಪಟ್ಟ ಎರಡು ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಹಳ್ಳಿಗಳ ಶಿಕ್ಷಣ ಪ್ರಮಾಣ ಶೇ.

೫೭.೫೮ರಷ್ಟಿದೆ. ರಾಜ್ಯದ ಗ್ರಾಮೀಣ ಮಹಿಳಾ ಶಿಕ್ಷಣ ಶೇ. ೫೯.೬೦ರಷ್ಟು ಹಾಗೂ ರಾಮನಗರ ಜಿಲ್ಲೆಯ ಗ್ರಾಮೀಣ ಶಿಕ್ಷಣ ಶೇ. ೫೬.೦೭ಕ್ಕಿಂತ ಸ್ವಲ್ಪ ಹೆಚ್ಚಾಗಿರುವುದು ಕಂಡುಬಂದಿದೆ.

ಸಾತನೂರು ಗ್ರಾಮಪಂಚಾಯಿತಿಯ ಜನರ ಶಿಕ್ಷಣ ಪ್ರಮಾಣ ಶೇ. ೬೩.೩೧ರಷ್ಟಿದ್ದು ಜನರ ಶಿಕ್ಷಣ ಉತ್ತಮವಾಗಿದೆ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯ ಮಹಿಳೆಯರ ಶಿಕ್ಷಣ ಪ್ರಮಾಣ ನಿಕೃಷ್ಟವಾಗಿದೆ.

ಕುಟುಂಬದ ಮುಖ್ಯಸ್ಥರ ಶಿಕ್ಷಣ

ಶಿಕ್ಷಣವು ಮಾನವನ ಸರ್ವತೋಮುಖ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಸಾಕ್ಷರತೆ ಯಿಂದ ಜ್ಞಾನ ಹಾಗೂ ಕೌಶಲ್ಯದ ತಳಹದಿ ಭದ್ರವಾಗುತ್ತಿದೆ. ಇದರಿಂದ ಉದ್ಯೋಗ ದಕ್ಕುತ್ತದೆ. ಜೊತೆಗೆ ಸ್ಥಾನಮಾನಗಳು ದೊರಕುತ್ತವೆ. ಹಾಗಾಗಿಯೇ ಎಲ್ಲರಿಗೂ ಶಿಕ್ಷಣ ದೊರೆಯುವಂತೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ ಬರುತ್ತಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಶೇ. ೭೦ರಷ್ಟು ಶಿಕ್ಷಿತರಿದ್ದಾರೆ. ಉಳಿದಂತೆ ಶೇ. ೩೦ರಷ್ಟು ಅಂದರೆ ೯೦ ಜನ ಅನಕ್ಷರಿಗಳಿದ್ದಾರೆ.


ಸಾತನೂರು ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿಯ ಶೇ. ೮೮ರಷ್ಟು ಕುಟುಂಬಗಳು ಶಿಕ್ಷಿತರಾಗಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದ ಶೇ. ೬೦ರಷ್ಟು ಕುಟುಂಬಗಳು ಶಿಕ್ಷಿತರಾಗಿದ್ದಾರೆ. ಶೇ. ೨೮ರಷ್ಟು ಅಲ್ಪಸಂಖ್ಯಾತ ಕುಟುಂಬಗಳು ಶಿಕ್ಷಿತರಿದ್ದಾರೆ. ಅಂದರೆ ಸಾತನೂರು ಪಂಚಾಯಿತಿಯ ಶೇ. ೮೦ರಷ್ಟು ಜನ ಶಿಕ್ಷಿತರಿದ್ದಾರೆ. ಹಾಗೆಯೇ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯ ಒಟ್ಟು ಶೇ. ೬೦ರಷ್ಟು ಕುಟುಂಬಗಳು ಶಿಕ್ಷಿತರಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿಯ ೬೮ರಷ್ಟು ಶಿಕ್ಷಿತರು ಹಾಗೂ ಪರಿಶಿಷ್ಟ ಪಂಗಡದ ೬೦ರಷ್ಟು ಜನರು ಶಿಕ್ಷಿತರಾಗಿದ್ದಾರೆ. ಹಾಗೆಯೇ ಅಲ್ಪಸಂಖ್ಯಾತ ಶೇ. ೫೬ರಷ್ಟು ಹಾಗೂ ಒಬಿಸಿ ಶೇ. ೫೮ರಷ್ಟು ಜನರು ಶಿಕ್ಷಿತರಾಗಿದ್ದಾರೆ.

ಅಧ್ಯಯನಕ್ಕೆ ಒಳಪಟ್ಟ ಎರಡು ಗ್ರಾಮಪಂಚಾಯಿತಿಗಳ ಶೇ. ೭೦ರಷ್ಟು ಕುಟುಂಬದ ಮುಖ್ಯಸ್ಥರು ಶಿಕ್ಷಿತರಾಗಿದ್ದಾರೆ. ಶೇ. ೩೦ರಷ್ಟು ಕುಟುಂಬದ ಮುಖ್ಯಸ್ಥರು ಅನಕ್ಷರಸ್ಥರಾಗಿದ್ದಾರೆ. ಪ್ರಾಥಮಿಕ ಶಿಕ್ಷಣ ಪಡೆದ ಸಂಖ್ಯೆ ೧೦೫ ಆದರೆ, ಶೇ. ೩೫ರಷ್ಟು ಕುಟುಂಬದ ಮುಖ್ಯಸ್ಥರು ಪ್ರಾಥಮಿಕ ಶಿಕ್ಷಣ ಪಡೆದಿದ್ದಾರೆ. ಮಾಧ್ಯಮಿಕ ಶಿಕ್ಷಣವನ್ನು ೫೦ ಕುಟುಂಬಗಳು ಶೇ. ೧೬.೫೭ರಷ್ಟು ಕುಟುಂಬಗಳು ಮಾಧ್ಯಮಿಕ ಶಿಕ್ಷಣ ಪಡೆದಿದ್ದಾರೆ. ಪ್ರೌಢಶಿಕ್ಷಣ ಪಡೆದವರ ಸಂಖ್ಯೆ ೪೫(ಶೇ. ೧೫) ಕುಟುಂಬಗಳಿವೆ. ಇದರಲ್ಲಿ ೧೧ ಕುಟುಂಬಗಳು ಅಂದರೆ, ೩.೩೩ರಷ್ಟು ಕುಟುಂಬಗಳು ಇತರೆ ಶಿಕ್ಷಣ ಪಡೆದಿದ್ದಾರೆ(ಕೋಷ್ಟಕ ೫.೫ ಗಮನಿಸಿ).

ಕೋಷ್ಟಕ ೫.೫. ಕುಟುಂಬದ ಮುಖ್ಯಸ್ಥರ ಶಿಕ್ಷಣ ಪ್ರಮಾಣ

ಶೈಕ್ಷಣಿಕ ಹಂತಗಳು	ಸಾತನೂರು ಪಂಚಾಯಿತಿ					ದೊಡ್ಡ ಆಲಹಳ್ಳಿ ಪಂಚಾಯಿತಿ					ಒಟ್ಟು				
	ಪ.ಜಾ	ಪ.ಪಂ.	ಅಲ್ಪ ಸಂ.	ಒಬಿಸಿ	ಒಟ್ಟು	ಪ.ಜಾ	ಪ.ಪಂ.	ಅಲ್ಪ ಸಂ.	ಒಬಿಸಿ	ಒಟ್ಟು	ಪ.ಜಾ	ಪ.ಪಂ.	ಅಲ್ಪ ಸಂ.	ಒಬಿಸಿ	ಒಟ್ಟು
ಪ್ರಾಥಮಿಕ	೧೨	೮	೧೦	೩೦	೬೦ (೪೦)	೮	೮	೭	೨೨	೪೫ (೩೦)	೨೦	೧೬	೧೭	೫೨	೧೦೫ (೩೫)
ಮಾಧ್ಯಮಿಕ	೫	೩	೪	೧೮	೩೦ (೨೦)	೪	೩	೩	೧೦	೨೦ (೧೩.೩೩)	೯	೬	೭	೨೮	೫೦ (೧೬.೬೭)
ಪ್ರೌಢ	೪	೩	೩	೧೫	೨೫ (೧೬.೬)	೪	೩	೩	೧೦	೨೦ (೧೩.೩೩)	೮	೬	೬	೨೫	೪೫ (೧೫)
ಇತರೆ	೧	೧	೧	೨	೫ (೩.೩)	೧	೧	೧	೨	೫ (೩.೩೩)	೨	೨	೨	೪	೧೦ (೩.೩೩)
ಒಟ್ಟು ಸಾಕ್ಷರತೆ	೨೨ (೮೮)	೧೫ (೬೦)	೧೮ (೭೨)	೬೫ (೮೬.೬)	೧೨೦ (೮೦)	೧೭ (೬೮)	೧೫ (೬೦)	೧೪ (೫೬)	೪೪ (೫೮)	೯೦ (೬೦)	೩೯ (೭೮)	೩೦ (೬೦)	೩೨ (೬೪)	೧೦೯ (೭೨)	೨೧೦ (೭೦)
ನಿರಕ್ಷರಸ್ಥರು	೩ (೧೨)	೧೦ (೪೦)	೭ (೨೮)	೧೦ (೧೪)	೩೦ (೨೦)	೮ (೩೨)	೧೦ (೪೦)	೧೧ (೪೪)	೩೧ (೪೨)	೬೦ (೪೦)	೧೧ (೨೨)	೨೦ (೪೦)	೧೮ (೩೬)	೪೧ (೨೮)	೯೦ (೩೦)

ಲಂಬಚಿತ್ರ ೫.೫. ಕುಟುಂಬದ ಮುಖ್ಯಸ್ಥರ ಶಿಕ್ಷಣ ಪ್ರಮಾಣ



ಕುಡಿಯುವ ನೀರಿನ ಸೌಲಭ್ಯ

ಕುಡಿಯುವ ನೀರು ಎಲ್ಲರಿಗೂ ಬದುಕಲು ಅಗತ್ಯವಾಗಿದೆ. ನೀರಿಲ್ಲದ ಮನುಷ್ಯನ ಬದುಕು ಊಹಿಸಲು ಅಸಾಧ್ಯವಾಗಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಶೇ. ೧೦೦ಕ್ಕೆ ೧೦೦ರಷ್ಟು ಕುಟುಂಬಗಳು ಕುಡಿಯುವ ನೀರಿನ ಸೌಲಭ್ಯವನ್ನು ಹೊಂದಿವೆ. ಕುಡಿಯುವ ನೀರನ್ನು ನಲ್ಲಿ, ಬಾವಿ, ಬೋರ್‌ವೆಲ್ ಮತ್ತು ಇತರೆ ಮೂಲಗಳಿಂದ ಗ್ರಾಮೀಣ ಜನರಿಗೆ ಕುಡಿಯಲು ನೀರು ಪೂರೈಸಲಾಗುತ್ತಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಶೇ. ೮೫.೬೭ರಷ್ಟು ಕುಟುಂಬಗಳಿಗೆ ನಳಗಳ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. ಗ್ರಾಮೀಣ ನೀರು ಪೂರೈಕೆಗೆ ಇಷ್ಟೆಲ್ಲ ಕಾರ್ಯಕ್ರಮಗಳಿದ್ದರೂ, ಗ್ರಾಮೀಣ ಪ್ರದೇಶದಲ್ಲಿ ಶೇ. ೪ರಷ್ಟು ಗ್ರಾಮೀಣ ಕುಟುಂಬಗಳು ಬಾವಿಗಳಿಂದ ಕುಡಿಯುವ ನೀರು ಪಡೆಯುತ್ತಿವೆ. ಒಟ್ಟಾರೆಯಾಗಿ ಎಲ್ಲಾ ಕುಟುಂಬಗಳು ಕುಡಿಯುವ ನೀರಿನ ಸೌಲಭ್ಯ ಹೊಂದಿದೆ. ಸಾತನೂರು ಮತ್ತು ದೊಡ್ಡ ಆಲಹಳ್ಳಿ ಎರಡು ಗ್ರಾಮಪಂಚಾಯಿತಿಗಳಲ್ಲಿ ಎಲ್ಲಾ ಮೂಲಗಳಿಂದ ಸಮಪ್ರಮಾಣದ ನೀರು ಪಡೆಯುತ್ತಿವೆ. ಅಧ್ಯಯನಕ್ಕೆ ಒಳಪಟ್ಟ ಎರಡು ಗ್ರಾಮಪಂಚಾಯಿತಿಗಳಲ್ಲಿ ಬೋರ್‌ವೆಲ್, ಬಾವಿ, ನಲ್ಲಿ, ಇತರೆ ಮೂಲಗಳಿಂದ ನೀರು ಒದಗಿಸುವ ಪ್ರಮಾಣ ಹೆಚ್ಚು ಕಡಿಮೆ ಸಮಪ್ರಮಾಣದಲ್ಲಿವೆ(ಕೋಷ್ಟಕ ೫.೬ ಗಮನಿಸಿ).



ಕೋಷ್ಟಕ ೫.೬. ಕುಡಿಯುವ ನೀರಿನ ಸೌಲಭ್ಯ


ನೀರಿನ ಸೌಲಭ್ಯಗಳು	ಸಾತನೂರು ಪಂಚಾಯಿತಿ					ದೊಡ್ಡ ಆಲಹಳ್ಳಿ ಪಂಚಾಯಿತಿ					ಒಟ್ಟು				
	ಪ.ಜಾ	ಪ.ಪಂ	ಒಬಿಸಿ	ಅಲ್ಪ ಸಂ.	ಒಟ್ಟು	ಪ.ಜಾ.	ಪ.ಪಂ	ಒಬಿಸಿ	ಅಲ್ಪ ಸಂ.	ಒಟ್ಟು	ಪ.ಜಾ.	ಪ.ಪಂ.	ಒಬಿಸಿ	ಅಲ್ಪ ಸಂ.	ಒಟ್ಟು
ಬೋರ್‌ವೆಲ್	೨	೩	೫	೦	೧೦ (೬.೬೭)	೧	೧	೨	೪	೮ (೫.೩೩)	೩ (೬)	೪ (೮)	೭ (೪.೬೭)	೪ (೮)	೧೮ (೬)
ಬಾವಿ	೨	೧	೧	೨	೬ (೪)	೨	೩	೨	೦	೭ (೪.೬೭)	೪ (೮)	೪ (೮)	೩ (೨)	೨ (೪)	೧೩ (೪.೩೩)
ನಲ್ಲಿ	೨೧	೨೦	೬೪	೨೩	೧೨೮ (೮೫.೩೩)	೨೨	೨೦	೬೬	೨೧	೧೨೯ (೮೬)	೪೩ (೮೬)	೪೦ (೮೦)	೧೩೦ (೮೬.೬೭)	೪೪ (೮೮)	೨೫೭ (೮೫.೬೭)
ಇತರೆ	೦	೧	೫	೦	೬ (೩.೩೩)	೦	೧	೫	೦	೬ (೩.೩೩)	೦ (೦)	೨ (೪)	೧೦ (೬.೬೭)	೦ (೦)	೧೨ (೪)
	೨೫	೨೫	೭೫	೨೫	೧೫೦	೨೫	೨೫	೭೫	೨೫	೧೫೦	೫೦	೫೦	೧೫೦	೫೦	೩೦೦

ಕೋಷ್ಟಕ ೫.೭. ಶೌಚಾಲಯಗಳು

ಸಮುದಾಯ	ಸಾತನೂರು ಪಂಚಾಯಿತಿ		ದೊಡ್ಡ ಆಲಹಳ್ಳಿ ಪಂಚಾಯಿತಿ		ಒಟ್ಟು	
	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ
ಪರಿಶಿಷ್ಟ ಜಾತಿ	೧೮ (೧೨)	೭ (೪.೬೭)	೨೦ (೧೩.೩೩)	೫ (೩.೩೩)	೩೮ (೭೬)	೧೨ (೨೪)
ಪರಿಶಿಷ್ಟ ಪಂಗಡ	೧೪ (೯.೩೩)	೧೧ (೭.೩೩)	೨೦ (೧೩.೩೩)	೫ (೩.೩೩)	೩೪ (೬೮)	೧೬ (೩೨)
ಹಿಂದುಳಿದ ವರ್ಗ	೪೬ (೩೦.೬೭)	೨೯ (೧೯.೩೩)	೭೬ (೫೦.೬೭)	೨೪ (೧೬)	೧೨೨ (೬೪.೬೭)	೫೩ (೩೫.೩೩)
ಅಲ್ಪ ಸಂಖ್ಯಾತರು	೧೨ (೮)	೧೩ (೮.೬೭)	೧೦ (೭.೩೩)	೧೫ (೧೦)	೧೨ (೪೪)	೧೩ (೫೬)
	೯೦ (೬೦)	೬೦ (೪೦)	೧೧೬ (೭೭.೩೩)	೩೪ (೨೨.೬೭)	೨೦೬ (೬೩.೬೭)	೯೪ (೩೬.೩೩)

ನೀರು ಮತ್ತು ನೈರ್ಮಲ್ಯ ಆರೋಗ್ಯದ ಎರಡು ಮುಖಗಳು ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಸಂಗತಿಗಳಿವೆ. ಅಂದರೆ ಗ್ರಾಮೀಣ ಜನರು ನೀರಿಗೆ ಕೊಡುವಷ್ಟು ಪ್ರಾಮುಖ್ಯತೆಯನ್ನು ನೈರ್ಮಲ್ಯಕ್ಕೆ ನೀಡುತ್ತಿಲ್ಲ. ನೈರ್ಮಲ್ಯದಲ್ಲಿ ಶೌಚಾಲಯಗಳಲ್ಲಿ ಪಾತ್ರ ದೊಡ್ಡದು. ಇತ್ತೀಚೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ವಚ್ಛ ಭಾರತ ಅಭಿಯಾನ ಏರ್ಪಡಿಸಿ ಜನರಲ್ಲಿ ನೈರ್ಮಲ್ಯದ ಬಗ್ಗೆ ಅರಿವು ಹೆಚ್ಚಿಸಿದ್ದಾರೆ. ಸರ್ಕಾರಗಳು ಶೌಚಾಲಯಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಿ ಸಹಾಯ

ಲಂಬಚಿತ್ರ ೫.೭. ಶೌಚಾಲಯಗಳ ಪ್ರಮಾಣ





ಧನ ನೀಡುತ್ತಿವೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಶೇ. ೬೩.೬೭ರಷ್ಟು ಕುಟುಂಬಗಳು ಶೌಚಾಲಯ ಹೊಂದಿದ್ದಾರೆ. ಉಳಿದಂತೆ ಶೇ. ೩೬.೩೩ರಷ್ಟು ಕುಟುಂಬಗಳು ಶೌಚಾಲಯ ಹೊಂದಿಲ್ಲ. ಪರಿಶಿಷ್ಟ ಜಾತಿಯ ಶೇ. ೭೬ರಷ್ಟು ಕುಟುಂಬಗಳು ಶೌಚಾಲಯ ಹೊಂದಿದ್ದಾರೆ. ಪರಿಶಿಷ್ಟ ಪಂಗಡದ ಶೇ. ೬೮ರಷ್ಟು ಕುಟುಂಬಗಳು ಶೌಚಾಲಯ ಹೊಂದಿವೆ. ಅಲ್ಪಸಂಖ್ಯಾತರ ಶೇ. ೪೪ರಷ್ಟು ಕುಟುಂಬಗಳು ಶೌಚಾಲಯಗಳನ್ನು ಹೊಂದಿವೆ. ಒಬಿಸಿ ಶೇ. ೬೪ರಷ್ಟು ಕುಟುಂಬಗಳು ಶೌಚಾಲಯ ಹೊಂದಿವೆ. ಸಾತನೂರು ಗ್ರಾಮಪಂಚಾಯಿತಿಗಳಿಗಿಂತ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ಕುಟುಂಬಗಳು ಹೆಚ್ಚು ಶೌಚಾಲಯ ಹೊಂದಿವೆ.


ಭೂಹಿಡುವಳಿ ಪ್ರಮಾಣ

ಗ್ರಾಮೀಣ ಪ್ರದೇಶದಲ್ಲಿ ಭೂಮಿ ಅಥವಾ ಜಮೀನು ಸ್ಥಾನಮಾನದ ಸಂಕೇತವಾಗಿದೆ. ಯಾರು ಹೆಚ್ಚು ಭೂಮಿ ಹೊಂದಿರುತ್ತಾರೋ ಅವರಿಗೆ ಹೆಚ್ಚು ಗೌರವ ಸ್ಥಾನಮಾನಗಳು ದೊರೆಯುತ್ತಿವೆ. ನಮ್ಮ ಅಧ್ಯಯನಕ್ಕೆ ಬಳಸಲ್ಪಟ್ಟ ೩೦೦ ಕುಟುಂಬಗಳಲ್ಲಿ ೬೩ ಕುಟುಂಬಗಳು ಭೂಮಿ ಹೊಂದಿದ್ದಾರೆ. ಉಳಿದಂತೆ ಇನ್ನು ೨೩೭ ಕುಟುಂಬಗಳು ಭೂರಹಿತ ಕುಟಂಬಗಳಾಗಿವೆ. ಶೇ. ೨೧ರಷ್ಟು ಕುಟುಂಬಗಳು ಮಾತ್ರ ಭೂಮಿ ಹೊಂದಿವೆ. ಪರಿಶಿಷ್ಟ ಜಾತಿಯ ೫ ಕುಟುಂಬಗಳು ಭೂಮಿ ಹೊಂದಿವೆ. ಪರಿಶಿಷ್ಟ ಪಂಗಡದ ೧೫ ಕುಟುಂಬಗಳು ಭೂಮಿ ಹೊಂದಿವೆ. ಅಲ್ಪಸಂಖ್ಯಾತ ೨ ಕುಟುಂಬಗಳು ಭೂಮಿ ಹಂದಿವೆ. ಉಳಿದಂತೆ ಹಿಂದುಳಿದ ವರ್ಗದ ೪೨ ಕುಟುಂಬಗಳು ಭೂಮಿ ಹೊಂದಿವೆ. ಅಧ್ಯಯನದಲ್ಲಿ ೧ ಎಕರೆ ಭೂಮಿ ಹೊಂದಿರುವ ಪರಿಶಿಷ್ಟ ಜಾತಿ ಕುಟುಂಬಗಳ ಸಂಖ್ಯೆ ೧ ಇದೆ. ಹಾಗೆಯೇ ೨ ಎಕರೆ ಭೂಮಿಯನ್ನು ಹೊಂದಿರುವ ೪ ಕುಟುಂಬಗಳಿವೆ. ಹಿಂದುಳಿದ ವರ್ಗದ ಒಂದು ಕುಟುಂಬ ೧೬ ಎಕರೆಗಿಂತ ಹೆಚ್ಚು ಭೂಮಿ ಹೊಂದಿದೆ. ೧೧ ಎಕರೆ ಹೆಚ್ಚು ಭೂಮಿ ಹೊಂದಿರುವ ೨ ಕುಟುಂಬಗಳಿವೆ. ೨ರಿಂದ ೪ ಎಕರೆ ಭೂಮಿ ಹೊಂದಿರುವ ೨೬ ಕುಟುಂಬಗಳು ಒಬಿಸಿ ಸಮುದಾಯಕ್ಕೆ ಸೇರಿವೆ. ಒಟ್ಟಾರೆಯಾಗಿ ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಭೂರಹಿತ ೨೩೭ ಕುಟುಂಬಗಳು ಅಂದರೆ, ಶೇ. ೭೯ರಷ್ಟು ಕುಟುಂಬಗಳು ಭೂಮಿ ಹೊಂದಿಲ್ಲ. ಕೇವಲ ಶೇ. ೨೧ರಷ್ಟು ಕುಟುಂಬಗಳು ಮಾತ್ರ ಭೂಮಿಯನ್ನು ಹೊಂದಿವೆ. ಪಂಚಾಯಿತಿವಾರು ಭೂಮಿ ಹೊಂದಿರುವ ಸಂಖ್ಯೆಗಳನ್ನು ಗಮನಿಸಿದಾಗ ಸಾತನೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ೩೬ ಕುಟುಂಬಗಳ ಶೇ. ೨೪ರಷ್ಟು ಕುಟುಂಬಗಳು ಭೂಮಿ ಹೊಂದಿದ್ದಾರೆ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ೨೭ ಕುಟುಂಬಗಳು ಅಂದರೆ, ಶೇ. ೧೯.೩೩ರಷ್ಟು ಭೂಮಿ ಹೊಂದಿವೆ. ಅಧ್ಯಯನಕ್ಕೆ ಒಳಪಟ್ಟ ಎರಡು ಗ್ರಾಮಪಂಚಾಯಿತಿಗಳಲ್ಲಿ ಸಾತನೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಕುಟುಂಬಗಳು ಹೆಚ್ಚು ಭೂಮಿ ಹೊಂದಿವೆ(ಕೋಷ್ಟಕ ೫.೮ ಗಮನಿಸಿ).

ಕೋಷ್ಟಕ ೫.೮.. ಭೂಹಿಡುವಳಿ ಪ್ರಮಾಣ

ಭೂ ಹಿಡುವಳಿ	ಸಾತನೂರು ಪಂಚಾಯಿತಿ					ದೊಡ್ಡ ಆಲಹಳ್ಳಿ ಪಂಚಾಯಿತಿ					ಒಟ್ಟು				
	ಪ.ಜಾ	ಪ.ಪಂ	ಒಬಿಸಿ	ಅಲ್ಪ ಸಂ.	ಒಟ್ಟು	ಪ.ಜಾ	ಪ.ಪಂ	ಒಬಿಸಿ	ಅಲ್ಪ ಸಂ.	ಒಟ್ಟು	ಪ.ಜಾ	ಪ.ಪಂ	ಒಬಿಸಿ	ಅಲ್ಪ ಸಂ.	ಒಟ್ಟು
ಭೂರಹಿತರು	೨೨	೧೩	೫೭	೨೪	೧೧೬ (೭೭.೩೩)	೨೩	೨೨	೭೬	–	೧೨೧ (೮೦.೬)	೪೫ (೯೦)	೩೫ (೭೦)	೧೩೩ (೭೬)	೨೪ (೯೬)	೨೩೭ (೭೯)
1 ಎಕರೆ	೧	೨	೫	–	೮ (೫.೩೩)	–	೨	೪	–	೬ (೪)	೧ (೨)	೪ (೮)	೯ (೫.೧೪)	೦ (೦)	೧೪ (೪.೬೭)
2–4 ಎಕರೆ	೨	೬	೭	–	೧೫ (೧೦)	೨	೧	೧೯	–	೨೨ (೧೪.೬೭)	೪ (೮)	೭ (೧೪)	೨೬ (೧೪.೮೬)	೦ (೦)	೩೭ (೧೨.೩೩)
5–10 ಎಕರೆ	–	೪	೩	೧	೮ (೪.೬೬)	–	–	೧	–	೧ (೦.೬೭)	೦ (೦)	೪ (೮)	೪ (೨.೨೮)	೧ (೪)	೯ (೨.೬)
11–15 ಎಕರೆ	–	–	೨	–	೨ (೧.೩೩)	–	–	–	–	–	೦ (೦)	೦ (೦)	೨ (೧.೧೪)	೦ (೦)	೨ (೦.೦೬)
16–20 ಎಕರೆ	–	–	೧	–	೧ (೦.೬೭)	–	–	–	–	–	೦ (೦)	೦ (೦)	೧ (೦.೫೭)	೦ (೦)	೧ (೦.೩೩)
	೨೫	೨೫	೭೫	೨೫	೧೫೦	೨೫	೨೫	೧೦೦	೦	೧೫೦	೫೦	೫೦	೧೭೫	೨೫	೩೦೦

ಲಂಬಚಿತ್ರ ೫.೮. ಭೂಹಿಡುವಳಿ ಪ್ರಮಾಣ



	ಭೂರಹಿತರು	೧ ಎಕರೆ	೨-೪ ಎಕರೆ	೫-೧೦ ಎಕರೆ	೧೧-೧೫ ಎಕರೆ	೧೬-೨೦ ಎಕರೆ
ಒಟ್ಟು ಪರಿಶಿಷ್ಟ ಜಾತಿ	೪೫	೧	೪	೦	೦	೦
ಒಟ್ಟು ಪರಿಶಿಷ್ಟ ಪಂಗಡ	೩೫	೪	೭	೪	೦	೦
ಒಟ್ಟು ಹಿಂದುಳಿದ ವರ್ಗ	೧೩೩	೯	೨೬	೪	೨	೧
ಒಟ್ಟು ಅಲ್ಪ ಸಂಖ್ಯಾತರು	೨೪	೦	೦	೧	೦	೦


ವೃತ್ತಿ

ಭಾರತ ಕೃಷಿಪ್ರಧಾನ ದೇಶ. ಶೇ. ೬೫ರಷ್ಟು ಕುಟುಂಬಗಳು ಇಂದಿಗೂ ಕೃಷಿಯನ್ನು ಅವಲಂಬಿಸಿವೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ೧೯೦ ಕುಟುಂಬಗಳು ಅಂದರೆ, ಶೇ. ೬೩.೩ರಷ್ಟು ಕುಟುಂಬಗಳು ಜೀವನೋಪಾಯಕ್ಕೆ ಕೃಷಿಯನ್ನು ಅವಲಂಬಿಸಿವೆ. ಸಾತನೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಶೇ. ೬೪.೬ರಷ್ಟು ಕುಟುಂಬಗಳು ಅಂದರೆ, ೯೭ ಕುಟುಂಬಗಳು ಕೃಷಿಯನ್ನು ಅವಲಂಬಿಸಿವೆ. ಹಾಗೆಯೇ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯ ೯೩ ಕುಟುಂಬಗಳು ಶೇ. ೬೩ರಷ್ಟು ಕುಟುಂಬಗಳು ಕೃಷಿ ಅವಲಂಬಿಸಿವೆ. ಕೃಷಿ ಅವಲಂಬಿತರ ಸಂಖ್ಯೆ ಸಾತನೂರು ಗ್ರಾಮಪಂಚಾಯಿತಿಯಲ್ಲಿ ಅಧಿಕವಿದೆ. ಒಟ್ಟಾರೆಯಾಗಿ ಎರಡು ಗ್ರಾಮಪಂಚಾಯಿಗಳಿಂದ ಒಟ್ಟು ಶೇ. ೬೩ರಷ್ಟು ಕುಟುಂಬಗಳು ಕೃಷಿ ಅವಲಂಬಿಸಿವೆ(ಕೋಷ್ಟಕ ೫.೯. ಗಮನಿಸಿ).

ಕೋಷ್ಟಕ ೫.೯. ವೃತ್ತಿ


ಕಸುಬುಗಳು	ಸಾತನೂರು ಪಂಚಾಯಿತಿ					ದೊಡ್ಡ ಆಲಹಳ್ಳಿ ಪಂಚಾಯಿತಿ					ಒಟ್ಟು				
	ಪ.ಜಾ	ಪ.ಪಂ	ಒಬಿಸಿ	ಅಲ್ಪ ಸಂ.	ಒಟ್ಟು	ಪ.ಜಾ	ಪ.ಪಂ.	ಒಬಿಸಿ	ಅಲ್ಪ ಸಂ.	ಒಟ್ಟು	ಪ.ಜಾ	ಪ.ಪಂ.	ಒಬಿಸಿ	ಅಲ್ಪ ಸಂ.	ಒಟ್ಟು
ಕೃಷಿ	೧೦	೧೮	೫೩	೧೬	೯೭ (೬೪.೬)	೧೫	೧೫	೫೦	೧೩	೯೩ (೬೨)	೨೫ (೫೦)	೩೩ (೬೬)	೧೦೩ (೬೮.೬೭)	೨೯ (೫೮)	೧೯೦ (೬೩)
ಸರ್ಕಾರಿ	–	–	೧	–	೧ (೦.೬೬)	–	–	೪	–	೪ (೨.೬೭)	೦ (೦)	೦ (೦)	೫ (೩.೩೩)	೦ (೦)	೫ (೧.೬೭)
ಅರೆಸರ್ಕಾರಿ	೧	೧	೪	೧	೭ (೪.೬೭)	–	–	–	–	೦ (೦)	೧ (೨)	೧ (೨)	೪ (೨.೬೬)	೧ (೨)	೭ (೨)
ಇತರೆ	೧೪	೬	೧೭	೮	೪೫ (೩೦)	೧೦	೧೦	೨೧	೧೨	೫೩ (೩೫.೩೩)	೨೪ (೪೮)	೧೬ (೩೨)	೩೮ (೨೫.೩೩)	೨೦ (೪೦)	೯೮ (೩೨.೬೭)
	೨೫	೨೫	೭೫	೨೫	೧೫೦	೨೫	೨೫	೭೫	೨೫	೧೫೦	೫೦	೫೦	೧೫೦	೫೦	೩೦೦

ಲಂಬಚಿತ್ರ ೫.೯. ವೃತ್ತಿ ಪ್ರಮಾಣ



ಕುಟುಂಬದ ವಾರ್ಷಿಕ ಆದಾಯ


ವ್ಯಕ್ತಿಗಳು ಗಳಿಸುವ ಆದಾಯವು ಕುಟುಂಬದ ಆರ್ಥಿಕ ಸ್ಥಿತಿಯನ್ನು ಬಿಂಬಿಸುತ್ತದೆ. ಎಲ್ಲಾ ವ್ಯಕ್ತಿಗಳ ಕುಟುಂಬದ ನಿರ್ವಹಣೆಗೆ ದುಡಿಮೆಯು ಬೇಕಾಗಿರುತ್ತದೆ. ಅಧ್ಯಯನಕ್ಕೆ ಒಳಪಟ್ಟ ಕುಟುಂಬಗಳ ವಾರ್ಷಿಕ ಆದಾಯವನ್ನು ಮುಂದಿನ ಕೋಷ್ಟಕವನ್ನು ಗಮನಿಸಿದಾಗ ಶೇ. ೧೪ರಷ್ಟು ಕುಟುಂಬಗಳು ೧,೦೦೦ರಿಂದ ೧೦,೦೦೦ ವಾರ್ಷಿಕ ಆದಾಯ ಪಡೆಯುತ್ತಿರುವುದು ತಿಳಿಯುತ್ತದೆ. ಶೇ. ೧೩.೬೭ ಕುಟುಂಬಗಳು ೧೦,೦೦೧ರಿಂದ ೨೦,೦೦೦ ಆದಾಯ ಪಡೆಯುತ್ತಿದ್ದಾರೆ. ೨೦,೦೦೧ರಿಂದ ೩೦,೦೦೦ ಆದಾಯವನ್ನು ಶೇ. ೧೯.೩೩ರಷ್ಟು ಕುಟುಂಬಗಳು ಪಡೆಯುತ್ತಿವೆ. ಶೇ. ೧೩ರಷ್ಟು ಕುಟುಂಬಗಳು ೩೦,೦೦೦ದಿಂದ ೪೦,೦೦೦ ಆದಾಯ ಪಡೆಯುತ್ತಿವೆ. ಶೇ. ೧೧.೬೬ರಷ್ಟು ಕುಟುಂಬಗಳು ೪೦೦೦೧ರಿಂದ ೫೦,೦೦೧ ವಾರ್ಷಿಕ ಆದಾಯ ಪಡೆಯುತ್ತಿದ್ದಾರೆ. ಉಳಿದಂತೆ ೧೭ರಷ್ಟು ಕುಟುಂಬಗಳು ೫೦,೦೦೧ರಿಂದ ೧ ಲಕ್ಷದವರೆಗೆ ವಾರ್ಷಿಕ ಆದಾಯ ಹೊಂದಿವೆ. ಇನ್ನು ಶೇ. ೧೧.೩೩ರಷ್ಟು ಕುಟುಂಬಗಳು ೧ ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಪಡೆಯುತ್ತಿವೆ. ಈ ಎರಡು ಗ್ರಾಮಪಂಚಾಯಿತಿಗಳಲ್ಲಿನ ಕುಟುಂಬಗಳ ವಾರ್ಷಿಕ ಆದಾಯ ಹೆಚ್ಚು ಕಡಿಮೆ ಸಮಪ್ರಮಾಣ ದಲ್ಲಿವೆ(ಕೋಷ್ಟಕ ೫.೧೦. ಮತ್ತು ವೃತ್ತಚಿತ್ರ ಗಮನಿಸಿ).



ಕೋಷ್ಟಕ ೫.೧೦. ಕುಟುಂಬದ ವಾರ್ಷಿಕ ಆದಾಯ

ವಾರ್ಷಿಕ ಆದಾಯ (ರೂ.ಗಳಲ್ಲಿ)	ಸಾತನೂರು ಪಂಚಾಯಿತಿ					ದೊಡ್ಡ ಆಲಹಳ್ಳಿ ಪಂಚಾಯಿತಿ					ಒಟ್ಟು				
	ಪ.ಜಾ	ಪ.ಪಂ.	ಒಬಿಸಿ.	ಅಲ್ಪ ಸಂ.	ಒಟ್ಟು	ಪ.ಜಾ	ಪ.ಪಂ.	ಒಬಿಸಿ.	ಅಲ್ಪ ಸಂ.	ಒಟ್ಟು	ಪ.ಜಾ	ಪ.ಪಂ.	ಒಬಿಸಿ.	ಅಲ್ಪ ಸಂ.	ಒಟ್ಟು
1000–10000	೮	೧೪	೧೬	೧	೩೯ (೨೬)	–	–	೧	೨	೩ (೨)	೮ (೧೬)	೧೪ (೨೮)	೧೭ (೧೧.೩೩)	೩ (೬)	೪೨ (೧೪)
10001–20000	೨	೧	೧೭		೨೦ (೧೩.೩೩)	೪	೨	೧೫		೨೧ (೧೪)	೬ (೧೨)	೩ (೬)	೩೨ (೨೧.೩೩)	೦ (೦)	೪೧ (೧೩.೬೭)
20001–30000	೬	೨	೧೦	೧೧	೨೯ (೧೯.೩೩)	೫	೬	೮	೧೦	೨೯ (೧೯.೩೩)	೧೧ (೨೨)	೮ (೧೬)	೧೮ (೧೨)	೨೧ (೪೨)	೫೮ (೧೯.೩೩)
30001–40000	೩	೩	೫	೪	೧೫ (೧೦)	೫	೪	೧೧	೪	೨೪ (೧೬)	೮ (೧೬)	೭ (೧೪)	೧೬ (೧೦.೬೭)	೮ (೧೬)	೩೯ (೧೩)
40001–50000	೧	೧	೫	೩	೧೦ (೬.೬೬)	೩	೬	೧೩	೩	೨೫ (೧೬.೬೭)	೪ (೮)	೭ (೧೪)	೧೮ (೧೨)	೬ (೧೨)	೩೫ (೧೧.೬೬)
50001–100000	೧	೩	೧೨	೪	೨೦ (೧೩.೩೩)	೭	೪	೧೭	೩	೩೧ (೨೦.೬೭)	೮ (೧೬)	೭ (೧೪)	೨೯ (೧೯.೩೩)	೭ (೧೪)	೫೧ (೧೭)
100000ದ ಮೇಲ್ಪಟ್ಟು	೪	೧	೧೦	೨	೧೭ (೧೧.೩೩)	೧	೩	೧೦	೩	೧೭ (೧೧.೩೩)	೫ (೧೦)	೪ (೮)	೨೦ (೧೩.೩೩)	೫ (೧೦)	೩೪ (೧೧.೩೩)
	೨೫	೨೫	೭೫	೨೫	೧೫೦	೨೫	೨೫	೭೫	೨೫	೧೫೦	೫೦	೫೦	೧೫೦	೫೦	೩೦೦

ಲಂಬಚಿತ್ರ ೫.೧೦. ಕುಟುಂಬದ ವಾರ್ಷಿಕ ಆದಾಯ ಪ್ರಮಾಣ



	೧೦೦೦-೧೦೦೦೦	೧೦೦೦೧-೨೦೦೦೦	೨೦೦೦೧-೩೦೦೦೦	೩೦೦೦೧-೪೦೦೦೦	೪೦೦೦೧-೫೦೦೦೦	೫೦೦೦೧-೧೦೦೦೦೦	೧೦೦೦೦೦ ದ ಮೇಲ್ಪಟ್ಟು
ಒಟ್ಟು ಪರಿಶಿಷ್ಟ ಜಾತಿ	೮	೬	೧೧	೮	೪	೮	೫
ಒಟ್ಟು ಪರಿಶಿಷ್ಟ ಪಂಗಡ	೧೪	೩	೮	೭	೭	೭	೪
ಒಟ್ಟು ಹಿಂದುಳಿದ ವರ್ಗ	೧೭	೩೨	೧೮	೧೬	೧೮	೨೯	೨೦
ಒಟ್ಟು ಅಲ್ಪ ಸಂಖ್ಯಾತರು	೩	೦	೨೧	೮	೬	೭	೫

ಕೋಷ್ಟಕ ೫.೧೧. ಶಾಲಾಕಟ್ಟಡ, ಆಟದ ಮೈದಾನ, ಕೌಂಪೌಂಡ್

ಗ್ರಾಮಗಳು	ಶಾಲಾ ಕಟ್ಟಡ	ಕೊಠಡಿ	ಆಟದ ಮೈದಾನ	ಕೌಂಡೌಂಡ
ಸಾತನೂರು	ಇದೆ	7	ಇದೆ	ಇದೆ
ನಾಗರಸನಕೋಟೆ	ಇದೆ	2	ಇಲ್ಲ	ಇದೆ
ದೊಡ್ಡ ಆಲಹಳ್ಳಿ	ಇದೆ	5	ಇದೆ	ಇದೆ
ನಾಯಕನಹಳ್ಳಿ	ಇದೆ	2	ಇಲ್ಲ	ಇಲ್ಲ
		16		

ಶಿಕ್ಷಣದ ಗುಣಮಟ್ಟ ಹೆಚ್ಚಿಸುವಲ್ಲಿ ಶಾಲಾಕಟ್ಟಡ, ಕೊಠಡಿ, ಆಟದ ಮೈದಾನ ಮುಂತಾದವುಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಹಳ್ಳಿಗಳಲ್ಲಿರುವ ನಾಲ್ಕು ಶಾಲೆಗಳಿಗೂ ಸ್ವಂತ ಕಟ್ಟಡಗಳಿವೆ. ಸಾತನೂರು ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದಲ್ಲಿ ೭ ಕೊಠಡಿಗಳಿದ್ದು, ಆಟದ ಮೈದಾನ ಹಾಗೂ ಶಾಲಾ ಕಾಂಪೌಂಡ್‌ನ್ನು ಹೊಂದಿದೆ. ನಾಗರಸನಕೋಟೆಯ ಶಾಲೆಯು ಸ್ವಂತ ಕಟ್ಟಡ ಹೊಂದಿದ್ದು, ಎರಡು ಕೊಠಡಿಗಳನ್ನು ಮಾತ್ರ ಹೊಂದಿದೆ. ಆಟದ ಮೈದಾನ



ಇರುವುದಿಲ್ಲ. ಶಾಲಾಕಟ್ಟಡಕ್ಕೆ ಕಾಂಪೌಂಡ್‌ನ್ನು ಹೊಂದಿದೆ. ದೊಡ್ಡ ಆಲಹಳ್ಳಿಯ ಶಾಲೆಯು ಸ್ವಂತ ಕಟ್ಟಡ ಹೊಂದಿದ್ದು, ೫ ಕೊಠಡಿಗಳನ್ನು ಹೊಂದಿವೆ. ಆಟದ ಮೈದಾನ ಹಾಗೂ ಕೌಂಪೌಂಡ್ ಹೊಂದಿದೆ. ನಾಯಕನಹಳ್ಳಿ ಗ್ರಾಮದ ಶಾಲೆಗೆ ಸ್ವಂತ ಕಟ್ಟಡವನ್ನು ಹೊಂದಿದ್ದು, ೨ ಕೊಠಡಿಗಳಿವೆ. ಆದರೆ ಆಟದ ಮೈದಾನ ಹಾಗೂ ಶಾಲಾ ಕಟ್ಟಡಕ್ಕೆ ಕೌಂಪೌಂಡ್ ವ್ಯವಸ್ಥೆ ಇರುವುದಿಲ್ಲ. ಗ್ರಾಮಪಂಚಾಯಿತಿ ಕಛೇರಿಗಳನ್ನು ಹೊಂದಿರುವ ಎರಡು ಹಳ್ಳಿಗಳ ಶಾಲಾಕಟ್ಟಡ ಕೊಠಡಿ, ಆಟದ ಮೈದಾನಗಳಿವೆ. ಆದರೆ ನಾಗರಸನಕೋಟೆ ಮತ್ತು ನಾಯಕನಹಳ್ಳಿಯ ಎರಡು ಶಾಲೆಗಳಿಗೆ ಆಟದ ಮೈದಾನ ಇರುವುದಿಲ್ಲ.

ಕೋಷ್ಟಕ ೫.೧೨. ಶಾಲಾ ಕುಡಿಯುವ ನೀರಿನ ಮೂಲಗಳು

ಗ್ರಾಮ	ಕುಡಿಯುವ ನೀರಿನ ಮೂಲ			ಒಟ್ಟು
	ನಲ್ಲಿ	ಟ್ಯಾಂಕ್	ಇತರೆ	
ಸಾತನೂರು	–	೧	೧	೨
ನಾಗರಸನಕೋಟೆ	೧	೧	–	೨
ದೊಡ್ಡ ಆಲಹಳ್ಳಿ	೧	೧	–	೨
ನಾಯಕನಹಳ್ಳಿ	೧	–	೧	೨
ಒಟ್ಟು	೩	೩	೨	೦೮

ಸಾತನೂರು, ನಾಗರಸನಕೋಟೆ, ದೊಡ್ಡ ಆಲಹಳ್ಳಿ ಹಾಗೂ ನಾಯಕನಹಳ್ಳಿ ಎಂಬ ನಾಲ್ಕು ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳಿವೆ. ಈ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದೆಯಾದರೂ ಅದು ಸಮರ್ಪಕವಾಗಿಲ್ಲ. ಸಾತನೂರು ಗ್ರಾಮದಲ್ಲಿ ಸ್ಟೀಲ್ ಟ್ಯಾಂಕೊಂದನ್ನು ಇರಿಸಿ ಮಕ್ಕಳು ಕೊಳವೆ ಬಾವಿಯ ನೀರನ್ನು ತುಂಬಿಸಿಡುತ್ತಾರೆ. ನೀರು ಖಾಲಿಯಾದಂತೆಲ್ಲಾ ಮಕ್ಕಳೇ ನೀರನ್ನು ಕೈಪಂಪಿನಿಂದ ತಂದು ಟ್ಯಾಂಕುಗಳಿಗೆ ತುಂಬಿಸುತ್ತಾರೆ.

ನಾಗರಸನಕೋಟೆಯಲ್ಲಿ ಸಾರ್ವಜನಿಕ ನಲ್ಲಿಯೊಂದನ್ನು ಶಾಲಾ ಆವರಣದಲ್ಲಿಯೇ ಕೂರಿಸಲಾಗಿದೆ. ಬೆಳಿಗ್ಗೆ ಮಾತ್ರ ನೀರನ್ನು ಸರಬರಾಜು ಮಾಡಲಾಗುತ್ತದೆ. ಆ ವೇಳೆಯಲ್ಲಿಯೇ ನೀರನ್ನು ಹಿಡಿದು ಟ್ಯಾಂಕಿನಲ್ಲಿ ಸಂಗ್ರಹಿಸಿಡಲಾಗುತ್ತದೆ. ಬಹುತೇಕ ಈ ಕಾರ್ಯವನ್ನು ಮಕ್ಕಳೇ ನಿರ್ವಹಿಸಬೇಕು.

ದೊಡ್ಡ ಆಲಹಳ್ಳಿಯಲ್ಲಿಯೂ ಸಾರ್ವಜನಿಕ ನಲ್ಲಿಯೊಂದನ್ನು ಶಾಲಾ ಆವರಣದೊಳಗೆ ಹಾಕಲಾಗಿದ್ದು ಆ ನಲ್ಲಿಯ ನೀರನ್ನೇ ಟ್ಯಾಂಕಿನಲ್ಲಿ ಸಂಗ್ರಹಿಸಿಡುತ್ತಾರೆ.

ನಾಯಕನಹಳ್ಳಿಯಲ್ಲಿಯೂ ಸಾರ್ವಜನಿಕ ನಲ್ಲಿಯೊಂದನ್ನು ಶಾಲಾ ಆವರಣದಲ್ಲಿ ಕೂಡಿಸಲಾಗಿದೆ. ನಲ್ಲಿಯ ನೀರನ್ನು ಹಿಡಿದು ಸಂಗ್ರಹಿಸಿಟ್ಟು ಬಳಕೆ ಮಾಡಲಾಗುತ್ತದೆ.

ಕೋಷ್ಟಕ ೫.೧೩. ಶಾಲಾ ಶೌಚಾಲಯಗಳ ವಿವರ

ಗ್ರಾಮ	ಶೌಚಾಲಯಗಳ ಸಂಖ್ಯೆ	ಬಳಕೆ			ಗುಣಮಟ್ಟ
		ಶಿಕ್ಷಕ	ಬಾಲಕ	ಬಾಲಕಿ	
ಸಾತನೂರು	೬	೨	೨	೨	ಸಾಧಾರಣ
ನಾಗರಸನಕೋಟೆ	೪	೨	೧	೧	ಸಾಧಾರಣ
ದೊಡ್ಡ ಆಲಹಳ್ಳಿ	೪	೨	೧	೧	ಸಾಧಾರಣ
ನಾಯಕನಹಳ್ಳಿ	–	–	–	–	–
ಒಟ್ಟು	೧೪	೦೬	೦೪	೦೪	ಸಾಧಾರಣ

ಸಾತನೂರಿನ ಶಾಲೆಯಲ್ಲಿ ಒಟ್ಟು ೬ ಶೌಚಾಲಯ ಕೊಠಡಿಗಳಿವೆ. ಈ ೬ ಕೊಠಡಿಗಳನ್ನು ಏಕಕಾಲಕ್ಕೆ ನಿರ್ಮಿಸಲಾಗಿದೆ. ಈ ಆರು ಕೊಠಡಿಗಳಲ್ಲಿ ಎರಡು ಶೌಚಾಲಯಗಳನ್ನು ಶಿಕ್ಷಕರು ಬಳಕೆ ಮಾಡುತ್ತಾರೆ. ಇದರಲ್ಲಿ ಒಂದು ಶೌಚಾಲಯವನ್ನು ಶಿಕ್ಷಕರು ಬಳಸಿದರೆ ಮತ್ತೊಂದನ್ನು ಶಿಕ್ಷಕಿಯರು ಬಳಸುತ್ತಾರೆ. ಇವು ಇದ್ದುದರಲ್ಲಿ ಸ್ವಚ್ಛವಾಗಿ ಇರಿಸಿಕೊಳ್ಳಲಾಗಿದೆ. ಈ ಎರಡು ಶೌಚಾಲಯಗಳ ಹೊರತಾಗಿ ಎರಡು ಶೌಚಾಲಯಗಳನ್ನು ಬಾಲಕರು ಹಾಗೂ ಎರಡು ಶೌಚಾಲಯಗಳನ್ನು ಬಾಲಕಿಯರು ಬಳಸುತ್ತಾರೆ. ಆದರೆ ಈ ಶೌಚಾಲಯಗಳು ಸಾಧಾರಣ ಗುಣಮಟ್ಟದಿಂದ ಕೂಡಿದ್ದು ನಿರ್ವಹಣೆಯ ಕೊರತೆಯಿಂದ ಕೂಡಿವೆ. ಬಹುತೇಕ ಬಾಲಕರು ಶೌಚಾಲಯ ಸ್ವಚ್ಛವಾಗಿರದ ಕಾರಣ ಬಯಲು ಶೌಚವನ್ನೇ ಬಳಕೆ ಮಾಡುವುದು ಕಂಡುಬಂದಿತು.

ನಾಗರಸನಕೋಟೆಯ ಶಾಲೆಯಲ್ಲಿ ನಾಲ್ಕು ಶೌಚಾಲಯ ಕೊಠಡಿಗಳಿವೆ. ಇದರಲ್ಲಿ ಒಂದನ್ನು ಶಿಕ್ಷಕರು ಮತ್ತೊಂದನ್ನು ಶಿಕ್ಷಕಿಯರು ಬಳಕೆ ಮಾಡುತ್ತಾರೆ. ಉಳಿದಂತೆ ಒಂದು ಶೌಚಾಲಯ ಕೊಠಡಿಯನ್ನು ಬಾಲಕರಿಗೆಂದು ನಿರ್ಮಿಸಲಾಗಿದೆ. ಶೌಚಾಲಯವನ್ನು ಗಂಡುಮಕ್ಕಳು ಬಳಸುತ್ತಾರೆ.

ಮತ್ತೊಂದು ಕೊಠಡಿಯನ್ನು ಹುಡುಗಿಯರು ಬಳಕೆ ಮಾಡಿಕೊಳ್ಳುತ್ತಾರಾದರೂ ನಿರ್ವಹಣೆಯ ಕೊರತೆಯಿಂದ ಕೂಡಿದೆ.

ದೊಡ್ಡ ಆಲಹಳ್ಳಿಯಲ್ಲಿ ನಾಲ್ಕು ಶೌಚಾಲಯಗಳಿವೆ. ಎರಡು ಶೌಚಾಲಯಗಳನ್ನು ಶಿಕ್ಷಕರು ಹಾಗೂ ಶಿಕ್ಷಕಿಯರು ಬಳಸುತ್ತಾರೆ. ಉಳಿದ ಎರಡು ಶೌಚಾಲಯಗಳಲ್ಲಿ ಒಂದನ್ನು ಬಾಲಕರು, ಇನ್ನೊಂದನ್ನು ಬಾಲಕಿಯರು ಬಳಸುತ್ತಾರೆ. ನಾಯಕನಹಳ್ಳಿಯ ಶಾಲೆಯಲ್ಲಿ ಶೌಚಾಲಯಗಳೇ ಇಲ್ಲ.

ಕೋಷ್ಟಕ ೫.೧೪. ಶಿಕ್ಷಕ ಮತ್ತು ಶಿಕ್ಷಕಿಯರ ಸಂಖ್ಯೆ

ಸಾತನೂರು		ದೊಡ್ಡ ಆಲಹಳ್ಳಿ		ಒಟ್ಟು
ಶಿಕ್ಷಕ	ಶಿಕ್ಷಕಿ	ಶಿಕ್ಷಕ	ಶಿಕ್ಷಕಿ	
೦೩	೦೩	೦೪	೦೧	೧೧
೦೪	೦೨	೦೩	೦೨	೧೧
೦೭	**೦೫**	**೦೭**	**೦೩**	**೨೨**

ಸಾತನೂರು ಹಾಗೂ ದೊಡ್ಡಹಾಲಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಒಟ್ಟು ನಾಲ್ಕು ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರ ಸಂಖ್ಯೆ ಈ ಕೆಳಗಿನಂತಿದೆ.

ಸಾತನೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಸಾತನೂರು ಗ್ರಾಮದಲ್ಲಿ ಮೂರು ಜನ ಶಿಕ್ಷಕ, ಮೂರು ಜನ ಶಿಕ್ಷಕಿಯರು ಕಾರ್ಯ ನಿರ್ವಹಿದರೆ ನಾಗರಸನಕೋಟೆಯಲ್ಲಿ ನಾಲ್ಕು ಜನ ಶಿಕ್ಷಕರು ಇಬ್ಬರು ಶಿಕ್ಷಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಒಟ್ಟು ೭ ಜನ ಶಿಕ್ಷಕರು ೫ ಜನ ಶಿಕ್ಷಕಿಯರಿದ್ದಾರೆ.

ದೊಡ್ಡ ಆಲಹಳ್ಳಿಯಲ್ಲಿ ೪ ಜನ ಶಿಕ್ಷಕರು ಒಬ್ಬ ಶಿಕ್ಷಕಿ ಇದ್ದಾರೆ. ನಾಯಕನಹಳ್ಳಿಯಲ್ಲಿ ಮೂರು ಜನ ಶಿಕ್ಷಕರು ಇಬ್ಬರು ಶಿಕ್ಷಕಿಯರೂ ಇದ್ದಾರೆ. ಅಂದರೆ ಒಟ್ಟು ೭ ಜನ ಶಿಕ್ಷಕ, ೩ ಜನ ಶಿಕ್ಷಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಎರಡು ಗ್ರಾಮಪಂಚಾಯಿತಿ ವ್ಯಾಪ್ತಿಯ ನಾಲ್ಕು ಶಾಲೆಗಳಲ್ಲಿ ೧೪ ಜನ ಶಿಕ್ಷಕರು, ೧೦ ಜನ ಶಿಕ್ಷಕಿಯರು ಒಟ್ಟು ೨೨ ಜನ ಶಿಕ್ಷಕರು ಕಾರ್ಯ ನಿರ್ವಹಿಸುವುದು ಕಂಡುಬರುತ್ತದೆ.

ಕೋಷ್ಟಕ ೫.೧೫. ಉಚಿತ ಪಠ್ಯಪುಸ್ತಕ

ಸಮುದಾಯ	ಸಾತನೂರು ಪಂಚಾಯಿತಿ		ದೊಡ್ಡ ಆಲಹಳ್ಳಿ ಪಂಚಾಯಿತಿ		ಒಟ್ಟು	
	ಕೊಟ್ಟಿದ್ದಾರೆ	ಕೊಟ್ಟಿಲ್ಲ	ಕೊಟ್ಟಿದ್ದಾರೆ	ಕೊಟ್ಟಿಲ್ಲ	ಕೊಟ್ಟಿದ್ದಾರೆ	ಕೊಟ್ಟಿಲ್ಲ
ಪರಿಶಿಷ್ಟ ಜಾತಿ	೨೫ (೧೬.೬೭)		೨೫ (೧೬.೬೭)		೫೦ (೧೦೦)	೦ (೦)
ಪರಿಶಿಷ್ಟ ಪಂಗಡ	೨೫ (೧೬.೬೭)		೨೩ (೧೫.೩೩)	೨ (೧.೩೩)	೪೮ (೯೬)	೨ (೪)
ಹಿಂದುಳಿದ ವರ್ಗ	೭೫ (೫೦)		೭೫ (೫೦)		೧೫೦ (೧೦೦)	೦ (೦)
ಅಲ್ಪ ಸಂಖ್ಯಾತರು	೨೫ (೧೬.೬೭)		೨೫ (೧೬.೬೭)		೫೦ (೧೦೦)	೦ (೦)
	೧೫೦	೦	೧೪೮ (೯೮.೬೭)	೨ (೧.೩೩)	೨೯೮ (೯೯.೩೩)	೨ (೦.೬೭)

೬ರಿಂದ ೧೪ ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತವಾಗಿ ಪಠ್ಯಪುಸ್ತಕಗಳನ್ನು ನೀಡಲಾಗುತ್ತಿದೆ. ನಮ್ಮ ಅಧ್ಯಯನಕ್ಕೆ ಒಳಪಟ್ಟ ಎಲ್ಲಾ ಜಾತಿ ಧರ್ಮಗಳ, ಬಡವ–ಶ್ರೀಮಂತರೆನ್ನದೆ ಎಲ್ಲ ಮಕ್ಕಳಿಗೂ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಲಾಗಿದೆ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯ ಇಬ್ಬರು ವಿದ್ಯಾರ್ಥಿನಿಯರನ್ನು ಹೊರತುಪಡಿಸಿದರೆ ಉಳಿದಂತೆ ಎಲ್ಲ ವಿದ್ಯಾರ್ಥಿನಿಯರು ಉಚಿತ ಪಠ್ಯಪುಸ್ತಕಗಳನ್ನು ಪಡೆದಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ.

ಕೋಷ್ಟಕ ೫.೧೬. ಶಾಲಾಮಕ್ಕಳ ಸಮವಸ್ತ್ರ

ಸಮುದಾಯ	ಸಾತನೂರು ಪಂಚಾಯಿತಿ		ದೊಡ್ಡ ಆಲಹಳ್ಳಿ ಪಂಚಾಯಿತಿ		ಒಟ್ಟು	
	ಕೊಟ್ಟಿದ್ದಾರೆ	ಕೊಟ್ಟಿಲ್ಲ	ಕೊಟ್ಟಿದ್ದಾರೆ	ಕೊಟ್ಟಿಲ್ಲ	ಕೊಟ್ಟಿದ್ದಾರೆ	ಕೊಟ್ಟಿಲ್ಲ
ಪರಿಶಿಷ್ಟ ಜಾತಿ	೨೫ (೧೬.೬೭)	೦	೨೪ (೧೬)	೧ (೦.೬೭)	೪೯ (೧೬.೩೩)	೧ (೦.೩೪)
ಪರಿಶಿಷ್ಟ ಪಂಗಡ	೨೧ (೧೪)	೪ (೨.೬೭)	೨೫ (೧೬.೬೭)	೦	೪೬ (೩೦.೬೭)	೪ (೧.೩೩)
ಹಿಂದುಳಿದ ವರ್ಗ	೭೫ (೫೦)	೦	೭೫ (೫೦)	೦	೧೫೦ (೫೦)	೦ (೦)
ಅಲ್ಪ ಸಂಖ್ಯಾತರು	೨೫ (೧೬.೬೭)	೦	೨೫ (೧೬.೬೭)	೦	೫೦ (೧೬.೬೭)	೦ (೦)
	೧೪೬ (೯೭.೩)	೪ (೨.೬೭)	೧೪೯ (೯೮.೮೩)	೧ (೦.೬೭)	೨೯೫ (೯೮.೩೩)	೫ (೧.೬೭)

ಬಡತನರೇಖೆ ಕೆಳಗಿರುವ ಕುಟುಂಬಗಳ ಮಕ್ಕಳಿಗೆ ಶಾಲೆಗಳಲ್ಲಿ ಸಮವಸ್ತ್ರ ವಿತರಿಸಲಾಗುತ್ತಿದೆ. ಮಕ್ಕಳಲ್ಲಿ ಸಮಾನತೆ ಕಾಪಾಡುವ ನಿಟ್ಟಿನಲ್ಲಿ ನಗರದ ಕಾನ್ವೆಂಟ್‌ಗಳಲ್ಲಿ ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ. ಸಮವಸ್ತ್ರದ ಖರ್ಚನ್ನು ಪೋಷಕರು ಕೊಡಬೇಕಾಗುತ್ತದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಎರಡು ನೆಲೆಗಳಿಂದ ಮಕ್ಕಳಿಗೆ ಸಮವಸ್ತ್ರ ವಿತರಿಸುತ್ತಿವೆ. ಒಂದು ಬಡತನದ ಕುಟುಂಬಗಳ ಮಕ್ಕಳು ಶಾಲಾಸಮವಸ್ತ್ರಗಳನ್ನು ಕೊಳ್ಳುವಷ್ಟು ಸ್ಥಿತಿವಂತರಾಗಿಲ್ಲ. ಬಡವರು ಮತ್ತು ಶ್ರೀಮಂತ ಕುಟುಂಬ ಮಕ್ಕಳ ಮಧ್ಯೆ ಸಮಾನತೆ ತರಲು ಹಾಗೂ ಕುಟುಂಬದ ಆರ್ಥಿಕ ಹೊರೆ ಕಡಿಮೆ ಮಾಡಲು ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ. ಅಧ್ಯಯನಕ್ಕೆ ಒಳಪಟ್ಟ ೨೯೫ ಮಕ್ಕಳು ಉಚಿತ ಸಮವಸ್ತ್ರ ಪಡೆದಿದ್ದಾರೆ. ಉಳಿದಂತೆ ೫ ವಿದ್ಯಾರ್ಥಿನಿಯರು ಸಮವಸ್ತ್ರ ಪಡೆದಿಲ್ಲ ಎಂದು ತಿಳಿಸಿದ್ದಾರೆ.

ಕೋಷ್ಟಕ ೫.೧೭. ಬಿಸಿಯೂಟದ ಗುಣಮಟ್ಟ

ಸಮುದಾಯಗಳು	ಸಾತನೂರು ಪಂಚಾಯಿತಿ		ದೊಡ್ಡ ಆಲಹಳ್ಳಿ ಪಂಚಾಯಿತಿ		ಒಟ್ಟು	
	ಉತ್ತಮ ವಾಗಿದೆ	ಉತ್ತಮ ವಾಗಿಲ್ಲ	ಉತ್ತಮ ವಾಗಿದೆ	ಉತ್ತಮ ವಾಗಿಲ್ಲ	ಉತ್ತಮ ವಾಗಿದೆ	ಉತ್ತಮ ವಾಗಿಲ್ಲ
ಪರಿಶಿಷ್ಟ ಜಾತಿ	೧೯ (೧೨.೬)	೬ (೪)	೨೧ (೧೪)	೪ (೨.೬೭)	೪೦ (೧೩.೩೩)	೧೦ (೩.೩೩)
ಪರಿಶಿಷ್ಟ ಪಂಗಡ	೨೪ (೧೬)	೧ (೦.೬೭)	೨೦ (೧೩.೩೩)	೫ (೩.೩೩)	೪೪ (೧೪.೬೭)	೬ (೨)
ಹಿಂದುಳಿದ ವರ್ಗ	೫೩ (೩೫.೩೩)	೨೨ (೧೪.೬೪)	೬೪ (೪೨.೬೭)	೧೧ (೭.೩೩	೧೧೭ (೩೯)	೩೩ (೧೧)
ಅಲ್ಪ ಸಂಖ್ಯಾತರು	೨೩ (೧೫.೩)	೨ (೧.೩೩)	೨೨ (೧೪.೬೭)	೩ (೨)	೪೫ (೧೫)	೫ (೧.೬೭)
	೧೧೯ (೭೯.೩)	೩೧ (೨೦.೭)	೧೨೭ (೮೪.೬೭)	೨೩ (೧೫.೩೩)	೨೪೬ (೮೨)	೫೪ (೧೮)

ಗ್ರಾಮೀಣ ಪ್ರದೇಶದಲ್ಲಿ ಶಾಲಾಮಕ್ಕಳ ಹಾಜರಾತಿ ಹೆಚ್ಚಿಸಲು ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಶಾಲಾಮಕ್ಕಳಲ್ಲಿ ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತದೆ. ಬಿಸಿಯೂಟದ ಉದ್ದೇಶ ಕೇವಲ ಹಾಜರಾತಿ ಮತ್ತು ಶಿಕ್ಷಣ ಗುಣಮಟ್ಟ ಹೆಚ್ಚಿಸುವುದಲ್ಲದೆ ಜೊತೆಗೆ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುವುದಾಗಿದೆ. ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡಲಾಗುತ್ತದೆ. ಆದರೆ ಮಕ್ಕಳಿಗೆ ಕಳಪೆ ಗುಣಮಟ್ಟದ ಊಟ ನೀಡಲಾಗುತ್ತದೆ ಎಂಬ ಅಪಸ್ವರವು ಕೇಳಿಬರುತ್ತಿದೆ. ಅಧ್ಯಯನಕ್ಕೆ ಒಳಪಡಿಸಿದ ೩೦೦ ವಿದ್ಯಾರ್ಥಿನಿಯರಲ್ಲಿ ಶೇ. ೮೦ರಷ್ಟು ವಿದ್ಯಾರ್ಥಿನಿಯರು ಬಿಸಿಯೂಟ ಗುಣಮಟ್ಟ ಉತ್ತಮವಾಗಿದೆ ಎಂದು ತಿಳಿಸಿದರೆ. ಶೇ. ೨೦ರಷ್ಟು ಮಕ್ಕಳು ಗುಣಮಟ್ಟದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಪರಿಶಿಷ್ಟ ಜಾತಿಯ ಶೇ. ೨೦ರಷ್ಟು ಹಾಗೂ ಹಿಂದುಳಿದ ವರ್ಗಗಳ ಶೇ. ೨೨ರಷ್ಟು ವಿದ್ಯಾರ್ಥಿನಿಯರು ಬಿಸಿಯೂಟದ ಗುಣಮಟ್ಟದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಪ್ರತಿಭಾಕಾರಂಜಿ


ಮಕ್ಕಳಲ್ಲಿರುವ ಪ್ರತಿಭೆಗಳನ್ನು ಗುರುತಿಸಿದ ನೆಲೆಯಲ್ಲಿ ಪ್ರತಿಭಾಕಾರಂಜಿ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ಇದೊಂದು ಸಾಂಸ್ಕೃತಿಕ ಕಾರ್ಯಕ್ರಮ ಅಂತರ್‌ಶಾಲಾಮಟ್ಟದಲ್ಲಿ ಪ್ರತಿಭಾ ಕಾರಂಜಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ವಿದ್ಯಾರ್ಥಿನಿಯರಲ್ಲಿ ೨೪೪ ಅಂದರೆ ಶೇ. ೮೧.೩೩ರಷ್ಟು ವಿದ್ಯಾರ್ಥಿನಿಯರು ಪ್ರತಿಭಾಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಪರಿಶಿಷ್ಟ ಜಾತಿಯ ಶೇ. ೯೪ರಷ್ಟು ಮಕ್ಕಳು ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಪರಿಶಿಷ್ಟ ಪಂಗಡದ ಶೇ. ೭೪ರಷ್ಟು ಮಕ್ಕಳು

ಕೋಷ್ಟಕ ೫.೧೮. ಪ್ರತಿಭಾಕಾರಂಜಿ

ಸಮುದಾಯ	ಸಾತನೂರು ಪಂಚಾಯಿತಿ		ದೊಡ್ಡ ಆಲಹಳ್ಳಿ ಪಂಚಾಯಿತಿ		ಒಟ್ಟು	
	ಭಾಗವಹಿಸುವಿಕೆ	ಭಾಗವಹಿಸದಿರುವಿಕೆ	ಭಾಗವಹಿಸುವಿಕೆ	ಭಾಗವಹಿಸದಿರುವಿಕೆ	ಭಾಗವಹಿಸುವಿಕೆ	ಭಾಗವಹಿಸದಿರುವಿಕೆ
ಪರಿಶಿಷ್ಟ ಜಾತಿ	೨೩ (೧೫.೩೩)	೨ (೧.೩೩)	೨೪ (೧೬)	೧ (೦.೬೭)	೪೭ (೨೯)	೩ (೧)
ಪರಿಶಿಷ್ಟ ಪಂಗಡ	೧೩ (೮.೬೭)	೧೨ (೮)	೨೪ (೧೬)	೧ (೦.೬೭)	೩೭ (೧೨.೩೩)	೧೩ (೪.೩೩)
ಹಿಂದುಳಿದ ವರ್ಗ	೬೩ (೪೨)	೧೨ (೮)	೫೩ (೩೫.೩೩)	೨೨ (೧೪.೬೭)	೧೧೬ (೩೮.೬೭)	೩೪ (೧೧.೩೩)
ಅಲ್ಪ ಸಂಖ್ಯಾತರು	೨೨ (೧೪.೬೭)	೩ (೨)	೨೨ (೧೪.೬೭)	೩ (೨)	೪೪ (೧೪.೬೭)	೬ (೨)
	೧೨೧ (೮೦.೬೭)	೨೯ (೧೯.೩೩)	೧೨೩ (೮೨)	೨೭ (೧೮)	೨೪೪ (೮೧.೩೩)	೫೬ (೧೮.೬೭)

ಭಾಗವಹಿಸಿದರೆ, ಅಲ್ಪಸಂಖ್ಯಾತ ಶೇ. ೪೪ರಷ್ಟು ಮಕ್ಕಳು ಭಾಗವಹಿಸಿದ್ದಾರೆ. ಹಿಂದುಳಿದ ವರ್ಗಗಳ ಶೇ. ೭೭.೩೩ರಷ್ಟು ಮಕ್ಕಳು ಭಾಗವಹಿಸುತ್ತಾರೆ.

ಲಂಬಚಿತ್ರ ೫.೧೮. ಪ್ರತಿಭಾಕಾರಂಜಿ ಪ್ರಮಾಣ






ಕೋಷ್ಟಕ ೫.೧೯. ಚಿಣ್ಣರ ಜಿಲ್ಲಾ ದರ್ಶನ

ಸಮುದಾಯ	ಸಾತನೂರು ಪಂಚಾಯಿತಿ		ದೊಡ್ಡ ಆಲಹಳ್ಳಿ ಪಂಚಾಯಿತಿ		ಒಟ್ಟು	
	ಭಾಗವಹಿಸುವಿಕೆ	ಭಾಗವಹಿಸದಿರುವಿಕೆ	ಭಾಗವಹಿಸುವಿಕೆ	ಭಾಗವಹಿಸದಿರುವಿಕೆ	ಭಾಗವಹಿಸುವಿಕೆ	ಭಾಗವಹಿಸದಿರುವಿಕೆ
ಪರಿಶಿಷ್ಟ ಜಾತಿ	೮ (೫.೩೩)	೧೭ (೧೧.೩೩)	೧೯ (೬.೩೩)	೬ (೪)	೨೭ (೯)	೨೩ (೭.೬೭)
ಪರಿಶಿಷ್ಟ ಪಂಗಡ	೫ (೩.೩೩)	೨೦ (೧೩.೩೩)	೨೨ (೧೪.೬೭)	೩ (೨)	೨೭ (೯)	೨೩ (೭.೬೭)
ಹಿಂದುಳಿದ ವರ್ಗ	೪೯ (೩೨.೬೭)	೨೬ (೧೭.೩೩)	೫೯ (೩೯.೩೩)	೧೬ (೧೦.೬೭)	೧೦೮ (೩೬)	೪೨ (೧೪)
ಅಲ್ಪ ಸಂಖ್ಯಾತರು	೨೦ (೧೩.೩೩)	೫ (೩.೩೩)	೧೪ (೯.೩೩)	೧೧ (೭.೩)	೩೪ (೧೧.೩೩)	೧೬ (೫.೩೩)
	೮೨ (೫೪.೬೭)	**೬೮ (೪೫.೩೩)**	**೧೧೪ (೭೬)**	**೩೬ (೨೪)**	**೧೯೬ (೬೫.೩೩)**	**೧೦೪ (೩೪.೬೭)**

ಪಠ್ಯೇತರ ಚಟುವಟಿಕೆಗಳ ಅಂಗವಾಗಿ ಮಕ್ಕಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗುತ್ತದೆ. ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಹಳ್ಳಿಗಳಲ್ಲಿ ವಾರ್ಷಿಕ ಪ್ರವಾಸವೆಂದು ಬೇಲೂರು, ಹಳೇಬಿಡು, ದೇವರಾಯನದುರ್ಗ, ಮಂಚನಬೆಲೆ ಮುಂತಾದ ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಕೈಗೊಳ್ಳಲಾಗಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ವಿದ್ಯಾರ್ಥಿನಿಯರಲ್ಲಿ ೧೯೬ರ ವಿದ್ಯಾರ್ಥಿನಿಯರು ಎಂದರೆ ಶೇ. ೬೫.೩೩ರಷ್ಟು ವಿದ್ಯಾರ್ಥಿನಿಯರನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗಿದೆ. ಇಂತಹ ಜಿಲ್ಲಾ ದರ್ಶನ ಪ್ರವಾಸಕ್ಕೆ ಪರಿಶಿಷ್ಟ ಜಾತಿಯ ೨೭ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೨೭ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೩೪ ಮಕ್ಕಳು ಹಾಗೂ ಹಿಂದುಳಿದ ವರ್ಗಗಳ ೧೦೮ ವಿದ್ಯಾರ್ಥಿನಿಯರು ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಕೈಗೊಳ್ಳಲಾಗಿದೆ.

ಲಂಬಚಿತ್ರ ೫.೧೯. ಚಿಣ್ಣರ ಜಿಲ್ಲಾ ದರ್ಶನ ಪ್ರಮಾಣ







ಕೋಷ್ಟಕ ೫.೨೦. ವಿದ್ಯಾರ್ಥಿ ವೇತನ ಪಡೆದವರು

ಸಮುದಾಯ	ಸಾತನೂರು ಪಂಚಾಯಿತಿ		ದೊಡ್ಡ ಆಲಹಳ್ಳಿ ಪಂಚಾಯಿತಿ		ಒಟ್ಟು	
	ವಿ.ವೇ. ಪಡೆದವರು	ವಿ.ವೇ. ಪಡೆಯದವರು	ವಿ.ವೇ. ಪಡೆದವರು	ವಿ.ವೇ. ಪಡೆಯದವರು	ವಿ.ವೇ. ಪಡೆದವರು	ವಿ.ವೇ. ಪಡೆಯದವರು
ಪರಿಶಿಷ್ಟ ಜಾತಿ	೧೯ (೧೨.೬೭)	೬ (೪)	೨೧ (೧೪)	೪ (೨.೬೭)	೪೦ (೨೬.೬೭)	೧೦ (೩.೩೩)
ಪರಿಶಿಷ್ಟ ಪಂಗಡ	೨೦ (೧೩.೩೩)	೫ (೩.೩೩)	೨೪ (೧೬)	೧ (೦.೬೭)	೪೪ (೧೪.೬೭)	೬ (೨)
ಹಿಂದುಳಿದ ವರ್ಗ	೪೯ (೩೨.೬೭)	೨೬ (೧೭.೩೩)	೬೫ (೪೩.೩೩)	೧೦ (೬.೬೭)	೧೧೪ (೩೮)	೩೬ (೧೨)
ಅಲ್ಪ ಸಂಖ್ಯಾತರು	೨೫ (೧೬.೬೭)	೦	೧೫ (೧೦)	೧೦ (೬.೬೭)	೪೦ (೧೩.೩೩)	೧೦ (೩.೩೩)
	೧೧೩ (೭೫.೩೩)	೩೭ (೨೪.೬೭)	೧೨೫ (೮೩.೩೩)	೨೫ (೧೬.೬೭)	೨೩೮ (೭೯.೩೩)	೬೨ (೨೦.೬೭)

ವಿದ್ಯಾರ್ಥಿಗಳ ಶಿಕ್ಷಣದ ಪ್ರೋತ್ಸಾಹವಾಗಿ ಓದು ಬರಹ ಅಗತ್ಯಗಳನ್ನು ಕಂಡುಕೊಳ್ಳಲು ಮತ್ತು ಪೋಷಕರ ಆರ್ಥಿಕ ಹೊರೆ ಸ್ವಲ್ಪ ಕಡಿಮೆ ಮಾಡಲು ಪ್ರತಿ ವರ್ಷವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ/ಪಂಗಡದ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಎಲ್ಲಾ ಜಾತಿಯ ಬಡತನರೇಖೆ ಕೆಳಗಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದೆ. ಅಧ್ಯಯನಕ್ಕೆ ಒಳಪಟ್ಟ ಶೇ. ೭೯ರಷ್ಟು ವಿದ್ಯಾರ್ಥಿನಿಯರು ಶಿಷ್ಯವೇತನ ಪಡೆದಿರುವುದಾಗಿ ತಿಳಿಸಿದ್ದಾರೆ. ಪರಿಶಿಷ್ಟ ಜಾತಿಯ ಶೇ. ೮೦ರಷ್ಟು ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ಶೇ. ೮೮ರಷ್ಟು ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತರು ಶೇ. ೮೦ರಷ್ಟು ಹಾಗೂ ಹಿಂದುಳಿದ ಶೇ. ೭೬ರಷ್ಟು ವಿದ್ಯಾರ್ಥಿನಿಯರು ಶಿಷ್ಯವೇತನ ಪಡೆದಿದ್ದಾರೆ.

ಲಂಬಚಿತ್ರ ೫.೨೦. ವಿದ್ಯಾರ್ಥಿ ವೇತನ ಪಡೆದವರ ಪ್ರಮಾಣ






ಕೋಷ್ಟಕ ೫.೨೧. ವಿದ್ಯಾರ್ಥಿ ವಿದ್ಯಾರ್ಥಿನಿಯರ ಲಿಂಗಾನುಪಾತ

ತರಗತಿ	ಸಾತನೂರು ಪಂಚಾಯಿತಿ			ದೊಡ್ಡ ಆಲಹಳ್ಳಿ ಪಂಚಾಯಿತಿ			ಒಟ್ಟು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೪ನೇ ತರಗತಿ	೩೮	೩೩	೭೧	೫೦	೪೩	೯೩	೮೮	೭೬	೧೬೪
೫ನೇ ತರಗತಿ	೨೯	೨೭	೫೬	೫೩	೩೪	೮೭	೮೨	೬೧	೧೪೩
೬ನೇ ತರಗತಿ	೨೭	೩೯	೬೬	೪೬	೪೨	೮೮	೭೩	೮೧	೧೫೪
೭ನೇ ತರಗತಿ	೩೮	೪೦	೭೮	೪೬	೩೩	೭೯	೮೪	೭೩	೧೫೭
ಒಟ್ಟು	೧೩೨	೧೩೯	೨೭೧	೧೯೫	೧೫೨	೩೪೭	೩೨೭	೨೯೧	೬೧೮

ಅಧ್ಯಯನಕ್ಕೆ ಎರಡು ಪಂಚಾಯಿತಿಗಳ ಸಾತನೂರು, ನಾಗರಸನಕೋಟೆ, ದೊಡ್ಡ ಆಲಹಳ್ಳಿ ಹಾಗೂ ನಾಯಕನಹಳ್ಳಿ ಎಂಬ ನಾಲ್ಕು ಹಳ್ಳಿಗಳಿಂದ ೪ನೇ, ೫ನೇ, ೬ನೇ ಮತ್ತು ೭ನೇ ತರಗತಿಗಳಿಂದ ಒಟ್ಟು ೩೦೦ ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಳಪಟ್ಟಿರುವ ವಿದ್ಯಾರ್ಥಿನಿಯರ ತರಗತಿಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸಂಖ್ಯೆಗಳ ಪ್ರಮಾಣ ಗಮನಿಸಲಾಗಿದೆ. ಅಧ್ಯಯನಕ್ಕೆ ಒಳಪಟ್ಟ ಎರಡು ಪಂಚಾಯಿತಿಗಳ ನಾಲ್ಕು ಶಾಲೆಗಳ ೪ನೇ, ೫ನೇ, ೬ನೇ ಮತ್ತು ೭ನೇ ತರಗತಿಗಳಲ್ಲಿ ಒಟ್ಟು ೬೧೮ ವಿದ್ಯಾರ್ಥಿಗಳಿದ್ದರೆ,

ಲಂಬಚಿತ್ರ ೫.೨೨. ವಿದ್ಯಾರ್ಥಿ ವಿದ್ಯಾರ್ಥಿನಿಯರ ಲಿಂಗಾನುಪಾತ ಪ್ರಮಾಣ





ಇದರಲ್ಲಿ ಲಿಂಗವಾರು ಗಮನಿಸಿದಾಗ ೩೨೭ ವಿದ್ಯಾರ್ಥಿಗಳಿದ್ದರೆ(ಶೇ. ೫೨.೯೨), ೨೯೧ ವಿದ್ಯಾರ್ಥಿನಿಯರಿದ್ದಾರೆ(ಶೇ. ೪೭.೦೮). ವಿದ್ಯಾರ್ಥಿಗಳ ಸಂಖ್ಯೆ ಅಧಿಕವಿದೆ. ಅಧ್ಯಯನದಲ್ಲಿ ೩೬ ವಿದ್ಯಾರ್ಥಿನಿಯರು ಅಮರ್ತ್ಯ ಸೇನ್ ಹೇಳಿರುವಂತೆ ಕಾಣೆಯಾದ ವಿದ್ಯಾರ್ಥಿನಿಯರಾಗಿದ್ದಾರೆ. ಸಾತನೂರಿನಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಸಮಪ್ರಮಾಣದಲ್ಲಿದ್ದರೆ, ದೊಡ್ಡ ಆಲಹಳ್ಳಿಯಲ್ಲಿ ವಿದ್ಯಾರ್ಥಿನಿಯರು ವಿದ್ಯಾರ್ಥಿಗಳಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ.

ಶಿಕ್ಷಣದ ಗುಣಮಟ್ಟ

ವಿದ್ಯಾರ್ಥಿನಿಯರ ಶಿಕ್ಷಣದ ಗುಣಮಟ್ಟವನ್ನು ಅವರು ಪಡೆಯುತ್ತಿರುವ ಅಂಕಗಳ ಮೇಲೆ ನಿರ್ಧರಿಸಲಾಗುತ್ತಿತ್ತು. ಹೆಚ್ಚು ಅಂಕ ಪಡೆದವರು ಬುದ್ಧಿವಂತರೆಂದು ಕಡಿಮೆ ಅಂಕಗಳನ್ನು ಪಡೆದವರು ಸಾಧಾರಣ ಬುದ್ಧಿಮಟ್ಟವನ್ನು ಹೊಂದಿದ ವಿದ್ಯಾರ್ಥಿಗಳೆಂದು ಪರಿಗಣಿಸಲಾಗುತ್ತಿತ್ತು. ಮಕ್ಕಳಲ್ಲಿ ಈ ಕೀಳರಿಮೆ ಹೋಗಲಾಡಿಸಲು ಹಾಗೂ ಎಲ್ಲಿರಗೂ ಶಿಕ್ಷಣ ದಕ್ಕುವಂತಾಗಲು ಪ್ರತಿವರ್ಷ ಎಲ್ಲಾ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆ ಗೊಳಿಸಲಾಗುತ್ತಿದೆ. ಶಿಕ್ಷಣದ ಗುಮಮಟ್ಟವನ್ನು 'ಎ', 'ಬಿ', 'ಸಿ', ಶ್ರೇಣಿ(ಗ್ರೇಡ್)ಗಳಲ್ಲಿ ಪರಿಗಣಿಸಿ ಮುಂದಿನ ತರಗತಿಗೆ ಉತ್ತೀರ್ಣ ಮಾಡಲಾಗುತ್ತಿದೆ.

ಸಂಶೋಧನಾ ಅಧ್ಯಯನದಲ್ಲಿ ಯಾವ ಯಾವ ಸಮುದಾಯದ ಮಕ್ಕಳು ಯಾವ ಯಾವ ಶ್ರೇಣಿಯನ್ನು ಪಡೆಯುತ್ತಿದ್ದಾರೆ ಎಂಬುದನ್ನು ತಿಳಿಯುವಲ್ಲಿ ನಾಲ್ಕು ಶಾಲೆಗಳಿಂದ ೩೦೦ ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ(ಕೋಷ್ಟಕ ೫.೨೨).

ನಾಲ್ಕನೇ ತರಗತಿಯ ೭೨ ವಿದ್ಯಾರ್ಥಿನಿಯರು, ಐದನೇ ತರಗತಿಯ ೭೨ ವಿದ್ಯಾರ್ಥಿನಿಯರು, ಆರನೇ ತರಗತಿಯ ೭೨ ವಿದ್ಯಾರ್ಥಿನಿಯರು ಹಾಗೂ ಏಳನೇ ತರಗತಿಯ ೮೪ ವಿದ್ಯಾರ್ಥಿನಿಯರನ್ನು ಎರಡು ಗ್ರಾಮಪಂಚಾಯಿತಿಗಳಿಂದ ಆಯ್ಕೆ ಮಾಡಲಾಗಿದೆ.

ನಾಲ್ಕನೇ ತರಗತಿಯ ೭೨ ವಿದ್ಯಾರ್ಥಿನಿಯರಲ್ಲಿ ೩೨ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದರೆ, ೨೨ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೧೮ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿರುವುದು ಅಂಕಿ ಅಂಶಗಳಿಂದ ಗಮನಿಸಬಹುದು.

ಪರಿಶಿಷ್ಟ ಜಾತಿಯ ೪ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೬ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೪ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದಾರೆ. ಹಿಂದುಳಿದ ವರ್ಗದ ೧೮ ವಿದ್ಯಾರ್ಥಿನಿಯರು 'ಎ' ಶ್ರೇಣಿಯನ್ನು ಹೊಂದಿದ್ದಾರೆ.

ಹಾಗೆಯೇ 'ಬಿ' ಶ್ರೇಣಿ ಪಡೆದ ೨೫ ವಿದ್ಯಾರ್ಥಿನಿಯರಲ್ಲಿ ಪರಿಶಿಷ್ಟ ಜಾತಿಯ ೩ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೩ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೬ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೧೦ ವಿದ್ಯಾರ್ಥಿನಿಯರು 'ಬಿ' ಶ್ರೇಣಿಯನ್ನು ಪಡೆದಿದ್ದಾರೆ.

ಇನ್ನು 'ಸಿ' ಶ್ರೇಣಿ ಪಡೆದ ವಿದ್ಯಾರ್ಥಿನಿಯರಲ್ಲಿ ಪರಿಶಿಷ್ಟ ಜಾತಿಯ ೫ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೩ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೨ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೮ ವಿದ್ಯಾರ್ಥಿನಿಯರು 'ಸಿ' ಶ್ರೇಣಿಯನ್ನು ಪಡೆದಿದ್ದಾರೆ.

ಒಟ್ಟಾರೆಯಾಗಿ ನಾಲ್ಕನೇ ತರಗತಿಯಲ್ಲಿ 'ಎ' ಶ್ರೇಣಿ ಪಡೆಯುವಲ್ಲಿ ಹಿಂದುಳಿದ ವರ್ಗದ(ಒಬಿಸಿ) ವಿದ್ಯಾರ್ಥಿನಿಯರು ಮುಂದಿದ್ದಾರೆ. ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿನಿಯರು ಹಿಂದಿರುವುದು ಅಂಕಿ ಅಂಶಗಳಿಂದ ಕಂಡುಬರುತ್ತದೆ.

ಐದನೇ ತರಗತಿಯ ವಿದ್ಯಾರ್ಥಿನಿಯರ ಶ್ರೇಣಿಗಳನ್ನು ಪರಿಶೀಲಿಸಲಾಗಿ ಒಟ್ಟು ೭೨ ವಿದ್ಯಾರ್ಥಿನಿಯರಲ್ಲಿ ೧೨ ವಿದ್ಯಾರ್ಥಿನಿಯರು ಪರಿಶಿಷ್ಟ ಜಾತಿಗೆ ಸೇರಿದ ಹಾಗೂ ಪರಿಶಿಷ್ಟ ಪಂಗಡದ ಗುಂಪಿಗೆ ೧೨ ವಿದ್ಯಾರ್ಥಿನಿಯರು ಸೇರಿದ್ದಾರೆ. ಹಾಗೆಯೇ ಹಿಂದುಳಿದ ೧೮ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ಸಮುದಾಯದ ೬ ವಿದ್ಯಾರ್ಥಿನಿಯರು ಇದ್ದು, ಒಟ್ಟಾರೆ ೭೨ ವಿದ್ಯಾರ್ಥಿನಿಯರಲ್ಲಿ ೨೫ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದಾರೆ. ೨೭ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೨೦ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿರುವುದು ಕಂಡುಬರುತ್ತದೆ.

ಪರಿಶಿಷ್ಟ ಜಾತಿಯ ४ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೨ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೫ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೧೪ ವಿದ್ಯಾರ್ಥಿನಿಯರು 'ಎ' ಶ್ರೇಣಿಯನ್ನು ಪಡೆದಿದ್ದಾರೆ.

ಹಾಗೆಯೇ ಪರಿಶಿಷ್ಟ ಜಾತಿಯ ೫ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೬ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೪ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೧೨ ವಿದ್ಯಾರ್ಥಿನಿಯರು 'ಬಿ' ಶ್ರೇಣಿಯನ್ನು ಪಡೆದಿದ್ದಾರೆ.

ಇನ್ನು 'ಸಿ' ಶ್ರೇಣಿ ಪಡೆದ ವಿದ್ಯಾರ್ಥಿನಿಯರಲ್ಲಿ ಕ್ರಮವಾಗಿ ಪರಿಶಿಷ್ಟ ಜಾತಿಯ ೩ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೪ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೩ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೧೦ ವಿದ್ಯಾರ್ಥಿನಿಯರು 'ಸಿ' ಶ್ರೇಣಿಯನ್ನು ಪಡೆದಿದ್ದಾರೆ.

ಐದನೇ ತರಗತಿಯಲ್ಲಿ 'ಬಿ' ಶ್ರೇಣಿ ಪಡೆಯುವಲ್ಲಿ ಹಿಂದುಳಿದ ವರ್ಗದ ಸಮುದಾಯದ ವಿದ್ಯಾರ್ಥಿನಿಯರು ಮುಂದಿದ್ದಾರೆ. ಸಾತನೂರು ಗ್ರಾಮಪಂಚಾಯಿತಿ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಮುಂದಿದ್ದಾರೆ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ವಿದ್ಯಾರ್ಥಿನಿಯರು ಹಿಂದಿರುವುದು ಅಂಕಿ ಅಂಶಗಳಿಂದ ಕಂಡುಬರುತ್ತದೆ.

ಆರನೇ ತರಗತಿಯ ವಿದ್ಯಾರ್ಥಿನಿಯರ ಶ್ರೇಣಿಗಳನ್ನು ಗಮನಿಸಲು ಇಲ್ಲಿಯೂ ೭೨ ವಿದ್ಯಾರ್ಥಿನಿಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ೨೯ ವಿದ್ಯಾರ್ಥಿನಿಯರು ಎ

ಶ್ರೇಣಿ ಪಡೆದಿದ್ದಾರೆ. ೨೧ ವಿದ್ಯಾರ್ಥಿನಿಯರು ಬಿ ಶ್ರೇಣಿ ಪಡೆದಿದ್ದಾರೆ. ೨೨ ವಿದ್ಯಾರ್ಥಿನಿಯರು ಸಿ ಶ್ರೇಣಿಯನ್ನು ಹೊಂದಿದ್ದಾರೆ.

ಪರಿಶಿಷ್ಟ ಜಾತಿಯ ೩ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೪ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೨ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೨೦ ವಿದ್ಯಾರ್ಥಿನಿಯರು 'ಎ' ಶ್ರೇಣಿಯನ್ನು ಪಡೆದಿದ್ದಾರೆ.

ಹಾಗೆಯೇ 'ಬಿ' ಶ್ರೇಣಿಯನ್ನು ಪಡೆದವರು ಕ್ರಮವಾಗಿ ಪರಿಶಿಷ್ಟ ಜಾತಿಯ ೩ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೪ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೨ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೭ ವಿದ್ಯಾರ್ಥಿನಿಯರಿದ್ದಾರೆ.

ಇನ್ನು 'ಸಿ' ಶ್ರೇಣಿ ಪಡೆದ ವಿದ್ಯಾರ್ಥಿನಿಯರಲ್ಲಿ ಪರಿಶಿಷ್ಟ ಜಾತಿಯ ೫ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೬ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೨ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೯ ವಿದ್ಯಾರ್ಥಿನಿಯರು 'ಸಿ' ಶ್ರೇಣಿಯನ್ನು ಪಡೆದಿದ್ದಾರೆ.

ಆರನೇ ತರಗತಿಯಲ್ಲಿಯೂ ಹಿಂದುಳಿದ ವರ್ಗ(ಒಬಿಸಿ)ದ ಸಮುದಾಯದ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಇತರೆ ಸಮುದಾಯಗಳಿಗಿಂತ ಮುಂದಿರುವುದು ಅಂಕಿ ಅಂಶಗಳಿಂದ ಗಮನಿಸಬಹುದಾಗಿದೆ.

ಸಾತನೂರು ಮತ್ತು ದೊಡ್ಡ ಆಲಹಳ್ಳಿ ಈ ಎರಡು ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿನ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಸಮಪ್ರಮಾಣದಲ್ಲಿದ್ದಾರೆ.

ಏಳನೇ ತರಗತಿಯಲ್ಲಿ ಒಟ್ಟು ೮೪ ವಿದ್ಯಾರ್ಥಿನಿಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇವರಲ್ಲಿ ೩೪ ವಿದ್ಯಾರ್ಥಿನಿಯರು ಎ ಶ್ರೇಣಿ ಪಡೆದಿದ್ದಾರೆ. ೨೯ ಮತ್ತು ೨೧ ವಿದ್ಯಾರ್ಥಿನಿಯರು ಕ್ರಮವಾಗಿ ಬಿ ಮತ್ತು ಸಿ ಶ್ರೇಣಿ ಪಡೆದಿರುವುದು ಕಂಡುಬರುತ್ತದೆ.


ಪರಿಶಿಷ್ಟ ಜಾತಿಯ ೫ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೪ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೫ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೨೦ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಎಲ್ಲಾ ಸಮುದಾಯದ ವಿದ್ಯಾರ್ಥಿನಿಯರು ಸ್ವಲ್ಪ ಸುಧಾರಣೆ ಕಂಡಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಸಮುದಾಯದ ೧೫ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದಾರೆ. ಹಿಂದುಳಿದ ವರ್ಗದ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಇಲ್ಲಿಯೂ ಮುಂದಿದ್ದಾರೆ.

ಕೋಷ್ಟಕ ೫.೨೦. ಶಿಕ್ಷಣದ ಗುಣಮಟ್ಟ

ತರಗತಿ	ಶ್ರೇಣಿ	ಸಾತನೂರು ಪಂಚಾಯಿತಿ				ದೊಡ್ಡ ಆಲನಳ್ಳಿ ಪಂಚಾಯಿತಿ				ಒಟ್ಟು				ಒಟ್ಟು
		ಪ.ಜಾ	ಪ.ಪಂ.	ಒಬಿಸಿ	ಅಲ್ಪ ಸಂ.	ಪ.ಜಾ	ಪ.ಪಂ.	ಒಬಿಸಿ	ಅಲ್ಪ ಸಂ.	ಪ.ಜಾ	ಪ.ಪಂ.	ಒಬಿಸಿ	ಅಲ್ಪ ಸಂ.	
೪ನೇ ತರಗತಿ	ಒಟ್ಟು	೬	೬	೧೮	೬	೬	೬	೧೮	೬	೧೨	೧೨	೩೬	೧೨	೭೨
	ಎ	೨	೩	೮	೨	೨	೩	೧೦	೨	೪	೬	೧೮	೪	೩೨
	ಬಿ	೧	೧	೭	೩	೨	೨	೩	೩	೩	೩	೧೦	೬	೨೨
	ಸಿ	೩	೨	೩	೧	೨	೧	೫	೧	೫	೩	೮	೨	೧೮
೫ನೇ ತರಗತಿ	ಒಟ್ಟು	೬	೬	೧೮	೬	೬	೬	೧೮	೬	೧೨	೧೨	೩೬	೧೨	೭೨
	ಎ	೩	೧	೭	೩	೧	೧	೭	೨	೪	೨	೧೪	೫	೨೫
	ಬಿ	೨	೨	೪	೨	೩	೪	೮	೨	೫	೬	೧೨	೪	೨೭
	ಸಿ	೧	೩	೭	೧	೨	೧	೩	೨	೩	೪	೧೦	೩	೨೦
೬ನೇ ತರಗತಿ	ಒಟ್ಟು	೬	೬	೧೮	೬	೬	೬	೧೮	೬	೧೨	೧೨	೩೬	೧೨	೭೨
	ಎ	೧	೨	೧೧	೧	೨	೨	೯	೧	೩	೪	೨೦	೨	೨೯
	ಬಿ	೩	೨	೨	೪	೧	೦	೫	೪	೪	೨	೭	೮	೨೧
	ಸಿ	೨	೨	೫	೧	೩	೪	೪	೧	೫	೬	೯	೨	೨೨
೭ನೇ ತರಗತಿ	ಒಟ್ಟು	೭	೭	೨೧	೭	೭	೭	೨೧	೭	೧೪	೧೪	೪೨	೧೪	೮೪
	ಎ	೨	೨	೯	೨	೩	೨	೧೧	೩	೫	೪	೨೦	೫	೩೪
	ಬಿ	೨	೨	೮	೪	೨	೪	೬	೧	೪	೬	೧೪	೫	೨೯
	ಸಿ	೩	೩	೪	೧	೨	೧	೪	೩	೫	೪	೮	೪	೨೧
ಒಟ್ಟು		೫೦	೫೦	೧೫೦	೫೦	೫೦	೫೦	೧೫೦	೫೦	೫೦	೫೦	೧೫೦	೫೦	೩೦೦

ಲಂಬ ಚಿತ್ರ ೮. ಶಿಕ್ಷಣದ ಗುಣಮಟ್ಟ ಶ್ರೇಣೀಕೃತ ಪ್ರಮಾಣ



	೪ನೇ ತರಗತಿ			೫ನೇ ತರಗತಿ			೬ನೇ ತರಗತಿ			೭ನೇ ತರಗತಿ		
	ಎ	ಬಿ	ಸಿ	ಎ	ಬಿ	ಸಿ	ಎ	ಬಿ	ಸಿ	ಎ	ಬಿ	ಸಿ
ಒಟ್ಟು ಪ.ಜಾ	೪	೩	೫	೪	೫	೩	೩	೪	೫	೫	೪	೫
ಒಟ್ಟು ಪ.ಪಂ.	೬	೩	೩	೨	೬	೪	೪	೨	೬	೪	೬	೪
ಒಟ್ಟು ಒಬಿಸಿ	೧೮	೧೦	೮	೧೪	೧೨	೧೦	೨೦	೭	೯	೨೦	೧೪	೮
ಒಟ್ಟು ಅಲ್ಪ ಸಂ.	೪	೬	೨	೫	೪	೩	೨	೮	೨	೫	೫	೪

ಏಳನೇ ತರಗತಿಯಲ್ಲಿ 'ಬಿ' ಶ್ರೇಣಿಯನ್ನು ಪಡೆದವರ ಸಂಖ್ಯೆ ಕ್ರಮವಾಗಿ ಪರಿಶಿಷ್ಟ ಜಾತಿಯ ೪ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೬ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೫ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೧೪ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಪಡೆದಿದ್ದಾರೆ.

ಇನ್ನು 'ಸಿ' ಶ್ರೇಣಿ ಪಡೆದ ವಿದ್ಯಾರ್ಥಿನಿಯರಲ್ಲಿ ಪರಿಶಿಷ್ಟ ಜಾತಿಯ ೫ ವಿದ್ಯಾರ್ಥಿನಿಯರು, ಪರಿಶಿಷ್ಟ ಪಂಗಡದ ೪ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೪ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗದ ೮ ವಿದ್ಯಾರ್ಥಿನಿಯರು ಕ್ರಮವಾಗಿ 'ಸಿ' ಶ್ರೇಣಿಯನ್ನು ಪಡೆದಿದ್ದಾರೆ.

ಏಳನೇ ತರಗತಿಯಲ್ಲಿ ದೊಡ್ಡ ಆಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಮುಂದಿರುವುದು ಸಮೀಕ್ಷಾ ಅಂಕಿ ಅಂಶಗಳಿಂದ ಗಮನಿಸಬಹುದು.

❑❑❑



ಸಮಾರೋಪ

ಸಾರಾಂಶ ಮತ್ತು ಫಲಿತಗಳು

ಸಮಾರೋಪ

ಎಲ್ಲರಿಗೂ ಶಿಕ್ಷಣ ವಿಶ್ವಸಮ್ಮೇಳನದ ೩ನೇ ಅನುಚ್ಛೇದದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಿವೆ. ಹೆಣ್ಣುಮಕ್ಕಳ ಶಿಕ್ಷಣದ ಅವಕಾಶ ಖಚಿತಪಡಿಸುವುದು, ಗುಣಮಟ್ಟ ಉತ್ತಮಪಡಿಸುವುದು, ಹೆಣ್ಣುಮಕ್ಕಳ ಶಿಕ್ಷಣ ಪಡೆಯಲು ಇರುವ ಅಡೆತಡೆಗಳನ್ನು ನಿವಾರಿಸುವುದು, ತುರ್ತು ಅಗತ್ಯವೆಂದು ತಿಳಿಸುತ್ತದೆ. ಮಹಿಳೆಯನ್ನು ದೈವಿ ಮಾತೆಯ ಸಾಕಾರವೆಂದು ಪ್ರಶಂಸಿಸಲಾಗುತ್ತದೆ. ಇವೆಲ್ಲವೂ ದಾಖಲೆಗಳಲ್ಲಿ ಮಾತ್ರ ಇವೆ. ವಾಸ್ತವದಲ್ಲಿ ಮಹಿಳೆಯನ್ನು ಎರಡನೇ ದರ್ಜೆಯ ಪ್ರಜೆಯಂತೆ ಪರಿಗಣಿಸಲಾಗುತ್ತಿದೆ. ಮಾನವ ಸಂಪನ್ಮೂಲ ವಿಕಾಸಕ್ಕೆ ಕುಟುಂಬಗಳ ಅಭಿವೃದ್ಧಿ ಮತ್ತು ಮಕ್ಕಳ ವ್ಯಕ್ತಿತ್ವವನ್ನು ರೂಪಿಸಲು ಒಟ್ಟಾರೆ ದೇಶದ ಅಭಿವೃದ್ಧಿಗೆ ಮಹಿಳಾ ಶಿಕ್ಷಣ ಅತ್ಯಂತ ಪ್ರಮುಖವಾದುದ್ದೆಂದು ಕೋಠಾರಿ ಆಯೋಗವು ಸಹ ಒತ್ತಿ ಹೇಳಿದೆ.

ಶಿಕ್ಷಣವು ಕೇವಲ ಸಮಾಜದ ಉದ್ಧಾರಕ್ಕೆ ಅಲ್ಲದೇ ಮಹಿಳೆಯರ ವ್ಯಕ್ತಿತ್ವ ಸಬಲೀಕರಣಕ್ಕೆ ನಾಂದಿಯಾಗಿದೆ. ಶಿಕ್ಷಣ ಪಡೆದ ಮಹಿಳೆಯರು ಆರ್ಥಿಕ ಮತ್ತು ರಾಜಕೀಯ ನಿರ್ಧಾರ ಕೈಗೊಳ್ಳಲು ಸಮರ್ಥರಾಗುವರು. ಈಗಿನ ಹೆಣ್ಣುಮಕ್ಕಳ ಶಿಕ್ಷಣದ ಲಾಭ, ಗಂಡುಮಕ್ಕಳ ಶಿಕ್ಷಣದ ಲಾಭಗಳಂತೆಯೇ ಇವೆ. ಹೆಣ್ಣುಮಕ್ಕಳನ್ನು ಶಾಲೆಗೆ ಆಕರ್ಷಿಸುವಂತೆ ಮಾಡಲು ಯುನಿಸೆಫ್ ವಿವಿಧ ದೇಶಗಳ ಸರ್ಕಾರಗಳೊಡನೆ ಕೆಲಸ ಮಾಡುತ್ತಿವೆ. ಭಾರತವು ಈ ಗುರಿ ಸಾಧನೆಗೆ ಸಹಿ ಹಾಕಿರುವುದರಿಂದ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಬದ್ಧವಾಗಿವೆ. ಶಿಕ್ಷಣ ಕುರಿತಂತೆ ಸರ್ಕಾರ ನೇಮಿಸಿರುವ ಹಲವು ಆಯೋಗಗಳು ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಯನ್ನು ಅಧ್ಯಯನ ಮಾಡಿ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಿವೆ.

೧೯೮೯ರಲ್ಲಿ ರೂಪಗೊಂಡ ಮಕ್ಕಳ ಹಕ್ಕುಗಳ ಸಮಾವೇಶವು ಎಲ್ಲಾ ಹೆಣ್ಣು ಹಾಗೂ ಗಂಡುಮಕ್ಕಳಿಗೆ ಸಮಾನವಾದ ಉತ್ತಮ ಗುಣಮಟ್ಟದ ಶಿಕ್ಷಣದ ಹಕ್ಕಿಗೆ ಒತ್ತಾಯಿಸಿತು. ೨೮ನೇ ಅನುಚ್ಛೇದವು ಶಿಕ್ಷಣ ಹಕ್ಕು ಹೆಣ್ಣು ಮತ್ತು ಗಂಡುಮಕ್ಕಳಿಗೆ ಸಮಾನವಕಾಶಗಳ ಆಧಾರದ ಮೇಲೆ

ಸಾಧಿಸಬೇಕೆಂದು ಹೇಳಿದೆ. ಈ ನಿಟ್ಟಿನಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹಲವಾರು ಯೋಜನೆ ಕಾರ್ಯಕ್ರಮಗಳನ್ನು ತರುತ್ತಿವೆ. ನಮ್ಮ ದೇಶದ ಅತ್ಯಂತ ದುರದೃಷ್ಟ ಸಂಗತಿಯೆಂದರೆ ಬಡತನ, ಜಾತೀಯತೆ, ಲಿಂಗ ಅಸಮಾನತೆ ಮುಂತಾದ ಕಾರಣಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಹಾಗೂ ಹಿಂದುಳಿದ ಮುಂತಾದ ಸೌಲಭ್ಯವಂಚಿತ ಸಮುದಾಯದ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ.

ನಗರದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೋಲಿಸಿದರೆ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳ ಶಿಕ್ಷಣದ ಅವಕಾಶದಿಂದ ಹೆಚ್ಚು ವಂಚಿತರಾಗಿದ್ದಾರೆ. ಶಿಕ್ಷಣ ತನ್ನಷ್ಟಕ್ಕೆ ತಾನೇ ಎಲ್ಲರಿಗೂ ಸಿಗುವುದಿಲ್ಲ. ಬಡವರು, ಶ್ರೀಮಂತರು, ಮಧ್ಯಮವರ್ಗದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ, ಹಿಂದುಳಿದ ಮಹಿಳೆಯರು ಇವರೆಲ್ಲರಿಂದಲೂ ಸಮಾನ ಶಿಕ್ಷಣ ಪಡೆಯಲಾಗುತ್ತಿಲ್ಲ. ಈಗಾಗಲೇ ಸಮಾಜದಲ್ಲಿರುವ ಬಲಾಢ್ಯರು, ಪುರುಷರು, ಮೇಲ್ಜಾತಿಯವರು ಈಗಾಗಲೇ ಶಿಕ್ಷಣದಲ್ಲಿ ಪ್ರಭುತ್ವ ಸಾಧಿಸಿದ್ದಾರೆ. ರಾಜ್ಯದ ಶಿಕ್ಷಣದ ಪ್ರಮಾಣ ಶೇ. ೭೫ರಷ್ಟಿದೆ. ನಗರಪ್ರದೇಶದ ಶಿಕ್ಷಣದ ಪ್ರಮಾಣ ಶೇ. ೮೬.೨೧ರಷ್ಟಿದೆ. ಗ್ರಾಮೀಣ ಶಿಕ್ಷಣದ ಪ್ರಮಾಣ ಶೇ. ೬೮.೭೩ರಷ್ಟಿದೆ. ನಗರ ಪುರುಷರ ಶಿಕ್ಷಣದ ಪ್ರಮಾಣ ಶೇ. ೯೦.೫೪ರಷ್ಟಿದ್ದಾರೆ. ನಗರ ಮಹಿಳೆಯರ ಶಿಕ್ಷಣದ ಪ್ರಮಾಣ ಶೇ. ೮೧.೭೧ರಷ್ಟಿದೆ.

ಗ್ರಾಮೀಣ ಪ್ರದೇಶದ ಮಹಿಳೆಯರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಹಾಗೂ ಹಿಂದುಳಿದ ಮುಂತಾದ ಸಮುದಾಯಗಳು ಶಿಕ್ಷಣ ಪಡೆಯುವುದು ಕಷ್ಟಸಾಧ್ಯವಾಗಿದೆ. ಅಂಚಿನಲ್ಲಿರುವ ವಂಚಿತ ಸಮುದಾಯಗಳ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಸರ್ಕಾರಗಳು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಹೆಣ್ಣುಮಕ್ಕಳ ಶಿಕ್ಷಣದ ಸ್ಥಿತಿಗತಿ ನೋಡುವ ಪ್ರಯತ್ನ ಮಾಡಲಾಗಿದೆ.

ಈ ಅಧ್ಯಯನಕ್ಕೆ ಒಳಪಟ್ಟ ಸಾತನೂರು, ನಾಗರಸನಕೋಟೆ, ದೊಡ್ಡ ಆಲಹಳ್ಳಿ, ನಾಯಕನಹಳ್ಳಿ ನಾಲ್ಕು ಶಾಲೆಗಳಿಂದ ತರಗತಿವಾರು ಕ್ರಮವಾಗಿ ನಾಲ್ಕನೇ ತರಗತಿ ಓದುತ್ತಿರುವ ೭೨ ವಿದ್ಯಾರ್ಥಿನಿಯರನ್ನು ೫ನೇ ತರಗತಿಯಲ್ಲಿ ಓದುತ್ತಿರುವ ೭೨ ವಿದ್ಯಾರ್ಥಿನಿಯರನ್ನು, ಆರನೇ ತರಗತಿ ಓದುತ್ತಿರುವ ೭೨ ವಿದ್ಯಾರ್ಥಿನಿಯರನ್ನು ಹಾಗೂ ಏಳನೇ ತರಗತಿಯಲ್ಲಿ ಓದುತ್ತಿರುವ ೮೨ ವಿದ್ಯಾರ್ಥಿನಿಯರನ್ನು, ಹೀಗೆ ಒಟ್ಟಾರೆ ೩೦೦ ವಿದ್ಯಾರ್ಥಿನಿಯರನ್ನು ಹಾಗೂ ಈ ೩೦೦ ವಿದ್ಯಾರ್ಥಿನಿಯರ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಗ್ರಾಮೀಣ ಸಮಾಜವು ತನ್ನದೇ ಆದ ಸಾಮಾಜಿಕ ಸಂರಚನೆಯನ್ನು ಹೊಂದಿದೆ. ಆಚಾರ-ವಿಚಾರ, ರೂಢಿಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದೆ. ಜೀವನ ಭದ್ರತೆ, ಶಾಂತಿ, ಸಹಕಾರ, ಕ್ರಿಯಶೀಲ ದುಡಿಮೆ, ಕೃಷಿ ಇವೆಲ್ಲವೂ ಗ್ರಾಮೀಣ ಸಮಾಜದ ಪ್ರಧಾನ ಲಕ್ಷಣಗಳಾಗಿವೆ.

ಆದರೆ ಇಂದು ಗ್ರಾಮಗಳ ನಡುವಿನ ಅವಿನಾಭಾವ ಸಂಬಂಧಗಳು ನಿಧಾನವಾಗಿ ಸಡಿಲವಾಗುತ್ತಿವೆ. ಜಾತಿಯ ಸಮೀಕರಣ ತಲೆಯೆತ್ತಿ ಜಾತಿಜಾತಿಗಳ ನಡುವಿನ ಸಾಮರಸ್ಯ ಕಡಿಮೆಯಾಗುತ್ತಿವೆ. ಜಾತಿಯೇ ಪ್ರಧಾನವಾಗಿದ್ದು, ಜಾತಿಯ ಸೋಂಕಿಲ್ಲದೆ ಯಾವುದೇ ಕೆಲಸಗಳು ಆಗುತ್ತಿಲ್ಲ. ಜಾತಿಯು ಭಾರತೀಯ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ. ಬಲಾಢ್ಯ ಜಾತಿಗಳು ಇಂದು ಹಳ್ಳಿಗಳನ್ನು ಆಳುತ್ತಿವೆ. ಅಧ್ಯಯನಕ್ಕೆ ಒಳಪಟ್ಟ ಹಳ್ಳಿಗಳು ಇದರಿಂದ ಹೊರತಾಗಿಲ್ಲ. ಅಧ್ಯಯನಕ್ಕೆ ಒಳಪಡಿಸಿದ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಎರಡು ಪಂಚಾಯಿತಿಗಳಿಂದ ಪರಿಶಿಷ್ಟ ಜಾತಿಯ ೫೦ ಕುಟುಂಬಗಳು, ಪರಿಶಿಷ್ಟ ಪಂಗಡದ ೫೦ ಕುಟುಂಬಗಳು, ಅಲ್ಪಸಂಖ್ಯಾತ ೫೦ ಕುಟುಂಬಗಳು ಹಾಗೂ ಒಕ್ಕಲಿಗ, ಲಿಂಗಾಯತ ಮತ್ತು ಇತರೆ ಸಮುದಾಯಗಳ ಒಟ್ಟು ೧೫೦ ಕುಟುಂಬಗಳಂತೆ ಎರಡು ಪಂಚಾಯಿತಿಗಳಿಂದ ಒಟ್ಟು ೩೦೦ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಹಳ್ಳಿಗಳಲ್ಲಿಯೂ ಜಾತಿವ್ಯವಸ್ಥೆ ಎದ್ದುಕಾಣುತ್ತಿದೆ. ಒಕ್ಕಲಿಗ ಸಮುದಾಯವು ಜನಸಂಖ್ಯೆಯಲ್ಲಿ ಮತ್ತು ಆರ್ಥಿಕವಾಗಿ ಬಲಾಢ್ಯ ಸಮುದಾಯವಾಗಿದೆ. ಹಾಗೆಯೇ ಜಾತಿವ್ಯವಸ್ಥೆಯಲ್ಲಿ ಉನ್ನತೀಕರಿಸಿಕೊಂಡಿರುವ ಲಿಂಗಾಯತರು ಮತ್ತು ಒಕ್ಕಲಿಗರು ಹಳ್ಳಿಗಳ ಆಡಳಿತಾಧಿಕಾರದಲ್ಲಿ ರಾಜ್ಯದ ಆಡಳಿತಾಧಿಕಾರದಂತೆ ಪರಸ್ಪರ ಪ್ರತಿಸ್ಪರ್ಧಿಗಳಾಗಿದ್ದಾರೆ. ಈ ಎರಡು ಸಮುದಾಯಗಳು ಹಳ್ಳಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿವೆ.

ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಂ ಮತ್ತು ಕ್ರಿಶ್ಚಿಯನ್, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಸಮುದಾಯಗಳು ನಂತರದ ಸಾಲಿನಲ್ಲಿ ಬರುತ್ತವೆ. ಆರ್ಥಿಕವಾಗಿ ಅಷ್ಟೇನೂ ಸಬಲರಲ್ಲದ ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯಗಳು ತಮ್ಮ ಧರ್ಮ, ಭಾಷೆಗಳಿಂದ ಪ್ರತ್ಯೇಕವಾದ ಅವರದೇ ಓಣಿಗಳಲ್ಲಿ ನೆಲೆಸಿದ್ದಾರೆ. ಹೆಚ್ಚು ಆಸ್ತಿವಂತರಲ್ಲದ ಈ ಸಮುದಾಯಗಳು ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಬದುಕುತ್ತಿದ್ದಾರೆ.

ಸಮಾಜದ ಕೆಳಹಂತದ ಸಮುದಾಯಗಳೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳು, ಸಾಮಾಜಿಕವಾಗಿ ಪರಿಶಿಷ್ಟರು ಊರ ಹೊರಗೆ ನೆಲೆಸಿದ್ದರೆ. ಪರಿಶಿಷ್ಟ ಪಂಗಡದವರು ಊರೊಳಗೆ ನೆಲೆಸಿರುವುದನ್ನು ಬಿಟ್ಟರೆ ಆರ್ಥಿಕವಾಗಿ ಎರಡು ಸಮುದಾಯಗಳು ಸಮಾನ ದುಸ್ಥಿತಿಯಲ್ಲಿವೆ. ಅಲ್ಪಸ್ವಲ್ಪ ಕೃಷಿ ಜಮೀನಿನೊಂದಿಗೆ ಕೂಲಿ ಮಾಡಿಕೊಂಡು ಬದುಕುತ್ತಿದ್ದಾರೆ. ರಾಮನಗರ ಜಿಲ್ಲೆಯ ಈ ಹಳ್ಳಿಗಳು ರಾಜಧಾನಿ ಬೆಂಗಳೂರಿಗೆ ಸಮೀಪದಲ್ಲಿದ್ದರೂ ಗ್ರಾಮೀಣ ಸೊಗಡಿನ ಜಾತಿ, ರೂಢಿ ಸಂಪ್ರದಾಯಗಳನ್ನು ಒಳಗೊಂಡು ಗ್ರಾಮನಗರವಾಗಿಯೇ ಮುಂದುವರಿಯುತ್ತಿದೆ. ಗ್ರಾಮಗಳು ನಗರಗಳಿಗೆ ಹತ್ತಿರವಾದಂತೆಲ್ಲಾ ಜಾತಿವ್ಯವಸ್ಥೆಯು ನಗರಗಳಲ್ಲಿಯೂ ಮುಂದುವರಿಯುತ್ತಿದೆ. ಇಂದು ನಗರಪ್ರದೇಶಗಳಿಗೆ ಜಾತಿವ್ಯವಸ್ಥೆ ಗುಪ್ತಗಾಮಿಯಂತೆ ಸಾಗುತ್ತಿದೆ.

ಹಳ್ಳಿಗಳಲ್ಲಿ ಜಾತಿ ವ್ಯವಸ್ಥೆ ಮುಕ್ತವಾಗಿದ್ದರೆ, ನಗರಪ್ರದೇಶದಲ್ಲಿ ಮರೆಮಾಚಿದಂತೆ ಅಸ್ತಿತ್ವದಲ್ಲಿದೆ.

ಗ್ರಾಮೀಣ ಮತ್ತು ನಗರಪ್ರದೇಶಗಳಲ್ಲಿ ಜಾತಿವ್ಯವಸ್ಥೆ ಗಟ್ಟಿಯಾದಂತೆಲ್ಲ ಮೇಲ್ಜಾತಿ ಮೇಲ್ವರ್ಗದ ಜನರು ಅಭಿವೃದ್ಧಿಯ ಎಲ್ಲಾ ಫಲಗಳನ್ನು ಅನುಭವಿಸುತ್ತಿದ್ದಾರೆ. ಬಡವರು, ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗ ಮುಂತಾದ ಸಮುದಾಯಗಳು ಜೀವನದ ಮೂಲಭೂತ ಅಗತ್ಯಗಳಾದ ಕುಡಿಯುವ ನೀರು, ನೈರ್ಮಲ್ಯ, ವಸತಿ, ಶಿಕ್ಷಣ, ಆರೋಗ್ಯ ಮುಂತಾದ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಾ ಹೋಗುತ್ತಾರೆ. ಅಭಿವೃದ್ಧಿ ಫಲದಿಂದ ವಂಚಿತ ಅಂಚಿಗೆ ತಳಲ್ಪಟ್ಟ ಜಾತಿ ಸಮುದಾಯಗಳಿಗೆ ಸರ್ಕಾರವು ಮೂಲಭೂತ ಸೌಲಭ್ಯಗಳಾದ ವಸತಿ, ನೀರು, ನೈರ್ಮಲ್ಯ, ಆರೋಗ್ಯ ಶಿಕ್ಷಣ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿದೆ.

ಮನುಷ್ಯನ ಮೂಲಭೂತ ಅಗತ್ಯಗಳಲ್ಲಿ ವಸತಿಯು ಅತ್ಯಗತ್ಯವಾದದ್ದು. ಮಳೆ, ಗಾಳಿ, ಬಿಸಿಲು ಮುಂತಾದವುಗಳಿಂದ ರಕ್ಷಿಸಲು ಹಾಗೂ ಕುಟುಂಬವನ್ನು ಕಾಪಾಡಿಕೊಳ್ಳಲು ವಸತಿ ಅಗತ್ಯವಾಗಿದೆ. ಪ್ರಕೃತಿ ನಿಯಮಕ್ಕನುಸಾರ ಬದುಕುವ ಪಕ್ಷಿಗಳು ಸಹ ತಮ್ಮದೇ ಒಂದು ಗೂಡು ಕಟ್ಟಿಕೊಂಡಿರುತ್ತವೆ. ಆದರೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕಡುಬಡವರಾದ ಬಹುಸಂಖ್ಯಾತರು ಕನಿಷ್ಠ ಮಟ್ಟದ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವರಿಗೆ ಆಸ್ತಿ ಇಲ್ಲ. ಮನೆ ನಿರ್ಮಾಣದ ವೆಚ್ಚ ಅಧಿಕವಾಗಿದ್ದು ಅದನ್ನು ಭರಿಸುವ ಸಾಮರ್ಥ್ಯವಿಲ್ಲ. ಹಾಗಾಗಿಯೇ ವಸತಿಯನ್ನು ಮೂಲಭೂತ ಅಗತ್ಯವಾಗಿ ಪರಿಗಣಿಸಿ ೧೯೯೮ರಲ್ಲಿ ರಾಷ್ಟ್ರೀಯ ವಸತಿ ಮತ್ತು ವಾಸಸ್ಥಳ ನೀತಿ ರೂಪಿಸಲಾಯಿತು. ಈ ಕಾರ್ಯಕ್ರಮದಡಿ ಪ್ರತಿ ವರ್ಷ ಎರಡು ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ನಿಗದಿಪಡಿಸಲಾಗಿದೆ. ಜನರಿಗೆ ಉತ್ತಮ ವಾಸಕ್ಕೆ ಯೋಗ್ಯ ಸೌಕರ್ಯವನ್ನು ಒದಗಿಸುವುದು ಈಗ ಜಗತ್ತಿನಾದ್ಯಂತ ಒಂದು ಕಾಳಜಿಯಾಗಿದೆ. ಅಲ್ಲದೆ ೨೦೨೦ರಲ್ಲಿ ೧೦೦ ದಶಲಕ್ಷ ಕೊಳಚೆ ವಾಸಿಗಳ ಜೀವನದಲ್ಲಿ ಗುರುತರವಾದ ಬದಲಾವಣೆ ತರುವ ಆಶಯವನ್ನು ಸಹಸ್ರಮಾನ ಅಭಿವೃದ್ಧಿ ಯೋಜನೆ ಹೊಂದಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಸತಿ ಸೌಲಭ್ಯ ಒದಗಿಸಲು. ಹಲವು ಯೋಜನೆ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿದೆ.

ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಶೇ. ೯೨ರಷ್ಟು ಕುಟುಂಬಗಳು ಸ್ವಂತ ಮನೆಯಲ್ಲಿ ನೆಲೆಸಿದ್ದಾರೆ. ಹಾಗೆಯೇ ಉಳಿದ ಶೇ. ೮ರಷ್ಟು ಕುಟುಂಬಗಳು ಬಾಡಿಗೆ ಮನೆಯಲ್ಲಿ ನೆಲೆಸಿದ್ದಾರೆ. ರಾಜ್ಯದಲ್ಲಿ ಸ್ವಂತ ಮನೆಯಲ್ಲಿ ನೆಲೆಸಿರುವವರ ಪ್ರಮಾಣ ಶೇ. ೫೫ರಷ್ಟು ಕುಟುಂಬಗಳಿಗೆ ಹೋಲಿಸಿದರೆ ಸ್ವಂತ ಮನೆ ಹೊಂದಿರುವವರ ಪ್ರಮಾಣ ಉತ್ತಮವಾಗಿದೆ. ರಾಜ್ಯದ ಗ್ರಾಮೀಣ ಪ್ರದೇಶದ ಶೇ. ೪೨.೬ರಷ್ಟು ಕುಟುಂಬಗಳು ಮಾತ್ರ ಸ್ವಂತ ಮನೆ ಹೊಂದಿವೆ. ನಮ್ಮ ಅಧ್ಯಯನಕ್ಕೆ ಒಳಪಟ್ಟ ಗ್ರಾಮೀಣ ಕುಟುಂಬಗಳು ಸ್ವಂತ ಮನೆ ಹೊಂದಿರುವ ಪ್ರಮಾಣ ರಾಜ್ಯದ ಗ್ರಾಮೀಣ ಕುಟುಂಬಗಳ ಹೊಂದಿರುವ ಎರಡರಷ್ಟು ಹೆಚ್ಚು ಸ್ವಂತ ಮನೆ ಹೊಂದಿವೆ.

ಅಧ್ಯಯನಕ್ಕೆ ಒಳಪಟ್ಟ ಹಳ್ಳಿಗಳು ನಗರಕ್ಕೆ ಹತ್ತಿರವಾಗಿರುವುದು ಕಾರಣವಿರಬಹುದು. ಏಕೆಂದರೆ ಬೆಂಗಳೂರಿನೊಂದಿಗೆ ನಿರಂತರ ಸಂಪರ್ಕ ಹೊಂದಿರುವ ಜನರ ವಸತಿಗೆ ಸಂಬಂಧಿಸಿದಂತೆ ಇರುವ ಯೋಜನೆ ಕಾರ್ಯಕ್ರಮಗಳ ಮೂಲಕ ಸ್ವಂತ ಮನೆ ಪಡೆದುಕೊಂಡಿದ್ದಾರೆ. ಸ್ವಂತ ಮನೆ ಹೊಂದಿರುವ ಕುಟುಂಬಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಶೇ. ೮೮ರಷ್ಟು ಕುಟುಂಬಗಳು ಸ್ವಂತ ಮನೆ ಹೊಂದಿವೆ. ಪರಿಶಿಷ್ಟ ಜಾತಿಯ ಶೇ. ೮೨ರಷ್ಟು ಕುಟುಂಬಗಳು ಸ್ವಂತ ಮನೆ ಹೊಂದಿದ್ದಾರೆ. ಪರಿಶಿಷ್ಟ ಪಂಗಡದ ಶೇ. ೯೪ರಷ್ಟು ಕುಟುಂಬಗಳು ಸ್ವಂತ ಮನೆ ಹೊಂದಿವೆ. ಸಾತನೂರು ಮತ್ತು ದೊಡ್ಡ ಆಲಹಳ್ಳಿ ಎರಡು ಗ್ರಾಮಪಂಚಾಯಿತಿಗಳಲ್ಲಿ ಸ್ವಂತ ಮನೆ ಹೊಂದಿರುವ ಪರಿಶಿಷ್ಟ ಜಾತಿ/ಪಂಗಡದ ಕುಟುಂಬಗಳಲ್ಲಿ ಪರಿಶಿಷ್ಟ ಪಂಗಡದ ಹೆಚ್ಚು ಕುಟುಂಬಗಳು ಸ್ವಂತ ಮನೆ ಹೊಂದಿದ್ದಾರೆ. ಅಲ್ಪಸಂಖ್ಯಾತ ಎಲ್ಲಾ ಕುಟುಂಬಗಳು ಸ್ವಂತ ಮನೆಗಳನ್ನು ಹೊಂದಿವೆ. ಇನ್ನು ಬಲಾಢ್ಯ ಸಮುದಾಯಗಳಾದ ಒಬಿಸಿ ಶೇ. ೬೪ರಷ್ಟು ಕುಟುಂಬಗಳು ಸ್ವಂತ ಮನೆ ಹೊಂದಿದ್ದಾರೆ. ಉಳಿದವರಿಗೆ ಶೇ. ೬ರಷ್ಟು ಕುಟುಂಬಗಳು ಸ್ವಂತ ಮನೆ ಹೊಂದಿಲ್ಲ. ಒಟ್ಟಾರೆಯಾಗಿ ಅಧ್ಯಯನಕ್ಕೆ ಒಳಪಟ್ಟ ಎಲ್ಲಾ ಜಾತಿ/ಸಮುದಾಯಗಳು ಸಮಪ್ರಮಾಣದಲ್ಲಿ ಮನೆ ಮಾಲೀಕತ್ವ ಹೊಂದಿರುವುದು ಕಾಣಬಹುದಾಗಿದೆ. ಗ್ರಾಮೀಣ ವಸತಿಸೌಲಭ್ಯ ಒದಗಿಸುವಲ್ಲಿ ಗ್ರಾಮಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸುತ್ತಿವೆ. ೨೦೦೫-೦೬ರಲ್ಲಿ ಪ್ರತಿ ಪಂಚಾಯಿತಿ ೪೦ ಮನೆಗಳ ನೀಡುವ ಯೋಜನೆ ಇತ್ತು. ಆದಾದ ನಂತರ ೨೦೦೬-೦೭ರಲ್ಲಿ ಪ್ರತಿ ಹತ್ತು ಸಾವಿರ ಜನಸಂಖ್ಯೆ ಇರುವ ಪಂಚಾಯಿತಿಗಳಲ್ಲಿ ೬೦ ಮನೆಗಳ ನೀಡುವ ಯೋಜನೆ ಇತ್ತು. ಪಂಚಾಯಿತಿಗಳು ವಾರ್ಡ್‌ಸಭೆಗಳಲ್ಲಿ ವಸತಿ ಇಲ್ಲದ ಕುಟುಂಬಗಳನ್ನು ಪಟ್ಟಿ ಮಾಡಲಾಗುತ್ತದೆ. ಗ್ರಾಮಸಭೆಗಳಲ್ಲಿ ಫಲಾನುಭವಿಗಳ ಆಯ್ಕೆ ಮಾಡಲಾಗುತ್ತದೆ. ಈ ಫಲಾನುಭವಿಗಳನ್ನು ಸಾಮಾನ್ಯ ಸಭೆಯಲ್ಲಿ ಅನುಮೋದಿಸಲಾಗುತ್ತವೆ. ನಂತರದಲ್ಲಿ ಆಶ್ರಯ ಸಮಿತಿಯಲ್ಲಿ ಅನರ್ಹ ಫಲಾನುಭವಿಗಳನ್ನು ಕೈಬಿಟ್ಟು ಅರ್ಹರಿಗೆ ಮಂಜೂರಾತಿ ನೀಡಲಾಗುತ್ತವೆ. ಹಾಗಾಗಿಯೇ ವಸತಿ ಇಲ್ಲದವರಿಗೆ ವಸತಿ ದಕ್ಕುವಂತಾಗಿ ಎಲ್ಲರೂ ಸ್ವಂತ ಮನೆ ಪಡೆಯುವಂತೆ ಆಗಿದೆ. ಇದಕ್ಕೆ ಕಾರಣ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಕೈಗೊಂಡಿರುವ ವಸತಿ ಯೋಜನೆಗಳು. ನಗರ ಗ್ರಾಮಗಳ ಒಡನಾಟ ಅಥವಾ ಬಾಂಧವ್ಯ ಹೆಚ್ಚಾದಂತೆಲ್ಲಾ ಮೂಲಭೂತ ಸೌಲಭ್ಯಗಳ ಪಡೆಯುವಲ್ಲಿ ನಗರ-ಗ್ರಾಮಗಳ ಅಂತರ ಕಡಿಮೆಯಾಗುತ್ತಿರುವುದನ್ನು ಅಧ್ಯಯನದಲ್ಲಿ ತಿಳಿದುಬಂದಿದೆ. ರಾಷ್ಟ್ರಪತಿಗಳಾಗಿದ್ದ ಅಬ್ದುಲ್ ಕಲಾಂ ಅವರ PURA ಪರಿಕಲ್ಪನೆಯು ಇದೇ ಆಗಿತ್ತು.

ಸರ್ಕಾರದ ವಸತಿ ಯೋಜನೆಗಳು ಗ್ರಾಮೀಣ ಪ್ರದೇಶಗಳಲ್ಲಿ ಜಾತಿ/ಧರ್ಮಗಳ ಅಂತರ ಕಡಿಮೆ ಮಾಡಿ ಬೇರೆ ಬೇರೆ ಸಮುದಾಯಗಳನ್ನು ಬೆಸೆಯುವ ಕೆಲಸ ಮಾಡುತ್ತವೆ ಎಂದು ನಂಬಲಾಗಿತ್ತು. ಆದರೆ ಜಾತಿ ಧರ್ಮಗಳ ಮಡಿ, ಮೈಲಿಗೆ, ವಾಸ್ತವ್ಯ ಇವೆಲ್ಲವೂ ಪ್ರತ್ಯೇಕವಾಗಿಯೇ

ಮುಂದುವರಿಯುತ್ತಿರುವುದನ್ನು ಕಾಣಬಹುದಾಗಿದೆ. ಅಧ್ಯಯನಕ್ಕೆ ಒಳಪಟ್ಟ ಎರಡು ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರತ್ಯೇಕ ಓಣಿಗಳಲ್ಲಿ ನೆಲೆಸಿದ್ದಾರೆ. ಪರಿಶಿಷ್ಟ ಜಾತಿ ಸಮುದಾಯದ ಜನರು ಗ್ರಾಮಗಳಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಪರಿಶಿಷ್ಟ ಪಂಗಡದವರು ಊರೊಳಗೆ ವಾಸ್ತವ್ಯವಿದ್ದರೂ ಇಲ್ಲಿ ಪ್ರತ್ಯೇಕವಾದ ಅವರದೇ ಓಣಿಗಳಲ್ಲಿ ನೆಲೆಸಿದ್ದಾರೆ. ಇನ್ನು ಮುಸ್ಲಿಂ ಸಮುದಾಯದವರು ಸಹ ಮುಸ್ಲಿಂ ಬೀದಿಗಳಲ್ಲಿ ವಾಸಿಸುತ್ತಿದ್ದಾರೆ.

ಕುಟುಂಬಗಳಲ್ಲಿ ಜನಸಂಖ್ಯೆ ಹೆಚ್ಚಾದಂತೆ ಅಥವಾ ಮಕ್ಕಳು ವಿವಾಹವಾಗಿ ಪ್ರತ್ಯೇಕ ಮನೆಗಳಲ್ಲಿ ವಾಸ ಮಾಡಲು ಪ್ರಾರಂಭಿಸುತ್ತಿದ್ದಾರೆ. ಹಾಗಾಗಿ ಮೂಲ ವಾಸದ ಅಕ್ಕಪಕ್ಕ ನಿವೇಶನಗಳು ಇಲ್ಲದ ಕಾರಣ ಸರ್ಕಾರ ತನ್ನ ಯೋಜನೆಗಳ ಮೂಲಕ ಎಲ್ಲ ಜಾತಿಗಳಿಗೂ ವಸತಿ ಸೌಲಭ್ಯಗಳನ್ನು ಒಂದೇ ಕಡೆ ಒದಗಿಸಲಾಗುತ್ತಿದೆ. ಅದರೂ ಗ್ರಾಮೀಣರು ಭೌತಿಕವಾಗಿ ಎಲ್ಲಾ ಜಾತಿಗಳು ಒಂದೇ ಕಡೆ ನೆಲೆಸಿದ್ದರೂ ಮಾನಸಿಕವಾಗಿ ಪ್ರತ್ಯೇಕವಾಗಿಯೇ ನೆಲೆಸಿದ್ದಾರೆ.

ಮಾನವ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುವ ಮೂಲಭೂತ ಅಗತ್ಯಗಳಲ್ಲಿ ನೀರು ಮತ್ತು ನೈರ್ಮಲ್ಯ ನಿರ್ಣಾಯಕ ಪಾತ್ರ ವಹಿಸುತ್ತವೆ. ಕುಡಿಯುವ ನೀರಿನ ಲಭ್ಯತೆಯು ಆರೋಗ್ಯ ಮತ್ತು ಮಾನವ ಅಭಿವೃದ್ಧಿ ಇವುಗಳ ಮೇಲೆ ಮಾತ್ರವಲ್ಲದೆ ಇತರ ಅವಕಾಶಗಳ ಮೇಲೆಯೂ ಪರಿಣಾಮ ಬೀರುತ್ತದೆ. ಇದು ಮಹಿಳೆ ಮತ್ತು ಮಕ್ಕಳ ಮೇಲೆ ವಿಶೇಷ ಪರಿಣಾಮ ಉಂಟುಮಾಡುತ್ತದೆ. ಏಕೆಂದರೆ ಕುಟುಂಬಗಳಲ್ಲಿ ನೀರು ನಿರ್ವಹಣೆ ಮಾಡುವವರು ಮಹಿಳೆಯರು. ಮನೆ ಬಳಕೆಗೆ ಹಾಗೂ ಕುಡಿಯಲು ಅಗತ್ಯವಾದ ನೀರು ಸಂಗ್ರಹಿಸುವವರು ಮಹಿಳೆಯರು. ಇತರೆ ಅಗತ್ಯಗಳಿಗೆ ನೀರು ಖರ್ಚು ಮಾಡುವವರು ಮಹಿಳೆಯರೇ. ಉದಾಹರಣೆಗೆ ಅಡುಗೆ ಮಾಡಲು, ಪಾತ್ರೆ ತೊಳೆಯಲು, ಮನೆ ಸ್ವಚ್ಛಗೊಳಿಸಲು, ಬಟ್ಟೆ ಒಗೆಯಲು ಮುಂತಾದವುಗಳಿಗೆ ನೀರು ಬಳಸುತ್ತಾರೆ. ನೀರು ಗೃಹಬಳಕೆ ಮತ್ತು ಕುಡಿಯಲು ಮಾತ್ರವಲ್ಲದೆ ಕೃಷಿಗೂ ಅಗತ್ಯವಾಗಿದೆ. ನೀರು ಮಾನವನ ಬದುಕಿನ ಸುತ್ತ ಅವರಿಸಿಕೊಂಡಿದೆ. ನೀರಿಲ್ಲದ ಮನುಷ್ಯನ ಬದುಕು ಊಹಿಸಲು ಸಾಧ್ಯವಿಲ್ಲ. ಹಾಗಾಗಿ ನೀರನ್ನು ಮೂಲಭೂತ ಸೌಲಭ್ಯಗಳಲ್ಲಿ ಮಹತ್ವವಾದದ್ದು ಎಂದು ಪರಿಗಣಿಸಲಾಗಿದೆ. ಪ್ರತಿ ವ್ಯಕ್ತಿಗೆ ಕುಡಿಯಲು, ಬಟ್ಟೆ ಒಗೆಯಲು, ಸ್ನಾನ ಮಾಡಲು ಮುಂತಾದ ಹಲವಾರು ಅಗತ್ಯಗಳಿಗೆ ಪ್ರತಿದಿನ ೫೫ ಲೀಟರ್ ನೀರಿನ ಪೂರೈಕೆ ಅಗತ್ಯವಿದೆ. ಮುಂದುವರಿದ ದೇಶಗಳು ಪ್ರತಿ ವ್ಯಕ್ತಿಗೆ ೨೦೦ರಿಂದ ೩೦೦ ಲೀಟರ್ ನೀರು ಬಳಸುತ್ತಿದ್ದಾರೆ.

೨೫೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಹಳ್ಳಿಗೆ ಕೈಪಂಪು, ಕೊಳವೆಬಾವಿಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ೨೦೦ರಿಂದ ೧೦೦೦ ಜನರಿಗೆ ಮಿನಿವಾಟರ್ ಟ್ಯಾಂಕ್, ೧೦೦೦ಕ್ಕಿಂತ ಹೆಚ್ಚು ಜನರಿಗೆ ಒವರ್‌ಹೆಡ್ ಟ್ಯಾಂಕ್, ಪ್ರತಿ ಗ್ರಾಮದಲ್ಲಿ ೧೨ ಜನ ಸದಸ್ಯರಿರುವ ನೀರು, ನೈರ್ಮಲ್ಯ ಸಮಿತಿಗಳಿದ್ದು, ಎಲ್ಲರಿಗೂ ನೀರು ನೈರ್ಮಲ್ಯ ಒದಗಿಸುವ ಜವಾಬ್ದಾರಿ

ಹೊಂದಿದೆ. ನೀರು ನಿರ್ವಹಣೆಗೆ ಪಂಪ್ ಆಪರೇಟರ್ ಇದ್ದಾರೆ. ರಾಜ್ಯವು ಗ್ರಾಮೀಣ ಪ್ರದೇಶಗಳಿಗೆ ಕೈಪಂಪು, ಕೊಳವೆ ಬಾವಿಗಳ, ನಳಗಳ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. ಒಟ್ಟಾರೆಯಾಗಿ ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳು ಕುಡಿಯುವ ನೀರಿನ ಸೌಲಭ್ಯ ಹೊಂದಿವೆ.

ಅಧ್ಯಯನಕ್ಕೆ ಒಳಪಟ್ಟ ಬೇರೆ ಬೇರೆ ಜಾತಿ/ಧರ್ಮದ ಕುಟುಂಬಗಳು ಕುಡಿಯುವ ನೀರು ಪಡೆಯುತ್ತಿರುವ ಪ್ರಮಾಣ ಉತ್ತಮವಾಗಿದೆ. ಎರಡು ಗ್ರಾಮಪಂಚಾಯಿತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳು ನೂರಕ್ಕೆ ನೂರು ಕುಟುಂಬಗಳು ನೀರಿನ ಸೌಲಭ್ಯ ಹೊಂದಿವೆ. ಹಾಗೆಯೇ ಅಲ್ಪಸಂಖ್ಯಾತ ಎಲ್ಲಾ ಕುಟುಂಬಗಳು ನೀರಿನ ಸೌಲಭ್ಯ ಹೊಂದಿವೆ. ಹಿಂದುಳಿದ ವರ್ಗಗಳ ಕುಟುಂಬಗಳು ನೀರಿನ ಸೌಲಭ್ಯ ಹೊಂದಿವೆ. ಅಂದರೆ ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ ಗಮನಿಸಿದಾಗ ಮೇಲ್ಜಾತಿ ವರ್ಗದ ಜನರು ಕುಡಿಯುವ ನೀರಿನ ಸೌಲಭ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯುತ್ತಿದ್ದದನ್ನು ನೋಡಿದ್ದೇವೆ. ಈಗ ಎಲ್ಲಾ ಜಾತಿಗಳು ಸಾಕಷ್ಟು ನೀರು ಪಡೆಯುತ್ತಿವೆ. ಇದಕ್ಕೆ ಕಾರಣ ಪರಿಶಿಷ್ಟ ಜಾತಿ/ಪಂಗಡಗಳಿಗೆ ಕುಡಿಯುವ ನೀರಿಗಾಗಿ ಇರುವ ಕಾರ್ಯಕ್ರಮಗಳು ಕಾರಣವಾಗಿವೆ. ಒಟ್ಟಾರೆಯಾಗಿ ಸಾತನೂರು, ದೊಡ್ಡ ಆಲಹಳ್ಳಿ ಗ್ರಾಮ ಪಂಚಾಯಿತಿಯ ಎಲ್ಲಾ ಕುಟುಂಬಗಳು ನೀರಿನ ಸೌಲಭ್ಯ ಪಡೆದಿವೆ.

ಕುಡಿಯುವ ನೀರಿನ ಮೂಲಗಳ ದೂರ ಮತ್ತು ನೀರು ಬಳಸುವ ಪ್ರಮಾಣಕ್ಕೆ ನೇರ ಸಂಬಂಧವಿದೆ. ಜನರ ಆರ್ಥಿಕ ಸ್ಥಿತಿ ಸುಧಾರಿಸಿದಂತೆಲ್ಲಾ ಕುಡಿಯುವ ನೀರಿನ ಮೂಲಗಳನ್ನು ಮನೆಯೊಳಗೆ ಪಡೆಯುತ್ತಾರೆ. ನಗರಪ್ರದೇಶಗಳಲ್ಲಿ, ಬಹುಸಂಖ್ಯಾತ ಕುಟುಂಬಗಳು ಮನೆಯೊಳಗೆಯೇ ನೀರಿನ ಮೂಲಗಳನ್ನು ಹೊಂದಿವೆ. ಬಡವರು ಮತ್ತು ಸ್ಲಂ ಜನರು ಸಾರ್ವಜನಿಕ ನೀರಿನ ಮೂಲಗಳಿಂದ ನೀರನ್ನು ಪಡೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಶ್ರೀಮಂತ ಕುಟುಂಬಗಳು ನೀರಿನ ಮೂಲಗಳನ್ನು ಮನೆಯೊಳಗೆ ಪಡೆದಿದ್ದಾರೆ. ಬಡವರು ಪರಿಶಿಷ್ಟ ಜಾತಿ/ ಪಂಗಡದ ಕುಟುಂಬಗಳು ಸಾರ್ವಜನಿಕ ಮೂಲದಿಂದ ನೀರು ಪಡೆಯುತ್ತಿವೆ.

ಅಧ್ಯಯನಕ್ಕೆ ಒಳಪಟ್ಟ ಪರಿಶಿಷ್ಟ ಜಾತಿ/ಪಂಗಡಗಳ ಕುಟುಂಬಗಳು ಶೇ. ೭೮ರಷ್ಟು ಕುಟುಂಬಗಳು ಮನೆಯ ಹತ್ತಿರವೇ ಕುಡಿಯುವ ನೀರನ್ನು ಪಡೆಯುತ್ತಿವೆ. ಉಳಿದಂತೆ ಶೇ. ೨೨ರಷ್ಟು ಕುಟುಂಬಗಳು ಸುಮಾರು ಅರ್ಧ ಹಾಗೂ ಒಂದು ಕಿ.ಮೀ. ದೂರದಿಂದ ಕುಡಿಯುವ ನೀರು ಪಡೆಯುತ್ತಿವೆ.

ಗ್ರಾಮೀಣ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿಗಳಿಗೆ ಕುಡಿಯುವ ನೀರಿನ ಪ್ರತ್ಯೇಕ ಮೂಲಗಳಿರಲಿಲ್ಲ. ಊರಿನ ಅಥವಾ ಮೇಲ್ಜಾತಿ ಜನರು ಕರುಣಿಸಿ ಪರಿಶಿಷ್ಟರ ನೀರಿನ ಪರಿಕರಗಳಿಗೆ ನೀರು ಹಾಕಿದರೆ ಅದನ್ನು ತಂದು ಕುಡಿಯಬೇಕಿತ್ತು. ಸಾರ್ವಜನಿಕ ಬಾವಿಗಳನ್ನು ಪರಿಶಿಷ್ಟರು ಮುಟ್ಟುವಂತಿರಲಿಲ್ಲ. ಈಗ ಕಾಲ ಸುಧಾರಿಸಿದೆ. ಪರಿಶಿಷ್ಟರಿಗೂ ಪ್ರತ್ಯೇಕ ನೀರಿನ ಮೂಲಗಳನ್ನು ಹಾಕಿಸಲಾಗಿದೆ.

ಹಾಗಾಗಿ ಅಧ್ಯಯನಕ್ಕೆ ಒಳಪಟ್ಟ ಎಲ್ಲ ಸಮುದಾಯಗಳು ಕುಡಿಯುವ ನೀರಿನ ಮೂಲಗಳನ್ನು ಮನೆಯ ಸಮೀಪದಲ್ಲೇ ಹೊಂದಿರುವುದು ಅಧ್ಯಯನದಿಂದ ತಿಳಿದುಬಂದಿದೆ.

ಎರಡು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಸರ್ಕಾರದ ಯೋಜನೆಯಡಿಯಲ್ಲಿ ಗ್ರಾಮಗಳಿಗೆ ಕೈಪಂಪ್‌ಗಳು, ಸಾರ್ವಜನಿಕ ನಳ, ಕೊಳವೆಬಾವಿ ಮತ್ತು ಮಿನಿಟ್ಯಾಂಕ್‌ಗಳ ಮೂಲಕ ಕುಡಿಯುವ ನೀರಿನ ಪೂರೈಕೆಯನ್ನು ನಿರ್ವಹಿಸಲಾಗುತ್ತಿದೆ. ಸಾತನೂರು ಪಂಚಾಯಿತಿ ಮತ್ತು ದೊಡ್ಡ ಆಲಹಳ್ಳಿ ಪಂಚಾಯಿತಿಯಲ್ಲಿ ಕೊಳವೆಬಾವಿ ಇದ್ದು, ಟ್ಯಾಂಕ್‌ಗಳಲ್ಲಿ ನೀರು ಸಂಗ್ರಹಿಸಿ, ಮಿನಿಟ್ಯಾಂಕ್‌ಗಳ ಮತ್ತು ಸಾರ್ವಜನಿಕ ನಳಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಜೊತೆಗೆ ೮ ಕೆರೆಗಳಿವೆ. ಇಲ್ಲಿ ಗ್ರಾಮಪಂಚಾಯಿತಿಗಳು ಕುಡಿಯುವ ನೀರಿಗಾಗಿ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ತಿಳಿದುಬಂದಿದೆ.

೩೦೦ ಕುಟುಂಬಗಳಲ್ಲಿ ಶೇ. ೬ರಷ್ಟು ಕುಟುಂಬಗಳು ಬೋರ್‌ವೆಲ್‌ನಿಂದ ಕುಡಿಯುವ ನೀರು ಪಡೆಯುತ್ತಿವೆ. ಹಾಗೆಯೇ ಶೇ. ೮೫.೬೭ರಷ್ಟು ಕುಟುಂಬಗಳಿಗೆ ನಳಗಳ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. ಬಾವಿಗಳಿಂದ ಶೇ. ೪.೩೩ರಷ್ಟು ಕುಟುಂಬಗಳು ಇನ್ನೂ ಬಾವಿಯಿಂದ ನೀರು ಸಂಗ್ರಹಿಸುತ್ತಿವೆ. ಉಳಿದಂತೆ ಶೇ. ೪ರಷ್ಟು ಕುಟುಂಬಗಳು ಇತರೆ ಮೂಲಗಳಿಂದ ನೀರು ಪಡೆಯುತ್ತಿವೆ.

ಆದರೆ ಎರಡು ಸ್ಥಳೀಯ ಸಂಸ್ಥೆಗಳಲ್ಲಿ ವೈಯಕ್ತಿಕ ನಳ ಹಾಕಿಸಿಕೊಳ್ಳುವ ಬಗ್ಗೆ ಬಡವ ಶ್ರೀಮಂತರ ನಡುವೆ ಅಂತರವಿದೆ. ಕೂಲಿ ಕಾರ್ಮಿಕರಿರುವುದರಿಂದ ಆರ್ಥಿಕವಾಗಿ ದುರ್ಬಲವಾಗಿದ್ದು ಕೊಂಡು ವೈಯಕ್ತಿಕ ನಳಗಳನ್ನು ಹೊಂದದೇ ಸಾರ್ವಜನಿಕ ನಳಗಳಿಂದಲೇ ಕುಡಿಯುವ ನೀರಿನ ಪಡೆಯುತ್ತಿರುವುದು ತಿಳಿದುಬಂದಿದೆ. ಗ್ರಾಮಪಂಚಾಯಿತಿಗಳಿಗೆ ನೀರು ಪೂರೈಕೆಗೆ ಯಾವುದೇ ಸಮರ್ಪಕ ನಿರ್ವಹಣೆಯ ಅನುಷ್ಠಾನದಲ್ಲಿ ಇಲ್ಲದಿರುವುದು ತಿಳಿದುಬಂದಿದೆ. ಒಟ್ಟಾರೆ ನೀರು ಪೂರೈಕೆಯ ಬಗ್ಗೆ ಎಲ್ಲಾ ಜಾತಿಗಳು ತೃಪ್ತಿಕರವೆಂದು ಉತ್ತರಿಸಿದ್ದಾರೆ. ಆದರೆ ನಿರ್ವಹಣೆ ಮತ್ತು ದುರಸ್ತಿ ಕಾರ್ಯದ ಬಗ್ಗೆ ಸ್ಥಳೀಯ ಸಂಸ್ಥೆಗಳು ಹೆಚ್ಚು ವಿಳಂಬ ಮಾಡುತ್ತದೆ ಎಂದು ಸರಿಸುಮಾರು ಎರಡು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕುಟುಂಬಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದು ಕಂಡುಬಂದಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಯಡಿ ನೀರು ಪೂರೈಕೆಯಾರೂ ಸಹ ಆ ನೀರು ಕುಡಿಯಲು ಯೋಗ್ಯವಾಗಿರುವುದಿಲ್ಲ. ಕಾರಣ ಅ ನೀರನ್ನು ಶುದ್ಧೀಕರಿಸುವ ಕಾರ್ಯವನ್ನು ಮಾಡುವುದೇ ಇಲ್ಲ. ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಯು ಪ್ರತಿ ಗ್ರಾಮದಲ್ಲಿಯೂ ಕುಡಿಯುವ ನೀರಿಗಾಗಿ ಫಿಲ್ಟರ್‌ಗಳನ್ನು ಅಳವಡಿಸಿ ಕೇವಲ ೨ ರೂಪಾಯಿಗೆ ಇನ್ನೂ ಕೆಲವು ಕಡೆ ೫ ರೂಪಾಯಿಗೆ ೨೦ ಲೀಟರ್ ನೀರನ್ನು ಕೊಡುತ್ತಿದೆ. ಆದರೆ ಬಹುತೇಕ ತಳಸಮುದಾಯಗಳು ಈ ನೀರನ್ನು ಬಳಸಲು ಅವಶ್ಯಕವಾದ ರೀಚಾರ್ಜಬಲ್ ವಾಟರ್ ಕಾರ್ಡನ್ನು ತೆಗೆದುಕೊಳ್ಳಲು

ಸಾಧ್ಯವಾಗದ ಸ್ಥಿತಿ ಇದೆ. ಹೀಗಾಗಿ ಫಿಲ್ಟರ್ ನೀರು ಕೇವಲ ಸ್ಥಿತಿವಂತರ ಪಾಲಾಗುತ್ತಿದೆಯೇ ವಿನಾ ತಳಸಮುದಾಯಗಳಿಗೆ ದಕ್ಕದ ಸ್ಥಿತಿ ಇದೆ. ಇಂದಿಗೂ ಗ್ರಾಮಗಳಲ್ಲಿ ನೀರನ್ನು ಶುದ್ಧೀಕರಿಸುವುದು ಎಂದರೆ ವರ್ಷದಲ್ಲಿ ಒಂದೆರಡು ಬಾರಿ ಬ್ಲೀಚಿಂಗ್ ಪುಡಿಯನ್ನು ನೀರಿಗೆ ಸೇರಿಸುವುದು. ಇಷ್ಟಾದರೆ ಶುದ್ಧೀಕರಣ ಪೂರ್ಣಗೊಂಡಂತೆ ಎಂದು ಆಡಳಿತ ವ್ಯವಸ್ಥೆ ಭಾವಿಸುತ್ತದೆ.

ಕರ್ನಾಟಕದ ಶೇಕಡ ೮೦ರಷ್ಟು ಗ್ರಾಮಗಳಲ್ಲಿ ಇಂದು ಫ್ಲೋರೈಡ್‌ಯುಕ್ತ ನೀರಿನ ಸರಬರಾಜಿನಿಂದಾಗಿ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದನ್ನು ನಾವು ಸುದ್ದಿ ಮಾಧ್ಯಮಗಳ ಮೂಲಕ ಅರಿತಿದ್ದೇವೆ. ಇದಕ್ಕೆ ರಾಮನಗರ ಗ್ರಾಮಗಳು ಹೊರತಾಗಿಲ್ಲ. ಇಂದು ರಾಮನಗರ ಜಿಲ್ಲೆಯ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಫ್ಲೋರೈಡ್‌ಯುಕ್ತ ನೀರನ್ನು ಶುದ್ಧೀಕರಿಸುವ ಘಟಕಗಳು ಕಂಡುಬರುತ್ತಿದೆ.

ಅಧ್ಯಯನಕ್ಕೆ ಒಳಪಡುವ ಸಾತನೂರು ಗ್ರಾಮದಲ್ಲಿ ಇತ್ತೀಚೆಗೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಉಳಿದ ಮೂರು ಹಳ್ಳಿಗಳಲ್ಲಿ ನೀರಿನ ಘಟಕಗಳು ಇಲ್ಲ. ಒಂದು ರೂಪಾಯಿ ಹಾಕಿ ೭ ಲೀಟರ್ ನೀರು ಪಡೆಯಬಹುದಾಗಿದೆ. ಆದರೆ ಕೆಲವೇ ಕೆಲವು ಕುಟುಂಬಗಳು ಈ ಸೌಲಭ್ಯ ಪಡೆಯುತ್ತಿವೆ. ಬಹುತೇಕ ಕುಟುಂಬಗಳು ಈ ನೀರು ಪಡೆಯುತ್ತಿಲ್ಲ. ಇದಕ್ಕೆ ಎರಡು ಕಾರಣಗಳೆಂದರೆ, ಹಣ ಕೊಟ್ಟು ನೀರು ಪಡೆಯುವುದಕ್ಕೆ ಜನ ಸಿದ್ಧರಿಲ್ಲ. ಮತ್ತೊಂದು ಕಾರಣ ಶುದ್ಧ ನೀರು ಘಟಕ ಒಂದು ಕಿ.ಮೀ.ಗಿಂತ ದೂರದಲ್ಲಿದೆ. ಹಾಗಾಗಿ ಹೆಚ್ಚಿನ ಕುಟುಂಬಗಳು ಈ ಸೌಲಭ್ಯ ಪಡೆಯುತ್ತಿಲ್ಲ.

ನೀರು ಮತ್ತು ನೈರ್ಮಲ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದ ಹಾಗೆ. ನೈರ್ಮಲ್ಯಕ್ಕೆ ನೀರು ಅತ್ಯಗತ್ಯವಾಗಿ ಬೇಕಾಗಿದೆ. ಆದರೆ ಗ್ರಾಮೀಣ ಜನರು ನೀರಿಗೆ ಆದ್ಯತೆ ನೀಡಿದಷ್ಟು ನೈರ್ಮಲ್ಯಕ್ಕೆ ಕೊಡಲಾಗುತ್ತಿಲ್ಲ. ಇತ್ತೀಚೆಗೆ ಪ್ರಧಾನಮಂತ್ರಿ ಮೋದಿಯವರು ಸ್ವಚ್ಛಭಾರತ ಅಭಿಯಾನ ಕಾರ್ಯಕ್ರಮ ಅನುಷ್ಠಾನಗೊಳಿಸಿ ನೈರ್ಮಲ್ಯಕ್ಕೆ ವಿಶೇಷ ಆದ್ಯತೆ ನೀಡಲಾಗುತ್ತಿದೆ.

೧೯೯೦ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯ ಹಾಗೂ ಚರಂಡಿಗಳನ್ನು ಒದಗಿಸಲು ನಿರ್ಮಲಗ್ರಾಮ ಮತ್ತು ಸ್ವಚ್ಛಗ್ರಾಮ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿತ್ತು.

೧. ಗ್ರಾಮಗಳಲ್ಲಿ ಓಣಿ, ರಸ್ತೆ ಹಾಗೂ ಒಳಚರಂಡಿ ರಸ್ತೆಗಳ ನಿರ್ಮಿಸುವುದು, ಕೊಳಚೆ ನೀರು ಸಾಗಿಸುವ ಮೋರಿ ತೆಗೆಸುವುದು, ಅಲ್ಲದೇ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯ ಹಾಗೂ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳಿಂದಾಗಿ ಇಂದು ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳಿಗೆ ಆದ್ಯತೆ ನೀಡಲಾಗುತ್ತಿದೆ.

ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಶೇ. ೬೩ರಷ್ಟು ಕುಟುಂಬಗಳು ಶೌಚಾಲಯ ಸೌಲಭ್ಯ ಹೊಂದಿವೆ. ೨೦೦೧ರ ಜನಗಣತಿ ಪ್ರಕಾರ ರಾಜ್ಯದ ಶೇ. ೧೭.೫ರಷ್ಟು ಗ್ರಾಮೀಣ ಕುಟುಂಬಗಳು ಮಾತ್ರ ಶೌಚಾಲಯ ಸೌಲಭ್ಯ ಹೊಂದಿದ್ದವು. ನಮ್ಮ ಅಧ್ಯಯನದಲ್ಲಿ ಶೇ. ೬೩ರಷ್ಟು ಕುಟುಂಬಗಳು ಶೌಚಾಲಯ ಹೊಂದಿರುವುದು ಕಂಡುಬಂದಿದೆ. ಇದಕ್ಕೆ ಹಲವಾರು ಕಾರಣಗಳುಂಟು. ಅಧ್ಯಯನಕ್ಕೆ ಒಳಪಟ್ಟ ಗ್ರಾಮಪಂಚಾಯಿತಿಗಳು ಬೆಂಗಳೂರಿಗೆ ಅತ್ಯಂತ ಸಮೀಪವಿರುವುದು ಒಂದು ಕಾರಣವಾದರೆ ಈ ಜನರು ನಗರದೊಂದಿಗೆ ಒಡನಾಟವಿದ್ದು ನಗರದ ಜನರು ಪಡೆಯುತ್ತಿರುವ ಸೌಲಭ್ಯಗಳನ್ನು ತಾವು ಪಡೆಯಬೇಕೆಂಬ ಹಂಬಲವಿರುವುದು ಮತ್ತೊಂದು ಕಾರಣವಾಗಿದೆ. ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅಲ್ಪಸ್ವಲ್ಪ ಅರಿವಿದೆ. ಹಾಗಾಗಿ ಮೂಲಭೂತ ಸೌಲಭ್ಯಗಳ ಪಡೆಯುವಲ್ಲಿ ಹೆಚ್ಚು ಆಸಕ್ತರಾಗುತ್ತಿದ್ದಾರೆ. ಎಲ್ಲಾ ಜಾತಿ ಕುಟುಂಬಗಳಿಗೂ ಶೌಚಾಲಯ ನಿರ್ಮಾಣಕ್ಕೆ ಪ್ರತಿ ಕುಟುಂಬಕ್ಕೂ ಸರ್ಕಾರದಿಂದ ಹಣಕಾಸು ನೆರವು ನೀಡಲಾಗುತ್ತಿದೆ. ಅಧ್ಯಯನಕ್ಕೆ ಒಳಪಟ್ಟ ಪರಿಶಿಷ್ಟ ಜಾತಿ/ಪಂಗಡದ ಶೇ. ೭೬ರಷ್ಟು ಕುಟುಂಬಗಳು ಶೌಚಾಲಯ ಸೌಲಭ್ಯ ಹೊಂದಿವೆ. ಹಾಗೆಯೇ ಅಲ್ಪಸಂಖ್ಯಾತರು ಶೇ. ೪೪ರಷ್ಟು ಕುಟುಂಬಗಳು ಶೌಚಾಲಯ ಸೌಲಭ್ಯ ಹೊಂದಿವೆ. ಹಿಂದುಳಿದ ವರ್ಗ ಶೇ. ೬೪ರಷ್ಟು ಕುಟುಂಬಗಳು ಶೌಚಾಲಯಗಳು ಹೊಂದಿವೆ. ಒಟ್ಟಾರೆಯಾಗಿ ಹೇಳುವುದಾದರೆ ಅಧ್ಯಯನಕ್ಕೆ ಒಳಪಟ್ಟ ೩೦ ಕುಟುಂಬಗಳು ಉತ್ತಮವಾದ ಶೌಚಾಲಯ ಸೌಲಭ್ಯ ಹೊಂದಿವೆ.

ಭಾರತದ ಬಹುತೇಕ ಎಲ್ಲಾ ಕುಟುಂಬಗಳು ವೈಯಕ್ತಿಕ ಶೌಚಾಲಯವನ್ನು ಹೊಂದಬೇಕೆಂಬ ಅಧಿಸೂಚನೆಯನ್ನು ಭಾರತ ಸರ್ಕಾರವು ಘೋಷಿಸಿದೆ. ಈ ಕಾರಣಕ್ಕಾಗಿಯೇ ಸರ್ಕಾರವು ಅನುದಾನಗಳನ್ನು ಬಿಡುಗಡೆ ಮಾಡುತ್ತಿದೆ. ಒಂದು ಕುಟುಂಬಕ್ಕೆ ೧೨೦೦೦ ರೂಪಾಯಿ ಅನುದಾನ ನೀಡಲಾಗುತ್ತಿದೆ. ಪ್ರತಿಯೊಂದು ಗ್ರಾಮಪಂಚಾಯಿತಿಯ ಸದಸ್ಯರೂ ತಮ್ಮ ಮನೆಗಳಲ್ಲಿ ಪ್ರತ್ಯೇಕವಾದ ಶೌಚಾಲಯವನ್ನು ಕಡ್ಡಾಯವಾಗಿ ಹೊಂದಿರಬೇಕು. ಯಾರಿಗೆ ಶೌಚಾಲಯವಿಲ್ಲವೋ ಅವರು ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ ಎಂಬ ನಿಯಮವನ್ನೂ ಹಾಕಲಾಗಿದೆ. ಹೀಗಿದ್ದೂ ನಿರೀಕ್ಷಿತ ಗುರಿಯನ್ನೂ ಭಾರತ ತಲುಪಲಾಗುತ್ತಿಲ್ಲ. ಬಯಲು ಶೌಚಾಲಯದಿಂದ ಹೆಚ್ಚು ಅವಮಾನಗಳಿಗೆ ಗುರಿಯಾಗುವವರು ಮಹಿಳೆಯರಾಗಿದ್ದಾರೆ. ಕತ್ತಲೊಳಗೆ ಮುಗಿಸಬೇಕಾದ ಅನಿವಾರ್ಯತೆ ಗ್ರಾಮಗಳಲ್ಲಿದೆ. ಇದು ಕೇವಲ ಕರ್ನಾಟಕ ಒಂದರ ಸಮಸ್ಯೆಯಾಗಿರದೆ ಇಡೀ ಭಾರತದ ಕುಟುಂಬಗಳ ಮಹಿಳೆಯರ ಸಮಸ್ಯೆಯೂ ಆಗಿದೆ.

ಗ್ರಾಮೀಣ ಭಾರತದ ಪ್ರಧಾನ ಲಕ್ಷಣ ಅವಿಭಕ್ತ ಕುಟುಂಬಗಳು. ಮೂರು ಮತ್ತು ನಾಲ್ಕು ತಲೆಮಾರುಗಳ ಕುಟುಂಬದ ಸದಸ್ಯರೆಲ್ಲರೂ ಒಂದೇ ಸೂರಿನಡಿ ನೆಲೆಸಿ ಒಟ್ಟಾಗಿ ವಾಸವಾಗಿರುತ್ತಾರೆ. ಆದರೆ ಜನರು ಕೃಷಿಯೇತರ ಉದ್ಯೋಗಗಳು ದೊರೆತಂತೆ ನಗರ ಜೀವನದತ್ತ ಸಾಗುತ್ತಿದ್ದಂತೆಲ್ಲ

ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಶೇ. ೪೪.೬೬ರಷ್ಟು ಕುಟುಂಬಗಳು ಅವಿಭಕ್ತ ಕುಟುಂಬಗಳಿದ್ದಾರೆ. ಶೇ. ೫೫.೩೪ರಷ್ಟು ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಸಾತನೂರು ಗ್ರಾಮಪಂಚಾಯಿತಿಯ ಅಧ್ಯಯನಕ್ಕೆ ಒಳಪಟ್ಟ ೧೫೦ ಕುಟುಂಬಗಳಲ್ಲಿ ಶೇ. ೪೨ರಷ್ಟು ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿವೆ. ಶೇ. ೫೮ರಷ್ಟು ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಅವಿಭಕ್ತ ಕುಟುಂಬಗಳಿಗಿಂತ ವಿಭಕ್ತ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇನ್ನು ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯಲ್ಲಿ ೧೫೦ ಕುಟುಂಬಗಳಲ್ಲಿ ಶೇ. ೪೭೩೩ ಕುಟುಂಬಗಳು ಅವಿಭಕ್ತ ಕುಟುಂಬಗಳು. ಉಳಿದಂತೆ ಶೇ. ೫೨.೬೭ರಷ್ಟು ಕುಟುಂಬಗಳು ವಿಭಕ್ತ ಕುಟುಂಬಗಳಿವೆ. ಸಾತನೂರಿಗಿಂತ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಅವಿಭಕ್ತ ಕುಟುಂಬಗಳು ಆಧಿಕವಾಗಿದೆ.

ಕುಟುಂಬದ ಸದಸ್ಯರು ಶಿಕ್ಷಿತರಾಗುತ್ತಾ, ಉದ್ಯೋಗ ಪಡೆದಂತೆಲ್ಲಾ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ರೂಪುಗೊಳ್ಳುತ್ತಿವೆ. ರಾಜಧಾನಿ ಬೆಂಗಳೂರಿನೊಂದಿಗೆ ನಿಕಟ ಸಂಬಂಧವಿಟ್ಟುಕೊಂಡಿರುವ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಗಳು ನಿಧಾನವಾಗಿ ಅವಿಭಕ್ತ ಕುಟುಂಬಗಳತ್ತ ಸಾಗುತ್ತಿರುವುದನ್ನು ಗಮನಿಸಬಹುದಾಗಿದೆ. ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾದಂತೆಲ್ಲಾ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ.

ಶಿಕ್ಷಣವು ಮಾನವನ ಸರ್ವತೋಮುಖ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಕ್ಷಣದಿಂದ ಜ್ಞಾನ ಹಾಗೂ ಕೌಶಲ್ಯದ ತಳಹದಿ ಭದ್ರವಾಗುತ್ತದೆ. ಇದರಿಂದ ಉದ್ಯೋಗ ದಕ್ಕುತ್ತದೆ. ಉದ್ಯೋಗದಿಂದ ಆದಾಯ ಹೆಚ್ಚಳವಾಗುತ್ತದೆ. ಆದಾಯ ಹೆಚ್ಚಳದಿಂದ ಆರೋಗ್ಯವು ಉತ್ತಮಗೊಳ್ಳುತ್ತದೆ. ಗ್ರಾಮೀಣ ಪ್ರದೇಶದ ಜನರ ಬದುಕು ಸುಧಾರಿಸಿದಂತೆಲ್ಲ ಬಡತನರೇಖೆ ಮೇಲೆ ಬರುತ್ತದೆ. ಬಡತನ ನಿರ್ಮೂಲನೆಯಾದಂತೆಲ್ಲ ಕುಟುಂಬದ ಸದಸ್ಯರ ಶಿಕ್ಷಣ ಹೆಚ್ಚಾಗುತ್ತದೆ. ಜೊತೆಗೆ ಕುಟುಂಬದ ಮಹಿಳೆಯರ ಶಿಕ್ಷಣವು ಹೆಚ್ಚಾಗುತ್ತದೆ. ಕುಟುಂಬದ ಮಹಿಳೆಯರು ಶಿಕ್ಷಿತರಾದರೆ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗುತ್ತಾರೆ. ಹೀಗೆ ಶಿಕ್ಷಣವು ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹೀಗೆ ಎಲ್ಲಾ ವಲಯಗಳ ಪ್ರಗತಿಪರ ಬದಲಾವಣೆಗೆ ಕಾರಣವಾಗಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳ ಸದಸ್ಯರ ಶಿಕ್ಷಣ ಗಮನಿಸಿದಾಗ ಶೇ. ೭೦ರಷ್ಟು ಜನರು ಶಿಕ್ಷಿತರಾಗಿದ್ದಾರೆ. ಹಿಂದುಳಿದ ವರ್ಗದ ೮೬ರಷ್ಟು ಕುಟುಂಬಗಳು, ಪರಿಶಿಷ್ಟ ಜಾತಿಯ ಶೇ. ೮೮ರಷ್ಟು ಕುಟುಂಬಗಳು, ಪರಿಶಿಷ್ಟ ಪಂಗಡದ ಶೇ. ೬೦ರಷ್ಟು ಹಾಗೂ ಅಲ್ಪಸಂಖ್ಯಾತ ಸಮುದಾಯದ ಶೇ. ೭೨ರಷ್ಟು ಕುಟುಂಬದ ಸದಸ್ಯರು ಶಿಕ್ಷಿತರಾಗಿದ್ದಾರೆ. ರಾಜ್ಯದ ಶಿಕ್ಷಣ ಪ್ರಮಾಣ ಶೇ. ೭೫ಕ್ಕೆ ಹೋಲಿಸಿದರೆ ಅಧ್ಯಯನಕ್ಕೆ ಒಳಪಟ್ಟ ಸಮುದಾಯಗಳ ಶಿಕ್ಷಣದ ಪ್ರಮಾಣ ಕಡಿಮೆ ಎಂದು ಹೇಳಬಹುದಾದರೂ ರಾಜ್ಯದ ಗ್ರಾಮೀಣ ಶಿಕ್ಷಣ ಪ್ರಮಾಣ ಶೇ. ೬೮.೮೬ಕ್ಕೆ ಹೋಲಿಸಿದರೆ, ಶೇ. ೨ರಷ್ಟು ಅಧಿಕವಿದೆ.

ಆದರೆ, ಶಿಕ್ಷಣ ಪಡೆಯುವುದರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರೆ ಸಿಂಹಪಾಲು. ಶೇ. ೩೫ರಷ್ಟು ಜನರಿದ್ದಾರೆ. ಹಾಗೆಯೇ ಮಾಧ್ಯಮಿಕ, ಪ್ರೌಢಶಿಕ್ಷಣ ಪಡೆದವರು ಹಾಗೂ ಇತರೆ ಶಿಕ್ಷಣ ಪಡೆದವರು ಕಡಿಮೆ ಪ್ರಮಾಣದಲ್ಲಿದ್ದಾರೆ.

ಅಧ್ಯಯನಕ್ಕೆ ಒಳಪಟ್ಟ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಎರಡು ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಜನರ ಶಿಕ್ಷಣವನ್ನು ಗಮನಿಸಿದಾಗ ಮಹಿಳಾ ಶಿಕ್ಷಣ ಅತ್ಯಂತ ಕೆಳಮಟ್ಟದಲ್ಲಿ ಇರುವುದು ಕಂಡುಬರುತ್ತದೆ. ಸಾತನೂರು ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಏಳು ಹಳ್ಳಿಗಳು ಸೇರಿವೆ. ಸಾತನೂರು, ನಾಗರಸನಕೋಟೆ, ಸೊರೆಕಾಯಿದೊಡ್ಡಿ, ಚಿಕ್ಕ ಆಲಹಳ್ಳಿ, ದೇವೀರಮ್ಮನದೊಡ್ಡಿ, ಕಾಳೇಗೌಡನದೊಡ್ಡಿ ಹಾಗೂ ಹೊಸದೊಡ್ಡಿ ಹಳ್ಳಿಗಳು ಸೇರುತ್ತವೆ. ಹಾಗೆಯೇ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಇಲ್ಲಿಯೂ ಏಳು ಹಳ್ಳಿಗಳು ಸೇರಿವೆ. ದೊಡ್ಡ ಆಲಹಳ್ಳಿ, ಅಂಬೇಡ್ಕರ್ ನಗರ, ಎಡಮಾರನಹಳ್ಳಿ, ನಾಯಕನಹಳ್ಳಿ, ಮಕ್ಕಳಾಂದ, ವೀರೇಗೌಡನದೊಡ್ಡಿ ಹಾಗೂ ದೇವೆಗೌಡನ ದೊಡ್ಡಿ ಹಳ್ಳಿಗಳು ಸೇರುತ್ತವೆ.

೨೦೧೧ರ ಜನಗಣತಿ ಪ್ರಕಾರ ಸಾತನೂರು ಗ್ರಾಮಪಂಚಾಯಿತಿಯಲ್ಲಿ ಶಿಕ್ಷಣದ ಪ್ರಮಾಣ ಶೇ. ೭೪.೮೪ರಷ್ಟಿವೆ. ಲಿಂಗವಾರು ಗಮನಿಸಿದಾಗ ಪುರುಷರ ಪ್ರಮಾಣ ಶೇ. ೮೧.೪೪ರಷ್ಟಿದ್ದಾರೆ. ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೬೮ರಷ್ಟಿದೆ. ಹಾಗೆಯೇ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳ ಜನರ ಶಿಕ್ಷಣ ಪ್ರಮಾಣ ಶೇ. ೫೭.೨೬ರಷ್ಟಿದೆ. ಲಿಂಗವಾರು ಪುರುಷರ ಶಿಕ್ಷಣ ಪ್ರಮಾಣ ಶೇ. ೬೫.೦೮ರಷ್ಟು ಹಾಗೂ ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೪೯.೧೮ರಷ್ಟಿದೆ. ಎರಡು ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಶಿಕ್ಷಣ ಪ್ರಮಾಣ ಶೇ. ೬೬ರಷ್ಟಿದ್ದು, ಲಿಂಗವಾರು ಪುರುಷ ಶಿಕ್ಷಣ ಪ್ರಮಾಣ ಶೇ. ೭೩ರಷ್ಟಿದ್ದಾರೆ, ಮಹಿಳಾ ಶಿಕ್ಷಣ ಪ್ರಮಾಣ ಶೇ. ೬೭.೯೪ರಷ್ಟಿದೆ. ಅಂದರೆ, ಅಧ್ಯಯನಕ್ಕೆ ಒಳಪಟ್ಟ ಮಹಿಳಾ ಶಿಕ್ಷಣ ಪ್ರಮಾಣ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ರಾಜ್ಯದ ಮಹಿಳಾ ಶಿಕ್ಷಣ ಪ್ರಮಾಣ ಶೇ. ೬೮ರಷ್ಟಿದೆ. ಹಾಗೆಯೇ ರಾಜ್ಯದ ಗ್ರಾಮೀಣ ಮಹಿಳಾ ಶಿಕ್ಷಣದ ಪ್ರಮಾಣ ಶೇ. ೫೯ರಷ್ಟಿದೆ. ಅಧ್ಯಯನಕ್ಕೆ ಒಳಪಟ್ಟ ಎರಡು ಗ್ರಾಮಪಂಚಾಯಿತಿಗಳ ಮಹಿಳಾ ಶಿಕ್ಷಣ ಪ್ರಮಾಣ ನಿಕೃಷ್ಟವಾಗಿದೆ.

ರಾಮನಗರ ಜಿಲ್ಲೆಯ ಶಿಕ್ಷಣ ಪ್ರಮಾಣ ಶೇ. ೬೮.೮೬ರಷ್ಟಿದ್ದಾರೆ. ಪುರುಷರ ಶಿಕ್ಷಣ ಪ್ರಮಾಣ ಶೇ. ೭೭.೯೨ರಷ್ಟಿದ್ದು, ಮಹಿಳೆಯರ ಶಿಕ್ಷಣ ಪ್ರಮಾಣ ಶೇ. ೫೯.೬೦ರಷ್ಟಿದೆ. ಅಧ್ಯಯನಕ್ಕೆ ಒಳಪಟ್ಟ ಎರಡು ಗ್ರಾಮಪಂಚಾಯಿತಿಗಳ ಮಹಿಳಾ ಶಿಕ್ಷಣ(ಶೇ. ೫೦) ರಾಜ್ಯದ ಮಹಿಳಾ ಶಿಕ್ಷಣ (ಶೇ. ೬೮.೧೩) ಗ್ರಾಮೀಣ ಮಹಿಳಾ ಶಿಕ್ಷಣ(ಶೇ. ೫೯.೬೦) ಹಾಗೂ ರಾಮನಗರ ಜಿಲ್ಲೆಯ ಮಹಿಳೆಯರ ಶಿಕ್ಷಣ ಪ್ರಮಾಣ(ಶೇ. ೬೧) ಹಾಗೂ ರಾಮನಗರ ಜಿಲ್ಲೆ ಗ್ರಾಮೀಣ ಮಹಿಳಾ ಶಿಕ್ಷಣ ಪ್ರಮಾಣ(ಶೇ. ೫೯.೬೦) ಕಡಿಮೆ ಇದೆ. ರಾಜಧಾನಿ ಬೆಂಗಳೂರಿಗೆ ಅತ್ಯಂತ ಸಮೀಪವಿರುವ ಪಂಚಾಯಿತಿಗಳ ಮಹಿಳಾ ಶಿಕ್ಷಣ ಪ್ರಮಾಣ ಇಷ್ಟೊಂದು ನಿಕೃಷ್ಟವಾಗಿರುವುದು ಶೋಚನೀಯ ಸಂಗತಿಯಾಗಿದೆ.

ಶಾಲೆಗೆ ಹೋಗುತ್ತಿರುವ ಹೆಣ್ಣುಮಕ್ಕಳ ಕುಟುಂಬಗಳ ಆರ್ಥಿಕ ಸ್ಥಿತಿಯನ್ನು ಅರಿಯಲು ಕುಟುಂಬದ ಸದಸ್ಯರ ವೃತ್ತಿಯನ್ನು ಅವಲೋಕಿಸಲಾಗಿದೆ. ಕೃಷಿ, ಸರ್ಕಾರಿ ಕೆಲಸ, ವ್ಯಾಪಾರ, ಕೂಲಿ ಮುಂತಾದವುಗಳಲ್ಲಿ ಕುಟುಂಬವು ಯಾವುದನ್ನು ಅನುಸರಿಸಿವೆ ಎಂಬುದನ್ನು ಗಮನಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ಆರ್ಥಿಕತೆಯ ತಾಯಿಬೇರು ಕೃಷಿಯೆಂದರೆ ತಪ್ಪಾಗಲಾರದು. ಹೀಗಾಗಿ ಶಾಲೆಗೆ ಹೋಗುತ್ತಿರುವ ಹೆಣ್ಣುಮಕ್ಕಳ ಕುಟುಂಬಗಳಲ್ಲಿ ಎಷ್ಟು ಕುಟುಂಬಗಳು ಕೃಷಿ ಆಧಾರಿತ ಕುಟುಂಬಗಳಾಗಿವೆ ಎಂಬುದನ್ನು ನೋಡಲಾಯಿತು. ಕ್ಷೇತ್ರಕಾರ್ಯಕ್ಕಾಗಿ ನಾಲ್ಕು ಗ್ರಾಮಗಳಿಂದ ವಿವಿಧ ಜಾತಿ ವರ್ಗದ ಒಟ್ಟು ೩೦೦ ಕುಟುಂಬಗಳನ್ನು ಅವಲೋಕಿಸಲಾಗಿ ಕೃಷಿ ಭೂಮಿಯನ್ನು ಹೊಂದಿದ ಕುಟುಂಬಗಳು ಈ ಕೆಳಗಿನಂತೆ ಕಂಡುಬಂದವು.

ಅಧ್ಯಯನಕ್ಕೆ ಒಳಪಟ್ಟ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಈ ಎರಡು ಗ್ರಾಮಪಂಚಾಯಿತಿಗಳಿಂದ ಒಟ್ಟು ಶೇ. ೧೯.೬೭ರಷ್ಟು ಕುಟುಂಬಗಳು ಭೂಮಿ ಹೊಂದಿವೆ. ಉಳಿದಂತೆ ಶೇ. ೮೦.೩೩ರಷ್ಟು ಕುಟುಂಬಗಳು ಕೃಷಿ ಭೂಮಿಯನ್ನು ಹೊಂದಿಲ್ಲ. ಕೃಷಿ ಭೂಮಿ ಹೊಂದಿರುವ ಕುಟುಂಬಗಳನ್ನು ಜಾತಿವಾರು ಗಮನಿಸಿದಾಗ ಸಾತನೂರು ಗ್ರಾಮಪಂಚಾಯಿತಿಯಲ್ಲಿ ಶೇ. ೨೪ರಷ್ಟು ಒಬಿಸಿ ಕುಟುಂಬಗಳು ಭೂಮಿಯನ್ನು ಹೊಂದಿವೆ. ಅಂದರೆ ೧೮ ಕುಟುಂಬಗಳು ಭೂಮಿ ಹೊಂದಿವೆ. ಇದರಲ್ಲಿ ಐದು ಕುಟುಂಬಗಳು ಒಂದು ಎಕರೆ ಭೂಮಿ ಹೊಂದಿವೆ. ಎರಡು ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವ ೭ ಕುಟುಂಬಗಳಿವೆ. ಹಾಗೆಯೇ ದೊಡ್ಡ ಜಮೀನ್ದಾರಾರ ಮೂರು ಕುಟುಂಬಗಳಿವೆ. ಈ ಕುಟುಂಬಗಳು ಐದು ಎಕರೆಗಿಂತ ಹೆಚ್ಚು ಭೂಮಿ ಹೊಂದಿವೆ. ಉಳಿದಂತೆ ಪರಿಶಿಷ್ಟ ಜಾತಿಯ ಮೂರು ಕುಟುಂಬಗಳು ಮಾತ್ರ ಭೂಮಿ ಹೊಂದಿವೆ. ಇವರಲ್ಲಿ ಒಂದು ಕುಟುಂಬ ಒಂದು ಎಕರೆ ಭೂಮಿ ಹೊಂದಿದೆ. ಎರಡು ಕುಟುಂಬಗಳು ಎರಡು ಎಕರೆಗಿಂತ ಹೆಚ್ಚು ಭೂಮಿ ಹೊಂದಿವೆ. ಪರಿಶಿಷ್ಟ ಪಂಗಡದ ೧೨ ಕುಟುಂಬಗಳು ಭೂಮಿ ಹೊಂದಿವೆ. ಇವರಲ್ಲಿ ಎರಡು ಕುಟುಂಬಗಳು ಒಂದು ಎಕರೆಗಿಂತ ಹೆಚ್ಚು ಜನ ಹೊಂದಿದ್ದಾರೆ. ಆರು ಕುಟುಂಬಗಳು ಎರಡು ಎಕರೆಗಿಂತ ಹೆಚ್ಚು ಜಮೀನು ಹೊಂದಿವೆ. ನಾಲ್ಕು ಕುಟುಂಬಗಳು ೫ ಎಕರೆಗಿಂತ ಹೆಚ್ಚು ಭೂಮಿ ಹೊಂದಿವೆ.

ಸಾತನೂರು ಗ್ರಾಮಪಂಚಾಯಿತಿಯಲ್ಲಿ ಒಂದೇ ಒಂದು ಅಲ್ಪಸಂಖ್ಯಾತ ಕುಟುಂಬ ಜಮೀನು ಹೊಂದಿದೆ. ಒಟ್ಟಾರೆಯಾಗಿ ಸಾತನೂರು ಗ್ರಾಮಪಂಚಾಯಿತಿಯಲ್ಲಿ ಒಕ್ಕಲಿಗರು ಲಿಂಗಾಯತರು ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳು ಜಮೀನು ಹೊಂದಿವೆ.

ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯಲ್ಲೂ ಕೃಷಿ ಭೂಮಿ ಹೊಂದಿರುವ ಚಿತ್ರಣ ಭಿನ್ನವಾಗಿಲ್ಲ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಗಳ ಒಟ್ಟು ಶೇ. ೧೬.೬೭ರಷ್ಟು ಕುಟುಂಬಗಳು ಜಮೀನು ಹೊಂದಿವೆ. ಅಂದರೆ ಒಟ್ಟು ೧೫೦ ಕುಟುಂಬಗಳಲ್ಲಿ ೨೫ ಕುಟುಂಬಗಳು ಆಸ್ತಿ ಹೊಂದಿವೆ. ಆಸ್ತಿ

ಹೊಂದಿರುವ ಕುಟುಂಬಗಳ ಜಾತಿವಾರು ಗಮನಿಸಿದಾಗ ಒಬಿಸಿ ೧೫ ಕುಟುಂಬಗಳು ಜಮೀನು ಹೊಂದಿವೆ. ಇವರಲ್ಲಿ ೪ ಕುಟುಂಬಗಳು ಒಂದು ಎಕರೆ ಭೂಮಿ ಹೊಂದಿದ್ದಾರೆ. ೧೯ ಕುಟುಂಬಗಳು ಎರಡು ಎಕರೆಗಿಂತ ಹೆಚ್ಚು ಭೂಮಿ ಹೊಂದಿವೆ. ಉಳಿದಂತೆ ಒಂದು ಕುಟುಂಬ ಐದು ಎಕರೆ ಭೂಮಿ ಹೊಂದಿದೆ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಅಧ್ಯಯನಕ್ಕೆ ಒಳಪಟ್ಟು ಪರಿಶಿಷ್ಟ ಜಾತಿಯ ಎರಡು ಕುಟುಂಬಗಳು ಎರಡು ಎಕರೆಗಿಂತ ಹೆಚ್ಚು ಭೂಮಿ ಹೊಂದಿವೆ. ಹಾಗೆಯೇ ಪರಿಶಿಷ್ಟ ಪಂಗಡದ ಎರಡು ಕುಟುಂಬಗಳು ಒಂದು ಎಕರೆ ಭೂಮಿ ಹೊಂದಿದ್ದಾರೆ. ಒಂದು ಕುಟುಂಬ ಎರಡು ಎಕರೆಗಿಂತ ಹೆಚ್ಚು ಭೂಮಿ ಹೊಂದಿದೆ.

ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಅಲ್ಪಸಂಖ್ಯಾತ ಒಂದು ಕುಟುಂಬ ಜಮೀನು ಹೊಂದಿದೆ. ಒಟ್ಟಾರೆ ಎರಡು ಗ್ರಾಮಪಂಚಾಯಿತಿಗಳ ಜಮೀನು ಹೊಂದಿರುವವರ ವಿವರ ನೋಡಿದಾಗ ಒಬಿಸಿ ಮತ್ತು ಎಸ್.ಟಿ. ಸಮುದಾಯ ಜಮೀನು ಹೊಂದಿರುವುದು ಕಂಡುಬರುತ್ತದೆ. ಆದರೆ ಒಟ್ಟಾರೆ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಶೇ. ೮೦ರಷ್ಟು ಕುಟುಂಬಗಳಿಗೆ ಭೂಮಿ ಇಲ್ಲ. ಆಸ್ತಿ ಹೊಂದಿರುವವರ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತಿರುವುದು ಕಾಣುತ್ತೇವೆ. ಕೃಷಿ ಭೂಮಿ ಇಲ್ಲದೆ ಅಥವಾ ಕೃಷಿ ಕೂಲಿಯೂ ಇಲ್ಲದ ಕುಟುಂಬಗಳು ನಗರಗಳತ್ತ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಿಗೆ ಕೃಷಿ ಮತ್ತು ಕೃಷಿ ಅವಲಂಬಿತ ಕೆಲಸಗಳು ಜೀವನೋಪಾಯಕ್ಕೆ ಮಾರ್ಗವಾಗಿದೆ. ಇಲ್ಲಿ ಶೇ. ೬೩ರಷ್ಟು ಕುಟುಂಬಗಳು ಕೃಷಿ ಕೂಲಿಯನ್ನು ಅವಲಂಬಿಸಿವೆ. ಸಾತನೂರು ಗ್ರಾಮಪಂಚಾಯಿತಿಯಲ್ಲಿ ಭೂರಹಿತ ಕಾರ್ಮಿಕರ ಪ್ರಮಾಣ ಶೇ. ೭೭ರಷ್ಟಿದೆ. ಹಾಗೆಯೇ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಶೇ. ೬೨ರಷ್ಟು ಕುಟುಂಬಗಳು ಕೃಷಿಯಲ್ಲಿ ನಿರತರಾಗಿವೆ. ಇವರೆಲ್ಲರಿಗೂ ಕೃಷಿ ಮತ್ತು ಕೃಷಿಯೇತರ ಕೆಲಸಗಳಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಕೃಷಿಯೇತರ ಕೆಲಸಗಳಲ್ಲಿ ನಿರತರಾಗಿರುವ ಪ್ರಮಾಣ ಶೇ. ೩೬.೬೬ರಷ್ಟು ಕುಟುಂಬಗಳು ಗಾರೆ ಕೆಲಸ, ರೇಷ್ಮೆ, ಕಲ್ಲುಗಣಿ, ಮಾರುಕಟ್ಟೆಯಲ್ಲಿ ಕಾರ್ಮಿಕರಾಗಿದ್ದಾರೆ. ಗಾರ್ಮೆಂಟ್ಸ್, ಕಿರಾಣಿ ಅಂಗಡಿಗಳಲ್ಲಿ ಕೆಲಸ, ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಉಳಿದಂತೆ ಅಧ್ಯಯನದಲ್ಲಿ ೫ ಕುಟುಂಬದ ಸದಸ್ಯರು ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಇಬ್ಬರು ಕ್ಲರ್ಕ್, ಒಬ್ಬೊಬ್ಬರಂತೆ 'ಡಿ' ಗ್ರೂಪ್ ನೌಕರ, ಶಿಕ್ಷಕ, ಕಾರ್ಯದರ್ಶಿ ಮತ್ತು ಉಪನ್ಯಾಸಕರು ಇದ್ದಾರೆ. ಅರೆಸರ್ಕಾರಿ ಕೆಲಸದಲ್ಲಿ ೭ ಜನರು ನಿರತರಾಗಿದ್ದಾರೆ.

ಶಿಕ್ಷಕರು ೩ ಜನರಿದ್ದಾರೆ. ತಾಲೂಕು ಕಚೇರಿಯಲ್ಲಿ ಒಬ್ಬರು, ಗ್ರಾಮಪಂಚಾಯಿತಿಯ ಬಿಲ್‌ಕಲೆಕ್ಟರ್ ಹಾಗೂ ವಾಟರ್‌ಮ್ಯಾನ್, ರೇಷ್ಮೆ ಇಲಾಖೆಯಲ್ಲಿ ಒಬ್ಬರಿದ್ದಾರೆ. ಇತರೆ ಕೆಲಸ ಮಾಡುತ್ತಿರುವ ಇಬ್ಬರು ಒಟ್ಟು ಎರಡು ಪಂಚಾಯಿತಿಗಳಿಂದ ೯೮ ಜನರಿದ್ದಾರೆ. ಆದರೆ ಶೇ. ೩೨.೭ರಷ್ಟು ಕುಟುಂಬಗಳು ಇತರೆ ಬೇರೆ ಬೇರೆ ಕೆಲಸಗಳಲ್ಲಿ ದುಡಿಯುತ್ತಿದ್ದಾರೆ.

ಅಭಿವೃದ್ಧಿ ಪರಿಕಲ್ಪನೆ ಈಗ ಜಗತ್ತಿನಾದ್ಯಂತ ಸುದ್ದಿಯಾಗಿದೆ. ಜನರ ಆಯ್ಕೆಯ ವಿಸ್ತರಣೆಗೆ ಅಗತ್ಯವಾದ ಧಾರಣಸಾಮರ್ಥ್ಯ ನಿರ್ಮಿಸುವುದಾಗಿದೆ. ಮಾನವ ಅಭಿವೃದ್ಧಿ ಎಂದರೆ ಕೇವಲ ಅಂತರ್‌ಸಾಮರ್ಥ್ಯ ಹೆಚ್ಚಿಸುವುದು ಮಾತ್ರವಲ್ಲದೆ ಅಗತ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ಉತ್ತಮ ಬದುಕು ಕಟ್ಟಿಕೊಳ್ಳುವಂತಹ ವಾತಾವರಣ ನಿರ್ಮಿಸುವುದಾಗಿದೆ. ಮಾನವ ಅಭಿವೃದ್ಧಿಯ ಆಯಾಮಗಳು ಆರೋಗ್ಯ, ಶಿಕ್ಷಣ ಮತ್ತು ಆದಾಯಗಳಾಗಿವೆ. ಆದಾಯ, ಆರೋಗ್ಯ ಮತ್ತು ಶಿಕ್ಷಣ ಇವುಗಳ ನಡುವೆ ನೇರ ಸಂಬಂಧವಿದ್ದು ಆದಾಯ ಹೆಚ್ಚಿಸುವ ಮೂಲಕ ಉತ್ತಮ ಆರೋಗ್ಯದ ಜೊತೆ ಜೊತೆಗೆ ಶಿಕ್ಷಣ ಪಡೆಯುವಂತೆ ಮಾಡುವುದಾಗಿದೆ. ಹಾಗಾಗಿಯೇ ಸ್ವಯಂ ಉದ್ಯೋಗಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಜನಸಂಖ್ಯೆಯ ವೃತ್ತಿಸಂಬಂಧ ವರ್ಗೀಕರಣವು ಆರ್ಥಿಕ ಸ್ವರೂಪದ ಮಹತ್ವ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆಯಲ್ಲಿ ವ್ಯತ್ಯಯಗಳನ್ನು ತಿಳಿಸುತ್ತದೆ. ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಬಡತನದಲ್ಲಿ ಸಿಲುಕಿ ನರಳುತ್ತಿರುವ ಬಹುದೊಡ್ಡ ಸಮುದಾಯವೆಂದರೆ ಕೃಷಿ ಕೂಲಿ ಕಾರ್ಮಿಕರು. ಅವರ ಆಸ್ತಿ ಮಾಲೀಕತ್ವದ ಪ್ರಮಾಣ ಈಗಾಗಲೇ ವಿವರಿಸಲಾಗಿದೆ. ಬಡವರ ಜೀವನಮಟ್ಟವನ್ನು ಲಭ್ಯವಿರುವ ದುಡಿಮೆಯ ಅವಕಾಶಗಳಲ್ಲಿ ಕಾಣಬಹುದಾಗಿದೆ. ಅವರು ಆದಾಯಗಳಿಸುವ ಸಾಮರ್ಥ್ಯ ಮತ್ತು ಅವರು ಪಡೆಯುವ ಕೂಲಿ ಪ್ರಮಾಣ ಅವಲಂಬಿಸಿರುತ್ತದೆ.

ಸರ್ಕಾರವು ಜನರಿಗೆ ಸ್ವಯಂ ಉದ್ಯೋಗ ಒದಗಿಸಿ ಬದುಕು ಸುಧಾರಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆ. ಆದರೂ ಅಧ್ಯಯನಕ್ಕೆ ಒಳಪಟ್ಟ ಬಹುಸಂಖ್ಯಾತ ಕುಟುಂಬಗಳು ಈ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ರಾಜಧಾನಿ ಬೆಂಗಳೂರಿಗೆ ಇಷ್ಟು ಹತ್ತಿರದಲ್ಲಿ ಇದ್ದರೂ ಕೃಷಿಯೇತರ ಕೆಲಸ ಮಾಡುವವರ ಪ್ರಮಾಣ ಬಹಳ ಕಡಿಮೆ ಇದೆ. ದೂರದ ಬೆಟ್ಟ ನುಣ್ಣಗೆ ಎನ್ನುವ ಗಾದೆಯಂತೆ ಬೆಂಗಳೂರು ಆಸುಪಾಸಿನ ಜನರು ಕೃಷಿಯೇತರ ಕೆಲಸಗಳಲ್ಲಿ ತೊಡಗುತ್ತಿದ್ದಾರೆ ಎಂಬ ಭಾವನೆ ಜನರಲ್ಲಿದೆ. ಅವರೇ ಶೇ. ೬೩ರಷ್ಟು ಕುಟುಂಬಗಳು ಇನ್ನು ಕೃಷಿ ಅವಲಂಬಿಸಿ ಜೀವನ ಸಾಗಿಸುತ್ತಿರುವ ಸಂಗತಿ ಅಧ್ಯಯನದಿಂದ ತಿಳಿದುಬರುತ್ತದೆ.

ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳ ಕಾರ್ಯಕ್ಷಮತೆಯನ್ನು ಉತ್ತಮಪಡಿಸುವಿಕೆ ಮೂಲಸೌಲಭ್ಯಗಳ ವ್ಯಾಪ್ತಿ ಮತ್ತು ಗುಣಮಟ್ಟ ಸುಧಾರಿಸುವಿಕೆ, ಸೇವೆಗಳ ಗುಣಮಟ್ಟ ಸುಧಾರಿಸುವ ಮೂಲಕ ಮಾನವ ಸಂಪನ್ಮೂಲ ಗುಣಮಟ್ಟ ಸುಧಾರಿಸುವುದು. ಗ್ರಾಮೀಣ ಸಂಪರ್ಕ ವಸತಿ, ಕುಡಿಯುವ ನೀರು ಪೂರೈಕೆ, ನೈರ್ಮಲ್ಯ ಜಲಾಯನ ಅಭಿವೃದ್ಧಿ ಸಣ್ಣ ನೀರಾವರಿ ಒಳಗೊಂಡಂತೆ ಮೂಲಸೌಲಭ್ಯಗಳ ಅಭಿವೃದ್ಧಿಗೆ ಸರ್ಕಾರವು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ.

ಉದ್ಯೋಗಕ್ಕೆ ಸಂಬಂಧಿಸಿದಂತೆ ಕೂಲಿ ಕೆಲಸ ನೀಡುವ ಸಂಪೂರ್ಣ ರೋಜಗಾರ್ ಯೋಜನೆಯ ಚೌಕಟ್ಟಿನಲ್ಲಿ ಬರುವ ವಿವಿಧ ಯೋಜನೆಗಳು. ಎರಡನೆಯದಾಗಿ ಗ್ರಾಮೀಣ ಪ್ರದೇಶದ ಬಡವರಿಗೆ ಸ್ವಯಂ ಉದ್ಯೋಗ ಒದಗಿಸುವ ಸ್ವರ್ಣ ಜಯಂತಿ ಗ್ರಾಮ ಸ್ವರಾಜ್ ರೋಜಗಾರ್ ಯೋಜನೆ, ಸ್ತ್ರೀ ಶಕ್ತಿ ಸ್ವಾವಲಂಬನಾ ಇವೆಲ್ಲವೂ ಗ್ರಾಮೀಣ ನಿರುದ್ಯೋಗ ತಗ್ಗಿಸುವ ಯೋಜನೆಗಳಾಗಿ, ಇಷ್ಟೆಲ್ಲಾ ಯೋಜನೆಗಳಿದ್ದರೂ ಬೆಂಗಳೂರಿಗೆ ಅತ್ಯಂತ ಸಮೀಪದಲ್ಲಿರುವ ರಾಮನಗರ ಜಿಲ್ಲೆಯಲ್ಲಿ ಉದ್ಯೋಗ ಸಂಬಂಧಿಸಿದಂತೆ ಜನರು ನಿರುದ್ಯೋಗಿಗಳಾಗಿ ಮುಂದುವರಿಯುತ್ತಿರುವುದು ಕಾಣಬಹುದಾಗಿದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ೧೯೦ ಕುಟುಂಬಗಳು ಅಂದರೆ ಶೇ. ೬೩ರಷ್ಟು ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

ಅಧ್ಯಯನಕ್ಕೆ ಒಳಪಟ್ಟ ೩೦೦ ಕುಟುಂಬಗಳಲ್ಲಿ ಕೇವಲ ೫ ಜನರು ಮಾತ್ರ ಉದ್ಯೋಗ ಪಡೆದಿರುವುದನ್ನು ಕಾಣಬಹುದಾಗಿದೆ.

ಸರ್ಕಾರ ನೇರವಾಗಿ ಕೆಲಸ ಕೊಡುವುದರ ಜೊತೆಗೆ ಸ್ವರ್ಣಜಯಂತಿ ಗ್ರಾಮ ಸ್ವ-ರೋಜಗಾರ್ ಯೋಜನೆ, ಸಂಪೂರ್ಣ ರೋಜಗಾರ್ ಯೋಜನೆಗಳ ಜೊತೆಗೆ ನೀರಾವರಿ, ರಸ್ತೆ, ಕಟ್ಟಡ ನಿರ್ಮಾಣ ಮುಂತಾದ ಇಲಾಖಾ ಕಾಮಗಾರಿಗಳು ಉದ್ಯೋಗ ಒದಗಿಸುತ್ತಿವೆಯಾದರೂ ಗ್ರಾಮೀಣ ಜನರಿಗೆ ಪೂರ್ಣ ಉದ್ಯೋಗ ಅವಕಾಶ ಕಲ್ಪಿಸಲು ಸಾಧ್ಯವಾಗುತ್ತಿಲ್ಲ. ವಿವಿಧ ಸಾಮಾಜಿಕ ಗುಂಪುಗಳು ಬಡತನದ ರೇಖೆ ಕೆಳಗೆಯೇ ಚಲಿಸುತ್ತಿವೆ. ಪರಿಶಿಷ್ಟ ಜಾತಿಯ ಕುಟುಂಬಗಳು ಹಾಗೂ ಪರಿಶಿಷ್ಟ ಪಂಗಡದ ಕುಟುಂಬಗಳು ರಾಜ್ಯದಲ್ಲಿ ಈ ಎರಡು ಸಾಮಾಜಿಕ ಗುಂಪುಗಳ ಸರಾಸರಿ ಅನುಭೋಗದ ವೆಚ್ಚವು ನಿಕೃಷ್ಟವಾಗಿದೆ ಮತ್ತು ಬಡತನ ಪ್ರಮಾಣ ಅಧಿಕವಾಗಿದೆ. ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಕುಟುಂಬಗಳು ಬಡತನರೇಖೆ ಕೆಳಗೆ ಬರುತ್ತಿದ್ದಾರೆ. ಆದರೆ ಪರಿಶಿಷ್ಟ ಜಾತಿ/ಪಂಗಡದ ಕುಟುಂಬಗಳಿಗೆ ಹೋಲಿಸಿದರೆ ಇವರ ಬದುಕು ಸ್ವಲ್ಪ ಸುಧಾರಿಸಿದೆ ಎಂದು ಹೇಳಬಹುದು. ಒಟ್ಟಾರೆ ಅಧ್ಯಯನಕ್ಕೆ ಒಳಪಟ್ಟ ಕುಟುಂಬಗಳ ಬದುಕು ರಾಜ್ಯದ ಹಿಂದುಳಿದ ಪರಿಶಿಷ್ಟ ಜಾತಿ/ಪಂಗಡದ ಜನರಿಗಿಂತ ಸುಧಾರಿಸಿಲ್ಲ ಎಂದೇ ಹೇಳಬಹುದು. ರಾಜಧಾನಿಗೆ ಹತ್ತಿರವಾಗಿದ್ದರೂ ದುರ್ಬಲ ವರ್ಗಗಳ ಬದುಕು ರಾಜ್ಯದ ಎಲ್ಲಾ ದುರ್ಬಲ ವರ್ಗಗಳ ಬದುಕಿನಂತೆಯೇ ಮುಂದುವರಿಯುತ್ತಿದೆ.

ವ್ಯಕ್ತಿ ಹೊಂದಿರುವ ಆಸ್ತಿ ಅವರ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ಅವರ ಸ್ಥಾನಮಾನ ಗೌರವ ಘನತೆ ಇವೆಲ್ಲ ವ್ಯಕ್ತಿ ಸಂಪಾದಿಸುವ ಸಂಪತ್ತು ಅವಲಂಬಿಸಿರುತ್ತದೆ. ಅಲ್ಲದೆ ವ್ಯಕ್ತಿ ಹೊಂದಿರುವ ಸಂಪತ್ತು ಶಿಕ್ಷಣವನ್ನು ಬಿಂಬಿಸುತ್ತದೆ. ಸಮಾಜದಲ್ಲಿ ಶ್ರೀಮಂತರು ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಕೊಡಿಸುತ್ತಾರೆ. ಬಡವರು ಸರ್ಕಾರಿ ಶಾಲೆಗಳಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ. ಹಾಗಾಗಿಯೇ ಮಕ್ಕಳು ಯಾವ ಶಾಲೆಯಲ್ಲಿ ಓದುತ್ತಿವೆ ಎಂಬುದು ಅವರ ಸ್ಥಾನಮಾನ ಸೂಚಿಸುತ್ತದೆ. ಇದರಿಂದ ನಾವು ಗಳಿಸುವ ಆದಾಯ ಮುಖ್ಯವಾದ ಸಂಗತಿಯಾಗಿದೆ.

ಅಧ್ಯಯನಕ್ಕೆ ಒಳಪಟ್ಟ ೪೨ ಕುಟುಂಬಗಳು ವಾರ್ಷಿಕ ೧೦೦೦೦ದಿಂದ ೧೦೦೦೦ ರೂ.ಗಳವರೆಗೆ ಆದಾಯ ಪಡೆಯುತ್ತಿದ್ದಾರೆ. ಆದರೆ ಶೇ. ೧೪ರಷ್ಟು ಕುಟುಂಬಗಳು ಮೇಲಿನ ಆದಾಯ ಗುಂಪಿನಲ್ಲಿ ಬರುತ್ತವೆ. ಹಾಗೆಯೇ ೧೦೦೦೧ರಿಂದ ೨೦೦೦೦ ಸಾವಿರ ವಾರ್ಷಿಕ ಆದಾಯ ಪಡೆಯುತ್ತಿರುವ ಕುಟುಂಬಗಳ ಸಂಖ್ಯೆ ೪೧ ಇದೆ. ೨೦೦೦೧ ಸಾವಿರದಿಂದ ೩೦೦೦೦ ಸಾವಿರದವರೆಗೆ ಹೊಂದಿರುವ ೫೮ ಕುಟುಂಬಗಳಿವೆ. ಶೇ. ೧೯ರಷ್ಟು ಕುಟುಂಬಗಳು ಈ ವರಮಾನದ ಗುಂಪಿನಲ್ಲಿ ಬರುತ್ತವೆ. ೩೦೦೦೧ರಿಂದ ೪೦೦೦೦ ಸಾವಿರದ ವ್ಯಾಪ್ತಿಯಲ್ಲಿ ೩೯ ಕುಟುಂಬಗಳಿವೆ. ೪೦೦೦೧ರಿಂದ ೫೦೦೦೦ ಸಾವಿರ ವಾರ್ಷಿಕ ವರಮಾನದ ಗುಂಪಿಗೆ ೩೫ ಕುಟುಂಬಗಳು ಬರುತ್ತವೆ. ಹಾಗೆಯೇ ೫೦೦೦೧ರಿಂದ ೧ ಲಕ್ಷದ ವರಮಾನ ಪಡೆಯುತ್ತಿರುವ ೫೧ ಕುಟುಂಬಗಳಿವೆ. ೧ ಲಕ್ಷಕ್ಕೂ ಮೇಲ್ಪಟ್ಟು ಆದಾಯವನ್ನು ೩೪ ಕುಟುಂಬಗಳು ಪಡೆಯುತ್ತಿವೆ. ಒಟ್ಟಾರೆಯಾಗಿ ಅಧ್ಯಯನಕ್ಕೆ ಒಳಪಟ್ಟ ಎಲ್ಲಾ ಕುಟುಂಬಗಳು ೫೦ ಸಾವಿರ ಆದಾಯದ ಮಿತಿಯಲ್ಲಿಯೇ ಇವೆ. ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಶ್ರೀಮಂತ ಕುಟುಂಬಗಳು ತಮ್ಮ ಮಕ್ಕಳಿಗೆ ಬೆಂಗಳೂರಿನಲ್ಲಿ ಶಿಕ್ಷಣ ಕೊಡಿಸುತ್ತಿದ್ದಾರೆ. ಹಾಗಾಗಿ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಬಹುತೇಕ ಎಲ್ಲಾ ಮಕ್ಕಳು ಬಡತನದ ಹಿನ್ನೆಲೆಯಿಂದ ಬಂದವರಾಗಿದ್ದಾರೆ.

ಮಕ್ಕಳ ಶಿಕ್ಷಣ ಗುಣಮಟ್ಟ ಹೆಚ್ಚಿಸುವಲ್ಲಿ ಭೌತಿಕ ಸವಲತ್ತುಗಳಾದ ಪಾಠಶಾಲೆ, ಕೊಠಡಿ, ಕುಡಿಯುವ ನೀರು, ನೈರ್ಮಲ್ಯ, ಶಾಲಾಮೈದಾನ ಮುಂತಾದವು ಪ್ರಮುಖ ಪಾತ್ರ ವಹಿಸುತ್ತವೆ. ಹಿರಿಯ ಪ್ರಾಥಮಿಕ ಶಾಲೆ ಸ್ವಾತಂತ್ರ್ಯಪೂರ್ವದಿಂದಲೂ ಅಸ್ತಿತ್ವದಲ್ಲಿದೆ. ಏಳು ಪಾಠದ ಕೊಠಡಿಗಳಿವೆ. ಮುಖ್ಯಶಿಕ್ಷಕರ ಕೊಠಡಿ ಇದೆ. ಇದರಲ್ಲಿಯೇ ಶಾಲೆಯ ಕಚೇರಿ ಇದೆ. ಶಾಲಾಕಟ್ಟಡದ ಸುತ್ತಲೂ ಕಾಂಪೌಂಡ್ ಗೋಡೆ ಇದೆ. ಇದಕ್ಕೆ ಹೊಂದಿಕೊಂಡ ಹಾಗೆ ಆಟದ ಮೈದಾನವಿದೆ. ಶೌಚಾಲಯ ಸೌಲಭ್ಯವಿದೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳಿವೆ. ಶಿಕ್ಷಕರು ಮತ್ತು ಶಿಕ್ಷಕಿಯರಿಗೆ ಪ್ರತ್ಯೇಕ ಶೌಚಾಲಯಗಳಿವೆ. ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ.

ಶಾಲಾಕಟ್ಟಡ ನಿರ್ಮಾಣವಾಗಿ ೧೫ ವರ್ಷಗಳಾಗಿವೆ. ಕಟ್ಟಡದ ಗುಣಮಟ್ಟ ಉತ್ತಮವಾಗಿದೆ. ಕೊಠಡಿಗಳು ಸುರಕ್ಷಿತವಾಗಿವೆ. ಪೀಠೋಪಕರಣಗಳು ಇವೆ. ಆದರೆ ಹಳೆಯ ಪೀಠೋಪಕರಣಗಳು ಶಾಲೆಯಲ್ಲಿವೆ. ಶೌಚಾಲಯ ಸೌಲಭ್ಯವಿದೆ. ಆದರೆ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಶೌಚಾಲಯಗಳ ಸ್ವಚ್ಛತೆಯ ಕೊರತೆ ಇದೆ. ಅಧ್ಯಾಪಕರು/ಅಧ್ಯಾಪಕಿಯರ ಶೌಚಾಲಯಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಸ್ವಚ್ಛ ನೀರಿನ ಅಗತ್ಯವಿದೆ. ಆದರೆ ಗ್ರಾಮೀಣ ಭಾಗದಲ್ಲಿ ಆಗಾಗ ವಿದ್ಯುತ್ ಕೈಕೊಡುತ್ತಿರುವುದರಿಂದ ನೀರಿನ ಸಮಸ್ಯೆ ಉಂಟಾಗುತ್ತದೆ. ಇಲ್ಲಿ ಕುಡಿಯುವ ನೀರಿನ ಸೌಲಭ್ಯವಿದೆ. ಇಲ್ಲಿ ಸ್ವಚ್ಛತೆಯನ್ನು ಕಾಪಾಡಲಾಗುತ್ತಿದೆ. ಕುಡಿಯುವ ನೀರಿನ ಸುತ್ತಮುತ್ತ ಸ್ವಚ್ಛವಾಗಿದೆ. ಆಟದ ಮೈದಾನ ವಿದ್ಯಾರ್ಥಿಗಳಿಗೆ ಆಟದ ಪರಿಕರಗಳಾದ ವಾಲಿಬಾಲ್, ರಿಂಗ್ ಎಸೆತ, ಥ್ರೋಬಾಲ್, ಶೆಟ್ಟಲ್‌ಕಾರ್ಕ್, ಬಾಲ್ ಬ್ಯಾಟ್‌ಮಿಟನ್ ಹೀಗೆ ಮುಂತಾದ ಆಟದ ಪರಿಕರಗಳನ್ನು ವಿದ್ಯಾರ್ಥಿಗಳಿಗೆ

ನೀಡಿ ಆಟ ಆಡಿಸಲಾಗುತ್ತದೆ. ದೈಹಿಕ ಶಿಕ್ಷಕರು ಪ್ರತಿದಿನ ನಿಗದಿತ ಅವಧಿಯಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷಣ ನೀಡುತ್ತಿದ್ದಾರೆ. ಹೋಬಳಿ ಮಟ್ಟದ ವಾರ್ಷಿಕ ಕ್ರೀಡಾಕೂಟ ಈ ಶಾಲೆಯಲ್ಲಿ ಪ್ರತಿವರ್ಷ ಏರ್ಪಡಿಸಲಾಗುತ್ತಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಪ್ರತಿವರ್ಷಕ್ಕೊಮ್ಮೆ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗುತ್ತಿದೆ.

ಒಂದರಿಂದ ಏಳನೆಯ ತರಗತಿಯವರೆಗೆ ಶಾಲೆ ಇದೆ. ಒಟ್ಟು ೧೩ ಜನ ಶಿಕ್ಷಕ/ಶಿಕ್ಷಕಿಯರು ಇದ್ದಾರೆ. ಇವರಲ್ಲಿ ಮೂವರು ಪುರುಷ ಶಿಕ್ಷಕರು ಮತ್ತು ಮೂರು ಜನ ಮಹಿಳಾ ಶಿಕ್ಷಕಿಯರು ಇದ್ದಾರೆ.

ಶಾಲೆಯ ವಿಶೇಷವೆಂದರೆ ಬಿಸಿಯೂಟ ನೀಡಲಾಗುತ್ತಿದೆ. ಅಡುಗೆ ಮತ್ತು ದಾಸ್ತಾನು ಸಂಗ್ರಹಿಸಲು ಪ್ರತ್ಯೇಕ ಕೊಠಡಿಗಳಿವೆ. ಪ್ರತಿದಿನ ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡಲಾಗುತ್ತಿದೆ. ಅಡುಗೆ ಮಾಡುವವರು ಇಬ್ಬರಿದ್ದಾರೆ. ಅವರಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದವರು, ಮತ್ತೊಬ್ಬರು ಒಕ್ಕಲಿಗ ಸಮುದಾಯ ದವರಾಗಿದ್ದಾರೆ. ಶಾಲೆಯಲ್ಲಿ ಶಾಲಾ ಮೇಲುಸ್ತುವಾರಿ(ಎಸ್‌ಡಿಎಂಸಿ) ಸಮಿತಿ ಇದೆ. ಸಮಿತಿಯಲ್ಲಿ ಒಂಬತ್ತು ಜನ ಸದಸ್ಯರಿದ್ದಾರೆ. ಕಾಲಕಾಲಕ್ಕೆ ಸಮಿತಿ ಸಭೆಗಳು ನಡೆಸಲಾಗುತ್ತಿದೆ.

ನಾಗರಸನಕೋಟೆ ಗ್ರಾಮದಲ್ಲಿ ೧೯೬೫ರಲ್ಲಿ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಊರಿನ ಮುಂಭಾಗದಲ್ಲಿಯೇ ಶಾಲೆ ಇದೆ. ಒಂದು ಕಟ್ಟಡದಲ್ಲಿ ಎರಡು ಕೊಠಡಿಗಳಿವೆ. ಈಗ ಮತ್ತೆರಡು ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಶಾಲೆಯ ಕಟ್ಟಡಕ್ಕೆ ಕಾಂಪೌಂಡ್ ಗೋಡೆ ಇರುವುದಿಲ್ಲ. ಆದ್ದರಿಂದ ಸುತ್ತಲೂ ತಂತಿಬೇಲಿ ಹಾಕಿಸಲಾಗಿದೆ. ಈ ಶಾಲೆಗೆ ಆಟದ ಮೈದಾನವಿಲ್ಲ. ಶೌಚಾಲಯಗಳು ಪ್ರತ್ಯೇಕವಾಗಿದ್ದು, ಸ್ವಚ್ಛತೆ ಇಲ್ಲದೇ ಅವುಗಳನ್ನು ಬಳಸುತ್ತಿಲ್ಲ. ಶೌಚಾಲಯಕ್ಕೆ ಅಗತ್ಯದಷ್ಟು ನೀರಿನ ಸೌಲಭ್ಯ ಇಲ್ಲ. ಕುಡಿಯುವ ನೀರಿನ ಸೌಲಭ್ಯವಿಲ್ಲ. ಗ್ರಂಥಾಲಯ, ಮುಖ್ಯಶಿಕ್ಷಕರಿಗೆ ಪ್ರತ್ಯೇಕ ಕೊಠಡಿ ಇಲ್ಲ. ಆಟದ ಮೈದಾನವಿಲ್ಲ, ದೈಹಿಕ ಶಿಕ್ಷಕರಿಲ್ಲ.

ಬಿಸಿಯೂಟ ನೀಡಲಾಗುತ್ತಿದೆ. ಬಿಸಿಯೂಟ ತಯಾರಿಸಲು ಪ್ರತ್ಯೇಕ ಅಡುಗೆ ಕೊಠಡಿ ಹಾಗೂ ದಾಸ್ತಾನು ಕೊಠಡಿಗಳಿಲ್ಲ. ಇಬ್ಬರು ಅಡುಗೆ ಮಾಡಲು ಮಹಿಳೆಯರಿದ್ದಾರೆ. ಅವರಲ್ಲಿ ಒಬ್ಬರು ಒಕ್ಕಲಿಗ ಸಮುದಾಯಕ್ಕೆ ಸೇರಿದವರು ಮತ್ತೊಬ್ಬರು ಪರಿಶಿಷ್ಟ ಜಾತಿಯವರಾಗಿದ್ದಾರೆ. ಶಾಲೆಯಲ್ಲಿ ಶಾಲಾ ಮೇಲುಸ್ತುವಾರಿ(ಎಸ್‌ಡಿಎಂಸಿ) ಸಮಿತಿ ಇದೆ. ಶಾಲೆಯಲ್ಲಿ ಒಟ್ಟು ಆರು ಜನ ಶಿಕ್ಷಕರಿದ್ದಾರೆ. ಇವರಲ್ಲಿ ನಾಲ್ಕು ಜನ ಮಹಿಳೆಯರು, ಇಬ್ಬರು ಪುರುಷರಿದ್ದಾರೆ. ೧ರಿಂದ ೭ನೇ ತರಗತಿಯವರೆಗೆ ಇದೆ.

ದೊಡ್ಡ ಆಲಹಳ್ಳಿ ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಶಾಲೆ ಇದೆ. ದೊಡ್ಡದಾದ ಶಾಲಾ ಕಟ್ಟಡವಿದೆ. ಅದರಲ್ಲಿ ಐದು ಕೊಠಡಿಗಳಿವೆ. ಶಾಲೆಗೆ ಕಾಂಪೌಂಡ್ ಗೋಡೆ ಇದ್ದು, ಪ್ರವೇಶದ್ವಾರಕ್ಕೆ

ಗೇಟ್ ಇರಿಸಲಾಗಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳಿವೆ. ಹಾಗೆಯೇ ಶಿಕ್ಷಕ ಮತ್ತು ಶಿಕ್ಷಕಿಯರಿಗೆ ಪ್ರತ್ಯೇಕ ಶೌಚಾಲಯಗಳಿವೆ. ಬಿಸಿಯೂಟ ನೀಡಲಾಗುತ್ತಿದೆ. ಇಬ್ಬರು ಅಡುಗೆ ಮಾಡಲು ಮಹಿಳೆಯರಿದ್ದಾರೆ. ಅವರಲ್ಲಿ ಒಬ್ಬರು ಒಕ್ಕಲಿಗ ಸಮುದಾಯಕ್ಕೆ ಸೇರಿದವರು ಮತ್ತೊಬ್ಬರು ಪರಿಶಿಷ್ಟ ಪಂಗಡ(ಎಸ್.ಟಿ.)ದವರಾಗಿದ್ದಾರೆ. ಅಡುಗೆ ಮತ್ತು ದಾಸ್ತಾನು ಸಂಗ್ರಹಿಸಲು ಪ್ರತ್ಯೇಕ ಕೊಠಡಿಗಳಿವೆ. ಶಾಲೆಯಲ್ಲಿ ಶಾಲಾ ಮೇಲುಸ್ತುವಾರಿ(ಎಸ್‌ಡಿಎಂಸಿ) ಸಮಿತಿ ಇದೆ. ಕುಡಿಯುವ ನೀರಿನ ಸೌಲಭ್ಯವಿಲ್ಲ. ಒಟ್ಟು ನಾಲ್ಕು ಜನ ಶಿಕ್ಷಕರು ಹಾಗೂ ಒಬ್ಬ ಶಿಕ್ಷಕಿಯರಿದ್ದಾರೆ. ಶಾಲೆಗೆ ಆಟದ ಮೈದಾನವಿದೆ. ಗ್ರಂಥಾಲಯ ಇರುವುದಿಲ್ಲ. ಮಹಿಳೆಯರಿಗೆ ಪ್ರತ್ಯೇಕ ವಿಶ್ರಾಂತಿ ಗೃಹ ಇರುವುದಿಲ್ಲ. ಶಾಲಾ ವಿದ್ಯಾರ್ಥಿಗಳನ್ನು ಪ್ರತಿವರ್ಷಕ್ಕೊಮ್ಮೆ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗುತ್ತಿದೆ. ದೈಹಿಕ ಶಿಕ್ಷಕರಿರುವುದಿಲ್ಲ. ಆದರೆ ಆಟದ ಪರಿಕರಗಳು ಮಾತ್ರ ಇವೆ. ಶಾಲಾಶಿಕ್ಷಕರು ಮತ್ತು ಶಿಕ್ಷಕಿಯರು ಪ್ರತಿದಿನ ಕನಕಪುರದಿಂದ ಬಂದು ಹೋಗುತ್ತಿದ್ದಾರೆ. ಶಾಲೆ ಇರುವ ಊರಿನಲ್ಲಿ ಶಿಕ್ಷಕರಿಗಾಗಿ ಯಾವುದೇ ವಾಸ್ತವ್ಯ ಇರುವುದಿಲ್ಲ.

ನಾಯಕನಹಳ್ಳಿ ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಶಾಲೆ ಇದೆ. ಶಾಲೆಗೆ ಕಟ್ಟಡವಿದೆ. ಕಟ್ಟಡದಲ್ಲಿ ಎರಡು ಕೊಠಡಿಗಳಿವೆ. ಶಾಲಾಕಟ್ಟಡಕ್ಕೆ ಕಾಂಪೌಂಡ್ ಗೋಡೆ ಇಲ್ಲ. ಮತ್ತೊಂದು ಕಟ್ಟಡ ನಿರ್ಮಿಸಲಾಗುತ್ತಿದೆ. ಶೌಚಾಲಯದ ಸೌಲಭ್ಯ ಇರುವುದಿಲ್ಲ. ಇದ್ದ ಶೌಚಾಲಯವನ್ನು ಹೊಡೆದುಹಾಕಿ ಹೊಸ ಶೌಚಾಲಯವನ್ನು ನಿರ್ಮಿಸಲಾಗುತ್ತಿದೆ. ಆಟದ ಮೈದಾನವಿಲ್ಲ. ಕುಡಿಯುವ ನೀರಿನ ಸೌಲಭ್ಯವಿಲ್ಲ. ಬಿಸಿಯೂಟ ನೀಡಲಾಗುತ್ತಿದೆ. ಇಬ್ಬರು ಅಡುಗೆ ಮಾಡಲು ಮಹಿಳೆಯರಿದ್ದಾರೆ. ಅವರಲ್ಲಿ ಒಬ್ಬರು ಒಕ್ಕಲಿಗ ಸಮುದಾಯಕ್ಕೆ ಸೇರಿದವರು ಮತ್ತೊಬ್ಬರು ಪರಿಶಿಷ್ಟ ಪಂಗಡ(ಎಸ್.ಟಿ.) ದವರಾಗಿದ್ದಾರೆ. ಬಿಸಿಯೂಟ ತಯಾರಿಸಲು ಪ್ರತ್ಯೇಕ ಅಡುಗೆ ಕೊಠಡಿ ಹಾಗೂ ದಾಸ್ತಾನು ಕೊಠಡಿಗಳಿಲ್ಲ. ಶಾಲೆಯಲ್ಲಿ ಶಾಲಾ ಮೇಲುಸ್ತುವಾರಿ(ಎಸ್‌ಡಿಎಂಸಿ) ಸಮಿತಿ ಇದೆ. ಗ್ರಂಥಾಲಯ ಇರುವುದಿಲ್ಲ. ಒಟ್ಟು ೫ ಶಿಕ್ಷಕರಲ್ಲಿ ಮೂರು ಜನ ಶಿಕ್ಷಕರು ಇಬ್ಬರು ಶಿಕ್ಷಕಿಯರಿದ್ದಾರೆ. ಇವರು ಪ್ರತಿದಿನ ಬೇರೆ ಊರುಗಳಿಂದ ಶಾಲೆಗೆ ಬಂದು ಹೋಗುತ್ತಾರೆ. ಒಂದರಿಂದ ಏಳನೇ ತರಗತಿಯವರೆಗೆ ಶಿಕ್ಷಣ ನೀಡಲಾಗುತ್ತಿದೆ. ಮುಖ್ಯಶಿಕ್ಷಕರಿಗೆ ಪ್ರತ್ಯೇಕ ಕೊಠಡಿ ಇಲ್ಲ. ಶಾಲಾ ವಿದ್ಯಾರ್ಥಿಗಳನ್ನು ಪ್ರತಿವರ್ಷಕ್ಕೊಮ್ಮೆ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗುತ್ತಿಲ್ಲ.

ಗ್ರಾಮೀಣ ಮಕ್ಕಳ ಶಿಕ್ಷಣ ಸುಧಾರಿಸುವ ನಿಟ್ಟಿನಲ್ಲಿ ಶಿಕ್ಷಣಕ್ಕೆ ಪೂರಕ ಸಂಗತಿಗಳಾದ ಶಾಲಾಕಟ್ಟಡ ಮೂಲಭೂತ ಸೌಲಭ್ಯಗಳಿಗೆ ಒತ್ತು ನೀಡಲಾಗುತ್ತಿದೆ. ಶಾಲಾಕಟ್ಟಡಗಳು ಮತ್ತು ಕೊಠಡಿಗಳ ನಿರ್ಮಾಣ, ಶೌಚಾಲಯಗಳ ನಿರ್ಮಾಣ ಕುಡಿಯುವ ನೀರು, ಶೌಚಾಲಯ, ಉಚಿತ ಪಠ್ಯ ಮತ್ತು ಸಮವಸ್ತ್ರ ಪೂರೈಕೆ, ಬಿಸಿಯೂಟ ಮುಂತಾದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಯೋಜನಾ ವೆಚ್ಚದ ಬಹುಭಾಗವನ್ನು ಖರ್ಚು ಮಾಡುತ್ತಿದೆ. ಅಧ್ಯಯನಕ್ಕೆ ಒಳಪಟ್ಟ ಶಾಲೆಗಳ ಭೌತಿಕ ಸವಲತ್ತುಗಳನ್ನು ತಿಳಿಯುವ ಪ್ರಯತ್ನ ಮಾಡಲಾಯಿತು.

ಸಾತನೂರು ಮತ್ತು ದೊಡ್ಡ ಆಲಹಳ್ಳಿ ಎರಡು ಗ್ರಾಮಪಂಚಾಯಿತಿಗಳ ನಾಲ್ಕು ಹಳ್ಳಿಗಳ ಸಾತನೂರು, ದೊಡ್ಡ ಆಲಹಳ್ಳಿ, ನಾಯಕನಹಳ್ಳಿ ಮತ್ತು ನಾಗರಸನ ಕೋಟೆ ಶಾಲಾಕಟ್ಟಡಗಳು ಇವೆ. ಆದರೆ ಪಂಚಾಯಿತಿಯ ಕೇಂದ್ರವಾದ ಸಾತನೂರು ಮತ್ತು ದೊಡ್ಡ ಆಲಹಳ್ಳಿಯಲ್ಲಿ ಮಾತ್ರ ಶಾಲಾಕಟ್ಟಡಗಳಿದ್ದು ಅಗತ್ಯದಷ್ಟು ಕೊಠಡಿಗಳಿವೆ. ಆದರೆ ನಾಗರಸನಕೋಟೆ ಹಾಗೂ ನಾಯಕನಹಳ್ಳಿ ಶಾಲಾಕೊಠಡಿಗಳ ಸಂಖ್ಯೆ ಕಡಿಮೆಯಿದೆ. ಈ ಎರಡು ಶಾಲೆಗಳಿಗೆ ಕಾಂಪೌಂಡ್ ಗೋಡೆಯೇ ಇಲ್ಲ. ಸ್ವಚ್ಛತೆಯ ದೃಷ್ಟಿಯಿಂದ ಇತ್ತೀಚೆಗೆ ಶೌಚಾಲಯಗಳಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಆದರೆ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಶೌಚಾಲಯಗಳಿಗೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ಶೌಚಾಲಯಗಳಿವೆ. ಆದರೆ ಸ್ವಚ್ಛತೆ ಇಲ್ಲ ಇನ್ನುಳಿದ ಎರಡು ಶಾಲೆಗಳಲ್ಲಿ ಶೌಚಾಲಯ ಬಳಸುತ್ತಿಲ್ಲ. ಕುಡಿಯುವ ನೀರಿನ ಸೌಲಭ್ಯ ಸಮರ್ಪವಾಗಿಲ್ಲ. ಎಲ್ಲಾ ಶಾಲೆಗಳಲ್ಲೂ ಬಿಸಿಯೂಟ ನೀಡಲಾಗುತ್ತಿದೆ. ಇಲ್ಲಿನ ಶಾಲೆಗಳ ಬಿಸಿಯೂಟದ ಕ್ರಾಂತಿಕಾರಿ ತಿರುವು ಎಂದರೆ ಬಿಸಿಯೂಟವನ್ನು ತಯಾರು ಮಾಡಲು ಮೇಲ್ಜಾತಿಯವರನ್ನು ನೇಮಿಸಲಾಗುತ್ತಿತ್ತು. ಕೆಳಜಾತಿಯ ಮಹಿಳೆ ಮಾಡಿದ ಬಿಸಿಯೂಟ ಮೇಲ್ಜಾತಿಯ ಮಕ್ಕಳು ತಿನ್ನುತ್ತಿರಲಿಲ್ಲ. ಅದರೆ ಈ ನಾಲ್ಕು ಶಾಲೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ಮಹಿಳೆಯರು ಬಿಸಿಯೂಟ ತಯಾರು ಮಾಡುತ್ತಿದ್ದಾರೆ. ನಾಗರಸನಕೋಟೆ ಮತ್ತು ನಾಯಕನಹಳ್ಳಿ ಶಾಲೆಗಳಲ್ಲಿ ಬಿಸಿಯೂಟ ತಯಾರಿ ಮತ್ತು ದಾಸ್ತಾನು ಸಂಗ್ರಹಕ್ಕೆ ಪ್ರತ್ಯೇಕ ಕೊಠಡಿಗಳಿಲ್ಲ. ಆಟದ ಮೈದಾನವಿಲ್ಲ, ಗ್ರಂಥಾಲಯ ಸೌಲಭ್ಯಗಳಿಲ್ಲ. ವಿದ್ಯಾರ್ಥಿನಿಯರು ಮತ್ತು ಮಹಿಳಾ ಶಿಕ್ಷಕಿಯರು ಶೌಚಾಲಯಗಳ ಸಮಸ್ಯೆ ಎದುರಿಸುತ್ತಿದ್ದಾರೆ.

ಎಲ್ಲಾ ಶಾಲೆಗಳಲ್ಲಿ ಶಾಲಾ ಮೇಲುಸ್ತುವಾರಿ ಸಮಿತಿಗಳಿವೆ. ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಶಿಕ್ಷಣದ ಗುಣಮಟ್ಟ ಹೆಚ್ಚಿಸುವಲ್ಲಿ ಶಾಲೆಗಳ ಪರಿಸರದಲ್ಲಿಯೇ ಶಿಕ್ಷಕರ ವಾಸ್ತವ್ಯಗಳು ಇರಬೇಕು. ಆದರೆ ಬಹುತೇಕ ಎಲ್ಲಾ ಶಿಕ್ಷಕರು ತಮ್ಮ ವಾಸ್ತವ್ಯಗಳು ಕನಕಪುರ ತಾಲೂಕು ಕೇಂದ್ರದಲ್ಲಿದ್ದು ನಿತ್ಯ ಶಾಲೆಗೆ ಬಂದು ಹೋಗುತ್ತಿದ್ದಾರೆ. ನಾಲ್ಕು ಶಾಲೆಗಳಲ್ಲಿ ಶಿಕ್ಷಕರ ಪ್ರಮಾಣ ಸಾಕಷ್ಟಿದೆ. ಅಲ್ಲದೆ ಮಹಿಳಾ ಶಿಕ್ಷಕಿಯರಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಹಳ್ಳಿಗಳಲ್ಲಿ ಮೂಲಭೂತ ಸೌಲಭ್ಯಗಳಿಗೆ ಹೆಚ್ಚಿನ ಗಮನ ಹಾಗೂ ಒತ್ತು ನೀಡುವ ಅಗತ್ಯವಿದೆ.

ಎಲ್ಲರಿಗೂ ಶಿಕ್ಷಣ ಒದಗಿಸುವುದರ ಪ್ರಾಮುಖ್ಯತೆಯನ್ನು ಕುರಿತು ಚರ್ಚಿಸಲು ಏಷ್ಯಾದ ಹಲವು ದೇಶಗಳು ಥೈಲ್ಯಾಂಡಿನ ಜೋಮ್‌ಟಿನ್ ಎಂಬಲ್ಲಿ ಸಭೆ ಸೇರಿ ಹಲವು ನಿರ್ಣಯಗಳನ್ನು ತೆಗೆದುಕೊಂಡಿವೆ. ಶಿಕ್ಷಣದ ಮುಖ್ಯ ಉದ್ದೇಶ ಕೇವಲ ಹಾಜರಾತಿ ಅಲ್ಲ. ಗುಣಮಟ್ಟದ ಶಿಕ್ಷಣ ಎಂಬುದನ್ನು ಎಲ್ಲರೂ ಒಪ್ಪಿದರು. ಅಲ್ಲದೆ ಸರ್ವರಿಗೂ ಶಿಕ್ಷಣಕ್ಕಾಗಿ ಜಾಗತಿಕ ಪೋಷಣೆ ಮತ್ತು ಎಲ್ಲರಿಗೂ ಕಲಿಯುವ ಅವಶ್ಯಕತೆಯನ್ನು ಪೂರೈಸುವುದಕ್ಕೆ ಮಹತ್ವ ನೀಡಲಾಯಿತು. ೧೯೯೦ರ

ಜೋಮ್‌ಟೀನ್ ಸಮ್ಮೇಳನವು ಸರ್ವರಿಗೂ ಶಿಕ್ಷಣದ ಗುರಿ ಸಾಧನೆಯ ಕಡೆಗೆ ಸ್ಪಷ್ಟ ನಿರ್ದೇಶನಗಳನ್ನು ರೂಪಿಸಿತು. ಸರ್ವರಿಗೂ ಶಿಕ್ಷಣ ಕುರಿತು ರಾಷ್ಟ್ರಗಳ ನಿಯಮಿತ ವರದಿಗಳ ಜೊತೆಗೆ ಸರ್ವರಿಗೂ ಶಿಕ್ಷಣ ವೇದಿಕೆಯ ಕಾರ್ಯದರ್ಶಿ ಕಚೇರಿ, ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮತ್ತು ವಿದ್ಯಾರ್ಥಿ ಕಲಿಕಾ ಸಾಧನಗಳ ಬಗ್ಗೆ ಸುಮಾರು ವಿಶೇಷ ಸಮೀಕ್ಷೆಗಳ ನಡೆಸಿದೆ. ಸಮೀಕ್ಷೆಗೆ ಹೆಣ್ಣುಮಕ್ಕಳ ಶಿಕ್ಷಣ ನಿರಾಶ್ರಿತರ ಶಿಕ್ಷಣ ವಯಸ್ಕರ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ ಅಥವಾ ಸರ್ವರಿಗೂ ಶಿಕ್ಷಣ ಮುಂತಾದವುಗಳ ಆಯ್ದುಕೊಳ್ಳಲಾಯಿತು. ಮೂಲಭೂತ ಕಲಿಕೆಯ ಅವಶ್ಯಕತೆಗಳ ಪೂರೈಕೆಗೆ ವಿನ್ಯಾಸಗೊಳಿಸಿದ ಶೈಕ್ಷಣಿಕ ಅವಕಾಶಗಳಿಂದ ಪ್ರತಿಯೊಬ್ಬ ವ್ಯಕ್ತಿಯೂ, ಮಗು, ಯುವಜನಾಂಗ, ಮಹಿಳೆಯರು ಲಾಭ ಪಡೆದುಕೊಳ್ಳಬೇಕೆಂದು ಒತ್ತಿ ಹೇಳಿವೆ.

ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಹಂತದವರೆಗೆ ಶಿಕ್ಷಣ ಮತ್ತು ನಿಜವಾದ ಕಲಿಕೆಯಲ್ಲಿ ಪರೀಕ್ಷೆಗಳು ಅವಶ್ಯಕವೆಂದೇ ಹೇಳಬಹುದು. ಈ ಹಂತದಲ್ಲಿ ಮಕ್ಕಳು ಕಲಿಯಬೇಕಾಗಿರುವುದು ಮುಖ್ಯವಾಗಿದೆ. ಅದ್ದರಿಂದ ಅವರು ಸಹಜವಾಗಿ ಮುಂದಿನ ತರಗತಿಗೆ ತೇರ್ಗಡೆಯಾಗಬೇಕು. ಯಾವುದೇ ಪರೀಕ್ಷೆಯ ಆಧಾರದ ಮೇಲೆ ಮಕ್ಕಳ ಉತ್ತೀರ್ಣತೆಯನ್ನು ನಿರ್ಧರಿಸುವುದು ಅತ್ಯಂತ ದೋಷಯುಕ್ತವಾದರೂ ವಿಧಾನವಾಗಿದೆ. ಪರೀಕ್ಷೆಯು ಮಗುವಿನ ಸಾಧನೆ ಮಟ್ಟ ನಿರ್ಧರಿಸಲಾರದು. ಬದಲಾಗಿ ವ್ಯಾಪಕ ಹಾಗೂ ನಿರಂತರವಾದ ಮೌಲ್ಯಮಾಪನ ಮಾಡಬೇಕು. ಈ ಹಿನ್ನೆಲೆಯಲ್ಲಿ ಶಾಲೆಗಳಲ್ಲಿ ಇಂದು ಪರೀಕ್ಷೆಗಳು ಮಕ್ಕಳು ಪಡೆದುಕೊಳ್ಳುವ ಅಂಕಗಳನ್ನು ನಮೂದಿಸದೆ ಗ್ರೇಡ್‌ಗಳನ್ನು ನೀಡಿ ತೇರ್ಗಡೆಗೊಳಿಸಲಾಗುವುದು. ನಿರಂತರ ಮೌಲ್ಯಮಾಪನಕ್ಕೆ ಒಳಗಾಗುತ್ತಿರುವ ವಿದ್ಯಾರ್ಥಿಯು ಅನುತ್ತೀರ್ಣತೆ ಇಲ್ಲದೆ ಪ್ರತಿವರ್ಷ ಮುಂದಿನ ತರಗತಿಗೆ ತೇರ್ಗಡೆಯಾಗುತ್ತಾ ಹೋಗಬೇಕು. ಹಾಗಾಗಿಯೇ ಇಂದು ಶಾಲೆಗೆ ದಾಖಲಾದ ವಿದ್ಯಾರ್ಥಿಗಳು ಮುಂದಿನ ತರಗತಿಗೆ ತೇರ್ಗಡೆಯಾಗುತ್ತಾ ಹೋಗುತ್ತಿದ್ದಾರೆ.

ಶೇ. ೮೦ ಅಂಕಕ್ಕಿಂತ ಹೆಚ್ಚು ಅಂಕ ಪಡೆದವರು ಗ್ರೇಡ್ 'ಎ', ೬೦ಕ್ಕಿಂತ ಹೆಚ್ಚು ಅಂಕಪಡೆದವರನ್ನು ಗ್ರೆಡ್ 'ಬಿ' ಎಂದು ಹಾಗೂ ೪೦ಕ್ಕಿಂತ ಹೆಚ್ಚು ಅಂಕ ಪಡೆದವರನ್ನು 'ಸಿ' ಗ್ರೇಡ್ ಎಂದು ಗುರುತಿಸಲಾಗುತ್ತಿದೆ. ಇಲ್ಲಿ ಅನುತ್ತೀರ್ಣದ ಪ್ರಶ್ನೆಯೇ ಇಲ್ಲ. ಇಲ್ಲಿ ೪, ೫, ೬, ೭ನೇ ತರಗತಿಗಳಲ್ಲಿ ಓದುತ್ತಿರುವ ಒಟ್ಟು ೩೦೦ ವಿದ್ಯಾರ್ಥಿನಿಯರ ಶ್ರೇಣಿ(ಗ್ರೇಡ್)ಗಳನ್ನು ಪರಿಶೀಲಿಸಲಾಗಿದೆ.

ಒಟ್ಟು ೩೦೦ ವಿದ್ಯಾರ್ಥಿಗಳಲ್ಲಿ ನಾಲ್ಕನೇ ತರಗತಿಯಲ್ಲಿ ೭೨ ವಿದ್ಯಾರ್ಥಿನಿಯರಿದ್ದಾರೆ. ಸಾತನೂರು ಗ್ರಾಮಪಂಚಾಯಿತಿಯ ೩೬ ವಿದ್ಯಾರ್ಥಿನಿಯರು ಹಾಗೂ ದೊಡ್ಡ ಆಲಹಳ್ಳಿ ಗ್ರಾಮ ಪಂಚಾಯಿತಿಯಿಂದ ೩೬ ವಿದ್ಯಾರ್ಥಿಗಳು ಹೀಗೆ ಎರಡು ಪಂಚಾಯಿತಿಗಳಿಂದ ೬೪ ವಿದ್ಯಾರ್ಥಿನಿಯರಲ್ಲಿ ೧೨ ವಿದ್ಯಾರ್ಥಿನಿಯರು ಪರಿಶಿಷ್ಟ ಜಾತಿಯವರು ಹಾಗೂ ೧೨ ವಿದ್ಯಾರ್ಥಿನಿಯರು ಪರಿಶಿಷ್ಟ ಪಂಗಡದವರು ಹಾಗೂ ೧೨ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಾದರೆ, ೩೬ ವಿದ್ಯಾರ್ಥಿನಿಯರು ಹಿಂದುಳಿದ ಜಾತಿಗೆ ಸೇರಿದವರಾಗಿದ್ದಾರೆ.

ನಿರಂತರ ಮೌಲ್ಯಮಾಪನಕ್ಕೆ ಒಳಗಾದ ವಿದ್ಯಾರ್ಥಿನಿಯರ ಶ್ರೇಣಿ(ಗ್ರೇಡ್)ಗಳು ಇಂತಿವೆ. ಪರಿಶಿಷ್ಟ ಜಾತಿಯ ೧೨ ವಿದ್ಯಾರ್ಥಿನಿಯರಲ್ಲಿ ೪ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದಾರೆ, ೩ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೫ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಇದೇ ರೀತಿ ಪರಿಶಿಷ್ಟ ಪಂಗಡದ ೧೨ ವಿದ್ಯಾರ್ಥಿನಿಯರಲ್ಲಿ ೫ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದಾರೆ, ೩ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೪ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಒಟ್ಟಾರೆ ಪರಿಶಿಷ್ಟ ಜಾತಿ/ಪಂಗಡದ ೨೪ ವಿದ್ಯಾರ್ಥಿನಿಯರಲ್ಲಿ ೧೦ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದಾರೆ. ೬ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಪಡೆದಿದ್ದಾರೆ. ೮ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿರುವುದು ಅಂಕಿ ಅಂಶಗಳಿಂದ ಕಾಣಬಹುದು.

ಹಾಗೆಯೇ ಅಲ್ಪಸಂಖ್ಯಾತ ಸಮುದಾಯದ ೧೨ ವಿದ್ಯಾರ್ಥಿನಿಯರಲ್ಲಿ ೪ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದಾರೆ, ೬ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೨ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಇನ್ನು ಹಿಂದುಳಿದ ವರ್ಗದ ೩೬ ವಿದ್ಯಾರ್ಥಿನಿಯರಲ್ಲಿ ೧೮ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದರೆ. ೧೦ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೮ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಒಟ್ಟಾರೆ ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತರು ಒಟ್ಟು ೩೬ ವಿದ್ಯಾರ್ಥಿನಿಯರಲ್ಲಿ ೧೪ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದರೆ, ೧೨ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೧೦ ವಿದ್ಯಾರ್ಥಿನಿಯರು 'ಸಿ' ಗ್ರೇಡ್ ಪಡೆದಿದ್ದಾರೆ.

ಹಿಂದುಳಿದ ವರ್ಗದ ವಿದ್ಯಾರ್ಥಿನಿಯರಲ್ಲಿ ೧೮ ವಿದ್ಯಾರ್ಥಿನಿಯರು ಹೆಚ್ಚು 'ಎ' ಶ್ರೇಣಿ ಪಡೆದಿದ್ದರೆ. ಪರಿಶಿಷ್ಟ ಜಾತಿ/ಪಂಗಡ ಹಾಗೂ ಅಲ್ಪಸಂಖ್ಯಾತರಲ್ಲಿ 'ಎ' ಶ್ರೇಣಿ ಪಡೆಯಲ್ಲು ವಿದ್ಯಾರ್ಥಿನಿಯರು ಹಿಂದುಳಿದಿದ್ದಾರೆ.

ಐದನೇ ತರಗತಿಯಲ್ಲಿ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಗಳಿಂದ ಒಟ್ಟು ಪ್ರತಿ ಪಂಚಾಯಿತಿಯಿಂದ ೭೨ ವಿದ್ಯಾರ್ಥಿನಿಯರನ್ನು ಆಧ್ಯಯನಕ್ಕೆ ಒಳಪಡಿಸಲಾಗಿದೆ. ಇವರಲ್ಲಿ ಪರಿಶಿಷ್ಟ ಜಾತಿಯ ೧೨ ವಿದ್ಯಾರ್ಥಿನಿಯರು, ಅಲ್ಪಸಂಖ್ಯಾತ ೧೨ ವಿದ್ಯಾರ್ಥಿನಿಯರು ಹಾಗೂ ಹಿಂದುಳಿದ ವರ್ಗ(ಒಬಿಸಿ) ೩೬ ವಿದ್ಯಾರ್ಥಿನಿಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಐದನೇ ತರಗತಿಯ ಉತ್ತೀರ್ಣ ಪ್ರಕ್ರಿಯೆಯಲ್ಲಿ 'ಎ', 'ಬಿ', 'ಸಿ', ಎಂದು ಶ್ರೇಣಿಗಳಲ್ಲಿ ತಿಳಿಸಲಾಗಿದೆ.

ಪರಿಶಿಷ್ಟ ಜಾತಿಯ ಒಟ್ಟು ೧೨ ವಿದ್ಯಾರ್ಥಿನಿಯರಲ್ಲಿ ೪ ವಿದ್ಯಾರ್ಥಿನಿಯರು 'ಎ' ಗ್ರೇಡ್ ಪಡೆದಿದ್ದರೆ, ೫ ವಿದ್ಯಾರ್ಥಿನಿಯರು 'ಬಿ' ಗ್ರೇಡ್ ಹಾಗೂ ೩ ವಿದ್ಯಾರ್ಥಿನಿಯರು 'ಸಿ' ಗ್ರೇಡ್ ಪಡೆದಿದ್ದಾರೆ.

ಇದೇ ರೀತಿ ಪರಿಶಿಷ್ಟ ಪಂಗಡದ ೧೨ ವಿದ್ಯಾರ್ಥಿನಿಯರಲ್ಲಿ ೨ ವಿದ್ಯಾರ್ಥಿನಿಯರು 'ಎ' ಗ್ರೇಡ್ ಪಡೆದಿದ್ದರೆ, ೬ ವಿದ್ಯಾರ್ಥಿನಿಯರು 'ಬಿ ಗ್ರೇಡ್ ಹಾಗೂ ೪ ವಿದ್ಯಾರ್ಥಿನಿಯರು 'ಸಿ' ಗ್ರೇಡ್ ಪಡೆದಿದ್ದಾರೆ. ಇಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಯರಿಗಿಂತ ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಸ್ವಲ್ಪ ಹಿಂದುಳಿದಿದ್ದಾರೆ.

ಒಟ್ಟು ಅಲ್ಪಸಂಖ್ಯಾತ ಸಮುದಾಯದ ೧೨ ವಿದ್ಯಾರ್ಥಿನಿಯರಲ್ಲಿ ೫ ವಿದ್ಯಾರ್ಥಿನಿಯರು 'ಎ' ಗ್ರೇಡ್ ಪಡೆದಿದ್ದಾರೆ, ೪ ಮತ್ತು ೩ ವಿದ್ಯಾರ್ಥಿನಿಯರು ಕ್ರಮವಾಗಿ 'ಬಿ' ಗ್ರೇಡ್ ಹಾಗೂ 'ಸಿ' ಗ್ರೇಡ್ ಪಡೆದಿದ್ದಾರೆ.

ಇನ್ನು ಹಿಂದುಳಿದ ವರ್ಗದ ೩೬ ವಿದ್ಯಾರ್ಥಿನಿಯರಲ್ಲಿ ೧೮ ವಿದ್ಯಾರ್ಥಿನಿಯರು 'ಎ' ಗ್ರೇಡ್ ಪಡೆದಿದ್ದರೆ, ೧೦ ವಿದ್ಯಾರ್ಥಿನಿಯರು 'ಬಿ' ಗ್ರೇಡ್ ಹಾಗೂ ೮ ವಿದ್ಯಾರ್ಥಿನಿಯರು 'ಸಿ' ಗ್ರೇಡ್ ಪಡೆದಿದ್ದಾರೆ.

ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು ೭೨ ವಿದ್ಯಾರ್ಥಿನಿಯರಲ್ಲಿ ೨೫ ವಿದ್ಯಾರ್ಥಿನಿಯರು 'ಎ' ಗ್ರೇಡ್ ಪಡೆದಿದ್ದರೆ, ೨೦ ವಿದ್ಯಾರ್ಥಿನಿಯರು 'ಬಿ' ಗ್ರೇಡ್ ಹಾಗೂ ೨೦ ವಿದ್ಯಾರ್ಥಿನಿಯರು 'ಸಿ' ಗ್ರೇಡ್ ಪಡೆದಿದ್ದರೆ, ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಸುಧಾರಣೆ ಕಂಡುಬಂದಿದೆ. ಆದರೆ ಜಾತಿವಾರು ನೋಡಿದಾಗ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿನಿಯರು ಹಿಂದುಳಿದಿದ್ದಾರೆ. ಅಲ್ಲದೇ ಹಿಂದುಳಿದ ಜಾತಿಗಳ ಹೆಣ್ಣುಮಕ್ಕಳು ಎ ಶ್ರೇಣಿ ಪಡೆಯುವಲ್ಲಿ ಉತ್ತಮ ಸ್ಥಿತಿಯಲ್ಲಿ ಮುಂದುವರಿಯುತ್ತಿದ್ದಾರೆ.

ಆರು ಮತ್ತು ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿಯರ ಶಿಕ್ಷಣ ಸ್ಥಿತಿ ಅದೇ ರೀತಿ ಮುಂದುವರಿಯುವುದನ್ನು ಕಾಣಬಹುದಾಗಿದೆ. ಆರನೇ ತರಗತಿಯಲ್ಲಿ ೭೨ ಜನ ವಿದ್ಯಾರ್ಥಿನಿಯರಿದ್ದಾರೆ. ಇವರಲ್ಲಿ ೧೨ ವಿದ್ಯಾರ್ಥಿನಿಯರು ಪರಿಶಿಷ್ಟ ಜಾತಿ ಹಾಗೂ ೧೨ ವಿದ್ಯಾರ್ಥಿನಿಯರು ಪರಿಶಿಷ್ಟ ಪಂಗಡ, ೧೨ ವಿದ್ಯಾರ್ಥಿನಿಯರು ಅಲ್ಪಸಂಖ್ಯಾತ ಹಾಗೂ ೩೬ ವಿದ್ಯಾರ್ಥಿನಿಯರು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರಾಗಿದ್ದಾರೆ.

ಆರನೇ ತರಗತಿಯಲ್ಲಿ ೩ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯರು 'ಎ' ಶ್ರೇಣಿ, ೪ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೫ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದರೆ, ಪರಿಶಿಷ್ಟ ಪಂಗಡದ ೪ ವಿದ್ಯಾರ್ಥಿನಿಯರು 'ಎ' ಶ್ರೇಣಿ, ಇಬ್ಬರು 'ಬಿ' ಹಾಗೂ ೬ ವಿದ್ಯಾರ್ಥಿನಿಯರು ೬ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಅಲ್ಪಸಂಖ್ಯಾತ ೧೨ ಜನ ವಿದ್ಯಾರ್ಥಿನಿಯರಲ್ಲಿ ೨ ವಿದ್ಯಾರ್ಥಿನಿಯರು 'ಎ' ಶ್ರೇಣಿ, ೮ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಪಡೆದರೆ, ೨ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ. ಅಲ್ಪಸಂಖ್ಯಾತ ವಿದ್ಯಾರ್ಥಿನಿಯರು ಆರನೇ ತರಗತಿಯಲ್ಲಿ 'ಎ' ಶ್ರೇಣಿ ಪಡೆಯುವಲ್ಲಿ ಸುಧಾರಣೆ ಕಂಡಿದ್ದಾರೆ.

ಹಿಂದುಳಿದ ವರ್ಗದ ೩೬ ವಿದ್ಯಾರ್ಥಿನಿಯರಲ್ಲಿ ೨೦ ವಿದ್ಯಾರ್ಥಿನಿಯರು 'ಎ' ಶ್ರೇಣಿ, ೬ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೯ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಆರನೇ ತರಗತಿಯಲ್ಲಿ ಒಟ್ಟು ೭೨ ವಿದ್ಯಾರ್ಥಿನಿಯರಲ್ಲಿ ೨೧ ವಿದ್ಯಾರ್ಥಿನಿಯರು 'ಎ' ಗ್ರೇಡ್, ೨೧ ವಿದ್ಯಾರ್ಥಿನಿಯರು 'ಬಿ' ಗ್ರೇಡ್ ಹಾಗೂ ೩೨ ವಿದ್ಯಾರ್ಥಿನಿಯರು 'ಸಿ' ಗ್ರೇಡ್ ಪಡೆದಿದ್ದಾರೆ.

ಆರನೇ ತರಗತಿಯಲ್ಲಿಯೂ ಹಿಂದುಳಿದ ವರ್ಗದ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಮುಂದಿದ್ದಾರೆ. ಹಾಗೆಯೇ ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತ ವಿದ್ಯಾರ್ಥಿನಿಯರು ಹಿಂದೆ ಇದ್ದಾರೆ.

ಏಳನೇ ತರಗತಿಯ ೭೨ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆಯಲಾಗಿದೆ. ೩೪ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದರೆ. ೨೯ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೨೧ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ. ಇನ್ನು ಎ ಶ್ರೇಣಿ ಪಡೆದಿರುವ ವಿದ್ಯಾರ್ಥಿನಿಯರ ಜಾತಿವಾರು ನೋಡಿದಾಗ ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತರ ವಿದ್ಯಾರ್ಥಿನಿಯರು ಹಿಂದುಳಿದಿದ್ದಾರೆ. ಹಿಂದುಳಿದ ಜಾತಿಯ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಮುಂದುವರಿದಿದ್ದಾರೆ.

ಒಟ್ಟು ಪರಿಶಿಷ್ಟ ಜಾತಿಯ ೧೨ ವಿದ್ಯಾರ್ಥಿನಿಯರಲ್ಲಿ ೫ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದರೆ. ೪ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೫ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಪರಿಶಿಷ್ಟ ಪಂಗಡದ ೧೨ ವಿದ್ಯಾರ್ಥಿನಿಯರಲ್ಲಿ ೪ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದರೆ, ೪ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೪ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಅಲ್ಪಸಂಖ್ಯಾತ ೧೨ ವಿದ್ಯಾರ್ಥಿನಿಯರಲ್ಲಿ ೫ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದರೆ, ೫ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಹಾಗೂ ೪ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿದ್ದಾರೆ.

ಹಿಂದುಳಿದ ವರ್ಗದ ೩೬ ವಿದ್ಯಾರ್ಥಿನಿಯರಲ್ಲಿ ೨೦ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆದಿದ್ದರೆ, ೧೪ ವಿದ್ಯಾರ್ಥಿನಿಯರು 'ಬಿ' ಶ್ರೇಣಿ ಪಡೆದಿದ್ದಾರೆ. ೮ ವಿದ್ಯಾರ್ಥಿನಿಯರು 'ಸಿ' ಶ್ರೇಣಿ ಪಡೆದಿರುವುದು ಅಂಕಿ ಅಂಶಗಳಿಂದ ಕಾಣಬಹುದು. ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರು

‘ಬಿ’ ಶ್ರೇಣಿ ಪಡೆಯುವಲ್ಲಿ ಸುಧಾರಿತವಾಗಿರುವುದು ಕಂಡುಬರುತ್ತದೆ. ಪರಿಶಿಷ್ಟ ಜಾತಿ/ಪಂಗಡ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರು ಎ ಶ್ರೇಣಿ ಪಡೆಯುವಲ್ಲಿ ಸುಧಾರಣೆ ಕಂಡುಬಂದಿಲ್ಲ.

ಸರ್ಕಾರವು ಮಕ್ಕಳಿಗೆ ಶಿಕ್ಷಣ ಅದರಲ್ಲಿಯೂ ಗ್ರಾಮೀಣ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತ ಬರುತ್ತಿದೆ. ಸರ್ವಶಿಕ್ಷಣ ಅಭಿಯಾನ, ಕಪ್ಪು ಹಲಗೆ, ಬಾ ಬಾಲೆ ಶಾಲೆಗೆ, ಚಿನ್ನರ ಅಂಗಳ, ಕೂಲಿಯಿಂದ ಶಾಲೆಗೆ, ಅಕ್ಷರ ಯೋಜನೆ, ವಿದ್ಯಾಚೇತನ, ಶಿಕ್ಷಣ ಗ್ಯಾರಂಟಿ, ಮಧ್ಯಾಹ್ನದ ಬಿಸಿಯೂಟ ಮುಂತಾದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರೂ ಗ್ರಾಮೀಣ ಮಕ್ಕಳು ಗುಣಮಟ್ಟದ ಶಿಕ್ಷಣ ಕೊಡಲು ಪೂರ್ಣಪ್ರಮಾಣದಲ್ಲಿ ಸಾಧ್ಯವಾಗುತ್ತಿಲ್ಲ. ಅಧ್ಯಯನಕ್ಕೆ ಒಳಪಟ್ಟ ೩೦೦ ಗ್ರಾಮೀಣ ಹೆಣ್ಣುಮಕ್ಕಳಲ್ಲಿ ಶೇ. ೪೦ರಷ್ಟು ಮಕ್ಕಳು ಮಾತ್ರ ‘ಎ’ ಶ್ರೇಣಿ ಎಂದರೆ ಶೇ. ೮೦ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. ಶೇ. ೩೩ರಷ್ಟು ವಿದ್ಯಾರ್ಥಿನಿಯರು ‘ಬಿ’ ಶ್ರೇಣಿ ಎಂದರೆ ಶೇ. ೬೦ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. ಉಳಿದಂತೆ ಶೇ. ೨೭ರಷ್ಟು ಹೆಣ್ಣುಮಕ್ಕಳು ‘ಸಿ’ ಶ್ರೇಣಿ ಅಂದರೆ ಶೇ. ೪೦ ಅಂಕಗಳಿಗಿಂತ ಹೆಚ್ಚು ಅಂಕ ಪಡೆದಿದ್ದಾರೆ. ‘ಎ’ ಶ್ರೇಣಿ ಪಡೆದಿರುವ ವಿದ್ಯಾರ್ಥಿನಿಯರನ್ನು ಗಮನಿಸಿದಾಗ ಪರಿಶಿಷ್ಟ ಜಾತಿ ಶೇ. ೩೭ರಷ್ಟು ವಿದ್ಯಾರ್ಥಿನಿಯರು ‘ಎ’ ಶ್ರೇಣಿ ಪಡೆದಿದ್ದಾರೆ. ಪರಿಶಿಷ್ಟ ಪಂಗಡದ ಶೇ. ೩೦ರಷ್ಟು ವಿದ್ಯಾರ್ಥಿನಿಯರು ‘ಎ’ ಶ್ರೇಣಿ ಪಡೆದಿದ್ದಾರೆ. ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿನಿಯರು ಶೇ. ೩೭ರಷ್ಟು ಪಡೆದರೆ ಇನ್ನು ಹಿಂದುಳಿದ ವರ್ಗಗಳಾದ ಒಕ್ಕಲಿಗ, ಲಿಂಗಾಯಿತ ಹಾಗೂ ಇತರೆ ಒಬಿಸಿ ಸಮುದಾಯದವರು ಶೇ. ೪೮ರಷ್ಟು ವಿದ್ಯಾರ್ಥಿನಿಯರು ಎ ಶ್ರೇಣಿ ಪಡೆದಿದ್ದಾರೆ.

ಸರ್ಕಾರವು ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಪ್ರಯತ್ನಪಟ್ಟರೂ ಎಲ್ಲ ಸಮುದಾಯಗಳ ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ಮಕ್ಕಳು ಪಡೆಯುತ್ತಿರುವ ಗುಣಮಟ್ಟ ಅಥವಾ ಜಾತಿ ನೆಲೆಯಲ್ಲಿ ಮುಂದುವರಿಯುತ್ತಿದೆ. ಕರ್ನಾಟಕದಲ್ಲಿ ಬಲಾಢ್ಯ ಸಮುದಾಯಗಳ ಒಕ್ಕಲಿಗರು, ಲಿಂಗಾಯತ ಹಾಗೂ ಇತರೆ ಸಮುದಾಯದ ಮಕ್ಕಳು ತರಗತಿಗಳಲ್ಲಿ ‘ಎ’ ಶ್ರೇಣಿ ಪಡೆಯುವಲ್ಲಿ ಮುಂದಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಗುಣಮಟ್ಟದ ಶಿಕ್ಷಣ ಪಡೆಯುವಲ್ಲಿ ೨ನೇ ಸ್ಥಾನದಲ್ಲಿದ್ದಾರೆ. ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯುವಲ್ಲಿ ತೀರಾ ಹಿಂದುಳಿದಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಶಿಕ್ಷಣವ್ಯವಸ್ಥೆಯಲ್ಲಿ ಗುಣಮಟ್ಟದ ಶಿಕ್ಷಣ ಪಡೆಯುವಲ್ಲಿ ಗ್ರಾಮೀಣ ಮಕ್ಕಳು ಹಿಂದುಳಿದಿದ್ದಾರೆ. ಅಲ್ಲದೇ ಗ್ರಾಮೀಣ ಪ್ರದೇಶದಲ್ಲಿ ಜಾತಿವಾರು ನೋಡಿದಾಗಲೂ ಸಾಮಾಜಿಕ ಜಾತಿವ್ಯವಸ್ಥೆಗೆ ಅನುಗುಣವಾಗಿ ಸ್ಥಾನಮಾನ ಪಡೆದಿದ್ದಾರೆಯೇ ಹಾಗೆಯೇ ಗುಣಮಟ್ಟದ ಶಿಕ್ಷಣ ಪಡೆಯುವಲ್ಲಿ ಮೇಲ್ಜಾತಿ ಮತ್ತು ಮೇಲ್ವರ್ಗದ ಸಮುದಾಯದ ಮಕ್ಕಳು ಮುಂದಿದ್ದಾರೆ. ಕೆಳ ಸಮುದಾಯಗಳ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯುವುದರಲ್ಲಿ ಹಿಂದುಳಿದಿದೆ.

ಒಟ್ಟಾರೆಯಾಗಿ ಸಾಮಾಜಿಕ ಸ್ಥಾನಮಾನಗಳಿಗೆ ಅನುಸಾರ ಶಿಕ್ಷಣ ಪಡೆದಿರುವುದಿಲ್ಲ. ಗುಣಮಟ್ಟದ ಶಿಕ್ಷಣದಲ್ಲಿಯೂ ನಗರ ಹಾಗೂ ಗ್ರಾಮೀಣ ಜಾತಿ ಹಾಗೂ ಸಮುದಾಯಗಳ ನಡುವೆ ಅಸಮಾನತೆಯನ್ನು ಅಧ್ಯಯನ ಎತ್ತಿ ತೋರಿದೆ.

ಲಿಂಗಸಮಾನತೆಯು ಹೆಣ್ಣುಮಕ್ಕಳ ಅದರಲ್ಲೂ ಗ್ರಾಮೀಣ ಹೆಣ್ಣುಮಕ್ಕಳು ಶಿಕ್ಷಣದಿಂದ ದೂರ ಉಳಿಯಲು ಕಾರಣವಾಗಿದೆ. ಯುನಿಸೆಫ್ ಕಾರ್ಯಕಾರಿ ನಿರ್ದೇಶಕರಾದ ಕೊರೆಲ್ ಬೆಲ್‌ಮಿ ಅವರು ಪ್ರಚಾರ ಕಾರ್ಯಕ್ರಮ ರೂಪಿಸಿದ್ದಾರೆ. ಯುನಿಸೆಫ್ ಗುರುತಿಸಿರುವಂತೆ ಭಾರತ ಒಳಗೊಂಡಂತೆ ೨೫ ದೇಶಗಳಿಗೆ ಯಾವ ಸಹಾಯ ನೀಡಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ. ತನ್ನ ದೇಶ ಮುಂದುವರಿಯಲು ಮಾಡುವ ಪ್ರಯತ್ನಗಳಲ್ಲಿ ಯಾವ ಹೆಣ್ಣುಮಕ್ಕಳು ಹಿಂದೆ ಬೀಳದಂತೆ ಹಾಗೂ ಹೆಣ್ಣುಮಕ್ಕಳು ಅಭಿವೃದ್ಧಿಯ ಮಧ್ಯವರ್ತಿಯಾಗಿ ಹಕ್ಕಿನ ಸ್ಥಾನ ಪಡೆಯುವಂತೆ ಮಾಡುವುದು ನಮ್ಮ ಬದ್ಧತೆಯಾಗಿದೆ ಎಂದು ಆಫ್ರಿಕನ್ ಸದಸ್ಯ ರಾಷ್ಟ್ರಗಳ ಶಿಕ್ಷಣ ಮಂತ್ರಿಗಳ ೮ನೇ ಸಮ್ಮೇಳನದಲ್ಲಿ ಹೇಳಿದ್ದಾರೆ. ಶಾಲಾಶಿಕ್ಷಣದಲ್ಲಿ ಲಿಂಗ ಅಸಮಾನತೆ ತೊಡೆದುಹಾಕುವುದು ಪ್ರಮುಖ ಸಂಗತಿಯಾಗಿದೆ. ಅಧ್ಯಯನಕ್ಕೆ ಒಳಪಟ್ಟ ಸಾತನೂರು ಶಾಲೆಯ ನಾಲ್ಕನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ೪೭ ಇದೆ. ಇದರಲ್ಲಿ ಗಂಡುಮಕ್ಕಳು ೨೭ ಇದ್ದರೆ, ಹೆಣ್ಣುಮಕ್ಕಳು ೨೦ ವಿದ್ಯಾರ್ಥಿಗಳಿದ್ದಾರೆ. ಹಾಗೆಯೇ ನಾಗರಸನಕೋಟೆ ಶಾಲೆಯ ನಾಲ್ಕನೇ ತರಗತಿಯಲ್ಲಿ ಗಂಡುಮಕ್ಕಳು ೧೧ ವಿದ್ಯಾರ್ಥಿಗಳಿದ್ದರೆ, ಹೆಣ್ಣುಮಕ್ಕಳು ೧೩ ವಿದ್ಯಾರ್ಥಿನಿಯರಿದ್ದಾರೆ. ನಾಗರಸನಕೋಟೆ ಶಾಲೆಯಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಿರುವುದು ಕಂಡುಬಂದಿದೆ.

ದೊಡ್ಡ ಆಲಹಳ್ಳಿ ಶಾಲೆಯ ನಾಲ್ಕನೇ ತರಗತಿಯಲ್ಲಿ ಗಂಡುಮಕ್ಕಳ ಸಂಖ್ಯೆ ೩೦, ಹೆಣ್ಣುಮಕ್ಕಳ ಸಂಖ್ಯೆ ೨೯ ವಿದ್ಯಾರ್ಥಿನಿಯರಿದ್ದಾರೆ. ಹಾಗೆಯೇ ನಾಯಕನಹಳ್ಳಿ ಗಂಡುಮಕ್ಕಳು ೨೦ ವಿದ್ಯಾರ್ಥಿಗಳಿದ್ದರೆ, ಹೆಣ್ಣುಮಕ್ಕಳು ೧೪ ವಿದ್ಯಾರ್ಥಿನಿಯರಿದ್ದಾರೆ. ನಾಲ್ಕನೇ ತರಗತಿಯಲ್ಲಿ ಒಟ್ಟು ೧೬೪ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ೭೬ ಹೆಣ್ಣುಮಕ್ಕಳು, ೮೮ ಗಂಡುಮಕ್ಕಳಿದ್ದಾರೆ. ಅಂದರೆ, ಶೇ. ೫೩ರಷ್ಟು ವಿದ್ಯಾರ್ಥಿಗಳು ಹಾಗೂ ಶೇ. ೪೭ರಷ್ಟು ವಿದ್ಯಾರ್ಥಿನಿಯರಿದ್ದಾರೆ.

ಅಂದರೆ, ನಾಲ್ಕನೇ ತರಗತಿಯಲ್ಲಿ ಗಂಡು ಮತ್ತು ಹೆಣ್ಣುಮಕ್ಕಳ ನಡುವೆ ಶೇ. ೬ರಷ್ಟು ಅಂತರವಿದೆ. ಶಿಕ್ಷಣದ ಪ್ರಾಥಮಿಕ ಶಾಲೆಯಲ್ಲಿಯೇ ಲಿಂಗ ಅಸಮಾನತೆ ಮುಂದುವರಿದಿರುವುದನ್ನು ಕಾಣಬಹುದಾಗಿದೆ.

ಐದನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳ ನಡುವಿನ ಲಿಂಗ ಅಸಮಾನತೆ ಕುರಿತು ಗಮನಿಸಿದಾಗ ಇಲ್ಲಿ ಒಟ್ಟು ಸಾತನೂರು ಗ್ರಾಮಪಂಚಾಯಿತಿ ಎರಡು ಹಳ್ಳಿಗಳ ಶಾಲೆಗಳಲ್ಲಿ ಐದನೇ ತರಗತಿಯಲ್ಲಿ ೫೬ ವಿದ್ಯಾರ್ಥಿಗಳಿದ್ದರೆ, ಇವರಲ್ಲಿ ಗಂಡುಮಕ್ಕಳು ೨೯ ಹಾಗೂ ಹೆಣ್ಣುಮಕ್ಕಳು

೨೭ ವಿದ್ಯಾರ್ಥಿನಿಯರಿದ್ದಾರೆ. ಹಾಗೆಯೇ ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿಯ ಎರಡು ಹಳ್ಳಿಗಳಲ್ಲಿ ೮೭ ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ೫೩ ಗಂಡುಮಕ್ಕಳು, ೩೪ ಹೆಣ್ಣುಮಕ್ಕಳು ಇದ್ದಾರೆ.

ಆರನೇ ತರಗತಿಯಲ್ಲಿ ಸಾತನೂರು ಗ್ರಾಮಪಂಚಾಯಿತಿಯ ಎರಡು ಹಳ್ಳಿಗಳ ಶಾಲೆಯಲ್ಲಿ ೬೬ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಗಂಡುಮಕ್ಕಳು ೨೭ ಹಾಗೂ ಹೆಣ್ಣುಮಕ್ಕಳು ೩೯ ವಿದ್ಯಾರ್ಥಿಗಳಿದ್ದಾರೆ.

ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ಎರಡು ಹಳ್ಳಿಗಳಲ್ಲಿನ ಶಾಲೆಗಳ ಆರನೇ ತರಗತಿಯಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ೮೮ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಗಂಡು ೪೬ ಮತ್ತು ೪೨ ಹೆಣ್ಣುಮಕ್ಕಳಿದ್ದಾರೆ.

ಎರಡು ಪಂಚಾಯಿತಿಗಳಿಂದ ಆರನೇ ತರಗತಿಯಲ್ಲಿ ಒಟ್ಟು ೧೫೪ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಲಿಂಗವಾರು ಗಂಡು ೭೩ ಮತ್ತು ೮೧ ಹೆಣ್ಣುಮಕ್ಕಳಿದ್ದಾರೆ. ಅಂದರೆ, ಶೇ. ೫೨ರಷ್ಟು ಹೆಣ್ಣುಮಕ್ಕಳು ಹಾಗೂ ಶೇ. ೪೮ರಷ್ಟು ಗಂಡುಮಕ್ಕಳಿದ್ದಾರೆ. ಆರನೇ ತರಗತಿಯಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಅಧಿಕವಿದೆ.

ಇನ್ನು ಏಳನೇ ತರಗತಿಯಲ್ಲಿ ಸಾತನೂರು ಗ್ರಾಮಪಂಚಾಯಿತಿಯ ಎರಡು ಹಳ್ಳಿಗಳ ಶಾಲೆಗಳಲ್ಲಿ ೭೮ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಗಂಡುಮಕ್ಕಳು ೩೦ ಹಾಗೂ ೩೭ ಹೆಣ್ಣುಮಕ್ಕಳಿದ್ದಾರೆ. ಏಳನೇ ತರಗತಿಯಲ್ಲಿ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಟ್ಟಾರೆ ಎರಡು ಗ್ರಾಮಪಂಚಾಯಿತಿಗಳ ನಾಲ್ಕು ಹಳ್ಳಿಗಳ ಶಾಲೆಗಳಲ್ಲಿ ೬೧೮ ಓದುವ ವಿದ್ಯಾರ್ಥಿಗಳು ಕಂಡುಬಂದರೆ ಲಿಂಗವಾರು ಪ್ರಮಾಣದಲ್ಲಿ ಗಮನಿಸಿದಾಗ ಗಂಡು ೩೨೭ ಹಾಗೂ ೨೯೧ ಹೆಣ್ಣುಮಕ್ಕಳಿದ್ದಾರೆ. ಶೇ. ೫೩ರಷ್ಟು ಗಂಡುಮಕ್ಕಳು ಹಾಗೂ ಹೆಣ್ಣುಮಕ್ಕಳು ಶೇ. ೪೭ರಷ್ಟಿದ್ದಾರೆ.

೨೦೦೫ರ ವೇಳೆಗೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಲಿಂಗಸಮಾನತೆ ತರುವಲ್ಲಿ ಯುನಿಸೆಫ್ ಗುರಿ ಸಾಧಿಸಲು ಸಾಧ್ಯವಾಗಿಲ್ಲ. ವಿದ್ಯಾರ್ಥಿಗಳ ನಡುವಿನ ಲಿಂಗ ಅಸಮಾನತೆ ಹಾಗೆಯೇ ಮುಂದುವರಿಯುತ್ತಿದೆ.

ಶಾಲಾ ಮೇಲುಸ್ತುವಾರಿ ಸಮಿತಿ(ಎಸ್‌ಡಿಎಂಸಿ)

ಶಾಲಾಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಖಚಿತಪಡಿಸಲು ರಾಜ್ಯದ ಎಲ್ಲಾ ಪ್ರಾಥಮಿಕ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈ ಸಮಿತಿಗೆ ಅನುಮತಿ ನೀಡಲಾಗಿದೆ. ೯ ಜನ ಪೋಷಕರನ್ನು ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು. ಕನಿಷ್ಠ ಮೂರು ಮಂದಿ ಪ್ರತಿನಿಧಿಗಳು ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಅವರಲ್ಲಿ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಮೂರು ಹಾಗೂ ಒಂದು ಅಲ್ಪಸಂಖ್ಯಾತ ಪ್ರತಿನಿಧಿ ಇರಬೇಕು. ಯಾವುದೇ ಪೋಷಕರು

ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ಮೇಲುಸ್ತುವಾರಿ ಸದಸ್ಯರಿರಕೂಡದು. ಜೊತೆಗೆ ಗ್ರಾಮ, ತಾಲೂಕು ಮತ್ತು ಜಿಲ್ಲಾಪಂಚಾಯಿತಿ ಪದನಿಮಿತ್ತ ಸದಸ್ಯರು, ಅಂಗನವಾಡಿ ಶಿಕ್ಷಕಿಯರು, ಪ್ರಾಥಮಿಕ ಆರೋಗ್ಯ ಕೇಂದ್ರದ ಕಾರ್ಯಕರ್ತೆಯರು, ಶಾಲಾಮುಖ್ಯೋಪಾಧ್ಯಾಯರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ನಾಮನಿರ್ದೇಶಕ ಸದಸ್ಯರು ಇರುತ್ತಾರೆ.

ಶಾಲಾ ಮೇಲುಸ್ತುವಾರಿ ಸಮಿತಿಯು ಶಾಲಾ ಅಭಿವೃದ್ಧಿ ಮಂಡಳಿಯಂತೆ ಕಾರ್ಯ ನಿರ್ವಹಿಸುತ್ತದೆ. ಅಧ್ಯಯನಕ್ಕೆ ಒಳಪಟ್ಟ ಶಾಲೆಗಳಲ್ಲಿ ಶಾಲಾ ಮೇಲುಸ್ತುವಾರಿ ಸಮಿತಿಗಳಿವೆ. ನಿಯಮಿತವಾಗಿ ಸಭೆಗಳು ನಡೆಯುತ್ತವೆ. ಆದರೆ ಅಧಿಕಾರಿಗಳು ಸಭೆಗೆ ನಿಯಮಿತವಾಗಿ ಹಾಜರಾಗುವುದಿಲ್ಲ. ಶಾಲೆಯ ಮೂಲಭೂತ ಸೌಲಭ್ಯಗಳು ಕುರಿತು ಚರ್ಚಿಸಲಾಗುತ್ತದೆ. ಶಿಕ್ಷಕರು ಮಕ್ಕಳ ಹಾಜರಾತಿ, ಬಿಸಿಯೂಟದ ಗುಣಮಟ್ಟದ ಬಗ್ಗೆ ಸಂಗತಿಗಳ ಕುರಿತು ಚರ್ಚಿಸುತ್ತಾರೆ. ಆದರೆ, ಶಾಲಾ ಮೇಲುಸ್ತುವಾರಿ ಸಮಿತಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಿಲ್ಲ ಎಂಬುದಕ್ಕೆ ಶೌಚಾಲಯ, ಆಟದ ಮೈದಾನ ಮುಂತಾದವುಗಳ ಸ್ಥಿತಿ ನೋಡಿದರೆ ತಿಳಿದುಬರುತ್ತದೆ.

ಚಿಣ್ಣರ ಜಿಲ್ಲಾದರ್ಶನ

ಮಕ್ಕಳಲ್ಲಿ ಪರಸ್ಪರ ಸಹಕಾರ ಮತ್ತು ನಾಯಕತ್ವದ ಗುಣ ಬೆಳಸಿಕೊಳ್ಳಲು ಮತ್ತು ನಾಡು ಸಂಸ್ಕೃತಿ, ಐತಿಹಾಸಿಕ ಮಹತ್ವದ ಸ್ಥಳಗಳು, ವಿಜ್ಞಾನ ಇನ್ನಿತರ ಬಗ್ಗೆ ತಿಳುವಳಿಕೆ ಮೂಡಿಸುವುದಾಗಿದೆ. ದೇಶ, ಭಾಷೆ, ಆಲೋಚನೆ, ಆಚರಣೆಗಳೊಂದಿಗೆ ವಿವಿಧ ಸಮುದಾಯಗಳ ಜೀವನಶೈಲಿಯನ್ನು ನೋಡಿ ತಿಳಿಯುವುದಾಗಿದೆ. ಶಾಲಾಮಕ್ಕಳನ್ನು ಪ್ರತಿವರ್ಷ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋಗಲಾಗುತ್ತದೆ. ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಹಳ್ಳಿಗಳಲ್ಲಿಯ ಶಾಲೆಗಳ ಮಕ್ಕಳನ್ನು ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕರೆದುಕೊಂಡು ಹೋಗಲಾಗಿದೆ. ಇಂತಹ ಪ್ರವಾಸಗಳು ಮಕ್ಕಳಿಗೆ ನಾಡು, ನುಡಿ, ಸಂಸ್ಕೃತಿ, ಐತಿಹಾಸಿಕ ಸಂಗತಿಗಳಿಗೆ ಮಹತ್ವ ನೀಡುವಂತಹ ಮನೋಭಾವಗಳು ಉಂಟಾಗುತ್ತವೆ.

ಪ್ರತಿಭಾಕಾರಂಜಿ

ಪ್ರತಿಭಾಕಾರಂಜಿ ಹೆಸರೆ ಸೂಚಿಸುವಂತೆ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳು ಪ್ರತಿಭಾಕಾರಂಜಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮವಾಗಿದ್ದು, ಮಕ್ಕಳಲ್ಲಿ ಅಡಗಿರುವ ಸುಪ್ತಪ್ರತಿಭೆಗಳನ್ನು ಹೊರತೆಗೆಯುವುದೇ ಪ್ರತಿಭಾ ಕಾರಂಜಿಯ ಮುಖ್ಯ ಉದ್ದೇಶ. ಜಾನಪದ, ನೃತ್ಯ, ಸಂಗೀತ, ಫ್ಯಾನ್ಸಿಡ್ರೆಸ್, ರೇಖಾಚಿತ್ರ, ಕೋಲಾಟ, ಕಥೆ, ಕವನ, ಮೂಕಾಭಿನಯ, ಮಣ್ಣಿನ ಮಾದರಿ ಮುಂತಾದವುಗಳ ಕುರಿತು ಮಕ್ಕಳಲ್ಲಿ ಸ್ಪರ್ಧೆ ಏರ್ಪಡಿಸಿ ಆಯ್ಕೆಯಾದ ಪ್ರತಿಭಾವಂತರನ್ನು ಜಿಲ್ಲಾ, ರಾಜ್ಯಮಟ್ಟದ ಸ್ಪರ್ಧೆಗಳಿಗೆ ಕಳುಹಿಸಲಾಗುತ್ತದೆ. ಇಲ್ಲಿ ಆಯ್ಕೆಯಾದ ಮಕ್ಕಳಿಗೆ ಪ್ರಶಸ್ತಿ ಮತ್ತು ಪ್ರಮಾಣಪತ್ರ ನೀಡಲಾಗುತ್ತದೆ. ವಿದ್ಯಾರ್ಥಿಗಳು ಹೊಸ ಹೊಸ ಕೌಶಲ್ಯ ಹೊರತರಲು ಇರುವ ವೇದಿಕೆಯೇ ಪ್ರತಿಭಾಕಾರಂಜಿ ಆಗಿದೆ.

ನಮ್ಮ ಅಧ್ಯಯನಕ್ಕೆ ಒಳಪಟ್ಟಿರುವ ವಿದ್ಯಾರ್ಥಿನಿಯರಲ್ಲಿ ಶೇ. ೮೧.೩೩ರಷ್ಟು ವಿದ್ಯಾರ್ಥಿನಿಯರು ಪ್ರತಿಭಾಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಸಾತನೂರು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಶೇ. ೮೦.೬೦ರಷ್ಟು ವಿದ್ಯಾರ್ಥಿನಿಯರು ಪ್ರತಿಭಾಕಾರಂಜಿಯಲ್ಲಿ ಭಾಗವಹಿಸಿದ್ದಾರೆ. ದೊಡ್ಡ ಆಲಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಶೇ. ೮೨ರಷ್ಟು ವಿದ್ಯಾರ್ಥಿನಿಯರು ಭಾಗವಹಿಸಿದ್ದಾರೆ. ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತ ಹಾಗೂ ಹಿಂದುಳಿದ ಎಲ್ಲಾ ವರ್ಗಗಳ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಮಧ್ಯಾಹ್ನದ ಬಿಸಿಯೂಟ ಯೋಜನೆ

ಗ್ರಾಮೀಣ ಪ್ರದೇಶದಲ್ಲಿ ಬಡತನ ಮತ್ತು ಮೂಢಸಂಪ್ರದಾಯದ ಪ್ರಭಾವಗಳಿಂದ ಕೂಡಿದ ಪೋಷಕರ ಮಕ್ಕಳು ಬಹುತೇಕವಾಗಿ ಊಟ ಮಾಡದೆ ಶಾಲೆಗೆ ಬರುತ್ತಾರೆ. ಊಟವಿಲ್ಲದೇ ಶಾಲೆಗೆ ಬರುವ ಮಕ್ಕಳು ಹಸಿವು ಮತ್ತು ಅನ್ನಾಂಗದ ಕೊರತೆಯಿಂದ ನರಳಿ ರೋಗ ರುಜಿನಗಳಿಗೆ ತುತ್ತಾಗುವುದನ್ನು ತಪ್ಪಿಸಲು ಹಾಗೂ ಶಾಲೆಗೆ ಗೈರುಹಾಜರಾಗದಂತೆ ನೋಡಿಕೊಳ್ಳುವ ವಿಶೇಷ ಕಾರ್ಯಯೋಜನೆ ಇದಾಗಿದೆ. ಈ ಯೋಜನೆಯ ಪ್ರಮುಖವಾದ ಉದ್ದೇಶಗಳು ಶಿಕ್ಷಣದ ಸಾರ್ವತ್ರೀಕರಣದ ಸಾಧನೆ ಮಾಡಲು ಅತ್ಯಂತ ಸಹಕಾರಿಯಾಗಿವೆ. ಅವೆಂದರೆ

- ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುತ್ತಾ, ಮಕ್ಕಳ ದೈಹಿಕ ಬೆಳವಣಿಗೆ ಮತ್ತು ಆರೋಗ್ಯವನ್ನು ಉತ್ತಮಪಡಿಸುವುದು.
- ಮಕ್ಕಳು ಶಾಲೆಗೆ ಗೈರುಹಾಜರಾಗದಂತೆ ನೋಡಿಕೊಳ್ಳುವುದು.
- ಶಾಲೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸುತ್ತ, ಮಧ್ಯದಲ್ಲಿ ಶಾಲೆ ಬಿಡುವುದನ್ನು ತಡೆಗಟ್ಟುವುದು.
- ಮಕ್ಕಳ ಶಿಕ್ಷಣದ ವಿಷಯದಲ್ಲಿ ಪೋಷಕರ ಆರ್ಥಿಕ ಹೊಣೆಗಾರಿಕೆಯನ್ನು ತಕ್ಕಮಟ್ಟಿಗಾದರೂ ಕಡಿಮೆ ಮಾಡುವುದು.
- ಬಾಲಕಾರ್ಮಿಕ ಸಮಸ್ಯೆಯನ್ನು ಕಡಿಮೆ ಮಾಡಲು ನಿಗಾ ವಹಿಸುವುದು.

ಬೇಸಿಗೆಯ ರಜಾ ಕಾಲದಲ್ಲಿಯೂ ಶಾಲಾಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಸೌಲಭ್ಯವನ್ನು ಒದಗಿಸಬೇಕೆಂಬ ನಿರ್ದೇಶನವನ್ನು ಭಾರತದ ಸುಪ್ರೀಂಕೋರ್ಟ್ ಇತ್ತೀಚೆಗೆ ನೀಡಿದೆ. ಇದರಿಂದಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಮಧ್ಯಾಹ್ನದ ಬಿಸಿಯೂಟದ ಯೋಜನೆಯ ಮಹತ್ವ ಮತ್ತು ಉಪಯುಕ್ತತೆಗಳು ಅಧಿಕವಾಗಿವೆ.

ಶಾಲಾ ಬಿಸಿಯೂಟವು ತರಗತಿಗಳಲ್ಲಿ ಬೋಧನಾ ಪ್ರಕ್ರಿಯೆಗೆ ಅಡ್ಡಿಯುಂಟು ಮಾಡಿದೆ ಎಂಬ ಇನ್ನೊಂದು ಅಪವಾದವಿದೆ. ಶಿಕ್ಷಕರು ಅಮೂಲ್ಯವಾದ ಸಮಯವನ್ನು ತರಗತಿಯಲ್ಲಿನ ಬೋಧನೆಗೆ ಬದಲಿಯಾಗಿ ಅಡುಗೆಯ ತಯಾರಿಕೆಯಲ್ಲಿ ಕಳೆಯುತ್ತಾರೆಂದು ಕೆಲವು ಮಾಧ್ಯಮಗಳಲ್ಲಿ

ವರದಿಯಾಗಿದೆ. ಆದರೆ ಈಗಾಗಲೇ ಎಲ್ಲಾ ಶಾಲೆಗಳಲ್ಲಿ ಅಡುಗೆ ಮಾಡುವವರನ್ನು ಮತ್ತು ಅವರಿಗೆ ಸಹಾಯಕರನ್ನು ನೇಮಿಸಿರುವುದರಿಂದ ಯಾವುದೇ ಶಾಲೆಯಲ್ಲಿ ಶಿಕ್ಷಕರು ಅಡುಗೆ ತಯಾರಿಕೆಯಲ್ಲಿ ತೊಡಗಿರುವುದು ನಮ್ಮ ಅಧ್ಯಯನ ಕ್ಷೇತ್ರದ ಶಾಲೆಗಳಲ್ಲಿ ಕಂಡುಬಂದಿರುವುದಿಲ್ಲ. ಉದಾಹರಣೆಗೆ ಶಾಲೆಯಲ್ಲಿ ಪ್ರತ್ಯೇಕ ಅಡುಗೆಮನೆ ಇಲ್ಲದೆ ಮಕ್ಕಳ ಕಲಿಕೆಯ ಕೊಠಡಿಯ ಪಕ್ಕದಲ್ಲಿ ಅಡುಗೆ ಮಾಡಿದಾಗ ಈ ಸಮಸ್ಯೆ ಇದೆ.

ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಶಾಲೆಗಳಲ್ಲಿ ಬಿಸಿಯೂಟ ತಯಾರಿಸಲು ಪ್ರತ್ಯೇಕ ಕೊಠಡಿಗಳಿವೆ. ಅಲ್ಲದೇ ಅಡುಗೆ ಮಾಡಲು ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿಯ ಮಹಿಳೆಯರನ್ನೇ ನೇಮಿಸಲಾಗಿದೆ. ಜಾತಿ ಕೀಳರಿಮೆ ಇಲ್ಲದೆ ಎಲ್ಲ ಮಕ್ಕಳು ಬಿಸಿಯೂಟ ಸೇವಿಸುತ್ತಾರೆ. ಶಾಲೆಯಲ್ಲಿನ ಮಧ್ಯಾಹ್ನದ ತರಗತಿಗಳು ಬೆಳಗ್ಗಿನ ತರಗತಿಗಳಂತೆಯೇ ಇರುವಲ್ಲಿ ಸಕಾರಾತ್ಮಕವಾಗಿದೆ. ಮಧ್ಯಾಹ್ನದ ಊಟಕ್ಕಾಗಿ ಮಕ್ಕಳು ಮನೆಗೆ ಹೋಗಿ ಬೇರೆ ಬೇರೆ ಕಾರಣಗಳಿಂದ ಅವರು ಮರಳಿ ಶಾಲೆಗೆ ಬರುತ್ತಿರಲಿಲ್ಲ. ಆದರೆ ಶಾಲಾ ಬಿಸಿಯೂಟ ಪ್ರಾರಂಭವಾದ ನಂತರದ ತರಗತಿಗಳು ಬೆಳಗಿನ ತರಗತಿಗಳಂತೆ ಮಧ್ಯಾಹ್ನದ ಸಮಯದಲ್ಲಿಯೂ ಮಕ್ಕಳ ಹಾಜರಾತಿಯನ್ನು ಪಡೆಯುವುದು ಸಾಧ್ಯವಾಗಿದೆ. ನಮ್ಮ ಅಧ್ಯಯನದ ಸಂದರ್ಭದಲ್ಲಿ ಸಂದರ್ಶಿಸಿದ ಎಲ್ಲಾ ಶಿಕ್ಷಕರು ಮಧ್ಯಾಹ್ನದ ಶಾಲಾ ಬಿಸಿಯೂಟ ಆರಂಭವಾದ ನಂತರದ ದಿನಗಳಲ್ಲಿ ಮಧ್ಯಾಹ್ನದ ಶಾಲಾ ಹಾಜರಾತಿಯು ಬೆಳಗ್ಗಿನ ಹಾಜರಾತಿಗೆ ಸರಿಸಮಾನವಾಗಿರುತ್ತದೆ. ಬಿಸಿಯೂಟ ಪ್ರಾರಂಭವಾದಾಗಿನಿಂದ ಹಾಜರಾತಿ ಪ್ರಮಾಣ ಹೆಚ್ಚಾಗಿದೆ.

ವಿದ್ಯಾರ್ಥಿವೇತನ

ಮಕ್ಕಳು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವಾಗ ಕಂಡುಬರುವಂತಹ ಆರ್ಥಿಕ ಸಂಕಷ್ಟಗಳ ಪರಿಹಾರಾರ್ಥವಾಗಿ ಮಕ್ಕಳಿಗೆ ಶಿಷ್ಯವೇತನವನ್ನು ಕೊಡಲಾಗುತ್ತದೆ. ಶಾಲಾ ಗುಣಮಟ್ಟದಲ್ಲಿ ವಿತರಿಸಲಾಗುವ ಶಿಷ್ಯವೇತನ ಪದ್ಧತಿಗೆ ಕರ್ನಾಟಕ ರಾಜ್ಯದಲ್ಲಿ ಒಂದು ಇತಿಹಾಸವಿದೆ. ಮೈಸೂರು ಸಂಸ್ಥಾನದ ವಿಠಲ್‌ರಾವ್ ಗಾಯಕವಾಡ್ ಅವರ ಕಾಲದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಆದ್ಯತೆ ಮೇರೆಗೆ ಶಿಷ್ಯವೇತನಗಳನ್ನು ಒದಗಿಸಲಾಗುತ್ತಿತ್ತು. ಆದರೆ ಸ್ವಾತಂತ್ರ್ಯ ನಂತರದಲ್ಲಿ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ಸಮಾಜದ ಅಂಚಿನ ಸಮುದಾಯಗಳ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಲಾಯಿತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವಾದ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಶಿಷ್ಯವೇತನವನ್ನು ನೀಡಲಾಗುತ್ತಿದೆ. ಈ ಶಿಷ್ಯವೇತನವನ್ನು ವಿತರಿಸುವಾಗ ವಿದ್ಯಾರ್ಥಿಗಳ ಜಾತಿ ಧರ್ಮಗಳ ಸಾಮಾಜಿಕ ಪರಿಸ್ಥಿತಿ ಮತ್ತು ಅವರು ಪಡೆದುಕೊಂಡ ಒಟ್ಟು ಅಂಕಗಳನ್ನು ಪರಿಗಣಿಸಲಾಗುತ್ತದೆ. ಅಧ್ಯಯನಕ್ಕೆ ಒಳಪಟ್ಟ ೩೦೦ ವಿದ್ಯಾರ್ಥಿನಿಯರಲ್ಲಿ ಶೇ. ೭೯.೦ರಷ್ಟು ವಿದ್ಯಾರ್ಥಿವೇತನ ಪಡೆಯುತ್ತಿದ್ದಾರೆ. ಪರಿಶಿಷ್ಟ ಜಾತಿ,

ಪರಿಶಿಷ್ಟ ಪಂಗಡ ಶೇ. ೮೪ರಷ್ಟು ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನ ಪಡೆದಿದ್ದಾರೆ. ಪ್ರತಿ ವಿದ್ಯಾರ್ಥಿನಿಗೂ ರೂ. ೫೦೦ಗಳ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಇತ್ತೀಚೆಗೆ ವಿದ್ಯಾರ್ಥಿನಿಯರು ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿದ್ದು, ವಿದ್ಯಾರ್ಥಿವೇತನದ ಹಣ ನೇರವಾಗಿ ಅವರ ಖಾತೆಗೆ ಸಂದಾಯವಾಗುತ್ತಿದೆ. ಇದರಿಂದ ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನ ಪಡೆಯುವಲ್ಲಿನ ಪ್ರಕ್ರಿಯೆಯ ಕಿರಿಕಿರಿ ಇಲ್ಲದಂತಾಗಿದೆ. ಈ ಶಿಷ್ಯವೇತನದ ವಿಷಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಿದರೂ ಇತರೆ ಹಿಂದುಳಿದ ಮಕ್ಕಳನ್ನು ಕಡೆಗಣಿಸುವುದಿಲ್ಲ. ಹಾಗಾಗಿ ಶಿಷ್ಯವೇತನವು ಕಡಿಮೆ ಮೊತ್ತದ್ದಾಗಿದ್ದರೂ ವಿದ್ಯಾರ್ಥಿಗಳ ವಿದ್ಯಾಭ್ಯಾಸದಲ್ಲಿ ಮೌಲ್ಯಯುತ ಮತ್ತು ಸ್ಫೂರ್ತಿದಾಯಕವಾಗಿದೆ.

ಉಚಿತ ಪಠ್ಯಪುಸ್ತಕಗಳ ಸರಬರಾಜು

ಯಾವ ವಯೋಮಾನದ ಮಕ್ಕಳಿಗೆ? ಯಾವುದನ್ನು? ಯಾವ ವಿಧಾನದಲ್ಲಿ ಮತ್ತು ಯಾವ ಪ್ರಮಾಣದಲ್ಲಿ ಕಲಿಸಿಕೊಡಬೇಕೆಂಬ ಅಂಶಗಳನ್ನು ತಿಳಿಸುವ ಪಠ್ಯಪುಸ್ತಕಗಳು ಮಕ್ಕಳ ಕಲಿಕೆಗೆ ಅವಶ್ಯಕವಾದ ಜ್ಞಾನ ಕೌಶಲ್ಯ ತಿಳುವಳಿಕೆಗಳನ್ನು ಒದಗಿಸುವಲ್ಲಿ ಪಠ್ಯಪುಸ್ತಕಗಳು ಉಪಕಾರಿಯಾಗಿವೆ. ಮಕ್ಕಳ ವಯಸ್ಸು ಮತ್ತು ತರಗತಿಗೆ ತಕ್ಕಂತೆ ಶಿಕ್ಷಣತಜ್ಞರಿಂದ ರಚಿಸಲ್ಪಡುವ ಪಠ್ಯಪುಸ್ತಕಗಳು ಮಕ್ಕಳ ಶಿಕ್ಷಣದ ವಿಷಯವಾಗಿ ಉಪಯುಕ್ತವಾಗುತ್ತವೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವಾದ ಉದ್ದೇಶ ಮತ್ತು ಗುರಿಸಾಧನೆಯ ಹಿನ್ನೆಲೆಯಲ್ಲಿ ಸರ್ಕಾರದ ಪಠ್ಯಪುಸ್ತಕಗಳನ್ನು ಶಾಲಾಮಕ್ಕಳಿಗೆ ಪುಕ್ಕಟೆಯಾಗಿ ಪೂರೈಸುವಂತಹ ಯೋಜನೆ ಜಾರಿಯಲ್ಲಿದೆ. ಈ ಯೋಜನೆಯಂತೆ ಕರ್ನಾಟಕ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮತ್ತು ಬಡವರ್ಗ ಸಮುದಾಯದ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಪುಕ್ಕಟೆಯಾಗಿ ಆಯಾ ಶಾಲೆಗಳಲ್ಲಿಯೇ ವಿತರಿಸುತ್ತದೆ. ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಹಳ್ಳಿಗಳ ಶಾಲೆಗಳಲ್ಲಿ ಉಚಿತ ಪಠ್ಯಪುಸ್ತಕ ವಿತರಿಸಲಾಗಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶಗಳ ಬಡವರ್ಗದ ಪೋಷಕರಿಗೆ ತಮ್ಮ ಮಕ್ಕಳ ಶಿಕ್ಷಣದ ವಿಷಯದಲ್ಲಿ ಆರ್ಥಿಕವಾಗಿ ನೆರವಾದಂತಾಗುತ್ತದೆ. ಒಟ್ಟಿನಲ್ಲಿ ಪಠ್ಯಪುಸ್ತಕದ ಯೋಜನೆಯು ಶಿಕ್ಷಕ ವರ್ಗ, ಮಕ್ಕಳು ಮತ್ತು ಪೋಷಕರಿಗೆ ಬಹುಮುಖ ಪ್ರಯೋಜನಗಳನ್ನು ಒದಗಿಸುತ್ತಾ, ಶಿಕ್ಷಣದ ಸಾರ್ವತ್ರೀಕರಣಕ್ಕೆ ಕೈಜೋಡಿಸುತ್ತದೆ.

ಉಚಿತ ಸಮವಸ್ತ್ರ, ನೋಟ್‌ಪುಸ್ತಕ ಮತ್ತು ಶಾಲಾಬ್ಯಾಗ್‌ಗಳ ವಿತರಣೆ

ಬಡತನದ ಸಮಸ್ಯೆಯಿಂದ ಅನೇಕ ಸಂಖ್ಯೆಯ ಮಕ್ಕಳು ಉತ್ತಮವಾದ ಬಟ್ಟೆ ಧರಿಸದೇ ಕೆಳದರ್ಜೆಯ ಬಟ್ಟೆ ಧರಿಸಿಕೊಂಡು ಶಾಲೆಗೆ ಬಂದರೆ ಅವರಲ್ಲಿ ಅತೃಪ್ತಿ ಮತ್ತು ಕೀಳರಿಮೆಗಳು ಕಾಡಲಾರಂಭಿಸುತ್ತವೆ. ಈ ಕಾರಣದಿಂದಲೇ ಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಡುವಂತಹ ಅಪಾಯಗಳಿರುತ್ತದೆ. ಇದನ್ನು ಮನಗಂಡ ಕರ್ನಾಟಕ ಸರ್ಕಾರ ಎಲ್ಲಾ ಶಾಲಾಮಕ್ಕಳಿಗೆ ಸಮಾನತೆ

ಮತ್ತು ಶಿಸ್ತು ಮೂಡಿಸುವ ಉದ್ದೇಶದಿಂದ ಸರ್ಕಾರಿ ಶಾಲೆಯಲ್ಲಿನ ಬಡಮಕ್ಕಳಿಗೆ ಉಚಿತವಾಗಿ ಸಮವಸ್ತ್ರಗಳನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಶಾಲೆಗಳಲ್ಲಿ ಬಡಮಕ್ಕಳಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತವಾಗಿ ಸಮವಸ್ತ್ರಗಳನ್ನು ವಿತರಿಸಲಾಗಿದೆ. ಜೊತೆಗೆ ಪೋಷಕರಿಗೆ ಅವರ ಮಕ್ಕಳ ಶಿಕ್ಷಣದ ಆರ್ಥಿಕ ಭಾರವನ್ನು ಸ್ವಲ್ಪವಾದರೂ ಇಳಿಸಿದಂತಾಗಿದೆ. ಸರ್ಕಾರಿ ನಾಲ್ಕು ಶಾಲೆಯಲ್ಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಉಚಿತ ಶಾಲಾಬ್ಯಾಗ್ ಮತ್ತು ನೋಟ್‌ಪುಸ್ತಕಗಳ ವಿತರಣೆ ಮಾಡಲಾಗಿದೆ.

ಅರ್ಹ ಮಕ್ಕಳಿಗೆ ವಿದ್ಯಾರ್ಥಿವೇತನ, ಬ್ಯಾಗ್, ಶಾಲಾಪುಸ್ತಕ ಮತ್ತು ಸಮವಸ್ತ್ರಗಳನ್ನು ಉಚಿತವಾಗಿ ತಲುಪಿಸುವ ಪ್ರಯತ್ನಗಳು ನಡೆಯುತ್ತಿವೆ. ಅದು ಎಲ್ಲಾ ಮಕ್ಕಳಿಗೆ ತಲುಪುತ್ತಿವೆ ಎಂದು ಸರ್ಕಾರದ ವರದಿಗಳಲ್ಲಿ ಮತ್ತು ಸರ್ಕಾರಗಳನ್ನು ವಿಮರ್ಶಾತ್ಮಕವಾಗಿ ನೋಡದ ಸರ್ಕಾರೇತರ ಸಂಘ ಸಂಸ್ಥೆಗಳು ನಡೆಸಿದ ಅಧ್ಯಯನಗಳಿಂದ ತಿಳಿಯುತ್ತದೆ. ಆದರೆ ನಾವು ಅಧ್ಯಯನ ಮಾಡಿದ ಕ್ಷೇತ್ರಗಳಲ್ಲಿ ಅರ್ಹ ಮಕ್ಕಳಿಗೆ ಉಚಿತ ಸೌಲಭ್ಯಗಳು, ನಿಗದಿತ ಸಮಯ ಮತ್ತು ನಿಗದಿತ ಪ್ರಮಾಣದಲ್ಲಿ ನೀಡಲಾಗಿದೆ. ಮಕ್ಕಳ ಬದುಕಿಗೆ ಮತ್ತು ಬೌದ್ಧಿಕ ಬೆಳವಣಿಗೆಗೆ ಆಗತ್ಯವಾದ ಸೌಕರ್ಯ ಮತ್ತು ಸೌಲಭ್ಯಗಳನ್ನು ಒದಗಿಸುವುದು ಪ್ರತಿಯೊಂದು ಸರ್ಕಾರದ ಕರ್ತವ್ಯವಾಗಿದ್ದು, ಇದು ಹಕ್ಕು ಆಧಾರಿತ ಅಭಿವೃದ್ಧಿ ಪರಿಕಲ್ಪನೆಯ ಮೂಲ ಆಶಯವಾಗಿರುತ್ತದೆ. ಈ ಆಶಯಗಳು ಮೇಲ್ನೋಟಕ್ಕೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿವೆ ಎಂದು ಕಂಡುಬರುತ್ತದೆ.

ಗ್ರಾಮೀಣ ಹೆಣ್ಣುಮಕ್ಕಳ ಪೋಷಕರ ತಿಳುವಳಿಕೆ

ಶಿಕ್ಷಣದ ಸೌಲಭ್ಯ ಕುರಿತಾದ ಹೆಣ್ಣುಮಕ್ಕಳ ಪೋಷಕರ ನಾನಾ ತಿಳುವಳಿಕೆಗಳು ಹೆಣ್ಣುಮಕ್ಕಳ ಸಾಕ್ಷರತೆಯ ಪ್ರಮಾಣದ ಮೇಲೆ ಎಷ್ಟರಮಟ್ಟಿಗೆ ಪ್ರಭಾವಿತವಾಗಿವೆ ಎಂಬುದನ್ನು ತಿಳಿಯಬೇಕಾಗುತ್ತದೆ. ಅಧ್ಯಯನಕ್ಷೇತ್ರದಲ್ಲಿ ಕೈಗೊಂಡ ಕ್ಷೇತ್ರಕಾರ್ಯದ ಪ್ರಕಾರ ಶೇಕಡ ೯೮ರಷ್ಟು ಹೆಣ್ಣುಮಕ್ಕಳ ಪೋಷಕರು ಶಿಕ್ಷಣದ ಸೌಲಭ್ಯಗಳು ಸರಿಯಾಗಿ ಲಭ್ಯವಾಗುತ್ತವೆ ಎಂದು ಪ್ರತಿಕ್ರಿಯಿಸುತ್ತಾರೆ. ಇನ್ನುಳಿದ ಶೇಕಡ ೨ರಷ್ಟು ಹೆಣ್ಣುಮಕ್ಕಳ ಪೋಷಕರು ಮಾತ್ರ ಶಿಕ್ಷಣದ ಸೌಲಭ್ಯಗಳು ಸರಿಯಾಗಿ ಲಭ್ಯವಾಗುತ್ತಿಲ್ಲವೆಂದು ಪ್ರತಿಕ್ರಿಯಿಸುತ್ತಾರೆ. ಈ ಶಿಕ್ಷಣದ ಸೌಲಭ್ಯಗಳಿಂದ ತಮ್ಮ ಮಕ್ಕಳ ಶಿಕ್ಷಣದ ಮೇಲೆ ಪರಿಣಾಮವಾಗಿರುವುದನ್ನು ಈ ಬಗ್ಗೆ ಪೋಷಕರಿಗೆ ತಿಳುವಳಿಕೆಯಿದೆ.

ಸರ್ಕಾರದ ಕಡೆಯಿಂದ ದೊರೆಯುವ ಶಿಕ್ಷಣ ಸೌಲಭ್ಯಗಳ ಜೊತೆಯಲ್ಲಿ ಪೋಷಕರು ಅವರ ಆದಾಯದ ಮಟ್ಟಕ್ಕೆ ಅನುಸಾರವಾಗಿಯೇ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ವೈಯಕ್ತಿಕವಾಗಿ ಹಣ ಖರ್ಚು ಮಾಡುತ್ತಾರೆ. ಹೆಣ್ಣುಮಕ್ಕಳ ಪೋಷಕರು ಮಾತ್ರ ಸರ್ಕಾರಿ ಸೌಲಭ್ಯಗಳನ್ನಷ್ಟೇ ನಂಬಿಕೊಂಡು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಈ ರೀತಿಯಾದ ಶಿಕ್ಷಣದ ಸೌಲಭ್ಯ ಕುರಿತಂತೆ ಹೆಣ್ಣುಮಕ್ಕಳ ಪೋಷಕರ ತಿಳುವಳಿಕೆಗಳು ಅಧ್ಯಯನಕ್ಷೇತ್ರದ ಲಭ್ಯವಾಗುವ ಶಿಕ್ಷಣದ ಸೌಲಭ್ಯಗಳ

ವಿಷಯದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಸಮಪ್ರಮಾಣದ ತಿಳುವಳಿಕೆ ಇರುವುದು ಕಂಡುಬರುತ್ತದೆ. ಶಿಕ್ಷಣದ ಸೌಲಭ್ಯಗಳ ವಿಷಯದಲ್ಲಿ ಕಂಡುಬರುವ ಸೂಕ್ಷ್ಮ ಸಂಗತಿ ಎಂದರೆ, ಹೆಣ್ಣುಮಕ್ಕಳ ಪೋಷಕರು ವೈಯಕ್ತಿಕವಾಗಿ ಹಣ ಖರ್ಚು ಮಾಡಲು ಹಿಂಜರಿಯುವುದಿಲ್ಲ ಮತ್ತು ಸರ್ಕಾರಿ ಸೌಲಭ್ಯಗಳು ಸಿಗದಿದ್ದರೂ ಖಿನ್ನರಾಗುವುದಿಲ್ಲವೆಂಬ ಧೃಡವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಸೌಲಭ್ಯಗಳ ತೃಪ್ತಿಯ ಪ್ರಶ್ನೆ ಬಂದಾಗ ನಿರ್ದಿಷ್ಟವಾಗಿ ಶಿಕ್ಷಣದ ಭೌತಿಕ ಮೂಲಸೌಲಭ್ಯಗಳು, ಬೌದ್ಧಿಕ ಪರಿಸರದ ಸೌಲಭ್ಯಗಳು ಮತ್ತು ಪ್ರೋತ್ಸಾಹದಾಯಕ ಸೌಲಭ್ಯಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕಾಗುತ್ತದೆ. ಬಹುತೇಕವಾಗಿ ಶಿಕ್ಷಣದ ಭೌತಿಕ ಮೂಲಸೌಲಭ್ಯಗಳಾದ ಶಾಲಾಕೊಠಡಿ, ಶಿಕ್ಷಕರ ನೇಮಕ ಕುಡಿಯುವ ನೀರಿನ ವ್ಯವಸ್ಥೆಗಳ ಬಗ್ಗೆ ತೃಪ್ತಿಯಿದ್ದರೂ ಶೌಚಾಲಯ ಸೌಲಭ್ಯದ ಬಗ್ಗೆ ತೃಪ್ತಿ ಕಡಿಮೆ ಎಂಬುದಾಗಿ ಕಂಡುಬರುತ್ತದೆ.

ಶಿಕ್ಷಕರು ಶಾಲೆಗೆ ತಡವಾಗಿ ಬರುವುದು, ನಿಗದಿತ ಅವಧಿಗಿಂತ ಮುಂಚೆಯೇ ಮನೆಗೆ ಹೋಗುವುದು ಮಧ್ಯಾಹ್ನದ ಬಿಸಿಯೂಟದ ಕಡೆಗೆ ಹೆಚ್ಚಿನ ಗಮನ ಕೊಡುವುದು, ಆಗಾಗ್ಗೆ ಮೀಟಿಂಗ್‌ಗೆ ಹೋಗುವುದು, ತರಬೇತಿಗೆ ಹೋಗುವುದು, ವಿವಿಧ ಗಣತಿ ಕಾರ್ಯಗಳಿಗೆ ಹೋಗುವುದು, ವೈಯಕ್ತಿಕ ಕೆಲಸಗಳಿಗೆ ರಜೆ ಹಾಕುವುದು ಇತ್ಯಾದಿಗಳಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವುದು ಶಿಕ್ಷಕರಿಂದ ಸಾಧ್ಯವಾಗುತ್ತಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಿಕ್ಷಣದ ಪ್ರೋತ್ಸಾಹದಾಯಕ ಸೌಲಭ್ಯಗಳಾದ ಉಚಿತ ಪಠ್ಯಪುಸ್ತಕ ಸಮವಸ್ತ್ರ, ಶಾಲಾಬ್ಯಾಗ್, ಮಧ್ಯಾಹ್ನದ ಬಿಸಿಯೂಟ, ಆಹಾರಧಾನ್ಯ, ವಿದ್ಯಾರ್ಥಿವೇತನ ಇತ್ಯಾದಿಗಳ ವಿತರಣೆಯ ಬಗ್ಗೆ ದಲಿತ ಪೋಷಕರಲ್ಲಿ ತೃಪ್ತಿಯ ಭಾವನೆ ವ್ಯಕ್ತವಾಗುತ್ತದೆ. ಆದರೂ ಸ್ವಲ್ಪವೇ ಪ್ರಮಾಣದ ಅಸಮಾಧಾನವಿರುವುದು ತಿಳಿದುಬರುತ್ತವೆ. ಅಂದರೆ ಈ ಪ್ರೋತ್ಸಾಹದಾಯದ ಸೌಲಭ್ಯಗಳನ್ನು ಕೊಡುವಾಗ ಹೆಣ್ಣುಮಕ್ಕಳಿಗೆ ಅರಿದ ಪುಸ್ತಕ, ಸಮವಸ್ತ್ರ ಮತ್ತು ಬ್ಯಾಗ್‌ಗಳನ್ನು ನೀಡುವುದು, ಹಣ ಕೇಳುವುದು, ತಡವಾಗಿ ಕೊಡುವುದು ಕೇಳಿಬರುತ್ತಿದೆ.

ಗ್ರಾಮಪಂಚಾಯಿತಿಯ ಸದಸ್ಯರು ಅಂದರೆ, ಜನಪ್ರತಿನಿಧಿಗಳು ಶಾಲೆಗಳ ನಡುವೆ ನಿಕಟ ಬಾಂಧವ್ಯ ಕಂಡುಬರುವುದಿಲ್ಲ. ಜನಪ್ರತಿನಿಧಿಗಳು ಕಾಮಗಾರಿಗಳಿಗೆ ಕೊಡುವಷ್ಟು ಪ್ರಮುಖ್ಯತೆ ಮಕ್ಕಳ ಶಿಕ್ಷಣದ ಬಗ್ಗೆ ಕೊಡುವುದು ಕಂಡುಬರುವುದಿಲ್ಲ. ಶಾಲಾ ಮೇಲುಸ್ತುವಾರಿ ಸಮಿತಿಗಳಲ್ಲಿ ಪಂಚಾಯಿತಿ ಸದಸ್ಯರಿದ್ದಾರೆ. ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಶಾಲೆಯಿಂದ ಮುಖ್ಯೋಪಾಧ್ಯಾಯರು ಆಮಂತ್ರಣ ನೀಡಿದರು ಕೆಲವು ಸದಸ್ಯರು ಬರುತ್ತಾರೆ. ಬಂದು ಸಹಿ ಹಾಕಿ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ.

ಶಿಕ್ಷಣದ ಸೌಲಭ್ಯಗಳ ಲಭ್ಯತೆಯ ತಿಳುವಳಿಕೆ ಬಗ್ಗೆ ಸಾಮಾಜಿಕವಾಗಿ ವಿಭಿನ್ನವಾದ ಅಭಿಪ್ರಾಯಗಳಿವೆ. ಹೆಣ್ಣುಮಕ್ಕಳಿಗೆ ಲಭ್ಯವಾಗುವ ಶಿಕ್ಷಣದ ಸೌಲಭ್ಯಗಳು ಸರಿಯಾದರೂ ಅವುಗಳನ್ನು

ಪಡೆದುಕೊಳ್ಳುವಲ್ಲಿ ದಲಿತರಲ್ಲಿ ಸ್ವಲ್ಪಮಟ್ಟಿನ ಹಿಂಜರಿಯುವಿಕೆ ಕೇಳಿ ಬರುತ್ತಿದೆ. ಇನ್ನೊಂದು ಕಡೆ ದಲಿತ ಮಕ್ಕಳಿಗೆ ಲಭ್ಯವಾಗುವ ಶಿಕ್ಷಣದ ಎಲ್ಲಾ ಸೌಲಭ್ಯಗಳು ಆರ್ಥಿಕವಾಗಿ ಹಿಂದುಳಿದ ಇತರೆ ವರ್ಗದ ಮಕ್ಕಳಿಗೂ ಲಭ್ಯವಾಗಬೇಕು ಎಂಬ ಅಭಿಪ್ರಾಯವೂ ಇದೆ. ಆದರೆ ತಲಾಂತರದಿಂದಲೂ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ವಂಚಿತರಾದ ಹೆಣ್ಣುಮಕ್ಕಳ ಶೈಕ್ಷಣಿಕ ಪರಿಸ್ಥಿತಿಯನ್ನು ಸುಧಾರಿಸುವಂತಹ ದೃಷ್ಟಿಯಿಂದ ಅವರ ಮಕ್ಕಳಿಗೆ ಶಿಕ್ಷಣದ ಎಲ್ಲಾ ಸೌಲಭ್ಯಗಳನ್ನು ವಿಸ್ತರಣೆ ಮಾಡುವುದು ಸಾಮಾಜಿಕ ನ್ಯಾಯವೆನಿಸುತ್ತದೆ. ಇದೇ ಸಂದರ್ಭದಲ್ಲಿ ಆರ್ಥಿಕವಾಗಿ ದುರ್ಬಲವಾದ ಇತರೆ ಜಾತಿಯ ಮಕ್ಕಳನ್ನು ಕಡೆಗಣಿಸದಿರುವುದು ಸಾಮಾಜಿಕ ನ್ಯಾಯದ ಇನ್ನೊಂದು ಆಯಾಮವೆನಿಸುತ್ತದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ, ಬಡತನ ಮತ್ತು ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚ ಹಾಗೂ ಮಕ್ಕಳ ಶಾಲಾ ಭಾಗವಹಿಸುವಿಕೆಗಳ ಮಧ್ಯದಲ್ಲಿ ನೇರವಾದ ಸಂಬಂಧವಿದೆ. ಜೊತೆಗೆ ಇವುಗಳು ಒಂದಕ್ಕೊಂದು ಪರಸ್ಪರ ಕಾರಣ ಮತ್ತು ಪರಿಣಾಮಗಳಾಗಿ ಕಂಡುಬರುತ್ತವೆ. ಅದರಂತೆಯೇ ಬಡತನ ಮತ್ತು ಮಕ್ಕಳ ದುಡಿಮೆ ಹಾಗೂ ಮಕ್ಕಳು ಶಾಲಾಶಿಕ್ಷಣದಿಂದ ದೂರವಾಗುವಿಕೆಗಳ ನಡುವೆಯೂ ಕೂಡ ನೇರವಾದ ಸಂಬಂಧವಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಬಡತನದಿಂದಾಗಿ ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚದ ಹೊರೆಯನ್ನು ಹೊರಲಾಗಿದೆ. ಮಕ್ಕಳ ಶಾಲಾ ಭಾಗವಹಿಸುವಿಕೆ ಕಡಿಮೆಯಾದರೆ, ಬಡತನವು ಮಕ್ಕಳ ದುಡಿಮೆಗೆ ಪ್ರಚೋದಿಸುವುದರಿಂದ ಮಕ್ಕಳು ಶಾಲೆಗೆ ಹೋಗಲಾಗುವುದಿಲ್ಲ. ಆದ್ದರಿಂದ ಬಡತನವು ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಇರುವ ಒಂದು ಕಠಿಣ ತೊಡಕಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಆದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜಾತಿವರ್ಗದ ಬಡಕುಟುಂಬಗಳ ಮಕ್ಕಳ ಶಾಲಾ ಭಾಗವಹಿಸುವಿಕೆಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಜೀವಿಸುವ ಪರಿಸರ, ಅವರ ಕಸುಬು, ಅವರ ಜೀವನ ಮೌಲ್ಯಗಳು, ವ್ಯಕ್ತಿಗತ ಮತ್ತು ಕುಟುಂಬದ ಶಿಕ್ಷಣದ ಮಟ್ಟ ಹಾಗೂ ಅವರುಗಳ ಭವಿಷ್ಯದ ಚಿಂತನೆ ಇತ್ಯಾದಿಗಳಿಂದ ನಿರ್ಧಾರವಾಗುತ್ತದೆ. ಇದೇ ಸಂದರ್ಭದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳ ಶಾಲಾಶಿಕ್ಷಣದ ಮೇಲೆ ಜಾತಿಯ ಕ್ರಿಯಾಶೀಲತೆ ಬೀರುವ ಪರಿಣಾಮವನ್ನು ಕೂಡ ಅಲ್ಲಗಳೆಯಲಾಗುವುದಿಲ್ಲ. ಈ ಎಲ್ಲಾ ಅಂಶಗಳ ಜೊತೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದಲ್ಲಿರುವ ಬಡತನದ ಕೀಳರಿಮೆಯು ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಕಡಿಮೆ ಮಾಡಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದೆ.

ಶಿಕ್ಷಕರ ಮನೋಪ್ರವೃತ್ತಿ ಮತ್ತು ಗ್ರಾಮೀಣ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆ

ಶಾಲಾ ಶಿಕ್ಷಕರ ಮನೋಭಾವ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳ ಶಿಕ್ಷಣ ಕುರಿತಾದ ಅಧ್ಯಯನಗಳು ವಿರಳ ಎನಿಸುತ್ತದೆ. ಶಾಲಾ ಚಟುವಟಿಕೆಗಳಲ್ಲಿನ ಸಾಮಾಜಿಕ ಭೇದ

ಭಾವ ಮತ್ತು ಶಿಕ್ಷಕರ ಭೇದಭಾವನೆಗಳು ಆಚರಣೆಯಲ್ಲಿರುವುದು ಸಾಮಾಜಿಕವಾಗಿರುವ ಜಾತಿ ಸಂಬಂಧಗಳನ್ನು ತೋರಿಸುತ್ತದೆ. ಶಾಲಾಶಿಕ್ಷಕರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳು ಕಾಡುಜನ, ಅವರಿಗೆ ಏಟು ಬೀಳದೆ ಕಲಿಯುವುದಿಲ್ಲ ಎಂಬ ಭಾವನೆ ಇರುವುದನ್ನು ಅನಿತಾ (೨೦೦೦) ಅವರು ಗುರುತಿಸಿದ್ದಾರೆ. ಮುಂದುವರಿದು ಅನಿತಾ ಅವರ ಅಧ್ಯಯನವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳಲ್ಲಿ ಕಲಿಯುವ ಅರ್ಹತೆ ಇಲ್ಲದಿರುವುದು, ಪೋಷಕರ ನಿರಾಸಕ್ತಿಯ ಭಾವನೆ ಮತ್ತು ಅವರಲ್ಲಿನ ಜಾತಿಯ ಪಾರಂಪರಿಕ ಸಾಮಾಜಿಕ ಮೌಲ್ಯದ ಅನಿವಾರ್ಯತೆಯನ್ನು ತಿಳಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಶ್ರೀವಾಸ್ತವ ಅವರು ಉತ್ತರ ಪ್ರದೇಶದಲ್ಲಿ ನಡೆಸಿದ ಅಧ್ಯಯನದಲ್ಲಿ ಕೆಳಜಾತಿಯ ಮಕ್ಕಳು ಸಾಮಾನ್ಯವಾಗಿ ಸಾಮಾಜಿಕ ಸಹಿಷ್ಣುತೆ ಇರುವ ಶಾಲೆಗಳಲ್ಲಿ ದಾಖಲಾಗುತ್ತಾರೆ. ಇಂತಹ ಶಾಲೆಗಳಲ್ಲಿ ಶಿಕ್ಷಕರು ಮತ್ತು ಆಡಳಿತ ವರ್ಗದವರು ಅವರ ಜಾತಿಯವರೇ ಆಗಿರುತ್ತಿದ್ದರೂ ಆ ಶಾಲೆಗಳು ಅವರ ಮನೆಗಳಿಗೆ ಸಮೀಪ ಇರುತ್ತಿರಲಿಲ್ಲ ಎನ್ನುತ್ತಾರೆ.

ಆದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯದ ಮಹಿಳೆಯರನ್ನು ಸಂದರ್ಶನ ಮಾಡಿದಾಗ, ಶಿಕ್ಷಕರ ಬೇಜವಾಬ್ದಾರಿತನ ಸಮಯಕ್ಕೆ ಸರಿಯಾಗಿ ಶಾಲೆಗೆ ಬರದಿರುವುದು, ತಮಗೆ ಇಷ್ಟ ಬಂದಾಗ ಶಾಲೆಗೆ ಬರುವುದು, ತಮ್ಮ ವೈಯಕ್ತಿಕ ಕೆಲಸಗಳಿಗೆ ಮಕ್ಕಳನ್ನು ಬಳಸಿಕೊಳ್ಳುತ್ತಾರೆ. ಜಿಲ್ಲಾ ತಾಲ್ಲೂಕು ಕೇಂದ್ರಗಳಿಂದ ಶಾಲೆಗೆ ಲೇಟಾಗಿ ತರುವುದು ಮುಂತಾದ ಆರೋಪಗಳಿರುವುದು ತಿಳಿದುಬಂದಿದೆ. ರಾಜಸ್ಥಾನದಲ್ಲಿನ ಒಂದು ಅಧ್ಯಯನದಲ್ಲಿ ಶಿಕ್ಷಕರು ಸೃಷ್ಟಿಸುವ ಭಯ ಮತ್ತು ಅವರು ಮಕ್ಕಳಿಗೆ ನೀಡುವ ಕಠಿಣ ಶಿಕ್ಷೆ ಹಾಗೂ ಆ ಶಿಕ್ಷೆಗಳನ್ನು ಎದುರಿಸಲಾಗದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರೆ ಎಂಬುದನ್ನು ಗುರಿತಿಸಲಾಗಿದೆ. ಆದರೆ ಅನಿತಾ ಅವರು ಪರಿಶಿಷ್ಟ ಜಾತಿ ಮಕ್ಕಳು ಹೊಂದಿರುವ ಕಷ್ಟದಾಯಕವಾದ ಪರಿಸರ ಮತ್ತು ಆ ಮಕ್ಕಳ ಶೈಕ್ಷಣಿಕ ಅಗತ್ಯಗಳ ಬಗ್ಗೆ ಉತ್ತಮ ಭಾವನೆಗಳನ್ನು ಇಟ್ಟುಕೊಂಡಿರುವ ಶಾಲಾಶಿಕ್ಷಕರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾದ ವಾತಾವರಣವನ್ನು ಸೃಷ್ಟಿಸಿದ್ದಾರೆ ಎಂದು ಹೇಳಿರುವುದು ಈ ಮೇಲಿನ ಅಭಿಪ್ರಾಯಗಳಿಗೆ ವಿರುದ್ಧವಾಗಿದೆ. ಆದರೂ ಇಂತಹ ಸಕಾರಾತ್ಮಕವಾದ ಭಾವನೆಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳ ಶಿಕ್ಷಣಕ್ಕೆ ಸಹಕಾರಿಯಾಗುವ ಶಿಕ್ಷಕರ ಪ್ರಮಾಣವು ಕೂಡ ಕಡಿಮೆ.

ಶಾಲಾ ಶಿಕ್ಷಣದ ವಿಕೇಂದ್ರೀಕರಣ ಮತ್ತು ಸ್ಥಳೀಯವಾಗಿ ಸಮುದಾಯದ ಸಹಭಾಗಿತ್ವದ ಬಗ್ಗೆ ನಮ್ಮ ಶಿಕ್ಷಣನೀತಿಗಳಲ್ಲಿ ಹೆಚ್ಚಿನ ಗಮನ ನೀಡುತ್ತಿರುವ ಇಂದಿನ ದಿನಗಳಲ್ಲಿ ಶಿಕ್ಷಕರ ಮನೋಭಾವನೆಯನ್ನು ತಿಳಿಯಬೇಕಾಗುತ್ತದೆ. ಶಿಕ್ಷಣದ ಏಕೇಂದ್ರೀಕರಣ ಮತ್ತು ಸ್ಥಳೀಯ

ಭಾಗವಹಿಸುವಿಕೆಯು ಗ್ರಾಮಮಟ್ಟದ ಎಸ್.ಡಿ.ಎಂ.ಸಿ. ರೂಪದಲ್ಲಿದೆ. ಈ ಎಸ್.ಡಿ.ಎಂ.ಸಿ.ಗಳಲ್ಲಿ ಕಾನೂನು ಪ್ರಕಾರ ಕನಿಷ್ಠ ಪ್ರಮಾಣದಲ್ಲಿ ದುರ್ಬಲ ವರ್ಗದ ಜನರು ಇರಬೇಕಾಗುತ್ತದೆ. ಆದರೆ ಗ್ರಾಮಮಟ್ಟದಲ್ಲಿರುವ ಜಾತಿ ಸಂಬಂಧಗಳು ಅಷ್ಟೊಂದು ಸುಲಭವಾಗಿರುವುದಿಲ್ಲ. ಕರ್ನಾಟಕದಲ್ಲಿ ಗ್ರಾಮಮಟ್ಟದ ಸಮಿತಿಗಳ ಬಗ್ಗೆ ಅಧ್ಯಯನ ನಡೆಸಿದ ಕೌಲ್ ಅವರು ಗ್ರಾಮಮಟ್ಟದ ಶಿಕ್ಷಣ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಭಾಗವಹಿಸುವಿಕೆಯು ಮೇಲ್ಜಾತಿಯವರಿಗೆ ಇಷ್ಟವಾಗುವುದಿಲ್ಲ ಎಂದಿದ್ದಾರೆ. ಒಂದು ವೇಳೆ ಈ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗದವರ ಪ್ರಾತಿನಿಧ್ಯವಿದ್ದರೂ ಕೇವಲ ದಾಖಲೆಗಳಲ್ಲಿ ನಾಮಮಾತ್ರಕ್ಕೆ ಇರುತ್ತದೆ. ಪಟ್ಟಣ ಪ್ರದೇಶಗಳ ಶಾಲಾಭಿವೃದ್ಧಿ ಸಮಿತಿಗಳಲ್ಲಿಯೂ ದಲಿತರ ಭಾಗವಹಿಸುವಿಕೆ ಬೆರಳಳವಣಿಕೆಯಷ್ಟಿದೆ. ದಲಿತರ ಭಾಗವಹಿಸುವಿಕೆಯಿಂದ ಶಾಲಾ ಚಟುವಟಿಕೆಗಳಲ್ಲಿ ಯಾವುದೇ ಬದಲಾವಣೆಗಳಾಗುವುದಿಲ್ಲ ಎಂಬ ನಂಬಿಕೆಯ ಭಾವನೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದರಲ್ಲಿರುವುದೇ ಇದಕ್ಕೆಲ್ಲ ಕಾರಣವೆಂಬುದನ್ನು ಕೌಲ್ ಅವರು ಗುರುತಿಸಿದ್ದಾರೆ.

ಅಧ್ಯಯನದ ಫಲಿತಗಳು

ಮನುಕುಲದ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುವುದರಲ್ಲಿ ಶಿಕ್ಷಣವು ಮಾನವ ಅಭಿವೃದ್ಧಿಯಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸುತ್ತದೆ. ಶಿಕ್ಷಣದ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಸಾಧಿಸಿರುವ ಯಾವುದೇ ರಾಷ್ಟ್ರವು ಸುಲಭವಾಗಿಯೇ ಅಭಿವೃದ್ಧಿ ಹೊಂದುತ್ತದೆ. ಇದಕ್ಕೆ ಪೂರಕವಾಗಿ ಇಂದು ಜಗತ್ತಿನ ಅನೇಕ ಅಭಿವೃದ್ದಿ ಹೊಂದಿದ ರಾಷ್ಟ್ರಗಳನ್ನು ನೋಡಬಹುದು. ಆದರೆ ಹಿಂದುಳಿದ ರಾಷ್ಟ್ರಗಳು ಶೈಕ್ಷಣಿಕವಾಗಿಯೂ ಹಿಂದುಳಿದಿರುವುದನ್ನು ನೋಡಬಹುದು. ಶಿಕ್ಷಣವು ಮಾನವನಿಗೆ ಸಮಾಜದಲ್ಲಿ ಗೌರವ ಸ್ಥಾನಮಾನಗಳನ್ನು ತಂದುಕೊಡುತ್ತದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಮನುಷ್ಯ ತನ್ನ ಬದುಕು ಹಾಗೂ ಜೀವನ ನಿರ್ವಹಣೆ ಉತ್ತಮಪಡಿಸಿಕೊಳ್ಳಲು ಇರುವ ಅವಕಾಶಗಳನ್ನು ಬಳಸಿಕೊಳ್ಳುವ ಅಗಾಧವಾದ ಶಕ್ತಿ ಸಾಮರ್ಥ್ಯಗಳನ್ನು ಶಿಕ್ಷಣ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಸಾಕ್ಷರತೆ ಎಂದರೆ ಸ್ವಾತಂತ್ರ್ಯ ಎಂದಿರುವ ಅಮರ್ತ್ಯ ಸೆನ್ ಅವರ ಮಾತು ಅರ್ಥಗರ್ಭಿತವಾಗಿದೆ.

ಅಮರ್ತ್ಯ ಸೆನ್ ಅವರ ಪ್ರಕಾರ ಅಭಿವೃದ್ಧಿಯ ದೃಷ್ಟಿಯಿಂದ ಶಿಕ್ಷಣವು ಎಲ್ಲರಿಗೂ ದೊರೆಯಬೇಕಾದ ಒಂದು ಸಾಮಾಜಿಕ ಅಗತ್ಯವಾಗಿದೆ. ಅದರಲ್ಲಿಯೂ ಪ್ರಾಥಮಿಕ ಶಿಕ್ಷಣವು ೬-೧೪ರ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯವಾಗಿ ಒದಗಿಸಬೇಕೆಂಬುದು ನಮ್ಮ ಸಂವಿಧಾನದ ಆಶಯವಾಗಿರುತ್ತದೆ. ಅದರಂತೆಯೇ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ಸಹ ನಿರಂತರವಾಗಿವೆ. ಆದರೆ ಸಮಾಜದ ಎಲ್ಲಾ ವರ್ಗದ ಜನರು ಸಮಾನವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ. ಅಲ್ಲದೇ ಇಂದಿಗೂ ಶಿಕ್ಷಣದ ವಿಷಯದಲ್ಲಿ ಜಾತಿ, ವರ್ಗ, ಲಿಂಗ ಮತ್ತು ಪ್ರಾದೇಶಿಕ ಭಿನ್ನತೆಗಳು ಜೀವಂತವಾಗಿವೆ.

ರಾಮನಗರ ಜಿಲ್ಲೆಯ ಸಾತನೂರು ಮತ್ತು ದೊಡ್ಡ ಆಲಹಳ್ಳಿ ಎರಡು ಗ್ರಾಮಪಂಚಾಯಿತಿಗಳಲ್ಲಿ ಒಕ್ಕಲಿಗ ಸಮುದಾಯ ಪ್ರಾಬಲ್ಯವಿರುವ ಹಳ್ಳಿಗಳಾಗಿವೆ. ಜೊತೆಗೆ ಲಿಂಗಾಯತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ, ಇತರೆ ಹಿಂದುಳಿದ ವರ್ಗದ ಜಾತಿಯವರು ನೆಲೆಸಿದ್ದಾರೆ. ಎರಡು ಪಂಚಾಯಿತಿಗಳಲ್ಲಿಯೂ ಕೃಷಿಯೇ ಪ್ರಧಾನವಾದ ಕುಟುಂಬಗಳಾಗಿವೆ.

ರಾಮನಗರ ಬೆಂಗಳೂರಿನ ಸಮೀಪದಲ್ಲಿ ಇದ್ದರೂ ಸಾಮಾಜಿಕ ವ್ಯವಸ್ಥೆಯು ಗ್ರಾಮೀಣ ಸೊಗಡು ಮೈಗೂಡಿಸಿಕೊಂಡೇ ಮುಂದುವರಿಯುತ್ತಿದೆ. ಜಾತಿವ್ಯವಸ್ಥೆ ಹಾಗೆಯೇ ಮುಂದು ವರಿಯುತ್ತಿದೆ. ಪರಿಶಿಷ್ಟ ಜಾತಿ ಜನರು ಊರ ಹೊರಗೆ ಪ್ರತ್ಯೇಕವಾಗಿ ನೆಲೆಸಿದ್ದಾರೆ. ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಹಾಗೂ ಹಿಂದುಳಿದ ಸಮುದಾಯಗಳು ಆಯಾ ಜಾತಿ, ಧರ್ಮದ ಓಣಿಗಳಲ್ಲಿ ನೆಲೆಸಿವೆ.

ಅವಿಭಕ್ತ ಕುಟುಂಬಗಳು ತಮ್ಮ ರೂಢಿ ಸಂಪ್ರದಾಯಗಳನ್ನು ಚಾಚೂ ತಪ್ಪದೇ ಆಚರಿಸಿಕೊಂಡು ಹೋಗುತ್ತಿವೆ. ಕೆಳಜಾತಿಗಳು ಕೆಳಸ್ತರದ ಸ್ಥಾನಮಾನವನ್ನು ಹೊಂದಿದ್ದರೆ. ಹಿಂದುಳಿದ ವರ್ಗದ ಸಮುದಾಯ ಉತ್ತಮವಾದ ಸ್ಥಾನಮಾನಗಳನ್ನು ಹೊಂದಿವೆ.

ಹೆಣ್ಣುಮಕ್ಕಳ ಶಿಕ್ಷಣ ಗ್ರಾಮೀಣ ಪ್ರದೇಶದ ಇತರ ಹಳ್ಳಿಗಳ ಹೆಣ್ಣುಮಕ್ಕಳ ಶಿಕ್ಷಣದಂತೆಯೇ ಕುಂಟುತ್ತಾ ಸಾಗಿದೆ.

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಖರ್ಚು ಮಾಡುವುದು ವ್ಯಥಾವ್ಯಯ ಎಂಬ ಭಾವನೆ ಪೋಷಕರಲ್ಲಿದೆ. ಸರ್ಕಾರಿ ಶಾಲೆಗಳಲ್ಲಿ ಉಚಿತ ಪಠ್ಯಪುಸ್ತಕಗಳು ನೀಡುತ್ತಿರುವುದು, ಯಾವುದೇ ಶುಲ್ಕಗಳಿಲ್ಲದಿರುವುದು ಹಾಗೂ ಹೆಣ್ಣುಮಕ್ಕಳನ್ನು ಮದುವೆ ಆಗುವವರೆಗೂ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಮುಂದುವರಿಸುವ ಭಾವನೆ ಪೋಷಕರಲ್ಲಿದೆ.

ಹೆಣ್ಣುಮಕ್ಕಳು ಎಷ್ಟು ಓದಿದರೂ ಉದ್ಯೋಗ ಸಿಗುವುದಿಲ್ಲ. ಉದ್ಯೋಗ ಸಿಕ್ಕರೂ ಮದುವೆ ಆಗಿ ಗಂಡನ ಮನೆಗೆ ಹೋಗುತ್ತಾರೆ ಎಂಬ ಮನಸ್ಥಿತಿ ಪೋಷಕರಲ್ಲಿ ಇನ್ನೂ ಗಾಢವಾಗಿದೆ.

ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ಕೆಳಜಾತಿಗಳ ಪೋಷಕರಿಗೆ ಹೆಣ್ಣುಮಕ್ಕಳ ಶಿಕ್ಷಣದ ಮಹತ್ವ ಗೊತ್ತಿಲ್ಲದಿರುವುದು. ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಉದಾಸೀನವಿದ್ದರೆ, ಒಕ್ಕಲಿಗ ಸಮುದಾಯದ ಹೆಣ್ಣುಮಕ್ಕಳು ಗೃಹಿಣಿಯಾಗಿ ಮನೆಯಲ್ಲಿರುವುದು ಬಯಸುತ್ತಾರೆ.

ಗ್ರಾಮೀಣ ಕೃಷಿ ಪ್ರಧಾನವಾದ ಎರಡು ಪಂಚಾಯಿತಿಗಳಲ್ಲಿ ಕೃಷಿ ಅವಲಂಬಿತ ಕುಟುಂಬಗಳು ಅಧಿಕವಾಗಿವೆ. ಮಳೆಗಾಲದಲ್ಲಿ ಕೃಷಿ ಕೆಲಸದ ದಿನಗಳಲ್ಲಿ ಕೃಷಿ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ. ಹಾಗಾಗಿ ಮಳೆಗಾಲದಲ್ಲಿ ಕೃಷಿ ಕೆಲಸಕ್ಕೆ ಮಕ್ಕಳು ಶಾಲೆಗೆ ಹಾಜರಾಗುವುದು ಕಡಿಮೆಯಾಗುತ್ತದೆ.

ಹೆಣ್ಣುಮಕ್ಕಳು ಶಾಲೆಗೆ ಬರುವ ಮುನ್ನ ಮತ್ತು ಶಾಲೆಯ ನಂತರ ಕುಟುಂಬದಲ್ಲಿ ಅಡುಗೆ ಹಾಗೂ ಮನೆಗೆಲಸಗಳಲ್ಲಿ ತಾಯಿಗೆ ನೆರವಾಗುತ್ತಾರೆ. ಉದಾಹರಣೆಗೆ ನೀರು ತುಂಬುವುದು, ಪಾತ್ರೆ

ತೊಳೆಯುವುದು, ಕಸ ಗುಡಿಸುವುದು, ಅಡುಗೆ ಮಾಡುವಾಗ ಸಹಕರಿಸುವುದು ಮುಂತಾದ ಕೆಲಸಗಳಲ್ಲಿ ತೊಡಗಿಕೊಳ್ಳುವುದರಿಂದ ಮನೆಯಲ್ಲಿ ರಾತ್ರಿವೇಳೆ ಓದಲು, ಬರಹ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿನ ಶಿಕ್ಷಣದಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳಲು ಆಗುತ್ತಿಲ್ಲ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರು ಸಾಮಾನ್ಯವರ್ಗದ ವಿದ್ಯಾರ್ಥಿನಿಗಳಿಗಿಂತ ಶಿಕ್ಷಣದಲ್ಲಿ ಹಿಂದುಳಿಯಲು ಹಲವಾರು ಕಾರಣಗಳಿವೆ. ಮಹಿಳಾ ಶಿಕ್ಷಣ ಇತಿಹಾಸ ನೋಡಿದರೆ ಅನಾದಿಕಾಲದಿಂದಲೂ ದಲಿತ ಮಹಿಳೆಯರು ಸಾಮಾನ್ಯವರ್ಗದ ಮಹಿಳೆಯರಿಗಿಂತ ಹಿಂದುಳಿಯುತ್ತಲೇ ಮುಂದುವರಿಯುತ್ತಿರುವುದನ್ನು ಕಾಣಬಹುದಾಗಿದೆ. ಇದಕ್ಕೆ ಮುಖ್ಯ ಕಾರಣ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಶಿಕ್ಷಣ ಕೊಡಿಸಲು ಸಾಧ್ಯವಾಗಿಲ್ಲ. ಈಗ ಸರ್ಕಾರದ ಉಚಿತ ಸೌಲಭ್ಯ ಒದಗಿಸಲಾಗುತ್ತಿದೆ. ಆದರೆ ಪೋಷಕರಿಗೆ ಹೆಣ್ಣುಮಕ್ಕಳದ ಶಿಕ್ಷಣದ ಮಹತ್ವ ಗೊತ್ತಿಲ್ಲ.

ಮೇಲ್ಜಾತಿ ವರ್ಗದ ವಿದ್ಯಾರ್ಥಿನಿಯರ ನಡುವಿನ ಕೀಳರಿಮೆಯಿಂದಲೂ ದಲಿತ ಮಕ್ಕಳು ಶಿಕ್ಷಣದಿಂದ ದೂರ ಸರಿಯುತ್ತಿದ್ದಾರೆ. ದಲಿತ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಪ್ರೋತ್ಸಾಹ ಇಲ್ಲದಿರುವುದು ದಲಿತ ಮಕ್ಕಳು ಇತರೆ ಸಮುದಾಯದ ಮಕ್ಕಳಿಗಿಂತ ಹಿಂದುಳಿಯಲು ಕಾರಣವಾಗಿದೆ. ದಲಿತ ಮಕ್ಕಳ ಬಗ್ಗೆ ಶಿಕ್ಷಕರ ನಿರ್ಲಕ್ಷವೂ ಸಹ ಮಕ್ಕಳಲ್ಲಿ ಶಾಲೆ ತೊರೆಯಲು ಕಾರಣವಾಗಿದೆ. ವಿದ್ಯಾರ್ಥಿನಿಯರಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಇಲ್ಲದಿರುವುದು ಹಾಗೂ ಹೆಚ್ಚು ಓದಿದರೆ ಮದುವೆಯಾಗಲು ವರಗಳು ಮುಂದೆ ಬರುವುದಿಲ್ಲ ಎಂಬ ಕಾರಣಕ್ಕೆ ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಲು ಹಿಂಜರಿಯುತ್ತಾರೆ. ಇಷ್ಟಾದರೂ ಇತ್ತೀಚೆಗೆ ಗ್ರಾಮೀಣ ಪ್ರದೇಶದ ಪೋಷಕರು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಲು ಒಲವು ತೋರಿಸುತ್ತಿದ್ದಾರೆ.

ಹೆಣ್ಣುಮಕ್ಕಳ ಶಿಕ್ಷಣದ ಪ್ರೋತ್ಸಾಹಕ್ಕೆ ಸರ್ಕಾರ ಹಲವಾರು ಯೋಜನೆ ಕಾರ್ಯಕ್ರಮಗಳನ್ನು ರೂಪಿಸಿವೆ. ಸರ್ವಶಿಕ್ಷಣ ಅಭಿಯಾನ, ಹೆಣ್ಣುಮಕ್ಕಳ ಶಿಕ್ಷಣ ಅದರಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರಿಗೆ ವಿಶೇಷ ಕಾಳಜಿ ವಹಿಸಿರುವುದು ಕಂಡುಬಂದಿದೆ.

ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವು ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುತ್ತದೆ. ಬಡತನದ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳು ಹಸಿವಿನಿಂದ ಕಲಿಕೆಗೆ ಹೆಚ್ಚು ಗಮನ ಕೊಡಲಾರರೆಂದು ಬಿಸಿಯೂಟ ನೀಡಲಾಗುತ್ತಿದೆ. ಇದರಿಂದ ಬಡತನದ ಕುಟುಂಬಗಳ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಪೌಷ್ಟಿಕ ಆಹಾರ ಒದಗಿಸುವುದು ಉತ್ತಮ ಕಾರ್ಯಕ್ರಮವಾಗಿದೆ. ವಿದ್ಯಾರ್ಥಿನಿಯರು ಇದರ ಅನುಕೂಲವನ್ನು ಪಡೆಯುತ್ತಿದ್ದಾರೆ.

ಪ್ರತಿಭಾಕಾರಂಜಿ, ಚಿಣ್ಣರ ಜಿಲ್ಲಾದರ್ಶನ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅದರೂ ಅಧ್ಯಯನಕ್ಕೆ ಒಳಪಟ್ಟ ೪, ೫, ೬ ಮತ್ತು ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರು 'ಎ' ಶ್ರೇಣಿ ಪಡೆಯುವಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿನಿಯರಿಗಿಂತ ಹಿಂದಿದ್ದಾರೆ.

ಅಧ್ಯಯನಕ್ಕೆ ಒಳಪಟ್ಟ ನಾಲ್ಕು ಹಳ್ಳಿಗಳ ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳಿಲ್ಲ. ಎರಡೇ ಕೊಠಡಿಗಳಲ್ಲಿ ಪ್ರಾಥಮಿಕ ಮತ್ತು ಹಿರಿಯ ಶಾಲೆಗಳು ನಡೆಯುತ್ತಿವೆ.

ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ, ಕುಡಿಯುವ ನೀರು, ನೈರ್ಮಲ್ಯ ವ್ಯವಸ್ಥೆ ಮಾಡಲಾಗಿದೆ.

ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯವಿದ್ದರೂ ಸ್ವಚ್ಛತೆ ಇಲ್ಲದ ಕಾರಣ ವಿದ್ಯಾರ್ಥಿನಿಯರು ಶೌಚಾಲಯ ಬಳಸುತ್ತಿಲ್ಲ.

೪, ೫, ೬ ಮತ್ತು ೭ನೇ ತರಗತಿಗಳಲ್ಲಿ ಓದುತ್ತಿರುವ ಹೆಣ್ಣು ಮತ್ತು ಗಂಡುಮಕ್ಕಳ ಸಂಖ್ಯೆಯ ಲಿಂಗ ಅಸಮಾನತೆ ಮುಂದುವರಿಯುತ್ತಿದೆ.

ಶಾಲಾ ಮೇಲುಸ್ತುವಾರಿ ಸಮಿತಿಗಳು ಚಾಲ್ತಿಯಲ್ಲಿವೆ ಆದರೂ ಶಾಲಾ ಭೌತಿಕ ಗುಣಮಟ್ಟದ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಶಾಲೆಗೆ ಆಟದ ಮೈದಾನವಿಲ್ಲ, ಶಾಲಾ ಕಾಂಪೌಂಡ್ ಇಲ್ಲ. ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಗ್ರಾಮಪಂಚಾಯಿತಿಯ ಜನಪ್ರತಿನಿಧಿಗಳು ಗ್ರಾಮೀಣ ಶಿಕ್ಷಣ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿಲ್ಲ.

ಸಲಹೆಗಳು

ಹೆಣ್ಣುಮಕ್ಕಳ ಅದರಲ್ಲಿಯೂ ದಲಿತ ಹೆಣ್ಣುಮಕ್ಕಳ ಶಿಕ್ಷಣದ ಗುಣಮಟ್ಟ ಹೆಚ್ಚಿಸುವಲ್ಲಿ ಗ್ರಾಮೀಣ ಭಾಗದ ಹೆಣ್ಣುಮಕ್ಕಳಿಗೆ ವಸತಿ ಶಿಕ್ಷಣ ಶಾಲೆಗಳನ್ನು ತೆರೆದು ಎಲ್ಲಾ ಗ್ರಾಮೀಣ ಹೆಣ್ಣುಮಕ್ಕಳಿಗೆ ವಸತಿ ಶಾಲೆಗಳಲ್ಲಿ ಓದುವಂತಾಗಬೇಕು.

ಪ್ರತಿಭಾಕಾರಂಜಿ, ಚಿಣ್ಣರ ಜಿಲ್ಲಾದರ್ಶನದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕೇವಲ ಪ್ರತಿಭಾವಂತ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಮಾತ್ರವಲ್ಲ ಎಲ್ಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಳ್ಳುವಂತಹ ಅವಕಾಶ ಕಲ್ಪಿಸಿಕೊಡುವುದು ಅಗತ್ಯವಿದೆ.

ಶಿಕ್ಷಕರು ಮತ್ತು ಶಿಕ್ಷಕಿಯರು ತಾಲೂಕು ಕೇಂದ್ರದಲ್ಲಿ ನೆಲೆಸಿದ್ದಾರೆ. ನಿತ್ಯವೂ ತಾವು ಬೋಧನೆ ಮಾಡುವ ಶಾಲೆಗೆ ಬಂದುಹೋಗುತ್ತಿದ್ದಾರೆ. ವಾಹನಗಳ ಸಮಸ್ಯೆಯಿಂದ ಸರಿಯಾದ ಸಮಯಕ್ಕೆ ಶಾಲೆಗಳಿಗೆ ಹಾಜರಾಗುವುದಿಲ್ಲ. ಹಾಗಾಗಿ ಶಾಲೆಗಳಿಗೆ ಹೊಂದಿಕೊಂಡಂತೆ ಶಿಕ್ಷಕರಿಗೂ ವಸತಿ ಸೌಲಭ್ಯ ಒದಗಿಸಿ ಆಯಾ ಶಾಲಾ ಪರಿಸರದಲೇ ನೆಲೆಸುವಂತೆ ಮಾಡುವುದು ಅಗತ್ಯವಿದೆ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಮೂಲ ಆಕರಗಳು

ಪೂರಕವಾದ ಆಕರಗಳು

ಅನುಬಂಧ–೧

೧. ಮೂಲ ಆಕರಗಳು

ಕರೂರ ಎನ್.ಜಿ., (೨೦೦೨), ಶಿಕ್ಷಣ ಮಾರ್ಗ, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

ಕುಮಾರಸ್ವಾಮಿ ಎಚ್., (೨೦೦೭), ಗುಣಮಟ್ಟದ ಶಿಕ್ಷಣ ತರಗತಿಯಲ್ಲಿ ಪ್ರಕ್ರೀಯೆಗಳು, ಅಭಿವೃದ್ಧಿ ಅಧ್ಯಯನ ವಿಭಾಗ, (ಜನವರಿ–ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ಟಿ.ಆರ್., ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ, ಸುವರ್ಣ ಕರ್ನಾಟಕ ಅಭಿವೃದ್ಧಿ ಪಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಿರಂಜನಾರಾಧ್ಯ ಪಿ.ವಿ., (೨೦೦೭), ಶಾಲಾ ಶಿಕ್ಷಣದ ಸಮುದಾಯದ ಸಹಭಾಗಿತ್ವ (ಲೇಖನ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪದ್ಮಾರಾಮಚಂದ್ರನ ಮತ್ತು ವಸಂತಕುಮಾರ್, (೨೦೦೫), ಎಜುಕೇಷನ್ ಇನ್ ಇಂಡಿಯಾ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯ, ನ್ಯೂಡೆಲ್ಲಿ.

ಪ್ರಶಾಂತ್ ಎಚ್.ಡಿ., (೨೦೦೫), ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಕ್ಕಳ ಸಮೀಕ್ಷೆ, ೨೦೧೨ ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಶೈಕ್ಷಣಿಕ ಅಂಕಿ ಅಂಶಗಳ ಪಕ್ಷಿನೋಟ, ೨೦೧೦–೧೧ ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಸುಮಂಗಲಾ ಅತ್ತಿಗೇರಿ, (೨೦೦೭), ಕೃಷಿ ಜನಪದ ಮತ್ತು ಮಹಿಳೆ, (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

ಸೆನ್ಸಸ್ ಆ್ಯಂಡ್ ಇಂಡಿಯಾ ೨೦೧೧, ಡಿಸ್ಟ್ರಿಕ್ ಪಾಪ್ಯುಲೇಶನ್ ಬುಕ್‌ಲೆಟ್, ರಾಮನಗರ ಜಿಲ್ಲೆ.

೨. ಪೂರಕವಾದ ಆಕರಗಳು

ಅಮ್ಮಾನ್‌ಮಥನ್, ೨೦೦೫, ಫರ್‌ಸ್ಪೆಕ್ಟೀವ್ ಆನ್ ಎಜುಕೇಶನ್, ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಜುಲೈ-೩೦), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ಅಮಿಯಾಕುಮಾರ್ ಬೀಚಿ, ೧೯೮೯, ದ ಪ್ರೆಸಿಡೆನ್ಸಿ ಬ್ಯಾಂಕ್ ಆ್ಯಂಡ್ ಇಂಡಿಯನ್ ಎಕಾನಮಿ, ೧೮೭೬ರಿಂದ ೧೯೧೪, ಕಲ್ಕತ್ತ ಆಕ್ಸ್‌ಫರ್ಡ್ ಯೂನಿವರ್ಸಿಟಿ, ಪ್ರೆಸ್, ಕಲ್ಕತ್ತ.

ಆಚಾರ ವನಮಾಲ, ಸ್ತ್ರೀ ಮತ್ತು ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೫.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಅಂಕಿ ಅಂಶಗಳ ನೋಟ(೨೦೧೦-೧೧) ಬೆಂಗಳೂರು, ಬಹುಮಹಡಿಗಳ ಕಟ್ಟಡ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು.

ಇಂದಿರಾ ಆರ್., ೨೦೦೨, ಮಹಿಳೆ, ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಇಂಡಿಯನ್ ಎಕಾನಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಶಿಯಲ್ ಆಪರ್ಚುನಿಟಿ, ನ್ಯೂಡೆಲ್ಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

ಕರ್ನಾಟಕ ಜನಸಂಖ್ಯೆಯ ಜನಗಣತಿ ವರದಿ ೨೦೧೧.

ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೧೦-೧೧ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

ಕುಮಾರಸ್ವಾಮಿ ಹೆಚ್., ೨೦೦೭, ಗುಣಮಟ್ಟದ ಶಿಕ್ಷಣ: ತರಗತಿಯಲ್ಲಿನ ಪ್ರಕ್ರಿಯೆಗಳು, ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ(ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೃಷ್ಣಕುಮಾರ್, ಮನಿಷ ಪ್ರಿಯಮ್, ಸಾಧನಸಕ್ಸೇನ್, ೨೦೦೧, ಲುಕ್ಕಿಂಗ್ ಬಿಯಾಂಡ್ ದ ಸಂ ಸ್ಕ್ರೀನ್, ಡಿ.ಪಿ.ಇ.ಪಿ. ಆ್ಯಂಡ್ ಪ್ರೈಮರಿ ಎಜುಕೇಷನ್ ಇನ್ ಇಂಡಿಯಾ, ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಫೆಬ್ರವರಿ ೧೭), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ಗೀತಾ, ೨೦೦೭, ಸ್ತ್ರೀ ವಿಮುಕ್ತ ಚಿಂತನೆ, ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ, ಮಂಡ್ಯ.

ಚಂದ್ರಶೇಖರ್ ಟಿ.ಆರ್., ೨೦೦೭, ಕರ್ನಾಟಕದ ಪ್ರಾದೇಶಿಕ ಅಸಮಾನತೆ, ಸುವರ್ಣ ಕರ್ನಾಟಕ ಅಭಿವೃದ್ಧಿ ಪಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ್ ಟಿ.ಆರ್.. ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗ ಸಂಬಂಧಿ ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಾರಗುಪ್ತ, ೨೦೦೭, ದಲಿತ್ ವೈರಂಗಣಾಸ್ ಲ್ಯಾಂಡ್ ರಿ ಇನ್‌ವೆನ್ಷನ್ ಆಫ್ ೧೮೫೭, ಎಕನಾಮಿಕ್ ಅಂಡ್ ಪೊಲಿಟಿಕಲ್ ವಿಕ್ಲಿ(ಮೇ-೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ಡಿ.ಆರ್.ಎಫ್.ಟಿ., ವಾರ್ಷಿಕ ವರದಿ ೨೦೧೨-೧೩, ಕರ್ನಾಟಕ ಸರ್ಕಾರ, ಬೆಂಗಳೂರು.

ನಂದಹಾರ್ ಇಕಟರ, ಒಂದನೇ ತರಗತಿಯಿಂದ ಐದನೇ ತರಗತಿ ಕನ್ನಡ ಪುಸ್ತಕಗಳ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ನಟರಾಜ್ ಹುಳಿಯಾರ್, ಸುವರ್ಣ ಕರ್ನಾಟಕ ಗ್ರಾಮೀಣಾಭಿವೃದ್ಧಿ ವರ್ಷಚಾರಣೆ ಕಾರ್ಯಕ್ರಮ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೭.

ನಾರಾಯಣ ಡಿ.ಎಸ್. ಇಂಗ್ಲಿಷ್ ಮತ್ತು ಕನ್ನಡ ಸಂಬಂಧ ಕುರಿತು ಚಿಂತನೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಎಂ.ಫಿಲ್ ನಿಬಂಧ.

ನೀರಾಬುರ್ರ, ೨೦೦೧, ಕಲ್ಚರಲ್ ಸ್ಟೀರಿಯೋ ಟೈಪ್ಸ್ ಲ್ಯಾಂಡ್ ಹೌಸ್ ಹೋಲ್ಡ್ ಬಿಹೇವಿಯರ್, ಗರ್ಲ್‌ಚೈಲ್ಡ್ ಲೇಬರ್ ಇನ್ ಇಂಡಿಯಾ, ಎಕನಾಮಿಕ್ ಲ್ಯಾಂಡ್ ಪೊಲಿಟಿಕಲ್ ವೀಕ್ಲಿ(ಫೆಬ್ರವರಿ ೩-೧೦), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ನಿರಂಜನಾರಾಧ್ಯ ವಿ.ಪಿ., ೨೦೦೭, ಶಾಲಾಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಾಭಾಗಿತ್ವ: ಕರ್ನಾಟಕದ ಅನುಭವಗಳು, ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ(ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪದ್ಮ ಎಂ. ಸಾರಂಗಪಾಣಿ, ೨೦೦೩, ಕನ್‌ಸ್ಟ್ರಕ್ಟಿಂಗ್ ಸ್ಕೂಲ್ ನಾಲೆಜ್ಡ್ ಆನ್ ಎತ್ನಾಗ್ರಫಿ ಆಫ್ ಲರ್ನಿಂಗ್ ಇನ್ ಆನ್ ಇಂಡಿಯನ್ ವಿಲೇಜ್, ಸೇಜ್ ಪಬ್ಲಿಕೇಷನ್ಸ್, ಇಂಡಿಯಾ ಪ್ರೈವೇಟ್ ಲಿಮೆಟೆಡ್, ಬಿ. ೪೨, ಪಂಚಶೀಲ ಎನ್‌ಕ್ಲೇವ್, ನವದೆಹಲಿ.

ಪ್ರಶಾಂತ್ ಎಚ್.ಡಿ., ೨೦೦೫, ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಶಾಂತ್ ಎಚ್.ಡಿ., ೨೦೦೭, ಶಾಲಾಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕ ಅನುಭವಗಳು: ಸಾಧನೆ – ಸವಾಲು – ಸಾಧ್ಯತೆ, ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಶಾಂತ್ ಎಚ್.ಡಿ., ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ, ವಿಚಾರ, ಸಂಕಿರಣ (ಲೇಖನ), ೨೦೦೬.

ಭಂಡಾರಿ ನಾರಾಯಣ ತಿವಾರಿ, ೨೦೦೭, ರೀ ಆಕ್ಟಿವೇಟಿಂಗ್ ದಿ ಪಾಸ್ಟ್, ದಲಿತ್ಸ್ ಆ್ಯಂಡ್ ಮೆಮೋರಿಸ್ ಆಫ್ ೧೮೭೫, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ(ಮೇ ೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ಭಾರತದ ಜನಗಣತಿ ೨೦೧೧, ಪ್ರಾವಿಜನ್ ಲಿಸ್ಟ್ ಕೋರಮಂಗಲ, ಕೇಂದ್ರೀಯ ಸದನ, ಕರ್ನಾಟಕ ಜನಗಣತಿ ಮೌಲ್ಯಾಂಕ ವರದಿ, ಕರ್ನಾಟಕ ಶಾಲಾಗುಣಮಟ್ಟ ಮೌಲ್ಯಾಂಕ ಸಂಸ್ಥೆ, ೨೦೦೫-೦೬, ಕರ್ನಾಟಕ ಸರ್ಕಾರ, ಬೆಂಗಳೂರು.

ಬೇಹೂರ, ಕಾನ್‌ಸ್ಟ್ರೈನ್ ಆಫ್ ಟ್ರೈಬಲ್ ಎಜುಕೇಷನ್ ಇನ್ ಒರಿಸ್ಸಾ, ೧೯೮೨.

ಭೈರಪ್ಪ ಕೆ., ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ, ಐಬಿಹೆಚ್ ಪ್ರಕಾಶನ, ಮೈಸೂರು.

ಮಂಜಪ್ಪ, ದಲಿತರ ಶೈಕ್ಷಣಿಕ ಸ್ಥಿತಿಗತಿಗಳು (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ಷಿಕ ವರದಿ, ೨೦೦೯-೧೦, ಕರ್ನಾಟಕ ಸರ್ಕಾರ, ಬೆಂಗಳೂರು.

ಯರ್ರಿಸ್ವಾಮಿ ಎಂ., ಗ್ರಾಮಪಂಚಾಯಿತಿ ಮತ್ತು ಸಬಲೀಕರಣ (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

ಯೋಜನಾ, ಅಭಿವೃದ್ಧಿ ಮಾಸ ಪತ್ರಿಕೆ, ಸೆಪ್ಟೆಂಬರ್ ೨೦೧೩-ಸರ್ವರಿಗೂ ಶಿಕ್ಷಣ, ವಿಶೇಷ ಸಂಚಿಕೆ.

ರಾಮನಗರ ಜಿಲ್ಲೆ ಅಂಕಿ ಅಂಶ ನೋಟ, ರಾಮನಗರ ಜಿಲ್ಲಾಪಂಚಾಯಿತಿ, ೨೦೦೯-೧೦ರ ವರದಿ.

ರಾಮನಗರ ಜಿಲ್ಲೆಯ ಸ್ಥಳನಾಮ ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮನಗರ ಜಿಲ್ಲೆಯ ಅಂಕಿ ಅಂಶಗಳ ನೋಟ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

ರುಕ್ಮಿಣಿ ಬ್ಯಾನರ್ಜಿ, ೨೦೦೦, ಪಾವರ್ಟಿ ಆ್ಯಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರೈಮ್ ಮುಂಬೈ ಆ್ಯಂಡ್ ದೆಹಲಿ, ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಮಾರ್ಚ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ರೇಖಾಕೌಲ್, ಅಸಿಸ್ಟಿಂಗ್ ಪ್ರೈಮರಿ ಎಜುಕೇಶನ್ ಗೋಯಿಂಗ್ ಟು ಬಿಯಾಂಡ್ ದ ಕ್ಲಾಸ್ ರೂಂ. ೨೦೦೧.

ಲಕ್ಷ್ಮಣ್ ತೆಲಗಾವಿ, ೨೦೦೭, ಕರ್ನಾಟಕದ ದಲಿತ ಚಳುವಳಿ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, (ಸಂ) ಹಿ.ಚಿ.ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸವಿ ಎ.ಆರ್., ಪಿ.ಜಿ. ವಿಜಯ ಶೇರ್ರಿಚಾಂದ್, ಶೈಲಶ್ ಆರ್. ಶುಕ್ಲ, ೧೯೯೭, ಬ್ಲೂ ಪ್ರಿಂಟ್ ಫಾರ್ ರೂರಲ್ ಪ್ರೈಮರಿ ಎಜ್ಯುಕೇಶನ್, ಹೌ ವೈಯಬಲ್? ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ(ಡಿಸೆಂಬರ್ ೧೩), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬಯಿ.

ವಾರ್ಷಿಕ ವರದಿ ೨೦೧೧-೧೨, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, ಬೆಂಗಳೂರು.

ಶಾರದ ಜೈನ್, ಅಲೋಕ ಮತೂರ್, ಶೋಭಿತ ರಾಜ ಗೋಪಾಲ್ ಜ್ಯೂಹಿಷಾ, ೧೯೯೯, ಚಿಲ್ಡ್ರನ್ ವರ್ಕ್ಸ್ ಆ್ಯಂಡ್ ಎಜುಯಕೇಶನ್, ರೀಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್, ಇಂಡಿಯಾ ಎಜುಕೇಶನ್ ರಿಪೋರ್ಟ್, ಡಿಪಾರ್ಟ್‌ಮೆಂಟ್ ಆಫ್ ಎಜ್ಯುಕೇಶನ್.

ಶಾರದ ಕೆ.ಎಸ್., ೨೦೦೭, ವಯಸ್ಕರ ಶಿಕ್ಷಣ – ಸಾಕ್ಷರತಾ ಅಂದೋಲನ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, (ಸಂ) ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸವಿತಾ ಕೆ., ೨೦೦೮, ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗಸಂಬಂಧಿ ಆಯಾಮಗಳು: ಸಮಾಜೋ-ಆರ್ಥಿಕ ಅಂಶಗಳು, (ಅಪ್ರಕಟಿತ ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮೫೪ರ ವುಡ್ ಡಿಸ್‌ಪ್ಯಾಚ್ ವರದಿ, ಶಾಸಕರ ಗ್ರಂಥಾಲಯ, ವಿಧಾನಸೌಧ, ಬೆಂಗಳೂರು.

೧೯೯೧ರ ಎಚ್. ನರಸಿಂಹಯ್ಯ ಸಮಿತಿ ವರದಿ, ಶಾಸಕರ ಗ್ರಂಥಾಲಯ, ವಿಧಾನಸೌಧ, ಬೆಂಗಳೂರು.